ನೂರೊಂದು ವಿರಕ್ತರು : ಒಂದು ಅಧ್ಯಯನ

(ಪಿಎಚ್.ಡಿ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಕುಮಾರ್ ಜೆ.

ಮಾರ್ಗದರ್ಶಕರು
ಡಾ. ಕೆ. ರವೀಂದ್ರನಾಥ
ಪ್ರವಾಚಕರು
ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೯

ನೂರೊಂದು ವಿರಕ್ತರು : ಒಂದು ಅಧ್ಯಯನ

(ಪಿಎಚ್.ಡಿ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಕುಮಾರ್ ಜೆ.

ಮಾರ್ಗದರ್ಶಕರು
ಡಾ. ಕೆ. ರವೀಂದ್ರನಾಥ
ಪ್ರವಾಚಕರು
ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೮

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಡಾ. ಕೆ.ರವೀಂದ್ರನಾಥ
ಪ್ರವಾಚಕರು ಮತ್ತು ಮಾರ್ಗದರ್ಶಕರು
ಹಸ್ತಪ್ರತಿಶಾಸ್ತ್ರ ವಿಭಾಗ

ಪ್ರಮಾಣ ಪತ್ರ

"ನೂರೊಂದು ವಿರಕ್ತರು : ಒಂದು ಅಧ್ಯಯನ" ಎಂಬ ವಿಷಯವನ್ನು ಕುರಿತು ಕುಮಾರ್ ಜೆ. ಇವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನೆಡೆಸಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಇದು ಇವರ ಸ್ವತಂತ್ರ ಸಂಶೋಧನಾಧ್ಯಯನವಾಗಿದೆ. ಇದನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲಾಗಿದೆ.

(ಡಾ. ಕೆ.ರವೀಂದ್ರನಾಥ)

ದಿನಾಂಕ: ೧೦-೮-೨೦೦೬

ಸ್ಥಳ: ವಿದ್ಯಾರಣ್ಯ

ಕುಮಾರ್ ಜೆ.
ಸಂಶೋಧನ ವಿದ್ಯಾರ್ಥಿ
ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಘೋಷಣಾ ಪತ್ರ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ "ನೂರೊಂದು ವಿರಕ್ತರು : ಒಂದು ಅಧ್ಯಯನ" ಎಂಬ ಮಹಾಪ್ರಬಂಧವು ಡಾ. ಕೆ.ರವೀಂದ್ರನಾಥ ಅವರ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯವನ್ನಾಧರಿಸಿ ರಚನೆಗೊಂಡಿದ್ದಾಗಿದೆ.

ಈ ಮಹಾಪ್ರಬಂಧವನ್ನು ನಾನು ಈ ಮೊದಲು ಯಾವುದೇ ಪದವಿಗಾಗಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿಲ್ಲವೆಂದು ಹಾಗೂ ಇದು ಬಿಡಿ ಇಲ್ಲವೇ ಇಡಿಯಾಗಿ ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

(ಕುಮಾರ್ ಜೆ)

ದಿನಾಂಕ: ೧೦-೮-೨೦೧೬

ಸ್ಥಳ: ವಿದ್ಯಾರಣ್ಯ

ಅರಿಕೆ

"ಹಂಪಿ" ಅಧ್ಯಯನಕಾರರ ಆಲೋಚನೆಗಳಿಗೆ ಆಕರವಾದ ಸ್ಥಳ. ಹೀಗಾಗಿ ಸಾಹಿತ್ಯ ಸಮೀಕರಣ, ಪಂಥಗಳ ಸಮೀಕರಣಗಳಲ್ಲದೆ, ಕರ್ನಾಟಕ ರಾಜಕೀಯ ಇತಿಹಾಸದಲ್ಲಿಯೂ ವೈವಿಧ್ಯತೆಯನ್ನು ಮೈಗೂಡಿಸಿಕೊಂಡಿದೆ. ಕಾರಣ ಪ್ರೌಢರಾಯನ ವಿರೂಪಾಕ್ಷ ಸಂಸ್ಕೃತಿ, ಕೃಷ್ಣದೇವರಾಯನ ತಿಮ್ಮಪ್ಪನ ಸಂಸ್ಕೃತಿಗಳಿಂದ ಹಂಪಿ ದ್ವಿಭಾಷಿಕ, ದ್ವಿದೈವತ ಮತ್ತು ದ್ವಿಸಂಸ್ಕೃತಿಗಳಲ್ಲಿ ಬದುಕುತ್ತಾ ಬಂದಿದೆ. ಇಂಥ ಬದುಕಿನ ಪ್ರತಿರೂಪವೆನ್ನುವಂತೆ ಅವಧೂತ, ಆರೂಢ, ವಿರಕ್ತ, ನಾಥಗಳಂತ ಪರಂಪರೆಗಳು ತಲೆ ಎತ್ತಿದವು. ಈ ಪರಂಪರೆಗಳಲ್ಲಿ "ಶಾಂತ ಸಂಪ್ರದಾಯ"ದ ನೂರೊಂದು ವಿರಕ್ತರನ್ನು ಕುರಿತ ಸಂಶೋಧಿಸಿದ ಮಹಾಪ್ರಬಂಧ ಇದಾಗಿದೆ.

ಕನ್ನಡ ವಿಶ್ವವಿದ್ಯಾಲಯ ನನಗೆ ವಿಭಿನ್ನ ಆಲೋಚನಾ ಕ್ರಮಗಳನ್ನು ಕಲಿಸಿದೆ. ಸಂಶೋಧನಾ ರಂಗದಲ್ಲಿ ತನ್ನದೆಯಾದ ಅನನ್ಯತೆಯನ್ನು ಗಟ್ಟಿಗೊಳಿಸಿದ ಕನ್ನಡ ವಿಶ್ವವಿದ್ಯಾಲಯ ನನ್ನಂತಹ ಗ್ರಾಮೀಣ ಭಾಗದಿಂದ ಬಂದ ವಿದ್ಯಾರ್ಥಿಗಳಿಗೆ ಬಹುಶಿಸ್ತೀನ ನೆಲೆಯಲ್ಲಿ ಆಲೋಚಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಇದರಿಂದ 'ನೂರೊಂದು ವಿರಕ್ತರು : ಒಂದು ಅಧ್ಯಯನ' ಎಂಬ ಪ್ರೌಢ ಪ್ರಬಂಧ ರಚಿಸಲು ಸಾಧ್ಯವಾಯಿತು. ಆ ಕಾರಣಕ್ಕಾಗಿ ನಾನು ಕನ್ನಡ ವಿಶ್ವವಿದ್ಯಾಲಯಕ್ಕೆ ಚಿರಋಣಿಯಾಗಿರುವೆ.

ಪಿಎಚ್.ಡಿ ಸಂಶೋಧನೆಗೆ ಅವಕಾಶ ಮಾಡಿಕೊಟ್ಟ ಹಿಂದಿನ ಕುಲಪತಿಗಳಾದ ಡಾ.ಬಿ.ಎ.ವಿವೇಕ ರೈ ಹಾಗೂ ಇಂದಿನ ಕುಲಪತಿಗಳಾದ ಡಾ. ಎ.ಮುರಿಗೆಪ್ಪನವರಿಗೆ ನನ್ನ ಕೃತಜ್ಞತೆಗಳು. ಕುಲಸಚಿವರಾದ ಶ್ರೀ. ಎಸ್.ಎಸ್. ಪೂಜಾರ, ಅಧ್ಯಯನಾಂಗದ ನಿರ್ದೇಶಕರಾದ ಡಾ. ವೀರೇಶ ಬಡಿಗೇರ ಹಾಗೂ ಪ್ರಸಾರಾಂಗದ ನಿರ್ದೇಶಕರಾದ ಡಾ. ಮೋಹನ ಕುಂಟಾರ ಅವರನ್ನು ಗೌರವಪೂರ್ವಕವಾಗಿ ನೆನೆಯುತ್ತೇನೆ.

ಈ ಮಹಾಪ್ರಬಂಧದ ಮಾರ್ಗದರ್ಶಕರಾಗಿ ಅಧ್ಯಯನದ ಪ್ರತಿ ಹಂತದಲ್ಲಿ ಸಹೃದಯತೆಯಿಂದ ಮಾರ್ಗದರ್ಶನ ಮಾಡಿದ ಪೂಜ್ಯ ಗುರುಗಳಾದ ಡಾ. ಕೆ.ರವೀಂದ್ರನಾಥರವರಿಗೆ ಗೌರವಪೂರ್ವಕವಾಗಿ ವಂದಿಸುತ್ತೇನೆ. ಹಾಗೆಯೇ ವಿಭಾಗದ ಮುಖ್ಯಸ್ಥರಾದ ಡಾ. ಎಸ್.ಆರ್.ಚೆನ್ನವೀರಪ್ಪ, ಪ್ರಾಧ್ಯಾಪಕರಾದ ಡಾ. ಎಫ್.ಟಿ.ಹಳ್ಳಿಕೇರಿ ಹಾಗೂ ಡಾ. ಎಸ್.ಎಸ್.ಅಂಗಡಿ ಇವರನ್ನು ಪ್ರೀತಿಯಿಂದ ನೆನೆಯುತ್ತೇನೆ. ಹಲವು ಆಲೋಚನಾ ಕ್ರಮಗಳನ್ನು ಕಲಿಸಿದ ವಿದ್ವಾಂಸರಾದ ಡಾ. ಎಂ. ಎಂ.ಕಲಬುರ್ಗಿ, ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ್, ಡಾ.ರಹಮತ್ ತರೀಕೆರೆ, ಡಾ.ಕೆ.ವಿ.ನಾರಾಯಣ,

ಡಾ.ಡಿ.ಪಾಂಡುರಂಗಬಾಬು, ಡಾ.ಅಮರೇಶ ನುಗಡೋಣಿ, ಡಾ.ಪಿ.ಮಹಾದೇವಯ್ಯ, ಡಾ.ಪರಮಶಿವಮೂರ್ತಿ, ಡಾ.ಸುಬ್ಬಣ್ಣ ರೈ, ಡಾ.ಶಿವಾನಂದ ವಿರಕ್ತಮಠ, ಡಾ.ಕೆ.ಕೆ.ಮಾಧವ ಇವರನ್ನು ಕೂಡ ಸ್ಮರಿಸದೆ ಇರಲಾರೆ.

ನನ್ನ ಓದಿಗೆ ಸದಾ ಬೆನ್ನೆಲುಬಾಗಿ ನಿಂತಿರುವ ದೊಡ್ಡಪ್ಪ ಶೇಕ್ರನಾಯ್ಕ, ದೊಡ್ಡಮ್ಮ ಲಕ್ಕೀಬಾಯಿ, ಜನ್ಮದಾತರಾದ ದಿ. ಭೀಮನಾಯ್ಕ, ತಾಯಿ ಲಚಮಿಬಾಯಿ ಇವರನ್ನು ಈ ಸಂದರ್ಭದಲ್ಲಿ ಭಕ್ತಿಪೂರ್ವಕ ನಮಸ್ಕಾರಗಳನ್ನು ಸಲ್ಲಿಸುವೆ. ಸದಾ ಕಾಲವು ನನ್ನ ಅಧ್ಯಯನಕ್ಕೆ ಶ್ರಮಿಸಿದ ಅಣ್ಣಂದಿರಾದ ಯುವರಾಜ್ ನಾಯ್ಕ, ಪ್ರಕಾಶ ಎಸ್, ತಂಗಿಯರಾದ ಮಂಜುಳ, ಲಕ್ಷ್ಮೀಬಾಯಿ, ಮಾವಂದಿರಾದ ಲಕ್ಯನಾಯ್ಕ, ವೀರಭದ್ರನಾಯ್ಕ, ತಮ್ಮ ರವಿನಾಯ್ಕ ಸೊಸೆ ಜ್ಯೋತಿ, ಅತ್ತಿಗೆ ಜಯಬಾಯಿ ಹಾಗೂ ಇವರ ಮಕ್ಕಳನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ.

ಈ ಅಧ್ಯಯನಕ್ಕೆ ಸದಾ ಪ್ರೋತ್ಸಾಹ ನೀಡಿದ ಹಿರಿಯರಾದ ಎಂ.ಸಿ.ಗುಡಿಮನಿ, ಎಲ್.ನಾರಾಯಣನಾಯ್ಕ, ಈರಪ್ಪ ಮೇಟಿ, ಎಂ. ನಾಗರಾಜ್‌ನಾಯ್ಕ ಹಾಗೂ ಗೆಳೆಯರಾದ ಟಿ.ನೀಲ್‌ಕುಮಾರ್, ನಾಗರಾಜ ಚಿಂತ್ರಪಳ್ಳಿ, ಗುರು ಎಲ್.ಡಿ, ರಾಮ್ ಕಲಾಲ್, ಕಲ್ಲಯ್ಯ ಹಿರೇಮಠ, ಮಲ್ಲಿಮೋಕ, ಹನುಮಂತರಾಯ ದೊಡ್ಮನಿ, ಹೋಳಿಬಸಪ್ಪ, ಲಿಂಗಣ್ಣ, ನಾಯಕರ ಹುಲುಗಪ್ಪ, ಎ.ಡಿ.ಬಸವರಾಜ, ರವಿ ವಸರಾಮ್, ಮಾಣಿಕಪ್ಪ, ಸುಧಾಕರ, ಶೇಖರಚಾರಿ, ಈರಣ್ಣ ಹುರುಳ್ಳಿ, ಕುಪ್ಪೇರಾವ್, ವಾಗೀಶ್, ಮಲ್ಲಿಕಾರ್ಜುನ ಮಾನ್ಪಡೆ, ಹುಲಿಯಪ್ಪ, ಅಮರೇಶ್, ಮೀಟ್ಯನಾಯ್ಕ, ರಮೇಶ್, ಪಂಪಾಪತಿ, ವೇದಮೂರ್ತಿ, ಬಸವರಾಜ, ರಜನಿಕಾಂತ, ಭೀಮೇಶ್, ಹನುಮೇಶ್, ಹುಲಿಗೆಮ್ಮ ಬಿ. ಸುಕನ್ಯಾ, ಸುರೇಖಾ, ಶಶಿಕಲಾ, ಶ್ರೀದೇವಿ, ವಿಪ್ಲವಿ, ಸುಮತಿ, ವೀರಾಕ್ಷಿ ಹಾಗೂ ಅನನ್ಯ, ಅನಿಕೇತನ, ಅಸ್ಮಿತ ವಿದ್ಯಾರ್ಥಿ ನಿಲಯದ ಸ್ನೇಹಿತ ಬಳಗಕ್ಕೂ ಈ ಸಂದರ್ಭದಲ್ಲಿ ನೆನೆಯುತ್ತೇನೆ.

ನನ್ನ ಅಧ್ಯಯನದ ಪ್ರತಿ ಹಂತದಲ್ಲೂ ಸಹಕರಿಸಿ ಕರಡು ತಿದ್ದುವಲ್ಲಿ ನೆರವಾದ ಗೆಳೆಯರಾದ ತುಕರಾಮ, ಅರುಣ್‌ಜೋಳದ ಕೂಡ್ಲಿಗಿ, ಓಬಯ್ಯ, ಚಂದ್ರಪ್ಪ ಸೊಬಟಿರವರಿಗೆ ಸದಾ ಋಣಿ. ಈ ಅಧ್ಯಯನಕ್ಕೆ ಸಹಾಯ ಮಾಡಿದ ಅಕ್ಷರ ಗ್ರಂಥಾಲಯ ಮತ್ತು ಸಿರಿಗನ್ನಡ ಗ್ರಂಥಾಲಯಗಳ ಸಿಬ್ಬಂದಿಯವರಿಗೆ ಪ್ರೀತಿಪೂರ್ವಕ ನೆನಕೆಗಳು.

ಕುಮಾರ್ ಜೆ.

ಪರಿವಿಡಿ

ಅಧ್ಯಾಯ – ಒಂದು ೧–೧೬

ಅಧ್ಯಯನದ ಉದ್ದೇಶ – ಸ್ವರೂಪ

೧. ಪ್ರವೇಶ

೨. ಅಧ್ಯಯನದ ಉದ್ದೇಶ

೩. ಅಧ್ಯಯನದ ಮಹತ್ವ

೪. ಅಧ್ಯಯನದ ವೈಧಾನಿಕತೆ

೫. ಅಧ್ಯಯನದ ವ್ಯಾಪ್ತಿ

೬. ಅಧ್ಯಯನದ ಸ್ವರೂಪ

೭. ಅಧ್ಯಯನದ ಆಕರ ಸಾಮಗ್ರಿ

೮. ಅಧ್ಯಯನದ ಸಮೀಕ್ಷೆ

ಅಧ್ಯಾಯ – ಎರಡು ೧೭–೪೨

ನೂರೊಂದು ವಿರಕ್ತರ ಉಲ್ಲೇಖಿತ ಕನ್ನಡ ಕಾವ್ಯಗಳು

೧. ಪ್ರೌಢದೇವರಾಯನ ಕಾವ್ಯ

೨. ಚೆನ್ನಬಸವ ಪುರಾಣ

೩. ವೀರಶೈವಾಮೃತ ಪುರಾಣ

೪. ಶಿವತತ್ವ ಚಿಂತಾಮಣಿ

೫. ಭೈರವೇಶ್ವರ ಕಾವ್ಯ

೬. ಸ್ವರವಿಕೋತ್ತರಶತಸ್ಥಲ ಟೀಕು

೭. ನಿಜಶರಣ ತ್ರಿವಿಧಿ

೮. ರಾಘವಾಂಕ ಚರಿತೆ

೯. ಕರಸ್ಥಲನಾಗ ಲಿಂಗ ಚರಿತ್ರೆ

೧೦. ಜನಪದ ಗೀತೆಗಳು

ಅಧ್ಯಾಯ – ಮೂರು ೪೩–೮೪

ಮೋದಿರುದ್ರನ ವಿರಕ್ತರ ಕಾವ್ಯ

ಅಧ್ಯಾಯ – ನಾಲ್ಕು ೮೫–೯೯

ನೂರೊಂದು ವಿರಕ್ತರು : ಆಧುನಿಕರ ಚಿಂತನಕ್ರಮ

ಅಧ್ಯಾಯ – ಐದು ೧೦೦–೧೧೯

ನೂರೊಂದು ವಿರಕ್ತರು : ಸಾಹಿತ್ಯ ಸಮೀಕ್ಷೆ

ಅಧ್ಯಾಯ – ಆರು ೧೨೦–೧೪೦

ನೂರೊಂದು ವಿರಕ್ತರು : ಪರಂಪರೆ

ಅಧ್ಯಾಯ – ಏಳು ೧೪೧–೧೬೩

ನೂರೊಂದು ವಿರಕ್ತರು : ಲಕ್ಷಣ – ವ್ಯಕ್ತಿತ್ವ

ಅಧ್ಯಾಯ – ಎಂಟು ೧೬೪–೨೦೪

ನೂರೊಂದು ವಿರಕ್ತರು : ಇತರ ಸಂತ ಸಂಪ್ರದಾಯಗಳು

ಅಧ್ಯಾಯ – ಒಂಬತ್ತು ೨೦೫–೨೧೮

ನೂರೊಂದು ವಿರಕ್ತರು : ಕರ್ನಾಟಕದ ನೆಲೆಗಳು

ಅಧ್ಯಾಯ – ಹತ್ತು ೨೧೯–೨೨೫

ನೂರೊಂದು ವಿರಕ್ತರು : ಶಾಂತ ಸಂಪ್ರದಾಯ

ಅಧ್ಯಾಯ – ಹನ್ನೊಂದು ೨೨೬–೨೩೩

ಸಮಾರೋಪ

ಅನುಬಂಧ ೨೩೪–೨೪೭

ನೂರೊಂದು ವಿರಕ್ತರ ಹೆಸರುಗಳು

ಛಾಯಾಚಿತ್ರಗಳು

ಆಕರ ಗ್ರಂಥಗಳು

ಅಧ್ಯಾಯ - ಒಂದು

ಅಧ್ಯಯನದ ಉದ್ದೇಶ-ಸ್ವರೂಪ

೧. ಪ್ರವೇಶ

೨. ಅಧ್ಯಯನದ ಉದ್ದೇಶ

೩. ಅಧ್ಯಯನದ ಮಹತ್ವ

೪. ಅಧ್ಯಯನದ ವೈಧಾನಿಕತೆ

೫. ಅಧ್ಯಯನದ ವ್ಯಾಪ್ತಿ

೬. ಅಧ್ಯಯನದ ಸ್ವರೂಪ

೭. ಅಧ್ಯಯನದ ಆಕರ ಸಾಮಗ್ರಿ

೮. ಅಧ್ಯಯನದ ಸಮೀಕ್ಷೆ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ–ಸ್ವರೂಪ

ಪ್ರವೇಶ

ಭಾರತವು ಹಲವು ದೃಷ್ಟಿಯಿಂದ ತುಂಬ ವೈವಿಧ್ಯತೆಗಳಿಂದ ಕೂಡಿದ ರಾಷ್ಟ್ರ. ಅದರಲ್ಲೂ ಆಧ್ಯಾತ್ಮಿಕ ದೃಷ್ಟಿಕೋನದಲ್ಲಿ ಸಹ ಇದು ತನ್ನದೇ ಆದ ಒಂದು ಅನನ್ಯತೆಯನ್ನು ಕಾಯ್ದು ಕೊಂಡುಬಂದಿದೆ. ಇಂದಿನ ಆಧುನಿಕತೆಯ ಅಬ್ಬರದ ಬಿರುಗಾಳಿಗೆ ಸಿಲುಕಿದ ಮನುಷ್ಯ ಪ್ರಸ್ತುತ ಸಂದರ್ಭದಲ್ಲಿ ನೆಮ್ಮದಿ ಇಲ್ಲದಂತಾಗಿದ್ದಾನೆ. ಈ ಮಾನಸಿಕ ನೆಮ್ಮದಿಗಾಗಿ ದೇಶ ವಿದೇಶಗಳಿಂದ ಹಲವು ಮಂದಿ ಭಾರತಕ್ಕೆ ಬರತೊಡಗಿದ್ದಾರೆ. ಯಾಂತ್ರಿಕೃತವಾದ ಬದುಕಿಗೆ ಸಿಲುಕಿದ ಮಾನವ ಇಂದು ಯಂತ್ರವಾಗಿ ಬಿಟ್ಟಿದ್ದಾನೆ. ಬುದ್ಧ, ಬಸವ, ಮಹಾವೀರರಂತಹ ಆಧ್ಯಾತ್ಮಿಕ ದಿವ್ಯ ಪುರುಷರು ಜನಿಸಿದ ಈ ನಾಡಿಗೆ ಪ್ರಪಂಚದಲ್ಲಿಯೇ ತನ್ನದೇ ಆದ ಒಂದು ವಿಶಿಷ್ಟವಾದ ಆಧ್ಯಾತ್ಮಿಕ ಸ್ಥಾನಮಾನವಿದೆ. ಬಹು ಸಂಖ್ಯಾತರ ನಾಡಾಗಿದ್ದ ನಮ್ಮಲ್ಲಿ ಹಲವು ಜಾತಿಗಳು, ಧರ್ಮಗಳು ಉದಯಿಸಿದವು. ಅವುಗಳಲ್ಲೇ ಇನ್ನೂ ಅನೇಕ ಕಿರುಧಾರೆಗಳು ಸಹ ಜನ್ಮ ಪಡೆದವು. "ಮಾನಸಿಕ ದುಃಖಗಳಿಂದ ಬದುಕು ದುರ್ಭರವಾದಾಗ, ನೊಂದ ಮಾನವ ಜೀವ ಶಾಂತಿಗಾಗಿ, ಸಮಾಧಾನಕ್ಕಾಗಿ ಪರಿತಪಿಸುತ್ತದೆ. ಶಾಶ್ವತ ಶಾಂತಿಯ ಹಂಬಲದಿಂದ ಪೀಡಿತವಾದ ಮನಸ್ಸು, ಸುತ್ತಲಿನ ಕತ್ತಲೆಯನ್ನು ಹರಿಸುವ ಬೆಳಕಾಗಿ ತಡಕಾಡಿದಾಗ ಧರ್ಮದ ಅಪೇಕ್ಷೆ ಉದಯವಾಗುತ್ತದೆ. ಮಾನವನ ಜೀವನದ ತುಂಬ ಅವ್ಯಕ್ತ ಭಯ ಹಾಸು ಹೊಕ್ಕಾಗಿದೆ. ಸಂಸ್ಕೃತಿಯ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಮಾನವನಿಗೆ ತನ್ನ ಬದುಕಿನ

ನಿರ್ಮಾಣದ ಜೊತೆ ಜೊತೆಯಾಗಿ ವಿನಾಶದ ಭೀತಿ ಬೆಂಬತ್ತಿ, ಅವನ ಮನಸ್ಸಿನಲ್ಲಿ ಹುದುಗಿರುವ ಸತ್ಯವು ಗೋಚರವಾಗುತ್ತದೆ. ಈ ಭೀತಿಯಿಂದ ಮುಕ್ತನಾಗಲೂ, ವಿನಾಶದ ಅಂಚಿನಿಂದ ತಪ್ಪಿಸಿಕೊಳ್ಳಲು ಆತ ತನಗಿಂತ ಉತ್ತಮವಾದ ಶಕ್ತಿಗಳನ್ನು ಆರಾಧಿಸಿ ಅವುಗಳ ಮೊರೆಹೋಗಿದ್ದಾನೆ."[7] ಮಧ್ಯಕಾಲಿನ ಸಂದರ್ಭದಲ್ಲಿ ಬೆಳಕಿಗೆ ಬಂದ ಹಲವು ಧಾರ್ಮಿಕ ಅನುಭಾವಿ ಪಂಥಗಳಲ್ಲಿ ಪ್ರಭಲವಾದ ಮತ ಪಂಥಗಳು ಮಾತ್ರ ಬೆಳೆದವು. ಇದಕ್ಕೆ ಕಾರಣ ಪ್ರಭುತ್ವದ ಬೆಂಬಲ ಒಂದು ಕಡೆಯಾದರೆ ಮತ್ತೊಂದು ಕಡೆ ಪ್ರಭಾವಿ ಪಂಥಗಳ ಪಂಡಿತರ ಪ್ರೋತ್ಸಾಹ ಸಹ ದೊರಕಿತು. ಹೀಗಾಗಿ ಅಂದು ಹಂಪೆಯಲ್ಲಿ ಶರಣ ಧರ್ಮ ಪ್ರವರ್ಧಮಾನಕ್ಕೆ ಬರಲು ಮೇಲಿನ ಎರಡು ಶಕ್ತಿಗಳು ಪ್ರಮುಖ ಕಾರಣವಾಗಿವೆ. ಹೆಚ್ಚು ಪ್ರಚಾರಗಳಿಸಿದ ವೀರಶೈವ ಧರ್ಮದ ಪ್ರಭಾವವು ಅಂದು ಮುಗಿಲು ಮುಟ್ಟಿತು. ಆಗ ಅಲಕ್ಷಿತವಾದ ಶಿಷ್ಠ ಮತ್ತು ಪರಿಶಿಷ್ಠ ನೆಲೆಯ ಹಲವು ಅನುಭಾವಿ ಪಂಥಗಳು ವೀರಶೈವ ಧರ್ಮದ ಕಡೆಗೆ ಸಹಜವಾಗಿಯೇ ಆಕರ್ಷಿತವಾದವು. ಅಂದು ಬೆಳೆಯಲಿಕ್ಕೆ ಈ ಪಂಥಗಳಿಗೆ ಮತ್ತೊಂದು ಧರ್ಮದ ಆಸರೆಬೇಕಾಗಿತ್ತು. ಹೀಗೆ ಬೇರೆ ಪ್ರಭಾವಿ ಪಂಥಗಳ ಪ್ರಭಾವಕ್ಕೆ ಒಳಗಾದ ಈ ಅಲಕ್ಷಿತ ಧಾರೆಗಳು ತಮ್ಮ ತತ್ವಗಳ ಜೊತೆಗೆ ಆ ಧರ್ಮದ ತತ್ವಗಳನ್ನು ಸಹ ಪಾಲಿಸಿ ಸಂಕರವಾದ ಸ್ಥಿತಿಯಲ್ಲಿ ಬದುಕುತ್ತಿದ್ದವು.

ಅಂದಿನಿಂದ ಇಂದಿನವರೆಗೂ ಶರಣ ಧರ್ಮಗಳಂತಹ ಪ್ರಬಲ ಪಂಥಗಳ ಕುರಿತು ಅಧ್ಯಯನಗಳು ನಡೆದಿವೆಯೇ ಹೊರತು ಆಧ್ಯಾತ್ಮಿಕ ಕಿರು ಮತಪಂಥಗಳ ಕುರಿತ ಅಧ್ಯಯನಗಳು ಹೆಚ್ಚಾಗಿ ನಡೆದಿಲ್ಲ. ನಾಥ, ಆರೂಢ, ಅವಧೂತ ಪಾಶುಪತ ಹಾಗೂ ಕಾಳಾಮುಖ ಅನುಭಾವಿ ಪಂಥಗಳಂತೆ ಅಂದು ಹಂಪೆಯಲ್ಲಿ ನೂರೊಂದು ವಿರಕ್ತರ ಒಂದು 'ಶಾಂತ ಪರಂಪರೆ' ಉದಯಿಸಿತ್ತು. ಮೇಲೆ ತಿಳಿಸಿದ ಆಧ್ಯಾತ್ಮಿಕ ಪಂಥಗಳ ಜೊತೆ ತುಂಬ ಹತ್ತಿರದ ಸಂಬಂಧ ಹೊಂದಿದ ವಿರಕ್ತರು ವೀರಶೈವ ಅಥವಾ ಶರಣ ಧರ್ಮದಿಂದ ತುಂಬ ದೂರ ಉಳಿದವರು. ಮದುವೆಯಾಗಿ ಮಕ್ಕಳನ್ನು ಪಡೆದು, ಕೊನೆಗೆ ಜೀವನದಲ್ಲಿ ಜಿಗುಪ್ಸೆ ಹೊಂದಿ, ಸನ್ಯಾಸ ಸ್ವೀಕರಿಸಿದ ಇವರು ವೀರಶೈವರಂತೆ ಶಿಷ್ಟ ನೆಲೆಯವರಲ್ಲ. ಪರಹೆಣ್ಣಿನ ಸಹವಾಸ ಮಾಡಿದ ಇವರು ಅರೆಮರುಳರಂತೆ ಸಂಚರಿಸುವ ವಾಮಾಚಾರಿಗಳು. ಅವಧೂತ, ಆರೂಢ ಹಾಗೂ ನಾಥರ ಚರಿತ್ರೆಯನ್ನು ಅಧ್ಯಯನ ಮಾಡಿದರೆ ಈ ವಿರಕ್ತರು ಇವರ ಗುಣ ಸ್ವಭಾವಕ್ಕೆ ತುಂಬ ಸನಿಹದವರಾಗಿ ಕಂಡುಬರುವರು. ಹೀಗಾಗಿ ಅಂದು ಅವಧೂತರಂತೆ ಅಲಕ್ಷಿತವಾದ ಒಂದು "ಶಾಂತ ಪರಂಪರೆ" ಅಥವಾ "ಶಾಂತ ಸಂಪ್ರದಾಯ" ಉದಯಿಸಿರಬೇಕು ಎಂದೆನಿಸುತ್ತದೆ.

ಪ್ರೌಢದೇವರಾಯನು ವೀರಶೈವ ಧರ್ಮಕ್ಕೆ ಹೆಚ್ಚಿನ ಬೆಂಬಲ ನೀಡಿದ್ದ. ಅಲ್ಲದೆ ಆ ಧರ್ಮದ ಪ್ರಸಿದ್ಧ ಪಂಡಿತರನ್ನು ಸಹ ಆಶ್ರಯ ನೀಡಿದ. ಜಕ್ಕಣಾರ್ಯ, ಲಕ್ಕಣ್ಣ ದಂಡೇಶ,

ಮಹಾಲಿಂಗದೇವ, ಚಾಮರಸ ಮಗ್ಗೆಯ ಮಾಯಿದೇವ, ಚಂದ್ರಶೇಖರರಂತಹ ಸುಪ್ರಸಿದ್ಧ ವೀರಶೈವ ಕವಿಗಳು ಶಾಸ್ತ್ರವೇತ್ತರು ಸ್ಥಾನ ಪಡೆದಿದ್ದರು. ಹೀಗಾಗಿ ಶರಣ ಧರ್ಮದ ಪ್ರಭಾವಕ್ಕೆ ಒಳಗಾದ ಹಂಪೆ ಅಂದು ಶರಣ ತತ್ವಗಳನ್ನು ಜನಸಾಮಾನ್ಯರಿಗೆ ಸಾಹಿತ್ಯ ಕೃತಿಗಳ ಮೂಲಕ ಪ್ರಚಾರ ನಡೆಸಿದರು. ಈ ಮೇಲಿನ ಪಂಡಿತ ಬಳಗದ ಪ್ರಯತ್ನದ ಫಲವಾಗಿ ವೀರಶೈವ ಧರ್ಮ ಅಂದು ಪುನರ್ ಸ್ಥಾನಮಾನ ಪಡೆಯಿತೇ ಹೊರತು ನೂರೊಂದು ವಿರಕ್ತರೇ ಅದನ್ನು ಪುನರುಜ್ಜೀವನ ನೀಡಿದರೆಂಬ ಮಾತು ಒಪ್ಪಲಿಕ್ಕೆ ಅನರ್ಹವಾದದ್ದು. ಬೇಕಾದರೆ ಆ ಧರ್ಮವನ್ನು ವೀರಶೈವೀಕರಿಸಿದರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನೂರೊಂದು ವಿರಕ್ತರಲ್ಲಿ ವೀರಣ್ಣೊಡೆಯ, ಬತ್ತಲೇಶ, ಗುರುಬಸವರಂತಹ ಕೆಲವೇ ಮಂದಿ ವೀರಶೈವರಿದ್ದು, ತಮ್ಮ ಮತ ಪಂಥಕ್ಕೆ ಸಂಬಂಧಿಸಿದ ಲಘು ಸಾಹಿತ್ಯ ಕೃತಿ ರಚಿಸಿದ ಮಾತ್ರಕ್ಕೆ ಎಲ್ಲರನ್ನು ವೀರಶೈವರೆಂದು ಹೇಳುವುದು ಒಪ್ಪಲಾರದ ಮಾತಾಗಿದೆ. ಪಾಶುಪತ-ಕಾಳಾಮುಖ ಶೈವನಾದ ಪ್ರೌಢದೇವರಾಯನನ್ನು ಅಂದಿನ ಸಂದರ್ಭದಲ್ಲಿ ರಚನೆಯಾದ ವೀರಶೈವ ಸಾಹಿತ್ಯ ಹಾಗೂ ಪುರಾಣ ಕೃತಿಗಳಲ್ಲಿ ವೀರಶೈವನನ್ನಾಗಿ, ಅಲ್ಲದೆ ದೇವಲೋಕದಿಂದ ಬಸವಣ್ಣರಾದಿಯಂತೆ ಧರೆಗೆ ಇಳಿದು ಬಂದವನಂತೆ ಅವನನ್ನು ಪುರಾಣೀಕರಣಗೊಳಿಸಲಾಗಿದೆ.

ಅದೇ ರೀತಿ ಹಂಪೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಬದುಕಿದ ವಿರಕ್ತರು ಸಹ ಈ ಮೇಲಿನ ಮಾತಿಗೆ ಹೊರತಾಗಿಲ್ಲ. "ಪ್ರೌಢದೇವರಾಯ ಪಾಶುಪತ-ಕಾಳಾಮುಖ ಶೈವಕ್ಕೆ ಸೇರಿದವನೆಂದು ಶಾಸನಗಳು ಹೇಳುವುವಾದರೂ ಅವನು ವೀರಶೈವದತ್ತ ಒಲಿದಿದ್ದನೆಂಬುದನ್ನು ಅವನ ಉನ್ನತ ಕಳೆಯನಾದ ಲಕ್ಕಣ್ಣ ದಂಡೇಶ ಅರಿತಿದ್ದ. ಆದುದರಿಂದಲೇ ಆ ರೀತಿ ಅರ್ಥಪೂರ್ಣ ವರ್ಣನೆಗೆ ಅವನು ತೊಡಗಿದಂತಿದೆ. ಹಂಪೆಯ ಶಿವಾನುಭಾವಿಗಳ ಅಪರಿಮಿತ ಗೃಹಂಗಳಿಂದ ತುಂಬಿಕೊಂಡಿತ್ತೆಂದು ಅವನು ಹೇಳುತ್ತಾನೆ. ವಿಜಯ ನಗರಿಯು ಭಕ್ತಗಣತತಿಯ ಚರಲಿಂಗ ಸೇವೆ, ಶಿವದಾಸೋಹ, ಗುರುಭಕ್ತಿ ಇತ್ಯಾದಿಗಳನ್ನು ಮನಸಾರೆ ಕವಿ ಕೊಂಡಾಡಿದ್ದಾನೆ. ಅಲ್ಲದೆ ವೀರಶೈವರೆನ್ನಬಹುದಾದ ನೂತನ ಗಣಂಗಳ ಮಾಲಿಕೆಯಲ್ಲಿ ಪಂಪಾಕ್ಷೇತ್ರದ ಕ್ರಿಯಾಶಕ್ತಿ ಯತಿರಾಯ, ಆಕಾಶವಾಸಿಯತಿವಂದಿತ ಗುರುಮೂರ್ತಿ, ದಕ್ಷಿಣ ಮೂರ್ತಿಯತಿ ಚಕ್ರವರ್ತಿ, ಭಿಕ್ಷಾವೃತ್ತಿರಾಯ, ಗುಂಡಿಪ್ರಭೆಯ ವಾರಣಾಸಿಯೊಡೆಯ ಮುಂತಾದ ಶೈವ ಶ್ರೇಷ್ಠರನ್ನು ಸೇರಿಸುವುದನ್ನು ನೋಡಿದರೆ, ಶೈವ ಅದು ಯಾವುದೇ ಆಗಿರಲಿ ಅದನ್ನು ವೀರ ಶೈವದಲ್ಲಿ ಲಕ್ಕಣ್ಣ ದಂಡೇಶ ಸಮಾವೇಶಗೊಳಿಸುತ್ತ ಹೋಗಿರುವುದು ಸ್ಪಷ್ಟವಾಗುತ್ತದೆ."[೨] ಹೀಗೆ ಶರಣ ಧರ್ಮದ ಅಬ್ಬರ ಪ್ರಚಾರದ ಅಲೆಯಲ್ಲಿ ಅಂದು ಅಸಹಾಯಕ ಸ್ಥಿತಿಯಲ್ಲಿರುವ ಅನೇಕ ಶಿಷ್ಟ ಮತ್ತು ಪರಿಶಿಷ್ಟ ನೆಲೆಯ ಹಲವು ಅನುಭಾವಿ ಧಾರೆಗಳು ಶರಣ ಧರ್ಮದಲ್ಲಿ ಕರಗಿ ಹೋದವು.

ಸಾಹಿತ್ಯ ಚರಿತ್ರೆಯಲ್ಲಿ ಒಂದು ಕಗ್ಗಂಟಾಗಿರುವ ನೂರೊಂದು ವಿರಕ್ತರನ್ನು ಡಾ.ಆರ್.ಸಿ. ಹಿರೇಮಠ ಅವರು, ಅವರ ಹೆಸರನ್ನು ಗಮನಿಸಿ ಶಾಂತ ಸ್ವಭಾವದವರೆಂದು ಸ್ಪಷ್ಟಪಡಿಸುವರು. ಅಧ್ಯಯನಗಳು ಇಂದು ಬಹುಶಿಸ್ತಿನ ಅಡಿಯಲ್ಲಿ ನಡೆದಿರುವುದರಿಂದ ಹಿರಿಯ ವಿದ್ವಾಂಸರ ಜೊತೆ ಚರ್ಚಿಸಿ, ವಿರಕ್ತರು ಶಾಂತ ಸ್ವಭಾವದವರಲ್ಲ. ಶಾಂತ ಸಂಪ್ರದಾಯದವರೆಂದು ಅಧ್ಯಯನದಲ್ಲಿ ಚರ್ಚಿಸಿದ್ದೇನೆ. ಶರಣ ಧರ್ಮದ ಪ್ರಭಾವಕ್ಕೆ ಒಳಗಾದ ವಿರಕ್ತರು ಆ ಧರ್ಮವನ್ನು ವೀರಶೈವೀಕರಿಸಿದರು ಹೊರತಾಗಿ ಪುನರುಜ್ಜೀವನಗೊಳಿಸಲಿಲ್ಲ. "ವಿಜಯನಗರದ ಹೊರಗಿದ್ದ ಶೈವ ಧರ್ಮ ಒಳಸೇರಿ ತಾನು ಪುನರುಜ್ಜೀವನಗೊಳ್ಳುವ ನೆಪದಲ್ಲಿ ಒಳಗಿದ್ದ ಶರಣ ಧರ್ಮವನ್ನು (ವೀರ ಶೈವ ಲಿಂಗಾಯತ) ಕೂಡಿಕೊಂಡು ಡೇರಿಯನ್ನು ಹೊಕ್ಕ ಒಂಟಿ ಡೇರಿಯನ್ನೇ ಎತ್ತಿಕೊಂಡು ಹೋದಂತೆ ವೀರಶೈವ ಪುನರುಜ್ಜೀವನವಾಯಿತೆಂಬ ಭ್ರಮೆಯನ್ನು ಹುಟ್ಟಿಹಾಕಿದುದು ಈಗ ಇತಿಹಾಸ."[೩]

ಅಂದು ವಿರಕ್ತರು ಶರಣ ಧರ್ಮದ ತತ್ವಗಳನ್ನು ಪಾಲಿಸಿದ ಮಾತ್ರಕ್ಕೆ ಅಲ್ಲದೆ ಕೆಲವೊಂದು ಲಘು ಕೃತಿಗಳಲ್ಲಿ ಶರಣ ಧರ್ಮ ಕುರಿತು ಪ್ರಸ್ತಾಪ ಮಾಡಿದ ಮಾತ್ರಕ್ಕೆ ಇವರನ್ನು 'ವೀರಶೈವ'ರೆಂದು ಒಂದೇ ಏಕೀಕೃತ ಸಮ್ಮತಿಗೆ ಬರುವಂತಿಲ್ಲ. ಹೀಗಾಗಿ ಈ ನೂರೊಂದು ವಿರಕ್ತರ ಪರಂಪರೆಯ ಕುರಿತು ಇದುವರೆಗೆ ಕೆಲವು ಲೇಖನಗಳು, ವೀರಶೈವ ಸಾಹಿತ್ಯ ಹಾಗೂ ಪುರಾಣ ಕೃತಿಗಳಲ್ಲಿ ಅಲ್ಲಲ್ಲಿ ಪ್ರಾಸಂಗಿಕವಾಗಿ ಚರ್ಚಿತವಾಗಿವೆ. ಕರಸ್ಥಲದ ನಾಗಲಿಂಗನ ಚರಿತ್ರೆ, ಮೋದಿರುದ್ರನ ವಿರಕ್ತರ ಕಾವ್ಯ ಹಾಗೂ ಶಿವಾನಂದ ವಿರಕ್ತಮಠರವರ ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯವನ್ನು ಬಿಟ್ಟರೆ ಸಮಗ್ರವಾಗಿ ಗಂಭೀರವಾದ ಅಧ್ಯಯನ ನಡೆದಿಲ್ಲ. ಇದಕ್ಕೆ ಮುಖ್ಯವಾಗಿ ಪೂರ್ಣ ಪ್ರಮಾಣದಲ್ಲಿ ಲಿಖಿತ ಮಾಹಿತಿ, ಆಧಾರಗಳು ದೊರೆಯದಿರುವುದು ಕಾರಣವಾಗಿದೆ. ಹೀಗಾಗಿ 'ನೂರೊಂದು ವಿರಕ್ತರು; ಒಂದು ಅಧ್ಯಯನ' ಎಂಬ ಈ ಪ್ರೌಢ ಪ್ರಬಂಧವು ಸಿಗುವ ಅಲ್ಪ ಸ್ವಲ್ಪ ಲಿಖಿತ ಮಾಹಿತಿಗಳ ಜೊತೆಗೆ ಹಿರಿಯ ಚಿಂತಕರ ಬಳಿ ಚರ್ಚಿಸುವುದರ ಮೂಲಕ, ಕ್ಷೇತ್ರಕಾರ್ಯವನ್ನು ಆಧರಿಸಿ ಮೊದಲ ಬಾರಿಗೆ ಸಮಗ್ರ ಹಾಗೂ ಗಂಭೀರ ಅಧ್ಯಯನಕ್ಕೆ ತೊಡಗಬೇಕೆನ್ನುವ ಉದ್ದೇಶದಿಂದ ಈ ಸಂಶೋಧನೆಯ ನಡೆಸಲಾಗಿದೆ. ಅಧ್ಯಯನದ ಪ್ರಮುಖ ಉದ್ದೇಶಗಳನ್ನು ಈ ಕೆಳಗಿನಂತೆ ವಿವರಿಸಬಹುದು.

೨. ಅಧ್ಯಯನದ ಉದ್ದೇಶ

೧. ವೀರಶೈವ ಧರ್ಮಕ್ಕೆ ಪೂರಕವಾಗಿ ಧರ್ಮದ ಸಾಂಸ್ಥಿಕ ಕಾರಣಗಳಲ್ಲಿ ಧಾರ್ಮಿಕ ಪಂಥಗಳನ್ನು ವೀರಶೈವ ಧರ್ಮದ ಚೌಕಟ್ಟಿನ ಒಳಗೆ ವಿವರಿಸುವ ಪ್ರಯತ್ನಗಳು ನಡೆದಿವೆ. ಇದಕ್ಕೆ ಕಾರಣಗಳು ಇಲ್ಲದಿಲ್ಲ. ವಚನಕಾರರ ಬಹುದೊಡ್ಡ ಚಳುವಳಿಯನ್ನು

ಇಂದು ವೀರಶೈವ ಧರ್ಮದ ಜೊತೆ ತಳಕು ಹಾಕಲಾಗಿದೆ. ವಚನ ಚಳುವಳಿಯ ನಂತರದ ಅದರ ಪ್ರಭಾವದಲ್ಲಿ ಮುಂದುವರಿದ ಹಲವು ಧಾರ್ಮಿಕ ಪಂಥಗಳನ್ನು ವೀರಶೈವ ಧರ್ಮದ ಚೌಕಟ್ಟಿನ ಅಡಿಯಲ್ಲಿ ಸಿಲುಕಿಸಲಾಗಿದೆ. ಅಂತಹ ಚೌಕಟ್ಟಿಗೆ ಒಳಪಟ್ಟವರಲ್ಲಿ ನೂರೊಂದು ವಿರಕ್ತರು ಹೌದು. ಈಗ ಇಂತಹ ಧಾರ್ಮಿಕ ಧಾರೆಗಳನ್ನು ಬಹುರೂಪಿ ಸಮುದಾಯಗಳ ನೆಲೆಯಲ್ಲಿ ಅಧ್ಯಯನ ಮಾಡುವ ಅಗತ್ಯವಿದೆ. ವೀರಶೈವ ಧರ್ಮದ ಮುಸುಕನ್ನು ಮರೆಮಾಡಿ ನೋಡಬೇಕಿದೆ.

ಈ ಆಲೋಚನೆಯ ಭಾಗವಾಗಿಯೇ ೧೪ ಮತ್ತು ೧೫ನೇ ಶತಮಾನದಲ್ಲಿ ಒಂದು ಧಾರ್ಮಿಕ ಪಂಥವಾಗಿ ಹುಟ್ಟಿಕೊಂಡ ನೂರೊಂದು ವಿರಕ್ತರನ್ನು ಹೀಗೆ ವೀರಶೈವರೇತರನ್ನಾಗಿ ಅಧ್ಯಯನ ಮಾಡುವ ಅಗತ್ಯವಿದೆ. ಮತ್ತು ಈ ಅಧ್ಯಯನದ ಪ್ರಮುಖ ಉದ್ದೇಶವು ಇದಾಗಿದೆ.

೧. ಕ್ರಿ.ಶ. ೧೪ ಮತ್ತು ೧೫ನೇ ಶತಮಾನದ ಮಧ್ಯಕಾಲೀನ ಕರ್ನಾಟಕದಲ್ಲಿ ಅನೇಕ ಅಲಕ್ಷಿತ ಧಾರ್ಮಿಕ ಪಂಥಗಳು ನೆಲಯೂರಲು ಪ್ರಯತ್ನಿಸುತ್ತಿದ್ದವು. ಇವುಗಳಲ್ಲಿ ಅಂದು 'ಹಂಪೆ' ಸಹ ಬಹು ಧರ್ಮಿಯ ಒಂದು ಸಾಂಸ್ಕೃತಿಕ ಕೇಂದ್ರವಾಗಿ ಗೋಚರಿಸಿತು. ಹೀಗಾಗಿ ಹಂಪೆಯಲ್ಲಿ ಆರೂಢರು, ನಾಥರು, ಪಾಶುಪತರು, ಕಾಳಾಮುಖರು, ಅವಧೂತ ಹಾಗೂ ಸೂಫಿಗಳಂತಹ ಹಲವಾರು ಪಂಥಗಳು ಪ್ರವರ್ಧಮಾನಕ್ಕೆ ಬಂದವು. ಒಂದೇ ಕ್ಷೇತ್ರದಲ್ಲಿ ಹಲವು ಪಂಥಗಳು ನೆಲಯೂರ ತೊಡಗುತ್ತಲೂ ಅವುಗಳ ಒಳಗೆ ಒಂದು ಕೊಡುಕೊಳ್ಳುವಿಕೆ ಸಹಜವಾಗಿ ಆರಂಭವಾಯಿತು. ಹೀಗಾಗಿ ಈ ಪಂಥಗಳು ಸಂಕರಗೊಳ್ಳತೊಡಗಿದವು. ಇವುಗಳೆಲ್ಲವನ್ನು ಪ್ರಭಾವಿಸಲು ವೀರಶೈವ ಧರ್ಮವು ಹವಣಿಸುತ್ತಿತ್ತು. ಹೀಗೆ ೧೪ ಮತ್ತು ೧೫ನೇ ಶತಮಾನದ ಕರ್ನಾಟಕದ ಸಾಂಸ್ಕೃತಿಕ ಸಂಕರಶೀಲತೆಯನ್ನು; ಚಾರಿತ್ರಿಕ ಪಲ್ಲಟಗಳನ್ನು ಗುರುತಿಸುವುದು, ಈಗಾಗಲೇ ಇರುವ ಜನಪ್ರಿಯ ನಂಬಿಕೆಗಳನ್ನು ಒಡೆಯುವುದು. ಆ ನಂಬಿಕೆಗಳಿಗೆ ಆಹಾರವಾಗಬಹುದಾದ ಆಕರಗಳನ್ನು ಪುನರ್ ಪರಿಶೀಲಿಸುವುದು ಈ ಅಧ್ಯಯನದ ತಾತ್ವಿಕ ಪ್ರಮೇಯವಾಗಿದೆ.

೨. ಕರ್ನಾಟಕದಲ್ಲಿ ಅನೇಕ ಧಾರ್ಮಿಕ ಪಂಥಗಳು ಬೇರೆ ಬೇರೆ ರೂಪದಲ್ಲಿ ಚಲನೆಗಳಗೊಂಡಿವೆ. ಇಂದು ಸಹ ಸಂಕರಗೊಂಡ ರೂಪದಲ್ಲಿ ಆಚರಣೆಗೊಳಗಾಗುತ್ತಿವೆ. ಕರ್ನಾಟಕದಲ್ಲಿರುವ 'ನಾಥ' ಪಂಥಗಳ ಆರಾಧನ ಕೇಂದ್ರಗಳನ್ನು ನೋಡಿದರೆ ಅದು ಮನವರಿಕೆ ಆಗುತ್ತದೆ. ಪ್ರೊ. ರಹಮತ್ ತರೀಕೆರಿಯವರು 'ಕರ್ನಾಟಕದ ನಾಥ ಪಂಥ' ಎಂಬ ಕೃತಿಯನ್ನು ನೋಡಿದರೆ ಹಳೆಯದು ಎಂದು ಹೇಳುವ ಧಾರ್ಮಿಕ ಪಂಥ ವರ್ತಮಾನದಲ್ಲಿ ಬದುಕುತ್ತಿರುವ ಬಗ್ಗೆ ಅನೇಕ ಸೂಕ್ಷ್ಮತೆಗಳನ್ನು ಕೊಟ್ಟಿದ್ದಾರೆ. ನೂರೊಂದು ವಿರಕ್ತರ ಈ

ಅಧ್ಯಯನ ಸಹಜವಾಗಿ ರಹಮತ್ ತರೀಕೆರಿಯವರ ಅಧ್ಯಯನ ವಿಧಾನದ ಪ್ರಭಾವಕ್ಕೆ ಒಳಗಾಗಿದೆ. ಹಾಗಾಗಿ ನೂರೊಂದು ವಿರಕ್ತರು ಇಂದು ಜನಸಮುದಾಯಗಳಲ್ಲಿ ಹೇಗೆ ಉಳಿದಿದ್ದಾರೆ? ಎನ್ನುವುದು ಬಹಳ ಮುಖ್ಯ ಪ್ರಶ್ನೆ. ಸಂಖ್ಯೆಯಲ್ಲಿ ನೂರೊಂದು ಇದ್ದರೂ ಇಂದು ಆರಾಧನೆಗೊಳ್ಳುವವರಲ್ಲಿ ಕರಸ್ಥಲ ನಾಗಿದೇವನೊಬ್ಬನೆ. ಆದರೆ ಇವರ ನಂತರ ಬಂದ ಏಳನೂರ ಒಂದು ತೋಂಟದ ಶಿಷ್ಯ ಪರಂಪರೆಯ ಕುರಿತಾಗಿ ಆರಾಧನ ಅಥವಾ ಆಚರಣಾ ಕ್ರಮಗಳಿವೆ. ಅಲ್ಲದೆ ಇವರು ಸ್ವರ್ಗಸ್ಥರಾದ ಮೇಲೆ ಇವರ ಕುರಿತಾಗಿ ಗದ್ದುಗೆ ಅಥವಾ ಸಮಾಧಿಗಳು ದೊರೆಯುವಂತೆ ನೂರೊಂದು ವಿರಕ್ತರ ಬಗೆಗೆ ಯಾವುದೇ ಕುರುಹುಗಳು ಸಿಗಲಾರದು. ಏಕೆಂದರೆ ಇವರು ವೀರಶೈವರಾಗಿದ್ದರೆ ಇವರ ಕುರಿತು ಮಾಹಿತಿ ದೊರೆಯುತ್ತಿತ್ತು. ಆದರೆ ಇವರು ವೀರಶೈವರಲ್ಲದ ಕಾರಣ ಗದ್ದುಗೆಗಳಾಗಲಿ ಅಥವಾ ಸಮಾಧಿಗಳಾಗಲಿ, ಆಚರಣಾ ಕ್ರಮಗಳಾಗಲಿ ಕಾಣಲಾರದಾಗಿದೆ.

[ನೂರೊಂದು ವಿರಕ್ತರು ಏಕೆ ಜನರ ಮನದಲ್ಲಿ ಹಸಿರಾಗಿ ಉಳಿಯಲಿಲ್ಲ. ತಾವು ಬದುಕಿದ್ದಾಗಲೂ ಜನಕ್ಕೆ ಹತ್ತಿರವಾಗಲಿಲ್ಲವೆ, ಅಥವಾ ಇವರನ್ನು ಆರಾಧನೆಗೊಳಪಡಿಸಲಾಗದ ಸಾಂಸ್ಕೃತಿಕ ರಾಜಕಾರಣಗಳೇನಾದರೂ ಕೆಲಸ ಮಾಡಿವೆಯೇ? ವರ್ತಮಾನದಲ್ಲಿ ಈ ವಿರಕ್ತರ ಪ್ರಸುತತೆಯನ್ನು ಕಂಡು ಕೊಳ್ಳುವುದು ಹೇಗೆ? ಎನ್ನುವಂತಹ ಪ್ರಮುಖ ಪ್ರಶ್ನೆಗಳಿಗೆ] ಮುಖಾಮುಖಿಯಾಗುವುದು. ಈ ಆದ್ಯಯನದ ಉದ್ದೇಶವಾಗಿದೆ.

೪. ವಿಜಯನಗರದ ಚರಿತ್ರೆಯನ್ನು ಇಲ್ಲಿಯವರೆಗೆ ಮೂಲಭೂತವಾದಿಗಳೇ ರಚಿಸಿದ್ದಾರೆ. ಈಗಲೂ ವಿಜಯನಗರವೆಂದರೆ ಕೃಷ್ಣದೇವರಾಯ ನೆನಪಾಗುತ್ತಾನೆ. 'ಹಂಪೆ' ವೀರಶೈವ ಧರ್ಮದ ಪುನರುಜ್ಜೀವನದ ಕಾಲಮಾನವೆಂದು ಗುರುತಿಸಲಾಗುತ್ತದೆ. ಇಂತಹ ಮತೀಯ ಚರಿತ್ರೆಯ ಆಚೆಗೂ ವಿಜಯನಗರದೊಂದಿಗೆ ಸಾಂಸ್ಕೃತಿಕ ಸಂಬಂಧವನ್ನೊಂದಿದ ಅನೇಕ ಜನಸಮುದಾಯಗಳಿದ್ದವು. ಹಲವು ವಾಮಚಾರದ ಧಾರ್ಮಿಕ ಕಿರುಧಾರೆಗಳು ಹರಿಯುತ್ತಿದ್ದವು. ಅಲ್ಲದೆ ಶಿಷ್ಟ ಮತ್ತು ಪರಿಶಿಷ್ಟ ನೆಲೆಯ ಕೆಲವೊಂದು ಆಧ್ಯಾತ್ಮಿಕ ಪಂಥಗಳ ಕೊಡುಗೆ ಅಪಾರ. ಇಷ್ಟೆಲ್ಲ ಇದ್ದಾಗ್ಯೂ ಕೂಡ ವಿಜಯನಗರ ಚರಿತ್ರೆ ಮಾತ್ರ ಕೇವಲ ರಾಜ ಪ್ರಭುತ್ವದ, ಧರ್ಮ ಪ್ರಭುತ್ವದ ಚರಿತ್ರೆಯೇ ಆಗಿದೆ. ಹೀಗಾಗಿ ಇಂದು ಸಹ ಮೂಲಭೂತವಾದಿಗಳು 'ಹಂಪೆ' ಯನ್ನು ಕ್ಷೇತ್ರವನ್ನಾಗಿಸಿಕೊಳ್ಳಲು ಹವಣಿಸುತ್ತಿದ್ದಾರೆ. ಈ ಅಪಾಯದಿಂದ ಹಂಪಿಯನ್ನು ಪಾರುಮಾಡಲು ವಿಜಯನಗರ ಕಾಲದ ಅನೇಕ ಅಲಕ್ಷಿತ ಧಾರೆಗಳ ಮೂಲಕ ವಿಜಯನಗರ ಚರಿತ್ರೆಯನ್ನು ಪುನರ್‌ರಚಿಸಬೇಕಿದೆ. ಪ್ರಸ್ತುತ ಈ ಅಧ್ಯಯನದಲ್ಲಿ ನೂರೊಂದು ವಿರಕ್ತರ ಮೂಲಕ ವಿಜಯನಗರದ ಚರಿತ್ರೆಯನ್ನು ಕಟ್ಟಿಕೊಡುವ ಬಹು ಮುಖ್ಯ ಉದ್ದೇಶ ಈ ಅಧ್ಯಯನದ್ದಾಗಿದೆ.

೫. ಇಲ್ಲಿಯವರೆಗೆ ಬಂದಿರುವ ವೀರಶೈವ ಸಾಹಿತ್ಯ ಕೃತಿಗಳು ನೂರೊಂದು ವಿರಕ್ತರು ವೀರಶೈವರಾಗಿದ್ದು, ಆ ಧರ್ಮದ ಪುನರ್‌ಜ್ಜೀವನಕ್ಕೆ ಕಾರಣೀಕರ್ತರೆಂದು ಬಿಂಬಿತರಾಗಿದ್ದಾರೆ. ಪರಿಶಿಷ್ಟ ನೆಲೆಯ ವಿರಕ್ತರು ಶಿಷ್ಟನೆಲೆಯ ವೀರಶೈವರಿಗಿಂತ ತುಂಬ ಭಿನ್ನರಾಗಿರುವರು. ಹೀಗಾಗಿ ವಿರಕ್ತರ ಬಗೆಗೆ ಇರುವ ಕೆಲವೊಂದು ಆಧಾರಗಳ ಮೂಲಕ ಈ ಅಧ್ಯಯನದಲ್ಲಿ ಸೈದ್ಧಾಂತಿಕವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೩. ಅಧ್ಯಯನದ ಮಹತ್ವ

ಹಂಪಿ ಪ್ರಾಚೀನ ಕಾಲದಿಂದಲೂ ಹಲವು ಸಮುದಾಯಗಳ ಅಥವಾ ಪರಂಪರೆಗಳ ನೆಲೆಬೀಡು. ಹೀಗಾಗಿ ಕರಸ್ಥಲ ಪರಂಪರೆಯಂತೆ, ನೂರೊಂದು ವಿರಕ್ತರ ಶಾಂತ ಪರಂಪರೆ(ಸಂಪ್ರದಾಯ) ಹಂಪೆಯಂತಹ ಪ್ರದೇಶದಲ್ಲಿ ಅಸ್ಥಿತ್ವದಲ್ಲಿತ್ತೇ? ಎಂಬುದು ನಮ್ಮ ಅಧ್ಯಯನದ ಮಹತ್ವ ಪೂರ್ಣಭಾಗವಾಗಿದೆ. ಪ್ರಾರಂಭದಲ್ಲಿ ಬರುವ ಏಂಟು ಮಂದಿ ವಿರಕ್ತರ ಹೆಸರು ನಮ್ಮ ನಿಮ್ಮಂತೆ ಸಾಮಾನ್ಯವಾಗಿದ್ದರೆ, ಉಳಿದ ವಿರಕ್ತರ ಹೆಸರುಗಳು ಭಿನ್ನ ರೀತಿಯಲ್ಲಿವೆ. ಪೂರ್ವಪದ ವಿಶೇಷಣದಿಂದ ಕೂಡಿದ್ದು, ಉತ್ತರ ಪದ 'ಶಾಂತ'ವೆಂದು ಕೊನೆಗೊಳ್ಳುತ್ತಾದೆ. ಉದಾ:- ಬುಡಬುಡಕಿ ಶಾಂತ, ಮಂಚದ ಶಾಂತ, ಆಯುಧಶಾಂತ, ಜಟ್ಟಿಶಾಂತ, ವೀರಶಾಂತ ಇತ್ಯಾದಿ. ಹೀಗೆ ೧೪ ಮತ್ತು ೧೫ನೇ ಶತಮಾನದಲ್ಲಿ ವಾಮಚಾರದ ಹಲವು ಆಧ್ಯಾತ್ಮಿಕ ಪಂಥಗಳು ಹಂಪೆಯಲ್ಲಿ ಗೋಚರಿಸಿದವು. ಅವುಗಳಲ್ಲಿ ನಾಥ, ಆರೂಢ, ಅವಧೂತರ ಆಚರಣೆ ಹಾಗೂ ಗುಣಲಕ್ಷಣಗಳಿಗೆ ನೂರೊಂದು ವಿರಕ್ತರು ತುಂಬ ಹತ್ತಿರದವರಾಗಿ ಕಂಡು ಬರುವರು. ವೀರಶೈವರೆಂದು ಬಿಂಬಿತರಾದ ವಿರಕ್ತರು ವೀರಶೈವ ವಿರಕ್ತರಿಗಿಂತ ಭಿನ್ನನೆಲೆಯವರು. "ಈ ಶರಣರ ಮಾರ್ಗದಲ್ಲಿಯೇ ವಿಲಕ್ಷಣ ರೂಪದ ವೈರಾಗ್ಯ ಮನೋಧರ್ಮದ ಆತ್ಮವಾದಿಗಳ ಗುಂಪೊಂದು ಇತ್ತು. ಅಲ್ಲಮಪ್ರಭು, ಅಜಗಣ್ಣ, ಸಿದ್ಧರಾಮನಂಥವರ ಈ ಮಾರ್ಗವನ್ನು ನಂತರದ ಅನೇಕ ಯೋಗಿಗಳು, ಆರೂಢರೂ, ನಾಥರು, ಅವಧೂತರು, ತತ್ವ ಪದಕಾರರು ಮುಂದುವರೆಸಿಕೊಂಡು ಬಂದಿದ್ದಾರೆ. ಅಲ್ಲಮನ ನಡೆದಾಟ, ಅವನು ಭೇಟಿ ಮಾಡುವ ಜನ, ಅವರೊಡನೆ ನಡೆಸುವ ಚರ್ಚೆ, ಇವೆಲ್ಲ ಮಧ್ಯಕಾಲದ ಸೂಫಿ, ನಾಥ,ಆರೂಢ ಪಂಥದ ಗುಣಗಳು"[೪] ಹೀಗೆ ಈ ನೂರೊಂದು ವಿರಕ್ತರು ಸಹ ಮೇಲೆ ಪ್ರಸ್ತಾಪಿಸಿದ ಅಲಕ್ಷಿತ ಧಾರೆಗಳಿಗೆ ಒಳಗಾಗಿರುವರು.

ದಕ್ಷಿಣ ಕರ್ನಾಟಕದಿಂದ ಉತ್ತರ ಕರ್ನಾಟಕದ ಕಡೆಗೆ ಮಂಟೆಸ್ವಾಮಿ ಮಲೆಯಮಾದೇಶನ ಪರಂಪರೆ ಬಂದಂತೆ, ಅಂದು ವಿರಕ್ತರಲ್ಲಿ ಆದಿಯಾದ ಕರಸ್ಥಲನಾಗಿದೇವ ಹಾಗೂ ಕರಸ್ಥಲದ ವೀರಣ್ಣೊಡೆಯನ ಗುರು-ಶಿಷ್ಯರ ಪರಂಪರೆ ದಕ್ಷಿಣ ಕರ್ನಾಟಕದಿಂದ ಎಲ್ಲೆಲ್ಲೋ ಸಂಚರಿಸಿ

ಆಧ್ಯಾತ್ಮಿಕ ಕೇಂದ್ರವಾಗಿದ್ದ 'ಹಂಪೆ'ಯಲ್ಲಿ ತಮ್ಮ ಸಕಲ ಕಾರ್ಯ ಚಟುವಟಿಕೆಯನ್ನು ನೆರವೇರಿಸಿದರು. ಅಲ್ಲಿ ವಚನಗಳ ಸಂಗ್ರಹ, ಸಂಪಾದನೆ, ಸಂಕಲನವನ್ನು ವಿರಕ್ತರೆಲ್ಲಾರು ಮಾಡಿದರೆಂಬ ವದಂತಿಗಳಿವೆ. ಆದರೆ ಇವರು ಯಾವುದೇ ರೀತಿಯಲ್ಲಿ ಮೇಲಿನ ಕೆಲಸ ಕಾರ್ಯಗಳನ್ನು ಮಾಡಿಲ್ಲ. ಬೆರಳೆಣಿಕೆಯ ವಿರಕ್ತರು ಮಾತ್ರ ಕೆಲವು ಅನುಭಾವದ ಹಾಡುಗಳಂತಹ ಲಘು ಕೃತಿಗಳನ್ನು ಬಿಟ್ಟರೆ ಶರಣ ಸಾಹಿತ್ಯಕ್ಕೆ ಇವರ ಸೇವೆ ಶೂನ್ಯ ಸ್ಥಿತಿಯಲ್ಲಿದೆ.

ಜಾತಿ, ಮತಧರ್ಮದ ಕಲ್ಪನೆ ಇಲ್ಲದ ಇವರು ಸರ್ವರ ಏಳ್ಗೆಗೆ ಪರೋಕ್ಷವಾಗಿ ಶ್ರಮಿಸಿದವರು. ಆತ್ಮನಲ್ಲಿಯೇ ವಿಹರಿಸುವ ವಿರಕ್ತರು ಸರ್ವಸಂಗ ಪರಿತ್ಯಾಗಿಗಳಾಗಿರುವರು. ಹೀಗೆ ದಿವ್ಯ ಜ್ಞಾನಿಗಳಾದ ವಿರಕ್ತರು ಅಂದು ನಾಡಿನ ಮೂಲೆ ಮೂಲೆಗಳಿಂದ ಧಾರ್ಮಿಕ ಸ್ಥಳವಾಗಿದ್ದ ಹಂಪೆಯ ಕಡೆ ವಾಲಿದರು. ಅವರಷ್ಟೇ ಅಲ್ಲ ಅಂದು ಹಂಪೆ, ಹಲವು ಶರಣರಿಗೆ, ದಾಸರಿಗೆ, ಪಂಡಿತ ಪಾಮರರಿಗೆ ಹಾಗೂ ಅನುಭಾವಿಗಳಿಗೆ ಸೂಕ್ತ ಚಟುವಟಿಕೆಯ ಕೇಂದ್ರವಾಗಿತ್ತು. ಇದಕ್ಕೆ ಕಾರಣ ಇಲ್ಲಿಯ ಪರಿಸರವೆನ್ನಬಹುದು. ಈ ನೆಲದಲ್ಲಿ ಸತ್ತು ಮಣ್ಣಾಗಿರುವ ಅನೇಕ ಅಲಕ್ಷಿತ ಪಂಥಗಳ ಬಗೆಗೆ ಇದುವರೆಗೂ ಹೆಚ್ಚಿನ ಅಧ್ಯಯನಗಳು ನಡೆದಿಲ್ಲ. ಅದರಲ್ಲೂ ನೂರೊಂದು ವಿರಕ್ತರ ಕುರಿತಾದ ಸಂಶೋಧನಾತ್ಮಕ ಅಧ್ಯಯನಗಳೂ ಇನ್ನೂ ಕಡಿಮೆ. ಅಂದು ರಚನೆಯಾದ ಪುರಾಣ ಕೃತಿಗಳು ಹೇಳಿದನ್ನೇ ಮತ್ತೆ ಮತ್ತೆ ವಿರಕ್ತರನ್ನು ಕುರಿತು ವಿದ್ವಾಂಸರು ಹೇಳುತ್ತಾ ಹೋಗಿದ್ದಾರೆ, ಹೊರತು ಭಿನ್ನ ನೆಲೆಯಲ್ಲಿ ಇವರನ್ನು ಗುರುತಿಸಲಿಕ್ಕೆ ಇದುವರೆಗೂ ಸಾಧ್ಯವಾಗಿಲ್ಲ. ಪವಾಡ ಪುರುಷರಾದ ಇವರು ಮರುಳರಂತೆ ಹಂಪೆಯ ಪ್ರದೇಶಗಳಲ್ಲಿ ಸಂಚರಿಸುತ್ತಿದ್ದರಂತೆ. "ಜಗಕೆ ತಾಮರಳು ತನಗೆ ಜಗ ಮರಳು ಎಂಬಂತೆ ಲೀಲಾಮೂರ್ತಿಗಳಾಗಿ ಲೋಕದ ಕಣ್ಣಿಗೆ ಹುಚ್ಚರಂತೆ ತೋರಿದರೂ. ಶಿವಯೋಗದ ನಿಬ್ಬೆರಗಿನಲ್ಲಿ ಅಂಗ ಲೀಲೆಯನ್ನು ಮೆರೆದ ಮಹಾನುಭಾವಿಗಳಾಗಿದ್ದಾರೆ."[3] ಸದಾ ಸಚ್ಚಿದಾನಂದ ಸ್ವರೂಪಿಗಳಾದ ಇವರು ಬಾಹ್ಯ ಶುದ್ಧತೆಗಿಂತ ಆಂತರಿಕ ಶುದ್ಧಿಗೆ ಹೆಚ್ಚು ಒಲವನ್ನು ತೋರಿದವರು. ಹೀಗೆ ಅನೇಕ ದೃಷ್ಟಿಯಿಂದ ಪ್ರಬಲ ಶಕ್ತಿಯಾಗಿ ಮೆರೆದ ವಿರಕ್ತರು ಜನರ ಮನದಾಳದಲ್ಲಿ ಹಸಿ ಹಸಿಯಾಗಿ ಏಕೆ? ಉಳಿಯಲಿಲ್ಲ ಎಂಬ ಪ್ರಶ್ನೆ ವಿದ್ವಾಂಸರ ಆತಂಕಕ್ಕೆ ಕಾರಣವಾಗಿದೆ. ಇಂತಹ ವಿರಕ್ತರನ್ನು ಕುರಿತು ಅಧ್ಯಯನ ಮಾಡುತ್ತಿರುವುದು ಒಂದು ಅಲಕ್ಷಿತ ಧಾರ್ಮಿಕ ಕಿರುಪರಂಪರೆಯ ಅದರೆಲ್ಲಾ ಆಯಾಮಗಳೊಂದಿಗೆ ಶೋಧಿಸುತ್ತಿರುವುದು ಈ ಅಧ್ಯಯನದ ಮಹತ್ವವಾಗಿದೆ.

೪. ಅಧ್ಯಯನದ ವೈಧಾನಿಕತೆ

ಈಗಾಗಲೇ ಅಧ್ಯಯನವಾದ ಧಾರ್ಮಿಕ ಪಂಥಗಳ ಕುರಿತು ಹಲವಾರು ಅಧ್ಯಯನಗಳು ಬಂದಿವೆ. ಅವುಗಳಲ್ಲಿ ಕಾಪಾಲಿಕರು, ನಾಥರು, ಆರೂಢರೂ, ಅವಧೂತರು ಹಾಗೂ ಶೈವರು

ಪ್ರಮುಖ ಪಂಥಗಳಾಗಿವೆ. ಇಂತಹ ಅಧ್ಯಯನಗಳನ್ನು ಅಭ್ಯಾಸಿಸುವ ಮೂಲಕ ಅವುಗಳನ್ನು ವಿಮರ್ಶೆಗೆ ಒಳಪಡಿಸಿ, ಈ ಬಗೆಯ ತಿಳಿವಳಿಕೆಯ ಸಾರವನ್ನು ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಈ ಅಧ್ಯಯನವು ಸಾಂಸ್ಕೃತಿಕ ಅಧ್ಯಯನ ವಿಧಾನವನ್ನು ಅಳವಡಿಸಿಕೊಂಡಿದೆ. ಕಾರಣ ವಿರಕ್ತರ ಬಗೆಗೆ ಪುರಾಣಗಳಿವೆ. ಚರಿತ್ರೆಯ ಉಲ್ಲೇಖಗಳಿವೆ. ಜನಪದ ನಂಬಿಕೆಗಳಿವೆ. ಕೆಲವು ಐತಿಹ್ಯಗಳೊಂದಿಗೆ ಆಚರಣ ಕ್ರಮದ ಜೊತೆಗೆ ಆರಾಧನಾ ಪರಂಪರೆ ಇದೆ. ಇವುಗಳೆಲ್ಲವುಗಳ ನಡುವೆ ಒಂದು ಅಂತರ್ ಸಂಬಂಧ ಇದೆ. ಹೀಗೆ ವಿರಕ್ತರು ರಾಜಕೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಇವುಗಳೆಲ್ಲವನ್ನು ಒಳಗೊಂಡಂತೆ ಸಾಂಸ್ಕೃತಿಕ ಹಾಗೂ ಚಾರಿತ್ರಿಕವಾಗಿಯೂ ಗಮನ ಸೆಳೆಯುತ್ತಾರೆ, ಈ ಬಗೆಯ ಬಹುರೂಪಿ ಆಕರಗಳನ್ನು ವರ್ತಮಾನದ ಆಲೋಚನೆಯ ವಿನ್ಯಾಸಗಳ ಮೂಲಕ ಶೋಧಿಸುವ, ಅರ್ಥೈಸುವ ಸಾಂಸ್ಕೃತಿಕ ಅಧ್ಯಯನದ ವಿಧಾನವನ್ನು ಈ ಸಂಶೋಧನೆಯು ಒಳಗೊಂಡಿದೆ.

ವಿರಕ್ತರ ಬಗೆಗಿನ ಸಂಶೋಧನೆ, ಚರಿತ್ರೆಯ ಮಾಹಿತಿಗಳು ಚದುರಿ ಹೋಗಿ ಬಿಡಿ ಬಿಡಿ ಅಭಿಪ್ರಾಯಗಳ ನೆಲೆಯಲ್ಲಿ ವ್ಯಕ್ತವಾಗುತ್ತವೆ. ಇಂತಹ ಚದುರಿದ ಮಾಹಿತಿಗಳನ್ನು ಒಂದು ಕೇಂದ್ರ ಚಿಂತನೆಯ ಅಡಿಯಲ್ಲಿ ಸಂಗ್ರಹಿಸುವುದು ಅವುಗಳಲ್ಲಿ ಶಿಥಿಲವಾದವುಗಳನ್ನು ಕೈಬಿಡುವುದು. ಇವುಗಳ ನಡುವೆ ಇರುವ ಅಂತರ್ ಸಂಬಂಧವನ್ನು ನಿರೂಪಿಸುವುದು ಆ ಮೂಲಕ ವಿರಕ್ತರ ಚರಿತ್ರೆಯನ್ನು ಕಟ್ಟಿಕೊಡುವ ಚಾರಿತ್ರಿಕ ವಿಧಾನವನ್ನು ಈ ಅಧ್ಯಯನವು ಒಳಗೊಂಡಿದೆ.

ಮೂಲ ಆಕಾರಗಳು ಮತ್ತು ಪೂರಕ ಆಕರಗಳಲ್ಲದೆ ಈ ಅಧ್ಯಯನ ಕ್ಷೇತ್ರಕಾರ್ಯವನ್ನು ಅವಲಂಭಿಸಿದೆ. ನೂರೊಂದು ವಿರಕ್ತರ ವಾಸದ ನೆಲೆಗಳೆಂದು ಗುರುತಿಸಲ್ಪಡುವ ಹಂಪೆ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶಗಳು, ಅಲ್ಲದೆ ಇವರ ಮೂಲ ನೆಲೆ ಎಂದು ಗುರುತಿಸಲ್ಪಡುವ ಚಾಮರಾಜನಗರ ಜಿಲ್ಲೆಯ ಬೊಮ್ಮನಹಳ್ಳಿ ಹಾಗೂ ಮಂಚಳ್ಳಿ ಗವಿ ಕ್ಷೇತ್ರ ಇವುಗಳನ್ನು ಕ್ಷೇತ್ರಕಾರ್ಯ ಮಾಡುವುದರ ಮೂಲಕ ಮಾಹಿತಿಯನ್ನು ಸಂಗ್ರಹಿಸಿ ನೂರೊಂದು ವಿರಕ್ತರ ಅಧ್ಯಯನಕ್ಕೆ ಒಂದು ಸ್ಥಾಪಿತ ಸಿದ್ಧಾಂತವನ್ನು ಭಿನ್ನ ನೆಲೆಯಲ್ಲಿ ನಿರೂಪಿಸುವ, ವಿಸ್ತರಿಸುವ ಕಾರ್ಯವನ್ನು ಸಾಧ್ಯವಾದಷ್ಟು ಇಲ್ಲಿ ಪೂರೈಸಲಾಗಿದೆ.

೫. ಅಧ್ಯಯನದ ವ್ಯಾಪ್ತಿ

ಅಧ್ಯಯನದ ವ್ಯಾಪ್ತಿ ಎಂದರೆ 'ಅಧ್ಯಯನದ ಚೌಕಟ್ಟು' ಎಂದರ್ಥ. ಒಂದು ಸೈದ್ಧಾಂತಿಕ ಅಧ್ಯಯನಕ್ಕೆ ನಿರ್ದಿಷ್ಟವಾದ ಚೌಕಟ್ಟು ಬಹಳ ಮುಖ್ಯ. ನಿರ್ದಿಷ್ಟವಾದ ಚೌಕಟ್ಟು ಇದ್ದಾಗ ಮಾತ್ರ ನಿಶ್ಚಿತವಾದ ಫಲಿತಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ. ಪ್ರಸ್ತುತ ಅಧ್ಯಯನವು ತನ್ನದೇ

ಆದ ವ್ಯಾಪ್ತಿಯನ್ನು ಒಳಗೊಂಡಿದೆ. ಕ್ರಿ.ಶ. ೧೪ ಮತ್ತು ೧೫ನೇ ಶತಮಾನದಲ್ಲಿ ಬದುಕಿದ ನೂರೊಂದು ವಿರಕ್ತರನ್ನು ಕುರಿತಾದ ಅಧ್ಯಯನದ ಮುಖ್ಯ ತಿರುಳಾಗಿದ್ದರು. ಅಧ್ಯಯನದ ವ್ಯಾಪ್ತಿ ಇತರೆ ಧಾರ್ಮಿಕ ಧಾರೆಗಳಾದ ಶಿಷ್ಟ ಮತ್ತು ಪರಿಶಿಷ್ಟ ನೆಲೆಯ ಪಂಥಗಳವರೆಗೆ ಚಾಚಿದೆ. ಅಂದು ಹಂಪೆಯಲ್ಲಿ ನೆಲೆನಿಂತರೆನ್ನಬಹುದಾದ ಶೈವಶಾಖೆಗಳಾದ ಕಾಪಾಲಿಕ, ಪಾಶುಪತ, ಶೈವ, ನಾಥ, ಅಲ್ಲದೆ ಆರೂಢ ಅವಧೂತರೊಂದಿಗೆ ವಿರಕ್ತರನ್ನು ಸಂಕ್ಷೇಪ್ತವಾಗಿ ತೌಲಾನಿಕ ಮುಖಾಮುಖಿ ಮಾಡಲಾಗಿದೆ. ಏಕೆಂದರೆ ಆಧ್ಯಾತ್ಮಿಕ ಪರಂಪರೆಯಾದ ನೂರೊಂದು ವಿರಕ್ತರನ್ನು ಆರೂಢ, ಅವಧೂತ, ನಾಥ ಹಾಗೂ ಸೂಫಿಗಳ ಆಸರೆಯಿಲ್ಲದೆ ಅರ್ಥ ಮಾಡಿಕೊಳ್ಳಲು ಕಷ್ಟಸಾಧ್ಯ. ಇವುಗಳ ಒಳಗೆ ಅಂತರ್ ಸಂಬಂಧಗಳ ಪರಸ್ಪರ ನಂಟಸ್ತಿಕೆ ಕಂಡುಬರುವುದು. ಹೀಗಾಗಿ ಸಂತ ಪರಂಪರೆಗಳನ್ನು ಕುರಿತು ಅಧ್ಯಯನ ಮಾಡುವಾಗ ಸಮಕಾಲೀನ ಸಂದರ್ಭದಲ್ಲಿ ಕೆಲವೊಂದು ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಅಂಶಗಳ ಒತ್ತಡಕ್ಕೆ ಒಳಗಾಗಿ ತಮ್ಮ ಮೂಲ ಚಹರೆಗಳನ್ನು ಹಾಗೆ ಕಾಪಾಡಿಕೊಳ್ಳುವುದರ ಜೊತೆಗೆ ಮಗದೊಂದು ಧರ್ಮದ ಪ್ರಬಲವಾದ ಒತ್ತಡಕ್ಕೆ ಒಳಗಾಗಿ ಸಂಕರಮಯವಾದ ವಾತಾವರಣ ನಿರ್ಮಾಣವಾಗುತ್ತದೆ. ಅದಕ್ಕೆ ನಿರ್ದಿಷ್ಟ ಪಂಥಕ್ಕೆ ಸೀಮಿತವಾಗುವುದು ಸಮಂಜಸವಾಗಲಾರದು. ಹೀಗಾಗಿ ಸಮಕಾಲೀನ ಪಂಥಗಳ ಜೊತೆಗೆ ಚರ್ಚೆ ಮಾಡಿದ್ದೇನೆ.

ಈ ಅಧ್ಯಯನವು ಸ್ವಲ್ಪ ಮಟ್ಟಿಗೆ ಕ್ಷೇತ್ರಕಾರ್ಯವನ್ನು ಒಳಗೊಂಡಿದ್ದು ವಿರಕ್ತರಲ್ಲಿ ಆದಿಯಾದ ಕರಸ್ಥಲದ ನಾಗಿದೇವ, ವೀರಣ್ಣೊಡೆಯರ ಮೂಲ ನೆಲೆ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಮಂಚಳ್ಳಿಯ ಸುತ್ತಮುತ್ತಲಿನ ಪ್ರದೇಶ. ಹೀಗಾಗಿ ಅಲ್ಲಿ ಇವರನ್ನು ಕುರಿತಾಗಿ ಕೆಲವೊಂದು ಆಚರಣೆಗಳಿವೆ. ಅಲ್ಲಿಯ ವಕ್ತೃಗಳನ್ನು ಭೇಟಿ ಮಾಡಿ ಅವರ ಬಗೆಗಿರುವ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು ಈ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

೬. ಸ್ವರೂಪ

ಕ್ರಿ.ಶ. ೧೪ ಮತ್ತು ೧೫ನೇ ಶತಮಾನದ 'ಹಂಪೆಯ' ಪರಿಸರದಲ್ಲಿ ಬಾಳಿದ ನೂರೊಂದು ವಿರಕ್ತರನ್ನು ಕುರಿತು ಸಮಗ್ರವಾಗಿ ಚಿತ್ರಿಸುವುದೇ ಈ ಮಹಾಪ್ರಬಂಧದ ಹೂರಣ.

ಅಧ್ಯಯನದ ದೃಷ್ಟಿಯಿಂದ ಪ್ರಸ್ತುತ ಈ ಮಹಾಪ್ರಬಂಧವು ಒಟ್ಟು ಹನ್ನೊಂದು ಅಧ್ಯಾಯಗಳನ್ನು ಹೊಂದಿರುತ್ತದೆ. ಮುಖ್ಯವಾಗಿ ಈ ಹನ್ನೊಂದು ಅಧ್ಯಾಯಗಳು ಈ ಕೆಳಗಿನ ವಸ್ತು ವಿಷಯಗಳನ್ನು ಒಳಗೊಂಡಿರುತ್ತದೆ. ಮೊದಲ ಅಧ್ಯಾಯವು ಒಟ್ಟಾರೆ ಮಹಾಪ್ರಬಂಧದ ತಾತ್ವಿಕ ನಿಲುವನ್ನು ಸ್ಥೂಲವಾಗಿ ವಿವರಿಸುತ್ತದೆ. ಇಲ್ಲಿ ಅಧ್ಯಯನದ ಉದ್ದೇಶ, ಮಹತ್ವ, ವೈಧಾನಿಕತೆ, ವ್ಯಾಪ್ತಿ, ಆಕರ ಸಾಮಗ್ರಿ ಹಾಗೂ ಸಮೀಕ್ಷೆಯನ್ನು ಕುರಿತಾಗಿದೆ. ಒಟ್ಟು ಸಂಶೋಧನೆಗೆ ಒಂದು ವಿಮರ್ಶಾತ್ಮಕ ಪ್ರವೇಶವನ್ನು ಒದಗಿಸಿಕೊಡುತ್ತದೆ.

ಅಧ್ಯಾಯ ಎರಡು ನೂರೊಂದು ವಿರಕ್ತರ ಉಲ್ಲೇಖಿತ ಕಾವ್ಯಗಳ ಕುರಿತಾಗಿದ್ದು, ಪ್ರೌಢದೇವರಾಯನ ಕಾವ್ಯ, ಚೆನ್ನಬಸವ ಪುರಾಣ, ಶಿವತತ್ವ ಚಿಂತಾಮಣಿ, ಕರಸ್ಥಲನಾಗಿಲಿಂಗ ಚರಿತ್ರೆ ಹೀಗೆ ಹಲವು ಕೃತಿಗಳಲ್ಲದೆ, ಜನಪದ ಸಾಹಿತ್ಯವನ್ನು ಅವಲೋಕಿಸಿ, ಇವುಗಳಲ್ಲಿ ವಿರಕ್ತರ ಬಗೆಗೆ ಕಟ್ಟಿಕೊಡುವ ಚಾರಿತ್ರಿಕ ಅಂಶಗಳ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಮೂರರಲ್ಲಿ ನೂರೊಂದು ವಿರಕ್ತರನ್ನು ಕುರಿತು ಸಮಗ್ರವಾಗಿ ಬಂದ ಮೋದಿರುದ್ರ ವಿರಚಿತ 'ವಿರಕ್ತರ ಕಾವ್ಯವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಷಟ್ಪದಿಯಲ್ಲಿ ರಚನೆಯಾದ ಈ ಕೃತಿ ಆರು ಸಂಧಿಗಳನ್ನು ಒಳಗೊಂಡಿದ್ದು, ಇದರಲ್ಲಿ ಮೂರನೇ ಸಂಧಿಯಿಂದ ಆರನೇ ಸಂಧಿಯವರೆಗೆ ವಿರಕ್ತರ ವೃತ್ತಿ ಆಚಾರ, ಲೀಲೆ ಹಾಗೂ ಪವಾಡ ಸಾದೃಶ್ಯದಂತಹ ಸಂಗತಿಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ವಿರಕ್ತರನ್ನು ಕುರಿತಾಗಿ ಆಧುನಿಕ ವಿದ್ವಾಂಸರ ಚರ್ಚೆಯನ್ನು ಬಳಸಿಕೊಳ್ಳಲಾಗಿದೆ. ಇದರಲ್ಲಿ ವಿರಕ್ತರ ಗುಣ ಸ್ವಭಾವ ಹಾಗೂ ಅವರ ಮನಃಸ್ಥಿತಿಗನುಗುಣವಾಗಿ ವಿದ್ವಾಂಸರು ತಮ್ಮದೇ ಆದ ರೀತಿಯಲ್ಲಿ ಚರ್ಚಿಸಿದ್ದಾರೆ. ಇವುಗಳೆಲ್ಲವನ್ನು ಅಧ್ಯಾಯದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ಐದರಲ್ಲಿ ನೂರೊಂದು ವಿರಕ್ತರ ಸಾಹಿತ್ಯ ಸೃಷ್ಟಿ ಕುರಿತಾಗಿದ್ದು. ಇದರಲ್ಲಿ ನಾಗಿದೇವ, ವೀರಣ್ಣೊಡೆಯ, ಗುರುಬಸವ, ಬತ್ತಲೇಶ ಹೀಗೆ ಕೆಲವೇ ಮಂದಿ ವಿರಕ್ತರು ಕಂದ, ವಚನ, ತ್ರಿಪದಿ ರೂಪದ ಸ್ವರೂಪದಲ್ಲಿ ಇವರ ಸಾಹಿತ್ಯ ಹೊರಹೊಮ್ಮಿದೆ. ಇದನ್ನು ಕುರಿತು ಪ್ರಸ್ತುತ ಅಧ್ಯಾಯದಲ್ಲಿ ಸಮೀಕ್ಷೆ ಮಾಡಲಾಗಿದೆ.

ಅಧ್ಯಾಯ ಆರರಲ್ಲಿ ನೂರೊಂದು ವಿರಕ್ತರ ಪರಂಪರೆಯ ಕುರಿತಾಗಿದ್ದು, ಇತರೆ ಕೆಲವು ಪರಂಪರೆಗಳಂತೆ ನೂರೊಂದು ವಿರಕ್ತರು ಸಹ ಒಂದು ಪರಂಪರೆ ಉಳ್ಳವರು. ನಾಡಿನ ಹಲವು ಕಡೆಯಿಂದ ಆಗಮಿಸಿದ ವಿರಕ್ತರ ಕಾರ್ಯ ವೈಖರಿ ಹಾಗೂ ಗುಣಸ್ವಭಾವವನ್ನು ಈ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

ಅಧ್ಯಾಯ ಏಳರಲ್ಲಿ ನೂರೊಂದು ವಿರಕ್ತರ ಲಕ್ಷಣ–ವ್ಯಕ್ತಿತ್ವ ಕುರಿತಾಗಿದ್ದು ಇದರಲ್ಲಿ ವಿರಕ್ತ ಪದದ ನಿಷ್ಪತ್ತಿ–ಇವರ ಆಚಾರ ವಿಚಾರ ಮತ್ತು ಗುಣಸ್ವಭಾವಗಳನ್ನು ಕಾವ್ಯ ಹಾಗೂ ಪುರಾಣ ಕೃತಿಗಳನ್ನು ಆಧರಿಸಿ ಇವರ ವ್ಯಕ್ತಿತ್ವ ಹಾಗೂ ಲಕ್ಷಣಗಳನ್ನು ಗುರುತಿಸಲಾಗಿದೆ. ಈ ಲಕ್ಷಣಗಳ ಆಧಾರದ ಮೇಲೆ ವೀರಶೈವ ವಿರಕ್ತರಿಗಿಂತ ನೂರೊಂದು ವಿರಕ್ತರು ಹೇಗೆ ಭಿನ್ನರಾಗಿರುವರೆಂದು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಎಂಟು ನೂರೊಂದು ವಿರಕ್ತರು ಹಾಗೂ ಇತರ ಸಂತ ಸಂಪ್ರದಾಯಗಳ ಕುರಿತಾಗಿದ್ದು, ಇಲ್ಲಿ ಲಾಕುಳ, ಕಾಪಾಲಿಕ, ಪಾಶುಪತ, ನಾಥಪಂಥ, ಆರೂಢ, ಅವಧೂತ, ಸೂಫಿ, ಶಾಕ್ತ, ಶುದ್ಧಶೈವ ಇತ್ಯಾದಿ ಸಂತ ಸಂಪ್ರದಾಯಗಳ ಜೊತೆಗೆ ನೂರೊಂದು ವಿರಕ್ತರ ಗುಣಲಕ್ಷಣಗಳನ್ನು ಹುಡುಕಾಡುವುದಾಗಿದೆ. ಇಲ್ಲಿ ಒಟ್ಟು ಒಂಭತ್ತು ಅನುಭಾವಿ ಪಂಥಗಳ ಜೊತೆ ವಿರಕ್ತರನ್ನು ಮುಖಾಮುಖಿ ಮಾಡಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ಒಂಬತ್ತು ಕರ್ನಾಟಕದಲ್ಲಿ ನೂರೊಂದು ವಿರಕ್ತರ ನೆಲೆಗಳ ಬಗೆಗೆ ಕುರಿತಾಗಿದ್ದು, ಇದರಲ್ಲಿ ವಿರಕ್ತರ ಮೂಲ ನೆಲೆ ಮತ್ತು ಸಂಚಾರದ ಸಂದರ್ಭದಲ್ಲಿ ನೆಲೆನಿಂತು ಅಲ್ಲಿ ತೋರ್ಪಡಿಸಿದ ಪವಾಡ ಸಾದೃಶ್ಯಗಳನ್ನು ಸಹ ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಹತ್ತರಲ್ಲಿ ನೂರೊಂದು ವಿರಕ್ತರು ಹಾಗೂ ಶಾಂತ ಸಂಪ್ರದಾಯ ಕುರಿತ ಮಾಹಿತಿ ಇದೆ. ಇಲ್ಲಿ ವಿರಕ್ತರ ಶಾಂತವಾದ ಮನೋಸ್ಥಿತಿ ಹಾಗೂ ಅವರ ಹೆಸರಿನ ಕೊನೆಯಲ್ಲಿ ಬರುವ 'ಶಾಂತ' ಎಂಬ ಪದದ ಹಿನ್ನೆಲೆಯಲ್ಲಿ ಆಧುನಿಕ ವಿದ್ವಾಂಸರು ಚರ್ಚಿಸಿರುವರು. ಹೀಗಾಗಿ ಈ ಚರ್ಚೆಯ ಅಂದು ವಿರಕ್ತರದೇ ಆದ ಒಂದು ಶಾಂತ ಸಂಪ್ರದಾಯ ಅಸ್ತಿತ್ವದಲ್ಲಿರಬೇಕೆಂದು ಈ ಅಧ್ಯಾಯದಲ್ಲಿ ಸಾದರ ಪೂರಕವಾಗಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ಹನ್ನೊಂದು ಕೊನೆಯ ಅಧ್ಯಾಯ ಸಮಾರೋಪಕ್ಕೆ ಮೀಸಲಾಗಿದ್ದು, ಇದರಲ್ಲಿ ಎಲ್ಲಾ ಅಧ್ಯಾಯಗಳನ್ನು ಸ್ಥೂಲವಾಗಿ ವಿವರಿಸುತ್ತವೆ. ಇಲ್ಲಿ ಸಂಶೋಧನೆಯಿಂದ ಕಂಡುಕೊಂಡ ಅಧ್ಯಯನಗಳ ಫಲಿತವನ್ನು ದಾಖಲಿಸಲಾಗಿದೆ. ಇದು ಸಂಶೋಧನೆಯ ಸ್ಥೂಲ ಸ್ವರೂಪವಾಗಿದೆ.

೭. ಅಧ್ಯಯನದ ಆಕರ ಸಾಮಗ್ರಿ

ಸಂಶೋಧನೆಯ ಕ್ಷೇತ್ರ ಇಂದು ಸೀಮಿತವಾಗಿಲ್ಲ. ಇಂದು ಅದರ ದೃಷ್ಟಿಕೋನ ತುಂಬ ಬದಲಾಗಿದೆ. ಹಿಂದೆ ತಮಗೆ ಯಾವುದು ಬೇಕೋ ಅದನ್ನೆ ಸಂಶೋಧನೆಗೆ ಬಳಸಿಕೊಳ್ಳುತ್ತಿದ್ದರು. ಧಾರ್ಮಿಕ ಪಂಥಗಳ ಬಗ್ಗೆ ಆಗಲಿ ಅಥವಾ ಸಮುದಾಯವನ್ನು ಕುರಿತು ಅಧ್ಯಯನ ಮಾಡುವಾಗ ಜನಮುಖಿ ವಿಷಯಗಳ ಕಡೆ ಮಾತ್ರ ಆಸಕ್ತಿ ವಹಿಸುತ್ತಿದ್ದರು. ಅಲಕ್ಷಿತ ಧಾರ್ಮಿಕ ಧಾರೆಗಳ, ಜನಮುಖಿ ಇಲ್ಲದ ವಿಷಯಗಳ ಕುರಿತು ಅಧ್ಯಯನ ಮಾಡುವುದು ತುಂಬ ಕಡಿಮೆ ಇತ್ತು. ಆದರೆ ಪ್ರಸ್ತುತ ಸಂದರ್ಭದಲ್ಲಿ ಸಂಶೋಧನೆಯು ಹಲವು ಆಯಾಮಗಳ ಅಡಿಯಲ್ಲಿ ಅಥವಾ ಬಹು ಶಿಸ್ತಿನ ನೆಲೆಯಲ್ಲಿ ಅಧ್ಯಯನಗಳು ನಡೆಯುತ್ತವೆ. "ಸೌಧವೊಂದರ ನಿರ್ಮಾಣಕ್ಕೆ ಕಲ್ಲು, ಕಟ್ಟಿಗೆ, ಮುಂತಾದ ಮೂಲ ಸಾಮಗ್ರಿಗಳು ಬೇಕಾಗುವಂತೆ ವಸ್ತು ಇಲ್ಲವೆ ವ್ಯಕ್ತಿ, ವಿಷಯಕ ಅಧ್ಯಯನ ಕಟ್ಟಡವೊಂದು ಅಚ್ಚುಕಟ್ಟಾಗಿ ಮೇಲೇಳಲು ಲಿಖಿತ ಸಾಹಿತ್ಯ, ಮೌಖಿಕ ಸಾಹಿತ್ಯ, ಆಚರಣೆ ಮುಂತಾದ ಮೂಲಭೂತ ಸಾಧನ ಸಾಮಗ್ರಿಗಳು ಅವಶ್ಯಕವಾಗಿ ಬೇಕಾಗುತ್ತದೆ."[೬]

ಹೀಗಾಗಿ ಈಗ ಅಧ್ಯಯನಕ್ಕೆ ಒಳಪಡುವ ನೂರೊಂದು ವಿರಕ್ತರನ್ನು ಕುರಿತಾಗಿ ಗಂಭೀರವಾದ ಅಧ್ಯಯನಗಳು ನಡೆದಿಲ್ಲ. ಆದ್ದರಿಂದ ಇವರನ್ನು ಕುರಿತು ಅಧ್ಯಯನ ಮಾಡುವಾಗ ಲಿಖಿತ ಮತ್ತು ಆಚರಣಾತ್ಮಕ ಆಧಾರಗಳು ಮುಖ್ಯವಾಗಿರುತ್ತವೆ. ಅಂದು ಹಂಪೆ ಹಾಗೂ ಇತರೆ ಪ್ರದೇಶದಲ್ಲಿ ನೆಲೆನಿಂತ ವಿರಕ್ತರು ಅವಧೂತ, ಆರೂಢರಂತೆ, ಶಾಂತತೆಗೆ, ಮೌನಕ್ಕೆ ಹಾಗೂ ಒಂಟಿತನಕ್ಕೆ ತುಂಬ ಮಹತ್ವ ನೀಡಿದವರು. ಸಾಹಿತ್ಯಿಕವಾಗಿ ತುಂಬ ಪ್ರಸಿದ್ಧಿಗಳಿಸಿದ ಹಂಪೆ, ವೀರಶೈವ ಧರ್ಮಕ್ಕೆ ಸಂಬಂಧಿಸಿದ ಹಲವು ಕೃತಿಗಳು ಅಂದು ರಚನೆಗೊಂಡವು. ಅವುಗಳಲ್ಲಿ ಈ ವಿರಕ್ತರ ಪ್ರಸ್ತಾಪ ಬರುವುದು ಉಂಟು. ಆದರೆ ವಿರಕ್ತರು ರಚಿಸಿದ ಲಘು ಕೃತಿಗಳಲ್ಲಿ ಇವರ ಬಗೆಗೆ ಮಾಹಿತಿ ಅಲಭ್ಯ

ಯಾವುದೇ ಸಂಶೋಧನೆ ಗಟ್ಟಿಗೊಳ್ಳಬೇಕಾದರೆ ಅದಕ್ಕೆ ಮೂಲ ಆಕರಗಳ ಅವಶ್ಯಕತೆ ಬೇಕಾಗಿರುತ್ತದೆ. ಹೀಗಾಗಿ ಅವುಗಳಿಗೆ ಸಂಬಂಧಪಟ್ಟಂತೆ ಲಿಖಿತ ಆಧಾರಗಳು ದೊರೆತಷ್ಟು ಸಂಶೋಧನೆಯು ಪೂರ್ಣತೆಯನ್ನು ಪಡೆದುಕೊಳ್ಳುತ್ತದೆ. ವಿರಕ್ತರನ್ನು ಕುರಿತಾಗಿ ಕೆಲವೊಂದು ವೀರಶೈವ ಪುರಾಣ ಹಾಗೂ ಸಾಹಿತ್ಯ ಕೃತಿಗಳಲ್ಲಿ ಮಾಹಿತಿ ಲಭ್ಯವಿದೆ.

ಅಲ್ಲದೆ ಆಧುನಿಕ ವಿದ್ವಾಂಸರು ವಿರಕ್ತರನ್ನು ಕುರಿತಾಗಿ ಬರೆದ ಕೆಲವೊಂದು ಲೇಖನ, ಚರಿತ್ರೆ, ಪುರಾಣ ಹಾಗೂ ಜನಪದಿಯ ಸಾಹಿತ್ಯದಲ್ಲಿ ಇವರ ಕುರಿತು ಉಲ್ಲೇಖವಿದೆ. ವೀರಶೈವ ಸಾಹಿತ್ಯ ಕೃತಿಗಳಲ್ಲಿ ಎಲ್ಲಾ ವಿರಕ್ತರ ಕುರಿತು ಮಾಹಿತಿ ನೀಡಿಲ್ಲ. ಕೆಲವರ ಬಗ್ಗೆ ಅಲ್ಪ ಸ್ವಲ್ಪ ಪ್ರಸ್ತಾಪಿಸಿ ಇತ್ಯಾದಿ ಎಂದು ಮುಂದೆ ಸಾಗಿರುವರು. ಆ ಕೃತಿಗಳು ಈ ಕೆಳಗಿನಂತಿವೆ.

೧. ಶಿವತತ್ವ ಚಿಂತಾಮಣಿ– ಲಕ್ಕಣ್ಣ ದಂಡೇಶ (ಕ್ರಿ.ಶ.೧೪೩೦)

೨. ವೀರಶೈವಾಮೃತ ಪುರಾಣ–ಗುಬ್ಬಿಯ ಮಲ್ಲಣಾರ್ಯ(ಕ್ರಿ.ಶ.೧೫೩೦)

೩. ಭೈರವೇಶ್ವರ ಕಾವ್ಯ–ಕಿಕ್ಕೇರಿಯಾರಾಧ್ಯ ನಂಜುಂಡ (ಕ್ರಿ.ಶ.೧೫೫೦)

೪. ಪ್ರೌಢರಾಯನ ಕಾವ್ಯ–ಆದ್ರೀಶ (ಕ್ರಿ.ಶ.೧೫೮೦)

೫. ಚೆನ್ನಬಸವ ಪುರಾಣ –ವಿರೂಪಾಕ್ಷ ಪಂಡಿತ (ಕ್ರಿ.ಶ.೧೫೮೪)

೬. ರಾಘವಾಂಕ ಚರಿತೆ– ಸಿದ್ಧನಂಜೇಶ (ಕ್ರಿ.ಶ.೧೫೫೦)

೭. ಸ್ವರ ಏಕೋತ್ತರ ಶತಸ್ಥಲಸಟೀಕು – ಚೆನ್ನಂಜೆಸ್ವಾಮಿಗಳು (ಕ್ರಿ.ಶ.೧೫೩೦)

೮. ನಿಜಶರಣರ ತ್ರಿವಿಧಿ –ಬೊಕ್ಕಪ್ಪ ೧೭ನೇ ಶತಮಾನ

೯. ಜನಪದ ಗೀತೆಗಳು – ಗದ್ದಿಮಠ

೧೦. ಕರಸ್ಥಲ ನಾಗಲಿಂಗನ ಚರಿತ್ರೆ – ರುದ್ರಕವಿ (ಕ್ರಿ.ಶ.೧೬೫೦)

೧೧. ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಕರ –ಶಾಂತಲಿಂಗ ದೇಸಿಕ (ಕ್ರಿ.ಶ.೧೬೭೨)

೧೨. ನಿರಂಜವಂಶ ರತ್ನಕರ– ೧೮ನೇ ಶತಮಾನ

ಆಧುನಿಕ ವಿದ್ವಾಂಸರಲ್ಲಿ ಡಾ.ಶಿವಾನಂದ ವಿರಕ್ತಮಠ, ಡಾ. ಆರ್.ಸಿ. ಹಿರೇಮಠ, ಡಾ.ಎಂ.ಎಂ. ಕಲಬುರ್ಗಿ, ಪ್ರೊ, ಸಂ.ಶಿ.ಭೂಸನೂರ ಮಠ ಮುಂತಾದವರು ಈ ಕುರಿತು ಅಧ್ಯಯನ ಮಾಡಿದ್ದಾರೆ. ಅವುಗಳನ್ನು ಹೀಗೆ ಸಮೀಕ್ಷಿಸಬಹುದು.

೮. ಅಧ್ಯಯನದ ಸಮೀಕ್ಷೆ

೧. ಡಾ. ಶಿವಾನಂದ ವಿರಕ್ತಮಠ ಅವರು ೧೯೭೮ರಲ್ಲಿ "ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ" ಎಂಬ ಪ್ರೌಢಪ್ರಬಂಧವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ್ದಾರೆ. ಇದರಲ್ಲಿ ವಿರಕ್ತರ ಕುರಿತು ಮಹತ್ವ ಪೂರ್ಣವಾದ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ವಿರಕ್ತರಲ್ಲಿ ಹಲವರು ವ್ಯಕ್ತಿ ವಿಶೇಷತೆಯ ಬಗ್ಗೆ ಹಾಗೂ ಅವರ ಸಾಹಿತ್ಯ ಸೃಷ್ಟಿ ಕುರಿತು ತುಂಬ ಉಪಯುಕ್ತವಾದ ಮಾಹಿತಿ ನೀಡಿದ್ದಾರೆ.

೨. ಡಾ. ಆರ್.ಸಿ ಹಿರೇಮಠ ಅವರು ಸಂಪಾದಿಸಿದ 'ಷಟ್‌ಸ್ಥಲ ಪ್ರಭೆಯಲ್ಲಿ' ವಿರಕ್ತರನ್ನು ಚಾರಿತ್ರಿಕ ವಿವೇಚನೆಯಲ್ಲಿ ಚರ್ಚಿಸಿರುವರು. ವಿರಕ್ತರ ಎಲ್ಲ ಹೆಸರುಗಳು 'ಶಾಂತ', 'ಶಾಂತಲಿಂಗ' ಎಂದು ಕೊನೆಗೊಳ್ಳುತ್ತದೆ. ಇವು ಇವರ ಅಂಕಿತನಾಮಗಳಲ್ಲ. ಅವರು ಪಡೆದ ಸ್ಥಿತಿಗನುಗುಣವಾಗಿ ಈ ಹೆಸರು ಅವರಿಗೆ ಬಂದಿರಬೇಕೆನ್ನುವರು. ಆದಕ್ಕೆ ಇವರು ವಿರಕ್ತರನ್ನು 'ಶಾಂತ ಸ್ವಭಾವದವರೆಂದು ಹೇಳಿರುವರು.

೩. ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಮಾರ್ಗ ಸಂಪುಟ–೩ರಲ್ಲಿ ನೂರೊಂದು ವಿರಕ್ತರ ಸ್ತೋತ್ರ, ನೂರೊಂದು ವಿರಕ್ತರು ವೀರಶೈವರೇ? ಎಂಬ ಲೇಖನದಲ್ಲಿ ವಿರಕ್ತರನ್ನು ಕುರಿತು ಗಂಭಿರವಾಗಿ ಹಾಗೂ ವೈಚಾರಿಕ ನೆಲೆಗಟ್ಟಿನ ಅಡಿಯಲ್ಲಿ ತುಂಬ ಸೂಕ್ಷ್ಮವಾಗಿ ಪರಿಗಣಿಸಿ ಲೇಖನಗಳನ್ನು ಬರೆದಿದ್ದಾರೆ. ಇವರು ವಿರಕ್ತರನ್ನು ವೀರಶೈವರೇತರನ್ನಾಗಿ ತಮ್ಮ ಬರವಣಿಗೆಯಲ್ಲಿ ಉಲ್ಲೇಖಿಸಿರುವರು.

೪. ಪ್ರೊ.ಸಂ.ಶಿ. ಭೂಸನೂರ ಮಠರವರು ಸಂಪಾದಿಸಿದ 'ವಿಜಯ ಕಲ್ಯಾಣ' ಕೃತಿಯಲ್ಲಿ ವಿಜಯ ನಗರದ ದರ್ಶನ ನೀಡಿದ್ದಾರೆ. ಅದರಲ್ಲೂ ಸಹ ವಿರಕ್ತರ ಕುರಿತು ಅಲ್ಪ ಸ್ವಲ್ಪ ಮಾಹಿತಿ ನೀಡಿರುವರು.

೫. ಡಾ.ಜಿ ಎಸ್. ದಿಕ್ಷೀತರವರ ಸಂಗಮ ಕಾಲದ ವಿಜಯನಗರ ಅದರ ಇತಿಹಾಸ ಮತ್ತು ಸಾಂಸ್ಕೃತಿಗಳ ಅಧ್ಯಯನ, ಕೃತಿಯಲ್ಲಿ ವಿರಕ್ತರ ಕುರಿತು ಉಲ್ಲೇಖಿಸಿರುವರು.

೬. ಕರಸ್ಥಲ ಸಾಹಿತ್ಯ ಸಂಪಾದನೆ ಮಾಡಿದ ಡಾ.ಎಫ್.ಟಿ.ಹಳ್ಳಿಕೇರಿ ಅವರ ಕೃತಿಯಲ್ಲಿ ಕರಸ್ಥಲನಾಗಿದೇವ, ಕರಸ್ಥಲವೀರಣ್ಣೊಡೆಯ ಮುಂತಾದ ಆ ಪರಂಪರೆಯರ ಸಾಹಿತ್ಯ ಸಂಪಾದನೆಗೊಂಡಿದೆಯೋ ಹೊರತು ಅವರು ನೂರೊಂದು ವಿರಕ್ತರೇ? ಅವರ ಮೂಲ ತಾತ್ವಿಕತೆ ಇತ್ಯಾದಿ ಯಾವ ವಿವರಗಳನ್ನು ಅಲ್ಲಿ ಪ್ರಸ್ತಾಪಿಸಿಲ್ಲ. 'ಕರಸ್ಥಲ' ಎಂಬ ನಾಮವಿಶೇಷಣ ಇದ್ದುದರಿಂದ ಈ ಇಬ್ಬರ ವಿರಕ್ತರ ಬಗೆಗೆ ಪ್ರಸ್ತಾಪಿಸಿದ್ದಾರೆ. ವೀರಶೈವ ಸಾಹಿತ್ಯ ಕೃತಿಗಳಲ್ಲಿ ಇವರ ಕುರಿತು ಚರ್ಚಿತವಾದ ವಿಷಯವನ್ನೇ ಇಲ್ಲಿ ಚರ್ಚಿಸಿರುವರು.

ಅಡಿಟಿಪ್ಪಣಿಗಳು

೧. ಜಾಗತಿಕ ಧರ್ಮಗಳು- ಶೇಷನವರತ್ನ- ಪ್ರಸ್ತಾವನೆ

೨. ವಿಜಯ ಕಲ್ಯಾಣ-(ಸಂ)/.ಸಂ ಶಿ.ಭೂಸನೂರ ಮಠ-ಪುಟ-೩೬-೩೭.

೩. ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ ವಿವೇಚನೆ- (ಸಂ) .ಡಾ. ಕೆ. ರವೀಂದ್ರನಾಥ ಪ್ರಸ್ತಾವನೆ, ಪುಟ-೩

೪. ಶೂನ್ಯಸಂಪಾದನೆಗಳ ಸಾಂಸ್ಕೃತಿಕ ಮುಖಾಮುಖಿ- ಡಾ. ಅಮರೇಶ ನಾಗಡೋಣಿ, ಪುಟ-೧೨೫

೫. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ- ಡಾ.ಶಿವಾನಂದ ವಿರಕ್ತಮಠ -೧೦೫

೬. ಕೊಡೆಕಲ್ಲು ಬಸವಣ್ಣ ಒಂದು ಅಧ್ಯಯನ - ಡಾ. ಬಸವರಾಜ ಸೊಪ್ಪಿಮಠ, ಪುಟ-೬

ಅಧ್ಯಾಯ : ಎರಡು

ನೂರೊಂದು ವಿರಕ್ತರ ಉಲ್ಲೇಖಿತ ಕನ್ನಡ ಕಾವ್ಯಗಳು

೧. ಪ್ರೌಢದೇವರಾಯನ ಕಾವ್ಯ

೨. ಚನ್ನಬಸವಪುರಾಣ

೩. ವೀರಶೈವಾಮೃತಪುರಾಣ

೪. ಶಿವತತ್ತ್ವ ಚಿಂತಾಮಣಿ

೫. ಭೈರವೇಶ್ವರ ಕಾವ್ಯ

೬. ಸ್ವರ ಏಕೋತ್ತರ ಶತಸ್ಥಲ ಟೀಕು.

೭. ನಿಜಶರಣ ತ್ರಿವಿಧಿ

೮. ರಾಘವಾಂಕ ಚರಿತೆ

೯. ಕರಸ್ಥಲ ನಾಗಲಿಂಗನ ಚರಿತೆ

೧೦. ಜನಪದ ಗೀತೆಗಳು.

ಅಧ್ಯಾಯ : ಎರಡು

ನೂರೊಂದು ವಿರಕ್ತರ ಉಲ್ಲೇಖಿತ ಕನ್ನಡ ಕಾವ್ಯಗಳು

ವಿಜಯನಗರ ಸಾಮ್ರಾಜ್ಯವು ಮಧ್ಯಕಾಲಿನ ಸಂದರ್ಭದಲ್ಲಿ ತನ್ನ ಉತ್ತಮವಾದ ಆಳ್ವಿಕೆಯಿಂದ ತುಂಬ ಜನಪ್ರಿಯವಾಗಿತ್ತು. ದೊರೆ ಪ್ರೌಢದೇವರಾಯನ ಕಾಲದಲ್ಲಿ ವಿಸ್ತಾರವಾಗಿ ಹರಡಿದ ಈ ಸಾಮ್ರಾಜ್ಯವು ಪ್ರತಿಯೊಂದು ಕ್ಷೇತ್ರದಲ್ಲೂ ತನ್ನದೆ ಆದ ವಿಶಿಷ್ಟತೆಯಿಂದ ಮೆರೆದಿತ್ತು. ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಸಾಹಿತ್ಯಿಕವಾಗಿ ಉತ್ತಮ ಸಾಧನೆ ತೋರಿದ ಪ್ರೌಡದೇವರಾಯನು ಹಲವು ಪಂಡಿತ ಪಾಮರರಿಗೆ ಆಶ್ರಯ ನೀಡಿದ. ಅಲ್ಲದೆ ಜೈನ, ವೈಷ್ಣವ, ವೀರಶೈವ ಹಾಗೂ ಮುಸ್ಲಿಂ ಧರ್ಮಗಳಿಗೆ ರಾಜಾಶ್ರಯ ನೀಡಿ ಸರ್ವಧರ್ಮ ಸಮನ್ವಯಿಯಾಗಿದ್ದ. ಅದರಲ್ಲೂ ವೀರಶೈವ ಧರ್ಮದ ಕಡೆ ಈ ಅರಸನಿಗೆ ತುಂಬ ಒಲವು. ಹೀಗಾಗಿ ಆಸ್ಥಾನದಲ್ಲಿ ಹೆಚ್ಚು ಮಂದಿ ವೀರಶೈವ ಪಂಡಿತರು ಸ್ಥಾನ ಪಡೆದಿದ್ದರು. ಇದರಿಂದಾಗಿ ಅಂದು ವೀರಶೈವ ಧರ್ಮಕ್ಕೆ ಸಂಬಂಧ ಪಟ್ಟ ಹಲವು ಪುರಾಣ ಕಾವ್ಯಗಳು ರಚಿಸಲ್ಪಟ್ಟವು.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಆರಂಭದಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದ ಹಲವು ಕಾವ್ಯಗಳು ಗೋಚರಿಸಿದರೆ, ನಂತರ ಅದರಂತೆ ೧೨ನೇ ಶತಮಾನದಲ್ಲಿ ರಚನೆಯಾದ ವಚನ ಸಾಹಿತ್ಯ ಮತ್ತು ಕಾವ್ಯಗಳಿಂದ ಆ ಕಾಲ ವೀರಶೈವ ಸಾಹಿತ್ಯ ಯುಗವೆಂದು ಖ್ಯಾತಿ ಹೊಂದಿದೆ. ಆದರೆ ವಿಜಯನಗರ ಸಾಮ್ರಾಜ್ಯದ ಸಂದರ್ಭದಲ್ಲಿ ವೀರಶೈವದ ಜೊತೆಗೆ ಜೈನ ಹಾಗೂ ಬ್ರಾಹ್ಮಣ ಸಾಹಿತ್ಯ ಸೃಷ್ಟಿಯಾಯಿತು. ಹೀಗಾಗಿ ಸಾಹಿತ್ಯದ ದೃಷ್ಟಿಯಿಂದ ಹಾಗೂ ಧರ್ಮದ ದೃಷ್ಟಿಯಿಂದ ವಿಜಯನಗರ ಸಾಮ್ರಾಜ್ಯವು ಒಂದು ರೀತಿಯಲ್ಲಿ

ಸಂಕ್ರಮಣ ಅಥವಾ ಪರಿವರ್ತನೆಯ ಕಾಲವಾಗಿ ಮಾರ್ಪಟ್ಟಿದೆ. "ರಾಜಧಾನಿ ಹಂಪೆ ಮತ್ತೀತರ ಸ್ಥಳಗಳಲ್ಲಿ ನಡೆಯುತ್ತಿದ್ದ ವೀರಶೈವ ಚಟುವಟಿಕೆಗಳಿಗೆ ಇಮ್ಮಡಿ ದೇವರಾಯನ ಉತ್ತೇಜನ ಅಪಾರವಾಗಿತ್ತೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಸಂಗಮ ದೊರೆಗಳ ತುಂಬು ಬೆಂಬಲ ವೀರಶೈವ ಸಾಹಿತ್ಯ, ಸಂಸ್ಥೆ ಮತ್ತು ಧರ್ಮ ಪ್ರಚಾರ ಕಾರ್ಯಗಳ ಸರ್ವತೋಮುಖ ಅಭಿವೃದ್ಧಿಗೆ ಬಲವಾದ ಪ್ರೇರಣೆಯನ್ನು ಒದಗಿಸಿತು. ಆ ವೇಳೆಯಲ್ಲಿ ವಚನ ಸಾಹಿತ್ಯ, ವೀರಶೈವ ದರ್ಶನ, ವೀರಶೈವ ಪುರಾಣಗಳು, ಕಾವ್ಯ, ಶತಕ ಸಾಹಿತ್ಯ, ವ್ಯಾಕರಣ ವಿಷಯಕ ಗ್ರಂಥಗಳು, ನಿಘಂಟು, ಶೂನ್ಯ ಸಂಪಾದನೆ ಇವೆಲ್ಲವನ್ನು ಒಳಗೊಂಡಂತೆ ಸಾಹಿತ್ಯ ಪ್ರಪಂಚದಲ್ಲಿ ಮಹತ್ತರ ಪ್ರಗತಿ ಉಂಟಾಯಿತು."[೧]

ಇಂತಹ ಸಂದರ್ಭದಲ್ಲಿ ವೀರಶೈವ ಧರ್ಮದ ಪ್ರಗತಿಗೆ ಅಥವಾ ಪುನರ್‌ಜ್ಜೀವನಕ್ಕೆ ನೂರೊಂದು ವಿರಕ್ತರಿಗಿಂತ ಅಂದು ಆಸ್ಥಾನದಲ್ಲಿ ನೆಲೆಯೂರಿದ್ದ ಮಹಾನ್ ಪಂಡಿತರು, ಕವಿವರ್ಯರು, ದಂಡನಾಯಕರ ಶ್ರಮ ಅಪಾರವಾಗಿತ್ತು. "ಹೀಗಾಗಿ ೧೫ನೆಯ ಶತಮಾನದ ವಿಜಯನಗರ ದೊರೆ ಪ್ರೌಢದೇವರಾಯನ ಮಹಾಮಂತ್ರಿ ಲಕ್ಕಣ ದಂಡೇಶನು ಉಲ್ಲೇಖಿಸಿದ ೭೦೦ಕ್ಕೂ ಮಿಕ್ಕಿದ ನೂತನ ಗುಣಂಗಳ ಕಾಲ ಮುಗಿಯುತ್ತಿದ್ದಂತೆಯೇ ನೂರೊಂದು ವಿರಕ್ತರು ಉದಯರಾಗಿ ವೀರಶೈವವನ್ನುದ್ಧರಿಸಿದರೆಂಬ ಸಂಗತಿ ಅನೇಕ ಪುರಾಣಗಳಲ್ಲಿದೆ.' ಅಷ್ಟೇ ಅಲ್ಲ, 'ನೂರೊಂದು ವಿರತರು' ಅವರ ಕಾಯಕ ಹಾಗೂ ಜೀವನ, ತತ್ತ್ವಗಳನ್ನೊಳಗೊಂಡ ಒಂದು ಸ್ವತಂತ್ರ ಕಾವ್ಯವೇ 'ಮೋದಿಯ ರುದ್ರ'ನೆಂಬ ಕವಿಯಿಂದ ರಚಿತವಾಗಿದೆ. ಕೈಲಾಸದಿಂದಿಳೆಗೈ ತಂದು ಜಂಗಮ ಸ್ಥಲವನಂಗೀಕರಿಸಿದವರು' ಶಿವನ ಬೆಸನವನಾಂತು ಭುವನಕೆ ಅವತರಿಸಿ ಮಿಸಲಳಿಯದೆ ಲಿಂಗನಿಷ್ಠೆಯನು ಪ್ರಭುವಿಂಗೆ ತೋರಿದವರು ಪರಮೇಶ್ವರನ ಆಜ್ಞೆಯಿಂದ ಕೈಲಾಸದಿಂ ಮೃತ್ಯುಲೋಕಕ್ಕೆ ದಯಮಾಡಿಸಿ ಲೀಲೆಯ ಮಾಡಿ ಶಿವಭಕ್ತಿಯಂ ನೆಲೆಗೊಳಿಸಿದವರು"[೨] ಎಂಬುದಾಗಿ ಇವರ ಮಹತಿಯನ್ನು ಪ್ರಶಂಸಿಸಲಾಗಿದೆ.

ಹಂಪೆಯ ಪರಿಸರದಲ್ಲಿ ಬಾಳಿದ ಘನಮಹಿಮರೆಂದೆನಿಸಿದ ನೂರೊಂದು ವಿರಕ್ತರನ್ನು ಕುರಿತು ಕೆಲವೊಂದು ಪುರಾಣ ಕೃತಿಗಳು ಹಾಗೂ ಕಾವ್ಯಗಳಲ್ಲಿ ಈ ಕೆಳಗಿನಂತೆ ಅಲ್ಲಲ್ಲಿ ಇವರ ಕುರಿತು ಉಲ್ಲೇಖಗಳಿವೆ.

೧. ಪ್ರೌಢದೇವರಾಯನ ಕಾವ್ಯ

ನಡುಗನ್ನಡ ಶೈಲಿಯಲ್ಲಿ ರಚನೆಗೊಂಡ ಈ ಕೃತಿಯ ಕಾಲವು ೧೫೮೦. ಈ ಕೃತಿಯನ್ನು ರಚಿಸಿದ ಅದೃಶ್ಯ ಕವಿ ಅಪ್ಪಟ ವೀರಶೈವ. ಕರೇಕುಲದ ಗಾಣಿಗರ ಸಮಾಜಕ್ಕೆ ಸೇರಿದವನು. ಇವನ ಕಾಲವು ಕ್ರಿ.ಶ. ಸು. ೧೫೨೫ರಲ್ಲಿ ಜನಿಸಿರಬಹುದೆಂದು ವಿದ್ವಾಂಸರ ಅಭಿಪ್ರಾಯ.

'ಪ್ರೌಢರಾಯನ ಕಾವ್ಯ'ದ ಮುಖ್ಯ ಕಥಾವಸ್ತು ಶರಣರ ಕಥೆಗಳು. ವಾರ್ಧಕ ಷಟ್ಪದಿಯ ೧೧೧೩ ಪದ್ಯಗಳ ಈ ಕಾವ್ಯವು ಕಥೆ, ಉಪಕಥೆಗಳು ಸೇರಿ ಎಂಬತ್ತರ ಸಂಖ್ಯೆಯನ್ನು ಮುಟ್ಟಿವೆ. ಹಲವು ಶಿವಶರಣರ ಕಥೆಗಳನ್ನು ಕಾವ್ಯವಾಗಿ ಹಾಡಿದ್ದಾನೆ. 'ಈ ಕೃತಿಯು ಮೇಲ್ನೋಟಕ್ಕೆ ಚಾರಿತ್ರಿಕವಾಗಿ ಕಂಡು ಬಂದರೂ ಒಳಗಿನ ಅಂಶಗಳೆಲ್ಲವು ಪೌರಾಣಿಕವಾಗಿದೆ. ಆದರೂ ಆ ಯುಗದ ಧಾರ್ಮಿಕ ಪರಿಸರ ಹಾಗೂ ವೈಷ್ಣವ ಮತ್ತು ವೀರಶೈವ ಮತಗಳ ಪರಸ್ಪರ ಪೈಪೋಟಿ ವೀರಶೈವ ಧರ್ಮದ ಸ್ಥಿತಿಗತಿ ಮತ್ತು ಅದರ ಶ್ರೇಯೋಭಿವೃದ್ಧಿಗೆ ಕಾರಣರಾದ ಅಂದಿನ ಮಹಾತ್ಮರನ್ನು ಹೆಸರಿಸುವಲ್ಲಿ ಅದೃಶ್ಯನ 'ಪ್ರೌಢರಾಯನ ಕಾವ್ಯ'ಕ್ಕೆ ಒಂದು ಐತಿಹಾಸಿಕ ಮತ್ತು ಧಾರ್ಮಿಕ ಮಹತ್ವವು ಪ್ರಾಪ್ತವಾಗಿದೆ.

"ಅದೃಶ್ಯ ಕವಿ ರಚಿಸಿದ ಈ ಪ್ರೌಢರಾಯನ ಕೃತಿಯಲ್ಲಿ 'ನೂರೊಂದು ಸುವಿರಕ್ತರು' ಎಂಬಂತೆ 'ನೂರೊಂದು ವಿರಕ್ತರು' ಎಂಬ ನಿಚ್ಚಳ ಪ್ರಯೋಗವಿದೆ. ಆದರೆ ಅವರಲ್ಲಿ ನೂರೊಂದು ವಿರಕ್ತರು ಯಾರು ಯಾರು? ಎಂದು ಹೇಳುವಲ್ಲಿ ಸ್ವಲ್ಪ ತೊಡಕು ವ್ಯಕ್ತವಾಗಿದೆ. ಹೀಗಾಗಿ ಈ ಕಾವ್ಯದಲ್ಲಿ ನೂರೊಂದು ವಿರತರನ್ನು ಕುರಿತಾದ ಪರಿಪೂರ್ಣ ಮಾಹಿತಿ ದೊರೆಯಲಾರದು."[೩]

ಕುಂತಳದೇಶಕ್ಕೆ ಮುಕುರದಂತಿರುವ ವಿದ್ಯಾನಗರದಲ್ಲಿ ಪ್ರೌಢದೇವರಾಯನ ಮಂತ್ರಿಯಾದ ಶಿವಭಕ್ತ ಜಕ್ಕಣಾಚಾರ್ಯರು ಬಸವಾದಿ ಪ್ರಮಥರುಗಳ, ಅಲ್ಲಮ ಪ್ರಭುದೇವರ ವಚನಗಳನ್ನು ಕ್ರಮಗೊಳಿಸಿ 'ಏಕೋತ್ತರ ಶತಸ್ಥಲವೆಂಬ ಗ್ರಂಥವನ್ನು ರಚಿಸಿದರು. ಈ ಗ್ರಂಥವನ್ನು ಮೆರೆಸಿದ ಸಂದರ್ಭದಲ್ಲಿ ಯಾರು ಯಾರು ಬಂದು ನೆರೆದಿದ್ದರು ಎಂದು ಹೇಳುವ ಸಂದರ್ಭದಲ್ಲಿ ಈ ನೂರೊಂದು ವಿರಕ್ತರು ಎಂಬ ಪದ ಪ್ರಯೋಗವಾಗಿದೆ. ಆ ಒಂದು ಚರಣ ಈ ಕೆಳಗಿನಂತಿದೆ.

"ಹರರೂಪವಾದ ನೂರೊಂದು ಸುವಿರಕ್ತರುರೆ
ಕರಸ್ಥಲದ ನಾಗಿದೇವನು ಕಲ್ಲಮಠದ ಪ್ರಭು
ವರನು ವೀರಣ್ಣೊಡೆಯರುಂ ಚಾಮರಸರಾದಿ ಶಿವಭಕ್ತ ತಲೆಯು ನೆರೆದು
ಭರದಿಂದ ಭೋರ್ಗರೆವ ಭೇರಿ ನಿಸ್ಸಾಳ್ಗಳಿಂ
ತರತರ ದೊಳೆದರುತಿಹ ಕಹಳೆ ಕೌಸಾಳ್ಗಳಿಂ
ಧರೆಯೊಳಚ್ಚರಿಯೆನಿಗೆ ಮೆರೆಯಿಸಿದಕಾಯರುಳು ಏಕೋತ್ರಶ ಶತಸ್ಥಲವನು"[೪]

ಈ ಮೇಲಿನ ಚರಣದಲ್ಲಿ ಬಂದಿರುವ 'ಚಾಮರಸನ' ಬಗ್ಗೆ ತುಂಬಾ ಚರ್ಚೆ ನಡೆದಿದೆ. ಇವರನ್ನು ವಿರಕ್ತರ ಪಟ್ಟಿಯಲ್ಲಿ ಸೇರಿಸಬೇಕೆ ಅಥವಾ ಬೇಡವೊ ಎಂಬುದರ ಬಗ್ಗೆ ಈ ಕೆಳಗಿನಂತೆ ಡಾ. ಆರ್.ಸಿ. ಹಿರೇಮಠರವರು ಹೀಗೆ ಉಲ್ಲೇಖಿಸುವರು. "ಪ್ರೊ. ಎಸ್.ಎಸ್. ಭೂಸನೂರಮಠ, ಅವರು 'ಪ್ರೌಢರಾಯನ ಕಾವ್ಯ'ದ ಕಥಾಸಾರದಲ್ಲಿ ಈ ಮೇಲಿನ ಪದ್ಯದ

ಸಾರವನ್ನು ಉದ್ಧರಿಸುತ್ತ ಕಲ್ಲುಮಠದ ಪ್ರಭುದೇವ, ಚಾಮರಸ ಮೊದಲಾದವರು ನೂರೊಂದು ವಿರಕ್ತರಲ್ಲಿ ಪರಿಗಣಿತರಾದವರೆಂದು ಅರ್ಥೈಸಿದ್ದಾರೆ. ಆದರೆ, ಈ ಪದ್ಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಚಾಮರಸಾದಿ ಭಕ್ತರನ್ನು ನೂರೊಂದು ವಿರಕ್ತರ ಗುಂಪಿನಿಂದ ಬೇರೆ ಮಾಡಬೇಕಾಗುತ್ತದೆ. "ಕರಸ್ಥಲದ ನಾಗಿದೇವನು, ಕಲ್ಲುಮಠದ ಪ್ರಭುದೇವರು, ವೀರಣ್ಣೊಡೆಯರುಂ" ಎಂಬಲ್ಲಿರುವ ಸಮುಚ್ಚಯ ಸೂಚಕವಾದ 'ಉವಂ' ವಿಧಿಯು ಪರಿಪೂರ್ಣವಾಗಿದೆ ಎಂದು ತಿಳಿಯುವುದು. ಆದ್ದರಿಂದ ಈ ವಾಕ್ಯವನ್ನು ಇಕ್ಕಡಿಯಾಗಿ ವಿಂಗಡಿಸಬೇಕಾಗುವುದು. ಎಂದರೆ 'ಉಂ' ಎಂಬ ವಿಧಿಯಿಂದ ಮುಗಿವ ಸಮುಚ್ಚಯದ ಮೂವರನ್ನು (ನಾಗಿದೇವ, ಪ್ರಭುವರ, ವೀರಣ್ಣೊಡೆಯರನ್ನು) ನೂರೊಂದು ವಿರಕ್ತರೆಂದೂ ಚಾಮರಸಾದಿಗಳನ್ನು 'ಶಿವಭಕ್ತತತಿ' ಎಂದೂ ಅರ್ಥಮಾಡಬೇಕಾಗುತ್ತದೆ. ಇದರಿಂದ, ನೂರೊಂದು ವಿರಕ್ತರು ಜಂಗಮಸ್ಥಲದಲ್ಲಿ ನಿಂತವರೆಂದೂ ಚಾಮರಸಾದಿಗಳು ಭಕ್ತವರೇಣ್ಯರೆಂದೂ ವೇದ್ಯವಾಗುತ್ತದೆ. ಆದುದರಿಂದ ಆದ್ಯಶ್ಯ ಕವಿಯ ಅಭಿಪ್ರಾಯದಂತೆ ಕರಸ್ಥಲದ ನಾಗಿದೇವ, ವೀರಣ್ಣೊಡೆಯ, ಕಲ್ಲುಮಠದ ಪ್ರಭುದೇವ ಇವರು ನೂರೊಂದು ವಿರಕ್ತರ ಪಂಕ್ತಿಯಲ್ಲಿ ಸಮಾವಿಷ್ಟರಾಗುತ್ತಾರಲ್ಲದೆ ಚಾಮರಸ ಮೊದಲಾದ ಭಕ್ತರು ಅದರಲ್ಲಿ ಬರುವುದಿಲ್ಲ."[೨೨] ಇಲ್ಲಿ ಆರ್.ಸಿ. ಹಿರೇಮಠರವರು ಚಾಮರಸರನ್ನು ವಿರಕ್ತರ ಸಮೂಹದಿಂದ ಬೇರ್ಪಡಿಸಿದರೆ, ಎಂ.ಚಿದಾನಂದ ಮೂರ್ತಿಯವರು ಚಾಮರಸನನ್ನು ವಿರಕ್ತರ ಪರಂಪರೆಯಲ್ಲಿ ಸೇರಿಸಲು ಪ್ರಯತ್ನಿಸಿರುವರು. ಈ ಹಿಂದೆ ಹಂಪೆಯ ಸುತ್ತ ಮುತ್ತಲು ಕಂಡುಬರುವ ಗವಿ, ಗುಡಿಗುಂಡಾರಗಳಲ್ಲಿ ವಿರಕ್ತರು ವಾಸಮಾಡುತ್ತಿದ್ದರು. ಅದರಂತೆ ಚಾಮರಸನು ವಾಸಮಾಡಿದ ಎನ್ನಲಾದ ಚಾಮರಸನ ಗುಹೆಯ ಕುರಿತು ಪ್ರಸ್ತಾಪಿಸಿದ್ದಾರೆ. (ಸ್ಥಾವರ ಜಂಗಮ: ಹಂಪೆಯಲ್ಲಿ ಹರಿಹರ ಮತ್ತು ಚಾಮರಸರ ವಾಸಸ್ಥಾನಗಳ ಶೋಧ).

ಅದೃಶ್ಯ ಕವಿ ಹೇಳಿದ ನೂರೊಂದು ವಿರಕ್ತರಲ್ಲಿ ಚಾಮರಸನ ಬಗ್ಗೆ ಇನ್ನೂ ಗೊಂದಲದ ವಾತವರಣವಿದೆ. ಚಾಮರಸರನ್ನು ಕೇವಲ ಛಂದಸ್ಸಿನ ದೃಷ್ಟಿಯಿಂದ ಬೇರ್ಪಡಿಸುವ ಆರ್.ಸಿ.ಹಿರೇಮಠರ ವಿಧಾನವೇನು ಸರಿ. ಆದರೆ ಚಾಮರಸರು ವಿರಕ್ತರಲ್ಲ ಎಂಬುದು ಕೇವಲ ಊಹೆ. ಏಕೆಂದರೆ "ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರದಲ್ಲಿ ಅದ್ಯಶ್ಯನ ಮೇಲಣ ಪದ್ಯದ ಸಂಧಿಗ್ಧತೆಗೆ ಪರಿಹಾರ ದೊರಕುತ್ತದೆ. ಅವರಲ್ಲಿ 'ಕಲ್ಲು ಮಠದ ಪ್ರಭುದೇವಾಚಾರ್ಯರು, ಚಾಮರಸಯ್ಯನೆಂಬ ಆರಾಧ್ಯರು ಕರಸ್ಥಲದ ನಾಗಿದೇವರು ವೀರಣ್ಣೊಡೆಯ ದೇವರು ಮುಖ್ಯವಾದ ನೂರೊಂದು ವಿರಕ್ತರು ಭಕ್ತರ ಸಹಜವಾಗಿ" ಎಂದು ಹೇಳಲಾಗಿದ್ದು, ಇವರೆಲ್ಲರು ವಿರಕ್ತರೆಂಬುದಕ್ಕೆ ಪುಷ್ಟಿ ನೀಡುತ್ತದೆ ಎಂದು ಡಾ.ವಿ.ಶಿವಾನಂದರವರು ತಮ್ಮ ಪ್ರಬಂಧದಲ್ಲಿ (ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ) ಚರ್ಚಿಸಿದ್ದಾರೆ. ಆದರೆ ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರದಲ್ಲಿ ಬಂದಿರುವ ಈ ಮೇಲಿನ ವಾಕ್ಯವನ್ನು ಸೂಕ್ಷ್ಮವಾಗಿ ಗಮನಿಸಿದರೆ ಪ್ರಾರಂಭದಲ್ಲಿ ಬರುವ

ಪ್ರಭುದೇವ, ಚಾಮರಸರು ಡಾ.ಆರ್.ಸಿ. ಹಿರೇಮಠರ ಅಭಿಪ್ರಾಯದಂತೆ ಇವರು ವಿರಕ್ತರ ಗುಂಪಿಗೆ ಸೇರಲಾರರು.

ಪ್ರಭುದೇವ, ಚಾಮರಸರ ಹೆಸರಿನ ನಂತರ 'ಆರಾಧ್ಯರು' ಎಂದು ಬಂದಿದೆ. ಆರಾಧ್ಯರೆಂದರೆ ಪೂಜ್ಯನಾದ, ಸೇವೆಗೆ ಅರ್ಹನಾದ ಎಂಬ ಭಕ್ತಿಯ ಭಾವನೆ ಕಂಡುಬರುತ್ತದೆ. 'ಆರಾಧ್ಯರು' ಎಂದು ಹೇಳಿದ ಮೇಲೆ ನಾಗಿದೇವ, ವೀರಣ್ಣೊಡೆಯರನ್ನು ನೂರೊಂದು ವಿರಕ್ತರೆಂದು ಹೇಳಿದೆ. ಹೀಗಾಗಿ ಪ್ರಾರಂಭದಲ್ಲಿ ಬರುವ ಪ್ರಭುದೇವ ಚಾಮರಸರು ಆರ್.ಸಿ.ಹಿರೇಮಠರವರು ಹೇಳುವಂತೆ ಇವರು 'ಶಿವಭಕ್ತಾತತಿ' ಎಂದು ಅರ್ಥಮಾಡಬೇಕಾಗುತ್ತದೆ. ಅಲ್ಲದೆ ಈ ವಿರಕ್ತರನ್ನು ಕುರಿತು ಬಂದಿರುವ ಕಾವ್ಯಗಳಲ್ಲಿ ಚಾಮರಸರನ್ನು ವಿರಕ್ತರೆಂದು ಎಲ್ಲೂ ಪ್ರಸ್ತಾಪಿಸಿಲ್ಲ.

೨. ಚೆನ್ನಬಸವ ಪುರಾಣ

ಈ ಕಾವ್ಯದ ಕರ್ತೃ ವಿರೂಪಾಕ್ಷ ಪಂಡಿತ. ಇವನ ಕಾಲ ಕ್ರಿ.ಶ. ೧೫೮೪. ಚೆನ್ನಬಸವ ಪುರಾಣದಲ್ಲಿ ವಿರೂಪಾಕ್ಷ ಪಂಡಿತರು ೬೩ನೆಯ ಸಂಧಿಯಲ್ಲಿ ಈ ನೂರೊಂದು ವಿರಕ್ತರಲ್ಲಿ ಕೆಲವರ ಬಗ್ಗೆ ಪ್ರಸ್ತಾಪಿಸಿದ್ದಾರೆ. ಚಾರಿತ್ರಿಕ ದೃಷ್ಟಿಯಿಂದ ೬೩ನೇ ಸಂಧಿಯಾದ ಕಾಲಜ್ಞಾನ ಸಂಧಿಯಲ್ಲಿ ವಿಜಯನಗರ ಸಾಮ್ರಾಜ್ಯದ ಉದಯ, ನಿರ್ಮಾಣ ಹಾಗೂ ಹದಿಮೂರು ಪಟ್ಟಪರಿಯಂತರ ರಾಜ್ಯವಾಳಿದ ಸಂಗಮ ಅರಸರ ಸಂಗತಿ ಕಂಡುಬರುತ್ತದೆ.

"ಹರನಾಜ್ಞೆಯಿಂದಿಂದ್ರಸಹವಾಗಿ ನೂರೊಂದು ।
ವಿರತರಳೆಯೊಳ್ ಜನಿಸಿ ಬಯಲಾಗಲೇಳ್ನೂರು ।
ವಿರತರುಂ ಸಂಜನಿಸಿ ಪೋಗಲೀ ಬಸವಾದಿಶರಣರುಂ ಜನಿಯಿಸುವರು ।"[೬]

ಹರನ ಆಜ್ಞೆಯಿಂದ ಇಂದ್ರ ಸಮೇತ ನೂರೊಂದು ವಿರಕ್ತರು ಈ ಇಳೆಯಲ್ಲಿ ಜನಿಸಿದರು ಎಂಬ ಉಲ್ಲೇಖ ಕಂಡುಬರುತ್ತದೆ.

"ಹರನಾಜ್ಞೆಯಿಂದ ಬೀಳ್ಕೊಂಡಿಂದ್ರ ನಿಳೆಗೈದಿ ।
ಹರಿಹರ ಮಹಾರಾಯ ಬುಕ್ಕರಾಯನೆನಿಪ್ಪ ।
ಧರಣೀಶರಂಶದಿಂ ಜನಿಸಿ ವಿದ್ಯಾನಗರಿಯಲ್ಲಿ ರಾಜ್ಯವನಾಳುತ ॥
ಹರುಷದಿಂ ಪ್ರೌಢದೇವೇಂದ್ರ ನಿರುತಿರಲತ್ತ ।
ಪರಮ ಕೈಲಾಸದಿಂದಿಳೆಗೈದಿ ನೂರೊಂದು ।
ವರಗಣೇಶ್ವರರುದಿಸಿ ಜಂಗಮಸ್ಥಲವನಂಗೀಕರಿಸಿ ವಿರತರಹರು ॥"[೭]

ಕೈಲಾಸ ಪರ್ವತದಲ್ಲಿ ವಿಕಟಾಂಗದ ಗಣೇಶ್ವರರ ಶಾಪದಿಂದ ದೇವೇಂದ್ರನು ಹರಿಹರ ಬುಕ್ಕರಾಯರ ವಂಶದಲ್ಲಿ ಪ್ರೌಢದೇವರಾಯನೆಂಬ ಹೆಸರಿನಿಂದ ಜನಿಸಿ ವಿದ್ಯಾನಗರಿಯಲ್ಲಿ

ಅರಸುಗೆಯ್ಯವನು. ಅವನ ಕಾಲದಲ್ಲಿ ನೂರೊಂದು ಗಣೇಶ್ವರರು ಮಹಿಮೆಗಳನ್ನು ತೋರುವುದಕ್ಕಾಗಿ ಇಳೆಯಲ್ಲಿ ಜನಿಸಿ ಜಂಗಮ ಸ್ಥಲವನಂಗಿಕರಿಸಿ ವಿರತರಾಗಿಹರು.

ಪ್ರೌಢದೇವರಾಯನ ಕಾಲದಲ್ಲಿ ಬದುಕಿದ ನೂರೊಂದು ವಿರಕ್ತರಲ್ಲಿ ಕೇವಲ ೧೧ ಮಂದಿ ವಿರಕ್ತರ ಕುರಿತಾಗಿ ಚೆನ್ನಬಸವ ಪುರಾಣದಲ್ಲಿ ಮಾಹಿತಿ ಲಭ್ಯವಿದೆ. ಮೋದಿರುದ್ರ ಕವಿ ರಚಿಸಿದ "ನೂರೊಂದು ವಿರಕ್ತರ ಕಾವ್ಯ"ದಲ್ಲಿ ಹಾಗೂ "ಶತಯೇಕ ವಿರಕ್ತರ ಸ್ತೋತ್ರ" ಕೃತಿಗಳಲ್ಲಿ ಮಾತ್ರ ಒಟ್ಟು ನೂರೊಂದು ವಿರಕ್ತರ ಹೆಸರಿನ ಪಟ್ಟಿ ದೊರೆಯುತ್ತದೆ. ಅಲ್ಲದೆ ಇವೆರಡೂ ಕಾವ್ಯಗಳಲ್ಲಿರುವ ನೂರೊಂದು ವಿರಕ್ತರ ಹೆಸರುಗಳಲ್ಲಿ ಸುಮಾರು ೩೧ ಹೆಸರುಗಳು ವ್ಯತ್ಯಾಸ ಕಂಡುಬರುತ್ತವೆ. ಹೀಗಾಗಿ ಇವೆರಡು ಕೃತಿಗಳನ್ನು ಬಿಟ್ಟರೆ ಮತ್ತ್ಯಾವ ಕೃತಿಯಲ್ಲಿ ಈ ವಿರಕ್ತರ ಹೆಸರುಗಳು ಪರಿಪೂರ್ಣವಾಗಿ ದೊರೆಯಲಾರದು. ಚೆನ್ನಬಸವ ಪುರಾಣದಲ್ಲಿ ಉಲ್ಲೇಖಗೊಂಡ ವಿರಕ್ತರ ಹೆಸರು ಈ ಕೆಳಗಿನಂತಿವೆ.

೧. ಕರಸ್ಥಲದ ವೀರಣ್ಣೊಡೆಯ
೨. ಕರಸ್ಥಲದ ನಾಗಿದೇವ
೩. ಗುರುಬಸವ
೪. ಹೊನ್ನಯ್ಯ
೫. ಮಿಡಿಬಿಲ್ಲ ಶಾಂತದೇವ
೬. ಹೇಟೆಯ ಮರುಳ
೭. ತಗರ ಕಾಳಗದ ಪ್ರಭು
೮. ಬಾಲ ಲಿಂಗಣ್ಣ
೯. ಬತ್ತಲೇಶ್ವರ
೧೦. ನಿರ್ವಾಣಿ ಬೋಳೇಶ
೧೧. ಪರಪಟ್ಟೆ

ಹಂಪೆಯ ಪರಿಸರದಲ್ಲಿ ಬಾಳಿದ ಈ ನೂರೊಂದು ವಿರಕ್ತರ ವ್ಯಕ್ತಿತ್ವ ಅಂದು ಯಾರಿಗೂ ನಿಲುಕಲಾರದಾಗಿತ್ತು. ಪವಾಡ ಪುರುಷರು, ಸಿದ್ಧಿ ಪುರುಷರಾಗಿರುವ ಇವರು ಅತೀಂದ್ರಿಯ ಜ್ಞಾನಶಕ್ತಿ ಉಳ್ಳವರು. ತಮ್ಮಲ್ಲಿರುವ ಅಪಾರವಾದ ದಿವ್ಯಶಕ್ತಿಯಿಂದ ಸಮಾಜದ ಮೌಢ್ಯತೆಯನ್ನು ಹೋಗಲಾಡಿಸಿದವರು ತಮ್ಮ ನಡೆನುಡಿಗಳಿಂದ ಪ್ರೌಢದೇವರಾಯ ಹಾಗೂ ಆಸ್ಥಾನದ ಪ್ರಜೆಗಳನ್ನು ಚಕಿತಗೊಳಿಸಿದವರೆಂದು ಉಲ್ಲೇಖಿತರಾಗಿದ್ದಾರೆ.

ಚೆನ್ನಬಸವ ಪುರಾಣ, ನೂರೊಂದು ವಿರಕ್ತರ ಕಾವ್ಯ, ಪ್ರೌಢದೇವರಾಯನ ಕಾವ್ಯದಲ್ಲಿ ಕರಸ್ಥಲದ ವೀರಣ್ಣೊಡೆಯ ಈ ನೂರೊಂದು ವಿರಕ್ತರಲ್ಲಿ ಆದಿಯಾಗಿದ್ದಾನೆ ಎಂಬುದರ ಬಗ್ಗೆ

ಮೇಲಿನ ಈ ಮೂರು ಕಾವ್ಯಗಳಲ್ಲಿ ಸ್ಪಷ್ಟವಾಗಿ ಇವರ ಬಗ್ಗೆ ಉಲ್ಲೇಖಿಸಿದೆ. ಅಲ್ಲದೆ ಕರಸ್ಥಲದ ನಾಗಿದೇವನಿಗೆ ವೀರಣ್ಣೊಡೆಯರು ಗುರುಗಳಾಗಿದ್ದರೆಂಬುದಕ್ಕೆ ಚೆನ್ನಬಸವ ಪುರಾಣದಲ್ಲಿ ಈ ಕೆಳಗಿನಂತೆ ಪ್ರಸ್ತಾಪಿಸಲಾಗಿದೆ.

"ವರ ಕರಸ್ಥಲದ ವೀರಣ್ಣೊಡೆಯರೆಂಬುವರ
ಕರ ಕಮಲ ಸಂಜಾತನಕ್ಕಸಾಲಿಯ ನಾಗ
ನಿರುತಲೊಂದು ದಿನ"[೮]

"ವಿರೂಪಾಕ್ಷ ಪಂಡಿತ ಇಲ್ಲಿ 'ವೀರಣ್ಣೊಡೆಯರ ಕರಕಮಲ ಸಂಜಾತ ಕರಸ್ಥಲ ನಾಗಿದೇವ' ಎಂದಿರುವುದರಿಂದ 'ನೂರೊಂದು ವಿರತರ' ಪರಿವಿಡಿ ಇಲ್ಲಿ ವೀರಣ್ಣೊಡೆಯನಿಂದಲೇ ಆರಂಭಗೊಂಡಿರುವುದು ಸ್ಪಷ್ಟ. ನಾಗಿದೇವನ ಗುರು ಕರಸ್ಥಲ ವೀರಣ್ಣೊಡೆಯನಾಗಿದ್ದರೂ, 'ನೂರೊಂದು ವಿರತರ ಕಾವ್ಯ'ದ ಕರ್ತೃ ಮೋದಿಯ ರುದ್ರ, ವೀರಣ್ಣೊಡೆಯನನ್ನು ವಿರಕ್ತರ ಮಾಲೆಯಿಂದ ಪ್ರತ್ಯೇಕಿಸಿ ಹೇಳಿದ್ದಾನೆ. ಆದರೆ ಇದಕ್ಕೆ ಬೇರೆ ಕಾರಣವುಂಟು. ಕರಸ್ಥಲದ ವೀರಣ್ಣೊಡೆಯನು ಮೊದ ಮೊದಲು ಪ್ರೌಢದೇವರಾಯನಲ್ಲಿ ಮಂತ್ರಿಯಾಗಿದ್ದು ಈ ಯುಗದ ವೀರಶೈವ ಮಹಾತ್ಮರ ಪ್ರಭಾವಕ್ಕೊಳಗಾಗಿ, ವೀರಶೈವ ಗುರುವಾಗಿ, ಕೊನೆಗೆ ನಾಗಿದೇವ, ಗುರುಬಸವರೇ ಮೊದಲಾದವರ ಅಭಿಪ್ರಾಯದಂತೆ ರಾಯನ ಮಗಳನ್ನು ವಿವಾಹವಾಗಿ ವೀರಶೈವ ಧರ್ಮ ಪ್ರಚಾರಕ್ಕೆ ನೇರವಾಗಿ ನಿಂತಂತಿವೆ."[೯]

ಮಹಾಮಹಿಮರಾದ ನಾಗಿದೇವ, ವೀರಣ್ಣೊಡೆಯರು ವಿದ್ಯಾನಗರಿಗೆ ಬಂದಾಗ ಹಲವು ರೀತಿಯ ಪವಾಡಗಳಿಂದ ಜನಸಾಮಾನ್ಯರನ್ನು ಬೆರಗುಗೊಳಿಸಿದ್ದರು.

"..........ಅಕ್ಕಸಾಲಿಯ ನಾಗ
ನಿರುತಲೊಂದಿನದಲ್ಲಿ ಹಾದರಕೆ ಹೊಕ್ಕೊಡಾ ಮನೆಯವರು ಮುತ್ತಿಕೊಳ್ಳಲು
ಪರಮ ಸಮ್ಯಗ್‌ಜ್ಞಾನ ತಲೆದೋರೆ ಚಿತ್ತದಿಂ
ವಿರತನಹನೆಂದು ಸಂಸಾರಮಂ ಬಿಟ್ಟಾಗ
ಕರಪೀಠದಲ್ಲಿ ಲಿಂಗವ ತೆಗೆದುಕೊಂಡು ಪೀಠವನೊಡನೆ ಕಡೆಗೆ ಹಾಯ್ಕಿ"[೧೦]

ಕರಸ್ಥಲದ ವೀರಣ್ಣೊಡೆಯನ ಶಿಷ್ಯನಾದ ಅಕ್ಕಸಾಲೆಯ ನಾಗನು ಒಂದು ದಿನ ಹಾದರಕ್ಕೆಂದು ಒಂದು ಮನೆಯೊಳಗೆ ಹೋಗಲು ಆ ಮನೆಯವರು ಅವನನ್ನು ಮುತ್ತಿಕೊಳ್ಳುವರು. ಆಗ ಅವನಿಗೆ ಸಮ್ಯಕ್ ಜ್ಞಾನವು ತೋರಿ ವಿರತ ನಹನೆಂದು ಸಂಸಾರವನ್ನು ಬಿಟ್ಟು ಪೀಠವ ಬಿಸುಡಿ ಲಿಂಗವ ಕೈಕೊಂಡು ಮರುಳನಂತೆ ತಲೆಗೆದರಿ ಬೂದಿಯ ಬಳಿದುಕೊಂಡು ದಿಗಂಬರನಾಗಿ ಎಲ್ಲಾರೂ ನೋಡು ನೋಡುತ್ತಾ ಆ ಮನೆಯ ಬಾಗಿಲಿನಿಂದ ಹೊರಬಿದ್ದು ತನ್ನ ಗುರುವಿದ್ದ ಪುರಕ್ಕೆ ಬರುವನು. ಹೀಗೆ ನಾಗಿದೇವನು ಸಂಸಾರಿಯಾಗಿದ್ದು ಕೊನೆಗೆ ವಿರಕ್ತನಾದನು.

ಹುಚ್ಚ ರಾಹುತನ ಮಡದಿಯೊಂದಿಗೆ ನಾಗಿದೇವನು ಸಂಭೋಗದಲ್ಲಿರಲು, ಅದನ್ನು ಕಂಡು ಕೋಪಗೊಂಡ ಹುಚ್ಚರಾಹುತ ತನ್ನ ಕೈಯಲ್ಲಿದ್ದ ಖಡ್ಗದಿಂದ ಇರಿಯುತ್ತಾನೆ. ಆದರೆ ಖಡ್ಗದ ಬಾದೆ ನಾಗಿದೇವನಿಗೆ ತಾಗುವುದೇ ಇಲ್ಲ ಅವನ ದೇಹದಿಂದ ರಕ್ತ ಹೊರಬರದೆ ಅಲ್ಲಿ ಯಾವುದೇ ರೀತಿಯ ಗಾಯವು ಕಾಣಲಾರದು.

"ಉಚ್ಚಿದಾಯುಧದಿಂದಲಿರ್ವರಂ ತಿವಿಯೆತ ।
ಟ್ಟುಚ್ಚಲಲಗಂ ಕೀಳೆ ಗಾಯಂಗಳಿಲ್ಲದಿರ ।
ಲಚ್ಚರಿಯೆನ್ನುತ್ತವಂ ನೆಡುಗುತಿರೆ ನಾಗಿದೇವಂ ಕಂಡು ಕರುಣದಿಂದೆ ॥
ಬೆಚ್ಚ ಬೇಡಲವೋ ನಿನೊಂದು ಭಿಕ್ಷವನಿತ್ತೆ ।
ಮೆಚ್ಚಿಯಿವಳೊಂದು ಭಿಕ್ಷವನ್ನಿತ್ತಳಿವರೊಳಗೆ ।
ಹೆಚ್ಚು ಕುಂದಿಲ್ಲಮಗೆ ನೀನಂಜಲೇತಕೆಲೆ ಹುಚ್ಚ ನೀಂ ಕೇಳೆಂದನು ॥"[30]

ಹುಚ್ಚರಾಹುತನು ಖಡ್ಗದಿಂದ ನಾಗಿದೇವನಿಗೆ ಇರಿದಾಗ ಅವನ ದೇಹಕ್ಕೆ ಯಾವುದೇ ನೋವಾಗದಿರುವುದನ್ನು ಕಂಡು ಬೆರಗಾಗುತ್ತಾನೆ. ಅದನ್ನು ಕಂಡು ವಿರಕ್ತ ನಾಗಿದೇವ ಈ ಮೇಲಿನಂತೆ ಹುಚ್ಚರಾಹುತನಿಗೆ ಸಮಧಾನ ಪಡಿಸುವನು.

ಕರಸ್ಥಲದ ನಾಗಿದೇವನು ಮುಂದೆ ಗುರುಬಸವನ ಲಿಂಗಪೂಜೆಯ ಸಂದರ್ಭ ಹಾಗೂ ಸಿಂಗಾರ ತೋಟದಲ್ಲಿ ತೆಂಗಿನ ಕಾಯಿಯ ಪ್ರಸಂಗದಲ್ಲಿ ತೋರಿದ ತನ್ನ ಪವಾಡ ಅಪರೂಪವಾದದ್ದಾಗಿದೆ. ಅಲ್ಲದೆ ಮೋಹಿನಿಗಜವನ್ನು ನಾಗಿದೇವನು ಏರಲು ಹೋಗಿ ಹಗ್ಗದಿಂದ ಕಟ್ಟಿದ ಆನೆಯ ಹಗ್ಗಗಳೆಲ್ಲವು ಬಂಗಾರವಾದವು. ಹೀಗೆ ಮಹಾಮಹಿಮ, ದಿವ್ಯ ಪುರುಷನಾದ ನಾಗಿದೇವನು ತನ್ನ ಪವಾಡ ಸಾದೃಶ್ಯಗಳಿಂದ ವಿದ್ಯಾನಗರಿಯಲ್ಲಿ ಮೆರೆದನು. ತನ್ನ ಕಾರ್ಯ ಸಾಧನೆಗಾಗಿ ವೀರಣ್ಣೊಡೆಯನನ್ನು ತೊರೆದ ಮೇಲೆ, ವಿದ್ಯಾನಗರಿಯಲ್ಲಿ ವೀರಣ್ಣೊಡೆಯ ಪ್ರೌಢದೇವರಾಯನ ಮಗಳನ್ನು ಮದುವೆಯಾಗಿ ಅಲ್ಲಿಯೇ ಇದ್ದು ಕೆಲವೊಂದು ಪವಾಡಗಳನ್ನು ಸಹ ಮಾಡುವರು.

"ಒಮ್ಮೆ ಪ್ರೌಢದೇವರಾಯ ಮತ್ತು ವೀರಣ್ಣೊಡೆಯರು ವೈಹಾಳಿ ವಿಹಾರಕ್ಕೆಂದು ತಿರುಗಣಿ ಮಡು(ಇದು ಚಕ್ರತೀರ್ಥ)ವಿನ ಬಳಿಗೆ ಬರುವರು. ಅಲ್ಲಿ ನಿಂತಾಗ ವೀರಣ್ಣೊಡೆಯ, ಒಂದು ಮೀಂಬುಲಿಗನ ಹಕ್ಕಿ ಪಂಪಾ ನದಿಯೊಳಗಿನ ಮೀನನ್ನು ಬಾಯಲ್ಲೆತ್ತಿಕೊಂಡು ಹಾರಿ ಹೋಗಿ ತಿಂದು ಮತ್ತೊಂದಕ್ಕೆಂದು ನೀರಿನತ್ತ ಬರುವ ನೀರಾಟದ ದೃಶ್ಯವನ್ನು ಕಂಡು ಅದಕ್ಕೆ ಮೆಚ್ಚಿ ತನ್ನ ಕೈಯಲ್ಲಿ ಹಾಕಿಕೊಂಡಿದ್ದ 'ಪಚ್ಚದ' ಕಡಗವನ್ನು ಒಗೆಯುವನು. ಅರಸನು ಬೆಚ್ಚಿ ಇಂಥ ಬೆಲೆಯುಳ್ಳ ಕಡಗವನ್ನು ಏಕೆ ಬಿಸಾಡಿದೆ ಎಂದು ಕೇಳಿದನು.

ಪಚ್ಚೆಯದ ಕಡಗಮಂ ಬಿಸುಟೆಯೇಕೆನಲದಕೆ ।
ಮೆಚ್ಚೆ ಯಾವಲ್ಲಿಯೆನೆ ಮತ್ತೊಂದು ಕಡಗವನ ।
ದುಚ್ಚಿ ಮೊದಲಿಟ್ಟ ಬಳಿಯಲಿ ಹಾಯ್ಕಿ ತೋರಿಸಿದೊಡರಸನತಿಚಿಂತೆಯಿಂದ ।
ಹೆಚ್ಚಿನವು ಕಡಗಂಗಳೆನೆ ನೃಪತಿ ನೀನದೇಂ ।
ಹುಚ್ಚನೇ ಬೊಕ್ಕಸದೊಳಿವ ತರಿಸಿ ನೋಡೆಂದೊ ।
ಡ ಚ್ಚರಿಯೆನುತ್ತಾಗ ನೋಡಲಾ ಕಡಗಂಗಳಿರೆ ನೃಪತಿ ಬೆರಗಪ್ಪನು ॥”[೧೨]

'ಇದೋ ಹೀಗೆ' ಎಂದು ತನ್ನ ಕೈಯಲ್ಲಿದ್ದ ಇನ್ನೊಂದನ್ನು ಬಿಚ್ಚಿ ನೀರಿಗೆಸೆಯುತ್ತಾನೆ. ಪ್ರೌಢದೇವರಾಯನು ಇದರಿಂದ ಚಿಂತಾಕ್ರಾಂತನಾಗಿರಲು, ಅರಸನೇ ನೀನೆಂಥ ಮರುಳು? ನೀನು ನನಗಿತ್ತ ಈ ಕಡಗಗಳು ನಿನ್ನ ಬೊಕ್ಕಸದಲ್ಲಿಯೇ ಇವೆ. ಬೇಕಾದರೆ ತೆಗೆದು ನೋಡು, ಎನ್ನಲು ಅರಸನು ಭಂಡಾರದಲ್ಲಿ ನೋಡಲು ಅವು ಅಲ್ಲಿಯೇ ಇದ್ದುದನ್ನು ಕಂಡು ವೀರಣ್ಣೊಡೆಯನ ಮಹಾತ್ಮೆಗೆ ವಿಸ್ಮಯ ತಾಳುತ್ತಾನೆ. "ನೂರೊಂದು ವಿರಕ್ತರಲ್ಲಿ ಹಲವರು ಲೌಖಿಕವಾಗಿ ಬಾಳಿಯೂ, ಅಲೌಕಿಕ ವ್ಯಕ್ತಿತ್ವ ಸಿದ್ಧಿಯನ್ನು ಸಂಪಾದಿಸಿಕೊಂಡಿದ್ದಾರೆ. ಇವರು ವಿರಕ್ತರಾಗಿರಲಿಕ್ಕಿಲ್ಲ. ಆದರೆ ಲೌಕಿಕ ಮಟ್ಟದ ಮಾನವ ಜೀವಿಗಳಂತೂ ಅಲ್ಲ, ಅದಕ್ಕೆ ಇಂಥವರ ಚರಿತ್ರೆ ಕೆಲವೊಮ್ಮೆ ಬಣ್ಣನೆಗೆ ರಂಜಕವಾಗಿರುತ್ತದೆ."[೧೩]

ಉತ್ತಮವಾದ ಆಡಳಿತದಿಂದ ಅದ್ಭುತ ಹೆಸರುಗಳಿಸಿದ ಪ್ರೌಢದೇವರಾಯನಿಗೆ ಕರಸ್ಥಲದ ವೀರಣ್ಣೊಡೆಯನು, ಹಂಪೆಯ ಪರಿಸರದಲ್ಲಿ ನೆಲೆನಿಂತ ನೂರೊಂದು ವಿರಕ್ತರ ಲಕ್ಷಣ, ಅವರ ಸ್ವಭಾವ, ವ್ಯಕ್ತಿತ್ವ ಹಾಗೂ ಅವರ ಲೀಲೆಯ ಬಗ್ಗೆ ಪರಿಚಯಿಸುವನು. ಭಂಡಾರಿ ಹೊನ್ನಯ್ಯ, ಮಿಡಿಬಿಲ್ಲ ಶಾಂತದೇವ, ಹೇಟೆಯ ಮರುಳನ ಕೋಳಿಗಳ ಕಾಳಗ, ತಗರ ಕಾಳಗದ ಪ್ರಭುದೇವನ ಪವಾಡ, ಬಾಲಲಿಂಗಣ್ಣನ ಲೀಲೆ, ಬತ್ತಲೇಶ್ವರನೆಂಬ ಶಿವಯೋಗಿಯ ಬಯಲಾದ ಸಂದರ್ಭಗಳನ್ನು ನೋಡಿ ಪ್ರೌಢದೇವರಾಯನಿಗೆ ಆಶ್ಚರ್ಯವುಂಟು ಮಾಡಿದವು.

ದಿವ್ಯ ಜ್ಞಾನಿಗಳಾದ ಈ ವಿರಕ್ತರು ಸಾಮಾನ್ಯ ವ್ಯಕ್ತಿತ್ವದವರಲ್ಲ, ಇವರು ಅಸಾಮಾನ್ಯ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡವರು. ಒಂದೊಂದು ಕ್ಷಣಕ್ಕೂ ತಮ್ಮ ಅಪರೂಪದ ದಿವ್ಯ ಲೀಲೆಯನ್ನು ಅರಸನಿಗೆ ತೋರಿಸಿ ಬಯಲಾಗುವರು.

ಒಮ್ಮೆ ಮಿಡಿಬಿಲ್ಲ ಶಾಂತದೇವರು ತನ್ನ ಲಿಂಗವನ್ನು ಧರಿಸುತ್ತಿರುವಾಗ ಎಲ್ಲಾರೂ ನೋಡ ನೋಡುತ್ತಾ ಅವರಿಂದ ಪಾರಾಗಿ ಹೋಗಲು ಇವನು ಹುಚ್ಚನೆಂದು ಜನರೆಲ್ಲಾ ಹಿಂಬಾಲಿಸುವರು. ಅವನು ವೀರಣ್ಣೊಡೆಯರ ಬಳಿಗೆ ಬಂದು ಇನ್ನೂ ಸಂಧಾನವಾಯಿತೆಂದು ಲಿಂಗವನೆಸೆದು ಅದರೊಡನೆ ನಿರವಯವಾಗುವನು. ಮುಂದೆ ಹೇಟೆಯ ಮರುಳನ ಕೋಳಿಗಳ

ಮೇಲೆ ತನ್ನ ಹೇಟಿಯನ್ನು ಬಿಟ್ಟು ಕಾಳಗದಿಂದ ಅವನ್ನೆಲ್ಲ ಗೆದ್ದೊಯ್ಯುತ್ತಿರಲು ವೀರಣ್ಣೊಡೆಯರು ಚಿಂತೆಯಿಂದ ಅಲ್ಲಿಗೆ ಬಂದು ನೋಡುವರು. ಆಗ ಆ ಕೋಳಿಗಳನ್ನೆಲ್ಲ ಮಾಯಾಗೊಳಿಸಿ ತಾನು ಬಯಲಾಗುವನು.

ಈ ಚೆನ್ನಬಸವ ಪುರಾಣದಲ್ಲಿ ಉಲ್ಲೇಖಿಸಿದ ಎಲ್ಲಾ ವಿರಕ್ತರ ಪವಾಡ ಸಾದೃಶ್ಯಗಳನ್ನು ವಿರೂಪಾಕ್ಷ ಪಂಡಿತ ಸ್ಪಷ್ಟವಾಗಿ ಚಿತ್ರಿಸಿರುವನು. ತಗರ ಕಾಳಗದ ಪ್ರಭುವು ಗೆಲ್ಲಗೂಳಿಯ ಅಂಗಡಿಯ ತಿನಿಸುಗಳನ್ನು ತಿನ್ನುತ್ತಿರಲು ಆ ಅಂಗಡಿಯವರು ಅವನನ್ನು ಹಿಂಸಿಸುವರು. ಆಗ ವೀರಣ್ಣೊಡೆಯರು ಆತನನ್ನು ಕಂಡು

"ವರಕರಸ್ಥಲದ ವೀರಣ್ಣೊಡೆಯರಾಗಲ್ಲೈ ।
ತರುತಾತನಂ ಕಂಡು ಕೊಲ್ಲಬೇಡೀತನೇ ।
ಪರಮಶಿವಯೋಗಿಯೆನಲರಿದನೆಂದೆನುತಾಗಲಿರದೆ ನಿರವಯವಪ್ಪನು ॥"೧೪

"ಕೊಲ್ಲ ಬೇಡಿ ಈತನೇ ಪರಮ ಶಿವಯೋಗಿ" ಎಂದು ಹೇಳಲು ಆತನು ಅರಿದನೆಂದು ಕೂಡಲೇ ಪ್ರಭುವ ನಿರವಯವಾಗುವನು.

ಮುಂದೆ ಬಾಲಲಿಂಗಣ್ಣನು ವೀರಣ್ಣೊಡೆಯರ ಮನೆಗೆ ಬಂದು ಭಿಕ್ಷೆ ಬೇಡುತ್ತಿರಲು ಅವರು ಅವನು ಬಾಲನೆಂದು ಒಳಗೆ ಕರೆದೊಯ್ವರು. ಅಲ್ಲಿ ಲಿಂಗಣ್ಣನು ಮಂಚದ ಮೇಲೆ ಪವಡಿಸಿರಲು ಲೀಲೆಯಿಂದ ಆತನ ಅಂಗೈಯ ಲಿಂಗವನ್ನು ತೆಗೆಯುವರು. ಎಲ್ಲರೂ ಸವಿಸಿ ಬಳಿಕ ಬಾಲಲಿಂಗಣ್ಣನನ್ನು ಕರೆಯಲು ಅವನ ಹರಣವಳಿದು ಡಿಂಬವಿರುವುದು.

"ಕಂಡಾಗಲೂ ವಿರಕ್ತರನ್ನೆಲ್ಲರಂ ಕೂಡಿ ।
ಕೊಂಡು ವೀರಣ್ಣೊಡೆಯರೇ ತಾವು ಮೊದಲೆ ತೆ ।
ಕ್ಕೊಂಡ ಲಿಂಗವವನಾತನಂಗೆಯ್ಯೊಳಿರಿಸೆ ಕಣ್ದೆರೆಯಲಾ ಲಿಂಗಣ್ಣನ ॥
ಉಂಡುದಿಲ್ಲೇಳೆಂದೊಡಾನು ನಿಮ್ಮೊಡನಾಗ ।
ಳುಂಡೆನೆನೆ ಕೇಳ್ದು ವೀರಣ್ಣೊಡೆಯರೆಂತು ನೀ
ನುಂಡೆಯೆನೆ ಬಾಲಲಿಂಗಣ್ಣನವರುಂಡೂಟಗಳ ಕುರುಪುಗಳ ಪೇಳ್ದನು ॥"೧೫

ಆಗ ವೀರಣ್ಣೊಡೆಯರೇ ತಾವು ತೆಗೆದುಕೊಂಡಿದ್ದ ಲಿಂಗವನ್ನು ಅಂಗೈಯೊಳಿರಿಸಲು ಲಿಂಗಣ್ಣನು ಕಣ್ದೆರೆದುದನ್ನು ಕಂಡು ಉಂಡುದಿಲ್ಲ ಏಳೆನ್ನುವರು. ಆಗ ಅವನು ನಿಮ್ಮೊಡನೆ ಉಂಡೆನೆಂದು ಹೇಳಿ ಊಟಗಳ ಗುರುತುಗಳನ್ನು ಹೇಳುವನು. ಆಗ ವೀರಣ್ಣೊಡೆಯರು ನೀನು ಪ್ರಾಣಲಿಂಗ ಸಂಧಾನಿ ಎಂದು ಬಾಲಲಿಂಗಣ್ಣನನ್ನು ಪಿಡಿದೆತ್ತಿ ಸ್ವಾನುಭಾವದೊಳು ಕೊಂಡಾಡುತ್ತಿರಲು ನಾಗಿದೇವನು ಅವರನ್ನು ನಿರವಯವೆನ್ನೈದಿಸುವನು.

"ಬತ್ತಲೇಶ್ವರನೆಂಬ ಶಿವಯೋಗಿ ಗುಹೆಯಲ್ಲಿ ।
ಬತ್ತಿದ ಶರೀರದಿಂದಿರೆ ನೃಪತಿ ನೋಡುತ್ತೆ ।
ವೃತ್ತಕುಚೆ ನೀನೀತನಂ ಒಲಿಸಲಾಪೆಯಾ ಎಂದೊಡಾ ಪದ್ಮವತಿ ॥
ಚಿತ್ತೈಸು ಜೀಯ ನಾನೀತನಿಂ ಪುತ್ರನಂ ।
ಪೆತ್ತು ನಿನ್ನಯ ಬಳಿಗೆ ಕರೆತರುವೆನೆಂಡೊಡನೆ ।
ಬಿತ್ತರದೊಳಾ ಯತಿಯನೊಲಿಸಿಕೊಂಡೊರ್ವ ಮಗನಂ ಪಡೆವಳುತ್ಸವದೊಳು ॥"[೧೬]

ಬತ್ತಲೇಶ್ವರನೆಂಬ ಶಿವಯೋಗಿಯು ಗುಹೆಯಲ್ಲಿ ಬತ್ತಿದ ಶರೀರದಿಂದ ಇರುವುದನ್ನು ಅರಸನು ನೋಡಿ, ಪದ್ಮಾವತಿ ಎಂಬುವಳಿಗೆ "ನೀನು ಈತನನ್ನು ಒಲಿಸಲಾಪೆಯಾ?" ಎಂದು ಕೇಳುವನು. ಆಗ ಆಕೆಯು ನಾನು ಈತನಿಂದ ಪುತ್ರನನ್ನು ಪಡೆದು ನಿನ್ನ ಬಳಿಗೆ ಕರೆತರುವೆನೆಂದು ಹೇಳಿ ಆ ಯತಿಯನೊಲಿಸಿಕೊಂಡು ಓರ್ವ ಮಗನನ್ನು ಪಡೆವಳು. ಒಂದು ದಿವಸ ವಿರೂಪಾಕ್ಷ ಲಿಂಗನ ತೋರಪರಿಸೆಗೆ ಪದ್ಮಾವತಿಯು ತನ್ನ ಪುರುಷನನ್ನು ಕೂಡಿಕೊಂಡು ಬಂದು ಆತನ ಕೈಯ್ಗೆ ಮಗನನ್ನು ಕೊಟ್ಟು ಅರಸನಿಗೆ ಇವನೇ ಬತ್ತಲೇಶ್ವರನೆಂದು ಕರವೆತ್ತಿ ತೋರಿಸುತ್ತಿರಲು "ಇವರು ಅರಿದರು, ನಾವು ಇನ್ನೂ ಇಲ್ಲಿ ಇರಲಾರದೆಂದು", ಆ ಶಿಶುವನ್ನು ಮೇಲಕ್ಕೆ ಹಾಯ್ಕಿ ತಾನು ಬಯಲಾಗುವನು. ಕೊನೆಯದಾಗಿ ನಿರ್ವಾಣಿ ಬೋಳೇಶನು ಅನೇಕ ಪವಾಡಗಳನ್ನು ಮೆರೆದು ಆಲದ ಮರದ ಜಡೆಗಳನ್ನು ಹಿಡಿದುಕೊಂಡು ಶಿವಯೋಗ ಸಮಾಧಿಯಲ್ಲಿರುವನು. ಅಲ್ಲಿದ್ದ ಭಕ್ತ ಜನ ಜಾಲವು ಈತನು ತೀರಿಕೊಂಡನೆಂದು ತೆಗೆಯಲು ಅವರ ಕೈಯಲ್ಲಿಯೇ ನಿರವಯನಾಗುವನು. ವೀರಣ್ಣೊಡೆಯ ಪ್ರತಿಯೊಬ್ಬ ವಿರಕ್ತರನ್ನು ಪರಿಚಯ ಮಾಡಿಸುತ್ತ ಮುಂದೆ ಸಾಗುತ್ತಿರಲು ಅವರಲ್ಲಿ ಕೆಲವರು ಮರುಳನಂತೆ ಹುಚ್ಚರಂತೆ, ಮಗುವಿನಂತೆ ಮತ್ತೆ ಕೆಲವರು ಅರೆಮರುಳನಂತಿರುವುದನ್ನು ಕಂಡು ಅರಸ ಆಶ್ಚರ್ಯಪಡುವನು.

ಹೀಗೆ ಒಬ್ಬನು ಮಕ್ಕಳೊಡನೆ ಮರುಳನಂತೆ ಆಡುತ್ತಿರುವುದನ್ನು ಅರಸ ಕಂಡು ಅವನು ಪರಮ ಶಿವಯೋಗಿಯೆಂದು ಕರೆದೊಡೆ ಅದನರಿದು ಅವನು ಬಯಲಾಗುವನು. ಇಂತು ಆತ ಮೊದಲಾಗಿ ನೂರೊಂದು ವಿರತರು ಮರುಳರಂದದೊಳಿದ್ದು ನಿರಾಕಾರವನ್ನು ತಳೆವರು.

'ಚೆನ್ನಬಸವ ಪುರಾಣ'ದಲ್ಲಿ ಪ್ರಸ್ತಾಪಿಸಿರುವ ಕೆಲವು ವಿರಕ್ತರ ಲಕ್ಷಣ ಹಾಗೂ ಸ್ವಭಾವಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅವಧೂತರಿಗೂ ಇವರಿಗೂ ಹೆಚ್ಚು ವ್ಯತ್ಯಾಸ ಕಂಡುಬರಲಾರದು. ಮಿಡಿಬಿಲ್ಲ ಶಾಂತನನ್ನು, ಹುಚ್ಚನೆಂದು ಜನರೆಲ್ಲರು ಹಿಂಬಾಲಿಸುವುದು, ತಗರ ಕಾಳಗದ ಪ್ರಭುದೇವನು ಅಂಗಡಿಯಲ್ಲಿರುವ ತಿನಿಸುಗಳನ್ನು ತಿನ್ನುತ್ತಿರಲು ಅಂಗಡಿಯವ ಹಿಂಸಿಸುವುದು. ಬತ್ತಲೇಶ್ವರನೆಂಬ ಶಿವಯೋಗಿ ಬತ್ತಿದ ಶರೀರದಿಂದ ಗುಹೆಯಲ್ಲಿರುವ, ಈ ರೀತಿಯ ಕೆಲವೊಂದು ಪ್ರಸಂಗಗಳನ್ನು ಅವಲೋಕಿಸಿ ನೋಡಿದಾಗ ಇದೇ ರೀತಿಯ ಸ್ವಭಾವದವರು ಶಿವರಾಮಧೂತ,

ವೆಂಕವಧೂತ, ಶ್ರೀ ಶಿವಕರಣಾನಂದ ಅವಧೂತರ ನಡೆ ನುಡಿಗಳಿಗೆ ತುಂಬ ಹತ್ತಿರದವರಾಗಿ ಕಂಡುಬರುವರು. ಈ ಅವಧೂತರಲ್ಲಿ ಕೆಲವರು ಗೃಹಸ್ಥರಿದ್ದರೂ ಅಲ್ಲದೇ ಮಕ್ಕಳನ್ನು ಸಹ ಪಡೆದಿದ್ದರು. ಹೀಗಾಗಿ ಅವಧೂತರ ಪರಂಪರೆಯನ್ನು ಮುಂದುವರೆಸಿದವರಂತಿರುವ ಒಂದು ಪರಂಪರೆ ಇರಬಹುದು. ಅದೇ ಶಾಂತಸಂಪ್ರದಾಯವಾಗಿದೆ.

೩. ವೀರಶೈವಾಮೃತ ಪುರಾಣ

ವೀರಶೈವಾಮೃತ ಪುರಾಣವು ಕನ್ನಡದಲ್ಲಿ ಅತ್ಯಂತ ಬೃಹತ್ ಕಾವ್ಯ. ಈ ಕೃತಿಯ ಕರ್ತೃ ಗುಬ್ಬಿಯ ಮಲ್ಲಣಾರ್ಯ. ಇದು ರಚನೆಗೊಂಡ ಕಾಲ ಕ್ರಿ.ಶ. ಸುಮಾರು ೧೫೩೦ ಎಂದು ತಿಳಿದುಬರುತ್ತದೆ. ಇದು ಎಂಟು ಕಾಂಡ, ಒಂದನೂರ ಮೂವತ್ತಾರು ಸಂಧಿ, ಏಳುಸಾವಿರದ ತೊಂಬತ್ತೊಂಬತ್ತು ವಾರ್ಧಕ ಷಟ್ಪದಿಗಳು, ಎಂಟನೂರ ಹದಿನೇಳು ಸಂಸ್ಕೃತ ಶ್ಲೋಕಗಳನ್ನು ಒಳಗೊಂಡಿದೆ. ವಿಷಯ ವೀರಶೈವ ಸಿದ್ಧಾಂತ ನಿರೂಪಣೆ, ಇದನ್ನು ಗುರು ಶೀಲವಂತದೇವರು ಹಲಗೆ ದೇವರ ಪ್ರಾರ್ಥನೆಯ ಮೇರೆಗೆ ಅವರಿಗೆ ಬೋಧಿಸಿದ್ದರು. ಅದನ್ನು ಹಲಗೆ ದೇವರು ಕೆಂಚ ವಿರಾರ್ಯರಿಗೆ ವಿವರಿಸಿರುವರು. ಗುಬ್ಬಿಯ ಮಲ್ಲಣಾರ್ಯರು ಇದಕ್ಕೆ ಪದನಂ ಮಾಡಿರುವರು. ಅಂದರೆ ಪದ್ಯದಲ್ಲಿ ಕೃತಿ ವಿರಚನೆ ಮಾಡಿರುವರು ಎಂದರ್ಥ. ಈ ಕೃತಿಯು ವೀರಶೈವದ ಒಂದು ವಿಶ್ವಕೋಶದಂತಿದೆ. ಇದರಲ್ಲಿ ವೇದಾಂತ, ಶೈವ ಸಿದ್ಧಾಂತಗಳ ಕೋಶವು ಅಡಗಿದೆ. ಶೈವ ವೀರಶೈವಕ್ಕೆ ಸಂಬಂಧಪಟ್ಟ ಸಾವಿರಾರು ಕಥೆಗಳು ಅನೇಕ ಚರಿತ್ರೆಗಳು ಇದರಲ್ಲಿ ಉಕ್ತವಾಗಿವೆ.

ವೀರಶೈವಾಮೃತ ಪುರಾಣದಲ್ಲಿ ಹಂಪೆಯ ಪರಿಸರದಲ್ಲಿದ್ದ ನೂರೊಂದು ವಿರತರ ಹೆಸರುಗಳು ಪ್ರಸ್ತಾಪವಾಗಿವೆ. ಆದರೆ ಇವರೇ ನೂರೊಂದು ವಿರಕ್ತರೆಂದು ಹೇಳಿಲ್ಲ.

"ಆ ತುರಕ ಹುಚ್ಚದೇವರು ಬಿಲ್ಲ ಮರುಳಸು
ಪ್ರೀತಿಯ ಕರಸ್ಥಲದ ವೀರೇಶ್ವರಂ ಸುವಿ
ಖ್ಯಾತರಾಗಲ್ಲ ಗೂಳಿಗಳು ಗುರುಬಸವೇಶ ಪಟ್ಟಪಂ ನಾಗಿದೇವಂ
ನೂತನ ಕರಸ್ಥಲದ ನಾಗಿದೇವರು ಒತ್ತ
ಲಾತಿಶಯ ನೊಡೆಯರವ್ರತ ಮುಟ್ಟ ಶಾಂತೇಶ
ಸಾತಿಶಯವೆನಿಸುವೊಡೆಯರ ಕಟ್ಟಳೆಯ ಮಲ್ಲಿಕಾರ್ಜುನ ಸ್ವಾಮಿಯ ಬಳಿಕ"[೧೭]

ಲಕ್ಕಣ್ಣ ದಂಡೇಶರು ತತ್ಪೂರ್ವದ ನೂತನ ಶರಣರ ಕಥೆಗಳನ್ನು ಹೇಳುವಾಗ ಹಂಪೆಯ ತೀರದಲ್ಲಿ ನೆಲೆಸಿದ ನೂರೊಂದು ವಿರಕ್ತರಲ್ಲಿ ಕೆಲವರ ಹೆಸರನ್ನು ಪ್ರಸ್ತಾಪಿಸುತ್ತಾನೆ.

"ತುಂಗಭದ್ರಾ ತೀರದಲ್ಲಿ ರಾ
ಜಿಸುವ ನೂತನ ಶರಣರಂ ಮುನ್ನ ಲಕ್ಕಣ್ಣ ದಣ್ಣಾಯಕರು ಪೊಗಳಿದು ॥"[೧೮]

ಕವಿ ಮಲ್ಲಣಾರ್ಯರನು ಹೇಳುತ್ತ, ನೂರಾರು ವರ್ತಮಾನದ ಶರಣರ ಹೆಸರುಗಳನ್ನು ನಿರೂಪಿಸ ಹೋಗಿದ್ದಾನೆ. ಅವರಲ್ಲಿ-

೧. ತುರುಕ ಹುಚ್ಚದೇವರು

೨. ಬಿಲ್ಲಮರುಳ

೩. ಕರಸ್ಥಲದ ವೀರೇಶ

೪. ಗುರುಬಸವೇಶ

೫. ಪಟ್ಟಪರಿನಾಗಿದೇವ

೬. ಕರಸ್ಥಲನಾಗಿದೇವ

೭. ಬತ್ತಲೊಡೆಯರು

೮. ಮಟ್ಟಶಾಂತೇಶ ವ್ರತಿಗಳು

ಈ ರೀತಿಯ ಹೆಸರುಗಳು ನೂರೊಂದು ವಿರಕ್ತರಲ್ಲಿ ಸೇರಿದವುಗಳಾಗಿವೆ. ಇವರನ್ನು ನೂರೊಂದು ವಿರಕ್ತರೆಂದು ಗುಬ್ಬಿಯ ಮಲ್ಲಣಾರ್ಯ ಸ್ಪಷ್ಟವಾಗಿ ಹೇಳಲಿಕ್ಕೆ ಹೋಗಿಲ್ಲ. ವಿರಕ್ತರ ಬಗ್ಗೆ ಉಲ್ಲೇಖಗೊಂಡ ಕಾವ್ಯಗಳಲ್ಲಿ ಅಥವಾ ಮೋದಿರುದ್ರನ ವಿರಕ್ತರ ಕಾವ್ಯದಲ್ಲಿ ಈ ಮೇಲಿನ ವಿರಕ್ತರಲ್ಲಿ ತುರಕ ಹುಚ್ಚ ದೇವರು ಪಟ್ಟಪರಿನಾಗದೇವರುನ್ನು ಬಿಟ್ಟು ಉಳಿದ ಹೆಸರಿನ ವಿರಕ್ತರ ಪ್ರಸ್ತಾಪ ಬಂದಿದೆ. ಹೀಗಾಗಿ 'ವೀರಶೈವಾಮೃತಾ ಪುರಾಣ' ಕಾವ್ಯವು ಸಹ ವಿರಕ್ತರ ಬಗ್ಗೆ ಹೇಳುವ ಮುಖ್ಯವಾದ ಆಕಾರ ಗ್ರಂಥವಾಗಿ ಮಾರ್ಪಟ್ಟಿದೆ.

೪. ಶಿವತತ್ವಚಿಂತಾಮಣಿ

ಪ್ರೌಢದೇವರಾಯನ ಮಂತ್ರಿಯಾದ ಲಕ್ಕಣ್ಣ ದಂಡೇಶನು ಈ 'ಶಿವತತ್ವಚಿಂತಾಮಣಿ' ಎಂಬ ಕೃತಿಯ ರಚನೆಕಾರ. ಕವಿಯ ಇದೊಂದೆ ಕೃತಿ ಉಪಲಬ್ಧವಾಗಿದೆ. ಇದರ ಹೆಸರು ಅತ್ಯಂತ ಔಚಿತ್ಯ ಪೂರ್ಣ, 'ಚಿಂತಾಮಣಿ' ಎಂದರೆ ಚಿಂತಿಸಿದವರಿಗೆ ಬೇಡಿದುದನ್ನು ನೀಡುವ ಬಹು ಅಮೂಲ್ಯವಾದ ಒಂದು ವಿಶಿಷ್ಟ ರತ್ನ. ಶಿವನ ಹಂಬಲವುಳ್ಳವರಿಗೆ; ಶಿವಸಾಧಕರಿಗೆ ಈ ಕೃತಿಯು ಶಿವತತ್ವಗಳನ್ನು ಯಥೇಷ್ಟವಾಗಿ ನೀಡಿ, ಅವರ ಸಾಧನೆಯನ್ನು ಹಿರಿದುಗೊಳಿಸುವ 'ಚಿಂತಾಮಣಿ'ಯೇ ಆಗಿರುವುದು.

ಈ ಕೃತಿಯು ೫೪ ಸಂಧಿ ೨೨೨೧ ವಾರ್ಧಕ ಷಟ್ಪದಿಯ ಪದ್ಯಗಳಲ್ಲಿ ರಚಿತಗೊಂಡಿರುವುದು ಇದು ಪುರಾಣಕ್ಕೆ ಪುರಾಣ, ಕಾವ್ಯಕ್ಕೆ ಕಾವ್ಯ, ಇದು ಚಾರಿತ್ರಿಕ, ಧಾರ್ಮಿಕ, ಮಹತ್ವಗಳಿಂದ ಹೆಚ್ಚು ಆದರಣೀಯವೆನಿಸುತ್ತದೆ. ಇಲ್ಲಿಯ ಎಲ್ಲಾ ಪದ್ಯಗಳು 'ಚರಣಾಂಬುಜಕ್ಕೆ ಶರಣು' ಎಂಬ ಅಂಕಿತದಿಂದ ಕೊನೆಗೊಳ್ಳುವುದು. ಲಕ್ಕಣ್ಣ ದಂಡೇಶನು ತಾನು ಜೀವಿಸಿದ ಕಾಲವನ್ನು ತನ್ನ

ಗ್ರಂಥದಲ್ಲಿ ಎಲ್ಲಿಯೂ ನೇರವಾಗಿ ಸೂಚಿಸಿಲ್ಲ. "ಲಕ್ಕಣ್ಣ ದಂಡೇಶನು ತನ್ನ ಕೃತಿಯಲ್ಲಿ ತನ್ನ ಕಾಲಕ್ಕಿಂತ ಹಿಂದೆ ಆಗಿ ಹೋದ ಮತ್ತು ಸಮಕಾಲೀನ ಶರಣರನ್ನು ಕುರಿತು ಹೇಳಿದ್ದಾನೆ. ಅದರಲ್ಲಿ ಕೆಲವು ಶರಣರ ಬಗ್ಗೆ ಏಳು ಅಥವಾ ಎಂಟು ಪದ್ಯಗಳನ್ನು ಮೀಸಲಿರಿಸಿದ್ದರೆ, ಇತರೆ ಶರಣರ ಬಗ್ಗೆ ಒಂದು ಅಥವಾ ಎರಡು ಪದ್ಯಗಳಲ್ಲಿಯೇ ಹೇಳಿದ್ದಾನೆ. ಅವರೆಲ್ಲರನ್ನು ನೂತನ ಗಣಂಗಳು ಎಂದು ಹೆಸರಿಸಿದ್ದಾರೆ."[೧೯] ಪ್ರೌಢದೇವರಾಯನ ದಂಡಾಧಿಕಾರಿಯಾದ ಲಕ್ಕಣ್ಣ ದಂಡೇಶನು ಇದುವರೆಗೂ ಯಾರು ಹೇಳಲಿಲ್ಲದ ೬೦೦ಕ್ಕೂ ಮಿಕ್ಕ ನೂತನ ಗಣವರರ ಹೆಸರು, ಕಾಯಕ ಹಾಗೂ ಸ್ಥಳಾದಿಗಳನ್ನು ಉಲ್ಲೇಖಿಸಿರುವನು. ಆದರೆ ಅವನ ಸಮಕಾಲೀನರಾಗಿ ಬಾಳಿದರೆನ್ನಲಾದ ನೂರೊಂದು ವಿರಕ್ತರ ಬಗ್ಗೆ ಎಲ್ಲಿಯ ಪ್ರಸ್ತಾಪ ಮಾಡದೆ ಹೋದದ್ದು ಆಶ್ಚರ್ಯಕರ ಸಂಗತಿ ಎನ್ನಬೇಕು. ಲಕ್ಕಣ್ಣ ದಂಡೇಶನು ತನ್ನ ಕಾವ್ಯದಲ್ಲಿ ನೂರೊಂದು ವಿರಕ್ತರ ಬಗ್ಗೆ ಪ್ರಸ್ತಾಪ ಮಾಡಲಿಲ್ಲದಕ್ಕೆ ಅನೇಕ ರೀತಿಯ ಊಹಾತ್ಮಕ ಸಂಗತಿಗಳನ್ನು ಡಾ.ಶಿವಾನಂದ ವಿರಕ್ತಮಠರವರು ಈ ರೀತಿ ನೀಡುವರು.

೧. ಲಕ್ಕಣ್ಣ ದಂಡೇಶನು ನೂತನ ಶರಣರ ಚರಿತ್ರೆಯನ್ನು ಸಂಗ್ರಹಿಸುವುದಷ್ಟೇ ತನ್ನ ಪ್ರಮುಖ ಉದ್ದೇಶವೆಂದು ತಿಳಿದು ಇವರನ್ನು ಹೆಸರಿಸದೇ ಹೋಗಿರಬೇಕು.

೨. ಬೇರೆ ಬೇರೆ ಪ್ರಾಂತೀಯ ವಲಯಗಳ ರಾಜ್ಯಾಡಳಿತದಲ್ಲಿ ಆಸಕ್ತನಾಗಿದ್ದ ಲಕ್ಕಣ್ಣ ಆಕರ್ಣಾಂತವಾಗಿ ಕೇಳಿಬಂದ ಶರಣರನ್ನಷ್ಟೇ ಉಲ್ಲೇಖಿಸಿ ತನಗೆ ಸಂಪರ್ಕ ಬಾರದೆ ಹೋದ ನಿಮಿತ್ತ ಇವರ ಚರಿತ್ರೆಯನ್ನು ಬಿಟ್ಟುಕೊಟ್ಟಿರಬೇಕು.

೩. ವೀರಶೈವ ಸಿದ್ಧಾಂತ ತಂತ್ರದ ನಿರ್ಣಯ ಭರದಿಂದ ಸಾಗಿದ್ದ ಕಾಲದಲ್ಲೇ ಕೆಲವು ಅನುಭಾವಿಗಳು ಬಸವಾದಿ ಶಿವಶರಣರ ವಚನ ಸೂತ್ರಗಳ ಪರಿಶ್ರಮದ ಮೇಲೆ ನೂರೊಂದು ಸ್ಥಳಗಳನ್ನು ವಿನೂತವಾಗಿ ಅಳವಡಿಸಿ ಹೇಳಿದರು. ಷಟ್‌ಸ್ಥಲಾಂತರ್ಗತವಾದ 'ನೂರೊಂದು ಸ್ಥಲ'ಗಳನ್ನು ಅರಿತು ಆಚರಿಸಿ ನಿಜೈಕ್ಯರಾದ ಮಹಾತ್ಮರೇ ನೂರೊಂದು ವಿರತರು. ಈ ನೂರೊಂದು ಸ್ಥಲದ ನೆಲೆಗಂಡ ಈ ನೂರೊಂದು ವಿರತರು ತತ್ಕಾಲದಲ್ಲಿಯೇ ಬದುಕಿದ್ದರೂ ಸಹ, ಈ ಸ್ಥಲಕಟ್ಟಿಗೆ ಮಹತ್ವ ಕೊಟ್ಟ ನಂತರದ ಮಹನಿಯರು, ನೂರೊಂದು ಸ್ಥಲದ ಸಂಖ್ಯಾ ಹಿನ್ನೆಲೆಯಲ್ಲಿ ನೂರೊಂದು ವಿರಕ್ತರ ವ್ಯಕ್ತಿ ಸಂಖ್ಯೆಯನ್ನು ನಿಯೋಜಿಸಿದಂತೆ ತೋರುತ್ತದೆ. ನೂರೊಂದು ಸ್ಥಲಗಳಿಗೆ ಮೂರ್ತ ಸ್ವರೂಪ ಕೊಡುವ ಕಾರ್ಯವೇನೋ ಲಕ್ಕಣ್ಣ ದಂಡೇಶನ ಕಾಲಕ್ಕೆ ನಡೆಯಿತು. ಆದರೆ ನೂರೊಂದು ವಿರತರ ಸಂಖ್ಯಾ ನಿರ್ಣಯವಾದುದು ಲಕ್ಕಣ್ಣ ದಂಡೇಶನ ಅನಂತರದಲ್ಲಿ. ಹೀಗಾಗಿ ಲಕ್ಕಣ್ಣ ದಂಡೇಶ ನೂರೊಂದು ವಿರತರ ಬಗೆಗೆ ಪ್ರಸ್ತಾಪ ಮಾಡದೇ ಹೋಗಿರಬೇಕು."[೨೦]

ಲಕ್ಕಣ್ಣ ದಂಡೇಶನು 'ನೂರೊಂದು ವಿರಕ್ತರ' ಬಗ್ಗೆ ತನ್ನ ಗ್ರಂಥದಲ್ಲಿ ಸಂಪೂರ್ಣವಾಗಿ ಅವರನ್ನು ಕೈಬಿಟ್ಟಿಲ್ಲ. ಈ ಕೃತಿಯಲ್ಲಿ ಕಂಡುಬರುವ ಕೆಲವೊಂದು ಪದ್ಯಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅಲ್ಲಿ ಕೆಲವು ವಿರಕ್ತರ ಹೆಸರು ಕಂಡುಬರಲು ಸಾಧ್ಯವಿದೆ.

"ಹದಿನಾಡೊಳೆಸೆವ ಬೊಮ್ಮನಹಳ್ಳಿಯಲ್ಲಿರ್ಪ
ಮದನಹರಶರಣ ವೀರಣ್ಣಯ್ಯ"೨೧

ಈ ಮೇಲಿನ ಚರಣದಲ್ಲಿ ಮುಖ್ಯವಾಗಿ ನೂರೊಂದು ವಿರಕ್ತರಲ್ಲಿ ಒಬ್ಬನಾದ ವೀರಣ್ಣಯ್ಯ ಅಂದರೆ ಕರಸ್ಥಲದ ವೀರಣ್ಣೊಡೆಯನ ಹೆಸರು ಉಲ್ಲೇಖವಾಗಿದೆ. ಅಲ್ಲದೆ ವಿರಕ್ತರ ಬಗ್ಗೆ ಉಲ್ಲೇಖಗೊಂಡ ಕೆಲವೊಂದು ಕೃತಿಗಳಲ್ಲಿ ವೀರಣ್ಣಯ್ಯನ ಹೆಸರು ಪ್ರಸ್ತಾಪಿಸಿದೆ. ಹಾಗೂ ಈ ವೀರಣ್ಣಯ್ಯನು ಪ್ರೌಢದೇವರಾಯನ ಅಳಿಯನಾಗಿದ್ದನೆಂಬ ವಿಷಯ ಮೋದಿರುದ್ರನ ಕಾವ್ಯದಲ್ಲಿ ಕಂಡುಬರುವುದು. ಹೀಗಾಗಿ ಲಕ್ಕಣ್ಣ ದಂಡೇಶನು ತನ್ನ ಕಾಲದಲ್ಲಿ ಬದುಕಿದ ಪವಾಡ ಪುರುಷರೆಂದು ಮೆರೆದ ನೂರೊಂದು ವಿರಕ್ತರಲ್ಲಿ ಒಬ್ಬನ ಬಗ್ಗೆಯಾದರೂ ಹೇಳಿದ್ದಾನೆ.

ಲಕ್ಕಣ್ಣ ದಂಡೇಶನು ತನ್ನ 'ಶಿವತತ್ವಚಿಂತಾಮಣಿ'ಯಲ್ಲಿ ಭಕ್ತಿಭಾವದಿಂದ ಚರಲಿಂಗ ಮೂರ್ತಿಗಳ ಬಗೆಗೆ ಉಲ್ಲೇಖಿಸಿದ್ದಾನೆ. ಈ ಚರಲಿಂಗ ಮೂರ್ತಿಗಳು ಆಧ್ಯಾತ್ಮಿಕ ಪವಾಡ ಪುರುಷರು ಹೀಗಾಗಿ ಈ ಚರಲಿಂಗ ಮೂರ್ತಿಗಳೇ ನೂರೊಂದು ವಿರಕ್ತರಾಗಿರಬೇಕೆಂದು ಕೆಲವೊಂದು ಪದ್ಯಗಳಿಂದ ಧ್ವನಿತವಾಗುತ್ತದೆ.

"ಬಿಟ್ಟ ಜಡೆಗಳ ದಿಗಂಬರದ ಶಿವಲಿಂಗದೊಳು
ನಟ್ಟದೃಷ್ಟಿಯ ಕರಣ ತತಿಯ ನಿಶ್ಚಲತೆಗಳ
ಘಟ್ಟಿಗೊಂಡವಿರಳ ಸಮಾಧಿಯ ಪರಾನಂದರಸವೊಸರುವಶ್ರುಜಲದ
ದಟ್ಟಯಿಸಿ ನೆಗೆವ ಪುಳಕದ ಭಸಿತ ಲೇಪನದ
ಪುಟ್ಟುವ ಸ್ವೇದದೊಜಿತೆಯ ವಿಜಯಕಲ್ಯಾಣ
ಪಟ್ಟಣದೊಳೊಲಿದಿರ್ಪ ಚರಲಿಂಗ ಮೂರ್ತಿಗಳ ಚರಣಾಂಬುಜಕ್ಕೆ ಶರಣು"೨೨

ಲಕ್ಕಣ್ಣ ದಂಡೇಶನು ೩೮ನೇ ಸಂಧಿಯಾದ 'ನೂತನ ಗಣಂಗಳ ಕಥೆ'ಯಲ್ಲಿ ವಿಜಯನಗರವನ್ನು 'ವಿಜಯಕಲ್ಯಾಣ' ಎಂಬ ಹೆಸರಿನಿಂದ ಉಲ್ಲೇಖಿಸಿದ್ದಾನೆ. ಇಲ್ಲಿ ಬರುವ ಕೆಲವೊಂದು ಚರಲಿಂಗಿಗಳ ವರ್ಣನೆಯಲ್ಲಿ ಅವರ ಲಕ್ಷಣಕ್ಕೂ ನೂರೊಂದು ವಿರಕ್ತರ ಲಕ್ಷಣಕ್ಕೂ ಯಾವುದೇ ರೀತಿಯ ವ್ಯತ್ಯಾಸ ಕಂಡುಬರಲಾರದು. 'ವಿರಕ್ತರೂ ಶೂನ್ಯ ಸಿಂಹಾಸನಾಧಿಪತಿಗಳೆಂಬುದು ರೂಢವಾಗಿರುವ ವಿಷಯ, ಅದರಂತೆ ಈ ಶಿವತತ್ವ ಚಿಂತಾಮಣಿ ಕೃತಿಯಲ್ಲಿ ಚರಲಿಂಗ ಮೂರ್ತಿಗಳೆನಿಸಿದವರು ವಿಜಯ ಕಲ್ಯಾಣದ ಒಂದೊಂದು ಸಿಂಹಾಸನಕ್ಕೆ ರೂಢರಾಗಿದ್ದಾರೆ ಎಂಬಂತಹ ಮಾಹಿತಿ ದೊರೆಯುತ್ತದೆ.

ಮೋದಿಯ ರುದ್ರ ರಚಿಸಿದ ವಿರಕ್ತರ ಕಾವ್ಯದಲ್ಲಿ ಬರುವ ನೂರೊಂದು ವಿರಕ್ತರ ಹೆಸರಿನ ಕೊನೆಯಲ್ಲಿ 'ಶಾಂತ' ಎಂಬ ಪದದಿಂದ ಕೊನೆಗೊಳ್ಳುವುದು. ಈ 'ಶಾಂತ' ಎಂಬ ಅಂಕಿತಕ್ಕೆ ಹಲವಾರು ಆಧುನಿಕ ಚಿಂತಕರು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಹೇಳಿದ್ದಾರೆ. ಆದರೆ ಲಕ್ಕಣ್ಣ ದಂಡೇಶ ಈ ಚರಲಿಂಗ ಮೂರ್ತಿಗಳ ಲಕ್ಷಣವನ್ನು ತಿಳಿಸುವ ಸಂದರ್ಭದಲ್ಲಿ ಈ ಕೆಳಗಿನಂತೆ ತಿಳಿಸುತ್ತಾನೆ.

"ನೆರೆದ ಪುಣ್ಯದ ರಾಸಿಗಳೊ ವಿಮಲ ಸುಜ್ಞಾನ
ತರಣಿಯ ಸಹಸ್ರಕಿರಣಾವಳಿಯೊ ಶಂಕರನ
ವರಮಹಿಮೆಗಳೊ ಸಕಲ ತತ್ತ್ವಂಗಳವಯ ವಂಗಳೊ ಶಿವನ ಶಾಂತರಸದ
ಹರವರಿಯೊ ಶಿವಕಳೆಯ ಬಳಗವೋ ಶಿವ ಸುಖದ
ಶರಧಿ ತೆರಮನಗೀತೋ ಏನೆ ವಿಜಯ ಕಲ್ಯಾಣ
ಪುರದ ಸಿಂಹಾಸನದ ಚರಲಿಂಗಮೂರ್ತಿಗಳ ಚರಣಾಂಬುಜಕ್ಕೆ ಶರಣು"[೨೩]

ಈ ಮೇಲಿನ ಪದ್ಯದಲ್ಲಿ ಶಾಂತರಸದಂತಿದ್ದರೆಂದು ಉಲ್ಲೇಖವಾಗಿರುವವರು ಈ ನೂರೊಂದು ವಿರಕ್ತರೆ ಆಗಿರಬೇಕು. ತರುವಾಯ ಬಂದ ಕವಿಗಳು ಚರಲಿಂಗ ಮೂರ್ತಿಗಳನ್ನೇ ನೂರೊಂದು ವಿರಕ್ತರೆಂದು ನಿರ್ಣಯಿಸಿದಲ್ಲಿ ಖಚಿತತೆಯಿದೆ. ಲಕ್ಕಣ್ಣ ದಂಡೇಶನ ಕಾಲದಲ್ಲಿ ವಿರಕ್ತರ ಸಮಗ್ರ ಮಾಹಿತಿ ದೊರೆಯಲಿಕ್ಕಿಲ್ಲ. ಹೀಗಾಗಿ ಅವನ ನಂತರ ಬಂದ ಕವಿಗಳು ಈ ನೂರೊಂದು ವಿರಕ್ತರ ಬಗ್ಗೆ ಒಂದು ಖಚಿತವಾದ ಪರಿಕಲ್ಪನೆ ನೀಡಿದ್ದಾರೆ.

"ಪ್ರೌಢದೇವರಾಯನ ಕಾಲದಲ್ಲಿ ವಿಜಯ ಕಲ್ಯಾಣದ ರಥಬೀದಿಗಳಲ್ಲಿ, ಪಂಪಾಕ್ಷೇತ್ರದಲ್ಲಿ, ಬೆಟ್ಟ ಗುಡ್ಡ ಗುಹೆಗಳಲ್ಲಿ, ಗುಡಿಗುಂಡಾರಗಳಲ್ಲಿ ಅನೇಕ ಕಡೆ ಈ ಚರಲಿಂಗಮೂರ್ತಿಗಳು ವಾಸವಾಗಿದ್ದರೆಂಬುದಕ್ಕೆ ಲಕ್ಕಣ್ಣನ ಶಿವತತ್ವ ಚಿಂತಾಮಣಿಯ ವರ್ಣನಾ ಪದ್ಯಗಳಲ್ಲಿ ಕಂಡುಬರುತ್ತದೆ."[೨೪] ಮಲ್ಯವಂತ ಪರ್ವತ, ಅಂಜನಾದ್ರಿ ಬೆಟ್ಟ, ಮಾತಂಗ ಪರ್ವತ ಹೀಗೆ ಮುಂತಾದ ಕಡೆ ನೆಲೆನಿಂತ ಚರಲಿಂಗ ಮೂರ್ತಿಗಳು, ದಿಗಂಬರಾಗಿದ್ದು, ಜಟಾಧಾರಿಗಳಾಗಿ ವಿಲಕ್ಷಣ ಸ್ವಭಾವದವಾಗಿರುವರು. ಹೀಗಾಗಿ ಈ ಚರಲಿಂಗ ಮೂರ್ತಿಗಳೇ ನೂರೊಂದು ವಿರಕ್ತರಾಗಿರಲು ಸಾಧ್ಯತೆಗಳಿವೆ.

೫. ಭೈರವೇಶ್ವರ ಕಾವ್ಯ

'ಭೈರವೇಶ್ವರ ಕಾವ್ಯ'ವು ಐದು ಸಂಧಿಗಳಲ್ಲಿ ಹಬ್ಬಿರುವ ೧೨೭ ಸಾಂಗತ್ಯ ಪದ್ಯಗಳ ಪುಟ್ಟ ಕಾವ್ಯ. ಕಿಕ್ಕೇರಿಯರಾಧ್ಯ ನಂಜುಂಡನೆಂಬುವನು ಕ್ರಿ.ಶ. ೧೫೫೦ರಲ್ಲಿ ಇದನ್ನು ರಚಿಸಿದನು. ಇದರಲ್ಲಿ ಮಲ್ಲಣಾರ್ಯನ ಸ್ತುತಿ ಇರುವುದರಿಂದ 'ವೀರಶೈವಾಮೃತ ಪುರಾಣ'ದ ಅನಂತರ

ಇದು ರಚನೆಯಾಗಿದೆ. ವೀರಶೈವ ಪುರಾಣವೊಂದನ್ನು ಸಾಂಗತ್ಯದಲ್ಲಿ ಬರೆದ ವೀರಶೈವ ಕವಿಗಳಲ್ಲಿ ಈತ ಅಗ್ರಗಣ್ಯ. ಈತನ ಸ್ಥಳ ಕಿಕ್ಕೇರಿಯಾದ್ದರಿಂದ ಈತನಿಗೆ ಕಿಕ್ಕೇರಿಯರಾಧ್ಯ ನಂಜುಂಡ ಎಂಬ ಹೆಸರು ಬಂದಿದೆ.

ತನ್ನ ಕಾವ್ಯವು 'ಭಕ್ತಿಯ ತಾಣ, ಸನ್ಮುಕ್ತಿಯ ಸದನ, ವಿರಕ್ತಿಯ ಸೀಮೆ' ಇತ್ಯಾದಿಯಾಗಿ ಕವಿ ಹೇಳಿಕೊಂಡಿದ್ದಾನೆ. ಕಾವ್ಯ ದೃಷ್ಟಿಗಿಂತಲೂ ಪುರಾಣದಿಂದ ಇದು ಮಹತ್ವವನ್ನು ಪಡೆದಿದೆ.

"ಇದರಲ್ಲಿ ಅರವತ್ತ್ಮೂರು ಪುರಾತನರು ಶೈವದಲ್ಲಿ ಮುಕ್ತಿಯಂ ಪಡೆದರ್, ದಶಗಣ, ತೇರಸಗಣ, ಷೋಡಂಗಣ, ಪ್ರಮಥಗಣ, ರುದ್ರಗಣ, ಅಮರಗಣ, ಭಕ್ತಿಗಣ, ಮೊದಲಾದ ೭೭೦ ಪುರಾತನರುಂ, ನೂತನ ಪುರಾತನರುಂ '೧೦೧' ವಿರಕ್ತರು ವೀರಶೈವದಲ್ಲಿ ಶಿವನ ಕೃಪಾ ಪ್ರಸನ್ನತ್ವಂ ಪಡೆದರ್ ಎಂದು ಹೇಳಲಾಗಿದೆ. ಮಲ್ಲಣಾರ್ಯನು ಲಕ್ಕಣ್ಣ ದಂಡೇಶನು ಹೇಳಿದ ನೂತನ ಗಣಂಗಳ ಕಥೆಗಳನ್ನಲ್ಲದೆ ತನ್ನ ಹಿರಿಯ ಸಮಕಾಲೀನರಾದ ಶರಣರನ್ನು ಕೇವಲ 'ವರ್ತಮಾನದ ಶರಣ'ರೆಂದು ಸಾಮಾನ್ಯವಾಗಿ ಕರೆದುಕೊಂಡು ಹೋಗಿದ್ದಾರೆ. ನಂಜುಂಡನ ಕಾಲಕ್ಕಾಗಲೇ '೧೦೧' ಗಣವೊಂದು ಹೊಸದಾಗಿ ಸೃಷ್ಟಿಯಾಗಿರುವುದು ಸ್ಪಷ್ಟ. ಈವರೆಗಿನ ಉಲ್ಲೇಖಗಳಲ್ಲಿ '೧೦೧' ವಿರತರು ಎಂಬ ಪದಪ್ರಯೋಗ ಮೊದಲಾಗಿರುವುದು ಭೈರವೇಶ್ವರ ಕಾವ್ಯದಲ್ಲಿಯೇ. ಈ ಹಿನ್ನೆಲೆಯಲ್ಲಿಯೇ ಕ್ರಿ.ಶ. ೧೫೦೦-೧೫೫೦ರ ನಡುವಣ ಗಡುವಿನಲ್ಲಿ ಈ 'ನೂರೊಂದು'ರ ಸಂಖ್ಯಾ ನಿರ್ಣಯವಾದಂತಿದೆ."[೨೫]

೬. ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ

ಈ ಕಾವ್ಯವನ್ನು ಕ್ರಿ.ಶ. ೧೬೭೨ರಲ್ಲಿ ಶಾಂತಲಿಂಗದೇಶಿಕರು ರಚಿಸಿದರು. ಈ ಕಾವ್ಯ ಭೈರವೇಶ್ವರ ಕಾವ್ಯೋಕ್ತ ಕಥೆಗಳನ್ನು ವಿವರಿಸುವ ಒಂದು ಮಹಾಕೃತಿಯಾಗಿದೆ. ಇದೊಂದು ಶೈವ-ವೀರಶೈವ ಬೃಹತ್ ಕಥಾಕೋಶ. ಜಕ್ಕಣ್ಣ ಚಾಮರಸಾದಿಗಳೆಂಬ ಮುಕುಂದ ಪೆದ್ದಿ ವೃಂದಾಚಾರ್ಯರ ಸೋಲನ್ನು ಕುರಿತು ಒಂದು ಕಥೆಯೂ ಸೇರಿದೆ. ಇದಕ್ಕೆ ಮೂಲ 'ಪ್ರೌಢದೇವರಾಯನ ಕಾವ್ಯವೇ' ಆಗಿದ್ದರೂ 'ಕಥಾಸೂತ್ರ ರತ್ನಾಕರದಲ್ಲಿ ಮಾಡಿದ ಪ್ರಸ್ತಾಪವಿಂತಿದೆ'. "ಪ್ರಭುದೇವರು ನಿರೂಪಿಸಿದ ವಚನಗಳಿಗೆ ಸೂತ್ರ ಸ್ಥಲವಿಟ್ಟು ಅರ್ಥ ಪದ್ಧತಿಯ ವ್ಯಾಖ್ಯಾನವಂ ಮಾಡಿ ಜಕ್ಕಣ್ಣ ದಂಡೇಶ ಮಂತ್ರಿಯು, ಕಲ್ಲುಮಠದ ಪ್ರಭುದೇವಾಚಾರ್ಯರು ಚಾಮರಸಯ್ಯನೆಂಬ ಆರಾಧ್ಯರು, ಕರಸ್ಥಲದನಾಗಿದೇವರು, ವೀರಣ್ಣೊಡೆಯರು ಮುಖ್ಯವಾದ ನೂರೊಂದು ವಿರಕ್ತರು ಭಕ್ತರು ಸಹವಾಗಿ ಏಕೋತ್ತರ ಶತಸ್ಥಲವಂ ಪುಷ್ಪಕದೊಳಗಿಟ್ಟು ಸರ್ವ ಸಂಭ್ರಮದಿಂದ ರಾತ್ರಿಯಲ್ಲಿ ಮೆರವಣಿಗೆಯಂ ಮಾಡಲು" ಇಲ್ಲಿ ಪ್ರೌಢದೇವರಾಯನ ಕಾವ್ಯದಲ್ಲಿ ಭಕ್ತನೆಂದು ಹೇಳಿರುವ ಮತ್ತು ಚೆನ್ನಬಸವ ಪುರಾಣಗಳಲ್ಲಿ ಉಕ್ತವಾಗದಿರುವ ಚಾಮರಸನ್ನು ಕೂಡ ನೂರೊಂದು

ವಿರಕ್ತನೆಂದು ವಿಶ್ಲೇಷಿಸಿ ಹೇಳಿರುವುದು ಗಮನಾರ್ಹವಾಗಿದೆ."[೨೬] ಆದರೆ ಡಾ.ಆರ್.ಸಿ. ಹಿರೇಮಠರವರು ಚಾಮರಸನನ್ನು ವಿರಕ್ತರ ಕೊಂಡಿಯಿಂದ ಕಳಚುವ ಪ್ರಯತ್ನವನ್ನು ಮಾಡಿ, ಇವರು ಚಾಮರಸಾದಿಗಳನ್ನು ಶಿವಭಕ್ತ ತಲೆಯೆಂದು ಗುರುತಿಸಿದ್ದಾರೆ.

೭. ಸ್ವರ ಏಕೋತ್ತರ ಶತಸ್ಥಲ ಟೀಕು

"ಏಕೋತ್ತರ ಶತಸ್ಥಲಕ್ಕೆ ಬರೆದ ಟೀಕುಗಳು ವಿಫಲವಾಗಿದೆ. ಒಂದು ಟೀಕೆಯಲ್ಲಿ ಒಟ್ಟು ಶರಣರನ್ನು ಆದ್ಯರು, ವೇದ್ಯರು, ಸಾಧ್ಯರು ಎಂದು ಮೂರು ಭಾಗ ಮಾಡಿದೆ. ಬಸವಣ್ಣ, ಚೆನ್ನಬಸವಣ್ಣ ಮೊದಲಾದ ಪೂರ್ವ ಪುರಾತನರು ಆದ್ಯಗಣಂಗಳೆನಿಸುವರು. ವೇದ್ಯರೆಂದರೆ ಕೋಲಶಾಂತಯ್ಯ, ಕುದುರೆಶಾಂತಯ್ಯ, ಮಂಚದ ಶಾಂತಯ್ಯ ಮೊದಲಾದವರು. ಚಿನ್ನ ಬಣ್ಣದ ಹಾಂಗೆ ತಮ್ಮ ವಸ್ತುವಿಗೂ ತಮಗೂ ಭೇದವಿಲ್ಲದೆ ನೂರೊಂದು ಸ್ಥಳ-ಕುಳ ಆಚರಣೆಯ ಆಚರಿಸುವಂತ ನೂರೊಂದು ವಿರಕ್ತರು. ಸಾದ್ಯರೆಂದೊಡೆ ಗುಮ್ಮಳಾಪುರದ ಸಿದ್ಧಲಿಂಗ ಸ್ವಾಮಿಗಳು, ನಂದಿಕೇಶ್ವರಸ್ವಾಮಿಗಳು ಚೆನ್ನಂಜೇ ಸ್ವಾಮಿಗಳು. ಕೊನೆಯಲ್ಲಿ ಹೇಳಿದ ಚೆನ್ನಂಜೇದೇವನನ್ನು ಸಂಪಾದನೆಯ ಚೆನ್ನಂಜೇದೇವನೆಂದು ನಂಬಿದರೆ ಈ ಪ್ರತಿ ರಚನೆಯಾದ ಕಾಲ ಕ್ರಿ.ಶ. ೧೫೩೦ರಿಂದ ಈಚೆಗೆ. ಈ ಕಾಲಕ್ಕೆ ನೂರೊಂದು ಸ್ಥಳಕುಳದ ಸಂಬಂಧ ನೂರೊಂದು ವಿರಕ್ತರೊಡನೆ ಸೇರಿ ಪ್ರಯೋಗವಾಗುತ್ತಿತ್ತು. ಬಹುಶಃ ಇಲ್ಲಿನ ಹೆಸರುಗಳನ್ನು ಆಧರಿಸಿ ಅವಕ್ಕೊಂದು ಸೂತ್ರ ಕಲ್ಪಿಸಿ, ಮೋದಿಯ ರುದ್ರನಿಗೆ ಮಳೆಯ ಸ್ವಾಮಿಯು ನೂರೊಂದು ವಿರಕ್ತರ ಚರಿತ್ರೆ ಬರೆಯಬೇಕೆಂದು ಪ್ರೇರೆಪಿಸಿದಂತಿದೆ."[೨೭]

೮. ನಿಜಶರಣನ ತ್ರಿವಿಧಿ

ಬೊಕ್ಕಪ್ಪನಿಂದ ರಚನೆಯಾದ ಈ ಕೃತಿ ಅತ್ಯಂತ ಪ್ರಮುಖವಾದದ್ದು. ಇಲ್ಲಿ ವಿರಕ್ತರನ್ನು ಭಕ್ತಿಭಾವದಿಂದ ಸ್ಮರಿಸಲಾಗಿದೆ. ಇದರ ಅಂತ್ಯದಲ್ಲಿ ಒಂದು ವಚನ ಹೀಗಿದೆ. ಎಲ್ಲ ಗಣಂಗಳು ಮೇಲಾಗಿ ರಾಮಪುರದ ಬೊಕ್ಕ ಕಡೆಯಾಗಿ ನಿಜಶರಣನ ತ್ರಿವಿಧಿಯನ್ನು ನಿರೂಪಿಸಿದನು. ಇದರಿಂದ ರಾಮಪುರದ ಬೊಕ್ಕ ಇಲ್ಲವೇ ಬೊಕ್ಕಪ್ಪ ಇದರ ಕರ್ತೃ ಎಂದು ತಿಳಿದುಬರುತ್ತದೆ. ಇವನ ಕಾಲ ೧೭ನೆಯ ಶತಮಾನ. 'ನಿಜಶರಣನ ತ್ರಿವಿಧಿ'ಯ ಆರಂಭದಲ್ಲಿ ಕವಿ ನೂರೊಂದು ವಿರತರ ಬಗೆಗಿನ ತನ್ನ ಭಕ್ತಿ ಗೌರವವನ್ನು ಈ ಕೆಳಗಿನಂತೆ ಸಲ್ಲಿಸಿದ್ದಾನೆ.

ನೂರೊಂದು ವಿರತರ ಪಾರೀಕ ನಾನಯ್ಯ
ಪಾರೆಯವ ತಿರುಗಿ ಪವಳ ಮಂಟಪದೊಳಗೆ
ದ್ವಾರ ಕಾಯ್ದಿಹೇನೂ ನಿಜಶರಣ
ಪರಮ ವಿರಕ್ತರ ಚರಣವ ಪಿಡಿಕೊಂಡು

ಬರೆಹವ ಕಲಿತು ಅನುಭಾವ ಮಾಡುವರ
ನೆರೆದು ಸುಖಿಯಾದೆ ನಿಜಶರಣ"[೨೮]

೯. ರಾಘವಾಂಕ ಚರಿತ್ರೆ

"ಸಿದ್ಧನಂಜೇಶ ತನ್ನ 'ರಾಘವಾಂಕ ಚರಿತೆ'ಯಲ್ಲಿ (ಕ್ರಿ.ಶ. ೧೫೫೦) ಕೆಲವರ ಹೆಸರುಗಳನ್ನು ಹೇಳಿ 'ಮೊದಲಹ ವಿರಕ್ತರ ಕುಲ' ಎಂದಿರುವಲ್ಲಿ ಇವರ ಸಂಖ್ಯೆ 'ನೂರೊಂದು' ಎಂಬುದನ್ನು ಸೂಚಿಸಿದ್ದಾನೆ. ಅಸಂಖ್ಯಾತರಾದ ತೊರಸರ, ಷೋಡಶರ, ದಶಕರ, ಅರವತ್ತು ಮೂವರನ್ನು ಕೀರ್ತಿಸಿಯಾದ ಮೇಲೆ

ಕರತಳದ ನಾಗಿದೇವರು ವೀರಣಾಚಾರ್ಯ
ವರಮಹಾ ನಿರ್ವಾಣಿ ಬೋಳೇಶ ಬತ್ತಲೇ
ಶ್ವರ ಮಕ್ಕಳಾಟಿಕಂ ಹೇಟಿಕಂ ಮಿಡಿವಿಲ್ಲ ಮೊದಲಹ ವಿರಕ್ತಕುಲವ ।
ಹರುಷದಿಂ ಭಜಿಸಿ ಕೀರ್ತ್ಯಂಗನೆಯ ತೋಳೂಳೋರ
ಗಿರುವ ಪ್ರೌಢನರೇಂದ್ರ ನುರು ದಂಡನಾಯಕಂ

ಸಿದ್ಧನಂಜೇಶನು ಇಲ್ಲಿ ೬ ಜನ ವಿರಕ್ತರನ್ನು ಹೆಸರಿಸಿ ಲಕ್ಕಣ್ಣನನ್ನು ಸ್ತುತಿಸಿದ್ದಾನೆ. ಪ್ರೌಢದೇವರಾಯನನ್ನು ಇಲ್ಲಿ ಉಲ್ಲೇಖಿಸಿರುವುದರಿಂದ ಇವರೆಲ್ಲರೂ ಸಮಕಾಲೀನರೆಂಬ ಒಟ್ಟು ಅಭಿಪ್ರಾಯವನ್ನು ಸಿದ್ಧ ನಂಜೇಶ ಈ ಪದ್ಯದಲ್ಲಿ ಸೂಚಿಸಿದ್ದಾನೆ. 'ವೀರಶೈವಾಮೃತ ಮಹಾಪುರಾಣ'ದಲ್ಲಿ ಹೇಳಿದ 'ವರ್ತಮಾನ ಶರಣ'ರನ್ನು ಸಿದ್ಧನಂಜೇಶ ಉಲ್ಲೇಖಿಸಿರುವಲ್ಲದೆ ಅಲ್ಲಿಂದ ಮುಂದಿನ ತಲೆಮಾರಿನ ಶರಣರನ್ನು ಇವನು ಸಂಗ್ರಹಿಸಿದ್ದಾನೆ."[೨೯]

೧೦. ಕರಸ್ಥಲ ನಾಗಲಿಂಗನ ಚರಿತ್ರೆ

ಈ ಕಾವ್ಯವು ನೂರೊಂದು ವಿರಕ್ತರಲ್ಲಿ ಮೊದಲಿಗನಾದ ಕರಸ್ಥಲದ ನಾಗಲಿಂಗನ ಚರಿತ್ರೆಯನ್ನು ನಿರೂಪಿಸುತ್ತದೆ. ಕ್ರಿ.ಶ. ಸು.೧೬೫೦ ರಲ್ಲಿದ್ದ ರುದ್ರಕವಿಯು ಈ ಕಾವ್ಯದ ಕರ್ತೃ. ಕರಸ್ಥಲದ ವೀರಣ್ಣೊಡೆಯನ ಶಿಷ್ಯನಾದ ನಾಗಿದೇವ ಮಹಾನುಭಾವಿ ಹಾಗೂ ದಿವ್ಯ ಪವಾಡ ಪುರುಷನಾಗಿದ್ದನು. ಈತನ ಬಗ್ಗೆ ಹಲವು ಕಾವ್ಯಗಳಲ್ಲಿ ಪ್ರಸ್ತಾಪ ಬಂದಿದೆ. ಶ್ರೀ ರಂಗಪಟ್ಟಣದ ಸಮೀಪವಿರುವ ಬೊಮ್ಮುರು ಗ್ರಾಮದವನು. ಚಾಮರಾಜನಗರ ಜಿಲ್ಲೆಯ ಗುಂಡ್ಲು ಪೇಟೆ ತಾಲ್ಲೂಕಿನ ಮಂಚಳ್ಳಿಯಲ್ಲಿ ಆಧ್ಯಾತ್ಮಿಕ ಸಾಧನೆಗೈದು ಅಲ್ಲಿಯೇ ಐಕ್ಯನಾದನು. ಅಲ್ಲಿ ಕರಸ್ಥಲನಾಗಿದೇವನ ಬೆಟ್ಟವಿದ್ದು ಆತನ ಹೆಸರಿಗೆ ಒಂದು ಗುಹೆಯೂ ಇದೆ. ಭಕ್ತಾದಿಗಳು ಇಂದಿಗೂ ಅಲ್ಲಿಗೆ ಪೂಜೆ ಪುನಸ್ಕಾರ ಮಾಡುತ್ತಾರೆ. ಇವನ ಕಾಲ ಸುಮಾರು ಕ್ರಿ.ಶ. ೧೪೩೦ರಲ್ಲಿ ಜೀವಿಸಿದ್ದ. ಇದಕ್ಕೆ ಅನೇಕ ಕಾವ್ಯಗಳ ಆಧಾರ ದೊರೆಯುವುದು.

ರುದ್ರ ಕವಿಯು ಈ ಗ್ರಂಥವನ್ನು ದೇಶೀಯ ಮಟ್ಟುವಾದ ಸಾಂಗತ್ಯ ಛಂದಸ್ಸಿನಲ್ಲಿ ರಚಿಸಿದ್ದಾನೆ. ಆದರೆ ಸ್ತೌತ್ರ್ಯದ ವಚನ, ಕಂದಪದ್ಯಗಳು, ವೃತ್ತಗಳೂ ಈ ಕಾವ್ಯದಲ್ಲಿದೆ. ನಾಗಲಿಂಗನ ಬಗ್ಗೆ ಸಮಗ್ರ ಗ್ರಂಥವನ್ನು ಬರೆದು ಸಾಹಿತ್ಯಕ್ಕೆ ನೀಡಿರುವವನೆಂದರೆ ಈತನೊಬ್ಬನೇ. ಚೆನ್ನಬಸವ ಪುರಾಣವನ್ನು ಬರೆದ ವಿರೂಪಾಕ್ಷ ಪಂಡಿತನು ಸುಮಾರು ೩೦-೩೨ ಪದ್ಯಗಳಲ್ಲಿ ಈತನ ಕಥೆಯನ್ನು ಸಂಕ್ಷಿಪ್ತವಾಗಿ ನಿರೂಪಿಸಿರುವನು. ಈತನಿಗಿಂತ ಮತ್ತಷ್ಟು ವಿವರವಾಗಿ ಕ್ರಿಪೂ. ೧೭೩೭ರಲ್ಲಿದ್ದ ಮೋದಿ ರುದ್ರನು ತನ್ನ 'ವಿರಕ್ತರ ಕಾವ್ಯ'ದಲ್ಲಿ ಉಲ್ಲೇಖಿಸಿದ್ದಾನೆ.

ಕನ್ನಡ ನಾಡಿನ ಹದಿನೈದನೆಯ ಶತಮಾನದಲ್ಲಿ ಸಾಹಿತ್ಯದ ಬೆಳವಣಿಗೆಗೆ ಪ್ರೋತ್ಸಾಹ, ಮನ್ನಣೆಗಳು ದೊರೆತು ಅದು ಸಾಕಷ್ಟು ಪ್ರವರ್ಧಮಾನಕ್ಕೆ ಬಂದಿತು. ಪ್ರೌಢದೇವರಾಯನ ಕಾಲದಲ್ಲಿ ವೀರಶೈವ ಕವಿಗಳೇ ಅಧಿಕವಾಗಿ ಧರ್ಮಬೋಧಕ ಗ್ರಂಥಗಳನ್ನು ಬರೆದರು. ಅವುಗಳಲ್ಲಿ ಲಿಂಗಲೀಲಾ ವಿಲಾಸ, ಶಿವತತ್ವ ಚಿಂತಾಮಣಿ, ನಾಗಿದೇವನ ತ್ರಿವಿಧಿ, ಅನುಭವ ಸೂತ್ರ, ಶತಕತ್ರಯ, ಶಿವಯೋಗಾಂಗ ಭೂಷಣಾದಿ ಸಪ್ತಕಾವ್ಯಗಳು. ಇವೆ ಮೊದಲಾದ ಹಲವಾರು ಕಾವ್ಯಗಳು ಅಂದು ಪ್ರಸಿದ್ಧಿಗೆ ಬಂದವು.

"ರುದ್ರ ಕವಿಗಾದರೂ ನಾಗಲಿಂಗನೇ ಕಥಾನಾಯಕ, ಕಥಾವಸ್ತು ಕಿರಿದಾಗಿದ್ದರೂ ಅದನ್ನು ಹಿಗ್ಗಲಿಸಿ ಹಿರಿದಾದ ಕಾವ್ಯವೊಂದನ್ನು ರಚಿಸಬೇಕೆಂಬ ಆಸೆ ಆಕಾಂಕ್ಷೆ: ಆದುದರಿಂದ ವರ್ಣನೆ ಈ ಕಾವ್ಯದಲ್ಲಿ ಹೆಚ್ಚಾಗಿವೆ."[೩೦]

ಕರಸ್ಥಲದ ನಾಗಿದೇವನು ವಿರಕ್ತನಾಗುವ ಪ್ರಸಂಗವು ಚೆನ್ನಬಸವ ಪುರಾಣದಲ್ಲಿ ಒಂದು ರೀತಿ ಇದ್ದರೆ ನಾಗಿದೇವನ ಚರಿತ್ರೆಯಲ್ಲಿ ಮತ್ತೊಂದು ರೀತಿಯಲ್ಲಿದೆ. ಅಲ್ಲಿ ವ್ಯಾಭಿಚಾರ ವೆಸಗಿ ವಿರಕ್ತನಾದರೆ, ಇಲ್ಲಿ ರಾಜ ದಾನೀಶನು ತನ್ನ ಮಡದಿಗೆ ಒಂದು ರತ್ನದ ಹಾರವನ್ನು ಸಿದ್ಧಗೊಳಿಸಲು ನಾಗಲಿಂಗಯ್ಯನನ್ನು ಕರೆಸಿ ಹೇಳುವನು. ನಾಗಲಿಂಗನು ಒಪ್ಪಿ ಹಾರವನ್ನು ಸಿದ್ಧಗೊಳಿಸಿಕೊಂಡು ರಾಜನಿಗೆ ಒಪ್ಪಿಸಿದ. ಅವನನ್ನು ಕಂಡ ರಾಣಿ ಚಂದ್ರಿನಿಗೆ ಅವನ ಮೇಲೆ ಮೋಹವುಂಟಾಗುತ್ತದೆ. ರಾಜನಿಲ್ಲದ ಸಮಯವನ್ನು ಸಾಧಿಸಿ ರಾಣಿಯು ನಾಗಯ್ಯನನ್ನು ಕರೆಸಿ ತನ್ನ ಇಚ್ಛೆಯನ್ನು ವ್ಯಕ್ತಪಡಿಸಲು ಅದಕ್ಕೆ ಅವನು ಅವಳಿಗೆ ವಿವೇಕವನ್ನು ಬೋಧಿಸಿ ವಿರಕ್ತನಾಗುವನು. ಮುಂದೆ ನಾಗಯ್ಯನು ತನ್ನ ಸತಿ-ಸುತ್ತ ಬಂದು ಬಳಗವನ್ನು ತ್ಯಜಿಸಿ ಶಿವನಲ್ಲಿ ಧ್ಯಾನಸಕ್ತನಾಗುವನು. ಧ್ಯಾನಮಗ್ನನಾಗಿ ಕರಸ್ಥಲದಲ್ಲಿ ಹುದುಗಿರುವ ಲಿಂಗದೊಂದಿಗೆ ಸಂಭಾಷಿಸುತ್ತ ನೋಡುವವರಿಗೆ ಅರೆ ಹುಚ್ಚನಂತಿದ್ದನು. ಕೊನೆಗೆ ನಾಗಯ್ಯ ತನ್ನ ಗುರು ಶಾಂತ ವೀರಯ್ಯನ ಮನೆಗೆ ಹೋಗಿ ತಾನೊಬ್ಬ ದೇಶಿಕ, ಹುಚ್ಚನಾಗನೆಂದು ಹೇಳಿಕೊಳ್ಳುವನು. ವೀರಯ್ಯನಿಗೆ ಅವನಲ್ಲಿ ಗೌರವ ಭಾವನೆ ಮೂಡುತ್ತದೆ. ನಾಗಿದೇವನು ವೀರಯ್ಯನಿಗೆ ತನ್ನ ಪ್ರತಿಯೊಂದು ಲೀಲೆಯನ್ನು

ತೋರುವನು. ನದಿ ದಾಟಲು ತಮ್ಮಲ್ಲಿ ಕಾಸಿಲ್ಲದ ವೇಳೆ ಇಬ್ಬರೂ ನೀರಿಗಿಳಿಯಲು ನದಿಯು ಈ ಮಹಾಪುರುಷರಿಬ್ಬರಿಗೆ ದಾರಿಕೊಟ್ಟಿತು.

ಗುಮ್ಮಳಾಪುರದಲ್ಲಿ ಒಬ್ಬ ಸತಿಯ ಪತಿಯು ಕುಷ್ಠ ರೋಗದಿಂದ ನರುಳುತ್ತಿದ್ದನು. ಅವನನ್ನು ಬದುಕಿಸಿಕೊಡಬೇಕೆಂದು ಪ್ರಾರ್ಥಿಸುವಳು. ಗೋವಿನ ಹಾಲಿನಲ್ಲಿ ತನ್ನ ಮೂತ್ರವನ್ನು ಬೆರಸಿ ಅದನ್ನು ರೋಗಿಗೆ ಕೊಡಲು ಹೇಳಿ ಮುಂದೆ ಸಾಗುವನು. ಮೂತ್ರದಿಂದ ಬೆರೆತ ಹಾಲು ಪತಿಗೆ ಕೊಡಲು ಅವನ ರೋಗ ವಾಸಿಯಾಗುವುದು. ಮುಂದೆ ವಿದ್ಯಾನಗರಿಗೆ ಬಂದಾಗ ಅಲ್ಲಲ್ಲಿ ಕಲ್ಲು ಮಂಟಪಗಳಲ್ಲಿ ಸಾಧು ಸಂತರು ಸಭೆಗಳನ್ನು ಧರ್ಮಶಾಸ್ತ್ರ ಪಾರಾಯಣವನ್ನು ನಡೆಸುತ್ತಿದ್ದರು. ಪ್ರೌಢದೇವರಾಯನ ಗಜಶಾಲೆಯಿಂದ ಮದಗಜವೊಂದು ಬಂಧನದಿಂದ ತಪ್ಪಿಸಿಕೊಂಡು ದಾರಿಯಲ್ಲಿ ಎಲ್ಲರಿಗೂ ಭಯ ಹುಟ್ಟಿಸುತ್ತ ಸಾಗುತ್ತಿತ್ತು. ಮುಂದೆ ನಾಗಯ್ಯನನ್ನು ಕಂಡೊಡನೆಯೇ ಶಾಂತಗೊಂಡು ನಮಸ್ಕರಿಸಿ ತನ್ನ ಸೊಂಡಲಿನಿಂದ ಮೇಲಕ್ಕೆತ್ತಿ ಕೂರಿಸಿಕೊಂಡು ಹೊರಟಿತು. ಇದನ್ನು ಕಂಡು ಆಶ್ಚರ್ಯಗೊಂಡ ಜನ ನಾಗಯ್ಯನ ಮಹಿಮೆಯನ್ನು ನೋಡಿ ಭಕ್ತಿಯನ್ನು ತೋರಿದರು.

ವಿದ್ಯಾನಗರಿಯಲ್ಲಿ ಕರಸ್ಥಲದ ನಾಗಯ್ಯನು ಬರುವುದಕ್ಕಿಂತ ಮುಂಚೆ ರಾಜಧಾನಿಯಲ್ಲಿ ಹಲವು ಮಂದಿ ವಿರಕ್ತರಿದ್ದರೆಂಬುದಕ್ಕೆ ಈ ಕೆಳಗಿನ ಪದ್ಯದದಿಂದ ತಿಳಿದುಬರುತ್ತದೆ.

"ಕೊಳ್ಳಿಯ ಶಾಂತಯ್ಯ ಬೋಳೆಯ ನಿರ್ವಾಣಿ
ಕೇಳು ಮೀಣಿಯ ಪ್ರಭುದೇವ
ಪೇಳಿ ಪಾದಕೆ ಲಿಂಗತಾಳಿ ಪೂಜಿಪರು ನಿ
ಮ್ಮೋಳುಂಟಿಯೊಂದು ಕೇಳಿದರೆ ॥"[೨೧]

"ಪ್ರೌಢಭೂವರ ಈ ಮೇಲಣ ಮೂವರನ್ನು ಕರೆಯಿಸಿ ಕರಸ್ಥಲನಾಗಿದೇವನು ಕಾಲಲ್ಲಿ ಲಿಂಗಕಟ್ಟಿ ಪೂಜಿಸುವುದು ಸೂಕ್ತವೇ? ವೀರಶೈವರು ಲಿಂಗಧರಿಸುವ ಸ್ಥಾನಗಳಾವವು? ಇದು ನಿಮ್ಮಲುಂಟೆ ಎಂದು ಕೇಳಿದ ಸಂದರ್ಭವಿದು. ಅಂತೂ ಇಷ್ಟೆಲ್ಲ ವಿರಕ್ತ ಮೂರ್ತಿಗಳು ಈ ದೊರೆಯ ಕಾಲದಲ್ಲಿ, ಅವನ ರಾಜಧಾನಿಯಲ್ಲಿ ಉಪಸ್ಥಿತರಿದ್ದರೆಂಬುದು ಇದರಿಂದ ಖಚಿತವಾಗುತ್ತದೆ."[೨೨]

ಪ್ರೌಢದೇವರಾಯನು ನೂರೊಂದು ವಿರಕ್ತರೊಡನೆ ಆಸ್ಥಾನದಲ್ಲಿ ಹರ್ಷದಿಂದಿರಲು ಕೆಲವು ಕುಹಕಿಗಳು ರಾಜನಿಗೆ ವಿರಕ್ತರ ಬಗ್ಗೆ ಅಪಪ್ರಚಾರ ಮಾಡುವರು. ನಿಮ್ಮ ಪ್ರಗತಿಗೆ ಈ ವಿರಕ್ತರು ಅಡ್ಡಿಯಾಗುವರೆಂದು ಹೇಳಿದರು. ಇದನ್ನರಿತ ನಾಗಿದೇವ ರಾಜನಿಗೆ ವಿವೇಕದ ಮಾತುಗಳಾನ್ನಾಡಿ ಅವನನ್ನು ಸನ್ಮಾರ್ಗದಲ್ಲಿ ತಂದನು. ಆಸ್ಥಾನದಲ್ಲಿ ನಡೆಯುವ ಕೆಲವೊಂದು ಹಬ್ಬ ಹರಿದಿನಗಳಲ್ಲಿ

ವಿರಕ್ತರು ಯಾವ ರೀತಿ ಭಾಗವಹಿಸುತ್ತಿದ್ದರೆಂಬುದಕ್ಕೆ ಗಣಪತಿ ಹಬ್ಬದಲ್ಲಿ ನೆರೆದಿದ್ದ ವಿರಕ್ತರ ಮೇಲೆ ಅಳೆಯಬಹುದು.

"ಮಾರಾರಿ ಹೆಮ್ಮಗ ಹೇರಂಬನೊಸಗೆಯ
ಧಾರುಣೀಪತಿಯು ಸಂಭ್ರಮಿಸಿ
ನೂಜೋಂದು ಮಂದಿಯು ವಿರಕ್ತರೊಲವಿಂದ
ಆರಾಧಿಸುತ ಗಣಪತಿಯ"[೨೨]

ಚೌತಿಯ ಸುಮೂಹರ್ತದಲ್ಲಿ ಗಣಪತಿಯ ಪೂಜೆಯನ್ನು ಆಚರಿಸಲು ನೂರೊಂದು ವಿರಕ್ತರನ್ನು ಕರೆಸಿಕೊಂಡನು. ರಾಜ, ಪ್ರಧಾನರಾಧಿಯಾಗಿ ಗಣಪನನ್ನು ಭಕ್ತಿಯಿಂದ ಆರಾಧಿಸಿದರು. ಪ್ರತಿಯೊಬ್ಬ ವಿರಕ್ತರಿಗೂ ಅರಮನೆಯ ಭಂಡಾರದಿಂದ ಬೆಲೆ ಬಾಳುವ ವಸ್ತುಗಳನ್ನು ತರಿಸಿಕೊಟ್ಟನು. ಹಾಗೆಯೇ ನಾಗಯ್ಯನಿಗೆ ಪಚ್ಚೆಯ ಕಡಗವನ್ನು ನೀಡಿ ಸನ್ಮಾನಿಸಿದನು.

ಪ್ರೌಢದೇವರಾಯನು ನಾಗಯ್ಯನಿಗೆ ನೀಡಿದ ಈ ಪಚ್ಚೆಯ ಕಡಗದ ಬಗ್ಗೆ ಚೆನ್ನಬಸವ ಪುರಾಣದಲ್ಲಿ ಒಂದು ರೀತಿಯಿದ್ದರೆ ನಾಗಲಿಂಗನ ಚರಿತೆಯಲ್ಲಿ ಮತ್ತೊಂದು ರೀತಿಯಲ್ಲಿದೆ. ಮೀನ್ಬುಲಿಗನು ಪ್ರದರ್ಶಿಸಿದ ಚಮತ್ಕಾರದ ಆಟವನ್ನು ಕಂಡು ಬಹುಮಾನವಾಗಿ ಪಚ್ಚೆಯ ಕಡಗವನ್ನು ಹೊಳೆಗೆ ಎಸೆಯುವವರು ಚೆನ್ನಬಸವನ ಪುರಾಣದಲ್ಲಿ ವೀರಣ್ಣೊಡೆಯ. ಆದರೆ ಕರಸ್ಥಲ ನಾಗಲಿಂಗನ ಚರಿತ್ರೆಯಲ್ಲಿ ನಾಗಲಿಂಗಯ್ಯ ಎಸೆಯುವರು. ಈ ರೀತಿ ಇಬ್ಬರೂ ಕವಿಗಳು ಮಾರ್ಪಾಟು ಮಾಡಿಕೊಂಡಿದ್ದಾರೆ.

ಹಲವು ಪವಾಡಗಳನ್ನು ಮೆರೆದ ಕರಸ್ಥಲದ ನಾಗಿದೇವನು ಕೈಲಾಸವಾಸಿಯಾದ ಮೇಲೆ ದೊರೆ ಪ್ರೌಢದೇವರಾಯನು ನೂರೊಂದು ಮಂದಿ ವಿರಕ್ತರ ಸಮ್ಮುಖದಲ್ಲಿ ತನ್ನ ಮಗಳನ್ನು ವೀರಣ್ಣೊಡೆಯನಿಗೆ ಧಾರೆ ಎರೆದು ಕೊಟ್ಟನು.

ಪ್ರೌಢದೇವರಾಯನು ತನ್ನ ಆಸ್ಥಾನದಲ್ಲಿ ಸಾಹಿತ್ಯ ಸೃಷ್ಟಿಗೆ ಒಳ್ಳೆಯ ಅವಕಾಶವನ್ನು ಒದಗಿಸಿದನು. ಹೀಗಾಗಿ ಅವನ ಆಸ್ಥಾನದಲ್ಲಿ ನೆಲೆನಿಂತ ನೂರೊಂದು ವಿರಕ್ತರು ಸಹ ಸಾಹಿತ್ಯ ಸೃಷ್ಟಿ ಗೈದಿದ್ದಾರೆ. ಅವರಲ್ಲಿ ವಿರಕ್ತರಲ್ಲಿ ಆದಿ ಪುರುಷನಾದ ಕರಸ್ಥಲದ ನಾಗಿದೇವ, ಬತ್ತಲೇಶ, ಗುರುಬಸವ, ನಿರ್ವಾಣಿ ಬೋಳೇಶ ಹಾಗೂ ವೀರಣ್ಣೊಡೆಯರಾಗಿದ್ದಾರೆ.

೧೦. ಜನಪದ ಗೀತೆಗಳು

ಡಾ. ಬಿ.ಎಸ್. ಗದ್ದಿಗಿಮಠ ಅವರು ಕನ್ನಡ ಜಾನಪದ ಕ್ಷೇತ್ರಕ್ಕೆ ಹೊಸ ಆಯಾಮವನ್ನು ತಂದುಕೊಟ್ಟ ಆಚಾರ್ಯ ಪುರುಷ. ಜಾನಪದವು ಪಿಎಚ್.ಡಿ. ಸಂಶೋಧನೆಗೆ ವಸ್ತುವಾಗಬಲ್ಲದು ಎಂಬುದನ್ನು ಮೊಟ್ಟ ಮೊದಲು ಮನಗಾಣಿಸಿಕೊಟ್ಟವರು. ಹೀಗಾಗಿ ೧೯೫೫ರಲ್ಲಿ 'ಕನ್ನಡ

ಜಾನಪದ ಗೀತೆಗಳು' ಎಂಬ ವಿಷಯದ ಅಡಿಯಲ್ಲಿ ಜಾನಪದ ಕ್ಷೇತ್ರದಲ್ಲಿ ಮೊಟ್ಟ ಮೊದಲು ಪದವಿಗಳಿಸಿದವರು. ಉತ್ತರ ಕರ್ನಾಟಕದ ಉದ್ದಗಲಕ್ಕೂ ಸಂಚರಿಸಿ ಸಾವಿರಾರು ಜಾನಪದ ಗೀತೆಗಳನ್ನು ಸಂಗ್ರಹಿಸಿದರು. ಒಂದು ಸಮುದಾಯದ ಅಥವಾ ಜನಾಂಗದ ಅನನ್ಯತೆ ಹಾಗೂ ಸಾಹಿತ್ಯ ಸಂಪತ್ತು ಕೇವಲ ಕಲಿತ ನಾಲ್ಕಾರು ಜನರಲ್ಲಿ ಗುರುತಿಸುವುದಕ್ಕಿಂತ ಏನು ಕಲಿಯದ ಅವಿದ್ಯಾವಂತ ಜನರಲ್ಲಿ ಹೇರಳವಾದ ಸಾಹಿತ್ಯ ಸಂಪತ್ತು ಅಡಗಿರುತ್ತದೆ.

ಹಿಂದೆ ಆಧ್ಯಾತ್ಮಿಕ ವಿಚಾರಧಾರೆಯ ದಿವ್ಯ ಪುರುಷರು, ಯೋಗಿಗಳು ಜನಸಾಮಾನ್ಯರ ಬದುಕಿಗೆ ತುಂಬಾ ಹತ್ತಿರವಾಗಿದ್ದರು. ಹೀಗಾಗಿ ಇವರನ್ನು ಕುರಿತು ಹಲವು ಜಾನಪದ ಗೀತೆಗಳು ಸಹ ರಚನೆಯಾದವು. ದಕ್ಷಿಣ ಕರ್ನಾಟಕದಲ್ಲಿ ಮಂಟೆಸ್ವಾಮಿ ಮತ್ತು ಮಲೆಮಾದೇಶ್ವರ ಸ್ವಾಮಿ ಪರಂಪರೆ, ಮಧ್ಯಕರ್ನಾಟಕದಲ್ಲಿ ಪಂಚಗಣಾಧೀಶರ ಪರಂಪರೆಯನ್ನು ಉತ್ತರ ಕರ್ನಾಟಕದ ಕಡೆ ಕೊಡೆಕಲ್ಲು ಮತ್ತು ಸಾವಳಗಿ ಶಿವಲಿಂಗನ ಪರಂಪರೆಯನ್ನು ಕಾಣುತ್ತೇವೆ. ಈ ಮಹನಿಯರೆಲ್ಲಾರು ವೀರಶೈವ ಧರ್ಮದ ಸಾಂಸ್ಥಿಕತೆಯನ್ನು ನಿರಾಕರಿಸಿದವರು. ಇಂತಹ ಅನುಭಾವಿಗಳ ಮತ್ತು ವಿರಕ್ತರ ಪ್ರಭಾವ ಸಮಾಜದ ಮೇಲೆ ಗಾಢವಾಗಿತ್ತೆಂಬುದಕ್ಕೆ ಕೆಲವೊಂದು ಜಾನಪದ ಗೀತೆಗಳೇ ಸಾಕ್ಷಿಯಾಗಿವೆ.

"ನೂರೊಂದು ವಿರಕ್ತರ ದಿವ್ಯ ವ್ಯಕ್ತಿತ್ವದ ಪ್ರಭಾವವು ಕ್ರಿ.ಶ. ೧೭ನೆಯ ಶತಮಾನದ ಹೊತ್ತಿಗಾಗಲೇ ವೀರಶೈವ ಜನಪದ ಭಕ್ತರ ಮೇಲಾಗಿತ್ತೆಂಬುದಕ್ಕೆ ಜಾನಪದ ಗೀತೆಗಳು ಆಕರವಾಗಿವೆ. ಉತ್ತರ ಕರ್ನಾಟಕದ ಒಕ್ಕಲಿಗರು ಹೆಚ್ಚಾಗಿ ಶಿವಶರಣರಾದುದರಿಂದ ಕಲ್ಯಾಣ ಶರಣರ ಪ್ರಭಾವಕ್ಕೊಳಗಾದಂತೆ, ಕಾಯಕವಿಡಿದಾಚರಿಸಿದ ನೂರೊಂದು ಶರಣರ ಪ್ರಭಾವಕ್ಕೂ ಇವರು ಮಣಿದು ಹಾಡು ಕಟ್ಟಿದ್ದಾರೆ. ನೂರೊಂದು ವಿರಕ್ತರಲ್ಲಿ 'ಒಕ್ಕಲುಶಾಂತ' ಎಂಬ ಹೆಸರಿನ ಶರಣನೂ ಒಬ್ಬನಿರುವುದನ್ನು ಗಮನಿಸಬೇಕು"[೨೪] ವಚನ ಚಳುವಳಿಯ ಸಂದರ್ಭದಲ್ಲಿ ಹಲವಾರು ಜಾತಿಯ, ಹಲವು ಕಸಬುಗಳನ್ನು ಅಳವಡಿಸಿಕೊಂಡಿರುವ ಶರಣರನ್ನು ಕಾಣುತ್ತೇವೆ. ಅದರಂತೆ ಹಂಪೆಯ ಪರಿಸರದಲ್ಲಿ ಬದುಕಿದ ವಿರಕ್ತರು ಸಹ ಹಲವು ವೃತ್ತಿ, ಜಾತಿಗಳಿಂದ ಬಂದಿದವರಾಗಿರುವರು.

ಹಂಪೆಯ ಪರಿಸರದಲ್ಲಿ ಬದುಕಿದ ನೂರೊಂದು ವಿರಕ್ತರು ಜನಸಾಮಾನ್ಯರಾದ ರೈತಾಪಿ ವರ್ಗದ ಮನದಲ್ಲಿ ಹಸಿಯಾಗಿ ನೆಲೆನಿಂತಿದ್ದರು. ಹೀಗಾಗಿ ಈ ಮಹಾನ್ ಪವಾಡ ಪುರುಷರನ್ನು ಕುರಿತು ಹಾಡು ಕಟ್ಟಿದ ಉಲ್ಲೇಖಗಳು ಜಾನಪದ ಗೀತೆಗಳಲ್ಲಿ ಕಂಡುಬರುತ್ತದೆ. ಅಲ್ಲದೆ ಅಂದಿನ ವೇಳೆಯಲ್ಲಿ ಜನಸಮುದಾಯದ ಮೇಲೆ ಇವರ ತಾತ್ವಿಕ ವಿಚಾರ ಧಾರೆಗಳ ಪ್ರಭಾವ ಬೀರಿರಬೇಕು.

ನೂರೊಂದು ವಿರತರಲ್ಲಿ ಸಾಮಾನ್ಯವಾಗಿ ಮಂಚದ ಶಾಂತ, ಮಿಡಿಬಿಲ್ಲ ಶಾಂತ, ಬುಡಬುಡಕೆ ಶಾಂತನಂತೆ 'ಒಕ್ಕಲಿನ ಶಾಂತ' ಎಂಬ ಹೆಸರಿನ ವಿರಕ್ತನೊಬ್ಬ ಕಂಡುಬರುವನು, ಇವನು ಕೃಷಿಗೆ ಅಥವಾ ಒಕ್ಕಲುತನಕ್ಕೆ ಹೆಚ್ಚಿನ ಒಲವು ನೀಡಿರಬೇಕು. ಹೀಗಾಗಿಯೇ ವಿರಕ್ತರಲ್ಲಿ ಅವರ ವೃತ್ತಿಗೆ ತಕ್ಕಂತೆ ಅವರಿಗೆ 'ಒಕ್ಕಲುಶಾಂತ'ನೆಂಬ ಹೆಸರು ಬಂದಿರಬೇಕು.

"ನೂರೊಂದು ಶರಣಾರು ನೂರೊಂದು ಬಂದಾರು
ಸಾರಿ ಹೇಳ್ಯಾನೊ ಒಕ್ಕಲಿಗೋ ಹೊಲಸುಗಿ
ಧೀರ ಕಾಯಕದ ದಿನವೆಂದು
ನೂರೊಂದು ತಲಗಳಲಿ ನೂರೊಂದು ಶರಣರಿಗೆ
ಸಾರುವನು ತತ್ವ ಪ್ರಭುದೇವ ಚೆನಬಸವ
ಮೀರಿದರು ನಾಣಾ ದೀವಟಿಗೆ"[15]

ಅಡಿಟಿಪ್ಪಣಿಗಳು

೧. ಸಂಗಮರ ಕಾಲದ ವಿಜಯನಗರ ಅದರ ಇತಿಹಾಸ ಮತ್ತು ಸಂಸ್ಕೃತಿಗಳ ಅಧ್ಯಯನ (ಸಂ) ಜಿ.ಎಸ್.ದೀಕ್ಷಿತ್, ಪುಟ ೯೫-೯೭

೨. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ - ಡಾ.ಶಿವಾನಂದ ವಿರಕ್ತಮಠ, ಪುಟ-೮೬

೩. ಅದೇ, ಪುಟ-೯೧

೪. ಪ್ರೌಡರಾಯನ ಕಾವ್ಯ - (ಸಂ) ಸಂ.ಶಿ.ಭೂಸನೂರುಮಠ, ಪುಟ-೪೨

೫. ಷಟ್‌ಸ್ಥಲ ಪ್ರಭೆ - ಡಾ.ಆರ್.ಸಿ.ಹಿರೇಮಠ, ಪುಟ-೨೭೭

೬. ಚೆನ್ನಬಸವ ಪುರಾಣ - ವಿರೂಪಾಕ್ಷ ಪಂಡಿತ, ಸಂ-೬೩, ಪದ್ಯ-೧, ಪುಟ-೭೫೫.

೭. ಅದೇ, ಸಂಧಿ-೬೩, ಪ-೬, ಪುಟ-೭೫೫.

೮. ಅದೇ, ಸಂಧಿ-೬೩, ಪ-೭, ಪುಟ-೭೫೫

೯. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ - ಡಾ. ಶಿವಾನಂದ ವಿರಕ್ತಮಠ, ಪುಟ-೯೩.

೧೦. ಚೆನ್ನಬಸವ ಪುರಾಣ - ವಿರೂಪಾಕ್ಷ ಪಂಡಿತ, ಸಂಧಿ-೬೩, ಪ-೭, ಪುಟ-೭೫೫.

೧೧. ಅದೇ, ಸಂಧಿ-೬೩, ಪ-೧೪, ಪುಟ-೭೫೭.

೧೨. ಅದೇ, ಸಂಧಿ-೬೩, ಪ-೨೩, ಪುಟ-೭೫೯.

೧೩. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ - ಡಾ. ಶಿವಾನಂದ ವಿರಕ್ತಮಠ, ಪುಟ-೯೪.

೧೪. ಚೆನ್ನಬಸವ ಪುರಾಣ, ಸಂಧಿ-೬೩, ಪ-೨೮, ಪು-೭೬೧.

೧೫. ಅದೇ, ಸಂಧಿ-೬೩, ಪ-೩೦, ಪುಟ-೭೬೧.

೧೬. ಅದೇ, ಸಂಧಿ-೬೩, ಪ-೩೩, ಪುಟ-೭೬೨.

೧೭. ವೀರಶೈವಾಮೃತ ಪುರಾಣ-ಭಾಗ-೨, (ಸಂ) ಡಾ.ಆರ್.ಸಿ.ಹಿರೇಮಠ, ಕಾಂಡ-೮, ಸಂಧಿ-೮, ಪುಟ-೧೪೯೬.

೧೮. ಅದೇ, ಕಾಂಡ-೮, ಸಂಧಿ-೮, ಪುಟ-೧೪೯೬

೧೯. ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ ವಿವೇಚನೆ (ಸಂ) ಡಾ.ಕೆ.ರವೀಂದ್ರನಾಥ, ಪುಟ-೩೧.

೨೦. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ - ಡಾ. ಶಿವಾನಂದ ವಿರಕ್ತಮಠ, ಪುಟ-೮೭.

೨೧. ಲಕ್ಕಣ್ಣ ದಂಡೇಶನ ವಿರಚಿತ ಶಿವತತ್ವ ಚಿಂತಾಮಣಿ (ಸಂ) ಎಚ್. ದೇವಿರಪ್ಪ, ಸಂಧಿ-೩೮, ಪದ್ಯ-೧೧೦, ಪುಟ-೪೦೯.

೨೨. ಅದೇ ಸಂಧಿ-೩೮, ಪದ್ಯ-೨೧೬, ಪುಟ-೪೩೨.

೨೩. ಅದೇ ಸಂಧಿ-೩೮, ಪದ್ಯ-೨೧೩, ಪುಟ-೪೩೨.

೨೪. ಲಕ್ಕಣ್ಣ ದಂಡೇಶನ ವಿರಚಿತ ಶಿವತತ್ವ ಚಿಂತಾಮಣಿ ವಿವೇಚನೆ, (ಸಂ) ಎಚ್. ದೇವಿರಪ್ಪ, ಪು-೬೬

೨೫. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ - ಡಾ. ಶಿವಾನಂದ ವಿರಕ್ತಮಠ, ಪುಟ-೯೦

೨೬. ಅದೇ, ಪುಟ-೯೮

೨೭. ಅದೇ, ಪುಟ-೯೫.

೨೮. ಅದೇ, ಪುಟ-೯೬

೨೯. ಅದೇ, ಪುಟ-೯೫

೩೦. ಕರಸ್ಥಲದ ನಾಗಿಲಿಂಗನ ಚರಿತ್ರೆ - (ಸಂ) ಕೆ.ಆರ್. ಶೇಷಗಿರಿ, ಪು-೧೧, ೧೨.

೩೧. ಅದೇ ಸಂಧಿ-೭, ಪದ್ಯ-೧೭, ಪುಟ-೧೨೦.

೩೨. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ - ಡಾ. ಶಿವಾನಂದ ವಿರಕ್ತಮಠ, ಪುಟ-೯೭

೩೩. ಕರಸ್ಥಲದ ನಾಗಿಲಿಂಗನ ಚರಿತ್ರೆ - (ಸಂ) ಕೆ.ಆರ್.ಶೇಷಗಿರಿ, ಸಂಧಿ-೮, ಪದ್ಯ-೩೪, ಪು-೧೩೮.

೩೪. ಷಟಸ್ಥಲ ಪ್ರಭೆ - ಡಾ. ಆರ್.ಸಿ.ಹಿರೇಮಠ, ಪುಟ-೨೭೭

೩೫. ಜಾನಪದ ಗೀತೆಗಳು - (ಸಂ) ಡಾ. ಬಿ.ಎಸ್.ಗದ್ದಿಗಿಮಠ, ಪುಟ-೧೩೩, ೨೫೫.

ಅಧ್ಯಾಯ : ಮೂರು

ಮೋದಿರುದ್ರನ ವಿರಕ್ತರ ಕಾವ್ಯ

ಅಧ್ಯಾಯ : ಮೂರು

ಮೋದಿರುದ್ರನ ವಿರಕ್ತರ ಕಾವ್ಯ

'ನೂರೊಂದು ವಿರಕ್ತರ' ಕಾವ್ಯದ ಕರ್ತೃ ಕವಿ ಮೋದಿರುದ್ರ, ಆದರೆ ಈ ಕಾವ್ಯವನ್ನು ಡಾ.ನಗುವನಹಳ್ಳಿ, ಪಿ. ರತ್ನ ಅವರು ೧೯೯೬ರಲ್ಲಿ ಶಾಸ್ತ್ರೀಯವಾಗಿ ಸಂಪಾದಿಸಿ ಕೊಟ್ಟಿದ್ದಾರೆ. ಅಲ್ಲದೆ ಮೋದಿಯ ರುದ್ರನು 'ಪಂಚಮೋದ್ಭವ' ಎಂಬ ಮತ್ತೊಂದು ಕಾವ್ಯ ರಚಿಸಿದನೆಂದು ತಿಳಿದು ಬರುತ್ತದೆ. ಈ ಕವಿಯ ಬಗೆಗೆ ಎಲ್ಲೂ ಮಾಹಿತಿ ಲಭ್ಯವಿಲ್ಲ. ಆದರೆ ೧೪೨೭ರ ಶಾಸನದ ಸಹಾಯದಿಂದ ಈ ರೀತಿ ತಿಳಿಯಬಹುದಾಗಿದೆ. ಪ್ರೌಢದೇವರಾಯನ ಆದೇಶದ ಮೇರೆಗೆ ಆರಗ ರಾಜ್ಯದ ಅಧಿಕಾರಿ ವೀರಣ್ಣೊಡೆಯ ಬೇಡರ ಪಡೆಯನ್ನು ಅಡಗಿಸಲು ನಿಶ್ಚಯಿಸಿದನು. ಆಗ ಆತನ ಕರೆದ ಸಾಮಂತರ ಪಟ್ಟಿಯಲ್ಲಿ ಮಹಾಪ್ರಭು ಕಲ್ಲೂರು ಕಳಲೆ ದಾನಮೂಲಗಳ ಜನ, ಹರಿತಾಳದ ಮೋದಿಗೌಡನ ಮಗ ಮುದುಗೌಡ, ಬೊಮ್ಮಗೌಡನ ತಿರುಕಿಗೌಡರ ಹೆಸರುಗಳು ಕಂಡುಬರುತ್ತವೆ. ಮೋದಿರುದ್ರ ಬಹುಶಃ ಹರಿತಾಳದ ಮೋದಿಗೌಡನ ವಂಶಸ್ಥನಾಗಿರಬಹುದು. ಆ ಕಾರಣವಾಗಿ ಅವನ ಹೆಸರಿನ ಹಿಂದೆ ಮೋದಿ ಎಂದು ಉಳಿದುಕೊಂಡು ಬಂದಿದೆ.

ನೂರೊಂದು ವಿರಕ್ತರ ಪರಿಚಯವನ್ನು ವೀರಣ್ಣೊಡೆಯನು ಪ್ರೌಢದೇವರಾಯನಿಗೆ ಮಾಡಿಸಿದನು ಎನ್ನುವ ಮಾತು ವಿರಕ್ತರ ಕಾವ್ಯದಲ್ಲಿ ಬರುತ್ತದೆ. ಆ ಕಾರಣದಿಂದಲೂ ಈ ವಂಶಸ್ಥರಿಗೆ ವಿರಕ್ತರ ಒಡನಾಟವಿದ್ದು ನೂರೊಂದು ವಿರಕ್ತರ ಕಾವ್ಯವನ್ನು ಮೋದಿ ರುದ್ರ ರಚಿಸಿರಬಹುದು. ಈ ಪ್ರಯತ್ನಕ್ಕೆ ಬೆಂಬಲ ನೀಡಿದವನು ಮಲೆದೇಶದ ಬಿದನೂರು ಮಳೆಯ ಸ್ವಾಮಿ.

'ದಕ್ಷಿಣದ ಕಾಶಿ' ಎಂದು ಜನಪ್ರಿಯವಾದ ವಿಜಯನಗರ ಸಾಮ್ರಾಜ್ಯದ ಪ್ರೌಢದೇವರಾಯನ ಕಾಲದಲ್ಲಿ ಬಾಳಿದರೆನ್ನಲಾದ ನೂರೊಂದು ವಿರಕ್ತರು ಹಲವು ಸಾಹಿತ್ಯ ಹಾಗೂ ಪುರಾಣ ಕೃತಿಗಳಲ್ಲಿ ಉಲ್ಲೇಖಿತರಾಗಿದ್ದಾರೆ. ಅರಸನ ಆಸ್ಥಾನದಲ್ಲಿದ್ದ ವಿರಕ್ತರು ತಮ್ಮ ಅಪಾರವಾದ ಪವಾಡ ಸಾದೃಶ್ಯಗಳಿಂದ ಅಂದು ಹೆಚ್ಚು ಜನಪ್ರಿಯರಾಗಿದ್ದರೆಂದು ಕಾವ್ಯಗಳ ಮೂಲಕ ತಿಳಿದುಬರುತ್ತದೆ. 'ಆದ್ರೀಶ ಕವಿ' ಬರೆದ 'ಪ್ರೌಢದೇವರಾಯನ ಕಾವ್ಯ', ಸಿದ್ಧನಂಜೇಶನ 'ರಾಘವಾಂಕ ಚರಿತ್ರೆ', (೧೫೫೦) ಕಿಕ್ಕೇರಿಯರಾಧ್ಯ ನಂಜುಂಡನ 'ಭೈರವೇಶ್ವರ ಪುರಾಣ', ವಿರೂಪಾಕ್ಷ ಪಂಡಿತನ 'ಚೆನ್ನಬಸವ ಪುರಾಣ' ಅಲ್ಲದೆ ಇನ್ನೂ ಹಲವು ಕಾವ್ಯಗಳಲ್ಲಿ ವಿರಕ್ತರು ಉಲ್ಲೇಖಿತರಾಗಿರುವರು. ಅಜ್ಞಾತ ಕರ್ತೃವಿನ 'ಶತಯೇಕ ವಿರಕ್ತರ ಸ್ತೋತ್ರ' ಎನ್ನುವ ಕೃತಿಯು ಒಂಬತ್ತು ಪದ್ಯಗಳಿಂದ ಕೂಡಿದ್ದು, ಇದು ವಾರ್ಧಕ ಷಟ್ಪದಿಯಲ್ಲಿ ರಚನೆಯಾಗಿದೆ. ಈ ಕೃತಿಯಲ್ಲಿ ಕಂಡುಬರುವ ನೂರೊಂದು ವಿರಕ್ತರ ಹೆಸರುಗಳಲ್ಲಿ ೭೦ ಹೆಸರುಗಳು ಮೋದಿರುದ್ರನ ಕೃತಿಗೆ ಸಂವಾದಿಯಾಗಿದೆ. ಉಳಿದ ೩೧ ಹೆಸರುಗಳು ಭಿನ್ನವಾಗಿ ಕಂಡುಬರುತ್ತವೆ.

ಕವಿಚರಿತೆಯಲ್ಲಿ ಮೋದಿರುದ್ರನನ್ನು ಕುರಿತು ಈ ರೀತಿ ಹೇಳಲಾಗಿದೆ. ಈತನು 'ವಿರಕ್ತರ ಕಾವ್ಯ' 'ಪಂಚಮೋದ್ಭವ ಕಾವ್ಯ' ಇವುಗಳನ್ನು ರಚಿಸಿರುವನು. ವೀರಶೈವ ಕವಿಯಾದ ಇವನು ಕಾಮಾರಿ ಭಕ್ತರ ಚರಣ ಕಿಂಕರ ಪಂಚಮಕುಲಜೋದ್ಭವ ನಿಜವಿರಕ್ತರ ಕಾವ್ಯವನ್ನು ಶಕೆ ೧೬೫೮ ಪಿಂಗಳದಲ್ಲಿ ಕ್ರಿ.ಶ. ೧೭೩೭ರಲ್ಲಿ ಬರೆದಂತೆ ಹೇಳುತ್ತಾರೆ.

ಮೋದಿರುದ್ರನಿಗೆ ಈ ನೂರೊಂದು ವಿರಕ್ತರ ಕಾವ್ಯ ರಚನೆಗೆ ಸ್ಫೂರ್ತಿಯ ಸೆಲೆಯಾಗಿ ನಿಂತವರು ಮಳೆಯ ಸ್ವಾಮಿ. ತಾನು ಮೊದಲು ಆಗಮದ ಗ್ರಂಥವನ್ನು ನೋಡಿ 'ಪಂಚಮೋದ್ಭವ' ಕಾವ್ಯವನ್ನು ರಚಿಸಿದ್ದೇನೆಂದು, ಆ ಗ್ರಂಥದ ಮಹತ್ವವನ್ನು ಕೇಳಿ ತಿಳಿದು ಮಲೆದೇಶದ ಬಿದರೂರ ಪಟ್ಟಣದ ಶಿವಭಕ್ತ ಸಮ್ಮೇಳನದ ಪ್ರಮುಖ ಶರಣನೂ, ಷಟ್‌ಸ್ಥಲ ಜ್ಞಾನಕೋವಿದನೂ ಆದ ಮಳೆಯಸ್ವಾಮಿ ಎಂಬುವನು ಈ ನೂರೊಂದು ವಿರಕ್ತರ ಕಾವ್ಯವನ್ನು ಬರೆಯಲಿಕ್ಕೆ ನಿನಗೆ ಆ ಶಕ್ತಿ ದೇವರು ದಯಪಾಲಿಸಿದ್ದಾನೆ. ಹೀಗಾಗಿ ಈ ಕಾವ್ಯವನ್ನು ನೀನೆ ಬರೆಯುವುದು ಸೂಕ್ತ ಎಂದು ಹೇಳಿದನು, ಎಂದು ತನ್ನ ಕಾವ್ಯದ ಪ್ರಾರಂಭದಲ್ಲಿ ಕವಿ ತಿಳಿಸಿದ್ದಾನೆ.

ಅಪ್ಪಟ ವೀರಶೈವನಾದ ಮೋದಿರುದ್ರ ತನ್ನನ್ನು 'ಸರಸಕವಿವರ' ಎಂದು ಕೊಂಡಾಡಿದ್ದಾನೆ. ಈ ಕೃತಿಯಲ್ಲಿ ಕವಿಯೇ ತಿಳಿಸಿರುವಂತೆ

"ಶಾಲೀವಾಹನ ಶಕ ಷೋಡಶಶತ
ಮೇಲೇ ಪಂಚದಶಾಷ್ಟಾವತ್ಸರ
ಕಾಲಾ ಪಿಂಗಳ ನಾಮ ಸಂವತ್ಸರ ಮಾರ್ಗಸಿರ ಬಹುಳಾ

ಮೂಲಾ ಪಾಡ್ಯಾದಿತ್ಯಾ ವಾರದಿ
ಲೀಲೆಯಿಂದ್ವಿರಕ್ತರ ಚರಿತೆಯು
ಫಾಲಾಲೋಚನ ರುದ್ರಾಭಕ್ತನು ಪೇಳ್ದನು ಷಟ್ಪದಿಯಾ"[೧]

ಈ ದಿವ್ಯ ಪುರುಷರಾದ ನೂರೊಂದು ವಿರಕ್ತರ ಕಾವ್ಯವನ್ನು ಶಕ ೧೬೫೮ ಪಿಂಗಳದಲ್ಲಿ (ಎಂದರೆ ಕ್ರಿ.ಶ. ೧೭೩೭ರಲ್ಲಿ) ಬರೆದಂತೆ ಹೇಳಿದ್ದಾನೆ.

ಮೋದಿಯ ರುದ್ರನು ಈ ವಿರಕ್ತರ ಕಾವ್ಯವನ್ನು ವಾರ್ಧಕ, ಪರಿವರ್ಧಿನಿ, ಭಾಮಿನಿ ಷಟ್ಪದಿಯಲ್ಲಿ ಬರೆದಿದ್ದಾನೆ. ಈ ಕಾವ್ಯದ ಪ್ರಥಮ ಹಾಗೂ ದ್ವಿತೀಯ ಸಂಧಿಯಲ್ಲಿ ಗಿರಿಜಾ ಕಲ್ಯಾಣದ ಬಗ್ಗೆ ತಿಳಿಸಿದರೆ, ಉಳಿದ ಮೂರನೇ ಸಂಧಿಯಿಂದ ಆರನೆಯ ಸಂಧಿಯವರೆಗೆ ಪ್ರೌಢದೇವರಾಯನ ಕಾಲದಲ್ಲಿ ಜೀವಿಸಿದ ನೂರೊಂದು ವಿರಕ್ತರ ಬಗೆಗೆ ಪ್ರಸ್ತಾಪಿಸುತ್ತಾನೆ. ಒಟ್ಟೂ ಎರಡು ವಿಷಯಾಧಾರಿತ ಕಾವ್ಯವಾಗಿ ಮೋದಿ ರುದ್ರನ ವಿರಕ್ತರ ಕಾವ್ಯವು ಮಾರ್ಪಟ್ಟಿದೆ.

ಈ ನೂರೊಂದು ವಿರಕ್ತರ ಬಗೆಗೆ ಕಾವ್ಯವನ್ನು ಬರೆಯಲಿಕ್ಕೆ ಪ್ರೇರಣೆ ನೀಡಿದ ಮಹಾಶಯರ ಕುರಿತು ಹೀಗೆ ಪ್ರಸ್ತಾಪಿಸುವನು. ಶಿವಭಕ್ತ ಸಮ್ಮೇಳನದಲ್ಲಿ ಜ್ಞಾನಕೋವಿದ ಮಳೆಯ ಸ್ವಾಮಿ ಎಂಬ ವಿರಕ್ತನಿಗೆ ಕವಿ ಮೋದಿರುದ್ರನು ವಂದಿಸಿದಾಗ, ಭಕ್ತ ನೀನಾರೆಂದು ಎಲ್ಲ ವಿವರಗಳನ್ನು ಕೇಳಿ, ಆತನ ಕಾವ್ಯ ಕವನಗಳನ್ನು ನೋಡಿ, ಕಂದ ನೀ ಬಾ, ನಿನಗೆ ಒಂದು ಬುದ್ಧಿ ಮಾತನ್ನು ಹೇಳುತ್ತೇನೆ. ಪರಮ ನೂರೊಂದು ವಿರಕ್ತ ಮಾಹೇಶ್ವರರ ಕಾವ್ಯ ಬರೆಯಲಿಕ್ಕೆ ತಿಳಿಸಿದರು. ಮೋದಿರುದ್ರನು ಅಷ್ಟು ಜನರ ಕಥೆಯು ದೊರಕುವುದು ಕಷ್ಟ, ನಾನು ಹೇಗೆ ಬರೆಯಲಿ? ಎಂದು ಹೇಳುವನು. ಪೂರ್ವ ಜನ್ಮದಲ್ಲಿ ನೀನು ಗುರುಕೃಪೆಯನ್ನು ಪಡೆದಿರುವೆ. ಆದ್ದರಿಂದ ಕಾವ್ಯ ರಚನೆಯು ನಿನಗೆ ತೊಡಕಾಗುವುದಿಲ್ಲವೆಂದು ಮಳೆಯ ಸ್ವಾಮಿ ತಿಳಿಸುವನು. ಅವನ ಬೆಸನಾಂತು ವಿರಚಿಸಿದನು ಎಂದು ಕವಿ ತಿಳಿಸಿರುವನು.

"ಇದು ನೂರೊಂದ್ವಿರಕ್ತರ ಘನಪದ
ಮುದದಿಂ ನುತಿಸುತ ಪೇಳ್ವುದ ಲಾಲಿಸಿ
ಸದಮಲ ಸರಸ ಕವೀಂದ್ರರ ಕರುಣದ ಕಂದನು ಎಂದೆನಿಪ
ಮದಹರ ಪಂಚಮ ಕುಲಜೊ ನಿಜ
ಹೃದಯನು ಮೋದಿಯರುದ್ರನೆನಿಪ ಕವಿ
ಗದರರದೆ ಗರ್ವದಿ ಜರಿಯದೆ ಬಲ್ಲದೆ ತಿದ್ದಿರಿ ಕರುಣದಲಿ"[೨]

ಕವಿ ಈ ಮೇಲಿನ ಪದ್ಯದಲ್ಲಿ ಪ್ರಾಚೀನ ಕವಿಗಳು ಯಾವ ರೀತಿ ತಮ್ಮ ಕಾವ್ಯದಲ್ಲಿ ದೋಷಗಳೇನಾದರೂ ಕಂಡುಬಂದರೆ ಕರುಣೆಯಿಂದ ತಿದ್ದಿ ಸರಿಪಡಿಸಿ ಎಂದು ಹೇಳುವಂತೆ ಮೋದಿಯ ರುದ್ರನು ಸಹ ತನ್ನ ಕಾವ್ಯದ ಮಹತ್ವವನ್ನು ತಿಳಿಸಿರುವನು.

ಈ ನೂರೊಂದು ವಿರಕ್ತರ ಬಗೆಗೆ ಪ್ರೌಢದೇವರಾಯನ ಕಾಲದಿಂದಲೂ, ಅಂದರೆ 'ನೂರೊಂದು ವಿರಕ್ತರು' ಎಂಬ ಕಲ್ಪನೆ ಎಂದು ಜನ್ಮ ಪಡೆಯಿತೋ ಅಂದಿನಿಂದಲೇ ಈ ವಿರಕ್ತರ ಸಂಖ್ಯಾ ಕ್ರಮದ ಬಗೆಗೆ ಸಮಸ್ಯೆ ಕಂಡುಬಂದಿದೆ. ಪ್ರಸ್ತುತ ಸಂದರ್ಭದಲ್ಲಿ ಸಹ ಈ ವಿರಕ್ತರ ಬಗೆಗೆ ಪರಿಪೂರ್ಣ ಮಾಹಿತಿ ನೀಡುವ ಮೋದಿರುದ್ರ ಕವಿ ವಿರಚಿಸಿದ 'ವಿರಕ್ತರ ಕಾವ್ಯ' ಹಾಗೂ ಅನಾಮಧೆಯ ರಚಿಸಿದ 'ನೂರೊಂದು ವಿರಕ್ತರ ಸ್ತೋತ್ರ'ದಲ್ಲಿ ಇವರ ಮಾಹಿತಿ ಲಭ್ಯವಿದೆ. ಈ ಎರಡು ಕೃತಿಗಳಲ್ಲಿ ಸುಮಾರು ೭೦ ಹೆಸರು ಒಂದೇ ರೀತಿಯಿದ್ದು ಉಳಿದ ೩೧ ಹೆಸರುಗಳು ಭಿನ್ನ ರೀತಿಯಲ್ಲಿದೆ. ಉಳಿದ ಕೆಲವೊಂದು ವಿರಕ್ತರ ಬಗೆಗೆ ಉಲ್ಲೇಖಿತ ಕಾವ್ಯಗಳಲ್ಲಿ ಅಲ್ಪ ಸ್ವಲ್ಪ ಮಾಹಿತಿ ದೊರೆಯುತ್ತದೆ.

ಈ ಕಾವ್ಯವನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಿದರೆ, ನೂರೊಂದು ವಿರಕ್ತರು ಅಳಿದ ಮೇಲೆ ಸಹಜವಾಗಿಯೇ ಅವರ ಅಂಕೆ ಸಂಖೆಗಳ ಬಗ್ಗೆ ಜಿಜ್ಞಾಸೆ ಕಂಡುಬರುವ ಅಂಶ ಮೋದಿರುದ್ರ ಮತ್ತು ಮಳೆಯ ಸ್ವಾಮಿಯ ಮಧ್ಯೆ ನಡೆದ ಸಂಭಾಷಣೆಯಿಂದ ತಿಳಿದುಬರುತ್ತದೆ.

"ಕರುಣಿಸುತ ಕಂದ ನೀ ಬಾರೆಲವೊ ನಿನಗೊಂದು
ಬರೆವೆ ಬುದ್ಧಿಯ ಕೇಳು ಈ ಕಾವ್ಯ ರಚಿಸಿದ್ಯೆ
ಪರಮ ನೂರೊಂದು ವಿರಕ್ತ ಮಾಹೇಶ್ವರರ ಚಾರಿತ್ರ ವಿರಚಿಸೆಂದು
ವರವಿತ್ತು ಪೇಳಲ್ಕೆ ಆ ಮಹಾ ಪೂರ್ವ ಕಥನ
ದೊರಕುವುದು ದುರ್ಲಭಂ ನಾನೆಂತು ವಿರಚಿಸುವೇ
ಗುರುವೇ ಈ ಬಿನ್ನಹವೆಂದು ನುಡಿಯಲ್ಕೆ ಪೇಳಿದಂ ವರಪ್ರಸಾದ ವಾಕ್ಯವ"[1]

ಮಳೆಯಸ್ವಾಮಿ ಮತ್ತು ಮೋದಿರುದ್ರರು ಬದುಕಿದ ಕಾಲದಲ್ಲಿಯೇ ಈ ನೂರೊಂದು ವಿರಕ್ತರ ಬಗ್ಗೆ ಮಾಹಿತಿ ದೊರಕುವುದು ದುರ್ಲಭವಾಗಿತ್ತು ಎಂಬ ಅಂಶ ಗೋಚರಿಸುತ್ತದೆ. ಮಳೆಯ ಸ್ವಾಮಿ ಮೊದಲಾದ ವಿದ್ವಾಂಸ ಶರಣರಿಗೂ ಸಹ ಈ ವಿರಕ್ತರನ್ನು ಕುರಿತು ಕೆಲವೊಂದು ಅಂಶಗಳನ್ನು ಕಲೆಹಾಕುವುದು ಕಷ್ಟಕರವಾಗಿರಬೇಕು ಹೀಗಾಗಿಯೇ ಮಳೆಯ ಸ್ವಾಮಿಯ ವರಪ್ರಸಾದದಿಂದ ಮೋದಿರುದ್ರನು ಕಾವ್ಯ ರಚಿಸಿರಬೇಕೆಂಬ ಸಂದೇಹ ಉಂಟಾಗುತ್ತದೆ.

ನೂರೊಂದು ವಿರಕ್ತರ ಬಗೆಗೆ ಅನೇಕ ಸಾಹಿತ್ಯ ಕೃತಿಗಳಲ್ಲಿ, ಪುರಾಣ ಹಾಗೂ ಟೀಕಾ ಕೃತಿಗಳಲ್ಲಿ ನೂರೊಂದು ವಿರಕ್ತರು ಎಂಬ ಪದಪ್ರಯೋಗವಾಗಿದೆ. ಪ್ರೌಢದೇವರಾಯನ ಕಾವ್ಯದಲ್ಲಿ 'ಏಕೋತ್ತರ ಶತಸ್ಥಲ'ವೆಂಬ ಗ್ರಂಥವನ್ನು ಮೆರೆಸಿದ ಸಂದರ್ಭದಲ್ಲಿ ಯಾರು ಯಾರು ಬಂದು ನೆರೆದಿದ್ದರು ಎಂದು ಹೇಳುವಾಗ ಈ ನೂರೊಂದು 'ವಿರಕ್ತರು' ಎಂಬ ಪದ ಪ್ರಯೋಗವಾಗಿದೆ. 'ರಾಘವಾಂಕ ಚರಿತೆ'ಯಲ್ಲಿ 'ಮೊದಲಾದ ವಿರಕ್ತ ಕುಲ' ಎಂಬ ಪದ ಪ್ರಯೋಗ ಕಂಡುಬಂದಿದೆ.

ಮೋದಿರುದ್ರ ರಚಿಸಿದ 'ವಿರಕ್ತರ ಕಾವ್ಯ' ದಲ್ಲಿ ಪ್ರೌಢದೇವರಾಯನಿಗೆ ಕರಸ್ಥಲದ ವೀರಣ್ಣೊಡೆಯನ ಮೂಲಕ ಈ ನೂರೊಂದು ವಿರಕ್ತರ ಪರಿಚಯವಾಗುವಂತೆ ಕಾವ್ಯ ರಚಿಸಿದ್ದಾನೆ. ಹೀಗಾಗಿ ವಿರಕ್ತರ ಬಗೆಗೆ ಮಾಹಿತಿ ನೀಡುವ ಎಲ್ಲಾ ಕೃತಿಗಳಿಗಿಂತ ಮೋದಿರುದ್ರನ ಕಾವ್ಯಕ್ಕೆ ಹೆಚ್ಚಿನ ಮೌಲ್ಯ ದೊರೆಯುತ್ತದೆ.

ಶಾಂತಲಿಂಗದೇಶಿಕನ 'ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ' ಹಾಗೂ ಅದೃಶ್ಯ ಕವಿ ರಚಿಸಿದ 'ಪ್ರೌಢದೇವರಾಯನ ಕಾವ್ಯ'ದಲ್ಲಿ ನೂರೊಂದು ವಿರಕ್ತರ ಪಟ್ಟಿಯಲ್ಲಿ ಚಾಮರಸ ಮತ್ತು ಕಲ್ಲುಮಠದ ಪ್ರಭುದೇವರನ್ನು ಸೇರಿಸುವರು. ಪ್ರೌಢದೇವರಾಯನಿಗೆ 'ನೂರೊಂದು ವಿರಕ್ತರ'ನ್ನು ಪರಿಚಯ ಮಾಡಿಕೊಡುವ ಕರಸ್ಥಲದ ವೀರಣ್ಣೊಡೆಯನು ಸಹ ವಿರಕ್ತರ ಪಟ್ಟಿಯಲ್ಲಿ ಸೇರ್ಪಡೆಯಾಗಿಲ್ಲ. ಆದರೆ ಮತ್ತೆ ಕೆಲವು ಕೃತಿಗಳಲ್ಲಿ ವೀರಣ್ಣೊಡೆಯರು 'ವಿರಕ್ತರ' ಪಟ್ಟಿಯಲ್ಲಿ ಸೇರಿರುವರು. 'ಚಾಮರಸ' ನೂರೊಂದು ವಿರಕ್ತರಲ್ಲಿ ಹೌದೊ ಅಥವಾ ಅಲ್ಲವೊ ಎಂಬುದರ ಬಗೆಗೆ ಒಂದು ಸಮಸ್ಯೆಯಾಗಿರುವರು. ಮೋದಿರುದ್ರನ ಕಾವ್ಯದಲ್ಲಿ ಅವರ ಬಗ್ಗೆ ಎಲ್ಲೂ ಉಲ್ಲೇಖ ಕಂಡುಬರುವುದಿಲ್ಲ. ಚಾಮರಸ ವಿರಕ್ತನೆಂದು ಸಾಮಾನ್ಯವಾಗಿ ಎಲ್ಲೂ ಕಂಡುಬರಲಾರದು. ಆದರೆ ಡಾ. ಚಿದಾನಂದ ಮೂರ್ತಿಯವರು ಚಾಮರಸನನ್ನು ವಿರಕ್ತರ ಪಟ್ಟಿಗೆ ಸೇರಿಸಿದಲ್ಲದೇ ಹಂಪಿಯಲ್ಲಿ ಅವನ ಕುರಿತಾದ ಗುಹೆಯನ್ನು ಶೋಧಿಸಿದ್ದಾರೆ. ಸಾಹಿತ್ಯ ಕೃತಿಗಳಲ್ಲಿ ವಿರಕ್ತರ ಹೆಸರನ್ನು ಉಲ್ಲೇಖಿಸಿದ ಸಂದರ್ಭದಲ್ಲಿ ಇವನ ಹೆಸರನ್ನು ಬಳಸಿದ ಮಾತ್ರಕ್ಕೆ ಚಾಮರಸ ವಿರಕ್ತನಾಗಲೂ ಸಾಧ್ಯವಿಲ್ಲ. ಏಕೆಂದರೆ ಲೌಕಿಕ ಪ್ರಪಂಚಕ್ಕೆ ಹತ್ತಿರವಾಗಿದ್ದ ಕಾರಣ ವಿದ್ವಾಂಸರು ವಿರಕ್ತರ ಪಟ್ಟಿಗೆ ಇವನನ್ನು ಸೇರಿಸಿಲ್ಲವೆನಿಸುತ್ತದೆ.

ಕವಿ ಮೋದಿಯ ರುದ್ರನಿಗೂ ಸಹ ಈ ನೂರೊಂದು ವಿರಕ್ತರ ಬಗೆಗೆ ಪರಿಪೂರ್ಣ ಮಾಹಿತಿ ದೊರೆತಂತೆ ಕಾಣುವುದಿಲ್ಲ. ಯಾಕೆಂದರೆ ಒಂದುನೂರ ಒಂದು ವಿರಕ್ತರಲ್ಲಿ ಕೆಲವರ ಬಗೆಗೆ ಹೆಚ್ಚಿನ ಮಾಹಿತಿ ಲಭ್ಯವಾದರೆ ಉಳಿದ ವಿರಕ್ತರ ಬಗೆಗೆ ಸಂಕ್ಷಿಪ್ತವಾಗಿ ಒಂದೋ ಎರಡೋ ಪದ್ಯಗಳಲ್ಲಿ ತಿಳಿಸಿದ್ದಾನೆ. ಕೆಲವೊಮ್ಮೆ ಒಂದೇ ಪದ್ಯದಲ್ಲಿ ಕೇವಲ ನಾಮ ನಿರ್ದೇಶನ ಮಾಡಿ ಮುಂದೆ ಸಾಗಿದ್ದಾನೆ. ಹೀಗಾಗಿ ನೂರೊಂದು ವಿರಕ್ತರೆಂಬುವರು ಕೇವಲ ಊಹಾತ್ಮಕ ಕಲ್ಪನೆಯಾಗಿರಬಹುದೇ, ಅಲ್ಲದೇ ಮೋದಿರುದ್ರ ಕಲ್ಪನಾತ್ಮಕವಾಗಿ ಹೆಸರನ್ನು ನೀಡಿರಬಹುದೇ ಎಂಬ ಅನುಮಾನ ಆಧುನಿಕ ವಿದ್ವಾಂಸರದಾಗಿದೆ. ಆದರೆ ಈ ನೂರೊಂದು ವಿರಕ್ತರದು ಕೇವಲ ಕಲ್ಪನಾತ್ಮಕ ಅಥವಾ ಊಹೆಯ ಹೆಸರಾಗಿರದೆ ಅಂದು ಅವರು ಕೈಗೊಂಡ ಕಾಯಕದ ಹಿನ್ನೆಲೆಯ ಮೇಲೆ ಅವರಿಗೆ ಹೆಸರಿಟ್ಟಿರಬಹುದು. ಈ ವಿರಕ್ತರು ಹಂಪೆಯಲ್ಲಿ ಎಲ್ಲಿಂದ ಬಂದು ನೆಲೆಸಿದರೋ ಯಾರಿಗೂ ತಿಳಿಯದು. ಎಲ್ಲೋ ಅಮಾಯಕರಂತೆ, ಅರೆಹುಚ್ಚರಂತೆ ಹಂಪೆಯ ಬೀದಿಯಲ್ಲಿ ತಿರುಗುತ್ತಿರುವ ಇವರ ಹೆಸರು ಅಥವಾ ಪೂರ್ವ ಇತಿಹಾಸ ಯಾರಿಗೆ ಗೊತ್ತು?

ಆದರೆ ಕೆಲವೊಂದು ವೇಳೆಯಲ್ಲಿ ಇವರು ತೋರಿದ ಲೀಲೆಗಳಿಂದ ಜನರಿಗೆ ಹತ್ತಿರವಾದರು. ಹೀಗಾಗಿ ಅವರು ಮಾಡುವ ಲೀಲೆಗಳ ಮೇಲೆ ಹೆಸರಿಟ್ಟು ಕರೆದಿರಬೇಕಾಗಿರುತ್ತದೆ. ಹೇಗೆಂದರೆ ನಮ್ಮಲ್ಲಿ ಬೀದಿಗಳಲ್ಲಿ ಅಥವಾ ಊರುಗಳಲ್ಲಿ ಸುತ್ತಾಡುವ ಹುಚ್ಚರ, ಮಂದ ಬುದ್ಧಿಯ ಅರೆಹುಚ್ಚರ ಹೆಸರು ನಮಗೇನು ಗೊತ್ತು. ಅವರ ವರ್ತನೆಯ ಮೇಲೆ ಕೆಲವೊಮ್ಮೆ ಅವರಿಗೆ ಹೆಸರಿಡುತ್ತೇವೆ. ಹೀಗೆ ಅಂದು ಪಂಪಾಕ್ಷೇತ್ರದಲ್ಲಿ ವಿರಕ್ತರನ್ನು ಅವರ ಕಾಯಕ, ಅಥವಾ ವರ್ತನೆಯ ಹಿನ್ನೆಲೆಯಲ್ಲಿ ಕರೆದಿರಬೇಕು.

೧. ಕರಸ್ಥಲದ ನಾಗಿದೇವ

ಕರಸ್ಥಲದ ವೀರಣ್ಣೊಡೆಯನ ಶಿಷ್ಯನಾಗಿದ್ದ ನಾಗಿದೇವ ವಿರಕ್ತರಲ್ಲಿ ಆದಿಪುರುಷನಾಗಿದ್ದ. ಮಹಾನ್ ವೇದಾಂತಿ ಹಾಗೂ ಮಹಿಮ ಪುರುಷನಾದ ಇವನು ಹಲವು ರೀತಿಯ ಪವಾಡಗಳಿಂದ ಜನಸಾಮಾನ್ಯರ ಬಾಳಿಗೆ ಬೆಳಕಾಗಿದ್ದ. ಇವನನ್ನು ಕುರಿತು ಹಲವು ಕಾವ್ಯಗಳಲ್ಲಿ ಪ್ರಸ್ತಾಪ ಬಂದಿದೆ. ಅಲ್ಲದೆ ರುದ್ರಕವಿಯು ನಾಗಿದೇವನನ್ನು ಕುರಿತು 'ಕರಸ್ಥಲದ ನಾಗಿಲಿಂಗನ ಚರಿತೆ' ಎಂಬ ಕಾವ್ಯವನ್ನೇ ರಚಿಸಿದ್ದಾನೆ. ಹಲವು ಕೃತಿಗಳಲ್ಲಿ ಇವನು ಪರಸ್ತ್ರೀ ಲಂಪಟನಾಗಿದ್ದನೆಂಬಂತೆ ಚಿತ್ರಿತನಾಗಿದ್ದಾನೆ. ಮೋದಿಯ ರುದ್ರನು ಸಹ ತನ್ನ ವಿರಕ್ತರ ಕಾವ್ಯದಲ್ಲಿ ನಾಗಿದೇವನ ವ್ಯಕ್ತಿತ್ವವನ್ನು ಮತ್ತಷ್ಟು ಸ್ಪಷ್ಟವಾಗಿ ವಿವರಿಸಿರುವನು. ಒಂದು ದಿನ ರಾತ್ರಿ ನಾಗಿದೇವನು ಪತಿವುಳ್ಳ ಸ್ತ್ರೀಯ ಮನೆಗೆ ಹೊಕ್ಕಿದ ಪ್ರಸಂಗ ಈ ಕೆಳಗಿನ ಪದ್ಯದಲ್ಲಿದೆ.

"......... ಒಂದು ದಿನದಲ್ಲಿ ಪತಿಯುಳ್ಳ ಸ್ತ್ರೀಯರಿಗೆ
ಒತ್ತೆಯಂಗೊಟ್ಟು ಒಲಿಸಿರ್ದ ಅರ್ಧರಾತ್ರೆ
ಕತ್ತಲೆಯೊಳಗೆ ಅವಳು ಮಲಗಿರ್ದ ಸ್ಥಾನಕ್ಕೆ ಪೋಗಲ್ಕೆ ಪತಿಗಾಣುತ
ಎತ್ತಲವ ಚೋರನಿವನೆಂಬುತಂ ಪಿಡಿಕೊಂಡ
ಮೊತ್ತಿದರು ಮನಬಂದ ತೆರದಿ ಮಾನವ ಪೋಗೆ
ವ್ಯರ್ಥವಾದುದು ಜನ್ಮವೆಂದು ವೈರಾಗ್ಯಮುಂ ಪುಟ್ಟಿರಲು ತಲೆದೋರಲು"[೨]

ರಾತ್ರಿಯ ವೇಳೆಯಲ್ಲಿ ಪತಿ ಇರುವ ಸ್ತ್ರೀಯರ ಹತ್ತಿರ ಹೋಗುವನು. ಅವನನ್ನು ಕಂಡು ಅವರು ಯಾರೋ ಕಳ್ಳನಿರಬೇಕೆಂದು ಅವನನ್ನು ಮುತ್ತಿಕೊಳ್ಳುವರು. ಆಗ ಅವಮಾನಿತನಾದ ನಾಗಿದೇವ ವೈರಾಗ್ಯ ತಾಳುವನು.

"ಅಂಗನೇಯ ಸಂಗದಿಂದೆನಗೆ ಅಭಿಮಾನಮುಂ
ಭಂಗವಾಯಿತು ಎಂದ ಸಂಗ ಸಮರಸ ಸುಖವ
ಅಂಗಿಕರಿಸುವೆನೆಂದು ಅರಿವು ತಲೆದೋರುತ್ತಂ ವಿಥ್ಯವೀದೇಹವೆಂದು

ಅಂಗಭೂಷಣ ವಸ್ತ್ರಲಂಕಾರ ತ್ಯಜಿಸುತಂ
ಲಿಂಗಮಂ ಕರದೊಳಗೆ ಪಿಡಿಕೊಂಡು ನಿಗ್ರತ್ವ
ಅಂಗದಿಂ ಭಸ್ಮಧಾರಣನಾಗಿ ನಡೆತರಲು ಕಂಡು ಜನ ನಗುತೀರ್ಥರು."[9]

ಪರಸ್ತ್ರೀಯ ಸಂಗವನ್ನು ಬಯಸಿದ ನಾಗಿದೇವ ಒಂದು ದಿನ ಒಬ್ಬರ ಮನೆಯಲ್ಲಿ ಪ್ರವೇಶಿಸಿ ಅವಮಾನಿತನಾದ ಮೇಲೆ ತನ್ನ ಮನೋವಿಕಾರವನ್ನು ಶಪಿಸಿ ವಿಷಯಾಸಕ್ತಿಯೋ ಭವಬಂಧನದ ಮೂಲವೆಂದು ಮನಗಂಡು ಆ ಅರಿವಿನ ಎಚ್ಚರಿಕೆಯ ಅಮೃತ ಮೂಹೂರ್ತದಲ್ಲಿಯೇ ಸಮ್ಯೇಕ್ ಜ್ಞಾನಭರಿತನಾಗಿ ಸಂಸಾರವನ್ನು ಹರಿದೊಗೆದು ಪೀಠವನ್ನು ಕಿತ್ತೆಸೆದು ಇಷ್ಟ ಲಿಂಗವೊಂದನ್ನೇ ಕೈಯಲ್ಲಿ ಹಿಡಿದು ಮರುಳನಂತೆ ತಲೆಗೆ ಬೂದಿ ಬಡಿದುಕೊಂಡು ದಿಗಂಬರ ವೇಷಿಯಾಗಿ ಬರುವಾಗ ನಾಗಿದೇವನ ಆಕಾರ ವಿಕಾರದ ಲಕ್ಷಣವನ್ನು ಕಂಡು ಜನ ಅಪಹಾಸ್ಯ ಮಾಡಿ ನಗುವರು. ಅದನ್ನೆಲ್ಲವನ್ನು ಲೆಕ್ಕಿಸದೇ ನಾಗಿದೇವನು ತನ್ನ ಗುರು ಕರಸ್ಥಲದ ವೀರಣ್ಣೊಡೆಯನ ಬಳಿಗೆ ಬರುವನು. ಇವನ ಪೂರ್ವಾಪರ ವಿವರ ತಿಳಿದ ವೀರಣ್ಣೊಡೆಯರು ಇವನ ತೀವ್ರ ವೈರಾಗ್ಯವನ್ನರಿತು 'ಪೀಠರಹಿತ ಲಿಂಗಕ್ಕೆ ಪೀಠವಿತ್ತು' ಕ್ರೀಯಳಿವ ಪರಿಯಂತೆ ತೋಲಗಲೀಯದಿರು ಪೀಠದಿಂ' ಎಂದು ಬೋಧಿಸಿ ಪ್ರಸಾದವಿತ್ತು ಕರುಣಿಸಿ ಕಳಿಸುತ್ತಾನೆ. ಮುಂದೆ ಸಕಲ ದೇಶವನ್ನೆಲ್ಲ ಸುತ್ತಾಡಿ ಯೋಗಸಿದ್ಧಿಯನ್ನು ಪಡೆದು ಶಿಷ್ಯ ನಾಗಿದೇವ ಮರಳಿ ಬಂದಾಗ ಅವನ ನಿಲುಮೆಗೆ ವೀರಣ್ಣೊಡೆಯ ಬೆರಗಾಗುವನು. ತಾನು ಗುರುವೆಂಬ ಭಾವ ಬಿಟ್ಟು ಶಿಷ್ಯನನ್ನು ಅರ್ಘ್ಯ ಪಾದ್ಯಾಸನಗಳಿಂದರ್ಚಿಸಿ ಗೌರವಿಸುತ್ತಾನೆ.

ಈ ಮೇಲಿನ ಪರಸ್ತ್ರೀ ಲಂಪಟನ ವಿಷಯವನ್ನು ರುದ್ರಕವಿ ರಚಿಸಿದ 'ಕರಸ್ಥಲನಾಗಲಿಂಗನ ಚರಿತ್ರೆ', ಹಾಗೂ ವಿರೂಪಾಕ್ಷ ಪಂಡಿತನ 'ಚೆನ್ನಬಸವ ಪುರಾಣ'ದಲ್ಲಿ ಪ್ರಾಪ್ತವಾಗಿದೆ. ಈ ರೀತಿಯ ಸ್ತ್ರೀ ವ್ಯಾಮೋಹಕ್ಕೆ ಈ ಕವಿಗಳು ತಮ್ಮ ಕಾವ್ಯದಲ್ಲಿ ಕೆಲವೊಂದು ನಿದರ್ಶನವನ್ನು ಸಹ ಕೊಡುವರು.

ಒಮ್ಮೆ ವೀರಣ್ಣೊಡೆಯನು ಪುಷ್ಪವಾಟಿಕೆಗೆ ಹೋಗಿರಲು ಮೂರೆಡೆಯಲ್ಲಿ ಮಲವಬಿಟ್ಟು ಅಲ್ಲಿದ್ದ ವೀರಣ್ಣೊಡೆಯನ ಮಡದಿಗೆ

"ಎಲೆ ತರುಣಿ ಈ ಮೂರು ಮಲವ ಬೇಕಾದರೇ
ನಲಿದಿರಲಿ ವಲ್ಲದಿರೆಯೆಮ್ಮ ಸಂಗಡ ಬರಲಿ
ಸುಲಭದಿಂ ಈ ವಾಕ್ಯ ನಿನ್ನ ಪುರುಷಗೆ ಪೇಳು......"[೬]

ಎಂದು ತಿಳುಹಿ ಅಲ್ಲಿಂದ ನಡೆದು ಹೋಗುತ್ತಾನೆ. ಪುಷ್ಪವಾಟಿಕೆಯಿಂದ ವೀರಣ್ಣೊಡೆಯ ಬಂದ ಮೇಲೆ ತರುಣಿಯಿಂದ ವಿಷಯ ತಿಳಿದು ಶಿಷ್ಯನ ವೈರಾಗ್ಯ ವೈಖರಿಗೆ ಮೆಚ್ಚಿ ಅಲ್ಲಿಂದ ತಾನು ಹೊರಟು ಶಿಷ್ಯ ನನ್ನರಸುತ್ತ ಬರಲು, ಮಧ್ಯ ದಾರಿಯಲ್ಲಿ

"........ಮಳೆಗೆ ಕೇಶವಂ ತಟ್ಟಿರಲು

ಸಲೆ ಯೋಗ ಮುದ್ರೆಯೊಳು ಪರವಶನೈದಿರಲು ನೋಡಿ ಜೋದ್ಯಂಬಡುತಲಿ"[೭]

ವೀರಣ್ಣೊಡೆಯ ಗಾಬರಿಗೊಂಡು ಅವನ ತಲೆಗೂದಲನ್ನು ಬಿಡಿಸುತ್ತಾನೆ. ಮುಂದೆ ಇಬ್ಬರೂ ಪ್ರೌಢದೇವರಾಯನಿದ್ದ ವಿದ್ಯಾನಗರಿಗೆ ಬಂದು, ವಿಜಯನಗರದ ಬೀದಿಗಳಲ್ಲಿ ಅಂಗಡಿ ಮುಗ್ಗಟ್ಟುಗಳನ್ನು ನೋಡುತ್ತಾ, ದವಸ ಧಾನ್ಯದ ಅಂಗಡಿ, ಹೂವಿನ ವ್ಯಾಪಾರ, ಚಿನ್ನದ ವ್ಯಾಪಾರ, ಬಟ್ಟೆಯ ವ್ಯಾಪಾರ, ಹಣ್ಣು ಹಂಪಲಿನ ವ್ಯಾಪಾರಿಗಳನ್ನು ಅಲ್ಲದೆ ನಾರಿಯರು ಶೃಂಗರಿಸಿಕೊಂಡು ಹೋಗುತ್ತಿರುವುದನ್ನು ರಾಜಬೀದಿಯಲ್ಲಿ ಕಾಣುವರು. ಈ ಸಂದರ್ಭದಲ್ಲಿ ವರ್ಣನೆಗೆ ಹೆಸರಾದ ಮೋದಿಯ ರುದ್ರನು ಹಂಪೆಯ ಬೀದಿಯಲ್ಲಿ ಕಣ್ಣಿಗೆ ಏನನ್ನು ಕಾಣುತ್ತದೆಯೋ ಅವೆಲ್ಲವನ್ನು ತುಂಬ ಸೊಗಸಾಗಿ ಕಾವ್ಯದಲ್ಲಿ ವರ್ಣಿಸಿರುವನು. ಅಂದು ಹಂಪೆಯ ಪರಿಸರದಲ್ಲಿರುವ ರಮಣಿಯರನ್ನು ಕುರಿತು ಹೆಚ್ಚು ಮಾಹಿತಿ ನೀಡಿದ್ದಾನೆ. ಅಲ್ಲದೆ ಅಂದಿನ ಸಂದರ್ಭದಲ್ಲಿ ಹಂಪೆಯ ಬಜಾರಿನಲ್ಲಿ ಅಥವಾ ಬೀದಿಗಳಲ್ಲಿ ಏನೆಲ್ಲಾ ವಸ್ತುಗಳ ವ್ಯಾಪಾರ ಸೊಗಸಾಗಿ ನಡೆಯುತ್ತಿದ್ದವು ಎಂಬುದರ ಬಗೆಗೆ ಈ ಕಾವ್ಯ ಸೂಕ್ತ ಮಾಹಿತಿ ನೀಡುತ್ತದೆ.

"ಆ ಪಟ್ಟಣದೊಳೆಸವ ಸೆರ್ವ ಶೃಂಗಾರಮಂ
ರೂಪು ಜೀವಿಗಳು ಸರ್ವಜ್ಞ ಸತ್ಪುರುಷರಂ
ಪಾಪರಹಿತರು ಪರಹಿತಾರ್ಥದಾ ಧರ್ಮಿಗಳು ರಣಶೂರ ದಾನಶೂರರು
ಕಾಪಾಲಧರನ ಭಕ್ತಿಯ ನಿಷ್ಠೆ ವೈರಾಗ್ಯ
ದಾಜ್ಞೆ ಪರಮಜ್ಞಾನ ಪುರುಷರ ನೋಡಿ ಹರುಷದಿಂ
ಆ ಪುರವ ಬಳಸಿ ಪರಿವಾ ತುಂಗಭದ್ರೆ ಗಂಗಾತಟಕೆ ನಡೆತಂದರು."[೮]

ಪವಿತ್ರ ತೀರ್ಥ ಕ್ಷೇತ್ರವಾದ ಹಂಪೆಯಲ್ಲಿ ನೆಲೆನಿಂತ ಜನರನ್ನು ಕವಿ ಮೋದಿರುದ್ರ ವಿಶಿಷ್ಟ ರೀತಿಯಲ್ಲಿ ಕೊಂಡಾಡಿದ್ದಾನೆ. ತುಂಬ ಸುಂದರರಾಗಿರುವ ಇಲ್ಲಿಯ ಜನ ಸತ್ಪುರುಷರು, ರಣಶೂರರಾಗಿರುವರು ಹಾಗೂ ದಾನಶೂರರಲ್ಲದೆ ಪರಮ ಜ್ಞಾನಿಗಳನ್ನು ಕಂಡು ಹರ್ಷರಾಗುವರು. ಹೀಗೆ ಹಂಪೆಯ ಬೀದಿಗಳಲ್ಲಿ ಕಣ್ಣಿಗೆ ಕಂಡಿದ್ದನ್ನು ನೋಡುತ್ತಾ ತುಂಬಾ ಸಂತೋಷ ಭರಿತರಾದ ವೀರಣ್ಣೊಡೆಯ ಹಾಗೂ ನಾಗಿದೇವ ಮುಂದೆ ಲಿಂಗಾರ್ಪಿತ ಭಿಕ್ಷೆ ಬೇಡಲು ನಡೆಯುವರು. ಮುಂದೊಂದು ಶಿವಭಕ್ತನ ಮನೆ ಇರುವುದನ್ನು ಕಂಡು ಸಂತೋಷಗೊಂಡ ಇವರು ಹೀಗೆ ಒಳಹೋಗುತ್ತಿದ್ದಂತೆ ಮನೆಯಿಂದ ಸ್ತ್ರೀ ಒಬ್ಬಳು ಬರುವಳು. ಅವಳು 'ರಾಹುತನ' ಮಡದಿ ಎಂದು ಅತೀಂದ್ರಿಯ ಜ್ಞಾನಿಯಾದ ನಾಗಿದೇವ ಗ್ರಹಿಸುವನೂ ಹುಚ್ಚ ರಾಹುತನ ಮಡದಿ ದಿವ್ಯಾಂಬರವನ್ನುಟ್ಟು, ರತ್ನಾಭರಣದಿಂದ ಶೋಭಿತಳಾಗಿ ಭಿಕ್ಷೆ ನೀಡಲು ಬಂದಾಗ ವೀರಣ್ಣೊಡೆಯ ಇವಳ ಭಿಕ್ಷೆ ಬೇಡ ಎಂದು ನುಡಿವನು. ಆಗ ನಾಗಿದೇವ ಈ ಕೆಳಗಿನಂತೆ ನುಡಿಯುವನು.

"..

.... ಶಿವ ಶಿವ ವಿರಕ್ತ ಬಂದ ಭಿಕ್ಷವ ಬೇಡಲುಂ
ಶಿವಶರಣರೊಪ್ಪೂವರೆ ಇವಳ ಭಕ್ತಿಯ ಪ್ರೀತಿ
(ಕೆಯ್ಕೊಂಡು)ಮುಂದೆ ಬಂಗರು ಲಿಂಗಾರ್ಪಿತವ ಮಾಡಬೇಕಯ್ಯ ಶರಣರು"[೯]

ಮುಂದೆ ನಾಗಿದೇವ ಹಾಗೂ ವೀರಣ್ಣೊಡೆಯರಿಬ್ಬರು ಆಲೋಚಿಸುತ್ತಿರುವಾಗ ಹುಚ್ಚರಾಹುತನ ಮಡದಿ ನಾಗೇಶನನ್ನು ಕಂಡು ಕಾತುರ ಹೆಚ್ಚಿ ವಿನಯದಿಂದ ಬಂದು ಕಾಲಕ್ಕೆರಗಿ ಒಳಗೆ ಬನ್ನಿ ಎಂದು ನಿವೇದಿಸಿದಳು. ತನ್ನನ್ನೆ ಪ್ರಸಾದವನ್ನಾಗಿ ಸ್ವೀಕರಿಸೆಂದು ಮಂಚದೆಡೆ ಕರೆದೊಯ್ದಳು. ಆಗ ನಾಗಿದೇವ ಈ ಕೆಳಗಿನಂತೆ ಹೇಳುವನು.

"ನೀನು ಪತಿಯುಳ್ಳ ಸ್ತ್ರೀ ವಿರಕ್ತರೆಲೆ ನಾವು
ಹಾನಿ ಬಾಹುದು ಮುಂದೆ ನಿನ್ನ ಸಂಗದಿಯೆನಲು
ಜ್ಞಾನನಿಧಿ ನಿನ್ನ ಪ್ರಾಣಕೆ ಎನ್ನ ಪ್ರಾಣವನು ಕುಡುವೆನಂಜದಿರೆಂದಳು
ಏನು ಹೇಳಲಿ ಅವಳು ವಲ್ಲೆವೆಂದರೆ ನಮ್ಮ
ಮಾನವನು ಕೊಂಬುವಳು ಎನುತವಳ ಪ್ರೀತಿಯನು
ನಾನು ಸಲಿಸುವೆನೆಂದು ಮಂಚದೊಳು ಕುಳ್ಳಿರಲು ತಕ್ಕೈಸಿಕೊಂಡಳವಳು"[೧೦]

'ಅವಳು ತಕ್ಕೈಸಿ ಭೋಗಕ್ಕೆ ಸಂಭ್ರಮಿಸುತಿರೆ' ಶಿವಚಿಂತೆಯೊಳು ನಾಗಲಿಂಗ ದೇವರು ಇರಲು, ಹುಚ್ಚರಾಹುತ ಇದನ್ನು ಕಂಡು ತನ್ನ ಸತಿಯನ್ನು ತನ್ನ ಕಣ್ಣ ಮುಂದೆಯೇ ನೆರೆಯುತ್ತಿದ್ದುದನ್ನು ಸಹಿಸದೆ ಕೋಪಿಷ್ಟನಾಗಿ ಕೈಯಲ್ಲಿದ್ದ ಖಡ್ಗದಿಂದ ಇರಿಯುತ್ತಾನೆ. ಆದರೆ ಖಡ್ಗದ ಬಾಧೆ ನಾಗಿದೇವನಿಗೆ ತಾಗುವುದೇ ಇಲ್ಲ.

"ರಕ್ತವನು ಸೂಸದೆ ಅಲಗಿನ ಘಾಯ ಕಾಣದೆ ವಿ
ರಕ್ತನಾವನೊ ಇವನು ಮಾಯಾಕಾರನು ಎಂದು
ಭಕ್ತಿಯಲಿ ಕೈಮುಗಿದು ಅಪರಾಧಿ ನಾನೆನಲು ಅಂಜಬೇಡೆಲೆ ಮಗನೇ ನೀ
ಸುಖದಭಿಕ್ಷವ ನಿನ್ನ ಮಡದಿ(ಯೂ) ನೀಡಿದಳು
ಅಕಳಂಕ ಯು(ದ್ಧ) ಭಿಕ್ಷವ ನೀಡಿದೆಲೆ ನೀನು
ಭಕ್ತರಾ ಭಕ್ತಿ ನಮಗೆರಡು ಸರಿಯೆಂದನಾ ವಿರಕ್ತ ನಾಗೇಶ ತಾನು"[೧೧]

ಇಲ್ಲಿ ಸಂಘಟನೆ ವಾಸ್ತವಕ್ಕಿಂತ ಹೆಚ್ಚಾಗಿ ಅವನ ಭೋಗ-ಯೋಗಗಳ ಸಮನ್ವಯವನ್ನು ಸಾರುವುದಕ್ಕೆ ಅನಂತರ ಸೇರಿಕೊಂಡ ಒಂದು ಸಂಕೇತವೆಂದು ನಮಗೆ ತೋರುತ್ತದೆ. ಹುಚ್ಚ ರಾಹುತನು ನಾಗಿದೇವನ ಯೋಗ ಕಾಯಕಕ್ಕೆ ಬೆರಗಾಗಿ ಇವನು ಅಸಾಮಾನ್ಯನೆಂದು ಭಾವಿಸಿ ಆಸ್ಥಾನಕ್ಕೆ ಬಂದು ಪ್ರೌಢನರೇಂದ್ರನಿಗೆ ಎಲ್ಲ ಸಂಗತಿ ತಿಳಿಸುತ್ತಾನೆ. ರಾಯನು ನಾಗಿದೇವನನ್ನು

ಬರಮಾಡಿಕೊಂಡು ಉಚಿತಾಸನವಿತ್ತು ಗೌರವಿಸಿ ಅವನ ಅಲೌಕಿಕ ವ್ಯಕ್ತಿತ್ವವನ್ನು ಮನಗಂಡು ವಿದ್ಯಾನಗರಿಯಲ್ಲಿಯೇ ಇದ್ದ ಗುರುಬಸವನ ಮನೆಗೆ ಕಳಿಸುತ್ತಾನೆ.

ನಾಗಿದೇವ ಇಲ್ಲಿಯೂ ಸುಮ್ಮನಿರುವುದಿಲ್ಲ ಗುರುಬಸವ ಲಿಂಗಪೂಜೆಯಲ್ಲಿ ನಿರತನಾಗಿದ್ದಾಗ ಅವನ ಪೂಜೋಪಕರಣಗಳನ್ನೆಲ್ಲ ಬಿಸಾಡಿ ಅಲ್ಲಿಯೇ ಇದ್ದ ದಂಡಿಗೆಯನ್ನೆತ್ತಿ ಜೋರಾಗಿ ನೆಲಕ್ಕೆ ಅಪ್ಪಳಿಸುತ್ತಾನೆ. ಗುರುಬಸವ ಗಾಬರಿಯಾಗಿ, ಏನು ಮಾಡಿತ್ತು ದಂಡಿಗೆ? ಎಂದು ಕೇಳಿದರೆ ಲಿಂಗವಬಿಟ್ಟು ನಿನ್ನ ಧ್ಯಾನವೆಲ್ಲಿತ್ತು? ಈ ಬಗೆಯ ಪೂಜೆ ಬಯಲ ಸಮಾಧಿಯಿಂದ ಹೊರಗು. ಐಕ್ಯ ಪದವನ್ನು ಸ್ವಾನುಭಾವದಲ್ಲಿಡಗಿಸಿಕೊಳ್ಳುವ ವಿಧಾನವನ್ನು ನೀನಿನ್ನು ಅರಿಯೆ ಎಂದು ಉತ್ತರಿಸುವನು. ಗುರುಬಸವನು ಮಹೋನ್ನತ ಸಿದ್ಧಿಯ ಸ್ಥಿತ ಪ್ರಜ್ಞಾವಸ್ಥೆಯ ನಾಗಿದೇವನ ನಿಲುವಿಗೆ ನಮಸ್ಕರಿಸಿ ತನ್ನ ಬಳಿಯಲ್ಲಿಯೇ ಇರಲು ಭಿನ್ನವಿಸಿಕೊಳ್ಳುತ್ತಾನೆ.

'ಒಂದು ದಿನ ಕರಸ್ಥಲದ ವೀರಣ್ಣೊಡೆಯ, ಗುರುಬಸವ, ಕರಸ್ಥಲದ ನಾಗಿದೇವ ಈ ತ್ರಿವಿರಕ್ತ ಮೂರ್ತಿಗಳು ಒಂದೂಗೂಡಿ ಸಿಂಗಾರ ತೋಟಕ್ಕೆ ಹೋಗಲು ಅಲ್ಲಿದ್ದ ತೆಂಗಿನ ಎಳೆಗಾಯಿಗಳನ್ನು ಕಂಡು ವಿರಕ್ತರು ಅದರೊಳಗಿರುವ ಎಳನೀರು ತಮ್ಮ ಲಿಂಗಕ್ಕರ್ಪಿತವಾದುದೆಂದು ನುಡಿಯುತ್ತಾರೆ. ತೋಟಿಗನು ತಂದು ಅವನನ್ನು ಮುಂದಿಡಲು ಎಲ್ಲರ ಕಾಯಿಗಳಲ್ಲಿ ನೀರಿದ್ದುದು ಕಂಡುಬರುತ್ತದೆ. ಆದರೆ ನಾಗಿದೇವನ ಕಾಯಿಯಲ್ಲಿ ಒಂದು ಹನಿ ನೀರೂ ಇರುವುದಿಲ್ಲ. ಇವುಗಳನ್ನು ಕಣ್ಣಾರೆ ಕಂಡ ವಿರಕ್ತರೆಲ್ಲಾರೂ ನಾಗಿದೇವನ ಲಿಂಗಾರ್ಪಿತದ ಪರಿಗೆ ಬೆರಗಾಗುತ್ತಾರೆ. ಉಭಯರು ಶ್ರೀಗಿರಿಗೆ ಹೊರಟು ಮೋಹಿನಿ ಗಜವಿದ್ದೆಡೆಗೆ ಬರುತ್ತಾರೆ. ಹಗ್ಗದಿಂದ ಕಟ್ಟಿದ ಆ ಗಜವನ್ನು ನಾಗಿದೇವನು ಏರಲು ಕಟ್ಟಿದ ಹಗ್ಗಗಳೆಲ್ಲವು ಬಂಗಾರವಾಗುವವು. ನಾಗಿದೇವನು ಇನ್ನೂ ತಾನು ಏಕಾಂಗಿಯಾಗಿ ಸಂಚರಿಸಬೇಕೆಂದು ನಿರ್ಧರಿಸಿ, ವೀರಣ್ಣೊಡೆಯನಿಗೆ ಗುರುವೆ ನೀವಿನ್ನು ಜಪನಿಂ ಪೂಜೆಯಂ ಕೈಗೊಳ್ಳುತಂ ಕೆಲವು ದಿನವಿದ್ದುಬಹುದು ಎನ್ನಲು ವೀರಣ್ಣೊಡೆಯನು ಶಿಷ್ಯ ವಿಯೋಗದಿಂದ ಅಸಮಧಾನ ಸೂಚಿಸಲು ನಾಗಿದೇವ ಪುನಃ ಅನುಮಾನವೇಕೆ? ನಾನೆ ಬಂದು ನಿಮ್ಮನ್ನು ನಿರವಯವನ್ನೈದಿಸುವೆ. ಆವರೆಗೆ ಇಲ್ಲಿಯೇ ಇರುವುದೆಂದು ಭಿನ್ನವಿಸಲು ಅದಕ್ಕೆ ವೀರಣ್ಣೊಡೆಯ ಸಮ್ಮತಿಸಿದನು.

"ನಿನ್ನನಗಲಿಯು ನಾನು ಇರಲರಿಯೇ ಎಲೆ ಗುರುವೆ
ಚೆನ್ನಾಗಿ ತಿಳಿ ನೀನು ನಿನ್ನ ಸರ್ವಾಂಗದಲಿ
ಎನ್ನ ಸ್ವರೂಪ ಪ್ರತಿಬಿಂಬದೊಲ್ ಒಪ್ಪಿಹುದು ತಿಳಿದು ನೋಡಿರಿ ನೀವೆನೆ
ಅನ್ಯೋನ್ಯ ಭಾವವನು ತೋರದೀ ನಿರ್ಮಲದ
ಚಿನ್ನ ಚಿತ್ತವ, ತಾಳಿ ಇರಬೇಕು ನೀವೆ(ಸಂ)
ಪನ್ನ ನಾಗೇಶ ಬಯಲಾಗಿ ಪೋದನು ಶಂಭುಲೋಕಕ್ಕೆ ಅತಿಹರುಷದಿ"[೧]

ನಾನು ಶ್ರೀಶೈಲದಿಂದ ಮರಳಿ ಈ ವಿದ್ಯಾನಗರಿಯಲ್ಲೇ ಬರುವೇನು. ಹೀಗಾಗಿ ನೀವು ಇಲ್ಲಿಯೇ ವಿದ್ಯಾನಗರಿಯಲ್ಲಿರಿ ಎಂದೂ ಹೀಗೆ ಸೂಚನೆ ನೀಡುವನು.

"ತ್ಯಾಗದಿಂ ತನ್ನ ಮಗಳಂ ಕೊಡುವ ಪ್ರಭುಡೇಂದ್ರ
ಭೋಗಿಸುತ ಸಕಲ ಸುಖ ಲಿಂಗೇಂದ್ರಮುಖದಿಂದ
ಆಗುಮಾಡಿರೆ ಕ್ರಿಯಾಪದ್ಧತಿ ನೀವಿಲ್ಲಿಯೆಂದು ಪೇಳ್ದನು ಗುರುವಿಗೆ"[೨೩]

ನಾಗಿದೇವನು ಹೇಳಿದ ಈ ಮೇಲಿನ ಮಾತು ಸತ್ಯವಾಗಿರುವುದು. ವೀರಣ್ಣೊಡೆಯ ವಿದ್ಯಾನಗರಿಯಲ್ಲಿ ರಾಜನಲ್ಲಿ ಉನ್ನತ ಸ್ಥಾನ ಪಡೆದು ನಾಗಿದೇವ ಬರುವವರೆಗೆ ವೀರಣ್ಣೊಡೆಯ ರಾಜಕಾರ್ಯಗಳಲ್ಲೂ ಶಿವಗೋಷ್ಠಿಯಲ್ಲೂ ದಿನಕಳೆಯುತ್ತಾನೆ.

ನಾಗಿದೇವನು ಗುರುವಿಗಿತ್ತ ವಚನದಂತೆ ಪುನಃ ವಿದ್ಯಾನಗರಿಗೆ ಬರುತ್ತಾನೆ. ಒಮ್ಮೆ ನಾಗಿದೇವ ಹಗ್ಗಗಳನ್ನು ಕಾಲಿಗೆ ಕಟ್ಟಿಕೊಂಡು ಹಗ್ಗದ ಒಂದು ತುದಿಯಲ್ಲಿ ಲಿಂಗವ ಕಟ್ಟಿಕೊಂಡು ನಡೆದಾಡುತ್ತಿದ್ದುದು ಪ್ರೌಢದೇವರಾಯನಿಗೆ ಗೊತ್ತಾಗುತ್ತದೆ. ನಾಗಿದೇವ ಮಲಗಿದ್ದಾಗ ಹಗ್ಗಕ್ಕೆ ಕಟ್ಟಿದ ಲಿಂಗವನ್ನು ರಾಜನು ಬಿಚ್ಚಿಬಿಡುತ್ತಾನೆ. ನಾಗಿದೇವನ ಹರಣ ಆಗಲೇ ಹಾರಿಹೋಗುತ್ತದೆ. ಬರಿ ಡಿಂಬ ಮಾತ್ರ ಉಳಿದು ಅವನು ಏಳದಿರುವುದನ್ನು ಕಂಡು ಪುನಃ ಲಿಂಗವ ಕಟ್ಟಲು ನಾಗಿದೇವ ತಟ್ಟನೆ ಏಳುತ್ತಾನೆ. ಭೂಪನು ಅವನ ಪ್ರಾಣ ಲಿಂಗಾನು ಸಂಧಾನಕ್ಕೆ ಬೆರಗಾಗಿ ಭಕ್ತಿಯಿಂದ ಪೊಡಮಾಡುತ್ತಾನೆ. ಮುಂದೆ ನಾಗಿದೇವನು ಬಾಲಲಿಂಗಣ್ಣ, ಹಾಗೂ ವೀರಣ್ಣೊಡೆಯರಿಗೆ ನಿರವಯಲ ಪದವಿಯನ್ನಿತ್ತು ತಾನೂ ಅಲ್ಲಿಯೇ ಬಯಲಾಗುತ್ತಾನೆ.

ಅಕ್ಕ ಸಾಲಿಯ ನಾಗಿಯೆಂಬ ಹೆಸರಿನಿಂದ ಖ್ಯಾತನಾಗಿದ್ದ ಈ ವ್ಯಕ್ತಿ ಯಾವುದೋ ಗಳಿಗೆಯಲ್ಲಿ ಎಚ್ಚತ್ತು ಮಹಾಮಾನವನಾಗಿ ಮೆರೆದನು. ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಮಂಚಳ್ಳಿಯಲ್ಲಿ ಇವರ ಕುರಿತಾಗಿ ಆಚರಣಾ ಕ್ರಮಗಳಿಗೆ ಕಾರ್ತಿಕ ಮಾಸದಲ್ಲಿ ಕಾರ್ತೀಕೋತ್ಸವ ನೆರವೇರುವುದು. ಅಲ್ಲದೇ ಇವನ ಪವಾಡ ಸಾದೃಶ್ಯ ಕುರಿತಾಗಿ ಹಲವು ಮೌಖಿಕ ಆಧಾರಗಳು ದೊರೆಯುತ್ತವೆ.

೨. ಕರಸ್ಥಲದ ವೀರಣ್ಣೊಡೆಯ

ವಿಜಯನಗರ ಸಾಮ್ರಾಜ್ಯದ ಪ್ರೌಢದೇವರಾಯನ ಆಳ್ವಿಕೆಯಲ್ಲಿ ಒಬ್ಬ ಪ್ರಭಾವಿ ವ್ಯಕ್ತಿಯಾಗಿ ಕರಸ್ಥಲದ ವೀರಣ್ಣೊಡೆಯ ಕಂಡುಬರುವನು. ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಹತ್ತರವಾದ ಸೇವೆಗೈದ ಕರಸ್ಥಲದ ವೀರಣ್ಣೊಡೆಯ ಅಂದು ವಿಜಯನಗರದ ಸುತ್ತಮುತ್ತಲು ನೆಲೆನಿಂತಿದ್ದ ನೂರೊಂದು ವಿರಕ್ತರೊಡನೆ ತುಂಬ ಅನ್ಯೋನ್ಯವಾದ ಬಾಂಧವ್ಯ ಹೊಂದಿದ್ದನೆಂಬುದು ಈ ಮೋದಿರುದ್ರನ ಕಾವ್ಯದ ಮುಖೇನ ತಿಳಿದುಬರುತ್ತದೆ.

'ವಿರಕ್ತರ ಕಾವ್ಯ' ಬರೆದ ಮೋದಿರುದ್ರ 'ಪ್ರೌಢದೇವರಾಯನ ಕಾವ್ಯ' ಬರೆದ ಅದೃಶ್ಯಕವಿ ಹಾಗೂ ಶಾಂತಲಿಂಗದೇಶಿಕರು ಇವನನ್ನು ನೂರೊಂದು ವಿರಕ್ತರಲ್ಲಿ ಒಬ್ಬನೆಂದು ಗುರುತಿಸಿರುವರು. ವಿರೂಪಾಕ್ಷ ಪಂಡಿತ ಹಾಗೂ ಮೋದಿಯ ರುದ್ರ ಕವಿಗಳು ತಮ್ಮ ಕಾವ್ಯಗಳಲ್ಲಿ ಪ್ರೌಢದೇವರಾಯನು ವೀರಣ್ಣೊಡೆಯನ ವ್ಯಕ್ತಿತ್ವ ಕಂಡು ತನ್ನ ಮಗಳನ್ನು ಮದುವೆ ಮಾಡಿಸಿದನೆಂಬ ಮಹತ್ವದ ವಿಷಯದ ಬಗೆಗೆ ಚರ್ಚಿಸಿರುವರು. ಅಂದು ಲಕ್ಕಣ್ಣ ದಂಡೇಶನಂತೆ ಇವನು ಸಹ ಮಂತ್ರಿಯಾಗಿ ಅಲ್ಲದೆ ಅಳಿಯನಾಗಿದ್ದನೆಂಬುದಕ್ಕೆ ಅಂದಿನ ಕಾಲದ ಕೆಲವೊಂದು ಸಾಹಿತ್ಯ ಹಾಗೂ ಶಾಸನಗಳು ನಮಗೆ ಆಕರವಾಗಿ ಸಹಾಯಕ್ಕೆ ದೊರೆಯುತ್ತವೆ. ಅಲ್ಲದೆ ಅಂದು ರಚನೆಯಾದ ಶಾಸನಗಳಲ್ಲಿ ಮಂತ್ರಿಗಳಿಗೆ 'ಒಡೆಯ' ಎಂಬ ಪಾರಿಭಾಷಿಕ ಪದದಿಂದ ಕರೆಯಲಾಗಿತ್ತು. ಉದಾ: ನಾಗಪ್ಪೊಡೆಯ, ಇರುಗಪ್ಪೊಡೆಯ, ಬೈಚಪ್ಪೊಡೆಯ ಎಂದು ಮಂತ್ರಿಗಳಿಗೆ 'ಒಡೆಯ' ಎಂದು ಕೊನೆಗೆ ಸೇರಿಸಲಾಗಿತ್ತು. ಹೀಗಾಗಿ ವೀರಣ್ಣೊಡೆಯರು ಪ್ರೌಢದೇವರಾಯನ ಕಾಲದ ಮಂತ್ರಿ ಮಹಾಶಾಯರಾಗಿದ್ದ ಲಕ್ಕಣ್ಣ, ಜಕ್ಕಣ್ಣ, ಮುದ್ದಣ್ಣ, ನಾಗಣ್ಣ ಮುಂತಾದ ಮಹಾಮಂತ್ರಿಗಳಲ್ಲಿ ಇವನು ಸಹ ಒಬ್ಬನಾಗಿದ್ದನೆಂದು ಹೇಳಬಹುದು. ಅಂದಿನ ಕಾಲದಲ್ಲಿ ರಚನೆಗೊಂಡ ಶಾಸನಗಳಲ್ಲಿ ವೀರಣ್ಣೊಡೆಯನನ್ನು ಬಿಟ್ಟರೆ ಮತ್ಯಾವ ವಿರಕ್ತರ ಹೆಸರು ಶಾಸನಗಳಲ್ಲಿ ಉಲ್ಲೇಖವಾಗಿಲ್ಲ.

ಪ್ರೌಡದೇವರಾಯನಿಗೆ ಆಪ್ತಾ ಮಂತ್ರಿಯಾಗಿ ಅಳಿಯನಾಗಿ ಕಾರ್ಯ ನಿರ್ವಹಿಸಿದ. ಹೀಗಾಗಿ ವೀರಣ್ಣೊಡೆಯನ ಕಾಲಮಾನ ೧೩೮೦–೧೪೫೦ರವರೆಗೆ ಜೀವಿಸಿರುವ ಸಾಧ್ಯತೆಗಳಿವೆ.

'ನೂರೊಂದು ವಿರಕ್ತ'ರ ಕಾವ್ಯದಲ್ಲಿ ವಿರಕ್ತರಲ್ಲಿ ಒಬ್ಬನಾಗಿ ಚಿತ್ರಿತಗೊಂಡ ವೀರಣ್ಣೊಡೆಯನು, ಕರಸ್ಥಲದ ನಾಗಿದೇವನ ಗುರುವಾಗಿ ಅಲ್ಲದೇ ಪ್ರೌಢದೇವರಾಯನ ಅಳಿಯನಾಗಿ ಈ ಕಾವ್ಯದಲ್ಲಿ ಪ್ರಮುಖ ಸ್ಥಾನ ಪಡೆದಿದ್ದಾನೆ. ಗುಂಡ್ಲು ಪೇಟೆ ತಾಲ್ಲೂಕಿನಿಂದ ಹಂಪೆಗೆ ಬಂದ ಇವರು ವಿದ್ಯಾನಗರಿಯಲ್ಲಿ ತಮ್ಮ ವಾಸ್ತವ್ಯ ಹೂಡುವರು. ಅಲ್ಲಿ ದೊರೆ ಪ್ರೌಢದೇವರಾಯನ ಆಸ್ಥಾನದಲ್ಲಿ ಕೆಲವು ದಿನಗಳಿದ್ದು, ನಂತರ ನಾಗಿದೇವ ತಾನು ಶ್ರೀಶೈಲಕ್ಕೆ ಹೋಗುವ ಸಂದರ್ಭದಲ್ಲಿ ವೀರಣ್ಣೊಡೆಯನಿಗೆ ವಿದ್ಯಾನಗರಿಯಲ್ಲಿಯೇ ಇರಬೇಕೆಂದು ತಿಳಿಸುತ್ತಾನೆ.

ಮುಂದೆ ಪ್ರೌಢದೇವೇಂದ್ರನು ಗುರುಬಸವನ ಮಾತಿನಂತೆ ತನ್ನ ಮಗಳನ್ನು ವೀರಣ್ಣೊಡೆಯನಿಗೆ ಧಾರೆ ಎರೆದುಕೊಟ್ಟನು. ರಾಜನ ಆಸ್ಥಾನದಲ್ಲಿದ್ದ ವೀರಣ್ಣೊಡೆಯ ರಾಜಭೋಗದಲ್ಲಿದ್ದರೂ ರಾಜ ಯೋಗಿಯಾಗಿರುವನು. ವಿರಕ್ತನಾದ ವೀರಣ್ಣೊಡೆಯ ವಿದ್ಯಾನಗರಿಯಲ್ಲಿರುವ ಎಲ್ಲಾ ವಿರಕ್ತರ ಪರಿಚಯವನ್ನು ಹಾಗೂ ಅವರ ಪವಾಡ ಸಾದೃಶ್ಯವನ್ನು ತನ್ನರಸನಿಗೆ ತಿಳಿಸುವನಾಗಿದ್ದಾನೆ. ಅಲ್ಲದೆ ತಾನು ಸಹ ಒಮ್ಮೆ ಪವಾಡ ತೋರಿಸಿದ ವೈಖರಿಯನ್ನು ಅರಸನಿಗೆ ತೋರಿಸುವನು. ಒಮ್ಮೆ ಪ್ರೌಢದೇವರಾಯ ಮತ್ತು ವೀರಣ್ಣೊಡೆಯರು ವೈಹಾಳಿ ವಿಹಾರಕ್ಕೆಂದು ಬಂದು ತಿರುಗಣಿ

(ಇದು ಚಕ್ರತೀರ್ಥವಾಗಿರುವ ಸ್ಥಳ) ಮಡುವಿನ ಬಳಿಗೆ ಬರುತ್ತಾರೆ. ಅಲ್ಲಿ ನಿಂತಾಗ ವೀರಣ್ಣೊಡೆಯ, ಒಂದು ಮೀಂಬುಲಿಗನ ಹಕ್ಕಿ ಪಂಪಾ ನದಿಯೊಳಗಿನ ಮೀನನ್ನು ಬಾಯಲ್ಲೆತ್ತಿಕೊಂಡು ಹಾರಿಹೋಗಿ ತಿಂದು, ಮತ್ತೊಂದಕ್ಕೆಂದು ನೀರಿನತ್ತ ಬರುವ ನೀರಾಟದ ದೃಶ್ಯವನ್ನು ಕಂಡು ಅದಕ್ಕೆ ಮೆಚ್ಚಿ ತನ್ನ ಕೈಯಲ್ಲಿ ಹಾಕಿಕೊಂಡಿದ್ದ ಪಚ್ಚದ ಕಡಗವನ್ನು ಒಗೆಯುವನು. ಅರಸನು ಬೆಚ್ಚಿ ಇಂಥ ಬೆಲೆಯುಳ್ಳ ಕಡಗವನ್ನು ಹೇಗೆ ಬಿಸುಟಿದೆ? ಎಂದು ಕೇಳಲು 'ಇದೋ ಹೀಗೆ' ಎಂದು ತನ್ನ ಕೈಯಲ್ಲಿದ್ದ ಇನ್ನೊಂದನ್ನೂ ಬಿಚ್ಚಿ ನೀರಿಗೆಸೆಯುತ್ತಾನೆ. ರಾಯನು ಇದರಿಂದ ಚಿಂತಾಕ್ರಾಂತನಾಗಿರಲು 'ಅರಸನೇ, ನೀನೆಂಥ ಮರುಳು ನೀನು ನನಗಿತ್ತ ಈ ಕಡಗಗಳು ನಿನ್ನ ಬೊಕ್ಕಸದಲ್ಲಿಯೇ ಇವೆ ಬೇಕಾದರೆ ತೆಗೆದು ನೋಡು' ಎನ್ನಲು, ಅರಸನು ಭಂಡಾರದಲ್ಲಿ ನೋಡಲು ಅವು ಅಲ್ಲಿಯೇ ಇದ್ದುದನ್ನು ಕಂಡು ವೀರಣ್ಣೊಡೆಯನ ಮಹಾತ್ಮ್ಯೆಗೆ ವಿಸ್ಮಯ ತಾಳುತ್ತಾನೆ."[೧೪] ಅಲ್ಲದೇ ತನ್ನ ಮಡದಿಗೆ ಹೊನ್ನಯ್ಯ ನೀಡಿದ ಸೀರೆಯ ಪ್ರಸಂಗದಲ್ಲಿ ಮೆರೆದ ಪವಾಡ ಸಹ ಅದ್ಭುತವಾದದ್ದು.

ವಿರಕ್ತರ ಕಾವ್ಯದ ಪ್ರಾರಂಭದಿಂದ ಹಿಡಿದು ಕೊನೆಯವರೆಗೆ ವೀರಣ್ಣೊಡೆಯ ಪ್ರೌಢದೇವರಾಯನ ಜೊತೆಯಲ್ಲಿಯೇ ಇರುವನು. ಹಂಪೆಯ ಪರಿಸರದಲ್ಲಿದ್ದ ನೂರೊಂದು ವಿರಕ್ತರ ಪರಿಚಯವನ್ನು ಅರಸನಿಗೆ ಮಾಡಿಸುವ ವೀರಣ್ಣೊಡೆಯ ಕಾವ್ಯದಲ್ಲಿ ನಿರೂಪಕನಾಗಿ ಚಿತ್ರಿತನಾಗಿದ್ದಾನೆ. ಈ ವಿರಕ್ತ ಪುರುಷರ ದಿವ್ಯ ಲೀಲೆಗಳಿಂದ ಬೆರಗಾದ ಪ್ರೌಢದೇವರಾಯ ವೀರಣ್ಣೊಡೆಯನ ವ್ಯಕ್ತಿತ್ವವನ್ನು ಮನಗಂಡು ಇವನು ಸಹ ಅಸಾಮಾನ್ಯ ಪುರುಷನೆಂದು ಭಾವಿಸಿದ. "ನೂರೊಂದು ವಿರಕ್ತರೆಲ್ಲರೂ ತಮ್ಮ ಲೀಲೆ ನಟಿಸಿ ಬಯಲಾದರು. ಅವರನ್ನು ತೋರಿದ ನೀವು ಕಾರಣ ಪುರುಷರು ನೀವು ನನ್ನ ಬಳಿ ಇರುವಿರೋ? ಹೋಗುವಿರೋ? ಎಂದು ಕೇಳಲು ವೀರಣ್ಣನು, ಕಾರಣ ಮೂರ್ತಿಯಾದ ನಾಗೇಶನು ಕರೆದರೆ ನಾನು ಹೋಗುವೆನು ಎಂದೇಳುವನು. ಹೀಗೆ ಕೊನೆಗೆ ಒಂದು ದಿನ ನಾಗೇಶನ ಆಜ್ಞೆಯ ಮೇರೆಗೆ ಜ್ಞಾನ ಜ್ಯೋತಿಯ ಮಹಾ ಬೆಳಕಿನಲ್ಲಿ ಕರಸ್ಥಲದ ನಾಗೇಶನಲ್ಲಿ ಒಂದಾಗಿ ನಿರ್ವಯಲನ್ನುಪ್ಪಿದನು. ಪ್ರೌಢದೇವರಾಯನು ಮಹಾ ವಿರಕ್ತ ಮೂರ್ತಿಗಳನ್ನು ತೋರಿದ ಮಹಿಮಪುರುಷ ವೀರಣ್ಣನನ್ನು ಕಳೆದುಕೊಂಡು ಮರಗುವನು.

೩. ಭಂಡಾರಿ ಹೊನ್ನಯ್ಯ

ಬಿಜ್ಜಳನ ಆಸ್ಥಾನದಲ್ಲಿದ್ದ ಭಕ್ತಿ ಭಂಡಾರಿ ಬಸವಣ್ಣನಂತೆ, ರಾಜ ಪ್ರೌಢದೇವರಾಯನ ಆಸ್ಥಾನದಲ್ಲಿ 'ಹೊನ್ನಶಾಂತ' ಅಥವಾ ಭಂಡಾರಿಶಾಂತ ಎಂಬ ವಿರಕ್ತನಿದ್ದನು. ಇವನು ಸಹ ನೂರೊಂದು ವಿರಕ್ತರಲ್ಲಿ ಒಬ್ಬನಾಗಿದ್ದು ತನ್ನ ಅಪಾರ ಲೀಲೆಗಳಿಂದ ಹಂಪೆಯಲ್ಲಿ ಮೆರೆದವ.

ಪ್ರೌಢದೇವರಾಯನ ಅಳಿಯನಾದ ಕರಸ್ಥಲದ ವೀರಣ್ಣೊಡೆಯನು ಹೊನ್ನ ಶಾಂತನ ಗುರುವಾಗಿದ್ದ. ಹೀಗಾಗಿ ಭಂಡಾರಿ ಹೊನ್ನಯ್ಯನು 'ಚಂದ್ರಗಾವಿಯ ಶಾಲಿನ' ವಿಷಯದಲ್ಲಿ ಅದ್ಭುತ ಪವಾಡವೆಸಗುವನು. ಒಮ್ಮೆ ದೊರೆ ಪ್ರೌಢದೇವರಾಯನು ತನ್ನ ರಾಣಿಗಾಗಿ ಚಂದ್ರಗಾವಿಯ ಶಾಲನ್ನು ತರಲು ಹೊನ್ನಶಾಂತನಿಗೆ ಹೇಳುವನು. ಸೀರೆ ತೆಗೆದುಕೊಂಡು ದಾರಿಯಲ್ಲಿ ಬರುವಾಗ ಗುರು ವೀರಣ್ಣಯ್ಯನ ದರ್ಶನವಾಗುತ್ತ ಗುರುವಿನ ಮನೆಗೆ ಹೊನ್ನಯ್ಯ ಹೋದಾಗ ಅವನ ಬಳಿ ಇರುವ ಸೀರೆಯನ್ನು ಕಂಡು ಗುರು ಪತ್ನಿ ಬೇಡುತ್ತಾಳೆ. ಗುರುಪತ್ನಿ ಬೇರೆಯವಳಲ್ಲ ತನ್ನ ಒಡೆಯನ ಪುತ್ರಿ ಎಂಬ ಅಭಿಮಾನದಿಂದ ತಾನು ತಂದ ಚಂದ್ರಗಾವಿಯ ಶಾಲನ್ನು ಕೊಡುವನು.

"ಒಂದಾನೊಂದು ದಿವಸದಿ ರಾಜನು
ಮಂದಿರಕೇ ಮಗಳನ್ನು ಬರಹೇಳಲು
ಚಂದ್ರಾಗಾವಿಯ ಶಾಲೆಯನ್ನುಟಯಿತರಲೂ ಕಾಣುತಲಿ
ನಂದನೆಯೇ ಈ ಸೀರೆಯ ಎಲ್ಲಿಯು
ತಂದಿರೆನುತ್ತಲಿ ಕೇಳಲು ಪಿತನೊಳು
ಮಂದಾಹಾಸದಿ ನುಡಿದಾಳಾಕೆಯು ಹೊನ್ನಿದೇವಯ್ಯ"[೧೫]

ಒಂದು ದಿನ ಪ್ರೌಢದೇವರಾಯನು ಮಗಳು ಮತ್ತು ಅಳಿಯನನ್ನು ಆಸ್ಥಾನಕ್ಕೆ ಆಹ್ವಾನಿಸುವನು. ಆಗ ಅರಮನೆಗೆ ಬರುವಾಗ ಗುರುವಿನ ಪತ್ನಿ ಹೊನ್ನಯ್ಯ ಕೊಟ್ಟ ಸೀರೆಯನ್ನುಟ್ಟುಕೊಂಡು ಬರುವಳು. ಅದನ್ನು ಕಂಡ ದೊರೆ ಹೊನ್ನಯ್ಯನನ್ನು ಕರೆಸಿ ನಿನಗೆ ಎರಡು ಸೀರೆಯ ಲೆಕ್ಕವನ್ನಾರು ಕೊಟ್ಟಾರು ಎಂದು ಕೇಳಿದನು. ಇದು ಹೊನ್ನಯ್ಯನಿಗೆ ಅಗ್ನಿ ಪರೀಕ್ಷೆ, ಆದರೆ ಕೆಲವೇ ಕ್ಷಣದಲ್ಲಿ ಬೊಕ್ಕಸದಲ್ಲಿಯ ವಿನಿಯೋಗಿಗಳು ಲೆಕ್ಕ ಸರಿ ಇದೆ ಎಂದು ಹೇಳಿದಾಗ ಎಲ್ಲರಿಗೂ ಆಶ್ಚರ್ಯ. ಹೀಗೆ ಹೊನ್ನಯ್ಯ ಗುರು ಪತ್ನಿಯ ವಿಷಯದಲ್ಲಿ ಮೆರೆದ ಗುರುಭಕ್ತಿಯ ಲೀಲೆ ಪ್ರಕಟವಾಗುವ ಹೊತ್ತಿಗಾಗಲೇ ಬಯಲಾಗುತ್ತಾನೆ. ಹೊನ್ನಯ್ಯನೆಂಬ ವಿರಕ್ತನಂತೆ ಅಂದು ಹಲವಾರು ಪವಾಡ ಪುರುಷರು ಆಸ್ಥಾನದ ಸುತ್ತಮುತ್ತಲೂ ನೆಲೆವೂರಿದರು.

೪. ಹೇಟೆಯ ಮರುಳ

ಹಂಪೆಯ ಪರಿಸರದಲ್ಲಿ ಬದುಕಿದ ವಿರಕ್ತರ ಲೀಲೆಗಳು ಹಲವು ಬಗೆಯವು. ಅವರ ವ್ಯಕ್ತಿತ್ವ ಯಾರಿಗೂ ನಿಲುಕಲಾರದ್ದಾಗಿದೆ. ಹೇಟೆಯ ಮರುಳನೆಂಬುವನು ವಿರಕ್ತರಲ್ಲಿ ಒಬ್ಬನಾಗಿದ್ದ. ಪುರದಲ್ಲಿ ಕೋಳಿಗಳ ಕಾಳಗದಲ್ಲಿ ತನ್ನ ಹೇಟೆಯನ್ನು ಕಾಳಗದಲ್ಲಿರಿಸಿ ಗೆಲುವನ್ನು ಪಡೆಯುತ್ತಿದ್ದನು. ಈ ಕೋಳಿಗಳ ಕಾಳಗಕ್ಕೆ ತನ್ನ ಹೇಟೆಯನ್ನು ಬಿಟ್ಟು ಗೆಲುವನ್ನು ಪಡೆಯುವುದೇ ಇವನ ಕಾಯಕವಾಗಿತ್ತು. ಪ್ರೌಢದೇವರಾಯನು ಇದನ್ನು ತಿಳಿದು ವೀರಣ್ಣಯ್ಯನಿಗೆ ಕೇಳುತ್ತಾನೆ.

ವಿರಕ್ತರೆಂಬುವರಿಗೆ ಈ ಕೋಳಿಗಳ ಆಟವೇಕೆ? ಇದನ್ನು ಹೇಟೆಯ ಮರುಳನಿಗೆ ಕೇಳೋಣವೆಂದು ಉಭಯರು ಸೇರಿ ಅವನ ಹತ್ತಿರ ಬರುವರು. ವಿರಕ್ತನನ್ನು ಕುರಿತು ನಿಮಗೇಕೆ ಈ ಆಟ ಎಂದು ಕೇಳಲು ಆಗ ಅವನು

"ಕೋಳಿಯು ಉದಯದ ಕಾಲವ ಬಲ್ಲುದು
ಭಾಳಾಂಬಕನಾ ಭಕ್ತರ ಜ್ಞಾನದ
ಕೋಳಿಯ ಮುಖದಲಿ ಅರಿವಿನ ಬೆಳಗವು ತಿಳಿದರೆ ಅದರಿಂದ
ಕಾಳಗ ಗೆಲ್ವರು ಕರಣಂಗಳೊಳೂ
ಕೀಲವನರಿದೂ ನಿರ್ವಯಲಪ್ಪರು
ಲೀಲೆಯ ತಿಳಿಯದೆ ನಿಮ್ಮೊಳು ಸಂಶಯ ತೋರುವದೇತಕೆನೆ"[೧೭]

ಕೋಳಿಯು ಉದಯದ ಕಾಲವ ಬಲ್ಲುದು, ಹೀಗೆ ಹೇಳುತ ಹೇಟೆಯ ಮರುಳನು ಕೋಳಿಯ ಸಮೇತವೇ ನಿರ್ವಯಲಾದ ಮಹಾಜ್ಞಾನಿ.

೫. ಟಗರ ಕಾಳಗದ ಪ್ರಭುದೇವ

ನೂರೊಂದು ವಿರಕ್ತರಲ್ಲಿ ಮತ್ತೊಬ್ಬ ಮಹಾವಿರಕ್ತ ಟಗರ ಕಾಳಗದ ಪ್ರಭುದೇವ. ಈ ಟಗರಿನ ಕಾದಾಟ ಮಾಡಿಸುವಲ್ಲಿ ಇವನು ತುಂಬ ಪ್ರಸಿದ್ಧಿಯನ್ನು ಪಡೆದಿದ್ದ. ಈ ಕಾಳಗದ ವಾರ್ತೆ ಪ್ರೌಢದೇವರಾಯನಿಗೆ ಹೇಗೋ ತಿಳಿಯಿತು. ಆಗ ಪ್ರೌಢದೇವರಾಯನು ಅರಮನೆಯ ಟಗರಿನೊಡನೆ ಪ್ರಭುದೇವನ ಟಗರದೊಂದಿಗೆ ಕಾದಾಡಲು ಕರೆದಾಗ ಪ್ರಭುದೇವ.

"ಬಡವರ ಟಗರನು ದೊರೆಗಳ ಮೇಲಕೆ
ಬಿಡುವುದು ವಿಪರಿತವಪ್ಪದು ತಪ್ಪದು
ಕೆಡುವದು ನಿಮ್ಮಯ ಮನಸನು ರಾಜನೆ ಕಾಳಿಗೆ ಬೇಡೆನಲು
ಬಿಡು ಬಿಡು ನೊಳ್ಪೆವುವೆಂಬುತ ಸಾಕಿದ
ಕಡು ಬಲ್ಮೆಯ ಟಗರಂಗಳ ತರಿಸುತ
ಒಡೆಯನ ಟಗರಿನ ಮೇಲಕೆ ನೂಕಲು ಬಿಟ್ಟನು ಪ್ರಭುದೇವ"[೧೮]

ನಾವು ಬಡವರು, ನೀವು ರಾಜರು, ನಿಮ್ಮ ಟಗರೊಂದಿಗೆ ಹೋರಾಟ ಬೇಡವೆಂದನು. ಆದರೂ ದೊರೆ ಕೇಳಲಿಲ್ಲ. ಟಗರ ಕಾದಾಟ ಆರಂಭವಾಯಿತು. ಪ್ರಭುದೇವನ ಒಂದೇ ಒಂದು ಟಗರವು ರಾಜನು ಸಾಕಿದ ನೂರು ಟಗರುಗಳನ್ನು ಮಣ್ಣು ಮುಕ್ಕಿಸಿತು. ರಾಜನು ಪ್ರಭುದೇವರ ಟಗರಿನ ಸಾಮರ್ಥ್ಯವನ್ನು ಕಂಡು ಇವನ ಮಾತು ದಿಟವಾದ್ದದೆಂದು ಆಲೋಚಿಸಿದನು.

ಬಲಿಷ್ಠವಾದ ಟಗರನ್ನು ನೋಡಿ ಸಂತೋಷಗೊಂಡು ಅದನ್ನು ಕೊಟ್ಟರೆ ಅರಮನೆಯ ಆನೆಯನ್ನು ಕೊಡುವುದಾಗಿ ಅರಸ ಹೇಳಿದನು. ಅದಕ್ಕೆ ವಿರಕ್ತ ಸಮ್ಮತಿಸಲಿಲ್ಲ, ನನ್ನ ಪ್ರಾಣವೇ ನನ್ನ ಟಗರಾಗಿದೆ ಎಂದ. ಆ ಟಗರಿನ ತೂಕದ ಹೊನ್ನನ್ನು ಕೊಡುವುದಾಗಿ ರಾಜ ಹೇಳಿದಾಗಲೂ ಪ್ರಭುದೇವ ಮನ್ನಿಸಲಿಲ್ಲ. ಕೊನೆಗೆ ಕೋಪಗೊಂಡ ಅರಸ ತನ್ನ ಆಸ್ಥಾನದ ಭಟರಿಗೆ ಅವನ ಟಗರನ್ನು ಹಿಡಿದು ತನ್ನಿ ಎಂದು ಆಜ್ಞಾಪಿಸಿದನು.

"ಪಿಡಿದು ಟಗರನು ಎಳೆದುತರಲಿಕೆ
ಕೆಡಹಿ ಅವರನು ಬಯಲತಾಗಲು
ಮೃಢನ ಮೂರುತಿ ಅದರೊಡನೆ ತಾ ಬಯಲ ಕೂಡಿದನು"[೨೮]

ಟಗರಿನೊಡನೆ ಬಯಲಾದ ಪ್ರಭುದೇವನನ್ನು ಕಂಡು ಪ್ರೌಢದೇವರಾಯನು ಮೃಢನ ಶರಣರನ್ನು ಕೆಣಕಬಾರದೆಂದು ಸ್ತುತಿಸಿದನು.

೬. ಬಾಲ ಲಿಂಗಣ್ಣ

ನೂರೊಂದು ವಿರಕ್ತರಲ್ಲಿ ಅತಿ ಚಿಕ್ಕವನೆಂದರೆ ಬಾಲ ಲಿಂಗಣ್ಣ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ವಾಣಿಯಂತೆ, ಇವನು ಕಿರಿಯ ವಯಸ್ಸಿಗೆ ಹಿರಿಯ ಜ್ಞಾನ ಪಡೆದವನಾಗಿದ್ದ. ವೀರಣ್ಣೊಡೆಯರು ಚರಮೂರ್ತಿಗಳಿಗೆ ಆರೋಗಣೆ ಮಾಡಿಸಿದ ಸಂದರ್ಭದಲ್ಲಿ ಬಾಲ ಲಿಂಗಣ್ಣ ಬರುವನು. ಆದರೆ ಬಾಲನೆಂದು ಇವನನ್ನು ವೀರಣ್ಣ ಅಲಕ್ಷಿಸುವನು. ಅವನು ಅಲ್ಲಿಯೇ ಪವಡಿಸಿರಲು ವೀರಣ್ಣೊಡೆಯ ಅವನ ಎದೆಯ ಮೇಲಿನ ಲಿಂಗ ತೆಗೆದು ತನ್ನಲ್ಲಿರಿಸಿಕೊಳ್ಳುವನು. ಎಲ್ಲರೂ ಹೋದ ಮೇಲೆ ವೀರಣ್ಣೊಡೆಯ ಅವನನ್ನು ಎಬ್ಬಿಸಿದಾಗ ಅಲ್ಲಿ ಬರಿ ಡಿಂಬ ಮಾತ್ರ ಇರುವುದು. ಮನಃ ಲಿಂಗವಿಯಲು ಲಿಂಗಣ್ಣ ಎಚ್ಚರಾಗುವನು. ವೀರಣ್ಣೊಡೆಯ 'ನೀನು ಪ್ರಾಣಲಿಂಗಾನು ಸಂಧಾನಿ' ಎಂದು ಹೇಳುತ್ತಾನೆ. ಲಿಂಗಣ್ಣನು ಲಿಂಗಜ್ಞಾನದಿಂದ ಪ್ರಸಾದದ ಎಲ್ಲ ವಿವರವನ್ನು ಹೇಳಿ ಬಯಲಾಗುವನು. ನಂತರ ವೀರಣ್ಣಯ್ಯನು ಬಾಲಲಿಂಗಣ್ಣನ ಮಹಿಮೆಯನ್ನು ಕೊಂಡಾಡುವನು.

೭. ಕಾಲಿಗೆ ಸರವಿಕಟ್ಟಿ ಅದರಲ್ಲಿ ಲಿಂಗವಿರಿಸಿ ತಿರುಗಿದ ಶರಣ

ಕಾಲಿಗೆ ಸರವಿ ಕಟ್ಟಿ ಅದರಲ್ಲಿ ಲಿಂಗವಿರಿಸಿ ರಾಜಬೀದಿಯಲ್ಲಿ ನಡೆಯುವ ವಿರಕ್ತನನ್ನು ಪ್ರೌಢದೇವೇಂದ್ರನು ಮೇಲುಪ್ಪರಿಗೆಯಲ್ಲಿ ಕುಳಿತು ಆಶ್ಚರ್ಯ ಪಡುವನು. ನಂತರ ವೀರಣ್ಣೊಡೆಯನಿಗೆ 'ಶಿವಶರಣರು' ಕಾಲಿಗೆ ಲಿಂಗಕಟ್ಟಿ ಎಳೆಯುವುದು ಉಚಿತವೇ? ಎಂದು ಕೇಳುತ್ತಾನೆ. ಆಗ ವೀರಣ್ಣೊಡೆಯನು

"..

ಇಂದು ನಿಮಗೇ ತೋರ್ಪೆವಾತನ

ಸಂದ ಐಕ್ಯದ ಲೀಲೆಯೆಂಬುತ ಸರವೆ ಲಿಂಗವನು

ತಂದು ತಮ್ಮೊಳು ಪಿಡಿದುಕೊಂಡಿರೆ

ಸಂದಿತಾತನ ಪ್ರಾಣ ಲಿಂಗದಿ

ಅಂದವನು ಕಾಣುತಲಿ ಅರಸನು ಬೆರಗುವಡೆದಿರ್ದ"[೨೯]

"ಅವನ ಲಿಂಗವನ್ನು ಕಾಲಿನಿಂದ ತಗಿಸಿದೊಡನೆ ಅವನ ಪ್ರಾಣ ಹಾರಿಹೋಗುತ್ತದೆ. 'ಶರಣರಿಗೆ ಲಿಂಗವೇ ಪ್ರಾಣ, ಪ್ರಾಣವೇ ಲಿಂಗ ಅವರು ಸರ್ವಾಂಗ ಲಿಂಗಗಳು' ಎಂದು ವೀರಣ್ಣಯ್ಯ ದೊರೆಗೆ ತಿಳಿಸುವನು. ಇವನು ಕರಸ್ಥಲದ ದೇವನಾಗಿರಬೇಕೆಂದು ಕೆಲವರ ತರ್ಕವಿದೆ. ಆದರೆ ಸ್ವರ ಏಕೋತ್ತರ ಶತಸ್ಥಲಸಟೀಕುವಿನಲ್ಲಿ ಉಲ್ಲೇಖಗೊಂಡ ಸರವಿಶಾಂತನು ಈತನಾಗಿರಬಹುದು. ಅಥವಾ ಇವರಿಬ್ಬರೂ ಏಕ ವ್ಯಕ್ತಿಗಳಾಗಿರಲೂಬಹುದು."[೩೦]

ಕಾಲಿಗೆ ಸರವಿಕಟ್ಟಿ ಅದರಲ್ಲಿ ಲಿಂಗವಿರಿಸಿದ ಶರಣರಂತೆ, ಸೂಫಿಗಳಲ್ಲಿ ಒಬ್ಬನಾದ ಖಾದರಲಿಂಗನು ಸಹ ಕಾಲಿಗೆ ಲಿಂಗಕಟ್ಟಿಕೊಳ್ಳುವ ಒಂದು ಸಂಪ್ರದಾಯವಿದೆ. ಅದರ ಒಂದು ಮಿತ್ ಈ ಕೆಳಗಿನಂತಿವೆ.

"ಅಮೀನುದ್ದೀನನ ಶಿಷ್ಯನಾದ ಕೌತಾಳ ಖಾದರಲಿಂಗನು ಉರುಕುಂದಿ ಈರಣ್ಣನ ಜತೆ ನಡೆಸುವ ಸ್ಪರ್ಧೆ ಕೂಡ ಲಿಂಗಧಾರಣೆಯ ನಿರರ್ಥಕತೆಯನ್ನು ಸೂಚಿಸುತ್ತದೆ. ಮಿತ್ ಪ್ರಕಾರ ಇಬ್ಬರೂ ತಂತಮ್ಮ ಶಕ್ತಿಗಳನ್ನು ಪರೀಕ್ಷಿಸುವ ಜಿದ್ದಿಗೆ ಬೀಳುತ್ತಾರೆ. ಒಂದು ಬಾವಿಯಲ್ಲಿ ತಂತಮ್ಮ ಲಿಂಗಗಳನ್ನು ಹಾಕುವರು. ಈರಣ್ಣನದು ಬೆಳ್ಳಿಲಿಂಗ, ಅಲ್ಲಾವುದ್ಧೀನನದು ಖರ್ಜುರ ಲಿಂಗ. ಈಗ ತಂತಮ್ಮ ಲಿಂಗಗಳನ್ನು ಕರೆದು ಪಡೆದುಕೊಳ್ಳಬೇಕು. ಈರಣ್ಣ ಕರೆಯುತ್ತಾನೆ. ಈರಣ್ಣನ ಲಿಂಗ ಬಂದು ಇವನ ಕಾಲಿಗೆ ಸುತ್ತಿಕೊಳ್ಳುತ್ತದೆ. ಅಂದಿನಿಂದ ಅಲ್ಲಾವುದ್ದೀನ್ ಕಾಲಿಗೆ ಲಿಂಗಕಟ್ಟಿಕೊಂಡು ಖಾದರಲಿಂಗನಾಗುತ್ತಾನೆ. (ಖಾದರಲಿಂಗನ ಪರಂಪರೆಯಲ್ಲಿ ಈಗಲೂ ಲಿಂಗವನ್ನು ಕಾಲಿಗೆ ಕಟ್ಟಿಕೊಳ್ಳುವ ಸಂಪ್ರದಾಯವಿದೆ) ಖಾದರ ಲಿಂಗವೆಂದರೆ ಯೋಗದ ಮೂಲಕ ಸಾಕ್ಷಾತ್ಕಾರಿಸಿಕೊಂಡ ಆತ್ಮಲಿಂಗ. ಈ ಎರಡು ಮಿತ್‌ಗಳು ಒಂದೇ ಆಗಿದ್ದು ಪ್ರಾಣಲಿಂಗಗಳಾದ ಅನುಭಾವಿಗಳನ್ನು ಇಷ್ಟಲಿಂಗಳಾಗಿ ಭಕ್ತರಿಗೂ ನಡೆದ ಸಂಘರ್ಷದ ಸಂಕೇತಗಳಂತಿವೆ."[೩೧]

ವಿರಕ್ತರಲ್ಲಿ ಕೇವಲ ಅನುಭಾವಿಗಳಷ್ಟೇ ಇರಲಿಲ್ಲ. ಇವರಲ್ಲಿ ಸಂತರು, ಕವಿಗಳು, ಪಂಡಿತ ವಿದ್ವಾಂಸರು ಹಾಗೂ ಪ್ರಭುತ್ವ ವಿರೋಧಿಗಳಿದ್ದರು. ಚಿಂತನಶೀಲರಾದ ಇವರು ಅಪಾರವಾದ

ಪವಾಡಮರಷರಾಗಿದ್ದರು. ಪ್ರಾಣಲಿಂಗಿಗಳಾದ ಇವರ ಪ್ರತಿಯೊಬ್ಬರ ವ್ಯಕ್ತಿತ್ವ ತುಂಬಾ ಭಿನ್ನ ರೀತಿವುಳ್ಳದಾಗಿದೆ. ಕೆಲವರು ರಾಜನ ಆಶ್ರಯದಲ್ಲಿದ್ದರೆ ಮತ್ತೆ ಕೆಲವರು ಆಸ್ಥಾನ ತೊರೆದು ತಮ್ಮ ಬದುಕನ್ನು ಸಾಗಿಸುತ್ತಿದ್ದರು. ಹೀಗಾಗಿ ಇವರ ವ್ಯಕ್ತಿತ್ವ ಯಾರಿಗೂ ನಿಲೂಕಲಾರದ್ದಾಗಿದೆ.

೮. ಬತ್ತಲೇಶಾಂತಲಿಂಗ

ನೂರೊಂದು ವಿರಕ್ತರಲ್ಲಿ ಒಬ್ಬನಾದ ಬತ್ತಲೇಶ ಒಬ್ಬ ಪ್ರಸಿದ್ಧ ಕವಿಯಾಗಿದ್ದ. ಸಪ್ತ ಕಾವ್ಯದ ಗುರುಬಸವ, ಕರಸ್ಥಲದ ನಾಗಲಿಂಗನಂತೆ ಇವನು ಸಹ ಕೆಲವೊಂದು ವಚನ ಹಾಗೂ ಅನುಭವದ ಹಾಡುಗಳನ್ನು ರಚಿಸಿದಂತೆ ತಿಳಿದುಬರುತ್ತದೆ. ದೊರೆಯಾದ ಪ್ರೌಢದೇವರಾಯನು ಒಮ್ಮೆ ಬೇಟೆಗೆಂದು ಸಕಲ ಪರಿವಾರ ಸಮೇತ ಕಾಡಿಗೆ ಹೋದಾಗ, ಅಲ್ಲಿ ಸಿದ್ಧಾಸನ ಹಾಕಿಕೊಂಡು ಕುಳಿತ ಒಬ್ಬ ಸನ್ಯಾಸಿಯನ್ನು ಕಾಣುವನು.

"ಕಣ್ಣಮುಚ್ಚುತ ಕರವನೊಡ್ಡಿಹ
ಅನ್ನ ಪಾನಾದಿಗಳ ತೊರೆದಿಹ
ತನ್ನ ಕರದಲಿ ತರಗ ಪರ್ನವ ಬೀಳೆ ಸಲಿಸುವನು
ತನ್ನ ಚಿತ್ತವು ಲಿಂಗದಲ್ಲಿಯು
ಭಿನ್ನವಿಲ್ಲದೆ ಬೆರಸಿ ಒಪ್ಪಿಹ
ಮನ್ನಣೆಯ ತವ ಮಾಳ್ವನಾತನು ದಿವ್ಯಯೋಗದಲಿ"[೨೨]

ಬೆತ್ತಲೆಯಾಗಿ ಕಾಡಿನ ಮಧ್ಯದಲ್ಲಿದ್ದಾಗಲೂ ಈ ಸನ್ಯಾಸಿಯ ಮನಸ್ಸು ಎಷ್ಟು ದೃಢವಾಗಿದೆ? ಎಂಬುದನ್ನು ಪರೀಕ್ಷಿಸಲೆಂದು ರಾಯನು ತನ್ನ ಪರಿವಾರದ 'ಪದ್ಮಾವತಿ' ಎಂಬ ಸುಂದರ ವಾರಾಂಗನೆಯನ್ನು ಕಳುಹಿಸಿ ಇವನನ್ನು ಒಲಿಸಿಕೊಂಡರೆ ನಿನಗೆ ಉಂಬಳಿಯಾಗಿ ಗ್ರಾಮವನ್ನು ಕೊಡುತ್ತೇನೆ ಎಂದು ಹೇಳುವನು.

ಪದ್ಮಾವತಿ, ಮುನಿಯ ಬಳಿಗೆ ಬಂದು ತನ್ನ ವೈಯ್ಯಾರದಿಂದ ಮನ ಒಲಿಸಿಕೊಳ್ಳಲು ಯತ್ನಿಸುತ್ತಾಳೆ. ಪದ್ಮಾವತಿಯ ಆ ಸುಂದರ ರೂಪ ಯೌವ್ವನಗಳು ಇವನನ್ನು ಬೆರಗುಗೊಳಿಸುತ್ತವೆ.

"ನಲ್ಲೆಎನ್ನಯ ದೇಹ ನೋಡಲು
ಕಲ್ಲಿನಂದದಿ ಬಲಿದು ಒಣಗಿದೆ
ಎಲ್ಲ ಬೂದಿಯ ಪೂಸಿ ಬತ್ತಲೆ ಇರ್ದೆ ನಾನಕಟ"[೨೩]

ತಂದೆ ತಾಯಿಗಳಿಲ್ಲ, ಯಾವ ಬಂಧುಗಳಿಲ್ಲ ಪ್ರೀತಿಯಿಂದ ಉಡಲು, ತೊಡಲು ಅಲ್ಲದೆ ಕೊಡಲು ಸಹ ನನ್ನ ಹತ್ತಿರ ಏನು ಇಲ್ಲ. ಹೀಗಾಗಿ ಈ ರೀತಿಯ ದಿಗಂಬರನ ನೀನು ಮಾತಿನಿಂದ ಮರುಳ ಮಾಡುತ್ತಿರುವುದು ತಿಳಿಯುವುದಿಲ್ಲವೆ ನಮಗೆ ಎಂದೇಳುವನು.

ಪದ್ಮಾವತಿ ಮತ್ತು ಬತ್ತಲೇಶ್ವರ ನಡುವೆ ಹಲವಾರು ಮಾತುಕತೆ ನಡೆದು ಕೊನೆಗೆ ಅವಳು ಕಾಡನ್ನು ಬಿಟ್ಟು ನಾಡಿಗೆ ಬಂದು ನನ್ನ ಮದುವೆ ಆಗಬೇಕೆಂದು ಬೇಡಿಕೊಳ್ಳುವಳು. ಅವಳ ಮಾತಿಗೆ ಬತ್ತಲೇಶ ಲೋಕವು ನನ್ನನ್ನು ಏನೆಂದು ಭಾವಿಸುವದೆಂದು ಹೇಳುವನು.

"ವಿಶ್ವಮಿತ್ರನು ರಂಭಗೊಲಿವುತ
ಸ್ವಸ್ವರೂಪನ ಕಳೆದು ಶುನಕನ
ದುಸ್ವರೂಪವ ತಾಳಿ ಅಮರಾವತಿಗೆಯೆಯಿತಂದು
ನಿಷ್ಕಳಂಕ ವಶಿಷ್ಟ ಕಾಣುತ
ವಿಶ್ವಮಿತ್ರನ ಶರಣು ಏನಲಿಕೆ
ಅ ಸ್ವರೂಪವನಳಿದು ನಾಚುತ ಬಂದನಾಶ್ರಮಕೆ"[೨೪]

ವಿಶ್ವಾಮಿತ್ರನು ರಂಭೆಗೊಲಿದನು ಪರಾಶರಮುನಿ ಮತ್ಸ್ಯಗಂಧಿಗೊಲಿದು ತೊರೆಯಲ್ಲಿ ರಮಿಸಿದ್ದನ್ನು ನೀನು ಕೇಳಿಲ್ಲವೇ? ಆದ್ದರಿಂದ ನೀನು ಶರೀರವನ್ನು ವೃಥಾ ಒಣಗಿಸುವದು ತರವಲ್ಲ. ನನ್ನೊಡನೆ ರಾಜಧಾನಿಗೆ ನಡೆ, ಸಕಲ ವೈಭವವನ್ನು ಕಾಣುವಿ ಎನ್ನುವಳು. ಬತ್ತಲೇಶ್ವರನಿಗೆ ಈಗ ಸಂಕಟ. ಬಿಟ್ಟೆನೆಂದರೆ ಬಿಡದೀ ಮಾಯೆ ಬಿಡದಿದ್ದರೆ ಬೆಂಬತ್ತಿತ್ತು ಮಾಯೆ. ಇವೆಲ್ಲವೂ ಪರಮಾತ್ಮನ ಲೀಲೆ. ಅವಳೊಲಿಸ ಬಂದುದೂ ಒಂದು ಲೀಲೆಯೆ ಎಂದು ಬಗೆದು ಇದನ್ನು ಶಿವಪ್ರಸಾದವೆಂದೇ ಸ್ವೀಕರಿಸುತ್ತಾನೆ. ಇವಳ ಪ್ರೀತಿಯ ಸಲಿಸಿ ಲಿಂಗವ ಶಿವನಮಹಿಮೆಯನ್ನು ಕಾಣುವೆ ಎನ್ನುವನು. ಮನಸ್ಸಿನಲ್ಲಿ ಸುಮ್ಮನೆ ಹಲವಾರು ದ್ವಂದ್ವಗಳನ್ನು ಸೃಷ್ಟಿಸಿಕೊಳ್ಳದೆ ನನ್ನನ್ನು ಸ್ವೀಕರಿಸು. ನನ್ನ ಪುತ್ರ ಸಂತತಿಯನ್ನು ಬೆಳೆಸಿದರೆ ಸಾಕೆಂದು ಪದ್ಮಾವತಿಯು ಶಾಂತಲಿಂಗದೇವನನ್ನು ತೆಕ್ಕೈಸಿಕೊಂಡಳು.

"ಅವಳು ಆತನ ಅಪ್ಪಿಕೊಂಬುತ
ಯವ್ವನ ಕುಚಗಳ ಉರಕೆ ಒತ್ತಲು
ಶಿವಶಿವಾ ಈ ಸುಖವು ನಿಮ್ಮದುವೆಂದು ರಮಿಸಿದನು
ಶಿವಗೆ ತನ್ನಯ ಲೀಲೆಗೋಸ್ಕರ
ಇವಳ ತಂದನು ಎಂದು ಬಯಸಿದ
ಬವ(ಣೆ)ಯಲ್ಲವು ಎಂದು ಮನದೊಳು ಶಿವನ ಧ್ಯಾನಿಸಿದ."[೨೫]

ಪದ್ಮಾವತಿ ಹೇಗಾದರೂ ಮಾಡಿ ಈ ಯೋಗಿಯನ್ನು ತನ್ನ ಪರವಶನಾಗಿ ಮಾಡಿ ಭೋಗಿಯಾಗಿಸುವ ಪ್ರಯತ್ನ ಮಾಡುತ್ತಾಳೆ. ಅವನು ಅವಳ ಅಪ್ಪಿಕೊಳ್ಳುತ್ತ ಅವಳಿಂದ ಸುಖವನ್ನು ಪಡೆಯುತ್ತ, ಈ ಸೌಭಾಗ್ಯದ ಸುಖವನ್ನು ಶಿವನೇ ನನಗಾಗಿ ಕರುಣಿಸಿದನೆಂದು ತನ್ನ ಮನದಲ್ಲಿ ಧ್ಯಾನಿಸಿದನು. ಮುಂದೆ ಪದ್ಮಾವತಿಗೆ ಮೂರು ಮಕ್ಕಳಾಗುತ್ತವೆ. ಪದ್ಮಾವತಿಗೀಗ ತನ್ನ ದೊರೆಯ

ಕರಾರಿನಂತೆ ಮುನಿಯನ್ನೊಲಿಸಿಕೊಂಡುದನು ತಿಳಿಸಬೇಕೆಂದು ಹಂಪೆಯ ವಿರೂಪಾಕ್ಷನ ಜಾತ್ರೆಯ ನೆಪಮಾಡಿ ಬತ್ತಲೇಶ್ವರನೊಡನೆ ನಡೆದು ಬರುತ್ತಾಳೆ. ಪ್ರೌಢದೇವರಾಯ ಹಾಗೂ ಅವನ ಕೆಲವು ರಾಹುತರು ಮುನಿವೇಷದಲ್ಲಿದ್ದ ಬತ್ತಲೇಶ್ವರನು ಮಕ್ಕಳನ್ನು ತಲೆಯ ಮೇಲೆ ಕೂಡಿಸಿಕೊಂಡು ವಿಜಯನಗರದ ಅಪ್ಸರೋರ್ವಸಿಯಂತಿದ್ದ ಪದ್ಮಾವತಿಯೊಡನೆ ನಡೆದು ಬರುವುದನ್ನು ಕಾಣುತ್ತಾರೆ.

"ಪದ್ಮಾವತಿಯು ಪ್ರೌಢದೇವರಾಯನನ್ನು ಕಂಡು ನಡೆದುದನ್ನು ಎಲ್ಲವನ್ನು ಹೇಳುವಳು. ಆದರೆ ಬತ್ತಲೇಶ್ವರ ಆ ಗಳಿಗೆಯಲ್ಲಿಯೇ ಎಲ್ಲರೂ ನೋಡುತ್ತಿದ್ದಂತೆ ಬಯಲಾಗುತ್ತಾನೆ. ಬತ್ತಲೇಶ್ವರನ ಬಯಲ ಸಂಧಾನದ ನೆಲೆಯನ್ನರಿತ ಕರಸ್ಥಲದ ವೀರಣ್ಣೊಡೆಯ ಬೆರಗುವಡೆದು ನಿಂತಿದ್ದ ರಾಯನಿಗೆ ಇವನು ಮಹಾಯೋಗಿ ಇವನಲ್ಲಿ ಪದ್ಮಾವತಿಯನ್ನು ನೆರೆವಂತೆ ಮಾಡಿದ ಪಾಪಕ್ಕೆ ನೀನು ಕಾರಣನು ಎನ್ನುವನು. ಆಗ ಪ್ರೌಢದೇವರಾಯನು ಅದೇನೆ ಇದ್ದರೂ ಆಗ ಇವಳಲ್ಲಿ ಅವನು ಅನುರುಕ್ತನಾದುದೇಕೆ? ಈಗ ಹೀಗೆ ಎಲ್ಲರ ಸಮ್ಮುಖದಲ್ಲಿ ಬಯಲಾದುದೇಕೆ? ಎಂದು ಕೇಳುತ್ತಾನೆ. ಅದಕ್ಕೆ ಕರಸ್ಥಲ ವೀರಣ್ಣೊಡೆಯನು 'ಶರಣರು ಲೋಕದ ನಡುವಿರುವಂತೆ ತೋರಿದರೂ ಅವರ ನಿಲುಗಡೆ ಲೋಕತೀತವಾಗಿರುತ್ತದೆ.' ಲೌಕಿಕವಾದ ವಿಷಯಕ್ಕೆ ಒಳಗಾದಂತೆ ಕಂಡರೂ, ಅವರ ಮನೋಭೂಮಿಕೆ ಮಹತ್ತದಾದುದು. ಅವರು ಇಂದ್ರಿಯಾರ್ಪಿತವಾದುದನ್ನು ಲಿಂಗಾರ್ಪಿತವಾಗಿಸಬಲ್ಲರು. ಪದ್ಮಾವತಿಯ ಒಲುಮೆ ಆ ಮುನಿಗೆ ಶಿವನೊಲಿಮೆಯಾಗಿತ್ತು. ಅವನ ಲೀಲೆ ಇಲ್ಲಿಗೆ ಮುಗಿಯಿತೆಂದೂ ಇದೀಗ ಬತ್ತಲೇಶ್ವರನು ಬಯಲಾದನು."[೨೬]

"ಲೋಕರಂದದಿ ನುಡಿವುತಿರ್ಪರು
ಲೋಕರಂದದಿ ನಡೆಯುತಿರ್ಪರು
ಲೋಕರಂದದಿ ಸಕಲ ಸುಖವನು ಕೊಂಡು ಸುಖಿಸುವರು
ಏಕೋ ಬ್ರಹ್ಮದಿ ಮನವ ಬೆರಸುತ
ಆಕರವ ತೋರುವರು ಜನರಿಗೆ
ಲೋಕರಹಿತರು ಶರಣರೆಲೆ ಭೂಪತಿಯ ಕೇಳೆಂದಾ"[೨೭]

ಎಂದು ವೀರಣ್ಣೊಡೆಯನು ಶರಣರ ಬಯಲ ತತ್ವವನ್ನು ರಾಯನಿಗೆ ತಿಳಿಸುತ್ತಾನೆ. ಕಾರಣಾತ್ಮರು ತಮ್ಮ ಮಹಿಮೆಯ ತೋರಲರಿಯರು ನರರಿಗೆಂಬುತ ಚಾರು ಮನೋಹರನಾಗಿ ನುಡಿಸಿದ ಪ್ರೌಢರಾಜೇಂದ್ರ ಎಂದು ಕವಿ ಉದ್ಗಾರ ತೆಗೆಯುತ್ತಾನೆ.

೯. ಮಿಡಿಬಿಲ್ಲ ಶಾಂತೇಶ

ರಾಹುತನಂತೆ ಕೈಯಲ್ಲಿ ಬಿಲ್ಲು ಹಿಡಿದು ರಾಜಧಾನಿಯಲ್ಲಿದ್ದ ಪಕ್ಷಿಗಳನ್ನು ಬೇಟೆಯಾಡುತ್ತಿದ್ದ. ಓರ್ವ ವಿರಕ್ತನನ್ನು ಮರುಳನೆಂದೇ ಬಗೆದು ಪ್ರೌಢದೇವರಾಯನು ಶರಣನೇ ಇಲ್ಲಿ ಬಾ,

ನಿನಗೇಕೆ ಬಿಲ್ಲು? ಎಂದು ಕೇಳಲು, 'ಶಿವನೇ ಸಾಕ್ಷಾತ್ ಬಿಲ್ಲು ಧರಿಸಿಲ್ಲವೇ; ಎನ್ನುತ್ತಾ ತ್ರಿಪುರದಹನ ಕಾಲಕ್ಕೆ ಕನಕಾದ್ರಿಯನ್ನೇ ಬಿಲ್ಲನ್ನಾಗಿ ಮಾಡಿಕೊಂಡಿದ್ದ ಕಥೆಯನ್ನು ಮಿಡಿಬಿಲ್ಲ ಶಾಂತೇಶ ಹೇಳುವನು. ಆಗ ಪ್ರೌಢದೇವರಾಯನು 'ಅವನು ದಿವಿಜರ ರಕ್ಷಣೆಗಾಗಿ ಹಾಗೆ ಮಾಡಿದ ಎಂದು ಪ್ರತ್ಯುತ್ತರವಿತ್ತ. ಅದಕ್ಕೆ ಶಾಂತೇಶನು, ಶಿವನಿಗೆ ಅದೊಂದು ಲೀಲೆಯಾಗಿದ್ದರೆ ನನಗೆ ನಿರ್ವಾಣ ಪದಲೀಲೆ ಎಂದು ಹೇಳಿದನು. ಅದು ಹೇಗೆ? ಎಂದು ರಾಯ ಕೇಳಿದಾಗ ಬಿಲ್ಲನ್ನು ಹಿಡಿದು ಬಾಣವನ್ನು ತನ್ನ ತಾನೇ ಹೊಡೆದುಕೊಂಡ ಶಾಂತೇಶ ನಿರ್ವಯಲಾದನು. ಮಿಡಿಬಿಲ್ಲ ಶಾಂತೇಶನ ಈ ಅಪಾರವಾದ ಲೀಲೆಯನ್ನು ಕಂಡು ರಾಜನಿಗೆ ಆಶ್ಚರ್ಯವಾಯಿತು. ಆಗ ಇವನ ಸ್ತೋತ್ರ ಮಾಡಿದನು. ನಿರ್ವಾಣರ ಘನ ಮಹಿಮೆ ತಿಳಿಯದು ಎಂದುಕೊಂಡನು.

೧೦. ತುಬಾಕದ ಶಾಂತಯ್ಯ

ನೂರೊಂದು ವಿರಕ್ತರಲ್ಲಿ ಇವನ ಬಗೆಗೆ ಬೇರೆ ಕಡೆಗೆ ಉಲ್ಲೇಖಗಳಿದ್ದು ತುಬಾಕದ ಶಾಂತಯ್ಯನೆಂಬ ವಿರಕ್ತನು ಇದ್ದನೆಂಬುದಕ್ಕೆ ಸಾಕ್ಷಿ ನೀಡುತ್ತವೆ. 'ಇಷ್ಟ ಪ್ರಾಣಿ'ಯೆನ್ನಿಸಿದ ಕೆಲವು ವಿರಕ್ತರ ಹೆಸರುಗಳಲ್ಲಿ ಇವನ ನಾಮೋಲ್ಲೇಖವಿದೆ. ಇಷ್ಟಲಿಂಗ ಭಿನ್ನವಾದಲ್ಲಿ ತನ್ನ ಸಾವಿಗೆ ದಿನಗಣನೆಯ ಇಷ್ಟ ಪ್ರಾಣಿಗಳೆನಿಸಿದವರು ತುಬಾಕಿ ಶಾಂತಯ್ಯ ಅನುಮಿಷಯ್ಯ ಮುಂತಾದವರು. ಕ್ರಿ.ಶ. ೧೫ನೇ ಶತಮಾನದ ಹೊತ್ತಿಗೆ ಜನರಿಗೆ ತುಬಾಕಿನ ಪರಿಚಯವಾಗಿತ್ತು. ಹೀಗಾಗಿ ಆ ಹೆಸರಿನ ವಿರಕ್ತನಿದ್ದನೆಂಬುದಕ್ಕೆ ನಾವು ಅನುಮಾನಿಸಬೇಕಾದ ಅಗತ್ಯವೇ ಇಲ್ಲ. ವಿಜಯನಗರ ಅರಸರ ಕಾಲದಲ್ಲಿ ಈ ಹೆಸರಿನ ವಿರಕ್ತನಿದ್ದ ಎಂಬುದು ಕಂಡುಬರುವುದು.

"ಇಷ್ಟರೊಳಾದವುದ ಬಯಲೆಂಬುವ ನುಡಿ
ಕಟ್ಟಳೆ ತಿಳಿಯದು ತೋರ್ಪುದು ನಮಗೆನೆ
ಅಷ್ಟರೊಳಗೆ ರಂಜಕ ಮೀಟಲು ಡಬ್ಬೆನುತಲಿ ಬಯಲಾದಾ"[೨೮]

ಇವನು ಕೈಯಲ್ಲಿ ತುಬಾಕು ಹಿಡಿದು ತಿರುಗುತ್ತಿದ್ದಾಗ; ನೀನು ಶರಣನು ನಿನಗೇಕೆ ಕಿರಾತರ ಆಯುಧ? ಎಂದು ಪ್ರೌಢದೇವರಾಯ ಕರೆಸಿ ಕೇಳುವನು. ಇದನ್ನು ನಾವು ಬಯಲಾಗುವುದಕ್ಕೆ ಇಟ್ಟುಕೊಂಡಿದ್ದೇವೆ ಎನ್ನುತ್ತಾನೆ. ಅದು ಹೇಗೆ ತೋರೆಂದು ದೊರೆ ಕೇಳುತ್ತಿರುವಷ್ಟರಲ್ಲಿ ಶಾಂತನು ತುಬಾಕಿಯಿಂದ ತನ್ನ ತಾನೇ ಹೊಡೆದುಕೊಂಡು ಮಾಯವಾಗುತ್ತಾನೆ. ಶರಣರು ಆಡಿದ ನುಡಿಗಳನ್ನು ತಪ್ಪರು ಎಂದು ಭಕ್ತ ಜನ ಕೊಂಡಾಡಿದರು.

೧೧. ಕುದುರೆ ಶಾಂತ

ಪ್ರೌಢರಾಜೇಂದ್ರನೊಮ್ಮೆ ವೈಹಾಳಿಗೆ ಹೊರಟಾಗ 'ಕುದುರೆಶಾಂತ' ಎಂಬ ವಿರಕ್ತನು ಎದುರು ಬರುತ್ತಾನೆ. ಆ ವಿರಕ್ತನ ಕುದುರೆಯನ್ನು ಕಂಡು ನೀನು ನನ್ನ ಕುದುರೆಯೊಡನೆ

ಓಡಿಸು ಎನ್ನುತ್ತಾನೆ. ಇಲ್ಲಿ ರಾಜನು ಹೀಗೆ ನುಡಿಯಲು ಕುದುರೆ ಶಾಂತನು ಕುದುರೆ ಓಡಿಸುವುದರಲ್ಲಿ ಸಾಮಾನ್ಯವಾಗಿ ಪರಿಣಿತನಾಗಿರಬೇಕು. ಆಗ ಶರಣವಿರಕ್ತನು ರಾಜನೇ ಬಡವರ ಕುದುರೆಯು ನಿಮ್ಮಯ ತೇಜಿಯ ಸಂಗಡ ಚಲಿಸಲು ಶಕ್ತವೆ ಎಂದನು ಭೂಪತಿಗೆ. ಆದರೆ ರಾಜ ಇವನ ಮಾತನ್ನು ಕೇಳಲಿಲ್ಲ. ರಾಜನ ಒತ್ತಾಯಕ್ಕೆ ಶಾಂತನು ತನ್ನ ಕುದುರೆಯನ್ನು ದೊರೆಯ ಕುದುರೆಯೊಂದಿಗೆ ಬಿಡುತ್ತಾನೆ. ವೈಹಾಳಿಗೆ ಬಂದ ಕುದುರೆಗಳು ಹಿಮ್ಮೆಟ್ಟಿ ಹೋಗುತ್ತವೆ. ರಾಜನ ಕುದುರೆ ದಿಕ್ಕೆಟ್ಟು ಓಡುತ್ತದೆ. ಕೊನೆಗೆ ಶಾಂತನ ಕುದುರೆಯ ಬೆನ್ನಹತ್ತದೆಯೆ ಎಲ್ಲ ಕುದುರೆಗಳೂ ನಿಟ್ಟುಸಿರಿಡುತ್ತವೆ. ಆಗ ರಾಜ ನಿನ್ನ ಕುದುರೆಯನ್ನು ಬೆಲೆಗೊಟ್ಟು ಕೊಳ್ಳುತ್ತೇನೆ. ಎಷ್ಟಕ್ಕೆ ಕೊಡುವೆ? ಎಂದು ಕೇಳುವನು.

"ಎಲೆ ಭೂಪತಿ ಎನ್ನಶ್ವವ ಕೊಂಬರೆ
ಮಲಹರನಲ್ಲದೆ ಮಾನ್ಸರಿಗಳವೇ
ಬೆಲೆಯನು ಕೊಡುವವರಾರೀ ಜಗದೊಳು ಎಂದನು ದೇಶಿಕನು
ಭಲಭಲ ನಿಮ್ಮಯ ಕುದುರೆಯ ಕೊಂಬುವ
ಬಲವಂತರು ಜಗದೊಳಗಿಲ್ಲೆಂದಿರೆ
ನೆಲೆಯನು ಕಾಣದು ತೋರ್ಕೆ ನಿಮ್ಮಯ ಕುದುರೆಯ ಮಹಿಮೆಯನು"೫೯

'ದೊರೆಯೇ' ಪರಮಾತ್ಮನಲ್ಲದೆ ಇದನ್ನು ಕೊಳ್ಳುವುದು ಮನುಷ್ಯರಿಗೆ ಸಾಧ್ಯವಿಲ್ಲ ಎನ್ನುವನು. ದೊರೆ ಸಿಟ್ಟಿಗೆದ್ದು ಅದನ್ನು ಬಲತ್ಕಾರದಿಂದ ವಶಪಡಿಸಿಕೊಳ್ಳಲೆತ್ನಿಸಿದಾಗ 'ಶಾಂತನು' ತಾನು ಕೂಡುತ್ತಿದ್ದ ಕುದುರೆಯನ್ನು ಬಯಲಿಗೆ ನೂಕುತ್ತಾನೆ. ಕುದುರೆ ಪ್ರಾಣ ನೀಗಿ ಬಯಲಸಂಧಾನ ಪಡೆಯುತ್ತದೆ. 'ಏಕೋತ್ತರ ಶತಸ್ಥಲ ಸಟೀಕು'ವಿನಲ್ಲಿ ಇವನ ಹೆಸರಿದೆ.

೧೩. ಮಂಚದ ಶಾಂತ

ನೂರೊಂದು ವಿರಕ್ತರಲ್ಲಿ ಕಂಡುಬರುವ ಮತ್ತೊಬ್ಬ ಪ್ರಮುಖ ವಿರಕ್ತ ಮಂಚದ ಶಾಂತನೊಬ್ಬನಾಗಿರುವನು. ಒಮ್ಮೆ ಮಂಚದ ಶಾಂತನು ತಲೆಯ ಮೇಲೆ ಮಂಚ ಹೊತ್ತುಕೊಂಡು ರಾಜಬೀದಿಯಲ್ಲಿ ಹೋಗುತ್ತಿರುವುದನ್ನು ರಾಜೇಂದ್ರನು ಉಪ್ಪರಿಗೆಯಲ್ಲಿ ಕುಳಿತು ನೋಡಿ, ಅವನನ್ನು ಕರೆಸಿ ಕೇಳುತ್ತಾನೆ. 'ಶರಣರೆ ಈ ಮಂಚವು ಭೋಗದ ವಸ್ತು, ನೀವೋ ವಿರಕ್ತರು ಇದು ನಿಮಗೇಕೆ? ಎಂದು. ಆಗ ನಾವು ವಿರಕ್ತರಾದರೂ ಭೋಗಿಗಳೇ. ನಾನು ಶರಣಸತಿ, ನನ್ನ ಲಿಂಗವೇ ಪತಿದೇವರು. ನನಗೆ ಲೋಕದ ಮಂಚ ಹಂಗಿಲ್ಲ. ನನ್ನ ಪತಿ ಭೋಗ ನನಗೆ ಮೀಸಲು, ಅದಕ್ಕೆ ಮಂಚವನ್ನು ಹೊತ್ತು ತಿರುಗುತ್ತಿದ್ದೇನೆ ಎಂದನು.

"ಮಂಚವೆ ಹೊದೆಯಲು ಮನಸನೆ ನೀವೆನು
ವಂಚನೆಯಿಲ್ಲದೆ ಕೈಕೊಳ್ಳೆನಲಿಕೆ
ಮಂಚವು ಪ್ರತಿ ಮಾನಸರೂ ಮುಟ್ಟಲು ಕಾರಣವಿಲ್ಲೆಮಗ
ಪಂಚಾಕ್ಷರಿ ಉಪದೇಶಗಳಿಲ್ಲಪ್ರ
ಪಂಚಿನ ಮಾನ್ವರ ಸೇವಕವೃತ್ತಿಯ
ಮುಂಚೆಯು ಕೂಡದು ನಮಗೇಯೆಂದನು ಮಂಚದ ಶಾಂತಯ್ಯ"[೨೦]

ಆಗ ಪ್ರೌಢದೇವನು ಇವನನ್ನು ಪರೀಕ್ಷಿಸಲೆಂದು ತನ್ನ ಆಳುಗಳಿಗೆ ಈ ಮಂಚವನ್ನು ಕಸಿದುಕೊಳ್ಳಿರಿ ಎಂದನು. ವಿರಕ್ತನು ಪಂಚಾಕ್ಷರೀ ಮಂತ್ರ ವಿಹೀನರು ಶಿವ ಸಂಸ್ಕಾರವಿಲ್ಲದ ಭವಿಗಳು ಇದನ್ನು ಮುಟ್ಟಬಾರದೆಂದರೂ ಕೇಳುವುದಿಲ್ಲ. ಅವರು ಎಳೆದುಕೊಳ್ಳುವಷ್ಟರಲ್ಲಿಯೇ ಅವನು ತನ್ನ ಪ್ರಾಣವನ್ನು ಬಿಡುವನು. ಉಮೆಯಾಣ್ಣನ ಅವತಾರದ ಮಹಿಮರನ್ನು ಅರಿಯದೆ ಕೆಟ್ಟನೆಂದು ಭೂಪತಿ ಕಂಗೆಟ್ಟನು. ಮಂಚದ ಶಾಂತನ ಹೆಸರು ಸ್ವರ ಏಕೋತ್ತರದ ಸಟೀಕೆಯಲ್ಲಿ ಬರುತ್ತದೆ.

೧೩. ಮದ್ದಳೆ ಶಾಂತ

ಮದ್ದಳೆ ಶಾಂತನು, ಮದ್ದಳೆಯನ್ನು ಬಾರಿಸುವ ವಿರಕ್ತನಾಗಿದ್ದ. ಪ್ರೌಢದೇವರಾಯ ಈ ವಿರಕ್ತನನ್ನು ಕರೆಯಿಸಿ 'ಮದ್ದಳೆ ಬಾರಿಸುವುದು ವೀರಶೈವರ ಲಕ್ಷಣವಲ್ಲ. ಶೈವ ಪದ್ಧತಿ ನಿಮಗೇಕೆ? ಶೈವರ ಕೃತಿಗಳ ನುಡಿಸಲುಬಾರದು ಎನ್ನಲು ಸಾಕ್ಷಾತ್ ಅಲ್ಲಮನು ಪರತರ ಪರವಸ್ತುವೇ ತಾನಾಗಿ ಮದ್ದಳೆ ಬಾರಿಸಿ ಮಾಯೆಯನ್ನು ನಾಟ್ಯ ವಾಡಿಸಲಿಲ್ಲವೇ ಎಂದನು. ಅದಕ್ಕೆ ಪ್ರೌಢನು ಅಲ್ಲಮನು ಮಾಯೆಯನ್ನಾಡಿಸಿ ನಿರ್ವಯನಾದ. ನೀನು ಮದ್ದಳೆಯನ್ನು ಬಾರಿಸಿ ಯರನ್ನಾಡಿಸುವೆ? ಎನ್ನಲು

"ನಿಮ್ಮಯ ಲಿಂಗದೊಳಾತನು ಆಡುವ
ಬೊಮ್ಮದ ಮಾತನು ನುಡಿದಿರಿಯಲ್ಲದೆ
ಸುಮ್ಮನೆ ಮಾತುಗಳೇತಕೆ ತೋರಿರಿ ದೃಷ್ಟವನು
ನಮ್ಮೊಡನೆನಲಿಕೆ ನಗುತಲಿ ಮದ್ದಳೆ
ಗಮ್ಮನೆ ನುಡಿಸುತ ಗಾಯನ ಮಾಡಲು
ಬ್ರಹ್ಮಾಂಡವೆ ಕಂಪಿಸುತಿರೆ ಪ್ರಭುಡನು ನೋಡುತ ಬೆರಗಾದ"[೨೧]

ನಾನು ಮದ್ದಳೆ ಬಾರಿಸುತ್ತ ಲಿಂಗದೊಳಾಡುವ ಪರಿ ನಿಮಗೆ ತಿಳಿಯದು. ನನ್ನ ಅಂಗಾಂಗದಲ್ಲಿ ಅಲ್ಲಮನೇ ನಾಟ್ಯವಾಡುತ್ತಾನೆ ಎಂದು ಮುಂದೆ ಬರಿ ಮಾತೇಕೆಂದು ಮದ್ದಳೆ ಬಾರಿಸುತ್ತಲೇ ಶಾಂತನು ಮೂಢರ ಮಧ್ಯದಲ್ಲಿ ತಾನಿರಬಾರದೆಂದು ನಿರ್ವಲಯವನ್ನು ಪಡೆದನು.

೧೪. ಬುಡಬುಡಿಕೆಯ ಶಾಂತ

ಜಂಗಮಮೂರ್ತಿಯೋರ್ವನು ರಾಜಧಾನಿಯಲ್ಲಿ ಬುಡಬುಡಿಕೆಯ ವೇಷ ತೊಟ್ಟು ತಿರುಗುವುದನ್ನು ತಿಳಿದು, ಪ್ರೌಢದೇವರಾಯನು "ನೀವು ಜಂಗಮ ದೇವರು ಈ ವೇಷ ಸಾಮಾನ್ಯರಿಗೆ, ಇದನ್ನು ನೀವು ಧರಿಸಬಾರದು. ಜಪಮಾಲೆ ಹಿಡಿಯುವ ಕೈಯಲ್ಲಿ 'ಡಮರುಗು' ಹಿಡಿಯುವುದೆಂದರೆ ಅಪಹಾಸ್ಯ"ವೆಂದು ನುಡಿಯುತ್ತಾನೆ. ಅದಕ್ಕೆ ಬುಡಬುಡಕೆಯ ಶಾಂತೇಶನು, ರಾಯನೇ, "ಸಾಕ್ಷಾತ್ ಶಿವನ ಕೈಯಲ್ಲೇ ಡಮರುಗವಿದೆ. ಅವನು ಲೋಕಾನುಲೋಕಗಳ ಭವಿಷ್ಯ ಹೇಳುವ ಬುಡಬುಡಕಿಯವನೇ ಆಗಿದ್ದಾನೆ. ಅವನ ಡಮರುಗದ ನಾದದಿಂದಲೇ ಸರ್ವಜೀವಿಗಳು ಸರ್ವಶಬ್ದ ಪ್ರಪಂಚವೆಲ್ಲವೂ ಹುಟ್ಟಿಕೊಂಡಿದೆ. ಇನ್ನೂ ಅವನ ಭಕ್ತನಾಧ ನಾನು ಡಮರುಗ ಧರಿಸುವಲ್ಲಿ ಆಶ್ಚರ್ಯವೇನಿದೆ? ಎನ್ನುತ್ತಾನೆ.

ಶಿವನು ಈ ಸೃಷ್ಟಿಯನ್ನೇ ಹುಟ್ಟಿಸುವ ಶಕ್ತಿ ಪಡೆದಿದ್ದಾನೆ. ಆದರೆ ನಿನ್ನಲ್ಲಿ ಆ ಘನತೆ ಎಲ್ಲಿದೆ? ಎಂದು ದೊರೆ ಕೇಳಿದಾಗ ಶಾಂತೇಶನು ಪ್ರೌಢದೇವರಾಯನೇ ತಿಳಿಯದೆ ನನ್ನನ್ನು ಅಣುಕಿಸುತ್ತಿರುವೆಯಾ ನೀನು ಹಿಂದೆ ಕೈಲಾಸದಲ್ಲಿ ಇಂದ್ರನಾಗಿದ್ದೆ. ದೇವೇಂದ್ರನು ಮಂದಾರ ಮಾಲೆಯನ್ನು ಒದ್ದದರಿಂದ ಅವನ ಐಶ್ವರ್ಯ ಹಾಳಾಗದಂತೆ ನೀನೂ ಗಣವರರನ್ನು ನಿಂದಿಸಿ ಭೂಲೋಕದಲ್ಲಿ ನರಪತಿಯಾಗಿ ಹುಟ್ಟಿರುವೆ. ನಾನು ಬುಡಬುಡಿಕೆಯವನಾಗಿ ನಿನ್ನ ಭವಿಷ್ಯ ಹೇಳುತ್ತಿದ್ದೇನೆ. ಅವರಿಂದ ನಿನಗೆ ಶಾಪ ವಿಮೋಚನೆಯಾದರೆ ಮಾತ್ರ ನಿನಗೆ ಮುಕ್ತಿ ದೊರುಕುತ್ತದೆ ಎನ್ನುತ್ತಾನೆ. ಆಗ ಪ್ರೌಢದೇವರಾಯನು "ನೀನು ನಿಜವಾದ ಮಹಿಮೆಯುಳ್ಳ ಬುಡಬುಡಿಕೆಯವನೇ ಆಗಿದ್ದರೆ ನಿನ್ನ ಡಮರುಗವನ್ನಿಲ್ಲಿ ಬಾರಿಸು ನೋಡೋಣ ಎಂದಾಗ ಡಮರುಗವನ್ನು ನುಡಿಸುತ್ತಲೇ ಶಾಂತೇಶನು ಬಯಲಾಗುತ್ತಾನೆ." ಆಗ ವೀರಣ್ಣೊಡೆಯನು 'ಪ್ರೌಢದೇವನೇ ವಿರಕ್ತರ ನೆಲೆಯನ್ನು ಲೋಕದ ಕಣ್ಣಿನಿಂದ ಅರಿವುದು ಸಾಧ್ಯವಿಲ್ಲ.' ನುಡಿದಂತೆ ನಡೆದು ಬಯಲಬೆಡಗನ್ನು ಪಡೆದ ಧೀರರಿವರು. ಅವರು ಲೋಕದ ಪಾಶಕ್ಕೆ ಸಿಲುಕರು ನಿನ್ನ ಈ ಪಟ್ಟಣದಲ್ಲಿ ಇಂಥ ಘನ ಮಹಿಮರು ಒಂದೊಂದು ರೂಪದಲ್ಲಿರುವರು ಅವರನ್ನರಿತು ನೀನು ಪೂಜಿಸು. ಅವರಿಂದಲೇ ನಿನಗೆ ಸದ್ಗತಿ ಎಂದು ಹೇಳಿದನು. ಪಂಚಮ ಸಂಧಿಯಲ್ಲಿ ವೀರಣ್ಣೊಡೆಯನು ನೂರೊಂದು ವಿರಕ್ತರ ಪವಾಡ ಸಾದೃಶ್ಯಗಳನ್ನು ಪ್ರೌಢದೇವರಾಯನಿಗೆ ವಿವರಿಸುತ್ತ ಮುನ್ನೆಡೆಯುತ್ತಾನೆ.

೧೫. ಡಂಗುರಶಾಂತ

ಡಂಗುರ ಸಾರುತ್ತ ತಿರುಗುತ್ತಿದ್ದ ವಿರಕ್ತನನ್ನು ಕಂಡು ಈತನ ವಿಶೇಷವೇನೆಂದು ಪ್ರೌಡದೇವರಾಯ, ವೀರಣ್ಣೊಡೆಯನನ್ನು ಕೇಳಿದ. ಏಕೋದೇವ ಶಿವನೆಂದು ಡಂಗುರ ಸಾರುವದೇ ಇವನ ಕಾಯಕವಾಗಿದೆ ಎಂದನು. ಆಗ ಪ್ರೌಢದೇವರಾಯನು ವಿರಕ್ತನನ್ನು ಕರೆಯಿಸಿ ಶ್ರುತಿ

ಶಾಸ್ತ್ರಗಳಲ್ಲಿ, ದೇವರು ತ್ರಿಮೂರ್ತಿಗಳೆಂದು ಹೇಳಿರುವಾಗ ನೀನು ಏಕೋದೇವ ಶಿವನೆಂಬುದು ಹೇಗೆ? ಎಂದು ಕೇಳಿದ. ಆ ಡಂಗುರ ಶಾಂತನು ದೊರೆಯೆ. "ಬ್ರಹ್ಮ, ವಿಷ್ಣು ಮೊದಲಾದ ದೇವರುಗಳು ಈಶ್ವರನ ಆಜ್ಞಾನುಸಾರಿಗಳು. ಅಖಿಲ ಬ್ರಹ್ಮಾಂಡಗಳು ಶಿವನ ಲೀಲಾ ಮಾತ್ರದಿಂದ ಹುಟ್ಟಿ ಸಾಯುತ್ತವೆ. ಸತ್ತು ಹುಟ್ಟುತ್ತವೆ. ಹರಿಯಜ ದೇವತೆಗಳೆಲ್ಲರೂ ಭವಕ್ಕೊಳಗಾದವರು. ಯಾವ ಶಾಸ್ತ್ರದಲ್ಲಿ ಎಲ್ಲಿ ಪರಶಿವನ ಭವಾವಳಿಯನ್ನು ಹೇಳಲಾಗಿದೆ? ಎಂದು ಕೇಳಲಾಗಿ ಪ್ರೌಢದೇವರಾಯನು ನಿರುತ್ತರಿಯಾಗಿ ಡಂಗುರ ಶಾಂತನಿಗೆ ಪೊಡಮೊಟ್ಟನು. "ಸ್ಕಂದ ಪುರಾಣ, ಕಾಶಿ ಖಂಡಗಳಲ್ಲಿಯೂ ಕೂಡ ಶಿವ ಪಾರಮ್ಯವನ್ನು ಹೇಳಿಲ್ಲವೇ? ಹೀಗೆ 'ಏಕೋರುದ್ರನ ದ್ವಿತಿಯೋಸ್ತಾ ಎಂದು ಶ್ರುತಿ ಸಾರುತ್ತದೆ. ಇದನ್ನೇ ಡಂಗುರವಾಗಿ ನಾನು ಸಾರುತ್ತೇನೆಂದು' ಹೇಳಿ.................. ನಿಷ್ಠೆಯನ್ನು ಮೆರೆದು ಡಂಗುರ ಶಾಂತನು ಬಯಲಾದನು.

೧೬. ಖಂಡಣಿಶಾಂತ

ನ್ಯಾಯವನ್ನೇ ಎತ್ತಿ ಹಿಡಿಯುವ, ಅನ್ಯಾಯವನ್ನು ಪ್ರತಿಭಟಿಸುವ, ದಾಕ್ಷಿಣ್ಯಕ್ಕೆ ಒಳಗಾಗದವನು, ಸತ್ಯವಾದಿ ಎಂದು ಹೆಸರು ಪಡೆದ ವಿರಕ್ತ 'ಖಂಡಣಿಶಾಂತ' ಮರುಳನಂತಿದ್ದರೂ "ಪರಮ ನಿತ್ಯನು ನರರ ಮನ ತಿಳಿದು ಪರಿಚೋದ್ಯವಾಗಿ ಪೇಳುವ ಪಕ್ಷವಿಲ್ಲದ" ಎಂದು ವೀರಣ್ಣದೇವ ದೇವರಾಜೇಂದ್ರನಿಗೆ ಭಿನ್ನವಿಸಿಕೊಳ್ಳುತ್ತಾನೆ. ಆಗ ಈ ಯೋಗಿಶ್ವರನನ್ನು ಪ್ರೌಢದೇವರಾಯ ಮಾತನಾಡಿಸುತ್ತಾನೆ.

"ಯೋಗೀಶ್ವರರು ನೀವು ಲೋಕ ಪ್ರಪಂಚದಾ
ತಾಗು ನಿರೋಧನ್ಯ ನ್ಯಾಯ ನಿರ್ಣಯವೇಕೆ
ನಾಗ ಕಂಕಣನ ಧ್ಯಾನದಿ ನೀವು ಇರಬೇಕು ಎಂದು ಭೂಪತಿ ನುಡಿಯಲು"[೨೨]

ನೀವು ಯೋಗಿಗಳು ಲೋಕ ಪ್ರಪಂಚದ ತಾಗು, ನಿರೋಧಗಳು ನ್ಯಾಯ ನಿರ್ಣಯಗಳ ಗೊಡವೆ ನಿಮಗೇಕೆ? ಎಂದು ಕೇಳಲು 'ಜನಪನೇ ಪಕ್ಷಪಾತವನ್ನು ನುಡಿದು ಅನೇಕರು ಲಂಚವನ್ನು ತಕ್ಕೊಂಡು ನರಕಕ್ಕೆ ಹೋಗುವರು. ಅವರಿಗೆ ಮಾರ್ಗದರ್ಶನವನ್ನು ನನ್ನಂತಹ ತಿಳಿದವರು ಮಾಡದಿದ್ದರೆ ಇನ್ನಾರು ಮಾಡಿಯಾರು? ನಾನೇನೂ ಜನರಂತೆ ಅನ್ಯಾಯ ಮಾಡಿ ಒಡಲನೇ ಹೊರೆದು ನರಕವನು ಗಳಿಸಲಿಲ್ಲ. ತನ್ನಿಂದ ತಾನೇ ನನಗೊಲಿದು ಬಂದವರನ್ನು ವಿಚಾರಿಸಿ, ಸಂತೋಷಿಸಿ, ಕಳುಹುವಲ್ಲಿ ತಪ್ಪೇನಿದೆ? ಎಂದು ಹೇಳಲು, ರಾಜನು ಯೋಗಿಯ ಸತ್ಯ ಶುದ್ಧ ಪರಿವರ್ತನೆಗೆ ತಲೆಬಾಗಿದನು.

೧೭. ಸಾಣ ಖಂಡೆಯಶಾಂತ

"ಈ ವಿರಕ್ತನನ್ನು ಕುರಿತು ಪ್ರೌಢದೇವೇಂದ್ರನು
ಯಾತಕಲೆ ದೇವ ನಿಮಗೇಯ ಸಾಣ ಖಂಡೆಗಳು

ಘಾತಿಸಲು ಬಹುದೆ ಜೀವರ ನೀವು ಎಂದೆನಲು

ಆತ ನುಡಿದನು ಶಿವದ್ರೋಹಿಗಳ ಸಂಹರಿಪ ಬಿರುದುಂಟು ನಮಗೆಂದನು."[೨೩]

ನೀವು ಖ್ಯಾತ ಪುರುಷರು ನಿಮ್ಮ ಕೈಯಲ್ಲಿ ಆಯುಧವೇಕೆ? ಯಾತಕೆಲೆ ದೇವ ನಿಮಗೆಯು ಸಾಣಿ ಖಂಡೆಗಳು ಘಾತಿಸಲು ಬಹುದೇ ಜೀವರ ನೀವು ಎಂದು ಪ್ರೌಢದೇವರಾಯನು ಓರ್ವ ವಿರಕ್ತನಿಗೆ ಕರಿಸಿ ಕೇಳಲು ಇದು 'ಶಿವದ್ರೋಹಿಗಳನ್ನು ಸಂಹರಿಸುವುದಕ್ಕೆ ನಾವು ಧರಿಸಿದ ಆಯುಧವೆಂದು ಉತ್ತರವಿತ್ತನು. ಅದಕ್ಕೆ ರಾಯನು 'ನೀವು ಆಯುಧವುಳ್ಳವರಾದ್ದರಿಂದ ನಿಮ್ಮಲ್ಲಿ ಒಂದು ಷರತ್ತು. ಅದೇನೆಂದರೆ ನೀವು ನನ್ನ ಅರಮನೆಯ ಕತ್ತಿ ವರಸೆ ಸಾಧಕರೊಡನೆ ಕಾದಿಗೆಲ್ಲಬೇಕು' ಎನ್ನಲು ಅದಕ್ಕೆ ವಿರಕ್ತನು ನಾನು ಅವರೊಡನೆ ಕಾದುವ ಅಗತ್ಯವೇ ಇಲ್ಲ. ಅವರು ನನ್ನ ಆಯುಧವನ್ನು ಕೈಯಿಂದ ಮೇಲೆತ್ತಿದರೆ ಸಾಕು, ನಾನು ಸೋತಂತೆಯೇ ಎಂದು ಹೇಳಲು, ಎಲ್ಲ ಸಾಧಕರನ್ನು ಕರೆಸಿ ರಾಯನು ಆಯುಧವನ್ನು ಎತ್ತಲು ಆಜ್ಞಾಪಿಸಿದನು. ಆದರೆ ವಿರಕ್ತನ ಸಾಣಿ ಖಂಡೆಯನ್ನು ಯಾರಿಂದಲೂ ಎತ್ತಲಾಗಲಿಲ್ಲ. ಎಲ್ಲರೂ ಸತ್ವ ಸಾಲದೆ ಸೋಲುತ್ತಾರೆ. ನಗರಾಧಿ ನಾಯಕನಾದ ಪ್ರೌಢದೇವರಾಯನು ವಿರಕ್ತನಿಗೆ ಶರಣರ ಮಹಿಮೆ ತಿಳಿಯದೆಂದು ನಮಿಸಿ ಹೊಗಳಿದನು. 'ಎಲೆ ದೇವ ನಿಮ್ಮ ಘನವನು ತಿಳಿಯದಾಡಿದೆವು ಕರುಣಿಪುದೆಂದು ಬಿನ್ನೈಸಿ' ಕರಿಸಾಣಿ ಖಂಡೆಶಾಂತನು ಅವನನ್ನು ಮನ್ನಿಸಿ, ಅದನ್ನು ಬಲಗೈಯಿಂದ ಎತ್ತಿ ಗಗನಕ್ಕೆ ಚಿಮ್ಮಿ ಬಯಲಾದನು.

ಅದಕ್ಕೆ ಪ್ರೌಢದೇವರಾಯನು 'ಶರಣರ ಮನವನ್ನು ತಿಳಿಯುವುದು ಈ ಜಗದ ಜನರಿಗೆ ಅಸಾಧ್ಯ. ನಾವು ಸೆಣಸಿ ಅವರ ಮನನೋಯಿಸಿದೆವು. ಇಂಥ ಮಹಾತ್ಮರನ್ನು ಕೃಪೆ ಮಾಡಿ ತೋರಿಸಿ ತನ್ನನ್ನುದ್ಧರಿಸಬೇಕೆಂದು ವೀರಣ್ಣೊಡೆಯನಿಗೆ ದೊರೆ ದೇವೇಂದ್ರನು ಕೇಳಿಕೊಂಡನು.

೧೮. ಮದ್ದಾನಿಶಾಂತ

ಪ್ರೌಢದೇವನ ಸಲಹೆಯ ಮೇರೆಗೆ ವೀರಣ್ಣೊಡೆಯನು ಮದ್ದಾನೆಯ ಶಾಂತನಿದ್ದಲ್ಲಿಗೆ ದೊರೆಯನ್ನು ಕರೆದುಕೊಂಡು ಬಂದು 'ಈತನು ಮಹಾಜ್ಞಾನಿಯು, ಲಿಂಗಾಂಗ ಸಂಗಿ' ಕರುಣಾದಿ ಗುಣಗಳನ್ನು ಬೇರು ಸಹಿತ ಕಿತ್ತೊಗೆದು, ಮಾಯಾವೇಷವನ್ನು ಹರಿದೊಗೆದು ನಿಬ್ಬೆರಗಿನಲ್ಲಿದ್ದ ಮಹಾನುಭಾವ. ಇವನಿಗೆ ಮದ್ದಾನೆಶಾಂತ ಎಂಬ ಹೆಸರು ಬರಲು ಕಾರಣವನ್ನು ಈ ಕೆಳಗಿನಂತೆ ತಿಳಿಸುವನು.

"ಕಾರಣಾತ್ಮಕರು ಕರುಣಾದಿ ಗುಣಗಳನೆಲ್ಲ

ಬೇರುಸಹಿತದಿ ಕಿತ್ತು ಬೆರೆದು ಲಿಂಗದೊಳಿರ್ಪ

ಧಿರರೆಂಬುತ ಮದಗಜನಾಮವಿತ್ತರೆಲೆ ಪ್ರಭುಡ ನೀ ಕೇಳೆಂದನು

ಮದಗಜದ ನಾಮವನು ತಾಳ್ದ ಬಳಕಿವರಿಂಗೆ

ಮದದಂತಿ ಸತ್ವವದು ಸಮವಲ್ಲವೀತಂಗೆ

ಮುದದಿಂದೆ ಗಜವ ನಿಲಿಸುತ ನೋಳ್ವೆನೆಂದೆನಲು ವೀರಣ್ಣ ಮಾರ್ನುಡಿದನು"[೨೪]

ಭಕ್ತಿ-ಜ್ಞಾನ ವೈರಾಗ್ಯ ಸಂಪನ್ನ, ಆನೆ ತನ್ನ ಸೊಂಡಿಲಿನಿಂದ ಮರಗಳನ್ನು ಕೆಡಹುವಂತೆ ಕರುಣಾಮದಿ ಗುಣಗಳನ್ನು ಬೇರು ಸಹಿತ ಕಿತ್ತೊಗೆದ ಕಾರಣ ಇವನಿಗೆ 'ಮದ್ದಾನೆಯ ಶಾಂತನೆಂಬ ಹೆಸರು ಬಂತೆಂದು ಹೇಳಲು, ಪ್ರೌಡದೇವರಾಯನು, 'ಮದ್ದಾನೆಯ ಸತ್ವವುಳ್ಳವರೇ ಮದ್ದಾನೆ ಎಂಬ ಅಭಿಧಾನಕ್ಕೆ ಯೋಗ್ಯರು, ನಮ್ಮ ಗಜಶಾಲೆಯಲ್ಲಿರುವ ಆನೆಯೊಡನೆ ಇಂದು ಇವರ ಸತ್ವವನ್ನು ಪರೀಕ್ಷಿಸಬೇಕೆಂದು ನುಡಿಯಲು, ವೀರಣ್ಣಯ್ಯ 'ಶರಣರೊಳು ವ್ಯಸನ ಬೇಡಲೆ ಭೂಪತಿ ಹಸನವಾಗದು ನಿಮಗೆ' ಎಂದು ತಿಳಿಸಲು ಈವರೆಗೆ ತಾನು ಮಾಡಿದ ಪುಣ್ಯ ಹೀಗೆ ಸಲ್ಲುವದಿದ್ದರೆ ಆಗಲಿ ಎಂದನು.

ಅರಮನೆಯ ಮದೋನ್ಮತ್ತ ಆನೆಯನ್ನು ರಾಯನು ತರಿಸಿ ಮುಂದೆ ನಿಲ್ಲಿಸಿದನು. ಆದರೆ ಶಾಂತನನ್ನು ಕಂಡಾಗಲೇ ಆನೆಗಳು ಕಾಲ್ತೆಗೆದವು. ಶಾಂತನು ತನ್ನ ಅಂತಸ್ಸತ್ವದ ಭುಜಬಲದಿಂದ ಅದರ ಸೊಂಡಿಲನ್ನು ಹಿಡಿದು ಝುಂಕಿಸಲು ಗಡಗಡನೆ ನಡುಗಿ ಆನೆ ಭೂಮಿಗೆ ಉರುಳಿಬಿತ್ತು. ಅರಸನಾಜ್ಞೆಯಂತೆ ನಡೆದನು. ಇಂದು ನನ್ನ ಲೀಲೆ ಪ್ರಕಟವಾಯಿತು. ಅದರೊಡನೆ ತನಗೂ ಐಕ್ಯ ಸಮನಿಸಿತೆಂದು ಎಲ್ಲಾರು ನೋಡುತ್ತಿದ್ದಂತೆ, ಮದ್ದಾನೆ ಶಾಂತನೂ ನಾಗೇಶನಲ್ಲಿ ಕೂಡಿ ಬಯಲಾಗಿ ಹೋದನು.

೧೯. ಸಿಂಗಾಡಿ ಶಾಂತ

ಸಿಂಗಾಡಿಯನ್ನು ಹಿಡಿದು ತಿರುಗುತ್ತಿದ್ದ ವಿರಕ್ತ ಶಾಂತನನ್ನು ಪ್ರೌಢದೇವೇಂದ್ರನು ಕರೆಸಿ 'ಈ ಕಿರಾತವೇಷ ನಿನಗೇಕೆ? ನಿಮಗೆ ಬೇಟೆಯ ಮೃಗವು ಅರ್ಪಿತಕೆ ಒಪ್ಪಿತಿಹುದೇ? ಎಂದು ಕೇಳಲು ಆದಿಯಲ್ಲಿ ವೇದೋಪನಿಷತ್ತುಗಳು ಶುನಕವಾಗಿ ಅನಾದಿ ಪರಶಿವನೇ ಕಿರಾತ ರುದ್ರನಾಗಿ ಲೀಲೆಯನ್ನು ನಟಿಸಲಿಲ್ಲವೇ? ಹರಿಣಾಕಾರದ ಬ್ರಹ್ಮನನ್ನು ಹರೆಸಿ ಸಾರಥಿಯಾದ ಸರಸ್ವತಿಯನ್ನು ಬ್ರಹ್ಮನಿಷ್ಠದಂತೆ ಅವನಿಗೆ ಸತಿಯಾಗಿ ಮಾಡಲಿಲ್ಲವೆ? ಅವನ ಚಿದಂಶೀ ಭೂತರಾದ ನಾವು ಕಿರಾತ ರುದ್ರನ ಲೀಲೆಯನ್ನು ನಟಿಸುವ ಜಂಗಮರೆಂದು ಹೇಳಲು, ಪ್ರೌಢದೇವರಾಯನು ಅವನ ಮಾತಿಗೆ ನಗುತ್ತ, ನೀನು ಬಾಣವನ್ನು ಹೇಗೆ ಪ್ರಯೋಗಿಸುವೆ ನೋಡೋಣ ತೋರಿಸು ಎನ್ನಲು, ಸಿಂಗಾಡಿ ಶಾಂತನು ಬಿಲ್ಲನ್ನು ಹೆದೆಗೇರಿಸಿ ಬಾಣವನ್ನು ಬಿಟ್ಟು ಆ ಬಾಣ ತುದಿಯೊಡನೆ ಸೇರಿ ಬಯಲ ಸಂಧಾನದಲ್ಲಿ ಬೆರೆತನು.

"ಆದಡೆಲೆ ನೋಡು ನೋಡೆನುತ ಸಿಂಗಾಡಿಯಂ

ಸೇದುತಂ ಬಿಡಲು ಗಗನಕೆ ತುಡುಕಿ ಸರಳಿನೋಳ್

(ನೇದಿ) ಬಯಲಾಗಿ ಸಿಂಗಡಿ ಶಾಂತ ಪೋಗುತಿರೆ ನೋಡಿ ಜನ ವಂದಿಸಿದರು."[೨೫]

೨೦. ಚಕ್ರದ ಶಾಂತ

ಪರಶಿವನ ಪ್ರತಿರೂಪವೇ ಆಗಿದ್ದರೂ, ಲೋಕದ ಕಣ್ಣಲ್ಲಿ ಮರುಳನಂತಿದ್ದ ಶಾಂತನೋರ್ವನು ಚಕ್ರವನ್ನು ಹಿಡಿದಿರಲು ಪ್ರೌಢದೇವರಾಯ, 'ಪೂಜ್ಯ ಪುರುಷರು ನೀವು ಚಕ್ರವನ್ನು ಕರದೊಳಗೆ ಧರಿಸಿ ವಾಲ್ಮೀಕರಂದದಿ ರಾಜಿಸುವ ಕಾರಣವೇನು? ಎಂದು ಕೇಳಲು' ವಿಷ್ಣು ಕೈಯಲ್ಲಿ ಚಕ್ರಾಯುಧವನ್ನು ಹಿಡಿದು ಧನುಜರನ್ನು ಜಯಸಿದ ಕತೆಯನ್ನು ಕೇಳಿಲ್ಲವೆ? ಎಂದನು.

"ಅವರು ಚಕ್ರಾಯುಧದಿ ದನುಜರು ಜಯಿಸಿದರು
ಶಿವ ಜಂಗಮವು ನೀವು ಚಕ್ರಮಂ ಪಿಡಿದುಕೊಂಡು
ಬುವಿಯೊಳಗದಾರು ಜಯಸಿದಿರಿ ನೀವೆಂದೆನಲು ಎಮ್ಮ ಚಕ್ರಕೆ ನಿಲ್ಲುವಾ
ದಿವಿಜನರ ನಾಗಲೋಕದಿ ಕಾಣೆನೆಂದನಲು
ಬುವಿಯಾಣ್ಮ ದರಹಸಿತ ಮುಖನಾಗಿ ಕೇಳಿದಂ
ದಿವಿಜರಂತಿರಲಿ ಈ ವಟವೃಕ್ಷದ ಚಕ್ರವ ಬಿಡುನೋಳ್ಪ ಸಾಮರ್ಥ್ಯವ"[೨೬]

ವಿಷ್ಣು, ದೇವಾಧಿದೇವನು, ಚಕ್ರವನ್ನು ಹಿಡಿದು ದನುಜರನ್ನು ಗೆದ್ದನು. ನೀವು ಶಿವಜಂಗಮರು ಇದನ್ನು ಹಿಡಿದು ಅದಾರವನ್ನು ಜಯಿಸಿದ್ದೀರಿ? ಎಂದು ಪ್ರಶ್ನಿಸಲು ನನ್ನ ಈ ಚಕ್ರದ ಮುಂದೆ ನಿಲ್ಲುವ ದಿವಿಜ ಸುರ ನರ ನಾಗಲೋಕದವರನ್ನು ನಾನು ಕಾಣೇನು ಎನ್ನಲು, ಅದಕ್ಕೆ ದರಹಸಿತವಾಗಿ 'ನಿನ್ನ ದಿವಿಜರಂತಿರಲಿ, ನಮ್ಮ ಮುಂದಿನ ಈ ವಟವೃಕ್ಷವನ್ನಾದರೂ, ನಿನ್ನ ಚಕ್ರಭೇದಿಸಲಿ ನೋಡೋಣವೆಂದಾಗ, ಚಕ್ರದ ಶಾಂತ ಅದನ್ನು ಬಿಡಲು ಅದು ಬಯಲಾಗುವುದು; ಎಂದರೂ ದೊರೆ ಕೇಳಲಿಲ್ಲ. ಅವನ ಸಾಮರ್ಥ್ಯವನ್ನು ನೋಡಲೆಂದೇ ದೊರೆ ಈ ಹೊಂಚು ಹಾಕಿದ್ದನು. ರಾಜನಾಜ್ಞೆಯಂತೆ ಚಕ್ರವನ್ನು ಶಾಂತನು ಪ್ರಯೋಗಿಸುವುದೇ ತಡ ಮುಂದಿದ್ದ ವಟವೃಕ್ಷ ವಡವಾಗ್ನಿಯಂತೆ ಸಿಡಿದೆದ್ದು ಬಯಲಾಯಿತು. ಆ ಬಯಲಲ್ಲಿಯೇ ಶಾಂತನೂ ಬಯಲಾದನು. ಮೃಡಭಕ್ತ ಪ್ರೌಢೇಂದ್ರನು ಇದನ್ನು ಕಂಡು ಗಡಗಡನೆ ನಡುಗಿ ಮನದೊಳಗೆ ವಂದಿಸಿದನು.

೨೧. ಬೊಂಬೆ ಕಟ್ಟಿ ಮರೆಸುವ ಶಾಂತ

"ಒಬ್ಬರಿಂದಲಿ ಒಬ್ಬರಧಿಕ ಮಹಾತ್ವವನು
ಪರ್ಬಿಸುವರಕಟ ಇವರಂಗವನು ಕಾಣದ್ಯೆ
ಕಬ್ಬುಬಿಲ್ಲಿನ ವೈರಿ ತಾನೆ ಬಲ್ಲನು ಎಂದು ನುತಿಸುತಂ ರಾಜೋಂದ್ರನು
ಉಬ್ಬಿ ಕೇಳಿದ ಶರಣರಿನ್ನುಂಟೆಯೆಂದೆನಲು
ಒಬ್ಬ ನಿಪ್ಪನು ಬೊಂಬೆಗಟ್ಟಿ ಮೆರಸುವ ಶಾಂತ
ಕಬ್ಬುಬಿಲ್ಲನ ಬಾಣಕೊಳಗಾಗನಾ ಮಹಿಮನೆಂದು ತೋರ್ದನು ಜನಪಗೆ"[೨೭]

ಪ್ರೌಢದೇವೇಂದ್ರನು ವಿರಕ್ತರ ಮಹಿಮೆಗಳನ್ನು ತಿಳಿದವನಾಗಿ ಅವರು ನಟಿಸುವ ಲೀಲೆ ಅಪಾರವಾದುದು. ನನ್ನ ಪಟ್ಟಣದಲ್ಲಿ ಇಂಥ ಮಹಾತ್ಮರು ಎಲ್ಲೆಲ್ಲಿ ಯಾವ ಯಾವ ವೇಷದಿಂದಿರುವರೋ ಅವರೆಲ್ಲರನ್ನು ಕಾಣಬೇಕು. ಅವರ ಅಂತಸತ್ವವನ್ನರಿಯಬೇಕೆಂದು ನಿಶ್ಚಯಿಸಿ ಕರಸ್ಥಲದ ವೀರಣ್ಣೊಡೆಯನಿಗೆ ತನ್ನ ಮನದಿಂಗಿತವನ್ನು ತಿಳಿಸಿದನು. ಆಗ ವೀರಣ್ಣೊಡೆಯ ದೊರೆಯನ್ನು ಬೊಂಬೆ ಕಟ್ಟಿ ಮೆರೆಸುವ ಶಾಂತನ ಬಳಿ ಕರೆದುಕೊಂಡು ಹೋದನು. ನೀವೇಕೆ ಬೊಂಬೆಗಳನ್ನು ಕಟ್ಟಿ ಮೆರಸುವಿರಿ? ಈ ವಿಧವಾದ ಕೆಲಸ ನಿಮಗೆ ಸಲ್ಲದು ಎಂದು ಪ್ರೌಢೇಂದ್ರ ತಿಳಿಸಿದನು. ಸಾಕ್ಷಾತ್ ಪರಶಿವನು ಜಗದ ಜೀವಿಗಳನ್ನು ಬೊಂಬೆ ಮಾಡಿ ಸೂತ್ರ ಹಿಡಿದು ಆಡಿಸುತ್ತಿಲ್ಲವೆ? ಎಂದು ವಿರಕ್ತ ಉತ್ತರಿಸಿದಾಗ ದೊರೆಯು ಕೊಡುವ ಉತ್ತರ ಕೌತುಕವಾಗಿದೆ. ಶಿವನ ಸಾಮರ್ಥ್ಯ ನಿನ್ನಲ್ಲಿದ್ದರೆ ಈ ಬೊಂಬೆಗಳಿಗೆ ಜೀವ ಕೊಟ್ಟು ಕುಣಿಸು ಎಂದನು. ಅದರಂತೆ ವಿರಕ್ತ ಶಾಂತನು ಬೊಂಬೆಗಳನ್ನು ಮುಟ್ಟಿದ ಕೂಡಲೇ ಅವುಗಳಲ್ಲಿ ಪ್ರಾಣ ಸಂಚಾರವಾಗಿ ಕುಣಿಯಲಾರಂಭಿಸಿದವು. ದೊರೆಯು ಅವನ ಲೀಲೆಗೆ ಬೆರಗಾಗಿ ಆತನಿಗೆ ನಮಸ್ಕರಿಸಲು ಹೋಗುವಷ್ಟರಲ್ಲಿಯೇ ಬೊಂಬೆಕಟ್ಟಿ ಮೆರಸುವ ಶಾಂತನು ಬಯಲಾಗಿ ಹೋದನು.

೨೨. ಜಟ್ಟಿಶಾಂತ

ಪ್ರೌಢದೇವರಾಯನು ತನ್ನ ಸಾಮ್ರಾಜ್ಯದಲ್ಲಿ ನೆಲೆಯೂರಿದ ಹಲವಾರು ವಿರಕ್ತರನ್ನು ಪರಿಚಯಿಸಿದ ನಂತರ ವೀರಣ್ಣೊಡೆಯನು ಜಟ್ಟಿಯ ಶಾಂತನನ್ನು ತೋರಿಸಿದನು.

"ಕಾವಿ ಚಲ್ಲಣಾ ಕಾಸೆಯದಟ್ಟಿ ಕಾಲ್ಪೆಂಡ
ದೇಹದೊಳು ಕೆಮ್ಮಣ್ಣ ಪೂಸಿ ಮುರುಗಿಯ ಕಡಗ
ಕೈವಳಗೆ ಧರಿಸಿ ಕಠಾರಿ ನಡುವಿಗೆಯಿಟ್ಟು ಶಿರಕೆ ಚಿನ್ನದಚಿಂದಿಯ
ಪಾವನಾತ್ಮಕ ಪರಮ ಜೆಟ್ಟಿವೇಷವ ತಾಳಿ
ಕಾವಿ ಹಚ್ಚಡ ಹೊದ್ದು ವಜ್ರಮುಷ್ಟಿಯ ಪಿಡಿದು
ದಿವ್ಯ ಕಾಂತಿಯೊಳು ಒಪ್ಪಿರ್ದ ಮೂರ್ತಿಯ ನೋಡಿ ಭೂಪತಿಯು ಬೆರಗಾದನು."[೩೮]

ಕಾವಿಚಲ್ಲಣ, ಕಾಸಿಯದಟ್ಟಿ, ಕಾಲಲ್ಲಿ ಪೆಂಡ, ಕೆಮ್ಮಣ್ಣ ಹೂಸಿದ ಮೈ, ಕೈಯಲ್ಲಿ ಮರಗಿ ಕಡಗ, ನಡುವಿಗೆ ಕಠಾರಿ, ಶಿರಕೆ ಚಿನ್ನದ ಚಿಂದೆಯಿಟ್ಟು, ಕಾವಿಯ ಹಚ್ಚಡ ಹೊದ್ದು, ವಜ್ರ ಮುಷ್ಟಿಯನ್ನು ಹಿಡಿದು ದಿವ್ಯಕಾಂತಿಯಿಂದ ಜಗಜಟ್ಟಿಯಂತಿದ್ದ ಶಾಂತನನ್ನು ಕಂಡು "ಪ್ರೌಢದೇವರಾಯ 'ಕಂತೆ' ಕೌಪಿನಗಳು, ಜಡೆಮುಡಿ, ಭಸ್ಮಲೇಪನಗಳನ್ನು ತೊರೆದು, ಜಂಗಮ ವೇಷವನ್ನು ಮರೆಮಾಡಿ, ಭವಿವೇಷ ತೊಟ್ಟು ಏಕೆಂದು ಕೇಳಲು ಅಂತರಂಗವು ಲಿಂಗವಾದ ಶರಣನ ದೇಹ ಎಂತಿದ್ದರೇನು? ಹೂವು, ಮುಳ್ಳಿದ್ದರೇನು ಮಾಧುರ್ಯವೇನಾದರೂ

ಕಂದಿರುತ್ತದೆಯೋ? ಎಂದು ಉತ್ತರಿಸುತ್ತಾನೆ. ಜಟ್ಟಿಶಾಂತ ವೇಷದಲ್ಲಿ ಜಂಗಮನೆನ್ನಿಸಿ ಕಾಮಕ್ರೋಧಾದಿಗಳನ್ನು ಅಳಿಯದೆ, ಜಡರಂತೆ ತಿರುಗುವರೆಷ್ಟೋ ಜನ ಇರುವಾಗ 'ಜಂಗಮ ವೇಷವಿದ್ದ ಮಾತ್ರಕ್ಕೆ ಜಂಗಮತ್ವ ಅವರಿಗೆ ಬಂದಿರುವದೇ? ಅದಕ್ಕೆ ವೇಷ ಮುಖ್ಯವಲ್ಲ' ಎನ್ನುವ ಆಗಲಿ ನೀನು ಜಟ್ಟಿಯ ವೇಷ ಧರಿಸಿರುವುದರಿಂದ ನಿನ್ನಲ್ಲಿರುವ ಜಟ್ಟಿತನವನ್ನಾದರೂ ನನಗೆ ಕಾಣಿಸು ಎನ್ನಲು ಅದಕ್ಕೆ ದೊರೆಯಾಜ್ಞೆಯೆಂದು 'ಅಗಲಿ ಸಲಿಸುವನೆಂದನು. ಆಗ ಅರಮನೆಯ ಜಟ್ಟಿಗಳನ್ನು ದೊರೆ ಕರೆಸಿ, ಇವನೊಡನೆ ಕಾದಬೇಕೆನ್ನಲು ಜಂಗಮನೊಡನೆ ಕಾದಿದರೆ ಮಾನಭಂಗ ಎಮಗೆ ಸರಿಯಲ್ಲ ಎಂದು ಅರಮನೆಯ ಜಟ್ಟಿ ಹೇಳಲು, ಆ ಪ್ರೀತಿ ನಮಗಿದೆ. ಅವನಿಗೆ ವಂದನೆ ಮಾಡಿ ನಿಲ್ಲಿರಿ. ಇಂದು ನಾವು ಆ ಜಂಗಮನ ಬಾಹು ಸಾಮರ್ಥ್ಯವನ್ನು ನೋಡಬೇಕಾಗಿದೆ ಎನ್ನಲು ಎಲ್ಲರು ಒಬ್ಬೊಬ್ಬರಾಗಿ ಬಂದು ಕಣದಲ್ಲಿ ನಿಂತರು. ಜಟ್ಟಿ ಶಾಂತ ಒಬ್ಬೊಬ್ಬರನ್ನು ಕೈಹಿಡಿದು ಎಳೆದರೆ ಭೂಮಿ ಹೊಯ್ದಾಡಿತು. ಒಂದೇ ಉಸಿರಿಗೆ ಅರವತ್ತು ಜೋಡಿನ ಜಟ್ಟಿಯಾಳುಗಳನ್ನು ಕೆಡವಿ ಭಂಗಪಡಿಸಿ, ಇನ್ನು ತನ್ನ ಲೀಲೆ ಪ್ರಕಟವಾಯಿತೆಂದು ಮಲ್ಲಗಾಳಗದ ಕಣದಲ್ಲಿಯೇ ಬಯಲಾಗಿ ಹೋದನು.

೨೩. ವೀರಶಾಂತ: (ವಿಟಶಾಂತ)

ತನ್ನ ರಾಜಧಾನಿಯಲ್ಲಿರುವ ಮಹಾಮಹಿಮರ ಲೀಲೆಯನ್ನು ಕಂಡು ಆಶ್ಚರ್ಯಪಟ್ಟ ಅರಸ ಮತ್ತೇ ವಿರಕ್ತರು ಎಲ್ಲಿರುವವರು ತೋರಿಸೆಂದನು. ಆಗ ವೀರಣ್ಣೊಡೆಯ 'ವೀರಶಾಂತನನ್ನು ತೋರಿಸುವನು. ನೋಡಲು ವೀರಪುರುಷನಂತೆ ಬ್ರಹ್ಮ ತೇಜವುಳ್ಳವನಂತೆ ಇರುವ ಇವನ ವ್ಯಕ್ತಿತ್ವದ ಮರ್ಮವನ್ನರಿಯಲು ಅರಸನು ನಿಶ್ಚಯಿಸಿ ರಾಜಧಾನಿಯಲ್ಲಿನ ಶೃಂಗಾರ ಸೋನೆ ಎಂಬ ವೇಶ್ಯಾಮಣಿಯನ್ನು ಕರೆದು ಈ ವಿರಕ್ತನ ಮನವೊಲಿಸೆಂದು ಆಜ್ಞಾಪಿಸುತ್ತಾನೆ.

'ಶೃಂಗಾರ ಸೊನೆ' ಇವನಿದ್ದಲ್ಲಿಗೆ ಹೋಗಿ ತನ್ನ ಮನೆಗೆ 'ಭಿನ್ನಹಕ್ಕೆ' ಬರಲು ಮನವಿ ಮಾಡುವಳು. ಅದಕ್ಕೆ ವಿರಕ್ತನು ನೀನು ಭಕ್ತೆಯಾಗಿದ್ದರೆ ಮನೆಗೆ ಬರುತ್ತೇನೆಂದು ಹೇಳಲು, ತಾನು ಶಿವಭಕ್ತೆಯೆಂದೇ ಆಕೆ ಹೇಳಿ ಕರೆದುಕೊಂಡು ಹೋಗಿ, ವಿಧವಿಧದ ಪದಾರ್ಥವನ್ನಿತ್ತು, ತೃಪ್ತಿಪಡಿಸಿ ಪಲ್ಯಂಗದ ಮೇಲೆ ಕೂರಿಸಿ ವಿಶ್ರಮಿಸೆಂದು ಹೇಳುತ್ತಾಳೆ. ವಿಭ್ರಮವಿಲಾಸದಿಂದ ಮನಸೋತುದಾಗಿಯೂ, ರೂಪು ಯೌವನವಿದ್ದಾಗಲೇ ಸುಖ ಪಡೆವುದು ಮನುಷ್ಯ ಧರ್ಮವೆಂದೂ ಹೇಳುತ್ತಾಳೆ. ವೀರ ವಿರಕ್ತನಾದ ಶಾಂತದೇವ ಯೋಗಿಗೆ ಭೋಗ ತರವಲ್ಲವೆನ್ನುತ್ತಾನೆ. ಅದಕ್ಕೆ "ರತಿಯೋಗವಿಲ್ಲದೀ ದೇಹ ಜಂತ್ರಿಸಿದ ಶಿಲೆಯ ಬೊಂಬೆಯತೆರದಿ ಬಾಳುವುದು ಫಲವೇನು? ಪರಾಶರ ಬ್ರಹ್ಮರೆಲ್ಲರೂ ನಾರಿಯರ ಸಂಗಕ್ಕೊಳಗಾಗಲಿಲ್ಲವೇ? ಅನೇಕರು ಸಂಸಾರದಲ್ಲಿದ್ದೂ ಸದ್ಗತಿಯನ್ನು ಪಡೆಯಲಿಲ್ಲವೇ? ಎಂದು ವಾದಿಸುವಳು. ಆದರೆ ಇದಕ್ಕೊಪ್ಪದ ವೀರಶಾಂತ

'ಇವರೆಲ್ಲರೂ ಭೋಗಕ್ಕೊಲಿದು ಭವರಾಟಾಳದಲ್ಲಿ ಸತ್ತವರು ಎಂದು ಶುಕಮುನಿಯ ಜನ್ಮಾಂತರದ ಕಥೆಯನ್ನು ವಿಸ್ತರಿಸಿ ಹೇಳಿ ಕರ್ಮದ ಬಲೆಗೆ ಬಿದ್ದವನ ಪಾಡು ಹೇಗಾಯಿತೆಂಬುದನ್ನು ಬಣ್ಣಿಸುವನು. ಗಿಳಿಯಾಗಿ ಹುಟ್ಟಿದ ಶುಕ ಜ್ಞಾನದೃಷ್ಟಿಯಿಂದ ವ್ಯಾಸರಿಗೆ ಮಗನಾಗಿ ಬಂದು, ವೈರಾಗ್ಯ ಬಲಿತು ಕಾನನ ಸೇರಿ ಉಗ್ರ ತಪಸ್ಸನ್ನಾಚರಿಸಿದರೂ ಇವನ ಪರೀಕ್ಷೆಗೆಂದು ಶಿವನಿಂದ ರಂಭೆ ಬಂದು ನಾಟ್ಯ ಮಾಡುತ್ತಾಳೆ. ಅದಾವುದಕ್ಕೂ ಒಲಿಯದ ಶುಕಮುನಿ 'ಮಾನಿನಿಯರ ಜನ್ಮ ಮಾತ್ರ ಸ್ಥಾನ'ವೆಂದು ನುಡಿಯುತ್ತಾನೆ. ಮುಂದಿದ್ದ ಸಾರ ತರುಣಿಗೆ ಮನಸೋತು, ಮಲ ಮೂತ್ರ ಮಾಂಸವುಳ್ಳ ದೇಹದ ದುರ್ಗಂಧಕ್ಕೆ ಒಲಿಯದೆ ಗಂಭೀರ ನಿಲುವಿನಲ್ಲಿದ್ದ ಶುಕ ಮುನಿಯ ನಿಶ್ಚಿತ ತಪಕ್ಕೆ ಮೆಚ್ಚಿ ಬಂದ ಶಿವ 'ನೀನು ನನ್ನ ಕರುಣದ ಕಂದನಾದೆ' ಯೆಂದು ಹರಿಸುತ್ತಾನೆ. ಇಂತಹವರ ಆದರ್ಶಗಳನ್ನು ಮರೆತು ನಿನ್ನೊಡಗೂಡಿದರೆ ನನಗಾವ ಜನ್ಮದಲ್ಲಿ ಸುತ್ತುವ ಗತಿ ಪ್ರಾಪ್ತವಾಗುವದೋ ಎಂದು ಶಾಂತದೇವ ಶೃಂಗಾರ ಸೋನೆಗೆ ಹೇಳಲು, ಇವನ ಮಹಿಮೆ ತಿಳಿಯದೆ ಒಲಿದು ಬಾಯೆಂದು ಮತ್ತೇ ಕಾಣುತ್ತಾಳೆ.

ಅದಕ್ಕೆ ಶಾಂತದೇವ 'ನನ್ನ ದೇಹ ದಗ್ಧಪಟವಾಗಿದೆ. ಇಗೋ ಇಲ್ಲಿ ನೋಡು ಇದು ನನ್ನ ಕೌಪೀನ ಇದರ ಮೇಲೆ ಒಂದು ತೃಣವನ್ನಿಟ್ಟು ಬೇಕಾದರೆ ಪರೀಕ್ಷಿಸೆನ್ನಲು ತೃಣವನ್ನು ತಂದು ಅದರ ಮೇಲಿಡುವಳು. ಆಗ ಶಾಂತದೇವ ಅದನ್ನು ನೋಡುತ್ತ ಶಿವಮಂತ್ರವನ್ನು ಧ್ಯಾನಿಸುತ್ತಲೇ ಕೌಪೀನ ಮೇಲಿನ ತೃಣವು ಉರಿದೇಳುತ್ತದೆ. ಶೃಂಗಾರಸೋನೆ ಅವನ ವೀರ ವಿರತಿಗೆ ಮೆಚ್ಚಿ ಈತ ಘನಮಹಿಮನೆಂದು ಶರಣಾಗುತ್ತಾಳೆ. ಸುದ್ದಿ ತಿಳಿದ ಪ್ರೌಢದೇವರಾಯನು ಶಾಂತದೇವನನ್ನು ಕಂಡರೆ ನನಗೆ ಸಕಲ ಸಿದ್ಧಿ ಪ್ರಾಪ್ತವಾಗುವುದೆಂದು ಬರುವಷ್ಟರಲ್ಲಿಯೇ 'ತನ್ನ ಮಹಿಮೆ' ಪ್ರಕಟಿತವಾದ ಬಳಿಕೆ ನಾನೇಕವರಿಗೆ ಸಿಲ್ಕುವದೆಂದು ಆ ಕ್ಷಣದಲ್ಲಿ ಬಯಲಾಗುತ್ತಾನೆ.

ವೀರಣ್ಣ, ಪ್ರೌಢದೇವರಾಯ ಹಾಗೂ ಶಿವಗಣಾಧೀಶ್ವರರು ಬಂದು ನೋಡುವಲ್ಲಿ ಅವನ ಭೌತಿಕ ದೇಹ ಮಾತ್ರವಿರುತ್ತದೆ. ಭೂಪತಿ ಬೆರಗಾಗಿ ಅರಿಯದೆ ಅವನನ್ನು ಅಗ್ನಿಪರೀಕ್ಷೆಗೊಳಗು ಮಾಡಿದ್ದಕ್ಕೆ ಪಶ್ಚಾತ್ತಾಪ ಪಡುವರು.

೨೪. ಡೊಂಬರ ಶಾಂತ

ವೀರಣ್ಣೊಡೆಯನೇ ನಮ್ಮ ಪುರದಲ್ಲಿ ಇನ್ನೂ ಯಾರು ಯಾರು ಕಾರಣ ಪುರುಷರಿರುವರು? ಎಂದು ಪ್ರೌಡದೇವರಾಯನು ಕೇಳಲು, ವೀರಣ್ಣದೇವರು 'ಡೊಂಬರ ಶಾಂತ'ನ ಹೆಸರು ಹೇಳುವನು. ದೊರೆ ಶಾಂತೇಶನನ್ನು ಕಾಣಲು ಬರುವನು.

"ಗೆಜ್ಜೆಯ ಚಲ್ಲಣ ಕಾನಿಯ ದಟ್ಟಿಯು
ಝುಂಝುಣ ಝುಂಕರದೆಂಬುವನೇವುರ

ನಿಜ್ಜರ ಗಡ್ಡವು ನಿಗರಿದ ಮೀಸೆಯ ಕೊನೆ ಚೆಳ್ಳುಗುರುಗಳು
ಸಜ್ಜನ ಸಾತ್ವಿಕ ಮನಸದ್ವಾಸನೆ
ದುರ್ಜನರಂದದಿ ರೂಪವ ತೋರಿಹ
ಅಜ್ಜವು ಪಾಲೋಳು ಅಡಗಿದ ತೆರದಲಿ ಶರಣರ ಘನಪದವು"

ರಾಜನು ಜಂಗಮ ಮೂರ್ತಿಯೇ ಈ ವಿಚಿತ್ರ ವೇಷದ ಪರಿಯೇನು? ಇದು ನಿನಗೆ ತಕ್ಕುದೆ? ಎಂದು ಕೇಳಲು 'ಸಾಕ್ಷಾತ್ ಶಿವನೇ ಪಾರ್ವತಿಯ ಮುಂದೆ ತಾಂಡವನಾಟ್ಯ ಮಾಡುವಾಗ ಈ ವೇಷ ಧರಿಸಲಿಲ್ಲವೇ? ಅವನು ಕಾಣಿಸಿದರೆ ದೇವತೆಗಳೆಲ್ಲ ಡೊಂಬರಾಗಿ ಕುಣಿಯಲಿಲ್ಲವೇ? ಎಂದು ಹೇಳಲು 'ಅದು ನಿರಾಕಾರ ಪರಶಿವನ ಲೀಲೆ' ನಿನ್ನದು ನರದೇಹ, ನಿನ್ನದೇನು ಲೀಲೆ ತೋರಿಸು? ಎಂದು ಕೇಳಲು ಇಲ್ಲಿ ಬಾಣಗಳ ಹಾಸುಗೆ ಹಾಸು, ನಾನು ಅವುಗಳ ಮೇಲೆ ಡೊಂಬರಾಟವಾಡುತ್ತೇನೆಂದು ಹೇಳುವನು.

ದೊರೆ ಹಾಗೆ ವ್ಯವಸ್ಥೆ ಮಾಡಲು, ಪೆರ್ಗಣಿಯ ತುದಿಯ ಮೇಲೆ ಶಾಂತನು ನಿಂತು; ಅಂತರಲಾಗವನ್ನು ಹಾಕುತ್ತ ಅಂತರ್ಧಾನನಾಗುತ್ತಾನೆ. ಚಿನುಮಯನ ಶರಣನ ನೆಲೆಯನರಿಯದೇ ಹೋದುದಕ್ಕೆ ದೊರೆಯು 'ವೀರಣ್ಣನೇ ಇವರ ಭಕ್ತಿ'ಯ ಪರಿಗೆ ಮರುಳಾದೆ ಇನ್ನೂ ಇಂಥ ಮಹಾತ್ಮರು ಎಲ್ಲೆಲ್ಲಿರುವರು? ಎಂದು ಕೇಳಲಾಗಿ ವೀರಣ್ಣಯ್ಯ ವರ್ಧೇಂದ್ರಿಯ ಶಾಂತನ ಬಳಿಗೆ ರಾಜನನ್ನು ಕರೆತರುತ್ತಾನೆ.

೨೫. ವರ್ಧೇಂದ್ರಿಯ ಶಾಂತ

ಇವನ ಹೆಸರು ವರ್ಧೇಂದ್ರಿಯ, ಇವನ ಇಂದ್ರಿಯ ಚಲಿಸದು. ನಿರ್ಮಲ ಹೃದಯ, ಶಿವಚಿತ್ತನು. ಲಲನಾಸಂಗಕ್ಕೆ ಭ್ರಮಿಸದೆ, ತನ್ನ ಲಿಂಗದಲ್ಲಿ ಮನವ ನಿಲ್ಲಿಸಿದ ಧೀರಶರಣ. ಕುಂಡಲಿಯ ಬ್ರಹ್ಮಾನಂದದಲ್ಲಿ ಇವನ ವಿಹಾರವೆಂದು ವೀರಣ್ಣಯ್ಯ ಹೇಳಲು, ಇವನನ್ನು ಪರೀಕ್ಷಿಸಬೇಕೆಂದು ದೊರೆ ನಿಶ್ಚಯಿಸಿ, ತನ್ನ ರಾಜಧಾನಿಯಲ್ಲಿರುವ ಹೆಸರಾಂತ ಗಣಿಕಾಮೇಳದವರನ್ನಲ್ಲಿ ಕರಿಸಿ, 'ನಿಮ್ಮ ನಿಮ್ಮ ಚತುರ ಕಲೆಯನ್ನು ಇವನ ಮುಂದೆ ಮೆರೆದು ಇವನ ಮನವೊಲಿಸಿಕೊಳ್ಳಬೇಕೆಂದು ಆಜ್ಞಾಪಿಸಿದನು. ಸಕಲ ಕಲಾಕೋವಿದೆಯರು, ಅಂತಃ ಪುರದ ವರನಾರಿಯರೆಲ್ಲರೂ ಸೇರಿ 'ಶಾಂತ' ನಿದ್ದಲ್ಲಿಗೆ ಬಂದು ಬಗೆ ಬಗೆಯ ಸ್ತ್ರೀಭಾವವನ್ನು ನಟಿಸಿದರೂ ಶಾಂತನ ಶಾಂತ ಮುದ್ರೆಗೆ ಭಂಗ ಬಾರದೇ ಹೋಯಿತು. 'ರಾಯನು ನಮ್ಮನ್ನು ನಿಮ್ಮಲ್ಲಿ ಬೆರೆಯಲು ಕಳುಹಿಸಿದನು. ನೀವು ನಮ್ಮೊಡನೆ ರತಿಸುಖವ ಪಡೆವುದೆನ್ನಲು ವಿರಕ್ತನಾದವನಿಗೆ ರತಿಸಂಗವು ಪೂಜ್ಯವೇ? ನನ್ನೊಡನೆ ಬೆರೆಯಲು ಕಳುಹಿಸಿದ ರಾಜನಿಗಾದರೂ ಈ ಬುದ್ಧಿ ಇಲ್ಲವೇ? ನಾನು ಇಂದ್ರೀಯಗಳನ್ನು ದಹಿಸಿದವನು ಎಂದು ಹೇಳಲು, ಏನೂ ಅರಿಯದ

ಮುಗ್ಧೆಯರು ದೇಹ ಮೋಹಕ್ಕೊಳಗಾಗಿ ಇವನೇನು ವಜ್ರಶರೀರನೇ ನೋಡೋಣವೆಂದು ಅಂಗಸ್ಪರ್ಶ ಮಾಡಲು ತಮ್ಮ ಅಂಗಾಂಗದಲ್ಲಿ ಬೆಂಕಿಯ ಕಿಡಿ ಬಿದ್ದಂತಾಗಿ ಎಲ್ಲರೂ ಗೋಳಿಡಲಾರಂಭಿಸಿದರು. ವರ್ಧೇಂದ್ರಿಯ ಶರಣನು ಸಾಕ್ಷಾತ್ ರುದ್ರನು ಇವನು ನಮ್ಮನ್ನು ಗೆದ್ದನೆಂದು ಅವನಿಗೆ ಶರಣಾಗಿ ರಾಜನಲ್ಲಿಗೆ ಬಂದು ವಿಷಯ ತಿಳಿಸಿದರು. ರಾಜನು ಸೋಜಿಗದಿಂದ ವರ್ಧೇಂದ್ರಿಯ ಶರಣ ಪೂಜೆಗೈಯ್ಯಬೇಕೆಂದು ಅಲ್ಲಿಗೆ ಬರುವನಿತರಲ್ಲಿಯೇ ಅವನಿಗೆ ಸಿಲುಕದೆ ಆ ಕ್ಷಣದಲ್ಲಿಯೇ ನಿರ್ವಯಲಾದನು.

೨೬. ಗುರುಬಸವೇಶ್ವರ

ವೀರಣ್ಣೊಡೆಯನೇ ಇದುವರೆಗೆ ನಾನೆಷ್ಟೋ ಮಹಾತ್ಮರನ್ನು ಕಂಡಿದ್ದೇನೆ. ಆದರೆ ಜಪ ತಪ ಧ್ಯಾನ ಧಾರಣದಿಂದ ಜ್ಞಾನ ಕ್ರಿಯೆಗಳೊಂದಾದ ಯೋಗೀಶ್ವರರು ಯಾರಾದರೂ ಇರುವರೇ? ಎಂದು ಕೇಳಲು, ವೀರಣ್ಣದೇವ ದೊರೆಯನ್ನು ಕರೆದುಕೊಂಡು ಬರುವಾಗ, ಒಂದೆಡೆ ಉಪ್ಪರಿಗೆಯ ಮೇಲೆ ನೆಲದಿಂದ ಎತ್ತರಕ್ಕೆ ಶರೀರವನ್ನು ನಿಲ್ಲಿಸಿ ಪವನ ಮಂಟಪದಲ್ಲಿ ಕುಳ್ಳಿರ್ದ ಓರ್ವ ಶಿವಯೋಗಿಯನ್ನು ಕಾಣಿಸುತ್ತಾನೆ. ದೊರೆ ಇವನ ಯೋಗಕ್ಕೆ ಬೆರಗಾಗಿ ಇದು ವಿಪರೀತ ಯೋಗವೆಂದು ಹೊಗಳುತ್ತಾನೆ. ವೀರಣ್ಣಯ್ಯ ಇದಕ್ಕಿಂತ ಘನ ಮಹಿಮನಾದ 'ಗುರುಬಸವೇಶ್ವರ'ನಿದ್ದಲ್ಲಿಗೆ ಬಂದು 'ಇವನು ಮಹಾಯೋಗಿ, ಸಕಲ ರಾಗಗಳನ್ನು ಹಾಡುತ್ತ ಪವನವನ್ನೇರಿಸಿ ಖೇಚರ ಮಾರ್ಗದಲ್ಲಿ ನಡೆದು ನಾಗೇಶ್ವರನಲ್ಲಿ ಮನವ ಬೆರಸಿ ಬಯಲಾದನು. ಇರೆ ಕಾವ್ಯಗಳಲ್ಲಿ ಗುರುಬಸವ ವೀರಣ್ಣೊಡೆಯನಿಂದ ಮುಂಚೆ ಆಸ್ಥಾನದಲ್ಲಿದ್ದಂತೆ ತಿಳಿಯಪಡಿಸುತ್ತವೆ. ಆದರೆ ಮೋದಿಯ ರುದ್ರನ ಕಾವ್ಯದಲ್ಲಿ ವೀರಣ್ಣೊಡೆಯನೇ ಅರಸನಿಗೆ ಗುರುಬಸವನನ್ನು ಪರಿಚಯಿಸುವ ಪರಿ ತುಂಬ ಭಿನ್ನ ರೀತಿಯಲ್ಲಿದೆ.

ದೊರೆಯು ವೀರಣ್ಣೊಡೆಯನಿಗೆ 'ಇಂಥ ಮಹಾಯೋಗಿಗಳನ್ನು ಕಂಡ ನಾನೇ ಧನ್ಯನು. ವೇದಗಳು ಹೊಗಳಿ ಕೆಟ್ಟವು' ವಾದಿಸುವದರಿಂದ ಇವರ ನೆಲೆ ತಿಳಿಯದು. ಇವರ ಭಕ್ತಿಯ ಕಲೆಯನ್ನು ನನಗೆ ಭೋದಿಸು, ಇವರೆಲ್ಲರ ಪರಿಯನ್ನು ತೋರಿಸು ಎಂದನು. ವೀರಣ್ಣಯ್ಯನು ಪ್ರೌಢನೇ, ನೀನು ನಿನ್ನಯ ಮೇದಿನೀಪತಿ ಎಂಬ ಅಹಂಕಾರದಿ ವಾದಿಪ ಗುಣಗಳ ಬಿಡುತಲಿ ಭಕ್ತಿಯ ತೋರುವೇನು ಎಂಬುದಕ್ಕೆ ರಾಜನು ಆಗಲಿ ಎಂದನು.

ವೀರಣ್ಣನು ದೊರೆಯನ್ನು ಕೂಡಿಕೊಂಡು ವೀರಕ್ತರಿದ್ದಡಿಗೆ ಬರುವನು. ಯೋಗಿಗಳನ್ನು ಕಾಣುತ್ತ

> "ತೇಜದ ನಿಬ್ಬೆರಗಿನ ಮಹ ಶಾಂತನು
> ರಾಜೀಪ ಸರಕಿಲ ಶಾಂತೇಶ್ವರನನು
> ಸೋಜಿಗ ಭದ್ರಾಕಾಳಿಯ ಶಾಂತನುವಿದ್ದಲಿ ಶಾಂತೇಶಾ"[೪೦]

ವೀರಣ್ಣೊಡೆಯರು ಪ್ರೌಢದೇವರಾಯನಿಗೆ ನಿಬ್ಬೆರಗಿನ ಮಹಾಶಾಂತ, ಸರಕಿಲಶಾಂತ, ಭದ್ರಕಾಳಿ ಶಾಂತ ಹಾಗೂ ಇದ್ದಲಿ ಶಾಂತೇಶರನ್ನು ದರ್ಶನ ಮಾಡಿಸಿದನು. ಈ ಮಹಾತ್ಮರನ್ನು ಕಾಣುತ್ತ 'ಎಲೈ ವೀರಣ್ಣನೇ, ವಾದಿಸಲು ಅಂಜುವೇನು. ಆದರೆ ಇವರಲ್ಲಿ ಒಬ್ಬರಿಗೆ 'ಇದ್ದಲಿ ಶಾಂತನೆಂಬ ಹೆಸರು ಸೂಕ್ತವೇ? ಎಂದು ಕೇಳಲು ವೀರಣ್ಣನು ಇದ್ದಲಿ ಪಾಪಿಯ ಕಣ್ಣಿಗೆ ಕಲ್ಮಷದಂತೆ ತೋರುತ್ತದೆ. ಆದರೆ ಅದನ್ನು ಇವರು ಒಲಿದಿತ್ತರೆ, ಅದು ಬಂಗಾರವಾಗುವದೆಂದು ನುಡಿಯಲು ದೊರೆ, ಇದ್ದಲಿ ಶಾಂತನಿಗೆ, 'ನಿಮ್ಮ ಪ್ರಸಾದವ ಒಲಿದೀವುದೆನ' ಇದ್ದಲಿಯ ತುಣುಕನ್ನು ಶಾಂತನಿತ್ತನು.

೨೭. ರುದ್ರಭೂಮಿ ಶಾಂತ

ವೀರಣ್ಣ ಮತ್ತು ಪ್ರೌಢದೇವರಾಯರಿಬ್ಬರು ರುದ್ರಭೂಮಿಯ ಶಾಂತನಲ್ಲಿಗೆ ಬರುವರು. ರುದ್ರ ಮೂರ್ತಿಗೆ ವಂದನೆಗಳನ್ನು ಸಲ್ಲಿಸಿ 'ನೀವು ಬದ್ಧಮಾಯಾ ಪ್ರಪಂಚವನ್ನು ಗೆದ್ದ ಮಹಾಂತರು' ನನಗೆ ಸನ್ಮುಕ್ತಿಯ ಮಾರ್ಗವನ್ನು ತೋರಿಸು ಎಂದು ಪ್ರೌಢದೇವರಾಯನು ಕೋರುವನು. ಆಗ ರುದ್ರಮೂರ್ತಿಯು ಇದ್ದಲಿಯ ಶಾಂತೇಶನೀಯನೇ ಮುಕ್ತಿ ಮತ್ತೆ ನಿಮಗೇತಕೆ, ಆಗ ದೊರೆಯು ಬರೆ ಇದ್ದಲಿಯ ನಿತ್ತನೆಂದು ಹೇಳಿದನು. ಅದಕ್ಕೆ ರುದ್ರಶಾಂತ 'ಅರಸನೇ ನೀತಿಯಿಂದ ತಿಳಿದುನೋಡು, ಅದು ಈಗೇನಾಗಿದೆ ಎಂದು ಹೇಳಲು ಕೈಯಲ್ಲಿ ಹಿಡಿದಿದ್ದ ಇದ್ದಲಿಯ ತುಂಡು ಆ ಕ್ಷಣವೇ ಬಂಗಾರದ ರೂಪಿನಿಂದ ಕಂಗೋಳಿಸಿತು. ನಿವೆಲ್ಲರೂ ಖ್ಯಾತ ಪುರುಷರೆಂದು ದೊರೆ ಹೊಗಳುತ್ತ ವೀರಣ್ಣೊಡೆಯನೊಡನೆ ಮುಂದೆ ನಡೆದನು. ಮುಂದೆ ವೀರಣ್ಣೊಡೆಯನು ಬಣ್ಣಗದ್ದುಗೆ ಶಾಂತ, ರುದ್ರಮೂರ್ತಿಶಾಂತ, ಹಾಗೂ ಖ್ಯಾತಿವೆತ್ತ 'ಬಯಲು ಶಾಂತ'ನೆಂದು ವೀರಣ್ಣೊಡೆಯ ಅವರನ್ನು ತೋರಿಸುವನು.

೨೮. ಬಯಲಶಾಂತ

ನೂರೊಂದು ವಿರಕ್ತರಲ್ಲಿ ಒಬ್ಬನಾದ ಬಯಲಶಾಂತನು ದೊರೆಯ ಕಣ್ಣಿಗೆ ಕಾಣುವನು. ದೊರೆಯು ವೀರಣ್ಣಯ್ಯನಿಗೆ ಇವನೆಂಥ ಬಯಲು ಶಾಂತ? ಗೋಚರನಾಗಿಯೂ ಅಗೋಚರನಾಗಿಹ ಪರಿಯನ್ನು ಭೇದಿಸಿ ತೋರಿಸಬೇಕೆಂದು ಭಿನ್ನವಿಸಿದನು. ಆಗ ವೀರಣ್ಣಯ್ಯ ಕೈಯಲ್ಲಿಯ ಖಡ್ಗದಿಂದ ಬಯಲಶಾಂತನನ್ನಿರಿಯಲು ಶಾಂತನು ಬಯಲ ರೂಪಾಗುವನು. ಮಹಾತ್ಮರು ಮಾತನಾಡಿದರೆ ಮಾಯವಾಗುವರು. ಇವರ ಸಿದ್ಧಿ ಅಪಾರವೆಂದು ದೊರೆ ಬೆರಗಾಗುವನು.

ಒಬ್ಬೊಬ್ಬರೂ ಜ್ಯೋತಿ ಸ್ವರೂಪರು. ಇವರನ್ನು ತೋರಿ ರಕ್ಷಿಸೆಂದು ವೀರಣ್ಣಯ್ಯನಿಗೆ ಪ್ರಾರ್ಥಿಸಲು ಮುಂದೆ, ಇಗೋ ಇವನು ಮಡಿವಾಳಶಾಂತ, ಈ ಹಿಡಿಗಡಲಿಯ ಶಾಂತ ಎಂದು ತೋರಿಸುವನು. ಇವನಿಗೆ ವಂದಿಸಿ ಮುಂದೆ ಶಿವಮೂರ್ತಿ ಮುನಿರಾದಿಶಾಂತ ಅವಿರಳದ

ಪಟಲಿನ ಶಾಂತ, ಕಾಳೀಶಾಂತೇಶ, ಭುವನ ಪಾವನ ಗುಂಡಶಾಂತನು, ದಿವಿಜ ಮೂರ್ತಿಯು ಚೆಂಡಿನಾಟದ ಪ್ರವಾರ ಶಾಂತನು, ಲಂಡರಾಹುತನೆಂಬ ಶಾಂತ ಎಂದು ಒಬ್ಬೊಬ್ಬರನ್ನು ತೋರಿಸಲು ಮುಂದೆ ಶಿಶುಗಳೊಡನೆ ಆಡುವ ಶಾಂತನನ್ನು ತೋರಿಸುವನು.

೨೯. ಶಿಶುಗಳೊಡನೆ ಆಟವಾಡುವ ಶಾಂತ

ವಿರಕ್ತರಲ್ಲೇ ಭಿನ್ನ ಸ್ವರೂಪದ ಈ ವಿರಕ್ತನಿಗೆ ಶಿಶುಗಳಲ್ಲಿ ಹಾಗೂ ಈತನಿಗೂ ಏನು ಸಂಬಂಧ ಎಂದು ವೀರಣ್ಣನಿಗೆ ಕೇಳುವನು. ದೊರೆಯೇ ಕೇಳು ಈ ಮಹಾತ್ಮನು ಅಸುವಳಿದ ಶಿಶುಗಳನ್ನು ವಸದು ಕೊಟ್ಟರೆ ಪಾಲಿಸುವ ಕರುಣದಲಿ ದಯಮಾಡಿ ಅಸಮಾಷನು ತಾ ಬಂದು ಕರೆದರೆ ಶಿಶುಗಳಿರುವರೇ ನಿಮ್ಮ ಲೋಕದಲಿ ಶಶಿಧರನೇ ಹೇಳೆಂದು ಕೇಳಿದನು. ಆಗ ಶಿವನು ನಮ್ಮ ಲೋಕದಲ್ಲಿ ಶಿಶುಗಳಿಲ್ಲ ಬ್ರಹ್ಮ ಮೊದಲಾಗಿರ್ದ ದಿವಿಜರು ನಮ್ಮ ಧ್ಯಾನದಿ ಜಪತಪಗಳನ್ನು ಮಾಡುವರು. ನಿಮ್ಮ ತರಹ ಬಾಲರಾಡಿವ ಬ್ರಹ್ಮ ಹುಚ್ಚರಿಲ್ಲ ಏನಲಿಕ್ಕೆ ನಿಮ್ಮ ಲೋಕವು ನಮ್ಮ ಮನಸ್ಸಿಗೆ ಬಾರದೆಂದನಲು ಈತ ನಿರ್ಮಲ ಜ್ಞಾನಿಯೆಂಬುದನ್ನು ವಿವರಿಸಿ ಮುನ್ನೆಡೆದರು.

೩೦. ಬಿಸಿನೀರಿನ ಶಾಂತ

ವೀರಣ್ಣಯ್ಯನು ಮುಂದೆ ಬಿಸಿನೀರಿನ ಶಾಂತನಿದ್ದಲಿಗೆ ಪ್ರೌಢದೇವರಾಯನನ್ನು ಕರೆದು ತರುತ್ತಾನೆ. ಇವನು ಅನ್ನೋದಕಗಳನ್ನು ತೊರೆದು ಲಿಂಗಧ್ಯಾನದ ಪರಮಾಮೃತವನ್ನುಂಡು ಸುಖಿಯಾಗಿರುವನು ಎನ್ನಲು ಬಿಸಿನೀರಿನ ಶಾಂತನು ಪ್ರೌಢದೇವನನ್ನು ಕಂಡು ನಿನಗೆ 'ಇಂದ್ರ ಪದವಿ ದೊರಕುವದೆಂದೂ ನಿನ್ನ ಭಕ್ತಿ ವರ್ಧಿಸಲೆಂದೂ ಹರಸಿ ಕಳಿಸುತ್ತಾನೆ.'

ಮುಂದೆ ವೀರಣ್ಣನು ಪ್ರೌಢದೇವನಿಗೆ ಹಲವು ಮಂದಿ ವಿರಕ್ತರ ಪರಿಚಯ ಮಾಡುವನು. ಚದುರಶಾಂತ, ಬೇಟೆಯಶಾಂತ, ಇವರ ಪಾದಕಮಲಗಳಿಗೆರಗಿ ಅವರಿಂದ ಆರ್ಶೀವಾದ ಪಡೆದು ಮುಂದೆ ಶಿವಮೂರ್ತಿಯ ಧೂಪದ ಶಾಂತ, ಸಣ್ಣ ಗೆಲಸದ ಸುವಿವೇಕಿಶಾಂತ, ಅವಿರಳಜ್ಞಾನಿ, ಎಣ್ಣೆ ಸವಿಯ ಮಜ್ಜನ ಮಾಳ್ವಶಾಂತ, ಇವರನ್ನು ಕಂಡು ಪ್ರಭುರಾಜೇಂದ್ರನು ಇನ್ನೂ ಆಸ್ಥಾನದ ಮೂಲೆ ಮೂಲೆಗಳಲ್ಲಿರುವ ದಿವ್ಯ ಪುರುಷರಾದ ಈ ವಿರಕ್ತರ ಪರಿಚಯ ಮಾಡಿಕೊಳ್ಳುವನು.

ಎಲೇ ರಾಜೇಂದ್ರನೇ ನೋಡು ತೋರಿಸುವೆನು ಸತಿ ವಿಭೂತಿಯ ಶಾಂತನೀತನು, ಬಲು ಮಹಾತ್ಮನಾದ ವಸುಗೆಲಸದ ಶಾಂತನೀತ, ಜಂಗಮಾರ್ಚನೆಗೆ ಹೆಸರಾದ ಶಾಂತ, ಜೂಜಿನ ಶಾಂತ, ಹೀಗೆ ಪ್ರತಿಯೊಬ್ಬ ಶಾಂತರ ಹವ್ಯಾಸವನ್ನು ನೋಡುತ್ತಾ ಹಾಸ್ಯ ಮಾಡುತ್ತ ವಂದಿಸುತ ಮುನ್ನಡೆದರು.

ಮುಂದೆ ಹೋದಂತೆ ಶಿವಶರಣರಾದ ಕಿನ್ನರಿಶಾಂತ, ಮರುಳನಂತೆ ನಟಿಸಿದರು ಶರಣ ತತ್ವ ತಿಳಿದ ಶಾಂತ, ಹೊನ್ನ ಜೂಜಿನ ಗೆರಿದಾಡುವ ಶಾಂತನು, ಎಚ್ಚರನೀಯುವ ಶಾಂತ, ವುಗ್ಗದಾಶಾಂತನೂ, ಚೆಂದದ ಗಿರಿಗಟ್ಟಿಯ ಶಾಂತೇಶ, ಸೌಂದರ್ಯ ಕಸ್ತೂರಿ ತಿಲಕದ ಶಾಂತನು, ಇಂದ್ರಜಾಲದ ಶಾಂತ, ಗಿಂಡಿಯ ಶಾಂತ, ಚೆಂಡಿನಾಟದ ಶಾಂತ, ಬೊಬ್ಬೆಯ ಮಾಡುವ ಶಾಂತ, ಚಂಡ ವಿಕ್ರಮಶಾಂತನೆನಿಸುವ ವೆಂಕಿಶಾಂತ, ತೃಣದ ಶಾಂತನು, ನಾಟ್ಯಶಾಂತ, ಪ್ರಣಮ ಮೂರ್ತಿ, ಮಹೇಂದ್ರ ಜಾಲದ ಗುಣದ ಶಾಂತ, ಮುಂದಿನ ಆಗಮಗಳನ್ನೆಲ್ಲ ಅರಿತ ಕವಿಶಾಂತ, ಗುಣಭರಿತ ಗಂಗೇಯ ಶಾಂತನು, ತ್ರಿಣಯರೂಪದ ಓಟದ ಶಾಂತ, ಅಣುಗ ಗರ್ಭದಿ ಇರಲು ಹೆಸರು ವಿಟನುಶಾಂತ. ಬೆಟ್ಟದಾ ಮೇಲಿರ್ಪ ಶಾಂತ, ಪುಟ್ಟಗೋಲಿನ ಶಾಂತ, ಮೂರುತಿ ನಿಷ್ಠೆ ನಿಜ ನೇಮದ ಶಾಂತ, ಶರಭ ಶಾಂತೇಶ, ಮಿಟ್ಟುಗ್ರದ ಉಗ್ಗಡಿಪ ಶಾಂತ. ಅಟ್ಟಿಹೋಯಿ ವಡಮಾಮಿ ಶಾಂತನು. ಕಟ್ಟುನಾಯಕ ಶಾಂತ, ಮರ ವಿಕ್ರೈಪ ಶಾಂತೇಶ, ನಿರುತ ಮಹಿಮನು ಚೌಕ ಶಾಂತನು, ಮೆರೆವ ಬೊಗರಿಯ ಶಾಂತಲಿಂಗನು, ಉರುತರದ ಶರುಪ ಶಾಂತನು, ಸ್ವಸ್ಥಿರ ಸಮಾಧಿಯಲ್ಲಿ ಇರುವ ಶಾಂತನು, ಸುಲಭ ಸೂಜಿಯ ಪರಮ ಶಾಂತನು, ಒಕ್ಕಲಿಗ ಗುರು ಶಾಂತನು, ಕೆಲಸಿ ಶಾಂತನು, ಶಂಕರನಾ ಒಲುಮೆ ಶಾಂತನು, ನಿಂಬಿಶಾಂತನು, ಜಲ ಶಿಲಂಗಳ ಮಾರುತೊಪ್ಪಿಹ ಚೆಲುವ ಶಾಂತೇಶಾ, ಶಿಥಿಲ ಸಾಧನೆಯ ಶಾಂತನು, ಕಲುಷರಹಿತನು ವಡ್ಡೆ ಶಾಂತನು, ಮಲಹರನ ಭಕ್ತಿಯೊಳು ಬೆರದ ನಿರವಂಚನೆಯ ಶಾಂತೇಶಾ.

ಪಂಚಾಂಗವಿಡಿದೋದುವ ಶಾಂತನು, ನಿಶ್ಚಂತಿ ಸುಲದ ಶಾಂತಲಿಂಗನು, ಕಂಚಿನಾದ್ರಿಯ ಶಾಂತರತ್ನದ ಶಾಂತನೆಂದೆನಿಪಾ ಪಂಚಾಕ್ಷರಿ ಮಂತ್ರದ ಮಹತ್ವವ ಪಂಚಬ್ರಹ್ಮವ ಕಲೆಯ ಬೆಳಗಿನ ಸಂಚಿತವನರಿದಾಡುತೀರ್ಪರು ಲಿಂಗಲೀಲೆಯಲಿ. ಕೊಲಲಶಾಂತ, ಕಟಿಯ ರೋಮದ ಶಾಂತ, ಬಾಲಗಾಸೆಯ ಶಾಂತ, ಮಾರುತಿ ಹಾಲಶಾಂತನೆಂಬ ಶರಣರನ್ನು ನೋಡಿ ವಂದಿಸುತ ಘನಮಹಿಮ ವಿರಕ್ತರ ಮೂಲವನ್ನು ವಿವರಿಸಲು ಈ ಬಯಲಾಗುತ್ತಿರುವ ಶೀಲವ್ರತಿಗಳ ಕರುಣ ಪಡೆಯಬೇಕು ಎಂದು ಪ್ರೌಢೇಂದ್ರ ವೀರಣ್ಣಯ್ಯನಿಗೆ ತಿಳಿಸುವನು.

ಹೀಗೆ ವೀರಣ್ಣಯ್ಯನೊಂದಿಗೆ ಅವನು ತೋರಿಸಿದ ಪಟ್ಟಣದ ಎಲ್ಲ ವಿರಕ್ತರಿಗೆ ಶರಣರ ಚಾರಿತ್ರ್ಯವನ್ನು ಕೇಳಿ, ನೋಡುತ ವಂದಿಸುತ ದಾರಿಯಲ್ಲಿ ಬರುತ್ತಿರುವಾಗ ಮತ್ತೊಬ್ಬ ವಿರಕ್ತನು ವೀರಮಹೇಶ್ವರನು ಗಾಣವನ್ನೇರಿ ಹೊಡೆಯುತ್ತಿರುವುದನ್ನು ಪ್ರಭುವಡೆಯ ನೋಡಿದನು.

೩೧. ಗಾಣಶಾಂತ

ಮತ್ತೊಬ್ಬ ವಿರಕ್ತ ಮಹಾತ್ಮನು ಗಾಣವನ್ನೇರಿ ಹೊಡೆಯುತ್ತಿರುವುದನ್ನು ಪ್ರೌಢೇಂದ್ರನು ಕಂಡು ಇವನಾರೆಂದು ಕೇಳಲು ವೀರಣ್ಣಯ್ಯನು 'ಗಾಣಶಾಂತ' ಎನ್ನಲು ಕುಲದಲ್ಲಿ ಗಾಣಕುಲ

ಕೀಳೆಂಬುದು, ಇದು ಜಂಗಮಕ್ಕೆ ಹೊರತಾದ ನಡತೆಯಲ್ಲವೆ? ಎಂದು ದೊರೆ ಅವನನ್ನು ಕೇಳುವನು. ಆಗ ಗಾಣಶಾಂತನು, ಎಲೈ ರಾಜೇಂದ್ರನೇ ಶರಣ ಜನರ ಕುಲಗೋತ್ರವನ್ನು ಕೇಳುವರೇ? ನೀನು ಗಾಣಕುಲ ಕೀಳುಕುಲವೆಂದು ಹೇಳಿದೆ. ಸಾಕ್ಷಾತ್ ಪರಶಿವನೇ ಆದಿಗೊಂಡನ ದಾರಿದ್ರ್ಯವನ್ನು ಹೋಗಲಾಡಿಸಲು ಅವನ ಬಳಿಗೆ ಬಂದು ತುಂಬಿದ ಕರಿಕೆ ಹೊಲವನ್ನು ಹಸನು ಮಾಡಲಿಲ್ಲವೇ? ಕಲಸೆಟ್ಟಿ ಎಂಬ ಬಡಗಾಣಿಗ ಕಲ್ಯಾಣದಲ್ಲಿ ಎತ್ತಿಲ್ಲದೇ ಇದ್ದಾಗ ವೇಷ ಮರೆಸಿಕೊಂಡು ಬಂದು ಅವನ ಎತ್ತನ್ನು ರಕ್ಷಿಸಿ ತಾನೆ ನಿಂತು ಗಾಣ ಹೊಡೆಯಲಿಲ್ಲವೇ? ಶಿವನಿಗೆ ಕುಲವಿಲ್ಲ, ಮಲಹರನು ಒಂದೊಂದು ರೂಪದಲ್ಲಿ ನಿಂತು ನಟಿಸುವನು. ನನ್ನ ಕಾಯಕ ಗಾಣದ ಕಾಯಕವಾಗಿದ್ದ ಮಾತ್ರಕ್ಕೆ ನನ್ನ ಆಚಾರಕ್ಕೆ ಭಂಗವೇ ಎನ್ನಲು ದೊರೆಯು ಅವನಿಗೆ ವಂದಿಸಿ ಮುಂದೆ ನಡೆಸಿದರು.

೩೨. ಬಾಣಬತ್ತಿ ಶಾಂತ

ಗಾಣದ ಶಾಂತನನ್ನು ಕಂಡು ಅವನಿಂದ ಕೆಲವೊಂದು ಮಹತ್ತರವಾದ ವಿಷಯವನ್ನು ತಿಳಿದು ಅವನಿಗೆ ವಂದಿಸಿ ಮುಂದೆ ಬಾಣಬತ್ತಿಶಾಂತನಿದ್ದಲ್ಲಿಗೆ ಬಂದು ಅವನನ್ನು ನಮಸ್ಕರಿಸುವರು. ಅರಸನು ಬಾಣಶಾಂತನನ್ನು ಕಂಡು 'ಕೈಯಲ್ಲಿ ಬಾಣಗಳನ್ನು ಹಿಡಿದ ನೀವು ಹೇಗೆ ಬಾಣ ಬೀಡುತ್ತೀರಿ? ನೋಡೋಣವೆನ್ನಲು, 'ನಾನು ಬಾಣ ಬಿಟ್ಟರೆ ನನ್ನ ಪ್ರಾಣವು ಬಯಲಾಗುವದು' ಎಂದನು. ಅದು ಹೇಗೆ ಸಾಧ್ಯವೆಂದು ದೊರೆ ಆಶ್ಚರ್ಯ ಪಡಲು 'ನಿನ್ನ ಬಾಣ ಪ್ರಯೋಗದ ಜಾಣ್ಮೆಯನ್ನು ನೋಡುವೆನೆಂದು ಹೇಳಲು ಶಾಂತನು ಹಿಡಿದಿದ್ದ ಬಾಣವನ್ನು ಬಿಲ್ಲಿಗೇರಿಸಿ ಬಿಡಲು ಅದರೊಡನೆಯೇ ಖೇಚರ ಮಾರ್ಗದಲ್ಲಿ ನಡೆದು ಬಯಲಾಗುವನು.

ಇಂಥ ಮಹಾಮಹಿಮ ಪುರುಷರ ದಿವ್ಯಲೀಲೆಯನ್ನು ತಿಳಿಯದೇ ಅಣಕವಾಡಿದೆನೆಂದು ದೊರೆ ಚಿಂತಾಕ್ರಾಂತನಾಗಿ ವೀರಣ್ಣಯ್ಯನನ್ನು ಕುರಿತು, 'ಗುಣಭರಿತ ವೀರಣ್ಣನೇ, ಇನ್ನೂ ಮಹಾತ್ಮರ ನೆಲೆಯನರಿವ ಬುದ್ಧಿ ಸಾಕು ನನಗೆ ಶಿವಪಾದ ಸನ್ನಿಧಿಯ ದಾರಿ ತೋರೆಂದು' ಪ್ರಾರ್ಥಿಸಿದನು.

ಎಲೇ ಪ್ರೌಢೇಂದ್ರನೇ ಹಿಂದೆ ಕೈಲಾಸದಲ್ಲಿ ಗಣವರರನ್ನು ನಿಂದಿಸಿ ನುಡಿದುದಕ್ಕೆ ನೀನು ಈ ಮರ್ತ್ಯಕ್ಕೆ ಬಂದೆ. ಅವರು ಅವತರಿಸಿ ನಿನಗೆ ಒಂದೊಂದೆ ಲೀಲೆಯನ್ನು ತೋರಿ ಬಯಲಾದರು. ಶಿವಭಕ್ತರ, ಜಂಗಮ ಮೂರ್ತಿಗಳ ನಡೆ ನುಡಿಗಳನ್ನು, ಕಾಯಾ, ವಾಚಾ ಪಾಲಿಸುತ್ತಾ ಶಿವಭಕ್ತಿಯನ್ನು ಅರಿದು ಆಚರಿಸಿದರೆ ನಿನಗೆ ನಾಗೇಶನು ಇಂದ್ರ ಪದವಿಯನ್ನಿತ್ತು ಸಲುಹುವನೆಂದು ವೀರಣ್ಣನೂ ಹೇಳುವನು. ಆಗ ಪ್ರೌಢೇಂದ್ರನು "ನೂರೊಂದು ವಿರಕ್ತರೆಲ್ಲಾರು ತಮ್ಮ ಲೀಲೆ ನಟಿಸಿ ಬಯಲಾದರು. ಅವರನ್ನು ತೋರಿದ ನೀವು ಕಾರಣ ಪುರುಷರು, ನೀವು

ನನ್ನ ಬಳಿ ಇರುವಿರೋ, ಹೋಗುವಿರೋ?" ಎಂದು ಕೇಳಲು ವೀರಣ್ಣನು, ಕಾರಣ ಮೂರ್ತಿಯು ನಾಗೇಶನು ಕರೆದರೆ ನಾನು ಹೋಗುವೆನು ಎಂದು ಹೇಳಿದನು. ಅದೇ ಪ್ರಕಾರವಾಗಿ ಮುಂದೆ ಒಂದು ದಿನ ವೀರಣ್ಣಯ್ಯನು "ನನಗಿಂದು ನಾಗೇಶನ ಆಜ್ಞೆಯಾಯಿತು. ನನ್ನ ಲಿಂಗಪೂಜೆಗೆ ಅಣಿಮಾಡೆಂದು ಸತಿಗೆ ಹೇಳಿ ಸ್ನಾನ, ಲಿಂಗಪೂಜೆಯಲ್ಲಿ ನಿರತನಾದನು.

ಶಿವಯೋಗದ ಸಂಧಾನವನ್ನು ತಿಳಿದ ವೀರಣ್ಣದೇವ ಆ ಅವಿರಳ ಜ್ಞಾನ ಜ್ಯೋತಿಯ ಮಹಾ ಬೆಳಕಿನಲ್ಲಿ ಕರಸ್ಥಲದ ನಾಗೇಶನಲ್ಲಿ ಒಂದಾಗಿ ನಿರ್ವಯಲನ್ನಪ್ಪಿದನು. ವೀರಣ್ಣದೇವ ಲಿಂಗೈಕ್ಯನಾಗಿರಲು ಆತನ ಸತಿ ದುಃಖದಿಂದ ಬಳಲುವಳು. ಆಗ ಕರಸ್ಥಲದ ನಾಗಿದೇವ ಅವಳ ಕನಸಿನಲ್ಲಿ ಬಂದು "ಏತಕೆ ಮರುಗುತಿರುವೆ? ಶರಣರು ಸಕಲೇಂದ್ರಿಯಗಳನ್ನು ಲಿಂಗಕ್ಕರ್ಪಿಸಿ ಹೋದರು. ಅವರ ಅಂಗಸಂಗಕ್ಕಾಗಿ ಅಳಬೇಡ. ಲಿಂಗಭಾವದಿಂದ ನಡೆ, ಪ್ರೌಢೇಂದ್ರನೊಡಗೂಡಿ ನೀನು ಬರುವುದೆಂದು" ಸಂತೈಸಿ ಹೋಗುವನು. ಪ್ರೌಢೇಂದ್ರನು ವೀರಣ್ಣಯ್ಯನು ಶಿವಲೋಕಕ್ಕೆ ಹೋಗಲು ಮಗಳನ್ನು ಕರೆಯಿಸಿ ಅವನೇದಾರೂ ನಿನಗೆ ಸಂಜ್ಞೆಯನ್ನು ಹೇಳಿದನೇ? ಎಂದು ಕೇಳಲು ಯಾವುದನ್ನು ನನಗೆ ಹೇಳಿಲಿಲ್ಲವೆಂದು ತಿಳಿಸಿ ಕನಸಿನಲ್ಲಿ ನಾಗೇಶನು ಬಂದು ತಿಳಿಸಿದ ಸಂಗತಿಯನ್ನು ಹೇಳುವಳು.

ಪ್ರೌಢದೇವನು ಮಹಾ ವಿರಕ್ತ ಮೂರ್ತಿಗಳನ್ನು ತೋರಿದ ಮಹಿಮ ವೀರಣ್ಣನನ್ನು ಕಳೆದುಕೊಂಡು ಮರುಗುವನು. "ಹರಹರ! ಶಿವಶರಣರ ಪರಿಯನ್ನರಿಯದೆ ಗರ್ವದಿಂದ ಅವರನ್ನು ನುಡಿಸಿ ಅವರ ಮನನೋಯಿಸಿದೆ. ಅವರು ಪರಮ ಪುರುಷರು. ಅವರ ಕಾರುಣ್ಯ ಇನ್ನೆಂತು ದೊರಕುವದೆಂದು" ಹಲುಬುವನು. ಶಿವಭಕ್ತಿಗೆ ಸಮಾನವಾದುದು ಇನ್ನೊಂದಿಲ್ಲವೆಂದು ಶಿವಪೂಜೆ, ಶಿವಕಥೆ, ಶಿವಧ್ಯಾನದಲ್ಲಿ ಹೊತ್ತುಗಳೆದನು. ಅನೇಕ ಕಡೆ ಶಿವಲಿಂಗ ಸ್ಥಾಪನೆ ಹಾಗೂ ಶಿವಲಿಂಗಾಲಯ, ಗ್ರಹ, ಮಂಟಪ, ಶಿವಭಕ್ತರಿಗೆ ಕ್ಷೇತ್ರಗಳನ್ನು ನಿರ್ಮಿಸಲು ಆಜ್ಞೆ ಮಾಡುವನು.

ಶಿವನ ಧ್ಯಾನದಿಂದ ದಿನಕಳೆಯುತ್ತಿದ್ದ ಅರಸನಿಗೆ ಮರ್ತ್ಯಲೋಕದ ಮಣಿಹ ತೀರಿತೆನ್ನಲು ಅದೇ ದಿನ ಧಾತು ಪಲ್ಲಟವಾಗಿ ಮೈಯಲ್ಲಿ ಜ್ವರ ಕಾಣಿಸುತ್ತದೆ. ನಾಗಲಿಂಗ ಬಂದು ಕಾರುಣ್ಯದಿಂದ ಪ್ರಣಿತನಾಗಿ 'ನಿಮ್ಮನ್ನು ಕಂಡು ಧನ್ಯನಾದೆ ನಡೆ ಸ್ವಾಮಿ' ಎಂದು ಪ್ರಾಣ ಬಿಡುವನು.

"ಪ್ರಭುಡರಾಜನು ಅವರ ಕರುಣದಿ
ದಿವಿಜಲೋಕವ ಸಾರಿ ಸುಖದಲಿ
ಶಿವನ ಆಜ್ಞೆಯ ಪಿಡಿದು ಇಂದ್ರನ ಪದವ ಭೋಗಿಸುತ

ಅವನು ಸುಖದಲಿ ಇರ್ದನಿತ್ತಲು
ಭುವನದೊಳು ಕ್ರಿಯೆ ಕ್ರಮದಿಂದಲಿ
ಅವನ ದೇಹವ ದಹನ ಮಾಡಿದರಿದ್ದ ಸತಿಸುತರು.
ಆ ಮಹಾ ನೂರೊಂದ್ವಿರಕ್ತರು
ಸ್ವಾಮಿ ಬೆಸನದಿ ಧರೆಗೆ ಬರುತಲಿ
ಕಾಮಹರನಾ ಮಹಿಮಾ ಪದವನು ತೋರಿ ಪ್ರಭುಡನಿಗೆ
ಕಾಮಿತಾರ್ಥವನ್ನಿತ್ತು ಭಕ್ತರ
ಸ್ತೋಮವನು ಪಾವನವ ಮಾಡಿದ
ಆ ಮಹಾ ವೀರಕ್ತ ಪಾದಕೆ ಶರಣು ಶರಣಾರ್ಥಿ"[೪೧]

ಈ ನೂರೊಂದು ವಿರಕ್ತರ ಘನ ಚರಿತ್ರೆಯನ್ನು ಹೇಳಿದ ಕವಿವರನಾದ ಮೋದಿರುದ್ರ ಕವೀಶ್ವರನು ಸಾರಸದಿಂದ ಹೇಳಿದ ಕಥೆಯನ್ನು ವೀರ ಮಹೇಶ್ವರನ ಭಕ್ತರು ಆಲಿಸಿದರೆ ಧರೆಯಲ್ಲಿ ಅವರಿಗೆ ಭಕ್ತಿಯ ಮುಕ್ತಿ ದೊರೆಯುವುದು.

ಇಲ್ಲಿಗೆ ಕಾವ್ಯಕ್ಕೆ ಮಂಗಳ ಹಾಡುತ್ತ ಕವಿ ಮೋದಿಯ ರುದ್ರನು ಏಕದಶ, ರುದ್ರಗಣ, ವೀರಗಣ, ಪ್ರಮಥಗಣ, ಮಂಗಳವಾಡ ಮಹಾಗಣ, ಬಸವಗಣ, ಪೂರ್ವ ಪುರಾತನಗಣ, ಸ್ತೋಮ ಗಣದೊಡನೆ ನೂರೊಂದು ಗಣವರರ ಚರಿತ್ರೆಯನ್ನು ಸೇರಿಸಿ ಕೃತಾರ್ಥನಾಗುವನು.

ಅಡಿ ಟಿಪ್ಪಣಿಗಳು

೧. ಮೋದಿರುದ್ರ ವಿರಚಿತ ವಿರಕ್ತರ ಕಾವ್ಯ - (ಸಂ) ಡಾ. ನಗುವನಹಳ್ಳಿ ಪಿ. ರತ್ನ, ಸಂಧಿ-೬, ಪದ್ಯ-೧೪೧, ಪು-೧೭೨.

೨. ಅದೇ ಸಂಧಿ-೬, ಪದ್ಯ-೩, ಪುಟ-೧೪೧

೩. ಅದೇ ಸಂಧಿ-೧, ಪದ್ಯ-೨೩, ಪುಟ-೮

೪. ಅದೇ ಸಂಧಿ-೩, ಪದ್ಯ-೨೪, ಪುಟ-೫೬

೫ ಅದೇ ಸಂಧಿ-೩, ಪದ್ಯ-೨೫, ಪುಟ-೫೬

೬ ಅದೇ ಸಂಧಿ-೩, ಪದ್ಯ-೩೪, ಪುಟ-೫೮

೭ ಅದೇ ಸಂಧಿ-೩, ಪದ್ಯ-೩೯, ಪುಟ-೫೯

೮. ಅದೇ ಸಂಧಿ-೩, ಪದ್ಯ-೫೬, ಪುಟ-೬೩

೯. ಅದೇ ಸಂಧಿ-೩, ಪದ್ಯ-೬೪, ಪುಟ-೬೫

೧೦. ಅದೇ ಸಂಧಿ-೩, ಪದ್ಯ-೬೭, ಪುಟ-೬೫

೧೧. ಅದೇ ಸಂಧಿ-೩, ಪದ್ಯ-೬೯, ಪುಟ-೬೬

೧೨. ಅದೇ ಸಂಧಿ-೩, ಪದ್ಯ-೯೩, ಪುಟ-೭೧

೧೩. ಅದೇ ಸಂಧಿ-೩, ಪದ್ಯ-೯೦, ಪುಟ-೭೧

೧೪. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ- ಡಾ. ಶಿವಾನಂದ ವಿರಕ್ತಮಠ, ಪು-೧೨೬

೧೫. ಮೋದಿರುದ್ರ ವಿರಚಿತ ವಿರಕ್ತರ ಕಾವ್ಯ - (ಸಂ) ಡಾ. ನಗುವನಹಳ್ಳಿ ಪಿ. ರತ್ನ, ಸಂಧಿ-೪, ಪದ್ಯ-೬, ಪು-೭೯

೧೬. ಅದೇ ಸಂಧಿ-೪, ಪದ್ಯ-೧೩, ಪು-೮೧

೧೭. ಅದೇ ಸಂಧಿ-೪, ಪದ್ಯ-೧೭, ಪು-೮೧

೧೮. ಅದೇ ಸಂಧಿ-೪, ಪದ್ಯ-೨೦, ಪು-೮೨

೧೯. ಅದೇ ಸಂಧಿ-೪, ಪದ್ಯ-೨೮, ಪು-೮೪

೨೦. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ - ಡಾ.ಶಿವಾನಂದ ವಿರಕ್ತಮಠ, ಪುಟ-೧೦೮.

೨೧. ಕರ್ನಾಟಕದ ಸೂಫಿಗಳು - ಡಾ. ರಹಮತ್ ತರೀಕೆರೆ, ಪುಟ-೭೯.

೨೨. ಮೋದಿರುದ್ರ ವಿರಚಿತ ವಿರಕ್ತರ ಕಾವ್ಯ - (ಸಂ) ಡಾ. ನಗುವನಹಳ್ಳಿ ಪಿ ರತ್ನ, ಸಂಧಿ-೪, ಪದ್ಯ-೩೨, ಪುಟ-೮೫.

೨೩. ಅದೇ, ಸಂಧಿ-೪, ಪದ್ಯ-೫೧, ಪುಟ-೮೯

೨೪. ಅದೇ, ಸಂಧಿ-೪, ಪದ್ಯ-೪೯, ಪುಟ-೮೯

೨೫. ಅದೇ, ಸಂಧಿ-೪, ಪದ್ಯ-೬೧, ಪುಟ-೯೧

೨೬. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ - ಡಾ.ಶಿವಾನಂದ ವಿರಕ್ತಮಠ, ಪುಟ-೧೭೨.

೨೭. ಮೋದಿರುದ್ರ ವಿರಚಿತ ವಿರಕ್ತರ ಕಾವ್ಯ - (ಸಂ) ಡಾ.ನಗುವನಹಳ್ಳಿ ಪಿ ರತ್ನ, ಸಂಧಿ-೪, ಪದ್ಯ-೭೫, ಪುಟ-೯೪-೯೫.

೨೮. ಅದೇ, ಸಂಧಿ-೪, ಪದ್ಯ-೮೪, ಪುಟ-೯೭

೨೯. ಅದೇ, ಸಂಧಿ-೪, ಪದ್ಯ-೮೯, ಪುಟ-೯೮

೩೦. ಅದೇ, ಸಂಧಿ-೪, ಪದ್ಯ-೯೪, ಪುಟ-೯೯

೩೧. ಅದೇ, ಸಂಧಿ-೪, ಪದ್ಯ-೯೮, ಪುಟ-೧೦೦

೩೨. ಅದೇ, ಸಂಧಿ-೫, ಪದ್ಯ-೧೦, ಪುಟ-೧೧೨

೩೩. ಅದೇ, ಸಂಧಿ-೫, ಪದ್ಯ-೧೨, ಪುಟ-೧೧೩

೩೪. ಅದೇ, ಸಂಧಿ-೫, ಪದ್ಯ-೨೦. ೨೧, ಪುಟ-೧೧೫

೩೫. ಅದೇ, ಸಂಧಿ-೫, ಪದ್ಯ-೧೧, ಪುಟ-೧೩೪

೩೬. ಅದೇ, ಸಂಧಿ-೫, ಪದ್ಯ-೩೮, ಪುಟ-೧೧೮

೩೭. ಅದೇ, ಸಂಧಿ-೫, ಪದ್ಯ-೪೦, ಪುಟ-೧೧೯

೩೮. ಅದೇ, ಸಂಧಿ-೫, ಪದ್ಯ-೪೪, ಪುಟ-೧೨೦

೩೯. ಅದೇ, ಸಂಧಿ-೬ ಪದ್ಯ-೪, ಪುಟ-೧೪೨

೪೦. ಅದೇ, ಸಂಧಿ-೬, ಪದ್ಯ-೨೭, ಪುಟ-೧೪೭

೪೧. ಅದೇ, ಸಂಧಿ-೬, ಪದ್ಯ-೧೨೬-೧೨೭, ಪುಟ-೧೭೧.

ಅಧ್ಯಾಯ : ನಾಲ್ಕು

ನೂರೊಂದು ವಿರಕ್ತರು : ಆಧುನಿಕರ ಚಿಂತನಕ್ರಮ

ಅಧ್ಯಾಯ : ನಾಲ್ಕು

ನೂರೊಂದು ವಿರಕ್ತರು : ಆಧುನಿಕರ ಚಿಂತನಕ್ರಮ

ವಿಜಯನಗರ ಸಾಮ್ರಾಜ್ಯದಲ್ಲಿ ತಮ್ಮ ಅಪಾರ ಪವಾಡ ಶಕ್ತಿಯಿಂದ ಮೆರೆದು ಜನಸಾಮಾನ್ಯರನ್ನು ಹಾಗೂ ರಾಜಾಧಿಕಾರಿಗಳನ್ನು ಬೆರುಗುಗೊಳಿಸಿದ ಈ ನೂರೊಂದು ವಿರಕ್ತರು, ಅಂದಿನಿಂದ ಇಂದಿನವರೆಗೂ ಸದ್ದುಗದ್ದಲವಿಲ್ಲದೆ ಎಲೆಯ ಮರೆಯ ಕಾಯಿಯ ಹಾಗೆ ಅಲ್ಲೋ ಇಲ್ಲೋ ಸಾಹಿತ್ಯ ಕೃತಿಗಳಲ್ಲಿ ಕಂಡುಬರುವರಾಗಿರುವರು. ಮಧ್ಯಕಾಲೀನ ಸಂದರ್ಭದಲ್ಲಿ ಅಳಿವಿನ ಅಂಚಿನಲ್ಲಿದ್ದ ವೀರಶೈವ ಧರ್ಮದ ಪುನರ್ ಸ್ಥಾಪಕರೆಂಬ ಗಟ್ಟಿಯಾದ ಪಟ್ಟ ಇವರ ಮೇಲಿದೆ. ಅಲ್ಲದೆ ಹಿಂದೆ ಪೌರಾಣಿಕದ ಹಿನ್ನೆಲೆಯಲ್ಲಿ ರಚನೆಯಾದ ಸಾಹಿತ್ಯ ಕೃತಿಯಲ್ಲಿರುವ ಅಂಶಗಳನ್ನೇ ಇಟ್ಟುಕೊಂಡು ನಂತರ ಬಂದ ಸಾಹಿತಿ ಹಾಗೂ ಕೆಲವು ವಿದ್ವಾಂಸರು ಸಾಗುತ್ತಾ ಬಂದಿದ್ದಾರೆ. ಆದರೆ ಇವರ ಬಗ್ಗೆ ಭಿನ್ನವಾದ ದೃಷ್ಟಿಕೋನದ ಅಡಿಯಲ್ಲಿ ಹಾಗೂ ವೈಚಾರಿಕವಾದ ನೆಲೆಗಟ್ಟಿನ ಮೇಲೆ ಹೆಚ್ಚು ಅಧ್ಯಯನ ನಡೆದಿಲ್ಲ. ಇವರ ಬಗೆಗೆ ಡಾ.ಶಿವಾನಂದ ವಿರಕ್ತಮಠ ಅವರು ತಮ್ಮ ಸಂಶೋಧನಾ ಕೃತಿಯಲ್ಲಿ ಅಲ್ಪ ಸ್ವಲ್ಪ ಮಾಹಿತಿ ನೀಡಿದ್ದಾರೆ. ಆದರೆ ಪರಿಪೂರ್ಣವಾದ ಅಧ್ಯಯನ ಎಲ್ಲೂ ನಡೆದಿಲ್ಲ. ಹೀಗಾಗಿ ಹಂಪೆ ಪರಿಸರವನ್ನು ಕುರಿತು ಅಧ್ಯಯನ ಮಾಡುವ ವಿದ್ವಾಂಸರು ಏನೆಲ್ಲಾ ವಿಷಯಗಳ ಚರ್ಚೆ ನಡೆಸಿದರೂ ಈ ವಿರಕ್ತರನ್ನು ಕುರಿತು ಮಾತಾಡುವಾಗ ಇವರನ್ನು ಎಲ್ಲೋ ಒಂದು ರೀತಿಯಲ್ಲಿ ತೇಲಿಸಿ ಬಿಡುವ ಹಾಗೆ ಕಂಡುಬರುತ್ತಾರೆ.

ಇದುವರೆಗೆ ಬಂದ ಅಧ್ಯಯನಗಳಲ್ಲಿ ಈ ವಿರಕ್ತರು ವೀರಶೈವರೆಂದು ಬಿಂಬಿಸಲಾಗಿದೆ. ಆದರೆ ಇವರ ಕೆಲವೊಂದು ಲಕ್ಷಣಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಇವರು ಅವಧೂತ

ಪಂಥದಂತೆ ಇವರದೆ ಆದ 'ಶಾಂತ ಪರಂಪರೆ' ಅಂದು ಸೃಷ್ಟಿಕೊಂಡಿರಬೇಕು. ಹೀಗಾಗಿ ಈ ವಿರಕ್ತರನ್ನು ಕುರಿತು ಡಾ.ಆರ್.ಸಿ. ಹಿರೇಮಠರವರು ತನ್ನ ಷಟಸ್ಥಲಪ್ರಭೆಯಲ್ಲಿ ಹಾಗೂ ಡಾ. ಎಂ.ಎಂ.ಕಲಬುರ್ಗಿಯವರು ತಮ್ಮ ಮಾರ್ಗ ಸಂಪುಟದಲ್ಲಿ ಇವರ ನೆಲೆ, ಲಕ್ಷಣ ಹಾಗೂ ಸಂಪ್ರದಾಯ ಬಗೆಗೆ ಸುಳಿವು ನೀಡಿದ್ದಾರೆ.

ಗಜಬೇಂಟೆಕಾರನೆಂದು ಪ್ರಸಿದ್ಧಿ ಪಡೆದ ಪ್ರೌಢದೇವರಾಯನ ಕಾಲದ ಪರಿಸರದಲ್ಲಿ ಬದುಕಿದ ನೂರೊಂದು ವಿರಕ್ತರ ವಿಚಾರವಾಗಿ ಯಾವ ಶಾಸನಗಳಲ್ಲೂ ಸ್ವಲ್ಪಾದರೂ ಉಲ್ಲೇಖ ದೊರೆಯಲಾರದು. ಆದರೆ ಕೆಲವೊಂದು ಶಾಸನಗಳಲ್ಲಿ 'ವೀರಣ್ಣಯ್ಯ', 'ವಿರುಪಣ್ಣೊಡೆಯ', 'ವೀರಣ್ಣೊಡೆಯ'ನೆಂದು ಉಲ್ಲೇಖ ಬರುತ್ತದೆ. ಇವನು ಕರಸ್ಥಲದ ವೀರಣ್ಣೊಡೆಯನಾಗಿರಲಿಕ್ಕೆ ಸಾಧ್ಯತೆಯಿದೆ. ಡಾ. ದೇವರಕೊಂಡರೆಡ್ಡಿ ಸಂಪಾದಿಸಿದ 'ಹಂಪಿ ಶಾಸನಗಳಲ್ಲಿ' ವೀರಣ್ಣೊಡೆಯನ ಕುರಿತಾಗಿ ಮಾಹಿತಿ ದೊರೆಯುತ್ತದೆ. ಇಲ್ಲಿ ಕರಸ್ಥಲ ವೀರಣ್ಣೊಡೆಯನನ್ನು ಕುರಿತಾದ ಶಾಸನವು ತೃಟಿತಗೊಂಡಿದ್ದು ಇದರಲ್ಲಿ ವೀರಣ್ಣೊಡೆಯನಿಗೆ ಪ್ರೌಢದೇವರಾಯ ಬಾವಿ ತೋಡಿಸಿದ ಬಗ್ಗೆ ಉಲ್ಲೇಖವಿದೆ. ಹೀಗಾಗಿ ಶಾಸನ ವಿದ್ವಾಂಸರಾದ ಡಾ. ಡಿ.ವಿ.ಪರಮಶಿವಮೂರ್ತಿಯವರು ಪ್ರೌಢದೇವರಾಯ ಬಾವಿ ತೋಡಿಸಿದನೆಂದ ಮೇಲೆ ವೀರಣ್ಣೊಡೆಯ ಅಲ್ಲೇ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸಿಸಿರಲು ಸಾಧ್ಯತೆವಿದೆ ಎಂಬುದು ಅವರ ಅಭಿಪ್ರಾಯ. ಅಲ್ಲದೆ ವೀರಣ್ಣೊಡೆಯನ ಕುರಿತಾದ ಮಠ ಹಾಗೂ ಶಾಸನವನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ. ಆ ಶಾಸನ ಈ ಕೆಳಗಿನಂತಿದೆ.

"ಈ ಶಾಸನ ಕೊಳಲಕೊಂಡಯ್ಯನು (ಏನನ್ನೋ) ಕಟ್ಟಿಸಿದುದನ್ನು ಹಾಗೂ ವೀರಣ್ಣೊಡ(ಯ)ನ್ನೂ ಉಲ್ಲೇಖಿಸಿದೆ.

೧. ಕೊಳಲಕೊಂಡ

೨. ಯಯಿಯಿ

೩. ಮಡಿಸಿದ ವಿ

೪. ರಣೊಡ

೫. ಡುಪದಾ

೬. ರಹಾ ಬವಿ

೭. ಯಿಂ

೮ ಯಿ ಕೋಟ"[೧]

ಅಂದು ಪ್ರೌಢದೇವರಾಯನ ಕಾಲಘಟ್ಟದಲ್ಲಿ ಹೊರಡಿಸಲಾದ ಶಾಸನಗಳ ಸಂಖ್ಯೆ ಅಪಾರ. ಈ ಪ್ರತಿಯೊಂದು ಶಾಸನಗಳು ತುಂಬಾ ವೈಶಿಷ್ಟ್ಯತೆಯಿಂದ ಕೂಡಿದ್ದಾಗಿವೆ. ಶೈವ, ವೈಷ್ಣವ, ಜೈನ

ಧರ್ಮಕ್ಕೆ ಸಂಬಂಧಿಸಿದಂತೆ ಧರ್ಮದ ಹಿನ್ನೆಲೆಯಲ್ಲಿ ಅನೇಕ ಶಾಸನಗಳನ್ನು ಕೆತ್ತಿಸಿದ ಪ್ರೌಢದೇವರಾಯ ತನ್ನ ಆಡಳಿತದ ಸಂದರ್ಭದಲ್ಲಿ ತಮ್ಮ ಪವಾಡ ಸಾದೃಶ್ಯಗಳಿಂದ ಹಂಪೆಯಲ್ಲಿ ಮೆರೆದ ನೂರೊಂದು ವಿರಕ್ತರ ಕುರಿತು ಯಾವ ಶಾಸನವೂ ಸಹ ಬಾಯಿಬಿಟ್ಟಿಲ್ಲ. ಪ್ರೌಢದೇವರಾಯನ ಕಾಲದಲ್ಲಿ ರಚಿಸಲೆನ್ನಲಾದ ಈ ಶಾಸನಗಳು ಇದುವರೆಗೆ ಹೆಚ್ಚು ಬೆಳಕಿಗೆ ಬಾರದ ವಿಷಯಗಳು ನಮ್ಮ ಕಣ್ಣೆದುರಿಗಿಡುತ್ತವೆ. ಅಂದು ರಚನೆಗೊಂಡ ಸುಮಾರು ಮುನ್ನೂರು ಶಾಸನಗಳು, ಸಮಕಾಲೀನ ಪ್ರವಾಸಿಗರ ಬರವಣಿಗೆ, ಸಾಹಿತ್ಯ ಕೃತಿಗಳೂ ಏನೆಲ್ಲವೂ ಅವನೊಬ್ಬ ಅಸಾಮಾನ್ಯ ಪ್ರತಿಭೆವುಳ್ಳ ಅರಸನಾಗಿದ್ದನೆಂದೂ, ಕಲೆ, ಸಾಹಿತ್ಯಗಳಿಗೆ ಅಪಾರವಾದ ಪ್ರೋತ್ಸಾಹ ನೀಡಿದ ಮಹಾತ್ವಾಕಾಂಕ್ಷಿ ಅರಸನೆಂದು ಯಾವ ಸಂಶಯವಿಲ್ಲದೆ ಹೇಳುತ್ತವೆ. ಆದರೆ ವೀರಣ್ಣೊಡೆಯನನ್ನು ಬಿಟ್ಟರೆ ಮತ್ಯಾವ ವಿರಕ್ತರ ಕುರಿತು ಶಾಸನಗಳಲ್ಲಿ ಯಾವ ಮಾಹಿತಿ ದೊರೆಯಲಾರದು.

ಈ ನೂರೊಂದು ವಿರಕ್ತರನ್ನು ಕುರಿತಾದ ಶಾಸನಗಳು ಇದ್ದರೂ ಇರಬಹುದು. ಆದರೆ ಅವುಗಳು ಇಂದಿಗೂ ಸಹ ಲಭ್ಯವಾಗಿಲ್ಲ. ಅಲ್ಲದೆ ಅಂದಿನ ಸಮಕಾಲೀನ ಸಂದರ್ಭದಲ್ಲಿ ರಚನೆಯಾದ ಯಾವ ಕೃತಿಯಲ್ಲೂ ಈ ವಿರಕ್ತರ ಪ್ರಸ್ತಾಪ ಬಂದಿಲ್ಲ. ಆದರೆ ನೂರೊಂದು ವಿರಕ್ತರು ಅಳಿದ ಮೇಲೆ ರಚನೆಯಾದ ಕೆಲವೊಂದು ಪೌರಾಣಿಕ ವಿಷಯಾಧಾರಿತವಾದ ಕೃತಿಗಳಲ್ಲಿ ವಿರಕ್ತರನ್ನು ತುಂಬಾ ವೈಭವೀಕರಿಸಿ ಚಿತ್ರಿಸಿರುವರು. ಪ್ರೌಢದೇವರಾಯನ ಆಳ್ವಿಕೆಯ ಸಂದರ್ಭದಲ್ಲಿ ದೇಶವಿದೇಶಗಳಿಂದ ಅನೇಕ ಯಾತ್ರಿಕರು ಬಂದು ಆಸ್ಥಾನಕ್ಕೆ ಭೇಟಿ ನೀಡಿದರು. ಅವರೆಲ್ಲರು ಅಂದಿನ ಆಡಳಿತದ ವೈಖರಿ, ಧಾರ್ಮಿಕ ಸಮನ್ವಯತೆ ಸಾಮ್ರಾಜ್ಯದ ವಿಸ್ತಾರ ಮುಂತಾದ ಮಹತ್ವದ ವಿಚಾರ ಧಾರೆಗಳ ಬಗೆಗೆ ತಮ್ಮ ಬರವಣಿಗೆಯಲ್ಲಿ ದಾಖಲಿಸಿದ್ದಾರೆ. ಆದರೆ ಇವರು ಸಹ ಅಂದು ವಿರಕ್ತರ ಬಗೆಗೆ ಎಲ್ಲೂ ಪ್ರಸ್ತಾಪ ಮಾಡಿಲ್ಲ. ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ ತುಂಬ ಪ್ರಸಿದ್ಧರಾದ ಈ ವಿರಕ್ತರು ವಿದೇಶಿಯಾತ್ರಿಕರಿಗೆ ಅಷ್ಟೊಂದು ಮಹತ್ವದ ವ್ಯಕ್ತಿಗಳಾಗಿ ಕಂಡಿರಲಿಲ್ಲವೇ? ಎಂಬ ಅನುಮಾನ ಬರುವುದುಂಟು. ಹೀಗಾಗಿ ೧೪-೧೫ನೇ ಶತಮಾನದಲ್ಲಿ ವಿರಕ್ತರು ಯಾವುದೇ ಶಾಸನಗಳಲ್ಲಿ ಮತ್ತು ವಿದೇಶಿ ಯಾತ್ರಿಕರ ಚರಿತ್ರೆಯಲ್ಲಿ ಇವರ ಬಗ್ಗೆ ಉಲ್ಲೇಖ ದೊರೆಯಲಾರದ್ದು ತುಂಬಾ ಶೋಚನೀಯ ಸಂಗತಿ. ವಿಸ್ತಾರವಾಗಿ ಹರಡಿದ ವಿಜಯನಗರ ಸಾಮ್ರಾಜ್ಯವು ಪ್ರೌಢದೇವರಾಯನ ಕಾಲದಲ್ಲಿ ಒಳ್ಳೆಯ ಸುಭೀಕ್ಷೆಯಿಂದ ಕೂಡಿತೆಂದು ಹಲವು ಕಾವ್ಯಗಳು, ಶಾಸನಗಳು ತಿಳಿಯಪಡಿಸುತ್ತವೆ. ಧರ್ಮದ ದೃಷ್ಟಿಯಿಂದ ನೋಡಿದರೆ ಸರ್ವಧರ್ಮಗಳ ಸಮನ್ವಯ ಮನೋಭಾವ ಉಳ್ಳವನಾಗಿ ಪ್ರೌಢದೇವರಾಯ ಅಂದು ಶೈವ, ವೈಷ್ಣವ, ಜೈನ, ವೀರಶೈವ ಹಾಗೂ ಮುಸ್ಲಿಂ ಧರ್ಮಗಳಿಗೆ ಉದಾರವಾದ ದತ್ತಿ ನೀಡಿದರೆಂಬುದರ ಬಗೆಗೆ ಅನೇಕ ಉಲ್ಲೇಖಗಳು ದೊರೆಯುತ್ತವೆ.

ಪ್ರಚಲಿತವಿದ್ದ ಅಂದಿನ ಎಲ್ಲ ಧರ್ಮಗಳಿಗಿಂತ ವೀರಶೈವ ಧರ್ಮವು ಹೆಚ್ಚು ಪ್ರಸಿದ್ಧಿಯನ್ನು ಹೊಂದಿತು. ಆ ಧರ್ಮದ ಜನಪ್ರಿಯತೆಯ ಅಬ್ಬರದ ನಡುವೆ ಉಳಿದ ಧರ್ಮಗಳು ತೂರಾಡಿ ಹೋದವು. ಹೀಗಾಗಿ ಅಂದಿನ ವೇಳೆಯಲ್ಲಿ ತೀರ ದಯಾನೀಯ ಸ್ಥಿತಿಯಲ್ಲಿದ್ದ ಧರ್ಮಗಳು ಸಹಜವಾಗಿಯೇ ವೀರಶೈವ ಧರ್ಮದ ತತ್ವಪರವಾದ ವಿಚಾರಧಾರೆಗಳಿಗೆ ಹೆಚ್ಚು ಒಳಗಾದವು. ವೀರಶೈವೀಕರಣದ ಕಾರ್ಯಕ್ರಮಗಳು ಅಂದು ತುಂಬಾ ಭರದಿಂದ ಸಾಗಿರಬೇಕು. ತಾತ್ವಿಕ ದೃಷ್ಟಿಕೋನದ ಹಿನ್ನಲೆಯಲ್ಲಿ ನೋಡಿದರೆ ಇತರೆ ಧರ್ಮದ ತತ್ವಗಳಿಗಿಂತ ಹೆಚ್ಚಿನ ಖ್ಯಾತಿ ಹೊಂದಿದ ವೀರಶೈವ ಧರ್ಮದ ತತ್ವಗಳು ಅಂದಿನ ಜನಸಮುದಾಯಗಳಿಗೆ ಅಥವಾ ಅನುಭಾವಿಗಳಿಗೆ ಒಳಿತಾಗಿ ಕಂಡಿರಬೇಕು. ಹೀಗಾಗಿ ಕಲ್ಯಾಣದಲ್ಲಿ ಬಸವಣ್ಣನ ಕಾಲಕ್ಕೆ ಬೇರೆ ಬೇರೆ ನಾಡಿನಿಂದ ಶರಣರು ಬಂದಂತೆ ಪ್ರೌಢದೇವರಾಯನ ಕಾಲದಲ್ಲಿ ಅವನ ವೀರಶೈವ ಧರ್ಮದ ಉದಾರಾಶ್ರಯ ಜಕ್ಕಣ್ಣ, ಲಕ್ಕಣ್ಣರ ಪ್ರೋತ್ಸಾಹ ಕರಸ್ಥಲದ ವೀರಣ್ಣೊಡೆಯರ ನಾಯಕತ್ವ ಇವುಗಳಿಂದಾಗಿ ಮೂಲೆ ಮೂಲೆಯಿಂದ ಬಂದ ವೀರಶೈವ ಶರಣರು ಹಂಪೆಯಲ್ಲಿ ಸೇರಿ ಅಲ್ಲಿ ಧರ್ಮ ಪ್ರಚಾರ, ಸಾಹಿತ್ಯ ಪ್ರಚಾರ ಕಾರ್ಯಗಳಲ್ಲಿ ತೊಡಗಿದರು.

ಆದರೆ ಈ ಧರ್ಮ ಪ್ರಚಾರದ ಕಾರ್ಯದಲ್ಲಿ ಒಬ್ಬರೋ, ಇಬ್ಬರೋ ವಿರಕ್ತರು ವೀರಶೈವರಿದ್ದ ಮಾತ್ರಕ್ಕೆ ಇನ್ನೂಳಿದ ವಿರಕ್ತರೆಲ್ಲಾರು ವೀರಶೈವರಾಗಲಿಕ್ಕೆ ಸಾಧ್ಯವಿಲ್ಲ. ಇದುವರೆಗೆ ಬಂದಿರುವ ಸಾಹಿತ್ಯ ಕೃತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಪ್ರಚಲಿತವಿದ್ದ ವೀರಶೈವ ವಿರಕ್ತರ ಹೆಸರು ಮಾತ್ರ ಪಾಮಲರಾಗಿ ಉಳಿದಿದೆ. ಉಳಿದ ಡೊಂಬರು, ಬೇಡರು, ಗಾಣಿಗರು, ಮಡಿವಾಳರು, ಒಡ್ಡರ ಪ್ರಸ್ತಾಪ ಏಕೆ ಬಂದಿಲ್ಲ? ಹೀಗಾಗಿ ಇಲ್ಲಿ ಮತೀಯತೆ ಎನ್ನುವ ಪ್ರಬಲವಾದ ಅಸ್ತ್ರವನ್ನು ಪ್ರಾಚೀನ ವಿದ್ವಾಂಸರು ತುಂಬ ಸೂಕ್ಷ್ಮವಾಗಿ ಪ್ರಯೋಗಿಸಿದ್ದಾರೆ. ಹೀಗಾಗಿ ಹಂಪೆಯ ಪರಿಸರದಲ್ಲಿ ಬಾಳಿದಂತಹ ಎಲ್ಲಾ ವಿರಕ್ತರು ವೀರಶೈವದವರೆಂದು ಹೇಳಲು ಬರುವುದಿಲ್ಲ. ಪ್ರಾರಂಭದಲ್ಲಿ ಬರುವ ಕೆಲವೇ ಮಂದಿ ವಿರಕ್ತರು ವೀರಶೈವರಾಗಿ ಕಂಡುಬರುವ ಸಾಧ್ಯತೆಗಳಿವೆ.

ಕ್ರಿ.ಶ. ೧೪-೧೫ನೇ ಶತಮಾನದ ವಿಜಯನಗರ ಸಾಮ್ರಾಜ್ಯದಲ್ಲಿ ಬದುಕಿದ ನೂರೊಂದು ವಿರಕ್ತರ ವಿಷಯವಾಗಿ ಆಧುನಿಕ ವಿದ್ವಾಂಸರು ಎಲ್ಲೂ ವಿವರವಾಗಿ ಚರ್ಚಿಸಿಲ್ಲ. ಹಿಂದಿನ ಕೆಲವೊಂದು ಪುರಾಣ ಕೃತಿಗಳು ಬಿಂಬಿಸುವ ವಿಷಯವನ್ನೇ ತಮ್ಮ ಅಧ್ಯಯನದಲ್ಲಿ ಬಿಂಬಿಸುತ್ತಾ ನಡೆದಿದ್ದಾರೆ. ಇವರ ಬಗೆಗೆ ಕೆಲವೇ ಲೇಖನಗಳನ್ನು ಬಿಟ್ಟರೆ ಮತ್ತೆಲ್ಲಿಯೂ ಪ್ರಸ್ತಾಪ ನಡೆದ ಸಾಧ್ಯತೆಗಳಿಲ್ಲ.

೧. ಡಾ. ಆರ್.ಸಿ.ಹಿರೇಮಠ

ಡಾ.ಆರ್.ಸಿ.ಹಿರೇಮಠ ಅವರು ತಮ್ಮ 'ಷಟ್ಸ್ಥಲ ಪ್ರಭೆ' ಎಂಬ ಸಂಪಾದನ ಕೃತಿಯಲ್ಲಿ ಈ ಕೆಳಗಿನಂತೆ ವಿರಕ್ತರ ಬಗೆಗೆ ಚರ್ಚಿಸಿರುವರು. ಪ್ರೌಢದೇವರಾಯನ ಕಾಲವು ವೀರಶೈವ ಇತಿಹಾಸದಲ್ಲಿ

'ನೂರೊಂದು ವಿರಕ್ತರ ಯುಗ'ವೆಂದು ಹೆಸರಾಗಿದೆ. ಈ ನೂರೊಂದು ವಿರಕ್ತರು ಎಂಬ ಪದ ಪ್ರಯೋಗವು ನಮಗೆ ತಿಳಿದ ಮಟ್ಟಿಗೆ ದೊರೆಯುವುದು.

೧. ಪ್ರೌಢದೇವರಾಯನ ಕಾವ್ಯ – ಅದೃಶ್ಯ ಕವಿ ಕ್ರಿ.ಶ. ೧೫೮೦

೨. ಚೆನ್ನಬಸವ ಪುರಾಣ – ವಿರೂಪಾಕ್ಷ ಪಂಡಿತ ಕ್ರಿ.ಶ. ೧೫೮೪

೩. ನೂರೊಂದು ವಿರಕ್ತರ ಕಾವ್ಯ – ಮೋದಿಯ ರುದ್ರಕ್ರಿ.ಶ. ೧೭೩೬

ಈ ಮೇಲಿನ ಮೂರು ಗ್ರಂಥಗಳಲ್ಲಿಯೂ ನೂರೊಂದು ವಿರಕ್ತರ ಹೆಸರುಗಳ ಬಗೆಗೆ ಐಕ್ಯಮತವಿಲ್ಲ. 'ಪ್ರೌಢದೇವರಾಯನ ಕಾವ್ಯ'ದಲ್ಲಿ ನಾಲ್ಕು ಹೆಸರುಗಳು ಸಿಕ್ಕರೆ 'ಚೆನ್ನಬಸವ ಪುರಾಣ'ದಲ್ಲಿ ಹದಿಮೂರು ಹೆಸರುಗಳು ಕಂಡುಬರುತ್ತವೆ. ಕೊನೆಯ ಮೂರನೆಯ ಗ್ರಂಥದಲ್ಲಿ ಮಾತ್ರ ೧೦೧ ವಿರಕ್ತರ ಹೆಸರುಗಳು ಅವರ ಲೀಲೆಗಳು ಸ್ಪಷ್ಟವಾಗಿ ಉಲ್ಲೇಖಿತವಾಗಿದೆ.

ಅದೃಶ್ಯ ಕವಿ ರಚಿಸಿರುವ ಪ್ರೌಢದೇವರಾಯನ ಕಾವ್ಯದಲ್ಲಿ ಈ ನೂರೊಂದು ವಿರಕ್ತರ ಬಗೆಗೆ ಈ ಕೆಳಗಿನ ಪದ್ಯದಲ್ಲಿ ವಿವರಿಸಿರುವರು.

ಹರರೂಪನಾದ ನೂರೊಂದು ಸುವಿರಕ್ತರುರೆ
ಕರಸ್ಥಲದ ನಾಗಿದೇವನು ಕಲ್ಲುಮಠದ ಪ್ರಭು
ವರನು ವೀರಣ್ಣೊಡೆಯರು ಚಾಮರಸಾದಿ ಶಿವಭಕ್ತ ತಲೆಯ ನೆರೆದು?

ಪ್ರೊ. ಎಸ್.ಎಸ್. ಭೂಸನೂರಮಠ ಅವರು 'ಪ್ರೌಢದೇವರಾಯನ ಕಾವ್ಯದ ಕಥಾಸಾರದಲ್ಲಿ ಈ ಮೇಲಿನ ಪದ್ಯದ ಸಾರವನ್ನು ಉದ್ಧರಿಸುತ್ತಾ ಕಲ್ಲುಮಠದ ಪ್ರಭುದೇವ, ಚಾಮರಸ, ಮೊದಲಾದವರು ನೂರೊಂದು ವಿರಕ್ತರಲ್ಲಿ ಪರಿಗಣಿತರಾದವರೆಂದು ಅರ್ಥೈಸಿದ್ದಾರೆ. ಅದಕ್ಕೆ ಡಾ.ಆರ್.ಸಿ.ಹಿರೇಮಠರವರು ಈ ಪದ್ಯಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಚಾಮರಸನನ್ನು ನೂರೊಂದು ವಿರಕ್ತರ ಗುಂಪಿನಿಂದ ಬೇರ್ಪಡಿಸಿದ್ದಾರೆ. "ಕರಸ್ಥಲದ ನಾಗಿದೇವನು, ಕಲ್ಲುಮಠದ ಪ್ರಭುವರನು, ವೀರಣ್ಣೊಡೆಯ" ಎಂಬಲ್ಲಿರುವ ಸಮುಚ್ಚಯ ಸೂಚಕವಾದ 'ಉವಂ' ವಿಧಿಯು ಪರಿಪೂರ್ಣವಾಗಿದೆ ಎಂದು ತಿಳಿಯುವುದು. ಆದ್ದರಿಂದ ಈ ವಾಕ್ಯವನ್ನು ಇಕ್ಕಡಿಯಾಗಿ ವಿಂಗಡಿಸಬೇಕಾಗುವುದು. ಎಂದರೆ 'ಉಂ' ಎಂಬ ವಿಧಿಯಿಂದ ಮುಗಿಯುವ ಸಮುಚ್ಚಯ ಮೂವರನ್ನು (ನಾಗಿದೇವ, ಪ್ರಭುವರ, ವೀರಣ್ಣೊಡೆಯನು) ನೂರೊಂದು ವಿರಕ್ತರೆಂದೂ ಚಾಮರಸಾದಿಗಳನ್ನು 'ಶಿವಭಕ್ತ ತಲೆ' ಎಂದು ಅರ್ಥಮಾಡಬೇಕಾಗುತ್ತದೆ. ಇದರಿಂದ ನೂರೊಂದು ವಿರಕ್ತರು ಜಂಗಮ ಸ್ಥಲದಲ್ಲಿ ನಿಂತವರೆಂದೂ ಚಾಮರಸಾದಿಗಳು ಭಕ್ತವರೇಣ್ಯರೆಂದೂ ವೇದ್ಯವಾಗುತ್ತದೆ. ಹೀಗಾಗಿ ಇವರ ಪ್ರಕಾರ ಕರಸ್ಥಲದ ನಾಗಿದೇವ, ವೀರಣ್ಣೊಡೆಯ ಕಲ್ಲುಮಠದ ಪ್ರಭುದೇವ ಇವರು ನೂರೊಂದು ವಿರಕ್ತರ ಪಂಕ್ತಿಗೆ ಸೇರುವರು. ಆದರೆ ಚಾಮರಸರು ವಿರಕ್ತರ ಪಂಕ್ತಿಗೆ ಬರಲಾರರು. ಮುಂದೆ 'ಚೆನ್ನಬಸವ ಪುರಾಣ'

ಕೃತಿಯಲ್ಲಿ ಸಮಗ್ರವಾಗಿ ಅಭ್ಯಸಿಸಿದ ಇವರು ಕಲ್ಲುಮಠದ ಪ್ರಭುದೇವರನ್ನು ಸಹ ವಿರಕ್ತರ ಪಂಕ್ತಿಯಿಂದ ತೆಗೆಯುವರು. ಏಕೆಂದರೆ ಪ್ರೌಢದೇವರಾಯನ ಕಾವ್ಯದಲ್ಲಿ ಮಾತ್ರ ಚಾಮರಸ ಮತ್ತು ಕಲ್ಲುಮಠದ ಪ್ರಭುದೇವರನ್ನು ವಿರಕ್ತರ ಪಂಕ್ತಿಗೆ ಸೇರಿಸಿದೆ. ಇನ್ನೂಳಿದ ಯಾವ ಕೃತಿಯಲ್ಲಿ ಇವರು ವಿರಕ್ತರೆಂದು ಉಲ್ಲೇಖ ದೊರೆಯಲಾರದು.

ಕರಸ್ಥಲದ ವೀರಣ್ಣೊಡೆಯನ ಬಗೆಗೆ ಸಹ ಕೆಲವೊಂದು ದ್ವಂದ್ವಗಳು ಇವರಲ್ಲಿ ಕಂಡುಬರುವುದು ಯಾಕೆಂದರೆ ವಿರಕ್ತರ ಸ್ವಭಾವಕ್ಕೂ ವೀರಣ್ಣೊಡೆಯನ ಸ್ವಭಾವಕ್ಕೂ ಕೆಲವೊಂದು ವ್ಯತ್ಯಾಸ ಕಂಡುಬರುತ್ತದೆ. ಈ ವೀರಣ್ಣೊಡೆಯರು ಲೌಕಿಕ ವ್ಯವಹಾರಗಳನ್ನು ಚಾಚು ತಪ್ಪದೇ ಪಾಲಿಸುವರಾಗಿರುವರು. ಹೀಗಾಗಿ ಇವರನ್ನು ಸಹ ಈ ವಿರಕ್ತರ ಪಂಕ್ತಿಯಿಂದ ದೂರಿಡಲಾಗಿದೆ. ಈ ವಿಚಾರಕ್ಕೆ ಮೋದಿರುದ್ರನು ಸಹ ಸಹಕರಿಸುವಂತಾಗುತ್ತಾನೆ. ಏಕೆಂದರೆ ಮೋದಿರುದ್ರನ ಕಾವ್ಯವಾದ 'ನೂರೊಂದು ವಿರಕ್ತರ ಕಾವ್ಯದಲ್ಲಿ' ವೀರಣ್ಣೊಡೆಯ ಹಾಗೂ ಪ್ರೌಢದೇವರಾಯ ಇವರ ನಡುವೆ ನಡೆದ ಸಂಭಾಷಣೆ ಈ ಕೆಳಗಿನಂತಿವೆ.

"ನೂರೊಂದು ವಿರಕ್ತರು ತಮ್ಮಯ ಘನ
ಮೇರೆಯ ತೋರದೆ ನಿರ್ವಯಲಾದರು
ಕಾರಣ ಪುರುಷರು ನೀವೆಮ್ಮಯ ಬಳಿವಿರ್ಪರೊ ಹೋಗುವಿರೊ ।
ದಾರಿಯ ಪೇಳೆನೆ ದರಹಸಿತದಿ ಗುರು
ವೀರಣ್ಣಯ್ಯನು ನುಡಿದನು ರಾಜಗೆ
ಕಾರಣ ಮೂರ್ತಿಯೂ ನಾಗೇಶನು ಕರೆದರೆ ನಾ ಪೋಗುವೆನು ।"

"ನೂರೊಂದು ವಿರಕ್ತರೆಲ್ಲರೂ ಬಯಲಾಗಿ ಹೋದರೂ, ನೀವಾದರೂ ನಮ್ಮ ಬಳಿಯಲ್ಲಿ ಉಳಿಯುವಿರೋ ಇಲ್ಲವೋ? ಎಂದು ಪ್ರೌಢದೇವರಾಯನು ವೀರಣ್ಣೊಡೆಯರನ್ನು ಪ್ರಶ್ನಿಸುವುದನ್ನು ಹಾಗೂ ಗುರುನಾಗೇಶನು ಕರೆದರೆ ನಾನು ಹೋಗುವೆ" ಎಂದು ವೀರಣ್ಣೊಡೆಯನು ಉತ್ತರಿಸುವನು. ಈ ಮೇಲಿನ ಮಾತುಕತೆ ನೋಡಿದರೆ ವೀರಣ್ಣೊಡೆಯನು ಈ ನೂರೊಂದು ವಿರಕ್ತರಿಂದ ಭಿನ್ನವೆಂದು ಸಹಜವಾಗಿ ತಿಳಿದು ಬರುತ್ತದೆ.

"ಒಟ್ಟಿನಲ್ಲಿ ನೂರೊಂದು ವಿರಕ್ತರ ಪಟ್ಟಿಯಿಂದ ಚಾಮರಸ, ಕಲ್ಲುಮಠದ ಪ್ರಭುದೇವ, ವೀರಣ್ಣೊಡೆಯರನ್ನು ತೆಗೆದಿರುವರು. ನಾಗಿದೇವನೇ ವಿರಕ್ತರಿಗೆ ಆದಿ ಹಾಗೂ ಅಗ್ರಗಣ್ಯನೆಂದು ಇವರ ಅಭಿಪ್ರಾಯವಾಗಿದೆ."[೨]

ಈ ನೂರೊಂದು ಮಂದಿ ವಿರಕ್ತರಲ್ಲಿ ಮೊದಲಿಗೆ ಬರುವ ಸುಮಾರು ಹತ್ತು ಹೆಸರನ್ನು ಬಿಟ್ಟರೆ, ಮಿಕ್ಕವೆಲ್ಲ ಶಾಂತೇಶ, ಶಾಂತಲಿಂಗ, ಶಾಂತ ಎಂಬುದಾಗಿ ಕಂಡುಬರುತ್ತವೆ. ಇಷ್ಟು

ಜನರೆಲ್ಲರೂ ಒಂದೆಡೆ ಒಂದೆ ಹೆಸರಿನವರಿದ್ದರೇ? ಎಂಬ ಪ್ರಶ್ನೆ ಸಹಜವಾಗಿ ತಲೆ ಎತ್ತುತ್ತವೆ. 'ಚೆನ್ನಬಸವ ಪುರಾಣ'ವು ಹತ್ತು ಹೆಸರುಗಳಿಗೆ ಇತ್ಯಾದಿ ಎಂದು ಹೇಳಿ ಮುಂದೆ ಸಾಗಿದರೆ, 'ನೂರೊಂದು ವಿರಕ್ತರ ಕಾವ್ಯ'ವು ಮಾತ್ರ ೧೦೧ ಜನರ ಹೆಸರನ್ನು ಪ್ರಸ್ತಾಪಿಸಿದೆ. ಡಾ.ಆರ್.ಸಿ.ಹಿರೇಮಠ ಅವರು ಈ ವಿರಕ್ತರನ್ನು ಈ ಕೆಳಗಿನಂತೆ ಪರಿಭಾವಿಸುವರು.

"ಶಾಂತ, ಶಾಂತಲಿಂಗ, ಎಂಬಂತಹ ಹೆಸರುಗಳೇ ಹೊರತು ಅಂಕಿತ ನಾಮಗಳಲ್ಲ. ಅವರು ಪಡೆದ ಸ್ಥಿತಿಗನುಗುಣವಾಗಿ ಈ ಹೆಸರು ಅವರಿಗೆ ಬಂದಿರಬಹುದು. ಅವರೆಲ್ಲಾರು ಹೊಂದಿರುವ ಶಾಂತ ಸ್ಥಿತಿಯೇ ಆಗಿದ್ದಿತ್ತು. ಆದುದರಿಂದ ಜನ ಅವರನ್ನು ಆ ಅಭಿದಾನದಿಂದ ಕರೆದಿರಬೇಕು. ವ್ಯಕ್ತಿಶಃ ಒಬ್ಬೊಬ್ಬರನ್ನು ಗುರುತಿಸುವುದಕ್ಕಾಗಿ, ಅವರವರು ಲೋಕದಲ್ಲಿ ನಡೆಸಿದ ನಟನೆ, ಕೈಗೊಂಡ ಕಾಯಕ ಇತ್ಯಾದಿಗಳಿಗೆ ಅನುಸಾರವಾದ ವಿಶೇಷಣಗಳನ್ನು ಅವರವರ ಹೆಸರುಗಳಿಗೆ ಹೊಂದಿಸಲಾಗಿದೆ. ಕವಿ ಮೋದಿಯ ರುದ್ರನು ಕಲ್ಪಿಸಿಕೊಂಡು ೧೦೧ ಮಂದಿಯ ಹೆಸರನ್ನು ಕೊಟ್ಟಿಲ್ಲ. ಬೇರೆ ಕೃತಿಯಲ್ಲಿ ಯಾವ ರೀತಿ ಕೆಲವೇ ವಿರಕ್ತರ ಹೆಸರನ್ನು ಹೇಳಿ ಇತ್ಯಾದಿ ಎಂದು ಮುಂದೆ ಸಾಗಬಹುದಾಗಿತ್ತು. ಮಳೆಯ ಸ್ವಾಮಿ ಮತ್ತು ಮೋದಿಯ ರುದ್ರನ ನಡುವೆ ನಡೆದ ಮಾತುಕತೆಯನ್ನು ನೋಡಿದರೆ ಈ ಹೆಸರುಗಳು ಕವಿಯ ಕಲ್ಪಿತ ಹೆಸರಲ್ಲ. ಅವರಿಗೆ ಯಾವುದೋ ಮೂಲದಿಂದ ಆಧಾರ ಸಿಕ್ಕಿರಬೇಕೆಂದು ಡಾ.ಆರ್.ಸಿ.ಹಿರೇಮಠರವರ ವಾದವಾಗಿದೆ.

ನೂರೊಂದು ವಿರಕ್ತರು ಬಾಳಿದ ಸಂದರ್ಭದಲ್ಲಿಯೇ ಕಾವ್ಯವನ್ನು ಬರೆದ ಲಕ್ಕಣ್ಣ ದಂಡೇಶನು ತನ್ನ 'ಶಿವತತ್ವ ಚಿಂತಾಮಣಿ'ಯಲ್ಲಿ ನೂರೊಂದು ವಿರಕ್ತರು ಎಂಬ ಮಾತನ್ನಾಗಲಿ ಅವರ ಹೆಸರನ್ನಾಗಲಿ ಉಲ್ಲೇಖಿಸುವುದಿಲ್ಲ. ಪ್ರಥಮ ಗಣಂಗಳು, ರುದ್ರಗಣಂಗಳು, ತೇರಸರು, ದಶಗಣಂಗಳು, ಅರವತ್ಮೂರು ಪುರಾತನರು, ಷೋಡಶರು, ಅಸಂಖ್ಯಾತರು ಮತ್ತು ನೂತನ ಗಣಂಗಳು ಇವರೆಲ್ಲರ ಹೆಸರನ್ನು ವಿಸ್ತಾರವಾಗಿ ವಿವರಿಸುತ್ತಾನೆ. ಕನ್ನಡ ನಾಡಿನಲ್ಲಿ ಮಾತ್ರವೇ ಅಲ್ಲ, ನೆರೆ ಹೊರೆಯ ಆಂಧ್ರ, ತಮಿಳು ಮೊದಲಾದ ನಾಡಿನಲ್ಲಿ ಇದ್ದ ಸಕಲ ಗಣಂಗಳನ್ನು ಆತನು ವರ್ಣಿಸಿದ್ದಾನೆ. ಇಷ್ಟೆಲ್ಲ ಪರಿಶ್ರಮ ವಹಿಸಿದ ಕವಿ 'ನೂರೊಂದು ವಿರಕ್ತರು' ಎಂಬ ಪದ ಪ್ರಯೋಗ ಮಾಡಿ ಅವರನ್ನು ನೂತನ ಗಣಂಗಳ ಮಧ್ಯದಲ್ಲಿ ಕುಳ್ಳಿರಿಸಬಹುದಾಗಿದ್ದಿತ್ತು. ನೂರೊಂದರಲ್ಲಿ ಒಂದು ಹೆಸರೂ ಅಲ್ಲಿ ಬಾರದಿರುವುದು ಅತ್ಯಂತ ಸೋಜಿಗದ ಮಾತು. ಇದರಂತೆಯೇ ಅದೇ ಕಾಲದಲ್ಲಿದ್ದ ಚಾಮರಸ, ಮಗ್ಗೆಯ ಮಾಯಿದೇವ, ಜಕ್ಕಣಾರ್ಯ, ಕಲ್ಮಠದ ಪ್ರಭುದೇವ ಇವರ ಕಾವ್ಯ ಕೃತಿಗಳಲ್ಲಿಯೂ ಸಹ ನೂರೊಂದು ವಿರಕ್ತರ ಪ್ರಸ್ತಾಪ ಬಂದಿಲ್ಲ. ಆ ವೇಳೆಯಲ್ಲಿ ೧೦೧ರ ಸಂಖ್ಯೆ ನಿರ್ಣಯವಾಗಿರಲಿಲ್ಲ ಎಂದು ಹೇಳುವರು. ಅಂದರೆ ಆ ವೇಳೆಯಲ್ಲಿ ನೂರೊಂದು ವಿರಕ್ತರಲ್ಲಿ ಒಬ್ಬರಾದರೂ ಹೆಸರನ್ನೂ ಪ್ರಸ್ತಾಪ ಮಾಡಿಲ್ಲ. ಅಥವಾ ಪ್ರೌಢದೇವರಾಯನ ಕಾಲದಲ್ಲಿ ವಿರಕ್ತರಿದ್ದರೆಂದು ಒಬ್ಬರೂ ಸಹ ತಿಳಿಸಿಲ್ಲ ಎಂಬುದು ಅವರ ಅಭಿಪ್ರಾಯ."[3]

೨. ಡಾ. ಎಂ.ಎಂ. ಕಲಬುರ್ಗಿ

ನೂರೊಂದು ವಿರಕ್ತರ ಬಗೆಗೆ ವೈಚಾರಿಕವಾಗಿ ಹಾಗೂ ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಮಾತಾಡಿದವರೆಂದರೆ ಡಾ. ಎಂ.ಎಂ. ಕಲಬುರ್ಗಿಯವರು. ಅವರ ಪ್ರಕಾರ ಮಧ್ಯಕಾಲೀನ ಸಂದರ್ಭದಲ್ಲಿದ್ದ ನೂರೊಂದು ವಿರಕ್ತರನ್ನು ಕುರಿತು ಅಧ್ಯಯನ ಮಾಡುವುದು ಇಂದಿನ ದಿನಮಾನಗಳಲ್ಲಿ ಅವಶ್ಯಕವಾದ ವಿಷಯವಾಗಿದೆ. ಅದೊಂದು ಮಿಥ್ ಇದೆಯಲ್ಲ ಅದನ್ನು ಒಡೆಯಬೇಕೆನ್ನುವರು. 'ಚೆನ್ನಬಸವ ಪುರಾಣ'ದಲ್ಲಿ ಬರೆದಿದ್ದನ್ನು ನಂಬಲಿಕ್ಕೆ ಆಗಲ್ಲ. ಹೀಗಾಗಿ ಚೆನ್ನಬಸವ ಪುರಾಣದಲ್ಲಿ ಬರುವ ಕೆಲವೊಂದು ಅಂಶಗಳು ಶುದ್ಧ ಸುಳ್ಳಾಗಿರುವುದು. ಅದಕ್ಕೆ ನೂರೊಂದು ವಿರಕ್ತರು ನಾಥ ಸಂಪ್ರದಾಯದವರು ಅಥವಾ ಶಾಂತ ಸಂಪ್ರದಾಯದವರೆಂದು ಹೇಳುವರು. 'ನಿಜಗುಣ ಶಿವಯೋಗಿಯವರು ಸಹ ಶಾಂತ ಸಂಪ್ರದಾಯದವರು 'ಶಾಂತ' ಪರಂಪರೆ ಅದು ನಾಥ ಪರಂಪರೆ. ಹೀಗಾಗಿ ಈ ವಿರಕ್ತರ ಲಕ್ಷಣ ಅವರ ವರ್ತನೆ ನಮ್ಮ ಲಿಂಗಾಯತ ವಿರಕ್ತರಿಗೆ ಹೊಂದಲಾರದು. ಅದಕ್ಕೆ ಇವರು ಲಿಂಗಾಯತ ವಿರಕ್ತರಲ್ಲವೆಂದು ಬೇರ್ಪಡಿಸಬೇಕು. ಹಂಪೆ ನಾಥ ಸಂಪ್ರದಾಯದ ಕೇಂದ್ರ, ಅಲ್ಲಿರುವ ಮನ್ಮಥ ತೀರ್ಥ ಅದು ಮನ್ಮುಖಿ ತೀರ್ಥ, ಮತ್ತು ಗುರುಮುಖಿ ತೀರ್ಥ ಇವುಗಳ ಆಧಾರದ ಮೇಲೆ ಈ ವಿರಕ್ತರು ನಾಥ ಅಥವಾ ಅವಧೂತರ ಪರಂಪರೆಗೆ ಸೇರಿದವರಾಗಿ ಕಂಡುಬರುವರೆಂದು ಕಲಬುರ್ಗಿಯವರ ಅಭಿಪ್ರಾಯವಾಗಿದೆ.

"ವೀರಶೈವ ಸಮಾಜದ ಇತಿಹಾಸದಲ್ಲಿ 'ನೂರೊಂದು ವಿರಕ್ತರು' ಒಂದು ಕಗ್ಗಂಟಾಯಾಗಿಯೆ ಉಳಿದಿದ್ದಾರೆ. ಈ ಒಂದು ವಿರಕ್ತರ ಪರಂಪರೆ ಹಂಪೆಯ ಪರಿಸರದಲ್ಲಿ ನೆಲೆಯೂರಿತ್ತೆ. ಇವರಲ್ಲಿ ಕೆಲವರಿಗೆ ಮದುವೆ ಆಗಿದ್ದರೆ ಮತ್ತೆ ಕೆಲವರಿಗೆ ಮದುವೆ ಆಗಿಲ್ಲ. ಹೀಗಾಗಿ ಇವರಿಗೆ ವಿರಕ್ತರೆಂದು ಕರೆಯುವುದು ಎಷ್ಟು ಸಮಂಜಸ. ವೀರಶೈವ ಧರ್ಮದ ಪುನರುಜ್ಜೀವನಕ್ಕೆ ಕಾರಣ ಕರ್ತರಾಗಿರುವುರೇ ಎಂಬ ಹಲವಾರು ಪ್ರಶ್ನೆಗಳನ್ನು ಹಾಕಿಕೊಳ್ಳುವರು.

ಪ್ರೌಢದೇವರಾಯನ ಮಂತ್ರಿಯಾದ ಲಕ್ಕಣ್ಣ ದಂಡೇಶ ತನ್ನ 'ಶಿವತತ್ವ ಚಿಂತಾಮಣಿ'ಯಲ್ಲಿ ಗುಮ್ಮಳಾಪುರವನ್ನು ಪ್ರಸ್ತಾಪಿಸುತ್ತ ಅಲ್ಲಿ "ತಿಂಥಿಣಿ ವಡೆದು, ನೆರೆಭಕ್ತಿಮಯವಾಗಿ ಸಲ್ಲಲಿತ ಶತಮಾಗಣಂಗಳು" ಇದ್ದುದನ್ನು ಸೂಚಿಸಿತ್ತ "ಹದಿನಾಡೊಳೆಸೆವ ಬೊಮ್ಮನಹಳ್ಳಿಯಲ್ಲಿರ್ಪ ಮದನಹರ ಶರಣ ವೀರಣ್ಣ"ನನ್ನು ಸ್ಮರಿಸುತ್ತಾನೆ. ಇಲ್ಲಿ "ಶತಗಣಂ" ಪದದ ಮೂಲಕ ನೂರೊಂದು ವಿರಕ್ತರನ್ನು, ಬೊಮ್ಮನ ಹಳ್ಳಿಯ "ವೀರಣ್ಣ" ಹೆಸರಿನ ಮೂಲಕ ಈ ವಿರಕ್ತ ಸಮೂಹದ ಪ್ರಮುಖ ವ್ಯಕ್ತಿಯೂ ಬೊಮ್ಮೂರಿನವನೂ ಆದ ಕರಸ್ಥಲದ ವೀರಣ್ಣನನ್ನು ಸೂಚಿಸಿದ್ದಾನೆ. ವೀರಣ್ಣನು ಗುಮ್ಮಳಾಪುರ ಸಮೀಪದ ಬೊಮ್ಮೂರಿನವನೆಂದು ಕರಸ್ಥಲನಾಗಲಿಂಗನ ಚರಿತ್ರೆ ತಿಳಿಸುವುದು, ನೆರೆಯ ಮೈಸೂರು ಜಿಲ್ಲೆ (ಇಂದು ಚಾಮರಾಜನಗರ ಜಿಲ್ಲೆ) ಗುಂಡ್ಲು ಪೇಟೆ ತಾಲ್ಲೂಕಿನಲ್ಲಿ ಇವನ ಶಿಷ್ಯ ಕರಸ್ಥಲ

ನಾಗಲಿಂಗನ ಗವಿಯಿರುವುದೂ ನಾಗಲಿಂಗನು ಗುಮ್ಮಳಾಪುರದ ಶರಣರ ಹಮ್ಮು ಬಿಡಿಸಿದನೆಂದು ಈ ನಾಗಲಿಂಗನ ಚರಿತ್ರೆ ಮತ್ತು ಬಿಡಿ ಹಾಡುಗಳಲ್ಲಿ ಬರುವುದು, ಗುಮ್ಮಳಾಪುರದ ತಾಮ್ರ ಶಾಸನ (೧೪೭೪)ದಲ್ಲಿ ಶಾಂತದೇವ, ಶರಣ ವೀರಣ್ಣದೇವ, ನಾಗದೇವರ ಪ್ರಸ್ತಾಪವಿರುವುದೂ, ಈ ನೂರೊಂದು ವಿರಕ್ತ ಸಮೂಹ ಮೂಲತಃ ಗುಮ್ಮಳಾಪುರ ಪ್ರದೇಶದ್ದೆಂದು ಸ್ಪಷ್ಟಪಡಿಸುತ್ತವೆ. ಆ ಮೇಲೆ ಇವರ ಚಟುವಟಿಕೆ ಹಂಪೆಗೆ ವರ್ಗಾವಣೆಗೊಂಡಂತಿದೆ.

"ನೂರೊಂದು ವಿರಕ್ತರು ಬದುಕಿದ ಕಾಲಘಟ್ಟದಲ್ಲಿ ಬಂದ ಕೃತಿಯೆಂದರೆ ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿಯಾಗಿದೆ. ಉಳಿದ ಕೃತಿಗಳು ನಂತರ ಬಂದದಾಗಿವೆ. ಹೀಗಾಗಿ ನಂತರ ಬಂದ ಕೃತಿಗಳಲ್ಲಿ ವಿರಕ್ತರನ್ನು ವೀರಶೈವ ವಿರಕ್ತರೆಂಬ ಬಣ್ಣ ತುಂಬಿಕೊಂಡು ಬಂದಿದೆ. ಕೆಲವೊಂದು ಕೃತಿಗಳಲ್ಲಿ ಮಾತ್ರ ಕೇವಲ ನಾಲ್ಕು ಐದು ಜನ ವಿರಕ್ತರ ಹೆಸರನ್ನು ಉಲ್ಲೇಖಿಸಿ ಮುಂದೆ ಸಾಗುವರಾಗಿದ್ದಾರೆ. ೧೫೮೦ರಲ್ಲಿ ಅದೃಶ್ಯಕವಿ ಪ್ರಥಮ ಬಾರಿಗೆ "ನೂರೆಂದು ವಿರಕ್ತ" ಪದವನ್ನು ಬಳಸಿ ನಾಲ್ಕೈದು ಜನರನ್ನು ಹೆಸರಿಸುತ್ತಾನೆ."[*]

ಕ್ರಿ.ಶ. ೧೫೮೪ರ ವಿರೂಪಾಕ್ಷ ಪಂಡಿತನು ಇನ್ನೂ ಮುಂದೆ ಹೋಗಿ "ಇಳೆಯೊಳಗೆ ನೂರೊಂದು ವರಗಣೇಶ್ವರರುದಿಸಿ, ಜಂಗಮ ಸ್ಥಲವಾಂತು, ಪರಮ ಷಟ್‌ಸ್ಥಲವನ್ನುದ್ಧರಿಸಿ" ಎನ್ನುತ್ತ, ಇವರಿಗೆ ವೀರಶೈವದ ಸ್ಪಷ್ಟ ಮುದ್ರೆಯನ್ನೊತ್ತುತ್ತಾನೆ. ಹೀಗೆ ಇವರು ವೀರಶೈವರೆಂಬ ಭಾವನೆ ಕ್ರಮೇಣ ಬೆಳೆಯುತ್ತಾ ಬಂದ ಕಾರಣ, ಆಧುನಿಕ ವಿದ್ವಾಂಸರು ಇವರನ್ನು ವೀರಶೈವ ಪರಂಪರೆಯ ಯುಗಪುರುಷರೆಂಬಂತೆ ಚಿತ್ರಿಸಿದ್ದಾರೆ. ಈ ರೀತಿ ಚಿತ್ರಿಸಲು ಇನ್ನೊಂದು ಕಾರಣ ಅಂದಿನ ಸಂದರ್ಭದಲ್ಲಿದ್ದ ವೀರಶೈವ ಪಂಡಿತರು ಚಾಮರಸ, ಕಲ್ಲುಮಠದ ಪ್ರಭುದೇವ, ಮಹಾಲಿಂಗದೇವ, ಜಕ್ಕಣಾರ್ಯ, ಮಗ್ಗಿಯ ಮಾಯಿದೇವ ಮೊದಲಾದವರನ್ನು ನೂರೊಂದು ವಿರಕ್ತರೆಂದು ಭಾವಿಸಿದ್ದರು. ಆದರೆ ಈಗ ಇವರಾರು ನೂರೊಂದು ವಿರಕ್ತರಲ್ಲವೆಂದು ಈಗ ಬಹುಮಟ್ಟಿಗೆ ದೃಢಪಟ್ಟಿದೆ. ಇವರನ್ನು ಹೊರತುಪಡಿಸಿದರೆ ಉಳಿಯುವ ಕರಸ್ಥಲ ವೀರಣ್ಣ, ಕರಸ್ಥಲದನಾಗಿದೇವ ಮೊದಲಾದ ನೂರೊಂದು ವಿರಕ್ತರ ಧಾರ್ಮಿಕ ಕೊಡುಗೆ ತೀರ ಸಾಮಾನ್ಯ ಇವರ ಸಾಹಿತ್ಯ ಕೃತಿಗಳು ಕೇವಲ ಲಘು ಕೃತಿಗಳು. ವಿದ್ವಾಂಸರು ಹೇಳುವಂತೆ ಇವರು ವಚನಗಳ ಸಂಗ್ರಹ, ಸಂಕಲನ, ಸಂಪಾದನಕಾರ್ಯ ಮಾಡಿದುದಾಗಲೀ, ಪ್ರೇರಣೆ ನೀಡಿದುದಾಗಲೇ ಈವರೆಗೆ ಗೊತ್ತಾಗಿಲ್ಲ. ಬಹುಶಃ ಮಾಡಿದಂತೆಯೂ ಇಲ್ಲ. ಆದುದರಿಂದ ನೂರೊಂದು ವಿರಕ್ತರನ್ನು ವೀರಶೈವ ಧರ್ಮ-ಸಾಹಿತ್ಯದ ಪುನುರುಜ್ಜೀವನದ ಹರಿಕಾರರೆಂದು ಕರೆಯುವುದು ತಪ್ಪಾಗುತ್ತದೆ.

ನೂರೊಂದು ವಿರಕ್ತರು ವೀರಶೈವ ವಿರಕ್ತರೇ ಎಂಬುದರ ಬಗ್ಗೆ ತುಂಬಾ ಸೂಕ್ಷ್ಮವಾಗಿ ಚರ್ಚಿಸಿದ್ದಾರೆ. ವೀರಶೈವರಲ್ಲಿ 'ಅಲ್ಲಮ ಪ್ರಭು ಸಂಪ್ರದಾಯದ ವಿರಕ್ತರ ಪರಂಪರೆಯೊಂದು

ಒಡೆದು ಕಾಣುತ್ತದೆ. ಅಲ್ಲಮ ಪ್ರಭು, ತೋಂಟದ ಸಿದ್ಧಲಿಂಗ, ಹರತಾಳ ಚೆನ್ನಂಜೆದೇವ, ಮುರಿಗಾಶಾಂತವೀರ ಮೊದಲಾದವರು ಈ ಮಾಲಿಕೆಯಲ್ಲಿ ಪರಿಗಣಿತರಾಗಿದ್ದಾರೆ. ಈ ನೂರೊಂದು ವಿರಕ್ತರು ಇವರ ತರಹದ ವಿರಕ್ತರೇ? ಎಂಬ ಪ್ರಶ್ನೆಗೆ ಅಲ್ಲವೆಂಬುದೇ ಉತ್ತರ ನೀಡುವರು. ಏಕೆಂದರೆ ಈ ನೂರೊಂದು ಜನ ಶ್ರದ್ಧಾಪೂರ್ವಕವಾಗಿ 'ಅಲ್ಲಮಪ್ರಭು ಸಂಪ್ರದಾಯ'ವನ್ನು ಮುನ್ನಡೆಸಿದಂತಿಲ್ಲ. ಇವರದೇ ಆದ ವಿರಕ್ತ ಪರಂಪರೆಯೂ ವೀರಶೈವದಲ್ಲಿ ಬೆಳೆದು ಬಂದಂತಿಲ್ಲ. ೧೫ನೇ ಶತಮಾನದಲ್ಲಿ ಒಂದು ದ್ವೀಪದಂತೆ ತೋರಿ ಇವರು ಮಾಯಾವಾಗಿದ್ದಾರೆ. ಎರಡನೆಯದಾಗಿ ಕರಸ್ಥಲದ ವೀರಣ್ಣ ಮೊದಲಾದವರು ಮದುವೆಯಾಗಿದ್ದಾರೆ. ಮಕ್ಕಳು ಇವೇ, ಕರಸ್ಥಲ ನಾಗಿದೇವ ಪರಸ್ತ್ರೀ ಸಂಗದ ವ್ಯಕ್ತಿಯಂತೆ ಚಿತ್ರಿತನಾಗಿದ್ದಾನೆ. ತನ್ನ ಮೂತ್ರ ಬೆರೆಸಿದ ಹಾಲು ಕುಡಿಸಿ ರೋಗ ನಿವಾರಣೆ ಮಾಡುವುದೇ ಮೊದಲಾದ ವಾಮಾಚಾರಗಳಿಂದ ಇವರ ಚರಿತ್ರೆ ತುಂಬಿ ಹೋಗಿದೆ.

ಸಾಮಾನ್ಯವಾಗಿ ಎಲ್ಲ ನೂರೊಂದು ಜನರೂ ಒಂದು ರೀತಿಯ ವಾಮಾಚಾರಿಗಳಂತೆಯೇ ಅರೆಮರುಳ ಸ್ಥಿತಿಯವರಾಗಿಯೇ ಇದ್ದಾರೆ. ಇಂಥವರನ್ನು ಶುದ್ಧ ಆಚಾರದ, ಪರಿಶುದ್ಧ ವಿಚಾರದ ವೀರಶೈವ ವಿರಕ್ತರೆಂದು ಒಪ್ಪುವುದಾದರೂ ಹೇಗೆ? ಆದುದರಿಂದ ಒಂದು ಬಗೆಯ ವಾಮಾಚಾರದ ಶಿವೋಪಾಸಕರಂತಿರುವ ಇವರು ನಾಥ ಪಂಥೀಯರಂತೆ ಕಾಣುತ್ತಾರೆ. ಈ ಪಂಥದ ಸಂತರಿಗೆ "ಅವಧೂತ"ರೆಂದು ಹೆಸರು. ನೂರೊಂದು ವಿರಕ್ತರ ಅರೆಮರುಳ ಸ್ಥಿತಿಯು ಅವಧೂತರನ್ನೇ ನೆನಪಿಸುತ್ತದೆ. ಈ ನೂರೊಂದು ವಿರಕ್ತರಲ್ಲಿ ಒಬ್ಬರಾಗಿರಬಹುದಾದ 'ಗುರುಬಸವ' ಬರೆದುದು "ಅವಧೂತ ಗೀತೆ" ಈ ಶೀರ್ಷಿಕೆಯು ಅವಧೂತವೆನ್ನುವುದು ವೀರಶೈವ ಪರಿಭಾಷೆಯಲ್ಲವೆಂಬುದು ಇಲ್ಲಿ ನೆನೆಯಬೇಕು.

ಹಂಪೆಯ ಪರಿಸರದಲ್ಲಿಯೇ ಜನಿಸಿದ ಕೊಡೆಕಲ್ಲು ಬಸವಣ್ಣ ಸಹ ಶಿವಪರವಾದ ನಾಥ ಪಂಥೀಯನಾಗಿದ್ದಾನೆ. ಇವನು ನೂರೊಂದು ವಿರಕ್ತರ ಸಂಪ್ರದಾಯದ ಪ್ರಭಾವವನ್ನು ಹೊತ್ತುಕೊಂಡು, ಅಲ್ಲಿಂದ ಕೊಡೆಕಲ್ಲಿಗೆ ಬಂದನೆಂದು ತೋರುತ್ತದೆ.

"ಒಟ್ಟಾರೆ ಈ ನಾಥ ಪಂಥೀಯರ ಶಿವಪರ ಧೋರಣೆ, ಅವಧೂತ ನಿಲುವುಗಳಿಗೆ ಮೋಸ ಹೋಗಿ ವೀರಶೈವ ಪುರಾಣಗಳು ಅವರನ್ನು ವೀರಶೈವ ವಿರಕ್ತರೆಂದು ವರ್ಣಿಸಿದುದು, ಇದನ್ನು ನಂಬಿ ಕವಿಚರಿತೆಕಾರರೇ ಮೊದಲಾದ ಆಧುನಿಕ ವಿದ್ವಾಂಸರು, ಪ್ರೌಢದೇವರಾಯನ ಕಾಲದ ಇವರನ್ನು "ವೀರಶೈವ ಪ್ರವರ್ತಕ"ರೆಂದು ಪ್ರತಿಪಾದಿಸುತ್ತ ಬಂದಿದು ವಿಪರ್ಯಾಸವೇ ಸರಿ. ಆದುದರಿಂದ ನೂರೊಂದು ವಿರಕ್ತರು, ವೀರಶೈವ ಪರಿಕಲ್ಪನೆಯ "ವಿರಕ್ತ"ಕ್ಕೆ ಭಿನ್ನರಾಗಿರುವರೆಂದೂ ಬಹುಶಃ ನಾಥ ಪಂಥಿಯರೆಂದೂ, ಇವರು ವೀರಶೈವದ ಪುನರುಜ್ಜೀವನದಲ್ಲಿ ಮಹತ್ವದ ಪಾತ್ರವಹಿಸಿದುದಕ್ಕೆ ಗಟ್ಟಿ ಆಧಾರಗಳಿಲ್ಲವೆಂದೂ ಹೇಳಬಹುದಾಗಿದೆ."[೫] ಡಾ. ಎಂ.ಎಂ.ಕಲಬುರ್ಗಿಯವರು ವಿರಕ್ತರ

ಗುಣಸ್ವಭಾವದ ಹಿನ್ನೆಲೆಯಲ್ಲಿ ವೀರಶೈವ ವಿರಕ್ತರಿಂದ ಇವರನ್ನು ಬೇರ್ಪಡಿಸಿರುವುದು ಸೂಕ್ತವಾದ ಚಿಂತನಕ್ರಮವಾಗಿದೆ.

೩. ಡಾ. ಶಿವಾನಂದ ವಿರಕ್ತಮಠ

'ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ' ಎಂಬ ಸಂಶೋಧನ ಕೃತಿಯಲ್ಲಿ ಡಾ. ಶಿವಾನಂದ ವಿರಕ್ತಮಠರವರು ನೂರೊಂದು ವಿರಕ್ತರನ್ನು ಕುರಿತು ಪ್ರಾಸಂಗಿಕವಾಗಿ ಚರ್ಚಿಸಿರುವರು. ಆದರೆ ಈ ವಿರಕ್ತರ ಕುರಿತು ಭಿನ್ನ ರೀತಿಯಲ್ಲಿ ಆಲೋಚಿಸಿಲ್ಲವೆಂಬಂತಿದೆ. ಪ್ರಾಚೀನ ಕಾಲದ ಪಂಡಿತರು ಕೆಲವೊಂದು ಪೌರಾಣಿಕ ಸಾಹಿತ್ಯ ಕೃತಿಯಲ್ಲಿ ವಿರಕ್ತರನ್ನು ಯಾವ ರೀತಿ ಮನಗಂಡಿದ್ದಾರೆಯೋ ಅದೇ ರೀತಿ ಇವರು ಸಹ ಅವರ ಜಾಡಿನಲ್ಲೇ ಸಾಗಿದ್ದಾರೆ. ಚಾಮರಸ, ಕಲ್ಲುಮಠದ ಪ್ರಭುದೇವ, ಕರಸ್ಥಲದ ವೀರಣ್ಣೊಡೆಯರನ್ನು ನೂರೊಂದು ವಿರಕ್ತರ ಪಟ್ಟಿಯಿಂದ ತೆಗೆದರೆ ಇವರು ಸೇರಿಸುತ್ತಾರೆ.

ಅತಿ ಪ್ರಸಿದ್ಧರಾದ ಹಲವು ವಿರಕ್ತರ ಹೆಸರುಗಳನ್ನು ಗುಬ್ಬಿಯ ಮಲ್ಲಣಾರ್ಯ ಹೇಳಿದ್ದರೂ ನೂರೊಂದು ವಿರತರು ಎಂಬ ಪ್ರಯೋಗ ದೊರಕುವುದು ಅದ್ರೀಶನ ಪ್ರೌಢದೇವರಾಯನ ಕಾವ್ಯದಲ್ಲಿ ಅಲ್ಲಿಂದೀಚೆ ವಿರೂಪಾಕ್ಷ ಪಂಡಿತ, ಸಿದ್ಧನಂಜೇಜ, ಶಾಂತಲಿಂಗದೇಶಿಕ ಹಾಗೂ ನಿರಂಜನವಂಶ ರತ್ನಾಕರದ ಕರ್ತೃಗಳು ನೂರೊಂದು ವಿರತರ ಬಗೆಗೆ ಹೇಳ ಹೋಗಿದ್ದಾರೆ. ಆದರೆ ಇವರಾರ ಉದ್ದೇಶವೂ ಇವರನ್ನು ಒಂದು ಗುಂಪು ಮಾಡಿ ಹೇಳುವದಾಗಿಲ್ಲ. ಅವರು ಹೇಳುವ ಹೆಸರುಗಳು ಆ ಕಾಲದಲ್ಲಿ ಅವರಿಗೆ ಗೊತ್ತಾದ ಹೆಸರುಗಳಾಗಿವೆ. ಆದರೆ ೧೦೧ ವಿರಕ್ತರೆಂದು ನಿರ್ಣೀತರಾದವರಲ್ಲಿ ಇವರು ಮುಖ್ಯರು.

೧. ಅಕ್ಕಸಾಲೆಯ ನಾಗ

೨. ಹೊನ್ನಯ್ಯ

೩. ಮಿಡಿಬಿಲ್ಲ

೪. ಶಾಂತದೇವ

೫. ಹೇಟೆಯ ಮರುಳ

೬. ತಗರ ಕಾಳಗದ ಪ್ರಭು

೭. ಬಾಲ ಲಿಂಗಣ್ಣ

೮. ಬತ್ತಲೇಶ್ವರ

೯. ಗುರುಬಸವ

೧೦. ನಿರ್ವಾಣಿ ಬೋಳೇಶ

೧೧. ಪರಪಟ್ಟಿ

ವಿರೂಪಾಕ್ಷ ಪಂಡಿತ ಹೇಳುವ ಈ ಹೆಸರುಗಳ ಪಟ್ಟಿಯಲ್ಲಿ ಆದ್ರೀಶ, ಶಾಂತಲಿಂಗದೇಶಿಕರು, ಹೇಳುವ ಚಾಮರಸ, ಮತ್ತು ಕಲ್ಲುಮಠದ ಪ್ರಭುದೇವರು ಬರುವುದಿಲ್ಲ. ಅವರನ್ನು ಕೂಡಿಸಿ ಈ ಸಂಖ್ಯೆಯನ್ನು ೧೩೬ಕ್ಕೇರಿಸಬಹುದು. ಕರಸ್ಥಲದ ವೀರಣ್ಣೊಡೆಯನ ಹೆಸರನ್ನು ಎಲ್ಲಾರು ಹೇಳಿದ್ದರೂ, ಅವರನ್ನು ನೂರೊಂದು ವಿರಕ್ತರಲ್ಲಿ ಒಬ್ಬನೆಂದು ಪರಿಗಣಿಸಿಲ್ಲ. ಆದರೆ ಅವನೂ ವಿರಕ್ತ ಸಂಪ್ರದಾಯಕ್ಕೆ ಹೊರತಲ್ಲ. ಮೊದ ಮೊದಲು ಕರಸ್ಥಲದ ನಾಗೀದೇವರಿನಿಗೆ ಗುರುವಾದ ವೀರಣ್ಣೊಡೆಯ ನಾಗಿದೇವನಂಥ ಅಪೂರ್ವ ಶಿಷ್ಯನ ಆದೇಶದ ಮೇರೆಗೆ ಪ್ರೌಢದೇವರಾಯನ ಮಗಳನ್ನು ವಿವಾಹವಾದ. ಮುಂದೆ ವಿದ್ಯಾನಗರಿಯಲ್ಲಿಯೇ ಉಳಿದು ವೀರಶೈವ ತತ್ತ್ವ ಪ್ರಚಾರಕ್ಕೆ ನೇರವಾಗಿ ನಿಂತನೆಂದೂ ವಿರತರ ಒಂದೊಂದು ಮಹಿಮೆಯನ್ನು ದೊರೆಗೆ ಪ್ರಕಟಿಸುವಂತೆ ಮಾಡಿ ಅವನಲ್ಲಿ ವೀರಶೈವ ಧರ್ಮ ಹಾಗೂ ಭಕ್ತಿ ಮಾರ್ಗದಲ್ಲಿ ಆಸಕ್ತಿ ಹೆಚ್ಚಿಸುವಂತೆ ಮಾಡಿದ್ದನೆಂದೂ ತಿಳಿಯಬಹುದು. ಇದೊಂದು ಕಾರಣದಿಂದ ಕರಸ್ಥಲ ವೀರಣ್ಣೊಡೆಯ ವಿರಕ್ತನಲ್ಲ ಎಂಬುದು ಅನುಚಿತ.

ಡಾ.ಶಿವಾನಂದ ವಿರಕ್ತಮಠರವರು ನೂರೊಂದು ವಿರಕ್ತರನ್ನು ಎರಡು ವಿಭಾಗ ಮಾಡಿದ್ದಾರೆ. "೧. ಅಧಿಕೃತ ೧೦೧ ವಿರಕ್ತರು, ೨. ಆಧಾರಿತ ೧೦೧ ವಿರಕ್ತರು. ಅಧಿಕೃತ ವಿರಕ್ತರಲ್ಲಿ ವಿರೂಪಾಕ್ಷ ಪಂಡಿತ ಹೇಳಿರುವ ಹೆಸರುಗಳನ್ನು ಸಮಾವೇಶಗೊಳಿಸಿಕೊಂಡು ಮೋದಿಯ ರುದ್ರನ ಕಾವ್ಯದಲ್ಲಿ ಉಕ್ತರಾದ ಎಲ್ಲರನ್ನು ೧೦೧ ವಿರಕ್ತರೆಂದು ಒಡಂಬಡಿಸಿರುವರು. ಅದೃಶ್ಯನ ಕಾವ್ಯದಲ್ಲಿ ಭಕ್ತ ತತಿಗೆ ಸೇರಿದವನೆಂಬ ವಾದಗ್ರಸ್ಥ ವಿಷಯಕ್ಕೊಳಗಾದ ಆದರೆ ಭೈರವೇಶ್ವರ ಕಾವ್ಯ ಹಾಗೂ ರಾಘವಾಂಕ ಚರಿತ್ರೆಗಳಲ್ಲಿ ೧೦೧ ವಿರಕ್ತನೆಂದೇ ಪರಿಗಣಿತನಾಗಿರುವ ಚಾಮರಸ, ಕಲ್ಲುಮಠದ ಪ್ರಭುದೇವ ಕರಸ್ಥಲದ ವೀರಣ್ಣೊಡೆಯ ಈ ಮೂವರನ್ನು ಆಧಾರಿತ ೧೦೧ ವಿರಕ್ತರೆಂದು ಪರಿಭಾವಿಸಿದರು."[೬] ಈ ನೂರೊಂದು ವಿರಕ್ತರು ವೀರಶೈವ ಧರ್ಮದ ಉನ್ನತಿಗೆ ಶ್ರಮಿಸಿದವರೆಂಬ ಮನೋಭಾವ ಉಳ್ಳವರಾಗಿರುವರು.

ಡಾ. ಶಿವಾನಂದ ವಿರಕ್ತಮಠರವರು ಹಿಂದೆ ವಿದ್ವಾಂಸರು ತಮ್ಮ ಪುರಾಣ ಕೃತಿಗಳಲ್ಲಿ ಚರ್ಚಿಸಿದ ಹಿನ್ನೆಲೆಯಲ್ಲಿಯೇ ವಿರಕ್ತರನ್ನು ಕುರಿತು ಚರ್ಚಿಸಿರುವರು. ವಿರಕ್ತರ ಪ್ರತಿಯೊಂದು ಚಿಂತನೆ ಹಾಗೂ ತತ್ವಗಳಿಗೆ ಶರಣತ್ವದ ಪರಿಕಲ್ಪನೆಯನ್ನು ನೀಡಿದ್ದಾರೆ.

೪. ಶಾಂತರಸ

ಬಳ್ಳಾರಿ ಜಿಲ್ಲೆಯ ಚೇಳ್ಳಗುರಿಕೆಯಲ್ಲಿ ೧೯೭೪ ರಲ್ಲಿ ನಡೆದ ಕರ್ನಾಟಕ ವಿಶ್ವವಿದ್ಯಾಲಯದ ೧೮೦ನೆಯ ವ್ಯಾಸಂಗ ವಿಸ್ತರಣ ಉಪನ್ಯಾಸ ಶಿಬಿರದಲ್ಲಿ ಶಾಂತರಸರವರು 'ಬಳ್ಳಾರಿ ಜಿಲ್ಲೆಯ ಶಿವಶರಣರು' ಎಂಬ ವಿಷಯವನ್ನು ಕುರಿತು ಒಂದು ಉಪನ್ಯಾಸ ನೀಡಿದರು. ಆ ಉಪನ್ಯಾಸ ಕಾರ್ಯಕ್ರಮದಲ್ಲಿ ಈ ವಿರಕ್ತರನ್ನು ಕುರಿತು ಅಲ್ಪಸ್ವಲ್ಪ ಚರ್ಚಿಸಿದ್ದಾರೆ. ಆದರೆ ಅಲ್ಲಿ ಇವರನ್ನು ಭಿನ್ನವಾಗಿ

ನೋಡಲೇ ಇಲ್ಲ. ಇವರು ಆರ್.ಸಿ.ಹಿರೇಮಠ ಮತ್ತು ಮೋದಿಯರುದ್ರನ ದಾರಿಯಲ್ಲಿಯೇ ಸಾಗಿದ್ದಾರೆ. ವಿರಕ್ತರನ್ನು ಕುರಿತು ಬಂದ ಕೆಲವು ಕೃತಿಗಳನ್ನು ಹೆಸರಿಸುತ್ತ ಮೋದಿಯ ರುದ್ರ ತನ್ನ ಕೃತಿಯಲ್ಲಿ ನೀಡಿದ ವಿರಕ್ತರ ಹೆಸರನ್ನೇ ತನ್ನ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ.

ಪ್ರಾರಂಭದಲ್ಲಿ ಬರುವ ಏಳೆಂಟು ವಿರಕ್ತರ ಹೆಸರುಗಳನ್ನು ಬಿಟ್ಟು ಉಳಿದ ವಿರಕ್ತರ ಹೆಸರುಗಳು ಇಲ್ಲಿ 'ಶಾಂತ' ಎಂದು ಕೊನೆಗೊಳ್ಳುತ್ತದೆ. ಆದರೆ ನಿಜಕ್ಕೂ ಇವು ಅವರ ಅಂಕಿತನಾಮಗಳಲ್ಲ, ಅವರ ಕಾಯಕ, ಅವರು ಪಡೆದ ಅನುಭಾವ ಮುಂತಾದವುಗಳ ಪರಿಣಾಮವಾಗಿ ಈ 'ಶಾಂತ' ಹೆಸರು ಬಂದಿರಬೇಕೆಂದು ಸ್ಪಷ್ಟಪಡಿಸಿರುವರು. ಡಾ. ಆರ್.ಸಿ.ಹಿರೇಮಠರವರು ಹೇಳುವಂತೆ ಅವರ 'ಶಾಂತ' ಸ್ಥಿತಿಯಿಂದ ಜನ ಅವರನ್ನು ಆ ಅಭಿದಾನದಿಂದ ಕರೆದಿರಬೇಕೆನ್ನುವರು.

ಅಂದು ಹಂಪೆಯಂತಹ ಬಹು ಸಂಸ್ಕೃತಿಯ ಕೇಂದ್ರದಲ್ಲಿ ಹಲವು ಜಾತಿಯ, ಧರ್ಮದ ಹಾಗೂ ಅನೇಕ ವೃತ್ತಿಯಲ್ಲಿ ತೊಡಗಿದ್ದ ಜನರಿದ್ದರು. ಹೀಗಾಗಿ ನೂರೊಂದು ವಿರಕ್ತರ ಜಗತ್ತು ಬಹು ವೈವಿಧ್ಯಮಯವಾದ ಸೂಕ್ತ ನೆಲೆಯಾಗಿತ್ತೆನ್ನುವರು. ಇಲ್ಲಿ ಅನೇಕ ಬಗೆಯ ಕಾಯಕದವರಿದ್ದಾರೆ, ಕವಿಗಳಿದ್ದಾರೆ, ಆಟಗಾರರಿದ್ದಾರೆ, ಬೇಟೆಗಾರರಿದ್ದಾರೆ, ಜೂಜಾಟ ಪಂದ್ಯದವರಿದ್ದಾರೆ, ಯೋಧರಿದ್ದಾರೆ, ಡೊಂಬರರಿದ್ದಾರೆ, ವಡ್ಡರಿದ್ದಾರೆ, ವ್ಯಾಪಾರಿಗಳಿದ್ದಾರೆ, ಉಗ್ಗಡಿಸುವರಿದ್ದಾರೆ, ಡಂಗುರದವರಿದ್ದಾರೆ, ಇಂದ್ರಜಾಲ ಮಹೇಂದ್ರ ಜಾಲದವರಿದ್ದಾರೆ, ಬೊಂಬೆಯಾಟದವರಿದ್ದಾರೆ. ಇವರ ಕಾಯಕ, ಕಲೆ, ಜೀವನಗಳ ಒಂದು ಅಧ್ಯಯನ ನಡೆಸಿದರೆ ಆ ಕಾಲದ ಅನೇಕ ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ, ಆರ್ಥಿಕ, ರಾಜಕಾರಣ, ಯುದ್ಧ ಮುಂತಾದವುಗಳ ಹೊಸ ಹೊಸ ವಿಷಯಗಳು ಖಂಡಿತ ಗೋಚರಿಸುತ್ತವೆ ಎಂಬುದು ಶಾಂತರಸರ ನಿಲುವು ಇವರು ಜೀವನದ ಸಮಸ್ತ ವ್ಯವಹಾರಗಳಿಗೆ ಸಂಬಂಧಿಸಿದವರಾಗಿ, ಸಾಮಾನ್ಯ ಜನ ಜೀವನದೊಂದಿಗೆ ಬದುಕಿ ಆ ಬದುಕನ್ನು ಶಿವಾನುಭವದ ಮಟ್ಟಕ್ಕೆ ಏರಿಸಿದವರು. ಇಷ್ಟೇ ಅಲ್ಲ, ತಮ್ಮ ಶಕ್ತಿ ಸಾಹಸಗಳಿಂದ ಪ್ರಭುತ್ವವನ್ನು ಬಲಗೊಳಿಸಿದರು.

ಇವರನ್ನು ಅಲೌಕಿಕರು, ಮರುಳರು ಎನ್ನುವವರೂ ಇದ್ದಾರೆ. ಇವರ ಅಲೌಕಿಕತೆ ಲೌಕಿಕವನ್ನು ಹಸನಗೊಳಿಸಿ ಪಾರಲೌಕಿಕವನ್ನು ಈ ನೆಲದಲ್ಲಿಯೇ ಚಿಗಿಸಿದವರು. ಇವರು ಶುದ್ಧ ಮಣ್ಣಿನ ಮಕ್ಕಳು ವ್ಯವಹಾರ ತಜ್ಞರು, ಕುಶಲರು, ವೀರರು ಎಂದು ಶಾಂತರಸ ವಿರಕ್ತರನ್ನು ಗುರುತಿಸಿದ್ದಾರೆ.

ಲಿಂಗವಂತ ಧರ್ಮ, ಕನ್ನಡ ನಾಡು ಮತ್ತು ನುಡಿಗೆ ನೂರೊಂದು ವಿರಕ್ತರಿಂದ ಬಹು ವಿಶಿಷ್ಟವಾದ ಸೇವೆ ಸಂದಿದೆ. ಪ್ರೌಢದೇವರಾಯನ ಅರಸೊತ್ತಿಗೆಗೆ ಅವರು ತಮ್ಮ ಗೆಯ್ಮೆಯಿಂದ ಕಳೆ ತಂದುದಲ್ಲದೆ ಆ ಅರಸೊತ್ತಿಗೆ ನಿರಾತಂಕವಾಗಿ, ಸುಭದ್ರವಾಗಿ ಸಾಗಲು ಮಹಾಶಕ್ತಿಯನ್ನು ಒದಗಿಸಿದರು. ಇವರನ್ನು ಕುರಿತು ಲಕ್ಕಣ್ಣ ದಂಡೇಶ, ತನ್ನ ಶಿವತತ್ವ ಚಿಂತಾಮಣಿಯಲ್ಲಿ ಏನೂ ಹೇಳಿಲ್ಲ. ಇದಕ್ಕೆ ಕಾರಣ ತಿಳಿಯದು. ಈ ವಿಶಿಷ್ಟರು ಎಷ್ಟು ಜನರೆಂಬುದು ಆಗಿನ್ನೂ

ನಿಷ್ಕರ್ಷೆಯಾಗಿರಲಿಕ್ಕಿಲ್ಲ; ಆ ಕಾರಣದಿಂದ ಆತ ಇವರ ಚರಿತ್ರೆಯನ್ನು ತನ್ನ ಕಾವ್ಯದಲ್ಲಿ ಸೇರಿಸಿರಲಿಕ್ಕಿಲ್ಲ ಎಂದು ಸ್ಪಷ್ಟ ಪಡಿಸಿದ್ದಾರೆ. ಮುಂದೆ ಬಂದ ಗುಬ್ಬಿ ಮಲ್ಲಣ್ಣನಿಗೂ ಇವರ ಸಂಖ್ಯೆ ಎಷ್ಟೆಂಬುದು ತಿಳಿದಿಲ್ಲ. ಆದರೆ ಆ ಬಳಿಕ ಬಂದ ಅದೃಶ್ಯಕವಿ ಇವರ ಸಂಖ್ಯೆ ನೂರೊಂದು ಎಂದು ಹೇಳುತ್ತಾನೆ. ಈತನಿಗೆ ಇವರ ಸಂಖ್ಯೆ ಖಚಿತವಾಗಿ ತಿಳಿದಿದೆ. ಆದರೆ ಕೆಲವೇ ಜನರ ಹೆಸರು ಹೇಳುತ್ತಾನೆ. ಆ ಬಳಿಕ ಬಂದ ಕವಿಗಳೆಲ್ಲ ನೂರೊಂದು ಸಂಖ್ಯೆಯನ್ನು ಹೇಳುತ್ತಾರೆಯೇ ಹೊರತು ಅವರೆಲ್ಲರ ಹೆಸರು ಹೇಳುವುದಿಲ್ಲ. ಕ್ರಿ.ಶ. ೧೬೫೦ರಲ್ಲಿದ್ದ ರುದ್ರಕವಿ ನೂರೊಂದು ವಿರಕ್ತರಲ್ಲಿ ಮೊದಲಿಗನೂ, ಅಗ್ರಗಣ್ಯನೂ ಆದ ಕರಸ್ಥಲದ ನಾಗಲಿಂಗನ ಚರಿತೆಯನ್ನು ಸಾಂಗತ್ಯದಲ್ಲಿ ಬರೆದಿದ್ದಾನೆ. ಆದರೆ ಇವನು ಸಹ ಎಲ್ಲ ವಿರಕ್ತರ ಹೆಸರನ್ನು ಸ್ಪಷ್ಟ ಪಡಿಸಿಲ್ಲ

ಅಡಿಟಿಪ್ಪಣಿಗಳು

೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೩, ಹಂಪಿ ಶಾಸನಗಳು, (ಸಂ) ಡಾ. ದೇವರಕೊಂಡರೆಡ್ಡಿ, ಪುಟ-೨೨೬.

೨. ಷಟ್‌ಸ್ಥಲ ಪ್ರಭೆ - ಡಾ. ಆರ್.ಸಿ.ಹಿರೇಮಠ - ಪು-೨೭೮-೨೭೯

೩. ಅದೇ ಪುಟ - ೨೮೧

೪. ಮಾರ್ಗ ಸಂಪುಟ - ೩, ಡಾ.ಎಂ.ಎಂ.ಕಲಬುರ್ಗಿ - ಪು - ೨೨೯-೨೩೦

೫. ಅದೇ ಪುಟ - ೨೩೦-೨೩೧

೬. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ - ಡಾ.ಶಿವಾನಂದ ವಿರಕ್ತಮಠ - ಪುಟ- ೯೯ -೧೦೦

ಅಧ್ಯಾಯ – ಐದು

ನೂರೊಂದು ವಿರಕ್ತರ ಸಾಹಿತ್ಯ ಸಮೀಕ್ಷೆ

ಅಧ್ಯಾಯ – ಐದು

ನೂರೊಂದು ವಿರಕ್ತರ ಸಾಹಿತ್ಯ ಸಮೀಕ್ಷೆ

'ಹಂಪೆ' ಅಳಿವಿನ ಅಂಚಿನಲ್ಲಿದ್ದ ವೀರಶೈವ ಧರ್ಮ ಮತ್ತು ಸಾಹಿತ್ಯವನ್ನು ಪುನಃ ಉಳಿಸಿ ಬೆಳೆಸಿದ ಪ್ರಮುಖ ಕೇಂದ್ರವಾಗಿತ್ತು. ಈ ಧರ್ಮದ ಶ್ರಯೋಭಿವೃದ್ಧಿಗೆ ಹಲವು ಪಂಡಿತ ಪಾಮರರ ಶ್ರಮ ಅಧಿಕವಿದೆ. ಅಂದು ಅರಸ ಪ್ರೌಢದೇವರಾಯನು ಈ ಧರ್ಮದ ಬೆಳವಣಿಗೆಗೆ ಸಕಲ ರೀತಿಯಿಂದ ಶ್ರಮಿಸಿದ. ತನ್ನ ಆಸ್ಥಾನದಲ್ಲಿ ಅನೇಕ ಮಂದಿ ವೀರಶೈವ ಪಂಡಿತರಿಗೆ ಆಶ್ರಯ ನೀಡಿದ್ದ. ಈ ಪಂಡಿತರು ತಮ್ಮ ಧರ್ಮದ ಪ್ರಚಾರಗೊಸ್ಕರ ಹಲವು ವೀರಶೈವ ಪುರಾಣ ಸಾಹಿತ್ಯವನ್ನು ಸೃಷ್ಟಿಸಿದರು. ಅಲ್ಲದೆ ಅಲ್ಲಲ್ಲಿ ಚದುರಿ ಹೋಗಿದ್ದ ವಚನಗಳ ಸಂಗ್ರಹ, ಸಂಕಲನ, ಸಂಪಾದನ ಕಾರ್ಯವನ್ನು ಸಹ ತುಂಬ ಶ್ರದ್ಧೆಯಿಂದ ನೆರವೇರಿಸಿದರು. ಇವರ ಜೊತೆಗೆ ಅಂದು ವೀರಶೈವ ಮಠ ಮಾನ್ಯಗಳ ಪ್ರಭಾವ ಸಹ ವೀರಶೈವ ಧರ್ಮದ ಅಭಿವೃದ್ಧಿಗೆ ಕಾರಣವಾಯಿತು. "ಕಲ್ಯಾಣದಲ್ಲಿ ಬಸವಣ್ಣನ ಕಾಲಕ್ಕೆ ಬೇರೆ ಬೇರೆ ದೇಶಗಳಿಂದ ಶರಣರು ಬಂದಂತೆ ಪ್ರೌಢದೇವರಾಯನ ಕಾಲದಲ್ಲಿ ಅವನ ಉದಾರಾಶ್ರಯ, ಜಕ್ಕಣ್ಣ, ಲಕ್ಕಣ್ಣರ ಪ್ರೋತ್ಸಾಹ, ಕರಸ್ಥಲದ ವೀರಣ್ಣೊಡೆಯರ ನಾಯಕತ್ವ ಇವುಗಳಿಂದಾಗಿ ನಾಡಿನ ಮೂಲೆ ಮೂಲೆಗಳಿಂದ ವೀರಶೈವ ಶರಣರು ವಿಜಯನಗರವನ್ನು ಸೇರಿ, ಅಲ್ಲಿ ಧರ್ಮ ಪ್ರಚಾರ, ಸಾಹಿತ್ಯ ಪ್ರಚಾರ ಕಾರ್ಯಗಳಲ್ಲಿ ನಿರತನಾಗಿರುವಂತೆ ತೋರುತ್ತದೆ. ಪ್ರೌಢದೇವರಾಯನ ಕಾಲದಲ್ಲಿ ವೀರಶೈವದ ತತ್ವ ಪ್ರಚಾರ, ಧರ್ಮ ಪ್ರಚಾರಗಳು ಅಧಿಕ ಪ್ರಮಾಣದಲ್ಲಿ ನಡೆದು ಮೇಲ್ಮಟ್ಟವನ್ನೇ ಪಡೆದಿವೆ ಎಂಬುದಕ್ಕೆ ಈ ಶತಮಾನದಲ್ಲಿ ಬಂದ ಕಾವ್ಯ, ವಚನ, ವ್ಯಾಖ್ಯಾನ, ಸಿದ್ಧಾಂತ ಗ್ರಂಥಗಳೇ

ಸಾಕ್ಷಿ. ಈ ಕಾಲದ ವೀರಶೈವ ಕವಿಗಳು, ಪಂಡಿತರು, ಸಿದ್ಧಾಂತ, ಸಾಹಿತ್ಯ ಶಾಸ್ತ್ರಗಳನ್ನು ಅರಿತವರಾಗಿದ್ದರು. ಪ್ರೌಢದೇವರಾಯನ ಕಾಲ, ಒಂದು ದೃಷ್ಟಿಯಿಂದ ವೀರಶೈವ ಧರ್ಮದ ಪುನರುಜ್ಜೀವನಕ್ಕೆ ಕಾರಣವಾದಂತೆ ವಿಪುಲವಾದ ವೀರಶೈವ ಸಾಹಿತ್ಯ ಸೃಷ್ಟಿಗೂ ಪ್ರೇರಕವಾಯಿತು. ವೀರಶೈವ ಮಠ ಪೀಠಗಳು ಕೂಡ ಈ ಕಾರ್ಯದಲ್ಲಿ ಮಹತ್ವದ ಪಾತ್ರವಹಿಸಿದ್ದವು"[೧] ಪ್ರೌಢದೇವರಾಯನ ಕಾಲದಲ್ಲಿದ್ದ ನೂರೊಂದು ವಿರಕ್ತರ ಸಾಹಿತ್ಯ ಸೃಷ್ಟಿಯ ಕುರಿತು ಹೇಳುವುದಾದರೆ ವೀರಶೈವ ಧರ್ಮಕ್ಕೆ ಇವರ ಕೊಡುಗೆ ಅಷ್ಟೇನು ಗಣನೀಯವಾಗಿಲ್ಲ.

ಇವರು ರಚಿಸಿದ ಸಾಹಿತ್ಯ ಲಘು ಸಾಹಿತ್ಯ ಇವು ಅನುಭಾವ, ಆಧ್ಯಾತ್ಮ ಹಾಗೂ ಯೋಗಪರವಾದ ರೀತಿಯಲ್ಲಿ ಇವರ ಸಾಹಿತ್ಯ ರಚನೆಯಾದದ್ದಾಗಿದೆ. "ಹಿಂದೆ ಹಲವು ಮಂದಿ ವಿದ್ವಾಂಸರು ಚಾಮರಸ, ಕಲ್ಲುಮಠದ ಪ್ರಭುದೇವ, ಜಕ್ಕಣಾರ್ಯ, ಮಗ್ಗೆಯ ಮಾಯಿದೇವ ಮೊದಲಾದವರನ್ನು ನೂರೊಂದು ವಿರಕ್ತರೆಂದು ಈ ವಿದ್ವಾಂಸರು ಭಾವಿಸಿದ್ದರು. ಆದರೆ ಈಗ ಇವರಾರು ನೂರೊಂದು ವಿರಕ್ತರಲ್ಲವೆಂದು ಬಹುಮಟ್ಟಿಗೆ ದೃಢಪಟ್ಟಿದೆ. ಇವರನ್ನು ಹೊರತುಪಡಿಸಿದರೆ ಉಳಿಯುವ ಕರಸ್ಥಲದ ವೀರಣ್ಣ, ಕರಸ್ಥಲದ ನಾಗಿದೇವ ಮೊದಲಾದ ನೂರೊಂದು ವಿರಕ್ತರ ಧಾರ್ಮಿಕ ಕೊಡುಗೆ ತೀರ ಸಾಮಾನ್ಯ. ಬರೆದುವೂ ಕೇವಲ ಲಘು ಕೃತಿಗಳು, ವಿದ್ವಾಂಸರು ಹೇಳುವಂತೆ ಇವರು ವಚನಗಳ ಸಂಗ್ರಹ, ಸಂಕಲನ, ಸಂಪಾದನ ಕಾರ್ಯ ಮಾಡಿದುದಾಗಲಿ, ಪ್ರೇರಣೆ ನೀಡಿದುದಾಗಲಿ ಈವರೆಗೆ ಗೊತ್ತಾಗಿಲ್ಲ. ಬಹುಶಃ ಮಾಡಿದಂತೆಯೂ ಇಲ್ಲ. ಆದುದರಿಂದ ನೂರೊಂದು ವಿರಕ್ತರನ್ನು ವೀರಶೈವ ಧರ್ಮ-ಸಾಹಿತ್ಯಗಳ ಪುನರುಜ್ಜೀವನದ ಹರಿಕಾರರೆಂದು ಕರೆಯುವುದು ತಪ್ಪಾಗುತ್ತದೆ."[೨] ಅಂದು ಇದ್ದ ಎಲ್ಲಾ ನೂರೊಂದು ವಿರಕ್ತರ ಸಾಹಿತ್ಯ ಸಿಗದು. ಇವರಲ್ಲಿ ರಾಜನ ಆಸ್ಥಾನದಲ್ಲಿ ಆಶ್ರಯ ಪಡೆದಿದ್ದ ಕೆಲವೇ ಕೆಲವು ವಿರಕ್ತರು ವೀರಶೈವ ಪಂಡಿತರ ಪ್ರಭಾವಕ್ಕೆ ಒಳಗಾಗಿ ಸಣ್ಣ ಪುಟ್ಟ ಅನುಭಾವದ ಹಾಡುಗಳನ್ನು ರಚಿಸಿರುವರು. ಕರಸ್ಥಲದ ನಾಗಿದೇವ, ವೀರಣ್ಣೊಡೆಯ, ಸಪ್ತಕಾವ್ಯದ ಗುರುಬಸವ, ಬತ್ತಲೇಶ, ನಿರ್ವಾಣಿ ಬೋಳೇಶ ಇವರೇ ಪ್ರಮುಖರ ಅಲ್ಪ ಸಾಹಿತ್ಯ ದೊರೆಯುತ್ತದೆಯೋ ಹೊರತು ಇನ್ನೂಳಿದ ವಿರಕ್ತರ ಸಾಹಿತ್ಯ ಸೃಷ್ಟಿಯ ವಿಷಯ ನಿಗೂಢವಾಗಿದೆ. ಇವರಲ್ಲಿ ಕೆಲವರು ಅಕ್ಷರಸ್ಥರಿದ್ದರು ಮತ್ತೆ ಕೆಲವರು ಅನಕ್ಷರಸ್ಥರಿದ್ದರು, ಇನ್ನೂ ಕೆಲವರು ಅರೆಮರುಳರಂತಿದ್ದರು. ರಾಯನ ಅವಗಾಹಗೆ ಒಳಗಾದ ಕೆಲವೇ ವಿರಕ್ತರ ಸಾಹಿತ್ಯ ಸೃಷ್ಟಿ ದೊರೆಯುತ್ತದೆ. ಇವರು ರಚಿಸಿದ ಸಾಹಿತ್ಯವು ಅನುಭಾವ, ತತ್ವ, ಯೋಗಪರವಾದ ಅಂಶಗಳಿಂದ ಕೂಡಿದಾಗಿದೆ. ಇವರ ಸಾಹಿತ್ಯವು ಸಮಾಜೋದ್ಧಾರಕ್ಕಿಂತ ಆತ್ಮೋದ್ಧಾರದ ಕಡೆ ಹೆಚ್ಚು ಒಲವಿದೆ. ಭಕ್ತಿ, ಜ್ಞಾನ, ಯೋಗ, ವೈರಾಗ್ಯ ಮತ್ತು ಅನುಭಾವದ ಕಲ್ಪನೆ ಹೆಚ್ಚಾಗಿ ಇವರ ಸಾಹಿತ್ಯದಲ್ಲಿ ಗೋಚರಿಸುತ್ತವೆ.

ನುಡಿದರೇನು ನೋಡಿದರೇನು ಒಡನೆ ಮುಟ್ಟಿದರೇನು
ಕುಡಿದರೇನು ಮನವನು ತಡೆದ ಅಭಿಲಾಷೆ
ಯಡಗಿದ ಭಾವಶುದ್ಧರಿಗೆ'

(ಭ.ವೈ.ಭೋಗವಿಜಯ)

ಎಂಬ ರತ್ನಾಕರ ವರ್ಣಿಯ ಹೇಳಿಕೆಯನ್ನಿಲ್ಲಿ ಸ್ಮರಿಸಬಹುದು. ಅವಧೂತ ಆರೂಢ ಮಾರ್ಗವಲಂಬಿಗಳಾದ ಎಷ್ಟೋ ಸಾಧು ಸಂತರು ಇದೇ ರೀತಿ ಆಚರಿಸುತ್ತಿದ್ದರೆಂಬುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಆದರೂ ಅಂಥವರ ಬಗೆಗೆ ಜನತೆಯಲ್ಲಿ ಪೂಜ್ಯ ಭಾವನೆ ಬಂದಿರುವದಕ್ಕೆ ಆ ಸಾಧು ಸಂತರ ಅಲೌಕಿಕಾವಸ್ಥೆಯೇ ಕಾರಣವಾಗಿರುತ್ತದೆ. ಪ್ರಭು– ಗೋರಕ್ಷರ ಸಂದರ್ಭವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಸಂದರ್ಭದಲ್ಲಿ ಪ್ರಭುವು ನಿಂದರೆ ನೆರಳಿಲ್ಲದ ನಡೆದರೆ ಹೆಜ್ಜೆಯಿಲ್ಲದ ಪರಮ ಶಿವಯೋಗಿಯಾಗಿದ್ದನೆಂದು ಊಹಿಸಬಹುದಾಗಿದೆ. ಅದೇ ರಿತಿ ನಾಗಿದೇವ 'ಬಿದಿರಿ ಮಳೆಯಲ್ಲಿ ತಲೆ ಸಿಕ್ಕಿಸಿಕೊಂಡು ಶಿವಯೋಗ ನಿದ್ರಾ ಮುದ್ರಿತನಾದುದನ್ನು ನೆನೆದಾಗ ವಿರೂಪಾಕ್ಷ ಪಂಡಿತನು ಹೇಳುವಂತೆ 'ಅತಿಮರುಳರಂದದೊಳಿಪ್ಪ' ನೂರೊಂದು ವಿರತರಲ್ಲಿ ಇವನೂ ಒಬ್ಬನಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಶರೀರದ ಎಲ್ಲಾ ಭಾಗವನ್ನು ನೆಲದಲ್ಲಿ ಹೂಳಿಕೊಂಡು ತಲೆ ಕೆಳಗೆ ಮಾಡಿ ನಿಂತು ಬೇರೆ ಬೇರೆ ವಿಧಾನಗಳಿಂದ ಉಗ್ರ ತಪಸ್ಸನ್ನಾಚರಿಸಿ ಅಣಿಮಾದ್ಯಷ್ಟ ಸಿದ್ಧಿಗಳನ್ನು ಪಡೆದು ಹಠಯೋಗದಲ್ಲಿ 'ಸಿದ್ಧಿ ದೊರಕಿಸಿಕೊಂಡವರ' ಚಿತ್ರ ಇಲ್ಲಿ ನೆನಪಿಗೆ ಬರುತ್ತದೆ"[೨] ಅನುಭಾವಿಯಾದ, ನಾಗಿದೇವ ವಿರಕ್ತತನದ ಜೊತೆಗೆ ಕವಿಯಾಗಿ ಕೆಲವೊಂದು ಅನುಭಾವದ, ಯೋಗಪರವಾದ ಲಘು ಕೃತಿಗಳನ್ನು ರಚಿಸಿದ. ಅಲ್ಲದೆ ಇವನನ್ನು ಕುರಿತಾಗಿ ಹಲವು ಕೃತಿಗಳು ರಚನೆಯಾಗಿವೆ. ಒಟ್ಟಿನಲ್ಲಿ ನಿಜಗುಣಶಿವಯೋಗಿಯ ಚಿಂತನ ಕ್ರಮಕ್ಕೆ ತುಂಬ ಹತ್ತಿರವಾದ ನಾಗಿದೇವ ಯೋಗ ಹಾಗೂ ಅನುಭಾವ ಕುರಿತು ತನ್ನ ಕೃತಿಗಳಲ್ಲಿ ಹೆಚ್ಚು ಪ್ರಸ್ತಾಪಿಸಿದ್ದಾನೆ.

೧. ನಾಗಿದೇವನ ಸಾಹಿತ್ಯ

೧. ಕರಸ್ಥಲದ ನಾಗಿದೇವ ತ್ರಿವಿಧಿ, ೨. ಅಕ್ಷರದ ಚೌಪದ, ೩. ಏಕವಿಂಶತಿ ದೀಕ್ಷಾ ವಿಧಾನ, ೪. ಮಡಿವಾಳಯ್ಯನ ತಾರಾವಳಿ, ೫. ವಚನಗಳು, ೬ ಹಾಡುಗಳು.

ಕರಸ್ಥಲದ ನಾಗಿದೇವನ ತ್ರಿವಿದಿ : ಇದು ತ್ರಿಪದಿಯಲ್ಲಿ ರಚಿತವಾದ ೩೧ ಪದ್ಯಗಳಿಂದ ಕೂಡಿದಾಗಿದೆ. ಇಲ್ಲಿಯ ಪದ್ಯಗಳು ಎಲ್ಲವೂ ಗೂಢಾರ್ಥವುಳ್ಳವಾಗಿವೆ. ಕರಸ್ಥಲದ ನಾಗಿದೇವನು ಯೋಗಭ್ಯಾಸದಲ್ಲಿ ಪರಿಣಿತನೂ, ಪ್ರಾಣಲಿಂಗಿಸ್ಥಲದ ಸೂಕ್ಷ್ಮ ವಿಚಾರಗಳನ್ನು ಅರಿತು ಆಚರಿಸುವವನೂ, ಆಗಿದ್ದನೆಂಬುದಕ್ಕೆ ಅವನೇ ರಚಿಸಿದ 'ತ್ರಿವಿಧಿ'ಯೊಂದು ಆಂತರಿಕ ಆಧಾರವಾಗಿದೆ. ಅಲ್ಲದೆ

ಯೋಗ ಪರವಾದ, ಅನುಭಾವ ಪರವಾದ ವಿಚಾರಗಳು ಇಲ್ಲಿ ಕಂಡು ಬರಲು ಸಾಧ್ಯ "ನಾಗಿದೇವನ ಭಾಷೆ ತತ್ವಪೂರ್ಣವಾಗಿದೆ. ಬೆಡಗಿನ ರೂಪದಲ್ಲಿ ಯೋಗದ ವಿಚಾರಗಳನ್ನು ಅವನು ಮುಂದಿಡುತ್ತಾನೆ.

ಉಟ್ಟ ಸೀರೆಯ ಬಿಟ್ಟು ಉಣ್ಣದೂಟವನುಂಡು
ಬಟ್ಟಬಯಲಾದ ಘನ ಸುಖದ ಹಾರೈಕೆ
ದಿಟ್ಟನಿಗಲ್ಲದೇ ಬರಿದುಂಟೆ

ಅಜ್ಞಾನವೆಂಬ ಪರದೆಯನ್ನು ಹರಿದೊಗೆದು, ಲೋಕದ ಹಂಗಿನೂಟವನುಣ್ಣದೆ, ಶುದ್ಧ-ಸಿದ್ಧ-ಪ್ರಸಿದ್ಧ ಪ್ರಸಾದವನ್ನು ಸ್ವೀಕರಿಸಿ, ನಿರಾಕಾರದ ನಿಜವನರಿದು ಬಯಲು ಪುತ್ಥಳಿಯಾದ ನಿತ್ಯ ಸುಖಗಳನ್ನಿಲ್ಲಿ ಎಂದು ನಾಗಿದೇವ ವರ್ಣಿಸುತ್ತಾನೆ"[೪] ಕವಿಚರಿತೆಕಾರರು ಈ ಕೃತಿಯಿಂದ ಕೆಲವೊಂದು ಪದ್ಯಗಳನ್ನು ಸಂಗ್ರಹಿಸಿದ್ದಾರೆ. ಅವುಗಳು ಈ ಕೆಳಗಿನಂತಿದೆ.

ನಾಲ್ಕು ಮನೆಯ ಮುಂದೆ ನಾಲ್ಕು ದೇಗುಲವಿದೆ
ನಾಲ್ಕು ಹನ್ನೆರಡು ಚೌಕದ
ನಾಲ್ಕು ಹನ್ನೇರಡು ಚೌಕದ ಬಾಗಿಲು
ಓಂಕಾರದಲ್ಲಿ ಮುಚುಗಿತು

ಇಲ್ಲಿ ನಾಗಿದೇವ ವಿಶಿಷ್ಟವಾದ ತತ್ವದ ಅಡಿಯಲ್ಲಿ ಕೆಲವೊಂದು ಸಾಂಕೇತದ ಮೂಲಕ ಯೋಗ, ಆಧ್ಯಾತ್ಮ, ಹಾಗೂ ಅನುಭಾವ ಪರವಾದ ವಸ್ತು ವಿಷಯವನ್ನು ಈ ಮೇಲಿನ ಪದ್ಯ ತಿಳಿಸುತ್ತದೆ. ಹೀಗೆ ಅನುಭಾವಪರ, ತತ್ವಪರವಾದ ಹಲವು ಪದ್ಯಗಳು ಇವನಲ್ಲಿ ಕಾಣಬಹುದು.

ಈ ತ್ರಿವಿಧಿಯ ಕುರಿತು ಪರ್ವತ ಶಿವಯೋಗಿಯವರು ಕರಸ್ಥಲ ನಾಗಿದೇವನ ತ್ರಿವಿಧಿಗೂ ಟೀಕೆ ಬರೆದಿದ್ದಾನೆ. ಇದು ೧೬೫೦ರಲ್ಲಿ ರಚಿತವಾದ ಒಂದು ಕನ್ನಡ ವ್ಯಾಖ್ಯಾನವಾಗಿದೆ.

ಅಕ್ಷರ ಚೌಪದ : ಈ ಅಕ್ಷರ ಚೌಪದವು ನಾಗಲಿಂಗನ ಕೃತಿಯೆಂದು ಸ್ಪಷ್ಟವಾಗಿ ಹೇಳಲಾರದು. ಏಕೆಂದರೆ ಇದರಲ್ಲಿ ಬರುವ ಪದ್ಯಗಳಲ್ಲಿ 'ನಾಗಲಿಂಗ'ವೆಂಬ ಅಂಕಿತದ ಮೂಲಕ ಇದು ನಾಗಲಿಂಗನದೆಂದು ವಿದ್ವಾಂಸರು ಪರಿಗಣಿಸಿದ್ದಾರೆ. ಆದರೆ ಹಿಂದಿನ ಕೆಲವು ಕೃತಿಗಳಲ್ಲಿ 'ಗುರುಶಾಂತಲಿಂಗ'ನೆಂಬ ಅಂಕಿತವು ನಾಗಲಿಂಗನೆಂದು ಪರಿಗಣಿಸಿದ್ದೇವೆ. "ಶ್ರೀ ಗುರು ಕರಸ್ಥಲದ ನಾಗಲಿಂಗಯ್ಯನವರನ್ನು ಮಾಡಿದಕ್ಷರದ ಚೌಪದಿ"[೫] ಎಂದಿರುವುದರಿಂದ ಇದನ್ನು ಯಾರೋ ಪ್ರತಿಕಾರರು ಇವನಿಗೆ ಅಳವಡಿಸಿ ಹೇಳಿದಂತಿದೆ.

ಏಕವಿಂಶತಿ ದೀಕ್ಷಾ ವಿಧಾನ : ಕರಸ್ಥಲನಾಗಿದೇವನು ದೀಕ್ಷೆಗೆ ಸಂಬಂಧಿಸಿದಂತೆ ರಚನೆಯಾದ ಕೃತಿಯಾಗಿದೆ. "ಇದರಲ್ಲಿ ೨೧ ಪದ್ಯಗಳಿವೆ, ವಾರ್ಧಕಷಟ್ಪದಿಯಲ್ಲಿ ನಿರೂಪಿತವಾದ ಈ ಕೃತಿ, ನಾಗಿದೇವನ ತತ್ತ್ವ ನಿರೂಪಣೆಗೆ ನಿದರ್ಶನವಾಗಿದೆ."[೬]

ಗುರುಶಾಂತಲಿಂಗ ಮೂರೇಳು ದೀಕ್ಷೆಯನ್ನಿತ್ತ
ತೆರನಪೇಳುವೆನೆನ್ನ ಮತಿಗೆ ತಕ್ಕಂತದನು
ಶರಣ ಜನರಾಲಿಪುದು ಪಾಲಿಪುದು ದನರಿವಿಂದ ಶಿಶುವಾದ ಕತದಿಂ.

ನಾಗಿದೇವನ ತ್ರಿವಿಧಿಯಲ್ಲಿನ 'ಗುರುಶಾಂತಲಿಂಗ' ಅಂಕಿತವೇ ಇಲ್ಲಿಯೂ ಇರುವುದರಿಂದ ಇವು ಏತತ್ಕೃತವೆಂಬುದರಲ್ಲಿ ಸಂದೇಹವಿಲ್ಲ. ಈ ದೀಕ್ಷಾ ವಿಧಾನದಲ್ಲಿ ಒಂದೊಂದು ದೀಕ್ಷೆಗೆ ಸಂಬಂಧಿಸಿ ೨೧ ಪದ್ಯಗಳಿವೆ. ಆರಂಭದಲ್ಲಿ ತನು ದೀಕ್ಷೆಗೆ ಸಂಬಂಧಿಸಿದಂತೆ ಆಜ್ಞಾದೀಕ್ಷೆ, ಉಪಮಾದೀಕ್ಷೆ, ಸ್ವಸ್ತಿಕಾರೋಹಣ ದೀಕ್ಷೇ, ಲಿಂಗಸ್ವಯತ ದೀಕ್ಷೆಗಳ ವಿವರಣೆ ಇದೆ.

ಮಲತ್ರಯಂಗಳ ಕಳೆದ ಕರಣದಿಂ ಭವಿಸಂಗ
ಉಳಿದನ್ಯ ದೈವಸ್ಥಾವರ ಹರಕೆಯುಪವಾಸ
ಕಳೆದು ದಶದ್ರೋಹಾದಿಗಳ ಬಿಡಿಸಿ ಷಡ್ವರ್ಗ ಸಪ್ತವ್ಯಸನಾದಿಗಳನು
ತೊಳೆದು ಡಂಭಕ ಹಮ್ಮು ಹೆಮ್ಮುಗಳ ಸಂಹರಿಸ
ಲಳವಡಿಸಿ ಸಿದ್ಧಶ್ರೀ ಕ್ಷಮ ಶಾಂತಿಯಲಿ ಕರುಣೆ
ಗಳ ಹೃದಯದೊಳುಬಿತ್ತಿ ಕರಣಗಳ ಹರಿಯಲ್ಕೆ ತಾನದಾಜ್ಞ್ ದೀಕ್ಷೆಯು॥"[೬]

ಎಲ್ಲಾ ದೀಕ್ಷೇಗಳಿಗೂ ಮೂಲವಾದ ಆಜ್ಞಾದೀಕ್ಷೆಯ ಅಗತ್ಯವನ್ನು ಅದರ ಉದ್ದೇಶವನ್ನು ಕವಿ ನಾಗಿದೇವ ಸಹಜ ಸುಂದರವಾಗಿ ಇಲ್ಲಿ ಹೇಳ ಹೋಗಿದ್ದಾನೆ. ಮುಂದೆ ಮನದೀಕ್ಷೆಯಲ್ಲಿ ಸಮಯ ದೀಕ್ಷೆ, ನಿಸ್ಸಂಸಾರಿದೀಕ್ಷೆ, ನಿರ್ವಾಣ ದೀಕ್ಷೆ, ತತ್ವದೀಕ್ಷೆ, ಆತ್ಮದೀಕ್ಷೆ, ಅನುಗ್ರಹ ದೀಕ್ಷೆ, ಸತ್ಯಶುದ್ಧ ದೀಕ್ಷೆ, ಏಕಾಗ್ರದೀಕ್ಷೇ, ದೃಢದೀಕ್ಷೆ, ಪಂಚೇಂದ್ರಿಯಾರ್ಪಿತ ದೀಕ್ಷೆ, ಅಹಿಂಸಾದೀಕ್ಷೆ, ಲಿಂಗನಿಷ್ಠಾ ದೀಕ್ಷೆ, ಮನೋಲಯ ದೀಕ್ಷೆ, ಸದ್ಯೋನ್ಮುಕ್ತಿ ದೀಕ್ಷೆಗಳ ಪ್ರತಿಪಾದನೆಯಿದೆ"[೮]

ವಚನಗಳು : ಕರಸ್ಥಲನಾಗಿದೇವನು ತ್ರಿವಿಧಿಯನ್ನು ಬರೆದಂತೆ, ವಚನಗಳನ್ನು ಬರೆದಿರುವುದೂ ಒಂದು ವಿಶೇಷ. ೧೨ನೇಯ ಶತಮಾನದ ವಚನಕಾರರು ವಚನಗಳನ್ನು ಗದ್ಯ–ಪದ್ಯ ಮಿಶ್ರಿತವಾದ ಭಾವನೀಮಿತದ ರೂಪದಲ್ಲಿ ಬರೆದಿದ್ದರೆ ನಾಗಿದೇವ ವಚನಗಳನ್ನು ವಾರ್ಧಕ ಷಟ್ಪದಿಯಲ್ಲಿ ರಚಿಸಿದ್ದಾನೆ. ಇವನ ಸುಮಾರು ೯ ವಚನಗಳು ಉಪಲಬ್ಧವಾಗಿದೆ.

ಸತ್ಯದಕ್ಕಿ ಹಸೆಯನಿಕ್ಕಿ, ಭಕ್ತಿ ತಾಂಬೂಲವಿರಿಸಿ
ಚಿತ್ತದಮಲ ತೈಲದಿಂದ ಜ್ಯೋತಿ ಬೆಳಗಲು
ನಿತ್ಯಪ್ರಣವದಾದಿಯಕ್ಷರಂಗಳ ಬೋಧಿಸಿ ಜ್ಞಾನ
ಚಿತ್ತದಿಂದ ಹೊಯ್ದು ನಿನ್ನ ಮತ್ತಾ ಜಡವನೋಡಿಸುವೆನು."[೯]

ಹಾಡುಗಳು : 'ಗುರುಶಾಂತ' 'ಗುರುಕರುಣಿಶಾಂತ' ಎಂಬ ಅಂಕಿತದಲ್ಲಿ ಇವನು ಬರೆದ ಸುಮಾರು ಒಂಬತ್ತು ಹಾಡುಗಳೂ ಇದೀಗ ಉಪಲಬ್ದವಾಗಿವೆ. ಶಿವಲಿಂಗದೇವನ ಶಿವಯೋಗ ಪ್ರದೀಪಿಕೆ. ಈ ಹಾಡುಗಳ ಆಕಾರ ಗ್ರಂಥವಾಗಿದೆ. ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ದೊರಕಿದ ಇದರ ಒಂದು ಪ್ರತಿ 'ಬೆಡಗಿನ ಸ್ವರ ಪದಗಳು' ಎಂದಿರುವದರಿಂದ ಇಲ್ಲಿರುವ ಹಾಡುಗಳ ಸ್ವರೂಪವೆಂಥದೆಂಬುದು ನಮಗೆ ಗೊತ್ತಾಗುತ್ತದೆ. ನಾಗಿದೇವನ ಹಾಡುಗಳು ವಿಶೇಷತ: ನಾಲ್ಕು ಸಾಲುಗಳ ಮಟ್ಟುಗಳಲಿದ್ದು ಕೆಲವು ಪದ, ವಚನ ಸಮ್ಮಿಶ್ರವಾಗಿದೆ.

'ಅಂತರಂಗವ ನೋಡು'
ಬರಿಯ ಬೊಮ್ಮದ ಮಾತುಕೇಡು
ಗುರುಕರಣವ ಪಡಿದಂತರಂಗವ ನೋಡು ॥ ಪಲ್ಲವಿ॥"[೨೦]

ಈ ಪದ್ಯದ ಧಾಟಿ ಸರಳವೂ, ತತ್ತ್ವಪೂರಿತವೂ ಆಗಿದೆ. ಅಲ್ಲದೆ ಮುಂದೆ ತಾನು ಹೇಗೆ ಯೋಗಿಯಾದೆನೆಂಬುದನ್ನು ಪರ್ಯಯವಾಗಿ ಹೇಳುವಂತಹ ಒಂದು ಪದ್ಯ ಇಂತಿದೆ.

ರಾಗ : ದೇಶಿ

"ಆರು ಬಲ್ಲರು ಶಿವಯೋಗದ ನೆಲೆಯ?
ಊರಿಂದ ಹೊರಗಾದನಾಮಿಕಗಲ್ಲದೆ! ॥ ಪಲ್ಲವಿ॥
ನಾರಿಯೋರ್ವಳ ವಿಷಯ ದೋಜದೆ ಕಂಡು
ನೀರೊಳಗಣ ಕಿಚ್ಚನುರುಹಿ ಕೊಂಡು
ಗಾರುಗಾರೆನೆ ಸುಟ್ಟು ಸುರಿಕಂಡವನೆ ಮಾಡಿ
ಓರಂತೆ ತಿನುತಿಹ ನಾಮಿಕಗಲ್ಲದೆ"[೨೧]

'ಜಾತಿ, ಜನನ ಸೂತಕ ವಿರಹಿತನಾಗಿ ದೇಹವನ್ನು ಶುದ್ಧವಾಗಿಸಿಕೊಂಡವನೇ ಊರಿಂದ ಹೊರಗಾದ ಅನಾಮಿಕ, ಮಾಯಾಪಾಶಕ್ಕೆ ಒಳಗಾಗದೇ ಮನಸ್ಸೆಂಬ ತಿಳಿನೀರ ತಳದಲ್ಲಿ ಹುದುಗಿದ ಜ್ಞಾನಾಗ್ನಿಯ ಕಿಚ್ಚಿನಿಂದ ವಿಷಯಗಳನ್ನು ಸುಟ್ಟು ಸಮರಸ ಭಕ್ತಿಯಲ್ಲಿ ಅವಿರಳಾನಂದವನ್ನು ಪ್ರತಿಪಾದಿತವಾಗಿದೆ.

೨. ಕರಸ್ಥಲದ ವೀರಣ್ಣೊಡೆಯ

ಚಾರಿತ್ರಿಕ ವ್ಯಕ್ತಿಯಾಗಿ ಕಂಗೊಳಿಸಿದ ಕರಸ್ಥಲದ ವೀರಣ್ಣೊಡೆಯ ಪ್ರೌಢದೇವರಾಯನ ಮಂತ್ರಿಯಾಗಿ, ಅಳಿಯನಾಗಿ ಅಂದು ಪ್ರಸಿದ್ಧತೆಗಳಿಸಿದ್ದ. ನೊರೊಂದು ವಿರಕ್ತರೊಂದಿಗೆ ಅನ್ಯೂನ್ಯ ಸಂಬಂಧ ಹೊಂದಿದ ಇವನು ಅರಸ ಪ್ರೌಢದೇವರಾಯನಿಗೆ ಎಲ್ಲಾ ವಿರಕ್ತರ ಪರಿಚಯ ಮಾಡಿಸುವನು. ವಿರಕ್ತರಲ್ಲಿ ಆದಿಯಾದ ಕರಸ್ಥಲದ ನಾಗಿದೇವನಿಗೆ ಗುರುವಾಗಿದ್ದ ಇವನು

ದಕ್ಷಿಣ ಕರ್ನಾಟಕದಿಂದಲೇ ಹಂಪೆಗೆ ಆಗಮಿಸಿ ರಾಜನ ಆಶ್ರಯ ಪಡೆದಿದ್ದ. ಇವನ ಹೆಸರಿನ ಪರಿಯನ್ನು ನೋಡಿದರೆ ಅಂದು, ಲಕ್ಕಣ್ಣ, ಜಕ್ಕಣ್ಣ, ಮುದ್ದಣ್ಣ, ನಾಗಣ್ಣ ಹಾಗೂ ಮಲ್ಲಣ್ಣ ಮೊದಲಾದ ವೀರಶೈವ ಮಹಾಮಂತ್ರಿಗಳಲ್ಲಿ ಒಬ್ಬನಾಗಿ ಕಂಡು ಬರುವನು. ಇವನು ರಾಜನ ಪರಿವಾರದಲ್ಲಿದ್ದರು ಕೆಲವೊಂದು ವೇಳೆಯಲ್ಲಿ ರಾಜಯೋಗಿಯಾಗಿ ಮೆರೆಯುತ್ತಿದ್ದ. ನಾಗಿದೇವನಂತೆ ಪವಾಡ ಸಾದೃಶ್ಯ ವ್ಯಕ್ತಿಯಾಗಿದ್ದ ವೀರಣ್ಣೊಡೆಯ ವೈರಾಗಿಯಾಗಿದ್ದ, ಮದುವೆಯಾಗಿ ಮಕ್ಕಳನ್ನು ಪಡೆದು ಕೊನೆಗೆ ಸಂಸಾರವನ್ನೇ ತೊರೆದು ನಾಗಿದೇವನ ಜೊತೆ ದೇಶ ಪರ್ಯಾಟನೆಗೆ ತೊಡಗುವನು. ಅಷ್ಟ ಭೋಗಗಳನ್ನು ತೊರೆದು ಮಡದಿ ಮಕ್ಕಳನ್ನು ಮರೆತು ವಿದ್ಯಾನಗರವನ್ನು ಬಿಟ್ಟು ನಾಗಿದೇವನೊಡನೆ ನಿತ್ಯ ನಿರ್ವಯಲ ಪದವಿಯನ್ನು ಪಡೆಯುತ್ತಾನೆ. ಈತನು ೧.ಕರಸ್ಥಲದ ವೀರಣ್ಣಗಳ ವಚನ, ೨. ಕರಸ್ಥಲ ವೀರಣ್ಣೊಡೆಯರ ಕಂದ, ೩. ಇಷ್ಟಲಿಂಗ ಚರಿತೆ, ೪. ಲಿಂಗ ಸೂತ್ರದ ವಚನ. ಇವುಗಳನ್ನು ರಚಿಸಿದಂತೆ ತಿಳಿದುಬರುತ್ತದೆ.

ವೀರಣ್ಣಗಳ ವಚನ : ಇವನ ವಚನಗಳ ಕುರಿತು ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ. "ಕವಿಚರಿತೆಕಾರರು ತಮ್ಮ ಕವಿಚರಿತೆಯ ಮೂರು ಸಂಪುಟಗಳಲ್ಲಿ ಹೆಸರಿಸದೇ ಹೋದ ಒಂದು ಅನುಬಂಧದಲ್ಲಿ ಕರಸ್ಥಲದ ವೀರಣ್ಣಗಳ ವಚನವೆಂಬ ಒಂದು ಕೃತಿಯನ್ನು ಮಾತ್ರ ಉಲ್ಲೇಖಿಸಿದ್ದಾರೆ.

ಈ ವಚನಗಳ ಬಗೆಗೆ ಅವರೂ ಸಹ ಏನನ್ನು ಹೇಳಲು ಹೋಗಿಲ್ಲ. ಪ್ರಾಯಶಃ ಅವುಗಳ ಮುದ್ರಿಕೆ ಮತ್ತು ವಚನಗಳು ಅವನ ಕೈಗೆ ದೊರೆತಂತೆ ಕಾಣುವದಿಲ್ಲ."[೮]

ಕರಸ್ಥಲ ವೀರಣ್ಣೊಡೆಯರ ಕಂದ : ಹಳೆಗನ್ನಡ ಶೈಲಿಯಲ್ಲಿ ರಚನೆಯಾದ ಈ ಕೃತಿಯು ೨೫ ಕಂದ ಪದ್ಯಗಳನ್ನೊಳಗೊಂಡ ಒಂದು ಲಘು ಸ್ತೋತ್ರ ರಚನೆಯಾಗಿದೆ.

"ಉಡುಗಡಣದೊಡೆಯ ನೊಡಪಂ
ಘುಡು ಘುಡಿಸುವ ಜಡನಿತೆಯ ನಡುಜೆಡೆಯೆಡೆಯಂ
ಹೊಡಗಳೆಡಸವಿಡದ ಕಾಂತಿಯ
ಮೃಡನಡಿಯ ಕಂಡೆನೆನ್ನ ಕರಕಮಲದೊಳುಂ
ಏಳವಾಳೇಯ ನಳನಳಿಕೆಯ
ಥಳಥಳಿಸಿಯೆ ಪೊಳೆವ ಕಾಂತಿಯ ಚೆಲುವಿಂದಂ
ಛಳನಿರಿಯ ಮಗಳು ಕುಳಿತಿದ
ವೊಳುದೊಡೆಯವನಡಿಯ ಕಂಡೆ ಕರಕಮಲದೊಳುಂ"[೧೩]

ಇಲ್ಲಿನ ಪ್ರಾಸಾನುಪ್ರಾಸಾದ ರೀತಿ ಗಮನೀಯವಾಗಿದೆ. ಕನ್ನಡ ಪದಗಳ ಬಳಿಕೆಯಲ್ಲಿ ಕವಿ ಭಾಷೆಯ ಜಾಯಮಾನವನ್ನರಿತಿರುವನು. 'ಛಳಿಗಿರಿಯ ಮಗಳೂ' ಎಂಬಲ್ಲಿ ಅಚ್ಚಗನ್ನಡ

ಸಮಾಸ ರಚನೆ ಸೊಗಸಾಗಿದೆ. ಇದೊಂದು 'ಆಧ್ಯಾತ್ಮರಸ'ದ ಸ್ತೋತ್ರಗೀತೆ. ಕವಿ ಭಕ್ತಿ ಭಾವದ ಪರವಶದಲ್ಲಿ ಪರಮಾತ್ಮನ ಸ್ತುತಿಗೈದಿದ್ದಾನೆ. 'ಕೋಟಿರವಿ ಶಶಿ ತಟಿತ್ಪ್ರಭೆಯುಳ್ಳ ಪರಮಾತ್ಮನನ್ನು ತನ್ನ ಪದ ಪೀಠದಲ್ಲಿ ಕಂಡು ಪುಳಕಿತನಾಗಿದ್ದಾನೆ. 'ಅಜಹರಿಸುರಮನು ಮುನಿಗಳ ಭಜಿಸುವ ಬಾಧೆನೆಗೆ ಸಿಲುಕದ ಜಡದ್ವಯ'ನನ್ನು ಕರಕಮಲದಲ್ಲಿ ಕಂಡು ಪೂಜಿಸಿದ್ದಾನೆ. ಪ್ರತಿ ಪದ್ಯಾಂತದಲ್ಲಿ ಬರುವ ಕಂಡೆನೆನ್ನ ಕರಮಲದೊಳು' ಎಂಬ ಮುದ್ರಿಕೆ ವಿಶಿಷ್ಟವಾಗಿದ್ದು ಇವನನ್ನು ಮುಂದಿನವರು 'ಕರಸ್ಥಲದ ವೀರಣ್ಣೊಡೆಯ ಎಂಬ ಪ್ರಶಸ್ತಿಯಿಂದ ಕರೆಯಲು ಇದು ಕಾರಣವಾಗಿದೆ.

ಇಷ್ಟಲಿಂಗ ಚರಿತೆ : ಕರಸ್ಥಲದ ವೀರಣ್ಣೊಡೆಯನ ಇನ್ನೊಂದು ಮಹತ್ವ ಕೃತಿ ಇದಾಗಿದೆ. ವಾರ್ಧಕ ಷಟ್ಪದಿಯಲ್ಲಿ ರಚನೆಯಾದ ಈ ಕೃತಿ ಅತ್ಯಂತ ಮಹತ್ವದ್ದಾಗಿದೆ.

"ಅಹಾ ಮಹಾದೇವಾನೇಂ ಕೃತಾರ್ಥನೋ
ನಾಹಂ ಸೋಹಂ ಕೋಹಮೆಂಬ ಮೂರು ಭ್ರಮೆಯ
ಲೋಹಿನೋಳಾ ತೊಡಕದ ಷಟ್‌ಸ್ಥಲ ಬ್ರಹ್ಮವರ ಕಾಡೆಂ ಕರಸ್ಥಲದೊಲ"[೪]

ಮೇಲಿನ ಪದ್ಯಾರ್ಥದ ಅಂತ್ಯದಲ್ಲಿನ 'ಕಂಡೆಂ ಕರಸ್ಥಲದೋಳು' ಎಂಬುದು ವೀರಣ್ಣೊಡೆಯನ ಕಂದ ಪದ್ಯಗಳಲ್ಲಿ ಬರುವ 'ಕಂಡೆನೆನ್ನ ಕರಕಮಲದೊಳು' ಎಂಬುದಕ್ಕೆ ಸಮಾನವಾಗಿರುವದರಿಂದ ಇದು ಕೂಡ ವೀರಣ್ಣೊಡೆಯನದೇ ರಚನೆ ಎಂಬ ಸಂಗತಿಗೆ ಬಲ ದೊರಕುತ್ತಿದೆ (ಪ್ರ.ಕಾ.ಕ.ಸಾ.ಪು–೧೩೦). ವೀರಣ್ಣೊಡೆಯ ಇಲ್ಲಿ ಇಷ್ಟಲಿಂಗದ ಕುರಿತು ಹೆಚ್ಚು ಪ್ರಸ್ತಾಪ ಮಾಡಿದಂತೆ ಕಂಡುಬರುತ್ತದೆ.

ವೀರಣ್ಣೊಡೆಯ 'ಲಿಂಗಸೂತ್ರದ ವಚನ' ಎಂಬ ಇನ್ನೊಂದು ಕೃತಿ ಬರೆದಂತೆ ಕಾಣುತ್ತದೆ. ಆದರೆ ಇದರ ಬಗೆಗೆ ಹೆಚ್ಚಿನ ಮಾಹಿತಿ ದೊರೆಯಲಾರದು. ಪ್ರಾಯಶಃ ಇಷ್ಟಲಿಂಗ ಚರಿತೆ ಮತ್ತು ಲಿಂಗಸೂತ್ರದ ವಚನ ಎಂಬ ಹೆಸರಿನಿಂದ ಒಂದೇ ಕೃತಿ ಚಲಾವಣೆಯಲ್ಲಿದೆಯೋ ಎಂಬುದನ್ನು ಶೋಧಿಸಿ ನೋಡುವ ಅಗತ್ಯವಿದೆ.

೩. ಸಪ್ತಕಾವ್ಯದ ಗುರುಬಸವ

ಕನ್ನಡ ಸಾಹಿತ್ಯದಲ್ಲಿ ವೇದಾಂತಗ್ರಂಥಗಳನ್ನು ಬರೆದವರಲ್ಲಿ ಗುರುಬಸವ ಕವಿ ಗಣ್ಯನಾಗಿರುವನು. ಇವನು ೧. ಮನೋವಿಜಯ ಕಾವ್ಯ ೨. ಸದ್ಗುರು ರಹಸ್ಯ ೩. ಕಲ್ಯಾಣೇಶ್ವರ, ೪. ಸ್ವರೂಪಾಮೃತ ೫. ವೃಷಭಗೀತೆ, ೬. ಅವಧೂತಗೀತೆ ಎಂಬ ಗ್ರಂಥಗಳನ್ನು ಬರೆದಿದ್ದಾನೆ. 'ಗುರುಬಸವನ ವಚನಗಳು' ಎಂಬ ಮತ್ತೊಂದು ಹಾಡುಗಬ್ಬ ಉಂಟೆಂದು ಕನ್ನಡ ಕವಿ ಚರಿತ್ರಿಕಾರರು ಹೇಳುತ್ತಾರೆ. ಈ ಕವಿಯು ಮನೋವಿಜಯದಂತೆ ಹಲವು ಪ್ರಸಿದ್ಧವಾದ ಏಳು ವೇದಾಂತ ಗ್ರಂಥಗಳನ್ನು ಬರೆದಿರುವುದರಿಂದ ಈತನನ್ನು ಜನರು ಸಪ್ತಾಕಾವ್ಯದ ಗುರುಬಸವ

ಎಂದು ಪ್ರಿಯವಾದ ಹೆಸರಿನಿಂದ ಕರೆದರೆಂದು ತೋರುತ್ತಾನೆ. "ಈತನಿಗೆ ಶಿವಯೋಗಿ ಜನಸೇವಿತ ಚರಣಾರವಿಂದ, ಷಟ್ಸ್ಥಲಜ್ಞನ ಪ್ರಭಾಪುಂಜರಂಜಿ ತಾತಿತಾರಂಗ, ವೀರಶೈವ ಮತಸ್ಥಾಪನಾಚಾರ್ಯ ಮೊದಲಾದ ಬಿರುದುಗಳಿದ್ದಂತೆ ತಿಳಿದು ಬರುತ್ತದೆ. ಈ ಬಿರುದುಗಳಿಂದ ಈತನು ತನ್ನ ಸಮಕಾಲೀನದಲ್ಲಿ ಅತ್ಯಂತ ಪ್ರಸಿದ್ಧ ವಿದ್ವಾಂಸನೂ ಪ್ರಭಾವಿಶಾಲಿಯು ಆಗಿದ್ದನೆಂದು ತೋರುತ್ತಾನೆ."[೮೫]

ಗುರುಬಸವನು ಸಪ್ತಕಾವ್ಯದ ಗುರುಬಸವನೆಂದು, ಯೋಗದ ಗುರುಬಸವನೆಂದು ಪ್ರೌಢದೇವರಾಯನ ಕಾಲದಲ್ಲಿ ಜನಪ್ರಿಯನಾಗಿದ್ದ, ಆದರೆ ಕೆಲವು ವಿದ್ವಾಂಸರು ಕೊಟ್ಟೂರು ಗುರುಬಸವನೇ ಸಪ್ತಕಾವ್ಯದ ಗುರುಬಸವನಾಗಿದ್ದಂತಿದೆ ಎಂದು ಚರ್ಚಿಸಿದ್ದಾರೆ. ಆದರೆ ಅದು ತಪ್ಪೆಂದು ಈಗ ದೃಢಪಟ್ಟಿದೆ. "ಹಂಪೆಯ ನೂರೊಂದು ಮಂದಿ ವಿರಕ್ತರಲ್ಲಿ ಒಬ್ಬನಾಗಿದ್ದ ಗುರುಬಸವನು ಶಿವಮೊಗ್ಗ ಜಿಲ್ಲೆಯ ಕ್ಯಾಸನೂರು ಮಠಕ್ಕೆ ಅಧ್ಯಕ್ಷನಾಗಿದ್ದುಕೊಂಡು ಶಿವಯೋಗದಲ್ಲಿ ಪರಿಪೂರ್ಣತೆ ಪಡೆದು ಪ್ರೌಢದೇವರಾಯನ ಕಾಲದಲ್ಲಿ ಹಂಪೆಗೆ ಬಂದು ನೂರೊಂದು ಜನ ವಿರಕ್ತರ ಮಧ್ಯದಲ್ಲಿ ಮೆರೆದು ಅಲ್ಲಿಯೇ ನಿರವಲಯಲಾಪನು ಎಂಬುದಾಗಿ ತಿಳಿದು ಬರುತ್ತದೆ."[೮೬] ಈತನ ಕೃತಿಗಳ ವಿಶೇಷತೆಯನ್ನು ಈ ಕೆಳಗೆ ಸಮೀಕ್ಷಿಸಲಾಗಿದೆ.

ಶಿವಯೋಗಾಂಗ ವಿಭೂಷಣ : ಗುರುಬಸವನ ಸಪ್ತಾಕಾವ್ಯಗಳಲ್ಲಿ ಇದು ಮೊದಲ ಕೃತಿಯಾಗಿದೆ. ಡಾ. ಎಮ್.ಎಸ್. ಸುಂಕಾಪುರ ಮತ್ತು ಪಂ. ನಾಗಭೂಷಣಶಾಸ್ತ್ರಿಗಳು 'ಯೋಗಾಂಗ ವಿಭೂಷಣ'ವೆಂದು ಇದನ್ನು ಸಂಪಾದಿಸಿದ್ದಾರೆ. ಇದು ಪರಿವರ್ಧಿನಿ ಷಟ್ಪದಿಯಲ್ಲಿದ್ದು ೬ಸಂಧಿ ೨೭೮ ಪದ್ಯಗಳನ್ನೊಳಗೊಂಡಿದೆ. ಎಲ್ಲ ಪದ್ಯಗಳು ಹೆಚ್ಚಾಗಿ 'ಎಂದನಾದೇಶಿಕನು' ಎಂದು ಮುಗಿಯುತ್ತವೆ.

'ದೇಶಿಕ' ಎಂದರೆ ಬೋಧೆ ಮಾಡುವವ 'ಗುರು' ಎಂದು ಇಲ್ಲಿನ ಸಾಮಾನ್ಯಾರ್ಥ. ಉಪದೇಶಿಸುವದು ಗುರುವಿನ ಕಾರ್ಯ ಆದ್ದರಿಂದ ಗುರುವಿನ ಆರು ಉಪದೇಶಗಳಿಂದ ಕೂಡಿಕೊಂಡಿದೆ. ಈ ಕೃತಿಯಲ್ಲಿ ಆರು ಉಪದೇಶಗಳು ವಿಶಿಷ್ಟ ರೀತಿಯಲ್ಲಿದ್ದು ಇವುಗಳನ್ನು ವಿದ್ವತ್ ಪೂರ್ಣವಾಗಿ ಚರ್ಚಿಸಿದ್ದಾನೆ.

"ಪ್ರಥಮೋಪದೇಶದಲ್ಲಿ ಪಿಂಡೋತ್ಪತ್ತಿ ವಿಚಾರ, ದ್ವಿತೀಯೋಪದೇಶದಲ್ಲಿ ಮನಃ ಪವನ, ಬಿಂದು ವಿವೇಕ, ತೃತಿಯೋಪದೇಶದಲ್ಲಿ ಲೌಕಿಕ ಧರ್ಮ ಹಾಗೂ ಇಷ್ಟಲಿಂಗೋಪದೇಶ ಚತುರ್ಥೋಪದೇಶದಲ್ಲಿ ಮಹಾಘನಲಿಂಗದ ಲಕ್ಷ್ಯ ನಿರ್ಣಯ, ಪಂಚಮೋಪದೇಶದಲ್ಲಿ ಪ್ರಾಣ ಲಿಂಗಾಂಗ ವಿಚಾರ, ಷಷ್ಠೋಪದೇಶದಲ್ಲಿ ಲಿಂಗಾಂಗ ಸಂಯೋಗವು ಸಶಾಸ್ತ್ರೀಯವಾಗಿ ಪ್ರತಿಷ್ಠಾಪಿಸಲ್ಪಟ್ಟಿದೆ. ಅಲ್ಲದೆ ಇಲ್ಲಿ ವೇದೋಪನಿಷತ್ತುಗಳಲ್ಲಿ ಬಂದಿರುವ ಜೀವ-ಜಗತ್ತು-ಈಶ್ವರ ವಿಚಾರ. ಆತ್ಮ ವಿಚಾರ ಹಾಗೂ ಶಾಸ್ತ್ರ ಸಮ್ಮತವಾಗಿ ಪ್ರತಿಪಾದಿತವಾದ ಯೋಗ ವಿಚಾರವೆಲ್ಲವೂ

ಇಲ್ಲಿ ಗುರುಮುಖದಿಂದ ಉಪದೇಶಿಸಲ್ಪಟ್ಟಿದರಿಂದ ತನ್ನ ಕೃತಿಯನ್ನು ಗುರುಬಸವನು 'ಶ್ರುತಿವನಿತೆಯ ಮುಖಗನ್ನಡಿ', 'ಶಾಸ್ತ್ರಪ್ರತೀತಿಯ ನಿಲುಕಡೆ', 'ತರ್ಕಾಗಮ ತತ್ವರಹಸ್ಯ', 'ಸ್ಮೃತಿಪುರಾಣಗಳ ನಿಜಮತ', ಅಖಿಲಾದ್ಯಾರ ವಚನಗಳ ನಿಶ್ಚಿತಮತವೆಂದು ವಿಶ್ಲೇಷಿಸಿ ಹೇಳಿಕೊಂಡಿದ್ದಾನೆ."[೧೭] ಶಾಸ್ತ್ರೀಯವಾಗಿ ಮೂಡಿಬಂದ ಶಿವಯೋಗಾಂಗ ವಿಭೂಷಣವು ಹೆಸರಿಗೆ ತಕ್ಕಂತೆ ಶಿವಯೋಗಪರವಾದ ಅಂಶಗಳಿಗೆ ಕುರಿತಾಗಿದೆ.

ವೃಷಭ ಗೀತೆ : ಭೋಗ ಷಟ್ಪದಿಯಲ್ಲಿ ರಚಿತವಾಗಿದ್ದು, ಇದರಲ್ಲಿ ೧೦೧ ಪದ್ಯಗಳಿವೆ. ಇದರ ಪ್ರತಿ ಪದ್ಯಗಳು 'ಅವಕೃತಾರ್ಥನು' ಎಂದು ಮುಗಿಯುವಾದ್ದರಿಂದ ಇದೇ ಅಂಕಿತದಲ್ಲಿ ಬರೆದ ಒಂದು ಶತಕ ಕೃತಿಯೆಂದು ವೃಷಭ ಗೀತೆಯನ್ನು ಕರೆಯಬಹುದಾಗಿದೆ. ಈ ಕೃತಿಯ ಹೆಸರೇ ಹೇಳುವಂತೆ ಬಸವಣ್ಣನ ಕುರಿತಾಗಿದ್ದರೂ ಹಾಗೆ ಇಲ್ಲಿ ಕವಿಯೊಲುಮೆ ಮಾತ್ರ ವೇದಾಂತದ ಕಡೆಗಿದೆ. ಬಸವಣ್ಣನ ಕುರಿತಾಗಿ ಈ ಕೆಳಗಿನಂತೆ ಸ್ತುತಿಸಿದ್ದಾನೆ.

"ಬಸವನೆಂದಖಂಡಪಿರಿಯ
ಬಸವನೆಂದು ಲೋಕ ಬಂಧು
ಬಸವನೆಂದು ಷಟ್‌ಸ್ಥಲೀಸಮಗ್ರ ಸಾಕಾರ
ಬಸವನೆಂದು ಮತ್ತಮಸ್ತಾ
ಬಸವನೆಂದು ಧರ್ಮರೂಪ
ಬಸವನೆಂದು ಭಜಿಸಿ ಬಾಳ್ವನವ ಕೃತಾರ್ಥನು"[೧೮]

ಬಸವಣ್ಣನನ್ನು ಹೀಗೆ ಅನನ್ಯ ಶರಣಾಗತಿಯಿಂದ ಕವಿ ಕೊಂಡಾಡಿ ತನ್ನ ಭಕ್ತಿ ಕುಸುಮಾಂಜಲಿಯನ್ನು ಸಮರ್ಪಿಸಿದ್ದಾನೆ. (ಪ್ರೌ.ಕಾಕ.ಸಾ.ಪು೧೫೬) ಅಲ್ಲದೆ ಆಧ್ಯಾತ್ಮ ಹಾಗೂ ಅನುಭವ ಪರವಾದ ತತ್ವಗಳ ಕುರಿತು ವಿವೇಚಿಸಲಾಗಿದೆ.

ಕಲ್ಯಾಣೇಶ್ವರ : ಇದು 'ವೃಷಭಗೀತೆ'ಯ ಮಾದರಿಯಲ್ಲಿಯೇ ರಚಿತವಾದ ಇನ್ನೊಂದು ಕೃತಿ' ಪರಿವರ್ಧಿನಿ ಷಟ್ಪದಿಯ ೧೦೨ ಪದ್ಯಗಳು ಇಲ್ಲಿದ್ದು ಲಿಂಗಾಗ ಸಾಮರಸ್ಯದ ಮಾಹಿತಿಯನ್ನು ವಿಸ್ತರಿಸಿ ಹೇಳಿದೆ. 'ಹರಹರ ಗುರುಬಸವೇಶ್ವರ ಕರುಣಾಕರ ನಿಮ್ಮಡಿಗಳರಿಯಾದ ಮನದಿಂ ಮರುಳಾದೆ' ಬಹು ವಿಧದ, ಯೋನಿಯಲ್ಲಿ ಬಂದು ನರವಾದೆನೆಂದು ಶಿಷ್ಯನು ಬರಲು, ಗುರುವು ಕಲ್ಯಾಣೇಶ್ವರ' ಎಂಬ ಅಭಿಧಾನದಿಂದ ಕಾವ್ಯ ಮುಖವಾಗಿ ಬಸವನ ಘನತೆಯನ್ನು ಕೊಂಡಾಡುತ್ತಾ, ಷಟ್‌ಸ್ಥಲ ಸಿದ್ಧಾಂತದ ಮರ್ಮವನ್ನು ತಿಳಿಯ ಪಡಿಸುತ್ತಾನೆ. ನಂದಿನಿಯು ವಿಚಿತ್ರಕನೆಂಬ ಗಣಧರನಿಗೆ ಬಸವ ಕಥೆಯನ್ನು ಹೇಳಿ ಸುಜ್ಞನ ಚರಿತ್ರೆನನ್ನಾಗಿಸಿದ ರೀತಿಯಲ್ಲಿಯೇ ಗುರುಬಸವ ಕವಿ ತನ್ನ ಶಿಷ್ಯನಿಗೆ ಇಲ್ಲಿ ತತ್ವಬೋಧೆ ಮಾಡುತ್ತಾನೆ. ಯೋಗ, ತತ್ವ, ವೇದ ಹಾಗೂ ಅನುಭಾವ ನಿಲುವಿನಲ್ಲಿ ಇವನ ಸಾಹಿತ್ಯ ಕೃತಿಗಳು ನಿರ್ಮಾಣವಾಗಿವೆ.

ಅವಧೂತಗೀತೆ : ಕವಿ ಗುರುಬಸವನು ತನ್ನನ್ನು ಸ್ವಾನುಭವ ಸಿದ್ಧನಾದ ಅವಧೂತನೆಂದು ಕರೆದುಕೊಂಡಿದ್ದನ್ನು ನೋಡಿದರೆ, ಅಂದು ವೀರಶೈವರಲ್ಲೇ ಒಂದು ಭಿನ್ನವಾದ ಪಂಥ ಹುಟ್ಟಿಕೊಳ್ಳಲು ಸಾಧ್ಯತೆಗಳಿವೆ. ವೀರಶೈವ ವಿರಕ್ತರಲ್ಲಿ ಅವಧೂತ ಪರಂಪರೆಯೊಂದು ಈ ಕಾಲಕ್ಕೆ ಬೆಳೆಯುತ್ತಾ ಬಂದಂತೆ ಕಾಣುತ್ತದೆ. ಇವರು ಹೆಚ್ಚಾಗಿ ವೇದಾಂತಿಗಳಾಗಿದ್ದು ಮಾನಸ ಪೂಜೆ ಹಾಗೂ ಜ್ಞಾನ ಮಾರ್ಗಕ್ಕೆ ಹೆಚ್ಚಿನ ಪ್ರಾಧಾನ್ಯವಿಯುತ್ತಾರೆ. "ನೂರೊಂದು ಪದ್ಯಗಳನ್ನು ಕವಿ ಗುರುಬಸವ ಇಲ್ಲಿ ಚೌಪದಿ ರೂಪದಲ್ಲಿ ಬರೆದಿದ್ದಾನೆ. ಇಲ್ಲಿರುವ ತತ್ವವಿಶಿಷ್ಟವು, ಶೈಲಿ ಸರಳ, ಅಂತೆಯೇ ಇದು ಗಾತ್ರದಿಂದ ಕಿರಿದಾದರೂ ಪಾತ್ರದಿಂದ ಹಿರಿದಾದ ಕೃತಿ. ಯೋಗ ಪರವಾದ ಆಧ್ಯಾತ್ಮಪರವಾದ ಕೃತಿಗಳನ್ನು ಬರೆಯಲಿಕ್ಕೆ ಸಪ್ತಾಕಾವ್ಯದ ಗುರುಬಸವ ವೀರಶೈವನಾಗಿದ್ದರೂ, ಅವಧೂತರ, ಪರವಾದ ನಿಲುವುಳ್ಳವನಾಗಿದ್ದನು. "ಅದಕ್ಕಾಗಿ ಗುರು ಬಸವನು ತನ್ನನ್ನು ಸ್ವಾನುಭಾವ ಸಿದ್ಧನಾದ ಅವಧೂತನೆಂದು ಕರೆದುಕೊಂಡಿದ್ದಾನೆ.

ಸ್ವಾನುಭವದ್ವಯದಿಂ ಗುರುಬಸವ
ತಾನವಧೂತನೆನಿಸಿ ಕೇಳ್ದಿರವ
ಜ್ಞಾನೋತ್ತರ ಮಾರ್ಗದ ಬಹು ವಿಧವ
ಸಾನಂದದಿ ಪೇಳ್ದನು ನಿಜಮತವ"[೨೯]

ನೂರೊಂದು ವಿರಕ್ತರಲ್ಲಿ ನಾಗಿದೇವನಾಗಲಿ, ವೀರಣ್ಣೊಡೆಯನಾಗಲಿ, ಗುರುಬಸವನ ವಿಚಾರ ಧಾರೆಗಳು ಅನುಭವದ, ಯೋಗಪರವಾದ ತತ್ವಗಳ ಅಡಿಯಲ್ಲಿ ರೂಪಗೊಂಡಿವೆ. "ಅವಧೂತ ಎಂದರೆ ಸರ್ವಸಂಗ ಪರಿತ್ಯಾಗಿಗಳು ಸನ್ಯಾಸಿ, ದಿಗಂಬರ ಮುಮುಷ ಮಾರ್ಗದಲ್ಲಿ ನಡೆದು ಆತ್ಮನಂದದಲ್ಲಿ ವಿರಮಿಸುವ ಯೋಗಿ" ಗುರುಬಸವ ಅವಧೂತಪರವಾದ ಕೃತಿ ರಚನೆ ಮಾಡಲಿಕ್ಕೆ ಕಾರಣ, ಇವರು ಆ ಒಂದು ಪಂಥಕ್ಕೆ ಹತ್ತಿರದವರಾಗಿದ್ದರು. ವೀರಶೈವದಿಂದ ಭಿನ್ನನೆಲೆವುಳ್ಳ ಪಂಥ ಅಂದು ಹುಟ್ಟಿಕೊಂಡಿತು. ಅದೇ ನೂರೊಂದು ವಿರಕ್ತರ ಪಂಥ ಇದು ಅವಧೂತರಂತಿರುವ, ನಾಥರಂತಿರುವ ಒಂದು ಶಾಂತಪಂಥ ಎಂದು ಹೇಳಬಹುದು.

ಸ್ವರೂಪಾಮೃತ: 'ಸ್ವರೂಪಾಮೃತ'ವು ಭಾಮಿನಿ ಷಟ್ಪದಿಯಲ್ಲಿ ರೂಪಗೊಂಡ ಒಂದು ಚಿಕ್ಕ ಕಾವ್ಯ. ಇದರಲ್ಲಿ ೭೭ ಪದ್ಯಗಳಿವೆ. ಈ ಚಿಕ್ಕ ಕಾವ್ಯವು ಒಟ್ಟು ಮೂರು ಉಪದೇಶಗಳಲ್ಲಿ ಇಲ್ಲಿ ವಿಷಯವನ್ನು ಪ್ರತಿಪಾದನೆ ಮಾಡಲಾಗಿದೆ. "ಪ್ರಥಮೋಪದೇಶದಲ್ಲಿ ಮನೋವಿಚಾರ, ಅದನ್ನು ನಿಗ್ರಹಿಸುವ ವಿಚಾರವಿದ್ದು, ದ್ವಿತೀಯ, ತೃತೀಯೋಪದೇಶಗಳಲ್ಲಿ ಆತ್ಮನ ಸ್ವರೂಪವನ್ನು ಕುರಿತು ಹೇಳಲ್ಪಟ್ಟಿದೆ."[೩೦]

"ಏನೆಲ್ಲವನ್ನು ನಿಗ್ರಹಿಸಬಹುದು, ಆದರೆ ಮನಸ್ಸನ್ನು ನಿಗ್ರಹಿಸುವುದು ಕಷ್ಟ. ಕ್ಷಣ ಕ್ಷಣಕ್ಕೂ ಹಲವು ವೇಷ ತೊಟ್ಟು ವಿಹರಿಸುವದು. ಅದು ಈ ಮನಸ್ಸಿನ 'ಕಣಿಯಗಳು

ಶತಕೋಟಿ ಹಲವಿಧ ಬಲ್ಲರಾರೆಂದು ಇದು ಮರ್ಕಟ, ವೇತಾಳ, ಸಂಶಯ, ಪಿಶಾಚಿ, ನುಂಗುವ ಮಾರಿ, ಆತನು ವಿಕಾರಗಳ ಆಗರ, ವಿವಿಧ ವಾಸನೆಗಳ ತವರ್ಮನೆ, ದುಃಖದ ಕಣಿ, ವಿಷಯೋಪಭೋಗದಲ್ಲಿ ಸಂಚರಿಸುವ ಈ ಮನಸ್ಸನ್ನು ಜಯಿಸಿ ಅದಕ್ಕಿಂತ ಶ್ರೇಷ್ಠವಾದ ಆತ್ಮನ ಸ್ವರೂಪ ತಿಳಿಯುವದಕ್ಕೆ 'ಗುರು' ಬೇಕು, ಗುರುಪದೇಶದಿಂದ ಪರಬ್ರಹ್ಮನ ನಿಲುವೆನ್ನರಿವುದು ಸಾಧ್ಯ ಒಟ್ಟಿನಲ್ಲಿ ಮನೋವಿಕಾರಗಳನ್ನು ಯಾವುದೇ ಶಾಸ್ತ್ರ ಜಂಜಡಗಳ ನೆರವಿಲ್ಲದೆ ಸರಳ ರೀತಿಯಲ್ಲಿ ಬಗೆ ಹರಿಸಲಿಕ್ಕೆ ಸ್ವರೂಪಾಮೃತ ಕೃತಿಯಲ್ಲಿ ಕಾಣಬಹುದು."[೨೨] ದೇಹಕ್ಕಿಂತ ಆತ್ಮ ಅಥವಾ ಮನಸ್ಸು ಮುಖ್ಯವಾದದ್ದು, ಬಾಹ್ಯ ಡಾಂಬರಕ್ಕಿಂತ ಆಂತರಿಕ ಮನಸ್ಸಿಗೆ ಹೆಚ್ಚು ಒತ್ತು ನೀಡಿದವರು ಈ ವಿರಕ್ತರು. ಹೀಗಾಗಿ ಮನಸ್ಸಿನ ಮನೋವಿಕಾರಗಳನ್ನು ಪರಿಹರಿಸಲು ಗುರುವಿನ ಮೂಲಕ ಮಾತ್ರ ಸಾಧ್ಯವೆಂಬ ಪರಿಕಲ್ಪನೆ ವಿರಕ್ತರದಾಗಿದೆ.

ಸದ್ಗುರು ರಹಸ್ಯ : ಗುರುಬಸವನ ಪ್ರಮುಖ ಕೃತಿಗಳಲ್ಲಿ, ಇದು ಒಂದಾಗಿದ್ದು, ಸುಮಾರು ೨೩೨ ಪದ್ಯಗಳನ್ನು ಒಳಗೊಂಡಿದೆ. ಭಾಮಿನಿ ಷಟ್ಪದಿಯಲ್ಲಿ ರಚನೆಯಾದ ಇದರಲ್ಲಿ ಒಟ್ಟು ವಿಷಯವು ೬ ಉಪದೇಶಗಳಲ್ಲಿ ವಿಸ್ತರಿಸಲಾಗಿದೆ. "ಆರಂಭದಲ್ಲಿ ನಿತ್ಯಾ ನಿತ್ಯ ವಿಚಾರವಿದ್ದು, ಪರಿಭವಕ್ಕಂಜಿ ಶರಣು ಹೊಕ್ಕ ಶಿಷ್ಯನಿಗೆ ಶ್ರೀಗುರುವು ನಿಜ ತತ್ವ ಬೋಧವನ್ನಿತ್ತ ಸಂಗತಿ ಇದೆ. ಮಾಯೆಗೊಳಗಾದ ಮನಸ್ಸು ಆತ್ಮನ ಮೇಲೆ ಮಂಜುಕೆಡವಿ ನಿಜ ಸ್ವರೂಪವನ್ನು ಮರೆಯಾಚಿದೆ. ನಿತ್ಯತ್ವವನ್ನು ಕಾಣುವ ಶಿಷ್ಯನ ಮನಸ್ಥಿತಿ ಇಲ್ಲಿ ಚಿತ್ರಿತವಾಗಿದೆ. ದ್ವಿತೀಯೋಪದೇಶದಲ್ಲಿ ಹಿತಾಹಿತ ವಿಚಾರವಿದೆ. 'ನಿನಗೆ ತೊರುವದೆಲ್ಲವೂ ಅಹಿತ ನಿನಗೆ ತೋರದ ನೀನೆ ಹಿತ. ಇದನ್ನು ತಿಳಿವುದೇ ಪರತತ್ವವೆಂದು ಗುರುವು ಇಲ್ಲಿ ಅರಹುತ್ತಾನೆ. ಜೊತೆಗೆ ಯಾವುದು ತಥ್ಯ? ಯಾವುದು ಮಿಥ್ಯವೆಂಬುದರ ಸೂಕ್ಷ್ಮ ವಿವೇಚನೆಯೂ ಇಲ್ಲಿದೆ. ಮಾಯೆ, ಮೋಹ, ಕರ್ಮ, ಕಪಟಾದಿಗಳಿಂದ ಪಾರಾಗುವ ಸುಲಭೋಪಾಯವನ್ನು ಗುರುವು ಇಲ್ಲಿ ಶಿಷ್ಯನಿಗೆ ತಿಳಿಯಪಡಿಸುತ್ತಾನೆ. ತೃತಿಯೋಪದೇಶದಲ್ಲಿ ಅಹಂಕಾರ ಮಮಕಾರಗಳನ್ನು ನಿರಸನ ಮಾಡಿ ದೇಹೇಂದ್ರಿಯಗಳ ಮಮತೆಯನ್ನು ಬಿಟ್ಟು, ಆತ್ಮರತಿಯಲ್ಲಿ ಒಂದಾಗುವ ಮಾರ್ಗವೂ 'ಸೊಹಂ' ಒಂದೇ ಸತ್ಯವೆಂಬುದರ ಪ್ರತಿಪಾದನೆಯೂ ಇದೆ. ಚತುರ್ಥೋಪದೇಶದಲ್ಲಿ ನಾಹಂ, ಕೋಹಂ, ಸೋಹಂ, ಎಂಬೀ ಜೀವಗಳ ಭೇದವನ್ನು ಗುರುವು ಶಿಷ್ಯನಿಗೆ ಬೋಧಿಸಿದ್ದಾನೆ. 'ವಾಸನೋದ್ರೇಕ'ವೆಂಬ ಪಂಚಮೋಪದೇಶದಲ್ಲಿ ಜೀವದ ಬಾಧೆಗೆ ವಾಸನೆಯೇ ಮೂಲವಾಗಿದೆ. ಇದರಿಂದ ಸತ್ ಅಸತ್ತಾಗಿ ಚಿತ್ ಅಚಿತ್ತಾಗುವದು ಇವನ್ನು ಜಯಿಸಿದಾಗ ಸಚ್ಚಿದಾನಂದ ರಸವು ಶಿಷ್ಯನಿಗೆ ದೊರಕುವದೆಂದು ಹೇಳಲಾಗಿದೆ. ಷಷ್ಠೋಪದೇಶದಲ್ಲಿ 'ಮನೋನಿರೂಪಣೆ'ಯಿದೆ. ಮನಸ್ಸಿನ ಚಾಂಚಲ್ಯ ಸಂಸ್ಕೃತಿಯ ಕೋಟಲೆಗಳನ್ನು ಪರಿಹರಿಸಬೇಕಾದಲ್ಲಿ ಯೋಗ ಮಾರ್ಗವನ್ನನುಸರಿಸಬೇಕು. ಮನೋನಿಗ್ರಹಕ್ಕೆ ಯೋಗಸಾಧನೆ ತಾರಕ ಮಂತ್ರವಾಗಿದ್ದರೂ ಅದೊಂದರಿಂದಲೇ ಕರುಣಾದಿಗಳನ್ನು

ಜಯಿಸಲಾಗುವುದಿಲ್ಲ. ಹಾಗೆ ಮಾಡ ಹೋದರೆ ಕೃತ್ರಿಮ ಸರ್ಪವನ್ನು ತೊಡಗಿಸಲು ದುಂದುಭಿಯನ್ನು ಹೊಡೆದಂತೆ. ಆತ್ಮನ ಅರಿವು ಯೋಗ ಮಾರ್ಗಕ್ಕಿಂತ ಅನುಭಾವ ಮಾರ್ಗದಿಂದಲೇ ನಿಜವಾಗಿ ದೊರೆಯುತ್ತದೆ ಎಂಬ ಮಹತ್ವ ಪರವಾದ ಅಮೂಲ್ಯ ವಿಚಾರಗಳಿವೆ.

ಸಪ್ತಮೋಪದೇಶದಲ್ಲಿ ವಸ್ತು ನಿರ್ದೇಶನವಿದೆ. 'ವಸ್ತು' ಎಂದರೆ ಪರವಸ್ತುವಲ್ಲದೆ ಮತ್ತೊಂದಲ್ಲ. ಸ್ವಾತ್ಮ ನಿರೂಪಣೆಯನ್ನೊಳಗೊಂಡ ಅಷ್ಟಮೋಪದೇಶದಲ್ಲಿ ಶಿಷ್ಯನ ಸ್ವಾಭಾವ ನೈರ್ಮಲ್ಯದ ಅಗತ್ಯವು ಹೇಳಲ್ಪಟ್ಟಿದೆ. ಕೊನೆಯದಾದ ನವಮೋಪದೇಶವು ಜಗತ್ತು ಪರಬ್ರಹ್ಮ ಸ್ವರೂಪವಿದೆ. ಪಿತ್ತಾಚ್ಛಾಯೆಯೇ ಕಾರಣವಾಗಿ ಪರವಸ್ತುವು ಅಖಂಡೈಕ ರಸದಿಂದ ಜಗದಲ್ಲಿದ್ದರೂ ಹುಸಿ, ಮದ, ತಾಮಸ ವಿಷಯಗಳಿಂದ ಕಾಣಲು ಅಶಕ್ಯವಾದ ಪರಿಯನ್ನು ಹೇಳುತ್ತ ಶಿಷ್ಯನ ಸಂದೇಹಗಳನ್ನು ನಿವಾರಿಸಿ ಅವನಿಗೆ ಮುಮುಷು ಮಾರ್ಗದ ದಾರಿಯನ್ನು ಕಾಣಿಸಿದೆ."[೨೨] ಸದ್ಗುರು ರಹಸ್ಯ ಒಂದರ್ಥದಲ್ಲಿ ವೇದಾಂತ ತತ್ವಗಳ ಪರಮಾನುಭವದ ಬೋಧೆಯಾಗಿದೆ. ವೇದಾಂತ ತತ್ವವನ್ನು ಕೂಡ ಸುಲಭವಾದ ರೀತಿಯಲ್ಲಿ ಹಲವಾರು ಸಾದೃಶ್ಯ ಮಾಲಿಕೆಗಳಿಂದ ಕವಿ ನಿರೂಪಿಸ ಹೋಗಿದ್ದಾನೆ.

ಮನೋವಿಜಯ ಕಾವ್ಯ : ಗುರುಬಸವನ ಸಪ್ತಕಾವ್ಯಗಳಲ್ಲಿ ಹಿರಿದಾದ ಕೃತಿಯಾದ ಇದು ಮಹತ್ವದ ಸ್ಥಾನ ಪಡೆದುಕೊಂಡಿದೆ. ಇದರಲ್ಲಿ ಒಟ್ಟು ೯ ಪ್ರಕರಣಗಳಿದ್ದು, ೩೫೫ ಪದ್ಯಗಳಿಂದ ರಚನೆಯಾದ ಇದು ಕುಸುಮ ಷಟ್ಪದಿಯಲ್ಲಿ ಸೃಷ್ಟಿಯಾಗಿದೆ. "ಸುವಿವೇಕನೆಂಬ ಶಿಷ್ಯನು ಗುರು ಕೃಪೆಯಿಂದ ನಿಜವ ಕಂಡ ವಿಚಾರವನ್ನು ಕವಿ ಇಲ್ಲಿ ಒಂದೊಂದು ಪ್ರಕರಣದಲ್ಲಿ ವಿಸ್ತರಿಸಿ ಹೇಳಿದ್ದಾನೆ. ಆರಂಭದಲ್ಲಿ ಗುರು-ಶಿಷ್ಯ ಸಂವಾದ, ಎರಡನೇಯದರಲ್ಲಿ ಪರವಸ್ತು ನಿರ್ದೇಶನ, ಮೂರನೇಯದರಲ್ಲಿ ಪರತತ್ತ್ವೋಪದೇಶ ಹಾಗೂ ವಿಶ್ವೋತ್ಪತ್ತಿ ವಿಚಾರ, ನಾಲ್ಕನೇಯದರಲ್ಲಿ ಮನೋನಿರೂಪಣೆ, ಐದರಲ್ಲಿ ಜೀವ ನಿರೂಪಣ, ಆರನೆಯದರಲ್ಲಿ ಜೀವತ್ರಯ ನಿರೂಪಣ, ಏಳನೇಯದರಲ್ಲಿ ಜ್ಞಾನಾಜ್ಞಾನ ಭೇದ ನಿರೂಪಣ, ಎಂಟರಲ್ಲಿ ಸಂವಿತ್ಸ್ವರೂಪ ನಿರೂಪಣ, ಒಂಬತ್ತರಲ್ಲಿ ಪರಿಪೂರ್ಣ ಬ್ರಹ್ಮ ಲಕ್ಷಣ ಸ್ವರೂಪವು ನಿರೂಪಿಸಲ್ಪಟ್ಟಿದೆ.

"ಮನೋವಿಜಯವು ತತ್ವದ ಗಾಂಭೀರ್ಯದ ಜೊತೆಗೆ ಕಾವ್ಯದ ಮಾಧುರ್ಯವನ್ನು ಒಳಗೊಂಡಿರುವುದರಿಂದ ಅವನ ಕಾವ್ಯಗಳೆಲ್ಲೇಲ್ಲ ಶ್ರೇಷ್ಠ ಕೃತಿಯೆಂದು ಹೇಳಬಹುದಾಗಿದೆ. 'ವೇದಾಗಮ ಉಪನಿಷತ್ತುಗಳಿಗೊಳಗಾದ ಸರ್ವ ಸಮ್ಮತದ ಸಾರಸಂಗ್ರಹ 'ಶ್ರುತಿ' ಸ್ಮೃತಿಯ ಸೌಖ್ಯದ ಸುಖಂ' ವೇದಾಂತದೊಡವು' ನಿಜಶೈವ ಸಿದ್ಧಾಂತ ಮತದ ಹೃದಯ, 'ಆದ್ಯರ ಕರುಣದುದಯ ಅನುಭವಸಿದ್ಧದನುಮತ'ವೆಂದು ಕಾವ್ಯದ ಉತ್ಕೃಷ್ಟತೆಯನ್ನು ಸಾರಿಕೊಂಡಿದ್ದಾನೆ. ಗುರುಬಸವನ ವೇದಾಂತ ತತ್ವನಿರೂಪಣೆ ಹಾಗೂ ಕಾವ್ಯ ಸೊಗಸನ್ನು ಈ ಕೃತಿಯಲ್ಲಿ ಕಾಣುತ್ತೇವೆ."[೨೩]

೪. ಬತ್ತಲೇಶ್ವರ

ಪ್ರೌಢದೇವರಾಯನ ಸಮಕಾಲೀನನಾಗಿದ್ದ ಬತ್ತಲೇಶ ಯೋಗಿಯಾಗಿದ್ದ. ದೊರೆ ಒಮ್ಮೆ ಬೇಟೆಗೆಂದು ಸಕಲ ಪರಿವಾರ ಸಮೇತ ಕಾನನಕ್ಕೆ ಬಂದಾಗ, ಅಲ್ಲಿ ಸಿದ್ಧಾಸನ ಹಾಕಿಕೊಂಡು ಕುಳಿತ ಒಬ್ಬ ಸನ್ಯಾಸಿಯನ್ನು ಕಾಣುತ್ತಾನೆ. ಬತ್ತಲೆಯಾಗಿ ಕಾನನ ಮಧ್ಯದಲ್ಲಿದ್ದಾಗಲೂ ಈ ಸನ್ಯಾಸಿಯ ಮನಸ್ಸು ಎಷ್ಟು ದೃಢವಾಗಿದೆ? ಎಂಬುದನ್ನು ಪರೀಕ್ಷಿಸಲೆಂದು ರಾಯನು ತನ್ನ ಪರಿವಾರದ ಪದ್ಮಾವತಿ ಎಂಬ ಸುಂದರ ವಾರಾಂಗನೆಯನ್ನು ಕಳುಹಿ ಇವನನ್ನು ಒಲಿಸಿಕೊಂಡರೆ ನಿನಗೆ ಉಂಬಳಿ ಗ್ರಾಮಗಳನ್ನು ಹಾಕಿಕೊಡುತ್ತೇನೆ ಎನ್ನುತ್ತಾನೆ. ಮುಂದೆ ಪದ್ಮಾವತಿ ಅರಸನ ಮಾತಿನಂತೆ ಆ ಮುನಿಯನ್ನು ತುಂಬ ಪ್ರಯತ್ನದಿಂದ ಒಲಿಸಿಕೊಂಡು ಅವನೊಂದಿಗೆ ಐಕ್ಯಹೊಂದಿ ಮುಂದೆ ಮೂರು ಮಕ್ಕಳೊಂದಿಗೆ ವಿರೂಪಾಕ್ಷನ ಜಾತ್ರೆಗೆ ಪರಿವಾರ ಸಮೇತರಾಗಿ ಬರುವರು. ಆಗ ಅರಸ ಮತ್ತು ಪದ್ಮಾವತಿಯರ ನಡುವಿನ ಗೌಪ್ಯತೆಯ ಅಂಶ ಬತ್ತಲೇಶ್ವರನಿಗೆ ತಿಳಿದ ಮೇಲೆ ಆ ಗಳಿಗೆಯಲ್ಲಿಯೇ ಎಲ್ಲರೂ ನೋಡುತ್ತಿದ್ದಂತೆ ಬಯಲಾಗುತ್ತಾನೆ. ಹೀಗೆ ಮಹಾಮಹಿಮ ಪುರುಷನಾದ ಬತ್ತಲೇಶ ಕೆಲವೊಂದು ಅನುಭವದ ಹಾಡುಗಳನ್ನು ರಚಿಸಿದ್ದಾನೆ. ಕವಿಚರಿತೆ ಹಾಗೂ ಶಿವದಾಸ ಗೀತಾಂಜಲಿಯಲ್ಲಿ ಇವರ ಕೆಲವೊಂದು ಹಾಡುಗಳು ದೊರೆಯುತ್ತವೆ.

ಕವಿಚರಿತೆಯ ೨ನೇಯ ಸಂಪುಟದಲ್ಲಿ ಬತ್ತಲೇಶ್ವರನನ್ನು ಕುರಿತು ಹೀಗೆ ಹೇಳಲಾಗಿದೆ. 'ಈತನು ಒಂದು ರಾಮಾಯಣವನ್ನು ಬರೆದಂತೆ ತೋರುವುದು. ವರಕವಿ ಬತ್ತಲೇಶ್ವರ' ಆನಂದದಲೆ ವರವಿತ್ತು ರಘುಪತಿ ಬತ್ತಲೇಶ್ವರನಿಗೆ ಎಂಬುದಾಗಿ ಇವನ ಹೆಸರು ಅಲ್ಲಲ್ಲಿ ದೊರೆಯುತ್ತದೆ. ಇನ್ನು ಕೆಲವು ಕಡೆ 'ನಿರ್ವಾಣಿನಾಯಕ' 'ನಿರ್ವಾಣಲಿಂಗ' ಎಂಬ ಅಂಕಿತಗಳು ಇವೆ. ಇವು 'ಬತ್ತಲೇಶ್ವರ' ಎಂಬುದಕ್ಕೆ ಪರ್ಯಾಯ ಶಬ್ದಗಳಾಗಿರಬಹುದು. ಪ್ರೌಢದೇವರಾಯನ ಕಾಲದಲ್ಲಿ ಪಂಪಾಪುರದಲ್ಲಿದ್ದ ಕರಸ್ಥಲನಾಗಲಿಂಗ, ವೀರಣ್ಣೊಡೆಯ ಮುಂತಾದ ೧೦೧ ವಿರಕ್ತರ ಗೋಷ್ಠಿಯಲ್ಲಿ ಈತನನ್ನು ಸೇರಿಸಿರುವುದರಿಂದ ಇವನ ಕಾಲವು ೧೪೩೦ ಎಂದು ಕವಿ ಚರಿತೆಕಾರರ ಅಭಿಪ್ರಾಯ.

ಹಾಡುಗಳು : ಆಧ್ಯಾತ್ಮಿಕವಾದಂತಹ ಅನುಭಾವಪರವಾದ ಹಾಡುಗಳನ್ನು ಬರೆದ ಬತ್ತಲೇಶ್ವರ, ನಿರ್ವಾಣಲಿಂಗ ಎಂಬ ಅಂಕಿತದ ಅಡಿಯಲ್ಲಿ ರಚಿಸಿದ್ದಾನೆ. ಭಕ್ತಿ ಹಾಗೂ ಅನುಭಾವ ಪರವಾದ ಹಾಡುಗಳೆಲ್ಲವೂ ಗೂಢಾರ್ಥವುಳ್ಳವಾಗಿವೆ.

ಕವಿಚರಿತೆಕಾರರು ಹೇಳುವಂತೆ 'ಕೆಲವು ಕಡೆ' ನಿರ್ವಾಣನಾಯಕ' 'ನಿರ್ವಾಣಲಿಂಗ' ಎಂಬ ಅಂಕಿತಗಳು ಇವೆ. ಇವು ಬತ್ತಲೇಶ್ವರ ಎಂಬುದಕ್ಕೆ ಪರ್ಯಾಯ ಶಬ್ದಗಳಾಗಿರಬಹುದು ಎಂಬ ಅವರ ಊಹೆ ಸಮಂಜಸವಾದುದು. ಅದಕ್ಕೆ ಪ್ರಮಾಣವಾಗಿ ಇತ್ತೀಚ್ಚೆಗೆ ಆ ಮುದ್ರಿಕೆಯಲ್ಲಿ

ಕೆಲವು ಅನುಭಾವ ಪದ್ಯಗಳು ದೊರಕಿದ್ದು ಅವು ಬತ್ತಲೇಶ್ವರನಿಂದ ರಚಿತವಾದುವೆಂದು ನಿಷ್ಕರ್ಷಿಸಲ್ಪಟ್ಟಿವೆ. 'ನಿರ್ವಾಣಲಿಂಗ' ನಿರ್ವಾಣಿ ಪ್ರಿಯಲಿಂಗ ಎಂದು ಮುಂತಾಗಿ ಬೋಳೇಶ ರಹಿತವಾದ ಅಂಕಿತಗಳು ಬತ್ತಲೇಶ್ವರನೆಂಬ ಶಿವಶರಣನವು ಸಂಶೋಧಕರಾದ ಎಂದು ಡಾ.ಎಲ್.ಬಸವರಾಜ ಹೇಳಿದ್ದಾರೆ.

ಬತ್ತಲೇಶ್ವರನು ತಾತ್ವಿಕ ನೆಲೆಯಲ್ಲಿ ನಿಜಗುಣ ಶಿವಯೋಗಿಯವರಂತೆ ಶಿವಯೋಗ ನೆಲೆಯನ್ನರಿತಿದ್ದನೆಂಬುದಕ್ಕೆ ಅವನು ಬರೆದ 'ಹಾರಿತೋ ಹಂಸ' ಎಂಬ ಪದ್ಯವನ್ನು ಉದಾಹರಿಸಬಹುದು.

"ಹಾಱುತೋ ಹಂಸ ಹಾಱುತೋ
ಮುಱು ನದಿಯ ದಾಂಟಿ ಮುಕುತಿ ರಾಜ್ಯದತ್ತ॥ ಪಲ್ಲವಿ॥
ಕರ್ತೃ ಭೃತ್ಯ ಶತ್ರು ಮಿತ್ರಗಳಿಲ್ಲದೆ.
ಉತ್ತರಗತಿಯತ್ತ ಉನ್ಮನಿಯ ಪಥದತ್ತ
ಹಱುಉ ಮರವ ಸಾರಿ, ಅಜನ ಮರವ ಹೊಕ್ಕು
ಹರನ ರಾಜ್ಯಕ್ಕಾಗಿ ಶಿವನ ರಾಜ್ಯದತ್ತ
ಅಪರಾಪರವ ದಾಂಟಿ, ಸುಪರಾಪರವ ಮಿಱು
ವಿಪರೀತವಾದ ನಿರ್ವಾಣಿಲಿಂಗದತ್ತ"[೨೪]

ಈ ಮೇಲಿನ ಅನುಭಾವದ ಹಾಡಿನಲ್ಲಿ ಸಾಧಕನ ಮನೋವಿಕಾಸದ ಮಹತ್ವದ ಘಟ್ಟ ಅಭಿವರ್ಣಿತವಾಗಿದೆ. ಮುಂದೆ ಚಂದಮಾಮ ಎಂಬ ಅವನ ಒಂದು ಆಧ್ಯಾತ್ಮದ ಸುಂದರ ಭಾವಗೀತೆಯಾಗಿದೆ.

"ಮುಂದ ಮುಂದಕೆ ಹೋಗಿ
ಮುಕ್ತನಾದುದೊಂದು ಚಂದಮಾಮ
ಅಂಧಕ ನಯನ ತೆಱೆದು
ನೋಡುವದೊಂದು ಚಂದಮಾಮ ॥ಪಲ್ಲವಿ॥
ಐದು ಬಣ್ಣದ ಪಕ್ಷಿ ಮೈದೊಳೆವುದು। ಒಂದು ಚಂದಮಾಮ
ನೆಯ್ದಿಲು ಕುಮುದವು ನೆರವಾದುದು। ಒಂದು ಚಂದಮಾಮ
ಹೊಯ್ದಲೆ ಚಿಗಿತು ಹೊಸತಾದುದು ।ಒಂದು ಚಂದ ಮಾಮ
ಐದೆಲೆ ನೂಱೊಂದು ತಲೆಯಾದುದು ।ಒಂದು ಚಂದ ಮಾಮ"[೨೫]

ಐದು ಬಣ್ಣದ ಪಕ್ಷಿ ನೂರೊಂದಾಗಿ, ಆನೂರೊಂದು ಆರರಲ್ಲಡಗಿ, ಆರು ಮೂರಾಗಿ ಮಾರೆರಡೊಂದಾದ ಸುಂದರವಾದ ತತ್ವರೂಪಕ ಇಲ್ಲಿದೆ.

೫. ನಿರ್ವಾಣಿ ಬೋಳೇಶ

ನಿರ್ವಾಣಿ ಬೋಳೇಶ ನೂರೊಂದು ವಿರಕ್ತರಲ್ಲಿ ಬರುವ ಕರಸ್ಥಲದ ನಾಗಿದೇವನ ತತ್ವಚಿಂತನೆಗೆ ಹತ್ತಿರವುಳ್ಳವನು. 'ನೂರೊಂದು ವಿರಕ್ತರ ಕಾವ್ಯದಲ್ಲಿ ೩೩ನೆಯದಾಗಿ ಬರುವ 'ಬಯಲು' ಶಾಂತನನ್ನೆ ನಿರ್ವಾಣಿ ಬೋಳೇಶ ಎಂದು ಊಹಿಸಲು ಬರುವಂತಿದೆ. ಬಯಲು, ನಿರ್ವಾಣಿ 'ಬೋಳು' ಇವು ವೀರಶೈವ ಪರಿಭಾಷೆಯಲ್ಲಿ ಪರಿಯಾಯರ್ಥ ಸೂಚಕವಾಗಿವೆ. ವಿರೂಪಾಕ್ಷ ಪಂಡಿತನು ನಿರ್ವಾಣಿ ಬೋಳೇಶನನ್ನು ಕುರಿತು ಅವನ ಬಯಲ ಸಂಧಾನದ ವಿವರವನ್ನೇ ಮುಖ್ಯವಾಗಿ ತನ್ನ ಪದ್ಯದಲ್ಲಿ ಕೊಟ್ಟಿರುವುದರಿಂದ ಇವರಿಬ್ಬರೂ ಒಂದೇ ವ್ಯಕ್ತಿಗಳಾಗಿರಬಹುದೆಂದು ತರ್ಕಿಸಬಹುದಾಗಿದೆ. ಮೋದಿಯ ರುದ್ರನಿಗಿಂತ ಪೂರ್ವದಲ್ಲಿಯೇ ರಚಿತವಾದ ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣದಲ್ಲಿ ಇವನ ಹೆಸರು ಉಲ್ಲೇಖಗೊಂಡಿದೆ. ಅದರಲ್ಲಿ ಬೋಳೇಶನ ವಿಷಯವಾಗಿ ಹೀಗೆ ಪ್ರಸ್ತಾಪಿತವಾಗಿದೆ.

"ಆಲಿಸಿನ್ನೆಲೆ ಸಿದ್ಧರಾಮೇಶ ನಿರ್ವಾಣಿ
ಬೋಳೆಶನಲೆ ಪವಾಡಂಗಳು ಮೆರೆವುತಿರು
ತಾಲದ ಮರನ ಬಿಳಿಲಪಿಡಿಕೊಂಡು ಶಿವಯೋಗ ನಿಜಸಮಾಧಿಯಲಿ
ಲೀಲೆಯಿಂದಿರಲಾಗಲಲ್ಲಿರ್ಪ ಭಕ್ತ ಜನ
ಜಾಲಮೀತಂ ತೀರ್ದನೆಂದು ತೆಗೆಯಲ್ಕಿರದೆ
ಪೇಳಲೇನವರ ಕೈಯೊಳಗೆ ವಿರವಯವಪ್ಪನೆಲ್ಲರುಂ ಚೋದ್ಯಮೆನಲು"[೨೩]

ನಿರ್ವಾಣಿ ಬೋಳೇಶನು ಅನಂತ ಪವಾಡಗಳನ್ನು ಮೆರೆದು, ಒಮ್ಮೆ ಆಲದ ಮರದ ಜಡೆಗಳನ್ನು ಹಿಡಿದುಕೊಂಡು ಅಲ್ಲಿಯೇ ಶಿವಯೋಗ ಸಮಾಧಿಸ್ಥನಾಗಲು, ಇವನ ಅಂತರ್ಧಾನದ ಮರ್ಮವರಿಯದ ಅಲ್ಲಿನ ಭಕ್ತಜನ ಈತನು ತೀರಿದನೆಂದು ಅವನ ಕೈಗಳನ್ನು ಜಡೆಗಳಿಂದ ಬಿಡಿಸುತ್ತಿರುವಾಗಲೇ ಬೋಳೇಶನು ಲಿಂಗೈಕ್ಯನಾಗುವನು. ಲೋಕದ ಕಣ್ಣಿಗೆ ಮರುಳನಂತೆ ತೋರಿ, ನಿರವಲಯ ಸಿದ್ಧಿ ಪಡೆದನು, ಶಿವಯೋಗದ ಸಿದ್ಧಿ- ಸಾಧನಗಳನ್ನು ನೋಡಿದರೆ ಪ್ರಾಯಶಃ ಬೋಳೇಶ ಮತ್ತು ಕರಸ್ಥಲನಾಗಿದೇವರು ಮೊದ ಮೊದಲು ಹಠಯೋಗಕ್ಕೆ ಒಲಿದು ನಂತರದಲ್ಲಿ ಅನುಭವ ಪಥದ ಮೇಲೆ ನಡೆದು ಸಮಷ್ಟಿಯೋಗವಾದ, ಶಿವಯೋಗವನ್ನು ದೊರಕಿಸಿಕೊಂಡರೆಂದು ಹೇಳಬಹುದು.

ಕರಸ್ಥಲದ ನಾಗಿದೇವನಂತೆ ನಿರ್ವಾಣಿ ಬೋಳೇಶನು ಅನೇಕ ಅನುಭಾವದ ಹಾಡುಗಳನ್ನು ರಚಿಸಿದನು. 'ನಿರ್ವಾಣಿ ಬೋಳೇಶ' 'ನಿರ್ವಾಣಿ ಪ್ರಿಯ ಬೋಳೇಶ' 'ಬೋಳೇಶ ಲಿಂಗ' ಎಂಬ ಅಂಕಿತದ ಅಡಿಯಲ್ಲಿ ಹಾಡುಗಳನ್ನು ರಚಿಸಿದನು. "ನಿರ್ವಾಣಿ ಬೋಳೇಶ, ಯೋಗದ

ಪರಮರಹಸ್ಯವನ್ನರಿತವನು. 'ಆತಯೋಗಿ' ಎಂಬ ಪದ್ಯದಲ್ಲಿ ಅವನ ಯೋಗ ಜೀವನದ ಆಳಗಲಗಳನ್ನು ಕಾಣುತ್ತೇವೆ. 'ಯಾರು ಯೋಗಿ? ಎಂದು ಪ್ರಶ್ನಿಸುತ್ತಾ ನಿರ್ವಾಣಿ ಬೋಳೇಶ ಹೀಗೆ ವಿವರಿಸುತ್ತಾನೆ.

ಕಾಣಬಾರದ ಕರುಕನ ತಿರುಕನ ಆರು
ಕಾಣದ ಕಣ್ಣಲಿ ಕಂಡಾತ ಯೋಗಿ।
ಅಡಗಿರ್ದ ಕಳ್ಳರನೈವರ ವಂಚಿಸಿ ಆರು
ನಡೆಯದ ಪಥದಲ್ಲಿ ನಡೆವಾತ ಯೋಗಿ।
ಬಣ್ಣಿಸಬಾರದ ಬಿಸಿದಲೆವೋಡಿಲಿ ಆ
ರುಣ್ಣದೂಟವನುಂಬಾತ ಯೋಗಿ।
ಉರುತರ ನಿರ್ವಾಣಿ ಪ್ರಿಯ ಬೋಳೇಶ ನೊಳಾರು
ನೆರೆಯದ ಕಾಂತೆತ ನೆರೆದಾತಯೋಗಿ"[೨೬]

ಈ ಪದ್ಯದ ಮೊದಲಲ್ಲಿ ವರ್ಣಿತವಾದ ತಿರುಕನು ಇನ್ನಾರು ಅಲ್ಲ 'ಶಿವಜ್ಞಾನಿ' ಯಾರು ತನ್ನ ಮೂಲ ಜ್ಞಾನದ ದೃಷ್ಟಿಯಿಂದ ಅವನನ್ನು ಕಾಣುವರೋ ಆತ ಯೋಗಿ.

ಬೋಳೇಶನ ಮೇಲಣ ಪದ್ಯವು ಅವನು ಎಷ್ಟು ಎತ್ತರದ ಶಿವಯೋಗಿಯಾಗಿದ್ದನೆಂಬುದನ್ನು ಸಾರವತ್ತಾಗಿ ಚಿತ್ರಿಸುತ್ತಾದೆ. ಈ ಯುಗದ ನೂರೊಂದು ವಿರತರೆಲ್ಲರೂ ಇಂಥ ಯೋಗ ಸಿದ್ಧಿಯನ್ನು ಪಡೆದವರೇ ಆಗಿರುವರು. ಇವರಲ್ಲಿ ಕೆಲವರ ಸಾಹಿತ್ಯ ಸೃಷ್ಟಿ ದೊರೆಯಲಾರದು. ಆಸ್ಥಾನದಲ್ಲಿ ಆಶ್ರಯಪಡೆದ ಬೆರಳೆಣಿಕೆಯ ವ್ಯಕ್ತಿಗಳ ಸಾಹಿತ್ಯ ದೊರೆಯುತ್ತಾವೆ, ಹೊರತು ಉಳಿದ ವಿರಕ್ತರ ಬಗೆಗೆ ಯಾವುದೇ ಮಾಹಿತಿ ದೊರೆಯಲಾರದಾಗಿದೆ.

ಅಡಿಟಿಪ್ಪಣಿಗಳು

೧. ವಿಜಯ ಕಲ್ಯಾಣ- (ಸಂ) ಪ್ರೊ. ಸಂ.ಶಿ. ಭೂಸನೂರಮಠ
೨. ಮಾರ್ಗ -೨. ಡಾ. ಎಂ.ಎಂ.ಕಲಬುರ್ಗಿ, ಪುಟ-೨೩೦.
೩. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ-ಡಾ.ಶಿವಾನಂದ ವಿರಕ್ತಮಠ ಪು-೧೩೮-೧೩೯
೪. ಅದೇ, ಪು-೧೪೦-೧೪೧
೫. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ -ಡಾ. ಶಿವಾನಂದ ವಿರಕ್ತಮಠ, ಪುಟ- ೧೪೬
೬ ಅದೇ ಪುಟ-೧೪೩.
೭ ಅದೇ, ಪುಟ-೧೪೩
೮. ಅದೇ, ಪುಟ-೧೪೪

೯. ಸ್ವರವಚನ ವಿಚಾರ ಸಂಕೀರಣ (ಸಂ), ಡಾ.ಎಂ.ಎಂ.ಕುಲಕರ್ಣಿ, ಪುಟ-೧೨೫.

೧೦. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಪುಟ-೧೪೫.

೧೧. ಅದೇ, ಪುಟ-೧೪೬

೧೨. ಅದೇ, ಪುಟ-೧೨೮

೧೩. ಅದೇ, ಪುಟ-೧೨೯.

೧೪. ಅದೇ, ಪುಟ-೧೩೦.

೧೫. ಶರಣ ಸಾಹಿತ್ಯ ಸಂಪುಟ-೭, ಸಂ-೧, ಪುಟ-೩೦೮-೩೦೯.

೧೬. ಕರ್ನಾಟಕದ ಮಠಗಳು ಮತ್ತು ಕನ್ನಡ ಸಾಹಿತ್ಯ - ಡಾ.ಕೆ.ರವೀಂದ್ರನಾಥ, ಪುಟ-೧೧೪.

೧೭. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಪುಟ-೧೫೫.

೧೮. ಅದೇ, ಪುಟ-೧೫೬

೧೯. ಅದೇ, ಪುಟ-೧೫೭

೨೦. ಅದೇ, ಪುಟ-೧೫೯.

೨೧. ಅದೇ, ಪುಟ-೧೫೯.

೨೨. ಅದೇ, ಪುಟ-೧೬೦-೧೬೧

೨೩. ಅದೇ, ಪುಟ-೧೬೨.

೨೪. ಸ್ವರವಚನ ವಿಚಾರ ಸಂಕಿರಣ (ಸಂ) ಡಾ. ಎಂ.ಎಂ.ಕಲಬುರ್ಗಿ, ಪುಟ-೧೨೬

೨೫. ಅದೇ, ಪುಟ-೧೨೮.

೨೬. ಚೆನ್ನಬಸವ ಪುರಾಣ, ಪುಟ-೬೩, ೩೬

೨೭. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ - ಡಾ.ಶಿವಾನಂದ ವಿರಕ್ತಮಠ, ಪುಟ-೧೭೪.

*****

ಅಧ್ಯಾಯ : ಆರು

ನೂರೊಂದು ವಿರಕ್ತರು : ಪರಂಪರೆ

ಅಧ್ಯಾಯ : ಆರು

ನೂರೊಂದು ವಿರಕ್ತರು : ಪರಂಪರೆ

ಭಾರತದಲ್ಲಿರುವ ಯಾವುದೇ ಧರ್ಮ ಅಥವಾ ಪಂಥಗಳಿಗೆ ಅವರದೇ ಆದ ಒಂದು ಪರಂಪರೆ ಎಂಬುದು ಇರಲೇಬೇಕು. ಈ ಎಲ್ಲಾ ಧರ್ಮಗಳ ಆಶಯ ಒಂದೇ ಆಗಿದ್ದರೂ, ಅವರ ಆಚರಣಾ ಕ್ರಮಗಳು ಮಾತ್ರ ಭಿನ್ನವಾಗಿರುತ್ತವೆ. ಈ ಪರಂಪರೆ ಅಥವಾ ಮೂಲದ ಬಗೆಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇಂದಿಗೂ ಎಷ್ಟೋ ವಿಷಯಗಳು ಇನ್ನೂ ಸಹ ಬೆಳಕಿಗೆ ಬಾರದಂತಾಗಿದೆ. ಅದೇ ರೀತಿ ಮಧ್ಯಕಾಲೀನ ಸಂದರ್ಭದಲ್ಲಿ ಹಂಪೆಯಲ್ಲಿ ಬದುಕಿ ಬಾಳಿದರೆನ್ನಲಾದ ನೂರೊಂದು ವಿರಕ್ತರ ಬಗೆಗೆ ಹಲವು ಪ್ರಶ್ನೆಗಳು ಇಂದಿಗೂ ಸಮಸ್ಯೆಗಳಾಗಿ ಉಳಿದಿವೆ. ಈ ವಿರಕ್ತರ ಮೂಲ ಪರಂಪರೆ ಎಲ್ಲಿಂದ ಬಂತು, ಇವರು ಹಂಪೆಯಲ್ಲಿಯೇ ನೆಲೆನಿಂತವರೇ ಅಥವಾ ಬೇರೆ ಬೇರೆ ಕಡೆಯಿಂದ ತಮ್ಮ ಆಧ್ಯಾತ್ಮಿಕ ಸಾಧನೆಗಾಗಿ ಪುಣ್ಯ ಕ್ಷೇತ್ರವಾದ ಹಂಪೆಯ ಕಡೆಗೆ ಬಂದವರೆ ಎಂಬ ವಿಷಯವನ್ನು ಕುರಿತು ಈ ಅಧ್ಯಯನದಲ್ಲಿ ಮುಖ್ಯವಾಗಿ ಚರ್ಚಿಸುವುದಾಗಿದೆ. ಅಲ್ಲದೇ ನೂರೊಂದು ವಿರಕ್ತರು ವೀರಶೈವ ಧರ್ಮದ ಪುನರುಜ್ಜೀವನಕಾರರು ಎಂದು ಕೆಲವು ಸಾಹಿತ್ಯ ಕೃತಿಗಳು ಬಿಂಬಿಸಿವೆ. ಹಾಗಾದರೆ ಇವರು ವೀರಶೈವರೇ? ಅಂದರೆ ಇವರು ಯಾವ ಪಂಥಕ್ಕೆ ಸೇರಿದವರು ಎಂಬ ವಿಷಯವನ್ನು ಕುರಿತು ವಿವರಿಸಲಾಗಿದೆ. ಪ್ರೌಢದೇವರಾಯನ ಕಾಲದಲ್ಲಿ ವೀರಶೈವ ಧರ್ಮಕ್ಕೆ ಆಶ್ರಯ ನೀಡಿದ್ದರಿಂದ ಸಾಹಿತ್ಯ ಚಟುವಟಿಕೆಗಲು ಹೆಚ್ಚು ವೇಗವಾಗಿ ಸಾಗಿತು. ಈ ಸಂದರ್ಭದಲ್ಲಿ ಹಲವು ಸಾಹಿತ್ಯ ಕೃತಿಗಳು ರಚನೆಗೊಂಡವು. ವಚನಗಳ ರಚನೆ, ಸಂಪಾದನೆ, ಸಂಕಲನವನ್ನು ನೂರೊಂದು

ವಿರಕ್ತರು ಮಾಡಿದ್ದು ಖಚಿತವೆ? ಅಂದರೆ ಅದನ್ನು ಮಾಡಿದವರು ಯಾರು? ಹೀಗೆ ಅನೇಕ ವಿಷಯಗಳನ್ನು ಕುರಿತು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಕರ್ನಾಟಕದ ಸಂದರ್ಭದಲ್ಲಿ ಕ್ರಿ.ಶ. ೧೩೩೬ರಲ್ಲಿ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯವು ಈ ನಾಡಿಗೆ ತನ್ನದೆಯಾದ ಅಭೂತ ಪೂರ್ವವಾದ ಕೊಡುಗೆಯನ್ನು ನೀಡಿವೆ. ಈ ಸಾಮ್ರಾಜ್ಯದ ಉದಯಕ್ಕೆ ಶೈವ ಧರ್ಮದ ಗುರುಗಳಾದ 'ಕ್ರಿಯಾಶಕ್ತಿ' ಪಂಡಿತರ ಶ್ರಮ ಅಪಾರ. ಅನೇಕ ಶೈವ ಧರ್ಮದ ನೆಲೆಗಳಂತೆ ಪಂಪಾಕ್ಷೇತ್ರವು ಸಹ ಶೈವಧರ್ಮದ ಸುಪ್ರಸಿದ್ಧ ಕ್ಷೇತ್ರವಾಗಿತ್ತು. ಈ ಸಾಮ್ರಾಜ್ಯವನ್ನು ಆಳಿದ ನಾಲ್ಕು ಅರಸು ಮನೆತನದಲ್ಲಿ ಮೊದಲನೆಯದಾದ ಸಂಗಮ ವಂಶದ ದೊರೆಗಳು ಸಹ ಶೈವ ಧರ್ಮದ ಅನುಯಾಯಿಗಳಾಗಿದ್ದರು. ಅವರಲ್ಲಿ ಹದಿನೈದನೆಯ ಶತಮಾನದ ಪ್ರೌಢದೇವರಾಯನ ಕಾಲದಲ್ಲಿ ವಿಜಯನಗರದ ಆಳ್ವಿಕೆಯು ಯಾವುದೇ ಅಹಿತಕರ ಘಟನೆಗಳಿಗೆ ಒಳಗಾಗದೆ ಶಾಂತಿಯುತವಾಗಿತ್ತೆಂದು ಕಾವ್ಯಗಳು ನಿರೂಪಿಸುತ್ತವೆ. ಅಲ್ಲದೇ ರಾಜಕೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹೆಚ್ಚು ಪ್ರಸಿದ್ಧಿಯನ್ನು ಪಡೆದ ರಾಜಮನೆತನವೆಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತೆಂದು ಅನೇಕ ಚಾರಿತ್ರಿಕ ದಾಖಲೆಗಳು ಸಹ ತಿಳಿಯಪಡಸುತ್ತವೆ.

"ಇಮ್ಮಡಿ ದೇವರಾಯನು ಅತಿವಿಸ್ತಾರವಾದ ಸಾಮ್ರಾಜ್ಯವನ್ನು ತುಂಬು ವೈಭವದಿಂದ ಆಳಿದನು. ಈತನು ಕಲಾಭಿಮಾನಿಯೂ ಸಾಹಿತ್ಯ ಪೋಷಕನೂ ಆಗಿದ್ದನು. ಇವನು ಜನಪ್ರಿಯ ಸಾಮ್ರಾಟನಾಗಿದ್ದ, ಆಗಿನ ಕಾಲದ ಅನೇಕ ಶಾಸನಗಳಲ್ಲಿ ಸಾಮ್ರಾಜ್ಯದ ಉನ್ನತ ಆದರ್ಶಗಳಿಗೆ ತಕ್ಕಂತೆ ಗುಣವಿಶೇಷಣಗಳನ್ನು ಆತನಿಗೆ ಬಳಸಿರುವುದನ್ನು ಕಾಣಬಹುದು. ಸಂಸ್ಕೃತ, ತೆಲುಗು, ತಮಿಳು ಹಾಗೂ ಕನ್ನಡ ಕವಿಗಳು ತಮ್ಮ ಕೃತಿಗಳಲ್ಲಿ ಈತನನ್ನು ಅತೀಶಯವಾಗಿ ಬಣ್ಣಿಸಿದ್ದಾರೆ."[೧]

ಹಂಪೆ ಹಲವು ಸಮುದಾಯಗಳ ಅಥವಾ ಪರಂಪರೆಗಳ ನೆಲೆಬೀಡು. ಇಂತಹ ಬಹು ಸಂಸ್ಕೃತಿಯ ಕೇಂದ್ರವಾಗಿದ್ದ ಹಂಪೆಯ ಸುತ್ತಮುತ್ತ ಅನೇಕ ಸಾಧುಸಂತರು, ಅವಧೂತರೂ, ಯೋಗಿಗಳು ಆಧ್ಯಾತ್ಮಿಕ ಅನುಭಾವಿಗಳು ವಾಸವಾಗಿದ್ದರು. ಇವರು ಈ ಸುಂದರ ಪ್ರದೇಶದಲ್ಲಿ ನೆಲೆಯೂರಿ ತಮ್ಮ ಕಾರ್ಯ ಚಟುವಟಿಕೆ ನಡೆಸಿದರೆಂಬುದಕ್ಕೆ ಅನೇಕ ಕುರುಹುಗಳು ದೊರೆಯುತ್ತವೆ. ಈ ಅನುಬಾವಿಗಳು ಹೆಚ್ಚು ಬಯಸುವುದು ನಿರ್ಜನವಾದ ಪ್ರದೇಶ, ಹೀಗಾಗಿ ಬೆಟ್ಟ, ಗುಡ್ಡ, ಗುಹೆಗಳಿಂದ ಕೂಡಿದ ಹಂಪೆಯ ಪರಿಸರವು ಅವರಿಗೆ ಸೂಕ್ತ ಸ್ಥಳವಾಗಿತ್ತು. ಪ್ರಾಚೀನ ಕಾಲದಿಂದಲೂ ಧಾರ್ಮಿಕ ಹಾಗೂ ಆಧ್ಯಾತ್ಮಿಕ ದೃಷ್ಟಿಯಿಂದ ಹಂಪೆಗೆ ಒಂದು ಪೌರಾಣಿಕ ಹಿನ್ನಲೆ ಇದೆ. ಪೌರಾಣಿಕ ಐತಿಹ್ಯಗಳ ಆವರಣದಲ್ಲಿ ಪುಣ್ಯ ಸ್ಥಳ, ಪವಿತ್ರ ಕ್ಷೇತ್ರವೆಂಬ ಗೌರವವನ್ನು ಪಡೆದಿತ್ತು. "ಪರಂಪರಾಗತ ಸ್ಥಳೀಯ ನಂಬಿಕೆಯಂತೆ ರಾಮಾಯಣದಲ್ಲಿ ವರ್ಣಿಸಲಾದ

ಪಂಪ ಸರೋವರವು ಮತ್ತು ವಾನರಾಧಿರಾಜನಾದ ವಾಲಿಯ ರಾಜಧಾನಿ ಕಿಷ್ಕಿಂದೆ ಇದೇ ಪ್ರದೇಶದಲ್ಲಿ ನೆಲೆಸಿದ್ದವು"[೨]

ಕಲ್ಯಾಣ ಕ್ರಾಂತಿಯ ಪೂರ್ವದಲ್ಲಿ ಹೆಚ್ಚು ಪ್ರಸಿದ್ಧಿಯಿಂದ ಮೆರೆದಿದ್ದ ವೀರಶೈವ ಧರ್ಮ ಕ್ರಾಂತಿಯ ನಂತರ ಅನೇಕ ಏಳು ಬೀಳುಗಳನ್ನು ಅನುಭವಿಸಬೇಕಾಯಿತು. ಕಲ್ಯಾಣ ಕ್ರಾಂತಿಯ ಪ್ರಭಾವದಿಂದ ಶರಣರೆಲ್ಲ ಚದುರಿ ಹೋಗಿದ್ದರಿಂದ ವೀರಶೈವ ಧರ್ಮಕ್ಕೆ ಬಲವಾದ ಪೆಟ್ಟು ಬಿತ್ತು. ಇಂತಹ ಸಂದಿಗ್ಧ ಸಂದರ್ಭದಲ್ಲಿ ಪ್ರೌಢದೇವರಾಯನ ಕಾಲದಲ್ಲಿದ್ದ ನೂರೊಂದು ವಿರಕ್ತರು ಪುನಃ ಆ ಧರ್ಮವನ್ನು ಬೆಳಗಿಸಿದರೆಂಬ ಮಾತು ಅನೇಕ ಸಾಹಿತ್ಯ ಮತ್ತು ಪುರಾಣ ಕೃತಿಗಳ ಮೂಲಕ ತಿಳಿದು ಬರುತ್ತಿದೆ.

ವೀರಶೈವಾಭಿಮಾನಿಯಾಗಿದ್ದ ಪ್ರೌಢದೇವರಾಯನು ತನ್ನ ಇಪ್ಪತ್ತೈದು ವರ್ಷದ ಆಳ್ವಿಕೆಯಲ್ಲಿ ಸಾಹಿತ್ಯ ಸೃಷ್ಟಿಗೆ ಹೆಚ್ಚು ಒಲವನ್ನು ತೋರಿದನು. ಈ ಧರ್ಮಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದ್ದ, ಈತನನ್ನು ವೀರಶೈವ ಧರ್ಮಕ್ಕೆ ಸೇರಿದವನೆಂಬ ರೀತಿಯಲ್ಲಿ ಅಂದಿನ ಆಸ್ಥಾನದ ಕವಿವಾರ್ಯರು ಚಿತ್ರಿಸಿರುವರು. ಶೈವ, ವೈಷ್ಣವ, ಜೈನ ಧರ್ಮಕ್ಕಿಂತ ಹೆಚ್ಚಾಗಿ ಒಲವನ್ನು ವೀರಶೈವ ಧರ್ಮಕ್ಕೆ ತೋರಿದ್ದರಿಂದ ಈ ಧರ್ಮ ಹೆಚ್ಚು ಪ್ರಸಿದ್ಧಿಯನ್ನು ಪಡೆದಿತ್ತು. ಕನ್ನಡ ಸಾಹಿತ್ಯದ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಯಾವ ಯಾವ ಕಾಲಘಟ್ಟದಲ್ಲಿ ಯಾವ ಧರ್ಮ ಪ್ರವರ್ಧಮಾನದಲ್ಲಿರುವುದೋ ಅಂತಹ ಸಂದರ್ಭದಲ್ಲಿ ಬೇರೆ ಧರ್ಮದ ಸಾಹಿತ್ಯ ಕೃತಿಕ್ಕಿಂತ ಸ್ವ ಧರ್ಮದ ಕೃತಿಗಳು ಹೆಚ್ಚಾಗಿ ಕಂಡುಬಂದ ಸಂದರ್ಭಗಳಿವೆ. ಅಂತಹ ಸಂದರ್ಭ ಪ್ರೌಢದೇವರಾಯನ ಕಾಲದಲ್ಲಿ ಗೋಚರಿಸಿತೆಂದು ಹೇಳಬಹುದು. ಪ್ರೌಢದೇವರಾಯನ ಆಳ್ವಿಕೆಯ ಕಾಲಾವಧಿಯು ವೀರಶೈವ ಧರ್ಮದ ಉನ್ನತಿಯ ಕಾಲ. ಆಸ್ಥಾನದಲ್ಲಿ ನೆಲೆಸಿದ ಪಂಡಿತ ಪಾಮರರೆಲ್ಲ ಹೆಚ್ಚಾನು ಹೆಚ್ಚಾಗಿ ವೀರಶೈವರಾಗಿರುವರು. ಹೀಗಾಗಿ ವೀರಶೈವ ಧರ್ಮಕ್ಕೆ ಸಂಬಂಧಿಸಿದ ಅನೇಕ ರೀತಿಯ ವೈವಿಧ್ಯಮಯವಾದ ಸಾಹಿತ್ಯ ಕೃತಿಗಳು ರಚನೆಯಾದವು.

"ಸಾಹಿತ್ಯ ಚರಿತ್ರೆಯನ್ನು ಬರೆಯ ಹೊರಟ ಎಲ್ಲ ಮಹನೀಯರು ಕಂಡುಕೊಂಡ ಒಂದು ಸತ್ಯವೆಂದರೆ ಸಾಹಿತ್ಯದ ರಚನೆಗೆ ಸ್ಫೂರ್ತಿಯ ಸೆಲೆಯಾದುದು, ಕಾಲದ ಒತ್ತಡಕ್ಕಿಂತ ಹೆಚ್ಚಾಗಿ ಮತ ಹಾಗೂ ಮತೀಯ ಪ್ರಚೋದನೆ ಈ ಸಂದರ್ಭದಲ್ಲಿ ಹೆಚ್ಚು ಕೆಲಸ ಮಾಡಿದೆ ಎಂದು ಅನಿಸುತ್ತದೆ."[೩] ಅಂದಿನ ವೇಳೆಯಲ್ಲಿ ಸಭೆ ಸಮಾರಂಭಗಳ ಮೂಲಕ ಸ್ವಧರ್ಮದ ತಾತ್ವಿಕ ವಿಚಾರಗಳನ್ನು ಜನಸಾಮಾನ್ಯರಿಗೆ ತಿಳಿಯಪಡಿಸುವ ಕಾರ್ಯವನ್ನು ಮಾಡಿದರು.

"ರಾಜಧಾನಿ ಮತ್ತಿತರ ಸ್ಥಳಗಳಲ್ಲಿ ನಡೆಯುತ್ತಿದ್ದ ವೀರಶೈವ ಚಟುವಟಿಕೆಗಳಿಗೆ ಇಮ್ಮಡಿ ದೇವರಾಯನ ಉತ್ತೇಜನ ಅಪಾರವಾಗಿತ್ತೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಸಂಗಮ

ದೊರೆಗಳ ತುಂಬು ಬೆಂಬಲ ವೀರಶೈವ ಸಾಹಿತ್ಯ, ಸಂಸ್ಥೆ ಮತ್ತು ಧರ್ಮ ಪ್ರಚಾರ ಕಾರ್ಯಗಳ ಸರ್ವತೋಮುಖ ಅಭಿವೃದ್ಧಿಗೆ ಬಲವಾದ ಪ್ರೇರಣೆಯನ್ನು ಒದಗಿಸಿತು. ಲಾಕುಲ, ಪಾಶುಪತ ಮತ್ತು ಕಾಳಮುಖ ಪಂಥಗಳ ಆಚಾರ್ಯರು ಹಾಗೂ ಬಸವಣ್ಣನವರ ಅನುಯಾಯಿಗಳ ನಡುವೆ ಪರಸ್ಪರ ಅರಿವುಂಟಾಗಿ ಈ ಎಲ್ಲ ವಿಭಿನ್ನ ಪಂಥಗಳು ಒಂದಾಗಿ ವ್ಯವಸ್ಥಿತ ಹಾಗೂ ಸುಸಂಬದ್ಧ ವೀರಶೈವ ಧರ್ಮವಾಗಿ ಬೆಳೆಯುವ ದಾರಿ ಸುಗಮವಾಗಲು ಬೇಕಾದ ಎಲ್ಲ ಸದಾವಕಾಶಗಳನ್ನು ಒದಗಿಸಿಕೊಟ್ಟಿದ್ದು ಈ ಕಾಲದ ಗಮನಾರ್ಹ ಕೊಡುಗೆ."[೪]

ಪ್ರೌಢದೇವರಾಯನ ಕಾಲದಲ್ಲಿ ಜೀವಿಸಿದ ವಿರಕ್ತರು ಹಂಪೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ತಮ್ಮ ಅಪಾರವಾದ ಕಾರ್ಯ ಚಟುವಟಿಕೆಯಿಂದ ಜನಸಾಮಾನ್ಯರನ್ನು ಬೆರಗುಗೊಳಿಸಿದ್ದರು. ಸಾಹಿತ್ಯಿಕವಾಗಿ, ಚಾರಿತ್ರಿಕವಾಗಿ ಗಮನಿಸಿದರೆ ಇವರ ಬಗ್ಗೆ ಪರಿಪೂರ್ಣವಾದ ಮಾಹಿತಿ ಎಲ್ಲೂ ದೊರೆಯಲಾರದು. ಜೀವನ ಚರಿತ್ರೆ ಹಾಗೂ ಐತಿಹಾಸಿಕತೆಯ ಬಗ್ಗೆ ಕೆಲವೇ ಮಹಾನೀಯರ ಕುರಿತ ಮಾಹಿತಿ ದೊರೆಯುತ್ತದೆ. ಅವರಲ್ಲಿ ಕರಸ್ಥಲದ ನಾಗಿದೇವ, ಕರಸ್ಥಲದ ವೀರಣ್ಣೊಡೆಯ, ಸಪ್ತ ಕಾವ್ಯದ ಗುರುಬಸವ, ಬತ್ತಲೇಶ, ನಿರ್ವಾಣಿ ಬೋಳೇಶರಂತಹ ಆಸ್ಥಾನದಲ್ಲಿ ಸ್ಥಾನ ಪಡೆದಂತಹ ಮಹನೀಯರ ಚರಿತ್ರೆ ಅಲ್ಪ ಪ್ರಮಾಣದಲ್ಲಿ ಸಿಗುವುದು. ಆದರೆ ಉಳಿದ ವಿರಕ್ತರ ಬಗ್ಗೆ ಪೂರ್ಣ ಪ್ರಮಾಣದ ಮಾಹಿತಿ ಎಲ್ಲಿಯೂ ಸಿಗಲಾರದು. ಮೋದಿಯ ರುದ್ರನ 'ವಿರಕ್ತರ ಕಾವ್ಯ' ಮತ್ತು 'ನೂರೊಂದು ವಿರಕ್ತರ ಸ್ತೋತ್ರ'ದಲ್ಲಿ ಹೆಸರುಗಳ ಪಟ್ಟಿಯನ್ನು ಒಂದು ಎರಡು ಪದ್ಯಗಳಲ್ಲಿ ನಿರೂಪಿಸುತ್ತ ಮುಂದೆ ಸಾಗಿದ್ದಾರೆ. ಆದರೆ ಅವರು ಗೈದ ಕಾರ್ಯ ಕ್ಷೇತ್ರದ ಮಾಹಿತಿ ಶೂನ್ಯ ಸ್ಥಿತಿಯಲ್ಲಿದೆ. ಅಂದಿನ ಸಮಕಾಲೀನ ಸಂದರ್ಭದಲ್ಲಿ ರಚನೆಯಾದ ಯಾವ ಕೃತಿಯಲ್ಲೂ ಇವರನ್ನು ಕುರಿತ ಮಾಹಿತಿ ನೀಡಿಲ್ಲ. ಇವರೆಲ್ಲಾರು ಅಳಿದ ನಂತರ ರಚನೆಯಾದ ಸಾಹಿತ್ಯ ಕೃತಿಯಲ್ಲಿ ಅಥವಾ ಪುರಾಣ ಕೃತಿಯಲ್ಲಿ ಇವರ ಮಾಹಿತಿ ಉಂಟು.

ವಿಜಯನಗರ ಸಾಮ್ರಾಜ್ಯದ ಪರಿಸರದಲ್ಲಿ ನೆಲೆನಿಂತ ನೂರೊಂದು ವಿರಕ್ತರ ಚಟುವಟಿಕೆ ಹೆಚ್ಚು ಪ್ರಭಾವಶಾಲಿಯಾಗಿತ್ತು. ಅಂದು ವೀರಶೈವ ಧರ್ಮವನ್ನು ಉತ್ತುಂಗ ಶಿಖರಕ್ಕೇರಿಸಿ, ಅದರ ಜನಪ್ರಿಯತೆಗೆ ಕಾರಣೀಭೂತರಾದವರೆಂದು ಕೆಲವೊಂದು ಸಾಹಿತ್ಯ ಕೃತಿಗಳು ತುಂಬಾ ವೈಭವ ಪ್ರೇರಿತವಾಗಿ ವರ್ಣಿಸಿವೆ. "ಹದಿನಾಲ್ಕನೆಯ ಶತಮಾನದ ಮಧ್ಯಭಾಗದ ಅನಂತರ ವೀರಶೈವ ಧರ್ಮ ಕೇವಲ ಒಂದು ಮತವಾಗಿ ಉಳಿಯದೆ ಆವರೆಗಿನ ಗೌಣಸ್ಥಿಯ ಪೊರೆಯಿಂದ ಹೊರಬಂದು ಒಂದು ಪ್ರಬಲಶಕ್ತಿಯಾಗಿ ಪ್ರಕಟಗೊಂಡು ಅಂದಿನ ಜೀವನ ಪ್ರವಾಹದ ಪ್ರಮುಖ ವಾಹಿನಿಯಾಯಿತು. ಹೀಗೆ ಸಂಗಮರ ಕಾಲದಲ್ಲಿ ಪ್ರಜ್ವಲಿಸಿದ ವೀರಶೈವ ಧರ್ಮ ಅಂದಿನ ರಾಜಕೀಯ ಧಾರ್ಮಿಕ ಮುಂತಾದ ಅನೇಕ ಆಂತರಿಕ ಕ್ರಿಯೆಗಳ ಫಲ ಎಂದೇಳಬಹುದು."[೫] ಅಂದು ರಚನೆಯಾದ ಸಾಹಿತ್ಯ ಕೃತಿಗಳು ಪೌರಾಣಿಕ ಹಿನ್ನಲೆಯಲ್ಲಿ

ರಚನೆಗೈದು, ವೀರಶೈವ ಧರ್ಮದ ಪ್ರಚಾರದ ದೃಷ್ಟಿಯಿಂದ ಈ ವಿರಕ್ತರನ್ನು ದೇವಲೋಕದಿಂದ ಧರೆಗಿಳಿದ ದೈವಸಂಭೂತರೆಂದು ಚಿತ್ರಿಸಿರುವರು. ಅಲ್ಲದೆ ವೀರಶೈವ ಧರ್ಮವನ್ನುದ್ಧರಿಸಿದವರು ವಿರಕ್ತರೇ ಎಂಬ ಪೂರ್ವ ನಿರ್ಧರಿತ ಕಲ್ಪನೆ ಅನೇಕ ವೀರಶೈವ ಅನುಯಾಯಿಗಳಲ್ಲಿ ಅಂದು ನೆಲೆಗಟ್ಟಿತ್ತು.

ಪ್ರೌಢದೇವರಾಯನ ಕಾಲದಲ್ಲಿ ವೀರಶೈವ ಧರ್ಮವು ಪ್ರವರ್ಧಮಾನಕ್ಕೇರಲು ನೂರೊಂದು ವಿರಕ್ತರಿಗಿಂತ ಆಸ್ಥಾನದಲ್ಲಿ ನೆಲೆಯೂರಿದ ವೀರಶೈವ ಪಂಡಿತರೆ ಕಾರಣ ಪುರುಷರು. ಇವರಲ್ಲಿ ಕೆಲವರು ಕವಿಗಳು, ವಿದ್ವಾಂಸರು ಹಾಗೂ ಪಂಡಿತ ಮಹಾಶಯರಿದ್ದರು. ಆಸ್ಥಾನದಲ್ಲಿ ಸ್ಥಾನಪಡೆದವರಲ್ಲಿ ಬಹಳಷ್ಟು ಮಂದಿ ವೀರಶೈವರಾಗಿರುವರು. "ಅಲ್ಲದೆ ಇವರ ಆಳ್ವಿಕೆಯಲ್ಲಿ ಅನೇಕ ವೀರಶೈವರು ಸೈನ್ಯ ಹಾಗೂ ಆಡಳಿತ ವಿಭಾಗಗಳಲ್ಲಿ ಪ್ರಮುಖ ಹುದ್ದೆಗಳನ್ನು ಅಲಂಕರಿಸಿದ್ದರು. ಈ ಕಾಲದ ಪ್ರಮುಖ ವೀರಶೈವ ಅಧಿಕಾರಿಗಳೆಂದರೆ ಲಕ್ಕಣ ದಂಡನಾಯಕ, ಅರಿಯಪ್ಪ ದಂಡನಾಯಕ ಮತ್ತು ಭಂಡಾರಿ ಜಕ್ಕಪ್ಪ. ಈ ಗಣ್ಯರು ರಾಜಮರ್ಯಾದೆಗಳನ್ನು ಪಡೆಯುತ್ತಿದ್ದರಲ್ಲದೆ ಅನೇಕ ವೀರಶೈವರನ್ನು ಆಡಳಿತ ಇಲಾಖೆಯಲ್ಲಿ ತುಂಬಿದರು. ಅಲ್ಲದೇ ಅರಸರು ವೀರಶೈವ ಸಂಘ, ಸಂಸ್ಥೆಗಳಿಗೆ ಆರ್ಥಿಕ ನೆರವನ್ನು ನೀಡಬಲ್ಲವರಾಗಿದ್ದರು."[೧] ಪ್ರೌಢದೇವರಾಯನ ಕಾಲದಲ್ಲಿ ಧಾರ್ಮಿಕ ದೃಷ್ಟಿಕೋನ ಅಪಾರವಾಗಿತ್ತು. ಅಂದಿನ ಹಲವು ಪೌರಾಣಿಕ ಕವಿಗಳು ನೂರೊಂದು ವಿರಕ್ತರನ್ನು ವೀರಶೈವ ಧರ್ಮದೊಡನೆ ಸಂಲಗ್ನಗೊಳಿಸಿರುವರು.

"ಮಧ್ಯಕಾಲೀನ ವೇಳೆಯಲ್ಲಿ ವೀರಶೈವ ಧರ್ಮದ ಪ್ರಸಾರಕ್ಕೆ ವೈಧಿಕ ಧರ್ಮವು ಹಲವಾರು ತೊಂದರೆಗಳನ್ನು ತಂದೊಡ್ಡಿತು. ಈ ಕಾರಣದಿಂದಲೋ ಏನೋ ವೀರಶೈವ ಕವಿಗಳು, ತಮ್ಮ ಧರ್ಮದ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹಲವು ಮಾರ್ಗಗಳನ್ನು ಅನುಸರಿಸಿದುಂಟು. ಅವುಗಳಲ್ಲಿ ಧರ್ಮದ ಮಹಾಪುರುಷರ ವ್ಯಕ್ತಿ ಮಹಿಮೆಯನ್ನು, ಅದ್ಭುತ ಶಕ್ತಿಯನ್ನು ಹಾಗೂ ಧಾರ್ಮಿಕ ತತ್ವಗಳ ಘನತೆಯನ್ನು, ಆಚಾರದ ಮಹತ್ವವನ್ನು ಶ್ರೀಸಾಮಾನ್ಯರಿಗೆ ತಿಳಿಸಲು ವಿಶೇಷವಾಗಿ ತಮ್ಮ ಕೃತಿಗಳಲ್ಲಿ ಪವಾಡ ಕಥೆ (ಪ್ರತ್ಯಕ್ಷಂಗಳು)ಗಳನ್ನು ಅಳವಡಿಸಿಕೊಂಡು ವರ್ಣಿಸಿರುವರು."[೨] ಈ ರೀತಿಯ ವರ್ಣನೆಗೆ ನೂರೊಂದು ವಿರಕ್ತರು ಸಹ ಹೊರತಾಗಿಲ್ಲ. ಮೋದಿರುದ್ರನಂತಹ ಕವಿಗಳು ತಮ್ಮ ಕೃತಿಗಳಲ್ಲಿ ಈ ವಿರಕ್ತರ ಪವಾಡ ಸಾದೃಶ್ಯಗಳನ್ನು ವಿವರವಾಗಿ ಚರ್ಚಿಸಿರುವರು. ಲೌಕಿಕ ವ್ಯಕ್ತಿಗಳಾದ ಇವರನ್ನು ಅಲೌಕಿಕ ವ್ಯಕ್ತಿಗಳಂತೆ ಅಸಾಧಾರಣ ಮಹಿಮಾ ಪುರುಷರಂತೆ ತಮ್ಮ ಕೃತಿಗಳಲ್ಲಿ ಚಿತ್ರಿಸಿರುವರು. ನೂರೊಂದು ವಿರಕ್ತರು ದಿವ್ಯ ಪುರುಷರಾಗಿದ್ದು ಇವರ ಕಾರ್ಯ ವೈಖರಿ ನಾಡಿನಲ್ಲಿ ಅಂದು ಅಪಾರವಾಗಿತ್ತು. ಆದರೆ ಇವರಲ್ಲಿ ರಾಜನ ಆಸ್ಥಾನದಲ್ಲಿ ಉನ್ನತ ಪದವಿಯನ್ನು ಅಲಂಕರಿಸಿದ ವಿರಕ್ತರ ಜೀವನದ ಮಾಹಿತಿ ಹಾಗೂ ಸಾಹಿತ್ಯ ಕೃಷಿಯ ವಿವರಣೆ ದೊರೆಯುತ್ತದೆಯೋ ಹೊರತು ಉಳಿದ ವಿರಕ್ತರ ಕುರಿತು

ಕೇವಲ ಪವಾಡ ಸಾದೃಶ್ಯಗಳನ್ನು ಹೇಳಿ ಮತ್ತೆ ಕೆಲವರ ಹೆಸರನ್ನು ಹೇಳಿ ಮೋದಿಯರುದ್ರ ತನ್ನ ಕೃತಿಯಲ್ಲಿ ಸಾಗುತ್ತಾನೆ. ಹೀಗಾಗಿ ಈ ವಿರಕ್ತರ ಬಗ್ಗೆ ಖಚಿತವಾದ ಚಾರಿತ್ರಿಕಾಂಶಗಳು ದೊರೆಯದೆ ಬಹುಮುಖವಾದ ಚರ್ಚೆ, ಜಿಜ್ಞಾಸೆಗಳು ತಲೆದೂರುತ್ತದೆ.

ನೂರೊಂದು ವಿರಕ್ತರ ಕುರಿತಾದ ಸಂಗತಿಗಳು ಕಡಿಮೆ ಪ್ರಮಾಣದಲ್ಲಿ ದೊರೆಯುತ್ತವೆ. ಅನೇಕ ಸಾಧು-ಸಂತರ ಚರಿತ್ರೆಗಳು ನಸುಗತ್ತಲೆಯಲ್ಲಿ ಮುಸುಮುಸುಕಾಗಿ ಕಾಣುವಂತೆ ಈ ವಿರಕ್ತರ ಚರಿತ್ರೆ ಸಹ ಅಷ್ಟೆ ಅಸ್ಪಷ್ಟವಾಗಿದೆ. ಪ್ರಾಚೀನ ಕಾಲದ ಋಷಿಮುನಿಗಳಾದ ಅರುಣಿ, ಯಜ್ಞವಲ್ಕ್ಯರ ಚರಿತ್ರೆಗಳ ಬಗ್ಗೆ ಸಹ ಸ್ಪಷ್ಟ ಕಲ್ಪನೆ ಇಲ್ಲ. ದೇಹವಳಿದ ಬಳಿಕ ಅಜರಾಮರ ಆತ್ಮನು ಯಾವ ರೀತಿ ಭೂಮಂಡಲದಲ್ಲಿ ವಿರಾಜಿಸುವದೋ ಹಾಗೇ ಈ ವಿರಕ್ತ ಮಹಾತ್ಮರು ಕಾಲವಶರಾದ ಬಳಿಕ ಅವರ ಕೈಂಕಾರ್ಯವು ಜನರಲ್ಲಿ ಅಚ್ಚರಿ ಮೂಡಿಸಿರಬಹುದು. ಹೀಗಾಗಿಯೇ ಅವರ ನೆನಮ ಈಗಲೂ ಸಹ ಅಚ್ಚಳಿಯದೇ ಉಳಿದಿದೆ. ಆದರೆ ಶೋಚನಿಯ ಸಂಗತಿ ಎಂದರೆ ಹಲವಾರು ವಿದ್ವಾಂಸರು '೧೦೧' ವಿರಕ್ತರ ಕುರಿತು ಹೆಚ್ಚು ಆಸಕ್ತಿ ವಹಿಸಿ ಅಧ್ಯಯನ ಮಾಡದೇ ಇರುವುದು ವಿಪರಾಸ್ಯದ ಸಂಗತಿಯಾಗಿದೆ.

ಸಾಹಿತ್ಯ ಚರಿತ್ರೆಯಲ್ಲಿ ಇಂದಿಗೂ ಒಂದು ಸಮಸ್ಯೆಯಾಗಿ ಉಳಿದ ನೂರೊಂದು ವಿರಕ್ತರ ಮೂಲ ಯಾವುದು? ಎಲ್ಲಿಂದ ಈ ಪರಂಪರೆ ಹಂಪೆಯ ಕಡೆಗೆ ವಾಲಿತು, ಇವರು ಹಂಪೆಯ ಸುತ್ತಮುತ್ತಲಿನ ಪರಿಸರದಲ್ಲಿಯೇ ಉದ್ಭವವಾದವರೇ? ಅಥವಾ ಕರ್ನಾಟಕದ ಮೂಲೆ ಮೂಲೆಯಿಂದ ಹಂಪೆಗೆ ಬಂದು ನೆಲೆ ಊರಿದವರೆ ಎಂಬ ಹಲವು ಪ್ರಶ್ನೆಗಳು ಸಹಜವಾಗಿಯೇ ಕಾಡುತ್ತದೆ. ವಿಜಯನಗರ ಸಾಮ್ರಾಜ್ಯವು ಅಂದು ತುಂಬಾ ವಿಸ್ತಾರವಾಗಿ ಹರಡಿತ್ತು. ಶೃಂಗೇರಿ, ಶ್ರಾವಣ ಬೆಳಗೋಳ, ಮೈಸೂರು, ಆಂಧ್ರ ಪ್ರದೇಶ ಹಾಗೂ ತಮಿಳುನಾಡಿನ ಬಗೆಗೆ ಕಾವ್ಯಗಳಲ್ಲಿ ಕೆಲವೊಂದು ಶಾಸನದಲ್ಲಿ ಪ್ರಸ್ತಾಪವಾಗಿರುವುದನ್ನು ಸೂಕ್ಷ್ಮವಾಗಿ ಗಮನಿಸಿದರೆ ಹಂಪೆಯ ಆಡಳಿತವು ಅಲ್ಲಿಯ ಗಡಿಭಾಗದವರೆಗೂ ವಿಸ್ತಾರವಾಗಿ ಬೇರೂರಿತ್ತೆಂದು ತಿಳಿದುಬರುತ್ತದೆ. ಆಡಳಿತಾತ್ಮಕವಾಗಿ ತುಂಬ ಪ್ರಸಿದ್ಧಿ ಹೊಂದಿದ ಹಂಪೆ, ಧಾರ್ಮಿಕವಾಗಿಯೂ ಹೆಚ್ಚು ಜನಪ್ರಿಯವಾಗಿತ್ತು. ಆದ್ದರಿಂದಲೇ ನಾಡಿನ ಮೂಲೆ ಮೂಲೆಗಳಿಂದ ಅನುಭಾವಿಗಳು ಆಧ್ಯಾತ್ಮಿಕ ಜೀವಿಗಳು ತಮಗೆ ಸಕಲ ಕಾರ್ಯ ಕ್ಷೇತ್ರಕ್ಕೆ ಅನುಕೂಲವಾದ ಹಂಪೆಯ ಸುತ್ತ ಮುತ್ತಲಿನ ಪ್ರದೇಶದಲ್ಲಿ ಬಂದು ನೆಲೆ ನಿಂತಿದ್ದರು. ಹಂಪೆಯ ಪರಿಸರ ತುಂಬಾ ವೈಶಿಷ್ಟ್ಯತೆಯಿಂದ ಕೂಡಿತ್ತು. ಸಮೃದ್ಧವಾಗಿ ಹರಿಯುವ ತುಂಗಾಭದ್ರೆ, ಇಲ್ಲಿರುವ ಕಲ್ಲುಬಂಡೆ, ಗುಹೆಗಳು ಹಾಗೂ ಬೆಟ್ಟಗುಡ್ಡಗಳು ಇವರಿಗೆ ಆಶ್ರಯ ತಾಣಗಳಾಗಿದ್ದವು. ಜೀವನಾವಶ್ಯಕತೆಯನ್ನು ಪೂರೈಸುವಲ್ಲಿ ಅಲ್ಲದೆ ಆಧ್ಯಾತ್ಮಿಕ ಜೀವಿಗಳ ಏಕಾಂತವಾದ ಸಾಧನೆಗೆ ಈ ಪ್ರದೇಶ ತುಂಬಾ ಅನುಕೂಲಕರವಾಗಿತ್ತು.

"ಪ್ರೌಢದೇವರಾಯನ ಮಂತ್ರಿಯಾದ ಲಕ್ಕಣ್ಣ ದಂಡೇಶ ತನ್ನ 'ಶಿವತತ್ವ ಚಿಂತಾಮಣಿ'ಯಲ್ಲಿ ಗುಮ್ಮಳಾಪುರವನ್ನು ಪ್ರಸ್ತಾಪಿಸುತ್ತ ಅಲ್ಲಿ ತಿಂಥಿಣಿವಡೆದು ನೆರೆ ಭಕ್ತಿಮಯವಾಗಿ ಸಲ್ಲಲಿತ ಶತಗಣಂಗಳು" ಇದ್ದುದನ್ನು ಸೂಚಿತ್ತ, "ಹದಿನಾಡೊಳೆಸೆವ ಬೊಮ್ಮನಹಳ್ಳಿಯಲ್ಲಿರ್ಪ ಮದನಹರ ಶರಣ ವೀರಣ್ಣ"ನನ್ನು ಸ್ಮರಿಸುತ್ತಾನೆ. ಇಲ್ಲಿ 'ಶತಗಣಂ' ಪದದ ಮೂಲಕ ನೂರೊಂದು ವಿರಕ್ತರನ್ನೂ ಬೊಮ್ಮನಹಳ್ಳಿಯ 'ವೀರಣ್ಣ' ಹೆಸರಿನ ಮೂಲಕ ಈ ವಿರಕ್ತ ಸಮೂಹದ ಪ್ರಮುಖ ವ್ಯಕ್ತಿಯೂ ಬೊಮ್ಮೂರಿನವನೂ ಆದ ಕರಸ್ಥಲದ ವೀರಣ್ಣನನ್ನು ಸೂಚಿಸಿದ್ದಾನೆ. ವೀರಣ್ಣನು ಗುಮ್ಮಳಾಪುರ ಸಮೀಪದ ಬೊಮ್ಮುರಿನವನೆಂದು ಕರಸ್ಥಲ ನಾಗಲಿಂಗನ ಚರಿತ್ರೆ ತಿಳಿಸುವುದೂ, ನೆರೆಯ ಮೈಸೂರು ಜಿಲ್ಲೆಯ ಗುಂಡ್ಲು ಪೇಟೆ ತಾಲ್ಲೂಕಿನಲ್ಲಿ ಇವನ ಶಿಷ್ಯ ಕರಸ್ಥಲ ನಾಗಲಿಂಗನ ಗವಿಯಿರುವುದೂ, ನಾಗಲಿಂಗನು ಗುಮ್ಮಳಾಪುರದ ಶರಣರ ಹಮ್ಮು ಬಿಡಿಸಿದನೆಂದು ಈ ನಾಗಲಿಂಗನ ಚರಿತ್ರೆ ಮತ್ತು ಬಿಡಿ ಹಾಡುಗಳಲ್ಲಿ ಬರುವುದೂ, ಗುಮ್ಮಳಾಪುರದ ತಾಮ್ರ ಶಾಸನ (೧೪೭೪)ದಲ್ಲಿ ಶಾಂತದೇವ, ಶರಣ ವೀರಣ್ಣದೇವ, ನಾಗದೇವರ ಪ್ರಸ್ತಾಪವಿರುವುದು. ಈ ನೂರೊಂದು ವಿರಕ್ತ ಸಮೂಹ ಮೂಲತಃ ಗುಮ್ಮಳಾಪುರ ಪ್ರದೇಶವೆಂದು ಸ್ಪಷ್ಟಪಡಿಸುತ್ತವೆ. ಆಮೇಲೆ ಇವರ ಚಟುವಟಿಕೆ ಹಂಪೆಗೆ ವರ್ಗಾವಣೆಗೊಂಡಂತಿದೆ"[೮]

ಪ್ರಾಚೀನ ಕಾಲದಿಂದಲೂ ಹಂಪೆ ಒಂದು ಪವಿತ್ರ ಪುಣ್ಯಕ್ಷೇತ್ರ, 'ದಕ್ಷಿಣದ ಕಾಶಿ' ಎಂದು ಕರೆಸಿಕೊಳ್ಳಲು ಇದು ಅಂದು 'ಕಾಶಿ'ಯಷ್ಟೇ ಪವಿತ್ರವಾಗಿ ಪ್ರಸಿದ್ಧತೆಯನ್ನು ಪಡೆದಿತ್ತು. ಹಲವು ಧರ್ಮಗಳ ನೆಲೆಬೀಡಾದ ಹಂಪೆ ಧಾರ್ಮಿಕವಾಗಿ ಸಹ ಹೆಚ್ಚು ಖ್ಯಾತಿಗಳಿಸಿತ್ತು. ಹೀಗಾಗಿ ಅಂದು ಹಂಪೆಗೆ ನಾಡಿನ ಮೂಲೆ ಮೂಲೆಗಳಿಂದ ಹಲವು ಆಧ್ಯಾತ್ಮಿಕ ಜೀವಿಗಳು, ಮಹಿಮ ಪುರುಷರು ಬಂದು ನೆಲೆ ನಿಂತಿದ್ದರು. ವಿರಕ್ತರಲ್ಲಿ ಆದಿಪುರುಷನಾದ ಕರಸ್ಥಲ ನಾಗಿದೇವ, ಕರಸ್ಥಲದ ವೀರಣ್ಣೊಡೆಯರು ಅಂದು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಕಡೆಯಿಂದ ಅವರ ಶಿಷ್ಯ ಪರಂಪರೆಯೊಂದಿಗೆ ಹಲವು ಸ್ಥಳಗಳಲ್ಲಿ ನೆಲೆವೂರಿ ತಮ್ಮ ತಮ್ಮ ಪವಾಡ ಸಾದೃಶ್ಯಗಳನ್ನು ಮಾಡುತ್ತ ಹಂಪೆಯ ಕಡೆ ಬಂದು ಗಟ್ಟಿಯಾಗಿ ನೆಲೆವೂರಿದರು. ಮತ್ತೇ ಕೆಲದಿನಗಳಾದ ಮೇಲೆ ತಮ್ಮ ಮೂಲ ನೆಲೆಗೆ ಮರಳಿದರೆಂದು ಕ್ಷೇತ್ರಕಾರ್ಯದ ಮೂಲಕ ತಿಳಿದುಬರುತ್ತದೆ. ಹಂಪೆಯ ಸುತ್ತಮುತ್ತಲಿನ ಪರಿಸರವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಸಹಜವಾಗಿಯೇ ಅಲ್ಲಿ ಅನೇಕ ಸಾಧು-ಸಂತರು, ಯೋಗಿಗಳು, ಸನ್ಯಾಸಿಗಳು ಹಾಗೂ ಅವಧೂತರಂತಹ ದಿವ್ಯ ಪುರುಷರು ಈ ಪವಿತ್ರ ಪ್ರದೇಶದಲ್ಲಿ ವಾಸವಾಗಿದ್ದರೆಂಬುದಕ್ಕೆ ಈ ಪರಿಸರದಲ್ಲಿರುವ ಬೆಟ್ಟ ಗುಡ್ಡ, ಗುಹೆಗಳೇ ಸಾಕ್ಷಿಯಾಗಿವೆ. ಅಂದಿನ ಒಂದು ವಾತಾವರಣ ಪ್ರಸ್ತುತ ಸಂದರ್ಭದಲ್ಲೂ ಸಹ ಹಂಪೆಯಲ್ಲಿ ಕಾಣಬಹುದು.

"ಹಂಪೆಯ ಪ್ರದೇಶದಲ್ಲಿರುವ ಋಷ್ಯಮಾಶ್ರಮ, ಮತಂಗಋಷ್ಯಾಶ್ರಮಗಳು ಬಹಳ ಪ್ರಾಚೀನ ಕಾಲದಿಂದಲೂ ಹಂಪೆ ಸಾಧು–ಸಂತರನ್ನು, ಋಷಿಮುನಿಗಳನ್ನು ಆಕರ್ಷಿಸುತ್ತಿದ್ದುದಕ್ಕೆ ಸಾಕ್ಷಿಯಾಗಿದೆ. ಸದಾಕಾಲ ಹರಿಯುತ್ತಿರುವ ತುಂಗಭದ್ರೆ, ಬಂಡೆಗಲ್ಲುಗಳಿಂದ ಕೂಡಿದ ಪರ್ವತ ಶ್ರೇಣಿ ಇತ್ಯಾದಿಗಳು ತಪೋಭೂಮಿಗೆ ಅನುಕೂಲಕರ ಸನ್ನಿವೇಶಗಳಾಗಿವೆ."[೯] ಹೀಗಾಗಿ ಹಂಪೆಯ ಪ್ರಸಿದ್ಧತೆಯನ್ನು ಕೇಳಿದ ಅಂದಿನ ಮಹಿಮ ಪುರುಷರು ಹಂಪೆಯ ಕಡೆಗೆ ವಾಲಿದರು. ಅಲ್ಲದೆ ಪ್ರಾಚೀನ ಕಾಲದಿಂದಲೂ ಹಂಪೆ ಜೈನ, ಬೌದ್ಧ, ವೈಷ್ಣವ ಹಾಗೂ ಶೈವ ಧರ್ಮಗಳ ಕೇಂದ್ರ ಸ್ಥಾನವಾಗಿತ್ತೆಂಬುದಕ್ಕೆ ಇಲ್ಲಿಯ ಕೆಲವೊಂದು ಬಸದಿ, ಗುಡಿಗೋಪುರಗಳಲ್ಲದೆ ಶಾಸನಗಳ ಆಧಾರಗಳು ಸಹ ದೊರೆಯುತ್ತಾನೆ. ತಮ್ಮ ತಮ್ಮ ಧರ್ಮಗಳ ಬೆಳವಣಿಗೆಗೆ ಅಂದು ಧಾರ್ಮಿಕ ಸಂಘರ್ಷ ಸಹ ನಡೆದಿವೆ. ಅಲ್ಲದೆ ಕೆಲವೊಂದು ಮಠ ಮಾನ್ಯಗಳನ್ನು ಕಟ್ಟಿಕೊಂಡು ಧರ್ಮದ ಬೆಳವಣಿಗೆಗೆ ತುಂಬಾ ಸಹಕರಿಸಿದವೆಂಬುದಕ್ಕೆ ಹಂಪೆಯನ್ನು ಕುರಿತು ಬಂದ ಅನೇಕ ಕಾವ್ಯಗಳು ಪ್ರಸ್ತುತ ಪಡಿಸುತ್ತವೆ. ವೈವಿಧ್ಯಮಯವಾದ ಮತಧರ್ಮದವರಿಗೆ ಆಶ್ರಯ ನೀಡಿದ ಹಂಪೆ ಅಂದು ಸಾಂಸ್ಕೃತಿಕವಾಗಿ ಹೆಚ್ಚು ಖ್ಯಾತಿಗಳಿಸಿತ್ತು. ಶೈವ ಧರ್ಮಕ್ಕೆ ಗಟ್ಟಿಯಾದ ಸ್ಥಾನವನ್ನು ನೀಡಿದ ಇದು ಆ ಸಂದರ್ಭದಲ್ಲಿ ಇನ್ನಿತರ ಧರ್ಮಗಳನ್ನು ಸಹ ಉದಾರವಾದ ಸ್ಥಾನ ನೀಡಿತು.

ಹಂಪೆ ಅಂದು ಮನ್ಮಥ ಕುಂಡದಂತಹ ತೀರ್ಥಗಳನ್ನು ಅನ್ನಸತ್ರಗಳನ್ನು ಒಳಗೊಂಡ ಒಂದು ಸುಪ್ರಸಿದ್ಧ ತೀರ್ಥಕ್ಷೇತ್ರವಾಗಿ, ಪುಣ್ಯತೀರ್ಥವಾಗಿ, ಅನೇಕರನ್ನು ಆಕರ್ಷಿಸುವ ಶೈವ ಧರ್ಮದ ಕೇಂದ್ರವಾಗಿ ಪಡೆದುದನ್ನು ಕಾಣುತ್ತೇವೆ. ಪವಿತ್ರ ಸ್ಥಳವಾದ ಹಂಪೆ ಅಂದಿನ ಸಂದರ್ಭದಲ್ಲಿ ಎಷ್ಟು ಪ್ರಸಿದ್ಧಿ ಪಡೆದಿತ್ತು ಎಂಬುದಕ್ಕೆ ಈ ಕೆಳಗಿನ ಪದ್ಯವೇ ಸಾಕ್ಷಿಯಾಗಿವೆ.

"ಆ ದೊರವದಿನಾಡೊಳ್ಪಂಪಾತೀರ್ತ್ಥಮಿಪ್ಪುದ (ದೆ)ನ್ತೆನೆ.
ವಿಲಸದ್ಗಂಗಾನದಿಯಿಂ
ಹಲವು ತೀರ್ಥಂಗಳಿಂ ಸುದೇವಾಯತನಾ
ವಲಿಯಂ ತಾಪಸ ತಲೆಯಿಂ
ಸಲೆಯೊಪ್ಪುವುದಖಿಳ ಜನ್ಮ ಪಾಪಾಪಹರಂ॥"

ಮತ್ತವೆಂತಪ್ಪೊದೆಂದಡೆ:

"ಅದು ಪುಣ್ಯೋದಯ ಜನ್ಮಭೂಮಿ ದುರಿ(ತೌ) ಘಚ್ಛೇದನಾವಾಸ ಮ
ಭ್ಯುದಯಾನೀಕ ಫಳಪ್ರದಂ ಸುಖಲತಾ ಸಂವರ್ದ್ಧನ ಕ್ಷೇತ್ರಮಾ
(ಗ)ದು ಭಕ್ತರ್ಗ್ಗಭೀವಾಂಛಿತಾರ್ತ್ಥಸುಖಮನ್ನಾತ್ತನೀವ ಸಂಸ್ಥಾನವೆಂ
ಬುದು ಲೋಕಂ ಭುವನತ್ರಯೈಕಹಿತಮಂ ಪಂಪಾವರ ಕ್ಷೇತ್ರಮಂ"[೧೦]

ಈ ಮೇಲಿನ ಪದ್ಯಗಳಲ್ಲಿ ಹಂಪೆಯನ್ನು 'ಪಂಪಾತೀರ್ಥ', 'ಪಂಪಾವರಕ್ಷೇತ್ರ', ಭುವನತ್ರಯೈ ಕಹಿತ, ಮುಂತಾಗಿ ಕರೆದಿರುವುದನ್ನು ಗಮನಿಸಬೇಕು. ಹಂಪೆಯ ಬಳಿ ಹರಿಯುವ ತುಂಗಭದ್ರೆಯನ್ನು ಶಾಸನಕವಿ 'ಗಂಗಾನದಿ' ಎಂದು ಬಣ್ಣಿಸಿದ್ದಾನೆ. ಹಲವಾರು ತೀರ್ಥಗಳು, ದೇವಾಯತನಗಳು ಅಲ್ಲಿದ್ದು ತಾಪಸತತಿಯಿಂದ ಅದು ಶೋಭಾಯಮಾನವಾಗಿತ್ತೆಂದು ಹೇಳಿದ್ದಾನೆ. ಮುಂದುವರಿದು ಪಂಪಾಕ್ಷೇತ್ರ; ಪುಣ್ಯೋದಯದ ಜನ್ಮ ಭೂಮಿಯೂ, ಪಾಪೌಘಚ್ಛೇದನಾ ವಾಸವೂ, ಅಭ್ಯುದಯಾನೀಕ ಫಲಪ್ರದವೂ, ಸುಖಲತಾ ಸಂವರ್ಧನ ಕ್ಷೇತ್ರವೂ, ಭಕ್ತರಿಗೆ ವಾಂಛಿತಾರ್ಥವನ್ನೀಯುವ ಸಂಸ್ಥಾನವೂ ಆಗಿತ್ತೆಂದು ಭಕ್ತಿದುಂಬಿ ಬಣ್ಣಿಸಿದ್ದಾನೆ. ಈ ರೀತಿಯ ಪ್ರಸಿದ್ಧತೆಯನ್ನು ಹೊಂದಿದ ಹಂಪೆ ಅಂದು ಒಂದು ತೀರ್ಥ ಕ್ಷೇತ್ರವಾಗಿ, ಅನೇಕ ಜಾತಿ, ಮತ ಪಂಥಗಳಿಗೆ ಆಶ್ರಯ ನೀಡಿದ ಇದು ಪ್ರಾಚೀನ ಕಾಲದಿಂದಲೂ ಸರ್ವಧರ್ಮಗಳ ಸಮನ್ವಯ ಕೇಂದ್ರವಾಗಿತ್ತು. ಅಲ್ಲದೆ ಹಲವಾರು ಪಂಡಿತ, ಪಾಮರರಿಗೆ ಸ್ಥಾನ ಕಲ್ಪಿಸಿದ ವಿಜಯ ನಗರ ಸಾಮ್ರಾಜ್ಯವು ಬೌದ್ಧಿಕವಾಗಿ ಸಹ ಉತ್ತಮ ಸ್ಥಾನಮಾನ ಹೊಂದಿತ್ತು.

೧೨ನೇ ಶತಮಾನದಲ್ಲಿ ಕಲ್ಯಾಣದ ಪ್ರಸಿದ್ಧತೆಯನ್ನು ಕೇಳಿ ಅಂದು ಶರಣರು ಯಾವ ರೀತಿ ನಾಡಿನ ಮೂಲೆ ಮೂಲೆಗಳಿಂದ ಬಂದು ಸೇರಿದರೋ, ಅದೇ ರೀತಿ ಪವಿತ್ರ ತೀರ್ಥ ಕ್ಷೇತ್ರವಾದ ಹಂಪೆಗೆ ನಾಡಿನ ಬೇರೆ ಬೇರೆ ಕಡೆಯಿಂದ ಈ ನೂರೊಂದು ವಿರಕ್ತರು ಬಂದು ನೆಲೆಸಿದರು. ಇವರು ಕುಲ, ಗೋತ್ರ ಜಾತಿ ಹಾಗೂ ಕಾಯಕದ ದೃಷ್ಟಿಯಿಂದ ತುಂಬ ಭಿನ್ನರಾಗಿರುವರು. ಕಲ್ಯಾಣದಲ್ಲಿ ನೆರೆದಿದ್ದ ಶರಣರು ಸಹ ಹಲವು ಜಾತಿ ಪಂಥಗಳಿಂದ ಬಂದವರಾಗಿದ್ದರು. ಅದರಂತೆ ಅಂದು ಹಂಪೆಯಲ್ಲಿ ನೆರೆದಿದ್ದ ನೂರೊಂದು ವಿರಕ್ತರು ಸಹ ಅನೇಕ ಜಾತಿ, ಪಂಥಗಳಿಗೆ ಸೇರಿದವರಿದ್ದರು. "ಹಲವು ತೋಟದ ಹೂ" ಗಳಂತೆ ಹಂಪೆಯ ಪರಿಸರದಲ್ಲಿ ತಮ್ಮ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದ್ದರು. ಇವರಲ್ಲಿ ಆದಿ ವಿರಕ್ತನಾದ ಕರಸ್ಥಲದ ನಾಗೀದೇವ, ಕರಸ್ಥಲದ ವೀರಣ್ಣೊಡೆಯರ ಒಂದು ಪರಂಪರೆ ದಕ್ಷಿಣ ಕರ್ನಾಟಕದಿಂದ ಹಂಪೆಗೆ ಆಗಮಿಸಿದೆ. ಅಲ್ಲದೇ "ಸಪ್ತ ಕಾವ್ಯದ ಗುರುಬಸವ ವೀರಶೈವ ಇವನು ಶಿವಮೊಗ್ಗ ಜಿಲ್ಲೆಯ ಕ್ಯಾಸನೂರು ಎಂದು ಬಿ. ಶಿವಮೂರ್ತಿಶಾಸ್ತ್ರಿಯವರು ಹೇಳುತ್ತಾರೆ."[೧೧] ಅಲ್ಲದೆ ಮಡಿವಾಳಶಾಂತ, ಕಿನ್ನರಿ ಶಾಂತ, ವಡ್ಡರು, ಒಕ್ಕಲಿಗರು, ಡೊಂಬರಶಾಂತ, ಗಾಣದ ಶಾಂತ ಹೀಗೆ ಹಲವು ಜಾತಿ, ಧರ್ಮಗಳಿಗೆ ಸೇರಿದ ವಿರಕ್ತರು ಕಂಡುಬರುವರು. ಇವರಲ್ಲಿ ಒಬ್ಬೊಬ್ಬರು ಒಂದೊಂದು ಕಾಯಕದಲ್ಲಿ ನಿರತರಾಗಿರುವರು. ಬೇಟೆಗಾರಿಕೆ, ಜೂಜಿನಲ್ಲಿ ಆಸಕ್ತಿ ಉಳ್ಳವರು, ಕಿನ್ನರಿ ನುಡಿಸುವರಿದ್ದಾರೆ ಹಾಗೂ "ಖಂಡಣಿ, ಆಯುಧ, ಚಕ್ರ ತುಬಾಕಿಗಳನ್ನು ಹಿಡಿದವರಿದ್ದಾರೆ. ಪಂಚಾಂಗ ಹಿಡಿದೋದುವ ಭಟ್ಟ ಹಾಗೂ ಉಗ್ಗಡಿಪ ಶಾಂತರಿದ್ದಾರೆ. ಕೆಲವರಂತು ಲೌಕಿಕ ಸಹಜವಾದ ಕಾಯಕ ಜೀವಿಗಳಾಗಿದ್ದಾರೆ. ಅವರಲ್ಲಿ ಒಕ್ಕಲು ಕಾಯಕದ, ಮರ ವಿಕ್ರಯಿಸುವ,

ಸೂಜಿ, ಬೊಂಬೆ, ಚಿಕ್ಕಿ, ಕೆಲಸಿ, ಒಡ್ಡ, ಗಾಣ, ಮಡಿವಾಳದ ಕಾಯಕದವರು ಮುಖ್ಯವಾಗಿದ್ದಾರೆ. ಇನ್ನೂ ಕೆಲವರಂತೂ 'ಜಗಕೆ ತಾ ಮರಳು ತನಗೆ ಜಗ ಮರಳು' ಎಂಬಂತೆ ಲೀಲಾ ಮೂರ್ತಿಗಳಾಗಿ ಲೋಕದ ಕಣ್ಣಿನಲ್ಲಿ ಹುಚ್ಚರಂತೆ ತೋರಿದರೂ ಶಿವಯೋಗದ ನಿಬ್ಬೆರಗಿನಲ್ಲಿ ಅಂಗ ಲೀಲೆಯನ್ನು ಮರೆದ ಮಹಾನುಭಾವರಾಗಿದ್ದಾರೆ. ಅವರಲ್ಲಿ ಬುಡಬುಡಕೆಯ ಶಾಂತ, ಡಂಗುರಶಾಂತ, ಡೊಂಬರಶಾಂತ, ಬೆಟ್ಟದ ಮೇಲಿರ್ಪಶಾಂತ, ರುದ್ರಭೂಮಿಯ ಶಾಂತ, ಬಾಲಗಾಸೆಯ ಶಾಂತ ಮೊದಲಾದವರನ್ನು ಹೆಸರಿಸಬಹುದು."೮೬

ಹೀಗೆ ಈ ನೂರೊಂದು ವಿರಕ್ತರ ಪರಂಪರೆ ಇಂತಹದ್ದೆ ಪ್ರದೇಶದಿಂದ ಬಂದಿದೆ ಎಂದು ನೇರವಾಗಿ ಹೇಳಲು ಯಾವ ಆಧಾರಗಳು ದೊರೆಯಲಾರದು. ಆದರೆ ವಿರಕ್ತರಲ್ಲಿ ಆದಿಯಾದ ನಾಗಿದೇವ, ವೀರಣ್ಣೊಡೆಯರ ನೆಲೆಗಳ ಆಧಾರದ ಮೇಲೆ ಈ ಒಂದು ಪರಂಪರೆ ಮೈಸೂರು ಕಡೆಯಿಂದ ಆಗಮಿಸಿತೆಂದು ಕೆಲ ವಿದ್ವಾಂಸರ ಅಭಿಪ್ರಾಯವಾಗಿದೆ. ಬೇರೆ ಬೇರೆ ಪ್ರದೇಶಗಳಿಂದ ಬಂದ ಇವರು ಪುಣ್ಯಕ್ಷೇತ್ರವಾದ ಹಂಪೆಯಲ್ಲಿಯೇ ನೆಲೆ ನಿಂತು ತಮ್ಮ ಸಕಲ ಕಾರ್ಯಕ್ಷೇತ್ರವನ್ನು ಕೈಗೊಂಡರು. "ವೀರಶೈವ ಕವಿಗಳು ನೂರೊಂದು ವಿರತರನ್ನು ಪೂರ್ತಿಯಾಗಿ ಹೆಸರಿಸಿರಲಿ, ಬಿಟ್ಟಿರಲಿ ಆದರೆ ಅವರೆಲ್ಲಾರು ಪ್ರೌಢದೇವರಾಯನ ಸಮಕಾಲೀನರಾಗಿದ್ದರೆಂಬುದಕ್ಕೆ ಎಲ್ಲಿಯೂ ಭಿನ್ನಾಭಿಪ್ರಾಯಗಳನ್ನು ಮುಂದೊಡ್ಡಿಲ್ಲ. ಶಾಂತ, ಶಾಂತೇಶ, ಶಾಂತಮೂರ್ತಿಗಳೆಂಬ ಹೆಸರಿನ ವ್ಯಕ್ತಿಗಳೇ ಆ ಕಾಲಕ್ಕಿರದೆ ಹೋಗಿದ್ದರೂ ಜಂಗಮ ಸ್ಥಲದಲ್ಲಿ ನಿಂತು, ಆಯಾ ಕಾಯಕವನ್ನಾಚರಿಸಿದ ಮಹಿಮರು, ವಿರಕ್ತರು, ಶಿವಯೋಗಿಗಳು, ಪವಾಡ ಪುರುಷರು, ವಿಜಯನಗರದ ಸುತ್ತಮುತ್ತಲಿನ ಕೆಲವಡೆಗಳಲ್ಲಿ ನೆಲೆಸಿ, ಆದರೆ ಜನತೆಯಲ್ಲಿ ಅನಂತರ ನೂರೊಂದು ವಿರತರೆಂಬ ಅಭಿಧಾನಕ್ಕೆ ಪಾತ್ರರಾಗಿರಬೇಕು. ಇವರು ವಿಜಯನಗರದಲ್ಲಿಯೇ ಇದ್ದರೆಂದು ಅನೇಕರು ಹೇಳಿದ್ದರೂ 'ಮೋದಿರುದ್ರನ' ನೂರೊಂದು ವಿರತರ ಕಾವ್ಯದಲ್ಲಿ ಕರಸ್ಥಲ ವೀರಣ್ಣೊಡೆಯನು ಪ್ರೌಢದೇವರಾಯನನ್ನು ವಿರಕ್ತರಿದ್ದ ಬೇರೆ ಬೇರೆ ಕಡೆಗಳಲ್ಲಿ ಕರೆದುಕೊಂಡು ಹೋಗಿ ದರ್ಶನ ಮಾಡಿಸಿದನೆಂಬ ಸಂಗತಿಯು ಮುಖ್ಯವಾಗಿರುವುದರಿಂದ ನೂರೊಂದು ವಿರತರಲ್ಲಿ ಅನೇಕರು ವಿಜಯನಗರದ ಹೊರಭಾಗಗಳಲ್ಲೂ ನೆಲಸಿದವರಾಗಿದ್ದರು. ನಿದರ್ಶನಕ್ಕೆ ಕರಸ್ಥಲ ನಾಗಿದೇವನು ಮೊದಲು ಕಾವೇರಿ ತೀರದ ಬೊಮ್ಮೂರಲ್ಲಿದ್ದು ವೀರಣ್ಣೊಡೆಯನೊಡನೆ ಅನಂತರದಲ್ಲಿ ಪ್ರೌಢದೇವರಾಯನಿದ್ದ ವಿಜಯನಗರಕ್ಕೆ ಬಂದನೆಂದು ಕರಸ್ಥಲದ ನಾಗಿದೇವನ ಚರಿತ್ರೆಯಲ್ಲಿ ಉಲ್ಲೇಖಿಸಲಾಗಿದೆ. ಅದೇ ರೀತಿ ಬತ್ತಲೇಶ್ವರನೆಂಬ ವಿರಕ್ತನು ಮೊದಲು ಕಾನನದಲ್ಲಿ ತಪಸ್ಸು ಗೆಯ್ಯುತ್ತಿದ್ದು, ಪ್ರೌಢದೇವರಾಯನು ಬೇಟೆಗೆಂದು ಹೋದಾಗ ಆ ಮುನಿಯನ್ನು ಒಲಿಸಿಕೊಳ್ಳಬೇಕೆಂದು ವಿಜಯನಗರದ ಓರ್ವ ವೇಶ್ಯಾಂಗನಿಗೆ ಹೇಳಲಾಗಿ ಆಕೆಯ ನಿಮಿತ್ಯದಿಂದ ವಿಜಯನಗರಕ್ಕೆ ಬತ್ತಲೇಶ್ವರನು ನಡೆದು ಬಂದನೆಂದು ಹೇಳಲಾಗಿದೆ."೮೭

ಹೀಗೆ ನಾಡಿನ ಹಲವು ಕಡೆಯಿಂದ ಬಂದ ಅವಧೂತರು, ವಿರಕ್ತರು, ಯೋಗಿಗಳು ಮುಂತಾದ ಮಹಿಮ ಪುರುಷರು ಹಂಪೆಯಲ್ಲಿ ನೆಲೆನಿಂತು, ತಮ್ಮ ಕಾರ್ಯ ಹಾಗೂ ಪವಾಡ ಸಾದೃಶ್ಯಗಳಿಂದ ಮುಂದೆ ಇವರನ್ನು ನೂರೊಂದು ವಿರಕ್ತರೆಂದು ಜನರು ಪರಿಗಣಿಸಿರಬೇಕೆಂದು ತಿಳಿದುಬರುತ್ತದೆ.

ಪ್ರೌಢದೇವರಾಯನ ಕಾಲಮಾನ ಕ್ರಿ.ಶ. ೧೪೨೯-೧೪೪೬ ಎಂದು ಕೆಲವೊಂದು ಚರಿತ್ರೆ ಮತ್ತು ಶಾಸನಗಳ ಆಧಾರಗಳಿಂದ ತಿಳಿದು ಬರುತ್ತದೆ. ಇವರ ಸಮಕಾಲಿನದಲ್ಲಿ ರಚನೆಯಾದ ಯಾವ ಕೃತಿಗಳಲ್ಲಿ ಎಲ್ಲಿಯೂ ಈ ನೂರೊಂದು ವಿರಕ್ತರ ಬಗ್ಗೆ ಪ್ರಸ್ತಾಪ ಬರಲಾರದು. ಈ ಸಂದರ್ಭದಲ್ಲಿ ಪ್ರೌಢದೇವರಾಯನ ಅಪ್ಪಟ ಸ್ನೇಹಿತ ಹಾಗೂ ಮಂತ್ರಿಯಾಗಿ ಕಾರ್ಯ ನಿರ್ವಹಿಸಿದ ಲಕ್ಕಣ್ಣ ದಂಡೇಶನು ಬರೆದ ಕೃತಿಯಲ್ಲಿ ಈ ವಿರಕ್ತರ ಬಗೆಗೆ ಉಲ್ಲೇಖ ದೊರೆಯಲಾರದು. ಇವರೆಲ್ಲಾರು ಅಳಿದ (ಆವಾಸ) ನಂತರ ಬಂದಂತಹ ಕೆಲವೊಂದು ಪುರಾಣ ಕೃತಿಗಳಲ್ಲಿ ಈ ವಿರಕ್ತರ ಪ್ರಸ್ತಾಪ ಬಂದಿದೆ.

ನೂರೊಂದು ವಿರಕ್ತರನ್ನು ಕುರಿತು ಮೋದಿರುದ್ರ ಕವಿಯು ಬರೆದ 'ವಿರಕ್ತರ ಕಾವ್ಯ'ದಲ್ಲಿ ಈ ನೂರೊಂದು ವಿರಕ್ತರ ಎಲ್ಲರ ಬಗೆಗೆ ಅಲ್ಪ ಸ್ವಲ್ಪ ಮಾಹಿತಿ ದೊರೆತರೆ, ಇತ್ತೀಚಿಗೆ ಡಾ. ಎಂ.ಎಂ.ಕಲಬುರ್ಗಿಯವರು ಸಂಪಾದಿಸಿದ 'ನೂರೊಂದು ವಿರಕ್ತರ ಸ್ತೋತ್ರ' ಎಂಬ ೯ ವಾರ್ಧಕ ಷಟ್ಪದಿಯಿಂದ ಕೂಡಿದ ಕಾವ್ಯದಲ್ಲಿ ಸಮಗ್ರವಾಗಿ ಒಂದುನೂರ ಒಂದು ವಿರಕ್ತರ ಹೆಸರುಗಳು ಗೋಚರಿಸುತ್ತವೆ. ಆದರೆ ಮೋದಿರುದ್ರನ 'ವಿರಕ್ತರ ಕಾವ್ಯ' ಹಾಗೂ 'ನೂರೊಂದು ವಿರಕ್ತರ ಸ್ತೋತ್ರ'ಗಳ ನಡುವೆ ಸರಿಸುಮಾರು ಎಪ್ಪತ್ತು ಹೆಸರುಗಳು ಒಂದೇ ಆಗಿದ್ದು ಉಳಿದ ಮೂವತ್ತೊಂದು ಹೆಸರುಗಳು ಭಿನ್ನ ರೀತಿಯಲ್ಲಿದೆ. ಈ ಮೇಲಿನ ಎರಡು ಕೃತಿಗಳನ್ನು ಗಮನಿಸಿದಾಗ, ಪ್ರಾಚೀನ ವಿದ್ವಾಂಸರಿಗೆ ಈ ನೂರೊಂದು ಮಂದಿಯ ಬಗ್ಗೆ ಖಚಿತತೆ ಸಾಮಾನ್ಯವಾಗಿ ಇರಲಿಲ್ಲವೆಂಬಂತೆ ಕಾಣುತ್ತದೆ. ಈ ವಿರಕ್ತರ ಹೆಸರನ್ನು ಸೂಕ್ಷ್ಮವಾಗಿ ಗಮನಿಸಿದರೆ ಪ್ರಾರಂಭದಲ್ಲಿ ಬರುವ ಹತ್ತರಿಂದ ಹನ್ನೊಂದು ಮಂದಿ ವಿರಕ್ತರ ಹೆಸರು ನಿಜವಾದದ್ದಾಗಿದ್ದರೆ ಇನ್ನೂಳಿದ ಹೆಸರುಗಳು ಊಹಾತ್ಮಕವಾಗಿದೆ. ಅವರು ಕೈಗೊಂಡ ವೃತ್ತಿಯ ಅಥವಾ ಕಸುಬಿನ ಆಧಾರದ ಮೇಲೆ ಇವರ ಹೆಸರು ನಿರ್ಧರಿತದಂತಾಗಿದೆ.

"ಈ ಹೆಸರುಗಳನ್ನೋದಿದ ಮೇಲೆ ಅನೇಕರಿಗೆ ಕುತೂಹಲ ಕೆರಳಬಹುದು. ಏಕೆಂದರೆ ಈ ಹೆಸರುಗಳೆಲ್ಲವೂ ನೈಜ ವ್ಯಕ್ತಿಗಳಿಗೆ ಸಂಬಂಧಿಸಿದುವೆ? ಅಥವಾ ಕಪೋಲಕಲ್ಪಿತವಾದುವೆ? ನೂರೊಂದು ವಿರಕ್ತರಲ್ಲಿ ಮೊದಲಿನ ೮-೧೦ ಹೆಸರುಗಳನ್ನುಳಿದರೆ ಉಳಿದುವೆಲ್ಲ ಶಾಂತ, ಶಾಂತೇಶ, ಶಾಂತಮೂರ್ತಿ ಎಂದು ಕೊನೆಗೊಂಡಿವೆ. ಪ್ರಾಯಶಃ ಎಲ್ಲ ವ್ಯಕ್ತಿಗಳೂ ಇದೇ

ಹೆಸರಿನವರಿರುವುದು ಚಾರಿತ್ರಿಕ ದೃಷ್ಟಿಯಿಂದ ತೀರ ಅಸಂಭಾವ್ಯ. ಈ ಹೆಸರುಗಳನ್ನು ಕುರಿತು ಚರ್ಚಿಸುತ್ತ ಡಾ.ಆರ್.ಸಿ.ಹಿರೇಮಠ ಅವರು "ಮೂಲತಃ ಅವರೆಲ್ಲರ ಅಂಕಿತ ನಾಮಗಳು ಹಾಗೆಯೇ ಇದ್ದಿರಲಿಕ್ಕಿಲ್ಲ. ಅವರು ಹೊಂದಿದ ಸ್ಥಿತಿಗನುಗುಣವಾಗಿ ಈ ಹೆಸರು ಅವರಿಗೆ ಬಂದಿರಬಹುದು. ಅವರೆಲ್ಲ ಹೊಂದಿದುದು ಶಾಂತ ಸ್ಥಿತಿಯೇ ಆಗಿದ್ದಿರಬಹುದು. ಆದುದರಿಂದ ಆ ಜನ ಅವರನ್ನು ಆ ಅಭಿಧಾನದಿಂದ ಕರೆದಿರಬೇಕು. ವ್ಯಕ್ತಿಶಃ ಒಬ್ಬೊಬ್ಬರನ್ನು ಗುರುತಿಸುವುದಕ್ಕಾಗಿ ಅವರವರು ಲೋಕದಲ್ಲಿ ನಡೆಸಿದ ನಟನೆ, ಕೈಗೊಂಡ ಕಾಯಕ ಇತ್ಯಾದಿಗಳಿಗೆ ಅನುಸಾರವಾದ ವಿಶ್ಲೇಷಣೆಗಳನ್ನು ಅವರವರ ಹೆಸರುಗಳಿಗೆ ಹೊಂದಿಸಲಾಗಿದೆ. ಇವೆಲ್ಲ ಹೆಸರುಗಳು ಕವಿ ಮೋದಿಯ ರುದ್ರನ ಸೃಷ್ಟಿಯಿದೆ ಎಂದು ಹೇಳಲಿಕ್ಕಾಗದು. "ಅದು ಶರಣರ ನಡೆಗೆ ಹೊಲ್ಲ, ಚೆನ್ನಬಸವ ಪುರಾಣದ ಕರ್ತೃವಿನಂತೆ ಈತನೂ......." ಇತ್ಯಾದಿ ಎಂದು ಹೇಳಿ ಮೌನ ತಾಳಿದಾನಲ್ಲದೆ ಕಲ್ಪಿತ ನಾಮಗಳನ್ನು ಊಹಿಸಲಾರ. ನೂರೊಂದು ವಿರತರ ಹೆಸರುಗಳನ್ನು ತಾತ್ವಿಕ ಹಿನ್ನೆಲೆಯಲ್ಲಿ ಚರ್ಚಿಸಿದ ಡಾ.ಆರ್.ಸಿ.ಹಿರೇಮಠ ಅವರು ಹೇಳುವಂತೆ ಹಾಗೆ ಸಂಭವಿಸಬಹುದಾದರೂ ಸೂಕ್ಷ್ಮವಾಗಿ ಚಾರಿತ್ರಿಕ ಪ್ರಮಾಣಗಳ ಆಧಾರದ ಮೇಲೆ ನಿರೀಕ್ಷಿಸುವುದಾದರೆ ಇವು ಮೋದಿಯ ರುದ್ರನಿಂದಲೇ ಸೃಷ್ಟಿಗೊಂಡ ಊಹೆಯ ಹೆಸರುಗಳಾಗಿರಬೇಕೆಂಬುದಕ್ಕೆ ಕೆಲವು ಕಾರಣಗಳನ್ನಿಲ್ಲಿ ಕೊಡಬಹುದು. "ಇವು ಕಲ್ಪಿತನಾಮಗಳಾಗಿರದೆ ಸಹಜ ವ್ಯಕ್ತಿನಾಮಗಳೇ ಆಗಿದ್ದಲ್ಲಿ ಮೋದಿಯ ರುದ್ರನಿಗಿಂತ ಪೂರ್ವದ ಕವಿಗಳು ಕೇವಲ ಲೋಕ ಸಹಜವಾದ ೮-೧೦ ಹೆಸರುಗಳನ್ನು ಮಾತ್ರ ಹೇಳಿ ಶಾಂತ, ಶಾಂತೇಶ ಪರವಾದ ತೊಂಬತ್ತಕ್ಕೂ ಮಿಕ್ಕಿದ ಹೆಸರುಗಳಲ್ಲಿ ಒಂದನ್ನಾದರೂ ಹೇಳದೆ ಹೋದುವೇಕೆ"[೧೪] ಹೀಗೆ ಏನೆಲ್ಲ ಆಯಾಮಗಳ ಮೂಲಕ ಚಿಂತನೆ ನಡೆಸಿದ ಡಾ.ಶಿವಾನಂದ ವಿರಕ್ತಮಠರವರು ಕೊನೆಗೆ ಡಾ.ಆರ್.ಸಿ.ಹಿರೇಮಠರ ದಾರಿಯಲ್ಲೇ ಸಾಗಿದ್ದಾರೆ.

ಪ್ರೌಢದೇವರಾಯನ ಕಾಲದ ನಂತರ ಬೆಳಕಿಗೆ ಬಂದ ಸುಮಾರು ಹನ್ನೊಂದರಿಂದ ಹನ್ನೆರಡು ಕೃತಿಗಳಲ್ಲಿ ವಿರಕ್ತರ ಪ್ರಸ್ತಾಪ ಕಂಡುಬರುವುದು. ಆದರೆ ಸವಿವರವಾಗಿ ಎಲ್ಲೂ ಉಲ್ಲೇಖ ದೊರೆಯಲಾರದು. ಈ ಕೆಳಗಿನ ಕೃತಿಗಳಲ್ಲಿ ಅವರ ಹೆಸರು ಈ ರೀತಿ ಉಲ್ಲೇಖಿತವಾಗಿದೆ.

೧. ವೀರಶೈವಾಮೃತ ಮಹಾಪುರಾಣ

ಇಲ್ಲಿ ಮುಖ್ಯವಾಗಿ ಪ್ರಸಿದ್ಧರಾದ ವಿರಕ್ತರ ಹೆಸರುಗಳು ಮಾತ್ರ ಕಂಡುಬರುವುದು. ಕರಸ್ಥಲದ ನಾಗಿದೇವ, ಕರಸ್ಥಲದ ವೀರೇಶ, ಗುರುಬಸವ, ಪಟ್ಟುಪರಿ ನಾಗಿದೇವ, ಬಿಲ್ಲಮರುಳ (ಮಿಡಿಬಿಲ್ಲ ಶಾಂತೇಶ), ಬತ್ತಲೊಡೆಯ ಹೀಗೆ ಎಂಟು ಜನ ವಿರಕ್ತರ ಹೆಸರುಗಳು ಉಲ್ಲೇಖಗೊಂಡಿವೆ. ಆದರೆ ಇಲ್ಲಿ 'ನೂರೊಂದು ವಿರಕ್ತರು' ಎಂಬ ಪದ ಪ್ರಯೋಗ ಕಂಡುಬರಲಾರದು.

೨. ಪ್ರೌಢದೇವರಾಯನ ಕಾವ್ಯ

ಈ ಕಾವ್ಯದಲ್ಲಿ ಪ್ರಥಮ ಬಾರಿಗೆ 'ನೂರೊಂದು ವಿರಕ್ತರು' ಎಂಬ ಪದ ಪ್ರಯೋಗ ಕಂಡುಬರುತ್ತದೆ. ಪ್ರೌಢದೇವರಾಯನ ಮಂತ್ರಿಯಾದ ಶಿವಭಕ್ತ ಜಕ್ಕಣಾರ್ಯರು 'ಏಕೋತ್ತರ ಶತಸ್ಥಲ'ವೆಂಬ ಗ್ರಂಥವನ್ನು ಮೆರೆಸಿದ ಸಂದರ್ಭದಲ್ಲಿ ಯಾರು ಯಾರು ಬಂದು ನೆರೆದಿದ್ದರೂ ಎಂದು ಹೇಳುವಾಗ 'ಈ ನೂರೊಂದು ವಿರಕ್ತರು' ಎಂಬ ಪದ ಪ್ರಸ್ತಾಪವಾಗಿದೆ. ಇಲ್ಲಿ ಕರಸ್ಥಲದ ನಾಗಿದೇವ, ಕಲ್ಲುಮಠದ ಪ್ರಭುದೇವ, ವೀರಣ್ಣೊಡೆಯ, ಚಾಮರಸರ ಹೆಸರು ಉಲ್ಲೇಖವಾಗಿದೆ. ಇವರಲ್ಲಿ ಕರಸ್ಥಲದ ನಾಗಿದೇವ, ವೀರಣ್ಣೊಡೆಯರು ಮಾತ್ರ ವಿರಕ್ತರ ಪಟ್ಟಿಯಲ್ಲಿ ಬರುವರು.

೩. ರಾಘವಾಂಕ ಚರಿತೆ

ಸಿದ್ಧನಂಜೇಶ ತನ್ನ 'ರಾಘವಾಂಕ ಚರಿತೆ'ಯಲ್ಲಿ ಕೆಲವರ ಹೆಸರುಗಳನ್ನು ಹೇಳಿ ಮೊದಲಾದ ವಿರಕ್ತರಕುಲ' ಎಂದಿರುವಲ್ಲಿ ಇವರ ಸಂಖ್ಯೆ 'ನೂರೊಂದು' ಎಂಬುದನ್ನು ಸೂಚಿಸಿದ್ದಾನೆ.

೧. ನಾಗಿದೇವ, ೨. ವೀರಣಾಚಾರ್ಯ, ೩. ನಿರ್ವಾಣಿ ಬೋಳೇಶ, ೪. ಬತ್ತಲೇಶ್ವರ, ೫. ಮಿಡಿಬಿಲ್ಲ ಶಾಂತ, ೬. ಮಕ್ಕಳಾಟಿಕಂ ಹೇಟಿಕಂ, ಎಂದು ಆರು ಜನ ವಿರಕ್ತರನ್ನು ಹೆಸರಿಸಿದ್ದಾನೆ.

೪. ಬಸವೇಶ್ವರ ದೇವರ ವಚನ ಸಾರಾರ್ಥ

ಸೋಮಶೇಖರ ಶಿವಯೋಗಿ ಬರೆದ ಈ ಕೃತಿಯಲ್ಲಿ ಆದ್ಯರು, ವೇದ್ಯರು, ಸಾದ್ಯರೆಂದು ಹೇಳಿ, ಅದರಲ್ಲಿ ವೇದ್ಯರೆಂದು ಈ ಕೆಳಗಿನವರನ್ನು ಹೆಸರಿಸಿದ್ದಾನೆ.

೧. ಕೋವಿ ಶಾಂತಯ್ಯ, ೨. ಕೋಲ ಶಾಂತಯ್ಯ, ೩. ಕುದುರೆ ಶಾಂತಯ್ಯ, ೪.ಮಂಚದ ಶಾಂತಯ್ಯ, ೫. ಗಿರಿಗಟಿ ಶಾಂತಯ್ಯ, ೬. ಸರವೇ ಶಾಂತಯ್ಯ ಎಂದು ಆರು ಮಂದಿ ವಿರಕ್ತರ ಪ್ರಸ್ತಾಪ ಮಾಡಿ ಇತ್ಯಾದಿ ಎಂದು ಮುಂದೆ ಸಾಗುವರು.

೫. ಚೆನ್ನಬಸವ ಪುರಾಣ

ವಿರೂಪಾಕ್ಷ ಪಂಡಿತನು ತನ್ನ ಚೆನ್ನಬಸವ ಪುರಾಣದಲ್ಲಿ ೧. ಕರಸ್ಥಲದ ವೀರಣ್ಣೊಡೆಯ, ೨. ಅಕ್ಕಸಾಲೆಯ ನಾಗ (ಕರಸ್ಥಲದ ನಾಗಿದೇವ), ೩. ಹೊನ್ನಯ್ಯ, ೪. ಹೇಟಿಯ ಮರುಳ, ೫. ಬಾಲ ಲಿಂಗಣ್ಣ, ೬. ಗುರುಬಸವ, ೭. ಪರಿಪಟ್ಟಿ, ೮. ಮಿಡಿಬಿಲ್ಲ ಶಾಂತೇಶ, ೯. ತಗರ ಕಾಳಗದ ಪ್ರಭು, ೧೦. ಬತ್ತಲೇಶ್ವರ, ೧೧. ನಿರ್ವಾಣಿ ಎಂದು ಒಟ್ಟು ೧೧ ಜನರ ಉಲ್ಲೇಖ ಬರುತ್ತದೆ. ಇಲ್ಲಿ ಸಹ 'ನೂರೊಂದು ವಿರಕ್ತರು' ಎಂಬ ಪದ ಬಳಕೆಯಾಗಿದೆ.

೭. ಏಕೋತ್ತರ ಶತಸ್ಥಲ ಟೀಕೆ

ಈ ಟೀಕಾ ಕೃತಿಯಲ್ಲಿ ೧. ಕೋಲ ಶಾಂತಯ್ಯ, ೨. ಕೋವಿ ಶಾಂತಯ್ಯ, ೩. ಕುದುರೆ ಶಾಂತಯ್ಯ, ೪. ಮಂಚದ ಶಾಂತಯ್ಯ ಎಂದು ನಾಲ್ಕು ಜನ ವಿರಕ್ತರ ಹೆಸರು ಕಂಡುಬರುವುದು.

೮. ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ

"ಈ ಕೃತಿಯಲ್ಲಿ ಶಾಂತಲಿಂಗ ದೇಶಿಕರು ೧. ಕರಸ್ಥಲ ನಾಗಿದೇವರು, ೨. ವೀರಣ್ಣೊಡೆಯ ಈ ಇಬ್ಬರು ವಿರಕ್ತರ ಹೆಸರನ್ನು ಹೇಳಿ ಚಾಮರಸ, ಕಲ್ಲುಮಠದ ಪ್ರಭುದೇವರನ್ನು ಉಲ್ಲೇಖಿಸಿರುವನು.

"ದಶಗಣ, ತೇರಸಗಣ, ಷೋಡಶಗಣ, ಪ್ರಮಥಗಣ, ರುದ್ರಗಣ, ಅಮರಗಣ, ಭಕ್ತ ಮಹಾಗಣ, ಮೊದಲಾದೋಳ್ನೂಱೆಪ್ಪತ್ತೇಳು ಪುರಾತನರುಂ, ನೂಱೊಂದು ವಿರಕ್ತರುಂ ಮೊದಲಾದ(ವರು)."

೯. ನಿಜಶರಣರ ತ್ರಿವಿಧಿ

ಈ ಕೃತಿಯ ಕಾಲ ೧೭ನೆಯ ಶತಮಾನ. ಇಲ್ಲಿ ಆರಂಭದಲ್ಲಿ ಕವಿ ನೂರೊಂದು ವಿರಕ್ತರ ಬಗ್ಗೆ ಇರುವ ತನ್ನ ಭಕ್ತಿ ಗೌರವವನ್ನು ಸ್ಮರಿಸಿದ್ದಾನೆ.

"ನೂರೊಂದು ವಿರತರ ಪಾರೀಕ ನಾನಯ್ಯ
ಪಾರೆಯವ ತಿರುಗಿ ಪವಳ ಮಂಟಪದೊಳಗ
ದ್ವಾರ ಕಾಯ್ದಿಹನು ನಿಜಶರಣ"[೪೪]

೧೦. ನಿರಂಜನವಂಶರತ್ನಾಕರ

"ಪ್ರೌಢದೇವೇಂದ್ರನು ಪಂಪಾ ವಿರೂಪಾಕ್ಷನಾಲಯಕ್ಕೆ ಸಮೀಪವಾದ ವಿದ್ಯಾನಗರವಂ ಕಟ್ಟಿ, ಆ ಪುರವ ಆ ನೃಪಾಲನು ಆಳುವ ಕಾಲದಲ್ಲಿ ಶ್ರೀ ಪರಮೇಶ್ವರನ ಆಜ್ಞೆಯಿಂದ ಕೈಲಾಸದಿಂ ಮರ್ತ್ಯಲೋಕಕ್ಕೆ ದಯಮಾಡಿಸಿ, ಲೀಲೆಯಂ ಮಾಡಿ ಶಿವಭಕ್ತಿಯಂ ನೆಲೆಗೊಳಿಸಿದ ನೂರೊಂದು ವಿರಕ್ತರಾದ ಗುರುಗಳು ಕರಸ್ಥಲದ ವೀರಣ್ಣ ಒಡೆಯರು, ಕರಸ್ಥಲದ ನಾಗಿದೇವರು, ಗುರುಬಸವದೇವರು, ಬತ್ತಲೇಶ್ವರ, ಬೋಳೇಶ ನಿರ್ವಾಣಿ ಮುಂತಾದ ಗಣವರರಿಗೆ."

ನೂರೊಂದು ವಿರಕ್ತರಿಗೆ "ಶಂಕರಾಚಾರ್ಯ" ಎಂಬ ಒಬ್ಬ ಗುರುವಿದ್ದ ಎಂಬ ಉಲ್ಲೇಖ ಯಾವ ಕೃತಿಯಲ್ಲಿ ಕಂಡುಬರಲಾರದು. ಅದು ಈ ಮೇಲಿನ ನಿರಂಜನ ವಂಶರತ್ನಾಕರದಲ್ಲಿ ಗೋಚರಿಸುವುದು. ಈ ನೂರೊಂದು ವಿರಕ್ತರಿಗೆ ವಾಸ ಮಾಡಲಿಕ್ಕೆ ನೂರೊಂದು ಗವಿಗಳನ್ನು ತೆಗೆಯಿಸಿದ ಎಂಬ ಪ್ರಸ್ತಾಪ ಇಲ್ಲಿ ದೊರೆಯುವುದು.

ಹೀಗೆ ಈ ಮೇಲೆ ಉಲ್ಲೇಖಿಸಿದ ಎಲ್ಲಾ ಕೃತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅವುಗಳಲ್ಲಿ, ವಿರಕ್ತರ ಹೆಸರಿನಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಕಂಡು ಬಂದರೂ ಸಹ ಕೇವಲ ಬೆರಳಣಿಕೆಯ ವಿರಕ್ತರ ಹೆಸರಿನ ಮಾಹಿತಿಯನ್ನು ನೀಡಿದ್ದಾರೆ. ಪ್ರೌಢದೇವರಾಯನ ಕಾಲಘಟ್ಟದಲ್ಲಿ ಹೊರಡಿಸಲಾದ ಶಾಸನಗಳ ಸಂಖ್ಯೆ ಅಪಾರ. ಹಲವು ರೀತಿಯ ತಾಮ್ರ ಶಾಸನಗಳು ಸಹ ದೊರೆಯುತ್ತದೆ. ಆದರೆ ಈ ಶಾಸನಗಳು ನೂರೊಂದು ವಿರಕ್ತರ ಬಗ್ಗೆ ಎಲ್ಲೂ ಉಲ್ಲೇಖ ನೀಡಲಾರವು.

ಬಸವೋತ್ತರ ವಚನ ಸಾಹಿತ್ಯವನ್ನು ಕೃಷಿ ಮಾಡಿದವರಲ್ಲಿ ನೂರೊಂದು ವಿರಕ್ತರೂ ಒಬ್ಬರಾಗಿದ್ದರು ಎಂಬ ಕಲ್ಪನೆಯಿದೆ. ಆದರೆ ಇವರ ಬಗೆಗೆ ಸಂಶೋಧನಾತ್ಮಕವಾದ ಕೆಲಸ ಕಾರ್ಯಗಳು ಸಾಮಾನ್ಯವಾಗಿ ಕಡಿಮೆ ಪ್ರಮಾಣದಲ್ಲಿ ನಡೆದಿವೆ. ಕನ್ನಡ ಸಾಹಿತ್ಯದಲ್ಲಿ ಏಳನೂರ ಎಪ್ಪತ್ತು ಅಮರ ಗಣಂಗಳು ಹನ್ನೆರಡನೆಯ ಶತಮಾನದವರು. ನೂರೊಂದು ವಿರಕ್ತರು ಹದಿನೈದನೆಯ ಶತಮಾನದ ಪ್ರೌಢದೇವರಾಯನ ಕಾಲದವರು. ಏಳನೂರೊಂದು ವಿರಕ್ತರು ತೋಂಟದ ಸಿದ್ಧಲಿಂಗ ಶಿವಯೋಗಿಗಳ ಸಮಕಾಲವನ್ನು ಮುಂದುವರೆಸಿದವರು. ಅದ್ಯ ವಚನಕಾರ ಜೇಡರ ದಾಸಿಮಯ್ಯನಂತೆ, ನೂರೊಂದು ವಿರಕ್ತರಲ್ಲಿ ಆದಿ ಪುರುಷನಾಗಿ ಕರಸ್ಥಲದ ನಾಗಿದೇವ ಕಂಡುಬರುವನು. ಹದಿನೈದನೆಯ ಶತಮಾನದಲ್ಲಿ ವಚನಗಳ ಸಂಕಲನ, ಸಂಪಾದನೆ, ಹಾಗೂ ಸಂಗ್ರಹಣೆ ಮಾಡಿದವರು ಈ ನೂರೊಂದು ವಿರಕ್ತರೆಂಬ ಪ್ರತೀತಿ ಇದೆ. ಆದರೆ ಈ ರೀತಿಯ ಸಾಹಿತ್ಯ ಕೃಷಿ ಮಾಡಿದ ಪಂಡಿತರು ಬೇರೆಯವರಾಗಿರುವರು.

ಶ್ರೀ ತೋಂಟದ ಸಿದ್ಧಲಿಂಗ ಶಿವಯೋಗಿಗಳ ನಂತರ ಅವರ ಶಿಷ್ಯ ಪರಂಪರೆ ೧೬-೧೭ನೆಯ ಶತಮಾನದಲ್ಲಿ ವಚನ ಸಾಹಿತ್ಯ ಪರಂಪರೆಯನ್ನು ಮುಂದುವರೆಸಿದವರು. ಅಲ್ಲದೆ ಇವರ ಶಿಷ್ಯ ಪ್ರಶಿಷ್ಯರೆಲ್ಲಾರು 'ಬಸವೋತ್ತರ ಯುಗದಲ್ಲಿ' ವಚನ ರಚಿಸಿದ್ದಾರೆ. ಅಲ್ಲದೆ ವಚನಗಳ ಸಂಪಾದನೆ, ರಚನೆ, ವಚನ ಸಂಗ್ರಹ, ಸಂಕಲನ-ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಆದರೆ ಈ ನೂರೊಂದು ವಿರಕ್ತರು ಯಾರು ವಚನಗಳ ಸಂಪಾದನೆ ಸಂಕಲನಗಳಲ್ಲಿ ತೊಡಗಿರಲಿಲ್ಲವೆಂಬಂತೆ ಕಾಣುವರು. ಆದರೂ ಇವರು ಸಂಪಾದನೆ ಸಂಕಲನ ಮಾಡಿದವರೆಂಬ ಅಂಶ ವೀರಶೈವ ಸಾಹಿತ್ಯ ಕೃತಿಯಲ್ಲಿ ಕಂಡುಬರುತ್ತದೆ. ನೂರೊಂದು ವಿರಕ್ತರಿಗೆ ಹಲವು ವೀರಶೈವ ಕೃತಿಗಳಲ್ಲಿ ವೀರಶೈವರೆಂಬ ಸ್ಪಷ್ಟ ಮುದ್ರೆ ಹೊತ್ತಿದ್ದಾರೆ. "ಹೀಗೆ ಇವರು ವೀರಶೈವರೆಂಬ ಭಾವನೆ ಕ್ರಮೇಣ ಬೆಳೆಯುತ್ತ ಬಂದ ಕಾರಣ, ಆಧುನಿಕ ವಿದ್ವಾಂಸರು ಇವರನ್ನು ವೀರಶೈವ ಪರಂಪರೆಯ ಯುಗ ಪುರುಷರೆಂಬಂತೆ ಚಿತ್ರಿಸಿದ್ದಾರೆ. ಈ ರೀತಿ ಚಿತ್ರಿಸಲು ಇನ್ನೊಂದು ಕಾರಣವೆಂದರೆ, ಈ ಕಾಲದ ಚಾಮರಸ, ಕಲ್ಲುಮಠದ ಪ್ರಭುದೇವ, ಮಹಾಲಿಂಗದೇವ, ಜಕ್ಕಣಾರ್ಯ, ಮಗ್ಗೆಯ ಮಾಯಿದೇವ ಮೊದಲಾದವರೂ ನೂರೊಂದು ವಿರಕ್ತರೆಂದು ಈ ವಿದ್ವಾಂಸರು ಭಾವಿಸಿದ್ದುದು,

ಇವರಾರು ನೂರೊಂದು ವಿರಕ್ತರಲ್ಲವೆಂದು ಈಗ ಬಹುಮಟ್ಟಿಗೆ ದೃಢಪಟ್ಟಿದೆ. ಇವರನ್ನು ಹೊರತು ಪಡಿಸಿದರೆ ಉಳಿಯುವ ಕರಸ್ಥಲದ ವೀರಣ್ಣ, ಕರಸ್ಥಲದ ನಾಗಿದೇವ, ಮೊದಲಾದ ನೂರೊಂದು ವಿರಕ್ತರ ಧಾರ್ಮಿಕ ಕೊಡುಗೆ ತೀರಸಾಮಾನ್ಯ ಬರೆದುವೂ ಕೇವಲ ಲಘುಕೃತಿಗಳು, ವಿದ್ವಾಂಸರು ಹೇಳುವಂತೆ ಇವರು ವಚನಗಳ ಸಂಗ್ರಹ, ಸಂಕಲನ, ಸಂಪಾದನೆ ಕಾರ್ಯ ಮಾಡಿದುದಾಗಲೀ, ಪ್ರೇರಣೆ ನೀಡಿದುದಾಗಲೀ, ಈವರೆಗೆ ಗೊತ್ತಾಗಿಲ್ಲ. ಬಹುಶಃ ಮಾಡಿದಂತೆಯೂ ಇಲ್ಲ. ಆದುದರಿಂದ ನೂರೊಂದು ವಿರಕ್ತರನ್ನು ವೀರಶೈವ ಧರ್ಮ ಸಾಹಿತ್ಯಗಳ ಪುನರುಜ್ಜೀವನದ ಹರಿಕಾರರೆಂದು ಕರೆಯುವುದು ತಪ್ಪಾಗುತ್ತದೆ."[೧೬]

ವೀರಶೈವ ಧರ್ಮದ ಪುನರುಜ್ಜೀವನಕ್ಕೆ ಲಕ್ಕಣ್ಣ ದಂಡೇಶ ಮಹತ್ವದ ಕಾಣಿಕೆ ಸಲ್ಲಿಸಿದ್ದಾನೆ. ಬಿಜ್ಜಳನ ಮರಣಾನಂತರ ಕಲ್ಯಾಣದಿಂದ ಚದುರಿ ಹೋದ ಶಿವಶರಣರ ಚಟುವಟಿಕೆಗಳು ಕೇಂದ್ರೀಕೃತ ಸ್ವರೂಪವಿಲ್ಲದೆ ಸೊರಗಿ ಹೋಗಿದ್ದವು. "ಹಂಪೆಯಂಥ ವಿಶಾಲ ರಾಜಧಾನಿಯಲ್ಲಿ ವೀರಶೈವರಿಗೆ ಒಂದುಗೂಡಲೂ ದೊರಕಿದ ಅವಕಾಶ ಪ್ರೌಢದೇವರಾಯ ಹಾಗೂ ಅವನ ಮಂತ್ರಿಗಳಾದ ಲಕ್ಕಣ್ಣ ಹಾಗೂ ಜಕ್ಕಣ್ಣರಿಂದ ದೊರೆತ ಬೆಂಬಲ, ಈ ಸಂಪ್ರದಾಯದ ಪುನರುತ್ಥಾನಕ್ಕೆ ಯೋಗ್ಯ ವಾತಾವರಣವನ್ನು ಒದಗಿಸಿದವು. ವಿಜಯನಗರದ ಕಾಲದಲ್ಲೇ ಮೇಲೆ ಹೇಳಿದ ಇಬ್ಬರೂ ಮಂತ್ರಿಗಳ ಜೊತೆ ಮಹಾಲಿಂಗದೇವ, ಮಗ್ಗೆಯ ಮಾಯಿದೇವ, ಗುರುಬಸವ, ಬತ್ತಲೇಶ್ವರ, ಚಂದ್ರಕವಿ, ಚತುರಾಸ್ಯ ಬೊಮ್ಮರಸ, ಕಲ್ಲರಸ, ಬೊಮ್ಮರಸ, ಕಲ್ಲುಮಠದ ಪ್ರಭುದೇವ ಹಾಗೂ ಅದ್ವಿತೀಯ ವೀರಶೈವ ಕವಿ ಚಾಮರಸ ಇವರುಗಳು ನೆಲೆಸಿದ್ದರು. ಇಷ್ಟೊಂದು ಜನಧೀಮಂತರನ್ನು ಒಟ್ಟಿಗೆ ಕಲೆಹಾಕಿ ಅವರ ಸಹಾಯದಿಂದ ವ್ಯವಸ್ಥಿತವಾದ ರೀತಿಯಲ್ಲಿ ವೀರಶೈವ ಧರ್ಮೋದ್ಧಾರ ಮಾಡಿದ ಕೀರ್ತಿ ಲಕ್ಕಣ್ಣ-ಜಕ್ಕಣ್ಣರಿಗೆ ಸಲ್ಲುತ್ತದೆ."[೧೭] ಈ ಮೇಲಿನ ಆಧಾರಗಳ ಮೂಲಕ ಪ್ರೌಢದೇವರಾಯನ ಕಾಲದಲ್ಲಿದ್ದ ನೂರೊಂದು ವಿರಕ್ತರು ವೀರಶೈವ ಧರ್ಮದ ಪುನರ್‌ಜ್ಜೀವನಕಾರರಲ್ಲ ಎಂದು ಹೇಳಲು ಸಾಧ್ಯತೆಗಳಿವೆ. ಅಂದಿನ ವೇಳೆಯಲ್ಲಿ ಆಸ್ಥಾನದಲ್ಲಿದ್ದ ಎಲ್ಲೋ ಒಂದಿಬ್ಬರು ಸಾಹಿತ್ಯ ಕೃಷಿ ಮಾಡಿದರೆಂದ ಮಾತ್ರಕ್ಕೆ ಎಲ್ಲಾ ವಿರಕ್ತರನ್ನು ವೀರಶೈವರೆಂದು ಹೇಳುವುದು ತಪ್ಪಾಗುತ್ತದೆ. ಅಲ್ಲದೇ ಇವರು ವಚನಗಳ ರಚನೆ, ಸಂಗ್ರಹ, ಸಂಪಾದನೆ, ಮಾಡಿದರೆಂಬ ದೊಡ್ಡ ನಂಬಿಕೆಯಿದೆ. ಆದರೆ ಅದು ಈಗ ಮರೆಯಾಗಬೇಕು. ಏಕೆಂದರೆ ಈ ರೀತಿಯ ಕೆಲಸ ಕಾರ್ಯ ಮಾಡಿದ ಪಂಡಿತ ಮಹಾಶಯರೇ ಬೇರೆಯವರಾಗಿದ್ದರು. ಹೀಗಾಗಿ ಈ ಮುಗ್ಧ ಸ್ವಭಾವದ ಅರೆಮರುಳ ಸ್ಥಿತಿಯಲ್ಲಿರುವ ಈ ನೂರೊಂದು ವಿರಕ್ತರು ಕೆಲವೊಂದು ತ್ರಿಪದಿ ಹಾಗೂ ಅನುಭವದ ಹಾಡುಗಳನ್ನು ಬರೆದರೆ ಮತ್ತೆ ಕೆಲವರು ವೇದಾಂತ ಬೋಧಕರಾಗಿರುವರು. ಆದ್ದರಿಂದ ಇವರು ವಚನಗಳ ಸಂಪಾದನೆ, ಹಾಗೂ ಸಂಕಲನದ ಹತ್ತಿರ ಹೋದವರಲ್ಲ. ಅನುಭಾವಿಗಳಾದ ಇವರ ಕಾರ್ಯ ವೈಖರಿಯ ಪರಿ ಮತ್ತೊಂದಾಗಿತ್ತು.

ಆಧ್ಯಾತ್ಮ, ತತ್ವ ಯೋಗ ಹಾಗೂ ಅನುಭಾವ ಪರವಾದ ವಿಚಾರಗಳು ಅವರ ಸಾಹಿತ್ಯ ಕೃತಿಗಳಲ್ಲಿ ಕಾಣಬಹುದು.

ಈ ನೂರೊಂದು ವಿರಕ್ತರು ಯಾವ ಮತ ಅಥವಾ ಪಂಥಕ್ಕೆ ಸೇರಿದವರಾಗಿರಬಹುದೆಂಬುದರ ಬಗ್ಗೆ ಕೆಲವೊಮ್ಮೆ ಜಿಜ್ಞಾಸೆಯನ್ನುಂಟು ಮಾಡಿದೆ. "ಡಾ. ಎಂ.ಎಂ.ಕಲಬುರ್ಗಿಯವರು ಹೇಳುವಂತೆ ಈ ನೂರೊಂದು ವಿರಕ್ತರು ೧೫ನೇ ಶತಮಾನದಲ್ಲಿ ಒಂದು ದ್ವೀಪದಂತೆ ತೋರಿ ಮಾಯಾವಾಗಿದ್ದಾರೆ. ಸಾಮಾನ್ಯವಾಗಿ ಈ ಎಲ್ಲಾ ನೂರೊಂದು ಜನರು ಒಂದು ರೀತಿ ವಾಮಾಚಾರಿಗಳಂತೆಯೇ ಅರೆಮರುಳ ಸ್ಥಿತಿಯವರಾಗಿಯೋ ಇದ್ದಾರೆ. ಇಂಥವರು ಶುದ್ಧ ಆಚಾರದ ಪರಿಶುದ್ಧ ವಿಚಾರದ ವೀರಶೈವ ವಿರಕ್ತರೆಂದು ಒಪ್ಪುವುದಾದರೆ ಹೇಗೆ? ಆದುದರಿಂದ ಒಂದು ಬಗೆಯ ವಾಮಾಚಾರದ ಶಿವೋಪಾಸಕರಂತಿರುವ ಇವರು ನಾಥ ಪಂಥಿಯರಂತೆ ಕಾಣುತ್ತಾರೆ. ಈ ಪಂಥದ ಸಂತರಿಗೆ 'ಅವಧೂತ'ರೆಂದು ಹೆಸರು "ನೂರೊಂದು ವಿರಕ್ತರ ಅರೆಮರುಳ ಸ್ಥಿತಿಯಲ್ಲಿ ಅವಧೂತರನ್ನೇ ನೆನಪಿಸುತ್ತದೆ."[೧೫] ವಾಮಾಚಾರಿಗಳಾದ ಈ ವೀರಕ್ತರು ಅಂದು ಹೆಚ್ಚು ಪ್ರಸಿದ್ಧಿ ಹೊಂದಿದ್ದ ವೀರಶೈವ ಧರ್ಮದ ಕೆಲವೊಂದು ತತ್ವಗಳನ್ನು ಪಾಲಿಸಿದ ಮಾತ್ರಕ್ಕೆ ಇವರನ್ನು ವೀರಶೈವರೆಂದು ಹೇಳಲು ಅಷ್ಟೊಂದು ಸಮಂಜಸವಲ್ಲದ ಮಾತಾಗಿದೆ. "ಲಿಂಗ, ಶಿವ"ದ ಪರಿಕಲ್ಪನೆ ಅಥವಾ ಪದಗಳನ್ನು ಬಳಸಿದ ಮಾತ್ರಕ್ಕೆ ಇವರನ್ನು ವೀರಶೈವರೆಂದು ಹೇಳಲು ಸಾಧ್ಯವಿಲ್ಲ. ಇವರ ಲಕ್ಷಣಕ್ಕೂ ವೀರಶೈವ ವಿರಕ್ತರ ಲಕ್ಷಣಗಳ ನಡುವೆ ತುಂಬಾ ವ್ಯತ್ಯಾಸ ಕಂಡುಬರುವುದು. ಈ ನೂರೊಂದು ವಿರಕ್ತರು, ವೀರಶೈವದ ವಿಚಾರವಾಗಿ ಸೂಕ್ಷ್ಮವಾಗಿ ನೋಡಿದರೆ ಇಲ್ಲಿ ಮತೀಯವಾದ ತುಂಬಾ ಕೆಲಸ ಮಾಡಿದೆ ಎಂದು ಅನಿಸುತ್ತದೆ. ಅಂದಿನ ಸಂದರ್ಭದಲ್ಲಿ ರಚನೆಯಾದ ಎಲ್ಲಾ ವೀರಶೈವ ಸಾಹಿತ್ಯ ಕೃತಿಗಳಲ್ಲಿ '೧೦೧' ವಿರಕ್ತರನ್ನು ವೀರಶೈವರಾಗಿಯೇ ಚಿತ್ರಿಸಿರುವರು. ಅಲ್ಲದೇ ಇಂದಿನ ಕೆಲವು ಆಧುನಿಕ ಚಿಂತಕರ ದೃಷ್ಟಿಕೋನ ಸಹ ವೀರಶೈವಮಯವಾಗಿದೆ. ಈ ರೀತಿಯ ಯೋಚನಾ ಲಹರಿಗೆ ಮತಾಭಿಮಾನಿ ಸಂಶೋಧಕರು ಹಾಗೂ ಪ್ರಕಟಣೆ ಸಂಸ್ಥೆಗಳು ಒಂದು ಕಾರಣವಾದರೆ, ಈ ಅನುಭಾವಿ ದಿವ್ಯ ಪುರುಷರು ಹಾಗೂ ಸಂತರ ಬಗ್ಗೆ ಹುಟ್ಟಿರುವ ಕೆಲವೊಂದು ಪುರಾಣ-ಚರಿತ್ರೆಗಳು ಇನ್ನೊಂದು ಕಾರಣವಾಗಿದೆ. ಶಿವತತ್ವ ಚಿಂತಾಮಣಿಯಿಂದ ಹಿಡಿದು ಇಲ್ಲಿಯವರೆಗೆ ಬಂದ ಕೃತಿಯಲ್ಲಿ ಈ ಸಂತರನ್ನು ಮತರಕ್ಷಣೆಗಾಗಿ ಅವತರಿಸಿದ ಗಣಾಚಾರಿಗಳಂತೆ ಬಣ್ಣಿಸುತ್ತವೆ.

ವಚನ ಚಳುವಳಿಯಲ್ಲಿ ಬಸವಣ್ಣ ತುಂಬಾ ಪ್ರಭಾವಶಾಲಿ ವ್ಯಕ್ತಿಯಾಗಿದ್ದು, ಇಂದಿಗೂ ಸಹ ಜನರ ಮನದಲ್ಲಿ ಮಹಾನ್ ವ್ಯಕ್ತಿಯಾಗಿ ನೆಲೆವೂರಿದ್ದಾನೆ. ಇದಕ್ಕೆ ಕಾರಣ ಅಧಿಕಾರ, ರಾಜನ ಆಶ್ರಯ ಹಾಗೂ ಜನೋಪದೇಶ. ಆದರೆ ಕೆಲವು ವಚನಕಾರರು ಜನರ ಮನಸ್ಸಿನಿಂದ ದೂರನೆ ಉಳಿದಿರುವರು ಹೀಗಾಗಿ ಬಿಜ್ಜಳನ ಆಸ್ಥಾನದಲ್ಲಿ ಉತ್ತಮ ಸ್ಥಾನ ಮಾನ ಪಡೆದಿದ್ದ

ಬಸವಣ್ಣ ಅಂದು ತುಂಬಾ ಪ್ರಸಿದ್ಧಿಯಾಗಿದ್ದ. ಅದೇ ರೀತಿ ಪ್ರೌಢದೇವರಾಯನ ಕಾಲದಲ್ಲಿ ಬೇರೂರಿದ ನೂರೊಂದು ವಿರಕ್ತರಲ್ಲಿ ಕರಸ್ಥಲದ ವೀರಣ್ಣೊಡೆಯಾ, ಗುರುಬಸವ, ಬತ್ತಲೇಶ, ನಿರ್ವಾಣಿ ಬೋಳೇಶ ಇವರು ಆಸ್ಥಾನದಲ್ಲಿ ಉತ್ತಮವಾದ ಸ್ಥಾನಮಾನ ಪಡೆದಿದ್ದರು. ಹೀಗಾಗಿ ಇಂದಿಗೂ ಸಹ ಇವರ ಜೀವನ ಕ್ರಮ ಹಾಗೂ ಸಾಹಿತ್ಯ ಕೃತಿಗಳ ಬಗ್ಗೆ ಮಾಹಿತಿ ದೊರೆಯುವುದು. ಆದರೆ ಇನ್ನೂಳಿದ ವಿರಕ್ತರು ಜನಮನದಿಂದ ಅಳಿಸಿಹೋಗಿದ್ದಾರೆ. ಆಸ್ಥಾನದಲ್ಲಿ ಸ್ಥಾನ ಮಾನ ಪಡೆದಿದ್ದ ಕೆಲ ವಿರಕ್ತರು ವೀರಶೈವರಾಗಿದ್ದರಿಂದ ಉಳಿದ ಎಲ್ಲಾ ವಿರಕ್ತರು ವೀರಶೈವರಾದರು.

ಸರ್ವಧರ್ಮಗಳ ಸಮನ್ವಯಕನಾದ ಪ್ರೌಢದೇವರಾಯ ಹಾಗೂ ಅವನ ಹಿಂದಣ ಸಂಗಮವಂಶದವರು ಪಾಶುಪತ–ಕಾಲಾಮುಖ ಶೈವದ ಅನುಯಾಯಿಗಳಾಗಿದ್ದರು ಎಂಬುದಕ್ಕೆ ಹಲವು ಶಾಸನಗಳು ಉಲ್ಲೇಖಿಸುತ್ತವೆ. ಆದರೆ ಅಂದು ಪಂಡಿತರು ಪ್ರೌಢದೇವರಾಯನನ್ನು ತಮ್ಮ ಸಾಹಿತ್ಯ ಕೃತಿಯಲ್ಲಿ ವೀರಶೈವನನ್ನಾಗಿ ಚಿತ್ರಿಸಿದ್ದಾರೆ. ಆಶ್ರಯ ನೀಡಿದ ರಾಜನನ್ನೇ ವೀರಶೈವನನ್ನಾಗಿ ವೈಭವೀಕರಿಸಿದ ಪಂಡಿತರಿಗೆ ನೂರೊಂದು ವಿರಕ್ತರು ಯಾವ ಲೆಕ್ಕ. ಅಂದು ಸಾಮ್ರಾಜ್ಯದಲ್ಲಿ ಹೆಚ್ಚು ವರ್ಚಸ್ಸು ಹೊಂದಿದ ಈ ವಿರಕ್ತರನ್ನು ಸಹ ವೀರಶೈವಮಯವಾಗಿಸಿದರು.

ಈ ಅಧ್ಯಾಯದಲ್ಲಿ ಕಂಡುಕೊಂಡ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

೧. ನೂರೊಂದು ವಿರಕ್ತರ ಮೂಲ ಪರಂಪರೆ ಇಂಥದ್ದೇ ಪ್ರದೇಶದಿಂದ ಹಂಪೆಯ ಕಡೆಗೆ ವಲಸೆ ಬಂದಿತೆಂದು ನಿಖರವಾಗಿ ಹೇಳಲು ಬರುವುದಿಲ್ಲ. ಆದಿ ವಿರಕ್ತರೆಂದು ಹೇಳುಬ ಕರಸ್ಥಲದ ನಾಗಿದೇವ, ಕರಸ್ಥಲದ ವೀರಣ್ಣೊಡೆಯರು ಚಾಮರಾಜನಗರ ಜಿಲ್ಲೆಯ ಗುಂಡ್ಲು ಪೇಟೆಯ ಬೊಮ್ಮೂರು ಮಂಚಳ್ಳಿ ಕಡೆಯಿಂದ ಬಂದರೆ, ಸಪ್ತಕಾವ್ಯದ ಗುರುಬಸವ ಶಿವಮೊಗ್ಗ ಜಿಲ್ಲೆಯ ಕ್ಯಾಸನೂರು ಕಡೆಯಿಂದ ಹಂಪೆಯ ಕಡೆ ವಾಲಿದರು. ಹೀಗೆ ಈ ವಿರಕ್ತರ ಪರಂಪರೆ ನಾಡಿನ ವಿವಿಧ ಕಡೆಯಿಂದ ಬಂದು ಧಾರ್ಮಿಕ ಕ್ಷೇತ್ರವಾದ ಹಂಪೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ನೆಲೆವೂರಿದರು. ಒಟ್ಟಿನಲ್ಲಿ ಇವರ ಒಂದು ಆಧ್ಯಾತ್ಮಿಕ ಪರಂಪರೆ ಬಂದದ್ದು ದಕ್ಷಿಣ ಕರ್ನಾಟಕದ ಕಡೆಯಿಂದ ಎಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ.

೨. ವೀರಶೈವ ಧರ್ಮದ ಪುನರ್‌ಜ್ಜೀವನಕಾರರೆಂದು ಈ ನೂರೊಂದು ವಿರಕ್ತರನ್ನು ಬಿಂಬಿಸಲಾಗಿದೆ. ಆದರೆ ಇವರು ಪುನರ್‌ಜ್ಜೀವನಕಾರರಲ್ಲ. ಆ ಧರ್ಮವನ್ನು ವೀರಶೈವೀಕರಿಸಿದವರೆಂದು ಪರಿಗಣಿಸಬಹುದು. ಅಂದು ಆಸ್ಥಾನದಲ್ಲಿ ಆಶ್ರಯ ಪಡೆದ ದಿಗ್ಗಜರುಗಳಾದ ಲಕ್ಕಣ್ಣ ದಂಡೇಶ, ಜಕ್ಕಣ್ಣ, ದಂಡನಾಯಕರು, ಅಲ್ಲದೆ ಮಹಾಲಿಂಗದೇವ, ಮಗ್ಗೆಯ ಮಾಯಿದೇವ, ಚಂದ್ರಕವಿ, ಚತುರಾಸ್ಯ ಬೊಮ್ಮರಸ, ಕಲ್ಲರಸ, ಬೊಮ್ಮರಸ, ಕಲ್ಲುಮಠದ ಪ್ರಭುದೇವ ಹಾಗೂ ಚಾಮರಸರ ಪರಿಶ್ರಮವೆಂದು ಸ್ಪಷ್ಟವಾಗಿ ಹೇಳಬಹುದು.

೩. ಅಂದಿನ ಸಂದರ್ಭದಲ್ಲಿ ರಚನೆಯಾದ ಕೆಲವು ಸಾಹಿತ್ಯ ಕೃತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಪ್ರೌಢದೇವರಾಯನನ್ನು ಒಳಗೊಂಡಂತೆ ನೂರೊಂದು ವಿರಕ್ತರನ್ನು ವೀರಶೈವರಂತೆ ಚಿತ್ರಿಸಿರುವರು. ಆದರೆ ಈ ವಿರಕ್ತರ ಲಕ್ಷಣಗಳು ವೀರಶೈವರಿಗೆ ಅನ್ವಯಿಸುವುದಿಲ್ಲ. ಹೀಗಾಗಿ ಇವರು ವೀರಶೈವರಿಗಿಂತ ತುಂಬ ಭಿನ್ನರಾಗಿರುವರು. ಚಿದಾನಂದವಧೂತ, ಶಿವರಾಮವಧೂತ, ವೆಂಕಟವಧೂತರು ಹಂಪೆಯ ಪರಿಸರದಲ್ಲೇ ಬಾಳಿ ಬದುಕಿದವರು. ಇವರ ಜೀವನ ಚರಿತ್ರೆಗಳನ್ನು ಅವಲೋಕಿಸಿದರೆ ಈ ವಿರಕ್ತರು ಅವಧೂತ ಪರಂಪರೆಗೆ ಸೇರಿದವರಾಗಿ ಕಂಡುಬರುವರು. ಹೀಗಾಗಿ ಇವರು ಅಂದು ಅವಧೂತ ಪರಂಪರೆಯಂತಿರುವ 'ಶಾಂತ ಪರಂಪರೆ'ಗೆ ಸೇರಿದವರಾಗಿದ್ದಾರೆ.

೪. ನೂರೊಂದು ವಿರಕ್ತರು ಮಧ್ಯಕಾಲೀನ ಸಂದರ್ಭದಲ್ಲಿ ವಚನಗಳ ಸಂಕಲನ ಸಂಪಾದನೆ ಮಾಡಿದರೆಂದು ಹಲವು ವೀರಶೈವ ಸಾಹಿತ್ಯ ಕೃತಿಗಳು ಬಿಂಬಿಸಿವೆ. ಆದರೆ ಇವರಲ್ಲಿ ಕೆಲವೇ ಮಂದಿ ವಿರಕ್ತರು ಮಾತ್ರ ಕೆಲವೊಂದು ಲಘು ಕೃತಿಗಳನ್ನು ರಚಿಸಿರುವುದನ್ನು ಬಿಟ್ಟರೆ ಈ ವಚನಗಳ ಸಂಪಾದನೆ, ಸಂಕಲನದ ಕೃಷಿ ಇವರಿಂದ ನೆರವೇರಿದಂತಿಲ್ಲ.

೫. ರಾಜನ ಆಸ್ಥಾನದಲ್ಲಿ ಸ್ಥಾನ ಪಡೆದ ಕರಸ್ಥಲದ ವೀರಣ್ಣೊಡೆಯ ಸಪ್ತಕಾವ್ಯದ ಗುರುಬಸವ, ಬತ್ತಲೇಶ, ನಿರ್ವಾಣಿ ಬೋಳೇಶ ಇವರ ಕುರಿತು ಸ್ವಲ್ಪ ಮಾಹಿತಿ ದೊರೆತರೆ ಉಳಿದ ವಿರಕ್ತರು ನಾಮಮಾತ್ರಕ್ಕೆ ಉಳಿದಿದ್ದಾರೆ.

ಅಡಿಟಿಪ್ಪಣಿಗಳು:

೧. ಕರ್ನಾಟಕದ ಪರಂಪರೆ - ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪುಟ-೧೩

೨. ಅದೇ, ಪುಟ-೧೩

೩. ಕರ್ನಾಟಕದ ಸೂಫಿಗಳು - ಡಾ.ರಹಮತ್ ತರೀಕೆರೆ ಪುಟ-೯

೪. ಸಂಗಮರ ಕಾಲದ ವಿಜಯನಗರ ಅದರ ಇತಿಹಾಸ ಮತ್ತು ಸಂಸ್ಕೃತಿಗಳ ಅಧ್ಯಯನ ಸಂ/ ಜಿ.ಎಸ್.ದಿಕ್ಷಿತ್, ಪುಟ-೧೪೯-೧೫೦.

೫. ಅದೇ, ಪುಟ-೯೩

೬. ಅದೇ, ಪುಟ-೯೫

೭. ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು - ಡಾ.ವಿ.ಜಿ.ಪೂಜಾರ್, ಪುಟ-೪೩.

೮. ಮಾರ್ಗ ಸಂಪುಟ-೩ - ಎಂ.ಎಂ.ಕಲಬುರ್ಗಿ, ಪುಟ-೨೨೯.

೯. ವಿಜಯಕಲ್ಯಾಣ - (ಸಂ) ಸಂ.ಶಿ.ಭೂಸನೂರಮಠ, ಪುಟ-೩

೧೦. ಅದೇ, ಪುಟ-೭.

೧೧. ಹದಿನೈದನೆಯ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ - ಪ್ರೊ.ಕೆ.ನಾಗೇಂದ್ರಪ್ಪ, ಪು-೧೨೨.

೧೨. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ - ಡಾ. ಶಿವಾನಂದ ವಿರಕ್ತಮಠ, ಪುಟ-೧೦೪-೧೦೫.

೧೩. ಅದೇ, ಪುಟ-೧೦೪-೧೦೫.

೧೪. ಅದೇ, ಪುಟ-೧೦೪

೧೫. ಮಾರ್ಗ ಸಂಪುಟ-೧ - ಡಾ.ಎಂ.ಎಂ.ಕಲಬುರ್ಗಿ, ಪುಟ-೪೫೬.

೧೬. ಮಾರ್ಗ ಸಂಪುಟ-೩ - ಡಾ.ಎಂ.ಎಂ.ಕಲಬುರ್ಗಿ, ಪುಟ-೨೩೦.

೧೭. ಹದಿನೈದನೆಯ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ - ಪ್ರೊ.ಕೆ.ನಾಗೇಂದ್ರಪ್ಪ, ಪು-೨೮.

೧೮. ಮಾರ್ಗ ಸಂಪುಟ-೩ - ಡಾ.ಎಂ.ಎಂ.ಕಲಬುರ್ಗಿ, ಪುಟ-೨೩೦.

ಅಧ್ಯಾಯ – ಏಳು

ನೂರೊಂದು ವಿರಕ್ತರು : ಲಕ್ಷಣ – ವ್ಯಕ್ತಿತ್ವ

ಅಧ್ಯಾಯ – ಏಳು

ನೂರೊಂದು ವಿರಕ್ತರು : ಲಕ್ಷಣ – ವ್ಯಕ್ತಿತ್ವ

'ವಿರಕ್ತ' ಅಥವಾ 'ವಿರತ' ಎಂಬ ಪದದ ಬಗೆಗೆ ಪ್ರಾಚೀನ ಕಾಲದಿಂದಲೂ ವೇದ, ಉಪನಿಷತ್ತುಗಳಂತಹ ಹಲವು ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. ಅಲ್ಲದೆ ಹಲವು ಪಂಡಿತರು, ವಿದ್ವಾಂಸರು ಹಾಗೂ ತತ್ವಜ್ಞಾನಿಗಳು, ಶರಣರಂತಹ ಮಹಾಶಾಯರು ಸಹ ಈ ಪದಕ್ಕೆ ಅರ್ಥವತ್ತಾದ ಒಂದು ಪರಿಕಲ್ಪನೆಯನ್ನು ನೀಡಿದ್ದಾರೆ. 'ವಿರಕ್ತ' ಎಂದರೆ ಯಾರು? ಅವರ ಸ್ವಭಾವ ಹಾಗೂ ಲಕ್ಷಣಗಳೇನು? ವೀರಶೈವ ವಿರಕ್ತರ ಲಕ್ಷಣಕ್ಕೂ, ನೂರೊಂದು ವಿರಕ್ತರ ಲಕ್ಷಣಕ್ಕಿರುವ ವ್ಯತ್ಯಾಸಗಳೇನು? ಎಂಬ ಮಹತ್ವ ಪೂರ್ಣವಾದ ಅಂಶಗಳನ್ನು ಕುರಿತು ಚರ್ಚಿಸುವುದು ಈ ಅಧ್ಯಾಯದ ಮುಖ್ಯ ತಿರುಳಾಗಿದೆ. ಈಗಾಗಲೇ ಹಿಂದಿನ ಅಧ್ಯಾಯದಲ್ಲಿ ಈ ನೂರೊಂದು ವಿರಕ್ತರ ಪರಂಪರೆಯನ್ನು ಕುರಿತು ಚರ್ಚಿಸಲಾಗಿದೆ.

ಹದಿನೈದು ಮತ್ತು ಹದಿನಾರನೇ ಶತಮಾನದ ವೇಳೆಗೆ ಆಧ್ಯಾತ್ಮಿಕ ಜೀವಿಗಳಾದ "ಅವಧೂತರೂ, ಸೂಫಿಸಂತರು, ನಾಥರೂ, ಆರೂಢರು, ಸಿದ್ಧರು ಹಾಗೂ ತತ್ವಪದಕಾರರು ಧರ್ಮವನ್ನು ಜಾತಿ, ಮತ, ಲಿಂಗಾತೀತವಾಗಿ ನೋಡಿದವರು. ಇವರೆಲ್ಲಾರು ಜಾತಿ, ಮತ, ಲಿಂಗಭೇದಗಳನ್ನು ಮುಖ್ಯವಾಗಿಸದೆ ಪ್ರಾಮಾಣಿಕ ಭಕ್ತಿ ಸಾಧನೆಯನ್ನು ಮೆರೆದವರಾಗಿದ್ದಾರೆ"[೧] ಅದರಂತೆ ಪ್ರೌಢದೇವರಾಯನ ಕಾಲದಲ್ಲಿ ಬಾಳಿದ ವಿರಕ್ತರು ಈ ಮೇಲೆ ಹೇಳಿದ ಸಂತರ ಸಾಲಿಗೆ ಸೇರಿದವರಾಗಿರುವರು. ಹೀಗಾಗಿ ಈ ವಿರಕ್ತ ಎಂಬ ಪದವನ್ನು ಕುರಿತು ಈ ಕೆಳಗಿನಂತೆ ನಿರೂಪಿಸಲಾಗಿದೆ.

೧. ಪತಾಂಜಲಿಯ ಯೋಗ ಸೂತ್ರದಲ್ಲಿ 'ವಿರಕ್ತ' ಎಂಬುದರ ಬಗೆಗೆ ಈ ಕೆಳಗಿನಂತೆ ಚರ್ಚಿಸಿದೆ.

"ಸರ್ವಪಾಪ ಹರೋಯೋಗೋ ವಿರಕ್ತ ಸ್ಯೆತವಕಥ್ಯೆತೇ

ವೈರಾಗ್ಯಾತ್ ಜಾಯತೇ ಜ್ಞಾನಂ ಜ್ಞಾನಾತ್ ಯೋಗಃ ಪ್ರವರ್ತತೇ"[೨]

ಹೀಗೆ ಪತಾಂಜಲಿ ಯೋಗವು ವಿರಕ್ತರಿಗಾಗಿ ಹೇಳುತ್ತಾನೆ. ಅಂದರೆ ವೈರಾಗ್ಯದಿಂದ ಜ್ಞಾನ, ಜ್ಞಾನದಿಂದ ಯೋಗ ಹುಟ್ಟುತ್ತವೆ.

೨. ವಚನ ನಿಘಂಟುವಿನಲ್ಲಿ

ವಿರಕ್ತ : ಪ್ರಪಂಚದ ಯಾವುದೇ ಬಗೆಯ ವ್ಯಾಮೋಹಗಳಿಗೆ ಒಳಗಾಗದವನು.

ವಿರಕ್ತಿ : ಲೌಕಿಕ ವಿಚಾರಗಳಲ್ಲಿ ಆಸಕ್ತಿ ಇಲ್ಲದಿರುವಿಕೆ ವೈರಾಗ್ಯ......................

೩. ಕನ್ನಡ ನಿಘಂಟುವಿನಲ್ಲಿ :

ಅ. ಉದಾಸೀನ ಮನೋಭಾವವನ್ನು ಹೊಂದಿರುವ; ತಾಟಸ್ಥ್ಯದಿಂದ ಕೂಡಿದ

ಆ. ಪ್ರಪಂಚದ ವ್ಯಾಮೋಹಗಳಿಗೆ ಒಳಗಾಗದ, ವಿರಾಗಿಯಾದ; ವೈರಾಗ್ಯದಿಂದ ಕೂಡಿದ

ಇ. ಪ್ರಪಂಚದ ಯಾವ ಬಗೆಯ ವ್ಯಾಮೋಹಗಳಿಗೂ ಒಳಗಾಗದವನು; ವಿರಾಗಿಯಾದವನು. 'ಹೊನ್ನು, ಹೆಣ್ಣು, ಮಣ್ಣನ್ನು ಬಿಟ್ಟಾತನೇ ವಿರಕ್ತನೆಂದು, ವಿರಕ್ತದೇವರೆಂದು ಬಿಣ್ಣವಿಟ್ಟು ನುಣ್ಣಸಿ ಕರೆವರಯ್ಯ"

ಈ. ವೀರಾಗಿಯಾದ ಶಿವಭಕ್ತ; ಭಕ್ತ ವಿರಕ್ತರ ಆಚರಣೆಯೆಲ್ಲಾ ಒಂದೇ......... ಭಕ್ತಂಗೆ ಬಹಿರಂಗದ ದಾಸೋಹ ವಿರಕ್ತರಿಗೆ ಅಂತರಂಗದ ದಾಸೋಹ.

೪. ಅಕ್ಕಮಹಾದೇವಿ:

ಭೋಗಾಭಿಲಾಷೆಯಿಂದ ದೂರನಾದವನು; ವಿರಾಗಿಯಾದವನು;

ನಿರಂಜನ ಜಂಗಮ;

ಹೊನ್ನು, ಹೆಣ್ಣು, ಮಣ್ಣು ಬಿಟ್ಟು ಅಡಿವಿಯಾರಣ್ಯದಲ್ಲಿರ್ದಡೆ ವಿರಕ್ತನೇ ಅಲ್ಲ ವಿರಕ್ತನ ಪರಿಯೆಂತೆಂದೊಡೆ ಒಡಲ ಹುಡಿಗುಟ್ಟಿ ಮೃಡನೊಳೆಡದೆಱಹಿಲ್ಲದಿರ ಬಲ್ಲಡೆ ವಿರಕ್ತನಪ್ಪನು.

೫. ಘನ ಲಿಂಗದೇವರು:

ಭಕ್ತ ವಿರಕ್ತರ ಆಚರಣೆಯೆಲ್ಲಾ ಒಂದೇ ಅದು ಹೇಗೆಂದರೆ

ಭಕ್ತಂಗೆ ಬಹಿರಂಗದ ದಾಸೋಹ ವಿರಕ್ತಂಗೆ ಅಂತರಂಗದ ದಾಸೋಹ.

"ಹೀಗೆ ಇಹಪರಗಳ ಸುಖವನ್ನು ಬಯಸದೇ, ಇಂದ್ರಾದಿಪದ ಭೋಗಗಳನ್ನು ಆಸೆ ಪಡದೆ, ತಂದೆ, ತಾಯಿ, ಸತಿ, ಸುತ, ಬಂಧು-ಬಳಗ, ಮನೆ, ಮಠ ಇವುಗಳ ಬಗೆಗೆ ನನ್ನದೆಂಬ ಭಾವನೆಯನ್ನು ಸಂಪೂರ್ಣ ತೊರೆದು ಬಿಡುವುದೇ ವಿರಕ್ತ."

"ಭವಬಂಧನಗಳನ್ನು ಹರಿದೊಗೆದು ಯೋಗವನ್ನು ಸಾಧಿಸಿದ ಸಾಧಕನು ಆತ್ಮಜ್ಞಾನಕ್ಕಾಗಿ ಪರಿತಪಿಸುತ್ತಿರುತ್ತಾನೆ. ಅದಕ್ಕಾಗಿ ಗುರುವನ್ನು ಹುಡುಕಿ ಗುರು ಅನುಗ್ರಹ ಮತ್ತು ಗುರೂಪದೇಶಗಳಿಸಿ, ಆತ್ಮಾನಂದದಲ್ಲಿ ವಿಹರಿಸುವ ಪರಮ ವಿರಕ್ತನೇ ಅವಧೂತ"[೩]

ಇವರು ಪ್ರಪಂಚವನ್ನು ತೃಣಪ್ರಾಯವೆಂದು ತಿಳಿದು ಸರ್ವತ್ಯಾಗಿಗಳಾಗಿ ಕೇವಲ ವೈರಾಗ್ಯ ಮೂರ್ತಿಗಳಾಗಿರುತ್ತಿದ್ದರು. ಭಕ್ತರ ಕಷ್ಟಗಳನ್ನು ಪರಿಹರಿಸುವ ಮಹಾಮಹಿಮಾ ಪುರಷರಿವರು. ಒಟ್ಟಿನಲ್ಲಿ ವಿರಕ್ತ ಎಂಬ ಪದವು ಲೌಕಿಕ ವಿಚಾರಗಳಲ್ಲಿ ನಿರಾಸಕ್ತಿಯನ್ನು ಹೊಂದಿರುವವನೇ ವಿರಕ್ತ ಎಂಬುದು ಸ್ಪಷ್ಟವಾದ ಅರ್ಥವುಳ್ಳದ್ದಾಗಿದೆ.

'ವಿರಕ್ತ' ಎಂಬ ಹೆಸರೇ ಸೂಚಿಸುವಂತೆ, ಪ್ರಾಪಂಚಿಕ ವ್ಯವಹಾರಗಳಿಂದ ದೂರವಿದ್ದು, ಮಠಮಾನ್ಯಗಳನ್ನು ಕಟ್ಟಿಕೊಂಡು ಒಂದೆಡೆ ಶಾಶ್ವತವಾಗಿ ನೆಲೆನಿಲ್ಲದೆ ಸಂಪತ್ತು-ಆಸ್ತಿಪಾಸ್ತಿ ಹೊಂದದೆ ವೈಯಕ್ತಿಕ ಸಾಧನೆಯಲ್ಲಿ ಮಗ್ನನಾಗಿ ಸಂಚಾರ ಸಮಯದಲ್ಲಿ ಜನರಿಗೆ ಧರ್ಮ ಹಾಗೂ ಆಧ್ಯಾತ್ಮದ ತಾತ್ವಿಕವಾದ ಮಾನವೀಯ ಮೌಲ್ಯಗಳ ಬೋಧನೆ ಮಾಡುತ್ತ ಸಂಚರಿಸುವ ಸನ್ಯಾಸಿಗಳು ಈ ವಿರಕ್ತರು.

"ಅನುಭಾವವು ಸಾಧಕರ ಸ್ಪರ್ಶಮಣಿ, ಸಿದ್ಧಿ ಶಿಖರದಲ್ಲಿ ಅರಿವಿಗೆ ಆಗುವ ಅದ್ಭುತ ಆಘಾತ; ಸಾಂಸ್ಥಿಕತೆಯ ಅರಮನೆ ಮಠಗಳಲ್ಲಿ ಅನುಭಾವ ಅರಳುವುದಿಲ್ಲ. ಹೀಗಾಗಿ ಬಹಳಷ್ಟು ಅನುಭಾವಿಗಳು, ಸೂಫಿಗಳು, ಸಂತರು, ಶರಣರು, ದಾಸರು, ಶಿವಯೋಗಿಗಳು ಧಾರ್ಮಿಕ ಬಂಡಾಯಗಾರರೇ ಆಗಿದ್ದಾರೆ."[೪] ಬಸವಣ್ಣನವರು ಅನುಭಾವವನ್ನು 'ಅನುಭಾವವೆಂಬುದು ನೆಲದ ಮರೆಯ ನಿಧಾನದಂತೆ, ಅಂತರಂಗದ ರತ್ನ, ಹಾಗೂ ಶಿಶು ಕಂಡ ಕನಸು' ಎಂದಿದ್ದಾರೆ. ಇಂತಹ ಅನನ್ಯ ಆಧ್ಯಾತ್ಮ ಸಾಧಕರು ಯಾವುದೇ ಒಂದು ಸಾಂಸ್ಥಿಕ ಧರ್ಮದ ಚೌಕಟ್ಟಿನಲ್ಲಿ ಇರುವಂಥವರಲ್ಲ. ಇವರುಗಳನ್ನು ಶೈವ ಅನುಭಾವಿ, ವೈಷ್ಣವ ಅನುಭಾವಿ, ವೀರಶೈವ ಅನುಭಾವಿಗಳು ಎಂದು ವಿಭಾಗಿಸಲು ಬರುವುದಿಲ್ಲ. ಅನುಭಾವಿಗಳು ಎಂದರೆ ಎಲ್ಲ ಧರ್ಮದ ಚೌಕಟ್ಟನ್ನು ಮೀರಿ ನಿಂತಿದ್ದಾರೆ ಎಂದೇ ಅರ್ಥ."[೫]

ಸಾಮಾನ್ಯವಾಗಿ ಅನುಭಾವಿಗಳಾಗಿರುವ ಈ ವಿರಕ್ತರು ಲೌಕಿಕ ಜಂಜಾಟವನ್ನು ತೊರೆದು ನಾಡಿನ ಹೊರಗೆ ಬೆಟ್ಟ ಗುಡ್ಡ, ಗುಹೆಗಳಲ್ಲಿ ಇವರ ವಾಸಸ್ಥಳ. ಇದಕ್ಕೆ ಹಲವು ಕಾರಣಗಳಿವೆ. ಜ್ಞಾನ ಸಾಧಕರು, ಅನುಭಾವಿಗಳು, ಆಧ್ಯಾತ್ಮಿಕ ಜೀವಿಗಳು ವೈರಾಗ್ಯಪರರೂ ಆದ ವಿರಕ್ತ

ಗುರುಗಳ ಸಾಧನೆಗೆ ಪ್ರಶಾಂತವಾದ ಏಕಾಂತ ಸ್ಥಳ ಅತ್ಯಗತ್ಯವಾದದ್ದು. ಇವರ ಸಾಧನೆ ವೈಯಕ್ತಿಕತೆಯ ಜೊತೆಗೆ ಸಮಾಜದ ಹಿತದ ದೃಷ್ಟಿಯಿಂದಲೂ ತುಂಬ ಪ್ರಾಮುಖ್ಯತೆ ಪಡೆದಿದೆ. ಹುಚ್ಚರಂತೆ ಕಂಡರೂ ಇವರು ಹುಚ್ಚರಲ್ಲ. ಮರುಳನಂತೆ ಕಂಡರೂ ಮರುಳರಲ್ಲ ಹೀಗಾಗಿ ಇವರು ಆಧ್ಯಾತ್ಮಿಕವಾದ ವಿಚಾರವನ್ನು ಮೈಗೂಡಿಸಿಕೊಂಡವರಾಗಿರುವರು.

"ಇವರು ಧರ್ಮ, ಜಾತಿ, ಮತ, ಪಂಥ, ಮೇಲು-ಕೀಳು, ಎಂಬ ಭೇದವಿಲ್ಲದೆ, ನಿರ್ಮಲ ಪ್ರೇಮದಿಂದ, ಉದಾರ ಮನೋಭಾವದ ಸಹಿಷ್ಣುತವಾದಿಗಳಾಗಿರುತ್ತಾರೆ. ಏಕಾಂತರಾಗಿದ್ದು, ಇಷ್ಟ ದೈವವ ಧ್ಯಾನಿಸುತ್ತಿರುತ್ತಾರೆ. ಇವರುಗಳ ಅನುಭಾವಕ್ಕೆ ಯಾವುದೋ ಒಂದು ಧರ್ಮದ ಹಂಗಿಲ್ಲ, ಅದು ತಾರ್ಕಿಕವಲ್ಲ, ಒಮ್ಮೆ ಜ್ಞಾನ, ಒಮ್ಮೆ ಭಕ್ತಿ, ಒಮ್ಮೆ ವಿರಕ್ತಿ, ಒಮ್ಮೆ ಹಠ, ಒಮ್ಮೆ ದೈನ್ಯ, ಒಮ್ಮೆ ಮೌನ, ಒಮ್ಮೆ ಮಾತು, ಒಮ್ಮೆ ಮಹಾಶಾಂತ, ಒಮ್ಮೆ ವೀರಕ್ರೋಧದಲ್ಲಿ ಮೆರೆಯುತ್ತಾ ಯಾವ ಹಿಡಿತಕ್ಕೂ, ಹೊಡೆತಕ್ಕೂ ಸಿಕ್ಕದೆ ಸಾಗುವ ನಡೆ-ನುಡಿ-ಅನುಭಾವಿಗಳು ದೈವಿಕ ಅರಿವಿನ ಮಹಾಸಾಗರದಲ್ಲಿ ಹುಚ್ಚೆದ್ದು ಕುಣಿಯುವ ಮುಗ್ಧ ಮಕ್ಕಳಾಗಿರುತ್ತಾರೆ."[೬]

ಪ್ರಕೃತಿಯ ಸಹಜ ನಿಯಮದಂತೆ ಈ ಧರೆಯ ಮೇಲೆ ಜನಿಸಿದ ಮನುಷ್ಯರಲ್ಲಿ ಕೆಲವರು ಸಾಮಾನ್ಯರಂತೆ ಬದುಕಿ ಜೀವನ ಸಾಗಿಸಿದರೆ, ಮತ್ತೆ ಕೆಲವರು ಮುಂದೆ ಬೆಳೆದಂತೆ ಅಸಾಮಾನ್ಯರಾಗಿ ಯಾರಿಗೂ ನಿಲುಕದ ಮಹತ್ವದ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡು, ಸಮಾಜದಲ್ಲಿ ತುಂಬಾ ಭಿನ್ನ ರೀತಿಯಲ್ಲಿ ಬಾಳುವರು. ಜನಿಸಿದ ಕೆಲವು ದಿನಗಳವರೆಗೆ ಬಂಧು-ಬಳಗ, ಸಂಬಂಧಿಕರ ಜೊತೆ ನಿಕಟವಾದ ಸಂಬಂಧವನ್ನಿಟ್ಟುಕೊಂಡ ಮನುಷ್ಯ ಇದ್ದಕ್ಕಿದ್ದಂತೆ ಮೌನಿಯಾಗಿ ಸರ್ವವನ್ನು ತೊರೆದು ಒಬ್ಬಂಟಿಯಾಗಿ ಎಲ್ಲರ ಸ್ನೇಹ ವಾತ್ಸಲ್ಯವನ್ನು ಕಳಚಿಕೊಳ್ಳುವರು. ಆಧ್ಯಾತ್ಮಿಕ ಜೀವಿಗಳಾದ ಇವರು ಸಮಾಜದಲ್ಲಿರುವ ಕೆಲವೊಂದು ಒಳಿತು ಕೆಡಕುಗಳ ಬಗೆಗೆ ಗಂಭೀರವಾಗಿ ಯೋಚಿಸಿ ಸರ್ವ ಜನರ ಏಳ್ಗೆಗಾಗಿ ದುಡಿದ ದಿವ್ಯ ಪುರುಷರಿವರು. ಈ ಸತ್ಪುರುಷರು 'ನಮ್ಮೊಡನಿದ್ದು ನಮ್ಮಂತಾಗದೆ' ತನ್ನ ಜಾತಿ, ಕುಲ, ಗೋತ್ರ ಹಾಗೂ ಹೆಸರು ಎಲ್ಲವನ್ನು ಬಿಟ್ಟು ಅಮಾಯಕ ಸ್ಥಿತಿಯಲಿದ್ದ ಅನಾಮಧೇಯರಂತೆ, ಮರುಳರಂತೆ ತಮ್ಮ ಆಧ್ಯಾತ್ಮಿಕ ಬದುಕನ್ನು ಕಳೆಯುವರು. ಆತ್ಮನಲ್ಲಿಯೇ ವಿಹಾರಿಸುವರಾದ ಇವರು ಎಲ್ಲಾ ಧರ್ಮದ ಚೌಕಟ್ಟನ್ನು ಮೀರಿ ನಿಂತವರು. ಸಮಾಜ ಇವರನ್ನು ತಿರಸ್ಕಾರ ದೃಷ್ಟಿಯಿಂದ ಕಂಡರು, ಕೊನೆಗೆ ಇವರ ಘನ ವ್ಯಕ್ತಿತ್ವ ಹಾಗೂ ಪವಾಡ ಸಾದೃಶ್ಯಗಳಿಗೆ ಬೆರಗಾಗಿ ಸಮಾಜವೇ ಗುರುತಿಸುವಂತಾಗಿದೆ. ಎಲ್ಲೊ ಹುಟ್ಟಿ, ಮತ್ತೆಲ್ಲಿಯೋ ಸಾವನ್ನಪ್ಪುವ ಇವರು ಲೋಕಕ್ಕೆ ಮರುಳರಾಗಿ ಕಂಡರು ಇವರ ಆಂತರಿಕ ಶಕ್ತಿ ಮಾತ್ರ ಅಪಾರವಾದದ್ದು. ಸ್ಥಳದಿಂದ ಸ್ಥಳಕ್ಕೆ ಸಂಚರಿಸಿ ತಮ್ಮ ಮಹಿಮೆಯನ್ನು ತೋರಿ ಲೋಕಕ್ಕೆ ನಿಬ್ಬೆರಗಾಗಿಸುವ ಈ ವಿರಕ್ತರು ಜಾತ್ಯತೀತರಾಗಿ, ಮತತೀತರಾಗಿ ಬದುಕಿ ಕೊನೆಗೆ ಎಲ್ಲೊ ಒಂದು ಕಡೆ ದೈವಧೀನರಾಗುವ ಇವರ ವ್ಯಕ್ತಿತ್ವವು ನಿಜಕ್ಕೂ ಸ್ಮರಣೀಯ.

ಇವರಿಗೆ ಪಾಂಡಿತ್ಯಕ್ಕಿಂತ 'ಅನುಭಾವ' ಹಾಗೂ ಆಧ್ಯಾತ್ಮಿಕತೆ ಮುಖ್ಯವಾಗಿತ್ತು. ಇವರದು 'ಲಯದೀಕ್ಷೆ', ವಿರಕ್ತನಾದವನು ತನ್ನ ಮೂಲ ಕುಲ, ಗೋತ್ರ ಸೂತ್ರ ಶಾಖೆಗಳನ್ನು ಕಳೆದುಕೊಳ್ಳುವನು. ಮದುವೆ ಇವರಲ್ಲಿ ಸಾಮಾನ್ಯವಾಗಿ ಕಂಡುಬರಲಾರದು. ಆದರೆ ಹಂಪೆಯ ಪರಿಸರದಲ್ಲಿದ್ದ ವಿರಕ್ತರಲ್ಲಿ ಕೆಲವರು ಮದುವೆ ಆಗಿದ್ದವರು ಇದ್ದಾರೆ, ಅಲ್ಲದೆ ಪರಹೆಣ್ಣಿನ ಸಹವಾಸ ಮಾಡಿದವರು ಇದ್ದಾರೆ. ಅಲ್ಲದೆ ಇವರ ಜೀವನದಲ್ಲಿ ವೈಭವ ಹಾಗೂ ಆಡಂಬರಗಳಿಗೆ ನಿಷೇಧವಿತ್ತು. ಇವರದೆಲ್ಲ ಜ್ಞಾನದ ಅಂತರಂಗದ ವೈಭವ. ಡಾ. ರಹಮತ್ ತರೀಕೆರೆಯವರು ನಾಥರನ್ನು ಕುರಿತು ಹೇಳುವಂತೆ ನೂರೊಂದು ವಿರಕ್ತರು ಸಹ ಸದಾ ನಡೆದಾಡುವ ದೇವರುಗಳಾದ ಇವರು ಎಲ್ಲೋ ಹುಟ್ಟಿ, ಎಲ್ಲೊ ಬೆಳೆದು, ಮತ್ತೆಲ್ಲಿಯೋ ಮಣ್ಣಾಗುವ ಇವರು ಧಾರ್ಮಿಕ ಜಗತ್ತಿನ ಸನ್ಯಾಸಿಗಳಾಗಿದ್ದಾರೆ.

ವಿಜಯನಗರ ಸಾಮ್ರಾಜ್ಯದ ಪ್ರೌಢದೇವರಾಯನ ಆಳ್ವಿಕೆಯಲ್ಲಿದ್ದ 'ನೂರೊಂದು ವಿರಕ್ತರು ಈ ಮೇಲೆ ವಿವರಿಸಿದ ಗುಣ ಸ್ವಭಾವದವರು. ಹೀಗಾಗಿ ಹಂಪೆಯ ಸುತ್ತಮುತ್ತಲಿನ ಪ್ರಶಾಂತವಾದ ಪ್ರದೇಶವು ಇವರಿಗೆ ತಮ್ಮ ಆಧ್ಯಾತ್ಮಿಕವಾದಂತಹ ಚಟುವಟಿಕೆಗಳನ್ನು ಕೈಗೊಳ್ಳಲು ಸೂಕ್ತ ನೆಲೆಯಾಗಿತ್ತು. ಇಲ್ಲಿ ಹರಿಯುವ ತುಂಗಾ-ಭದ್ರ ನದಿ, ಬೆಟ್ಟ ಗುಡ್ಡಗಳ ಸಾಲು ಇವರಿಗೆ ಆಶ್ರಯ ತಾಣಗಳಾಗಿದ್ದವು. ಅಂದು ಹಂಪೆ ಹಲವು ಮತಗಳ, ಪಂಥಗಳ ಒಂದು ಪವಿತ್ರ ಧಾರ್ಮಿಕ ಕ್ಷೇತ್ರವಾಗಿತ್ತು. ಜೈನ, ವೈಷ್ಣವ, ಶೈವ ಹಾಗೂ ವೀರಶೈವ ಧರ್ಮಗಳಿಗೆ ಆಸ್ಥಾನದಲ್ಲಿ ರಾಜಾಶ್ರಯ ದೊರಕಿತು. ಆ ಸಂದರ್ಭದಲ್ಲಿ ಎಲ್ಲ ಧರ್ಮಕ್ಕಿಂತ ವೀರಶೈವ ಧರ್ಮದ ವರ್ಚಸ್ಸು ಅಧಿಕವಾಗಿತ್ತು. ಹೀಗಾಗಿ ರಾಜನಾದ ಪ್ರೌಢದೇವರಾಯ ವೀರಶೈವ ಧರ್ಮವನ್ನು ಹೆಚ್ಚು ಬೆಂಬಲಿಸಿದ, ಅಲ್ಲದೇ ಅವನ ಆಸ್ಥಾನದಲ್ಲಿದ್ದ ಮಂತ್ರಿಗಳು, ಪಂಡಿತ ಪಾಮರರೆಲ್ಲರೂ ವೀರಶೈವ ಧರ್ಮವನ್ನು ಸಂಘಟಿಸಿ ಅದನ್ನು ಬೆಳೆಸಲು ತುಂಬಾ ಶ್ರಮಿಸಿದರು. ಆ ವೇಳೆಯಲ್ಲಿ ಪೌರಾಣಿಕ ಹಿನ್ನೆಲೆಯಲ್ಲಿ ಹಲವು ಸಾಹಿತ್ಯ ಕೃತಿಗಳ ಮೂಲಕ ಆ ಧರ್ಮದ ತತ್ವಗಳನ್ನು ಪ್ರಚಾರ ಗೈದರು. ತೀರ್ಥ ಕ್ಷೇತ್ರವಾಗಿ ಪ್ರಸಿದ್ಧಿ ಪಡೆದ ಹಂಪೆಗೆ ಅಂದು ಆಂಧ್ರ ಹಾಗೂ ತಮಿಳು ನಾಡಿನಿಂದ ಬಂದ ಶೈವ ಶಾಖೆಗಳು ಈ ಪರಿಸರದಲ್ಲಿ ನೆಲೆ ನಿಂತಿದ್ದಕ್ಕೆ ಹಲವು ಆಧಾರಗಳಿವೆ. ಅಲ್ಲದೆ ಕಪಾಲಿಕರು, ಕಾಳಮುಖರಂತಹ ಪಂಥಗಳು ಹಲವು ಸಾಧು ಸನ್ಯಾಸಿ ಅವಧೂತರಂತಹ ಮಹಾನುಭಾವಿಗಳು ಹಂಪೆಯಲ್ಲಿ ಸ್ಥಾನ ಪಡೆದಿದ್ದರು. ಹೀಗಾಗಿ ಅಂದು ವೀರಶೈವ ಧರ್ಮದ ಅಬ್ಬರದ ಪ್ರಚಾರದಲ್ಲಿ ಈ ಎಲ್ಲಾ ಮತ-ಪಂಥಗಳು ಕರಗಿ ಹೋಗಿರುವ ಸಾಧ್ಯತೆಗಳಿವೆ.

"ಬಹುತೇಕ ವಿದ್ವಾಂಸರ ಅಭಿಪ್ರಾಯದಂತೆ ಸಂಗಮರ ಪೂರ್ವಕಾಲದಿಂದಲೂ ಶೈವ ಧರ್ಮವು ಬಸವಾದಿ ಶರಣರ ವೀರಶೈವ ಧರ್ಮದ ಪ್ರಭಾವಕ್ಕೆ ಒಳಗಾಗಿ ಬದಲಾವಣೆಯ

ಪ್ರಕ್ರಿಯೆಯ ಹಂತದಲ್ಲಿತ್ತು. ಇದು ಪ್ರೌಢದೇವರಾಯನ ಕಾಲದಲ್ಲಿ ಸ್ಪಷ್ಟವಾದ ಬದಲಾವಣೆಗೆ ಒಳಗಾಗಿ ವೀರಶೈವತ್ವವನ್ನು ಒಪ್ಪಿಕೊಂಡಿತೆಂದು ತಿಳಿದು ಬರುತ್ತದೆ. ಈ ಪರಿವರ್ತನೆಯ ಕಾಲಾವಧಿಯಲ್ಲಿ ಕ್ಷೀಣಿಸುತ್ತ ಬಂದ ಕಾಳಮುಖ, ಮೊದಲಾದ ಪಂಥಗಳು ಪ್ರಜಾಪ್ರಭುತ್ವದ ಗುಣವುಳ್ಳ ವೀರಶೈವ ಧರ್ಮದಲ್ಲಿ ಲೀನವಾಗಿ ಇತಿಹಾಸದಿಂದ ಕಣ್ಮರೆಯಾದರೆಂದು ವಿದ್ವಾಂಸರ ಅಭಿಪ್ರಾಯ."[೭]

ಮಧ್ಯಕಾಲೀನ ಸಂದರ್ಭದಲ್ಲಿ ರಚನೆಗೊಂಡ ಸಾಹಿತ್ಯ ಕೃತಿಗಳು ಧರ್ಮಾಭಿಮಾನ ಉಳ್ಳವಾಗಿದ್ದವು. ೧೦ನೇ ಶತಮಾನದದಲ್ಲಿ ಜೈನ ಧರ್ಮಾಭಿಮಾನವುಳ್ಳ ಕೃತಿಗಳು ರಚನೆಗೊಂಡಂತೆ ಪ್ರೌಢದೇವರಾಯನ ಕಾಲದಲ್ಲಿ ಹೆಚ್ಚು ಪ್ರಸಿದ್ಧಿ ಹೊಂದಿದ ವೀರಶೈವ ಧರ್ಮವನ್ನು ಕುರಿತು ಹಲವು ಕೃತಿಗಳು ರಚನೆಗೊಂಡವು. ಆಗ ಧರ್ಮ ಧರ್ಮಗಳ ನಡುವೆ ಏರಾಟ, ಹೋರಾಟ ನಡೆಯುತ್ತಿತ್ತು. ತಮ್ಮ ತಮ್ಮ ಧರ್ಮದ ಒಂದು ಅನನ್ಯತೆಯನ್ನು ಉಳಿಸಿಕೊಳ್ಳಲು ಕೆಲವೊಂದು ಸಾಹಿತ್ಯ ಕೃತಿಗಳ ಮೂಲಕ ತಮ್ಮ ಧರ್ಮದ ಪ್ರಚಾರ ಹಾಗೂ ವೀರಶೈವದ ತತ್ವಗಳನ್ನು ಜನಸಾಮಾನ್ಯರಿಗೆ ತಿಳಿಯಪಡಿಸಿದರು. ಪ್ರಸಿದ್ಧಿ ಹೊಂದಿದ ಬಸವಣ್ಣ, ಅಕ್ಕಮ್ಮ, ಅಲ್ಲಮ್ಮರಂತಹ ಚಾರಿತ್ರಿಕ ವ್ಯಕ್ತಿಗಳನ್ನು ಪೌರಾಣಿಕ ಹಿನ್ನೆಲೆಯಲ್ಲಿ ವೈಭವಿಕರಿಸಿ, ತಮ್ಮ ಧರ್ಮದ ವಿಚಾರಗಳನ್ನು ಬಿಂಬಿಸಿದರು. ಆ ವೇಳೆಯಲ್ಲಿ ತುಂಬ ಪ್ರಸಿದ್ಧಿ ಹೊಂದಿದ್ದ ಈ ನೂರೊಂದು ವಿರಕ್ತರು ಸಹ ಅವರ ದೃಷ್ಟಿಯಲ್ಲಿ ವೀರಶೈವರಾಗಿಬಿಟ್ಟರು. ಅಂದು ಶೈವನಾದ ಪ್ರೌಢದೇವರಾಯನನ್ನೇ ವೀರಶೈವನನ್ನಾಗಿ ಚಿತ್ರಿಸಿದ ಪಂಡಿತರು ನೂರೊಂದು ವಿರಕ್ತರನ್ನು ವೀರಶೈವನ್ನಾಗಿಸಿದರು.

"ಈ ಶರಣರ ಮಾರ್ಗದಲ್ಲಿಯೇ ವಿಲಕ್ಷಣ ರೂಪದ, ವೈರಾಗ್ಯ ಮನೋಧರ್ಮದ ಆತ್ಮಾವಾದಿಗಳ ಗುಂಪೊಂದು ಇತ್ತು. ಅಲ್ಲಮಪ್ರಭು, ಅಜಗಣ್ಣ, ಸಿದ್ಧರಾಮನಂಥವರ ಈ ಮಾರ್ಗವನ್ನು ನಂತರದ ಅನೇಕ ಯೋಗಿಗಳು, ಆರೂಢರು, ನಾಥರು, ಅವಧೂತರು, ತತ್ವಪದಕಾರರು ಮುಂದುವರೆಸಿಕೊಂಡು ಬಂದಿದ್ದಾರೆ. ಅಲ್ಲಮನ ನಡೆದಾಟ ಅವನು ಭೇಟಿ ಮಾಡುವ ಜನ, ಅವರೊಡನೆ ನಡೆಸುವ ಚರ್ಚೆ, ಇವೆಲ್ಲ ಮಧ್ಯಕಾಲದ ಸೂಫಿ, ನಾಥ, ಆರೂಢ, ಪಂಥದ ಗುಣಗಳು ಎಂಬ ಅಭಿಪ್ರಾಯ ಗಮನಾರ್ಹವಾದುದು. ಅದರಲ್ಲಿ ಅಲ್ಲಮನ ಸುಳಿದಾಟಗಳು ಅವಧೂತರನ್ನು ಬಿಂಬಿಸುತ್ತವೆ."[೮] ಇವರುಗಳಿಗೆ ನೂರೊಂದು ವಿರಕ್ತರು ಸಹ ಹೊರತಾಗಿಲ್ಲ. ಇವರಲ್ಲಿ ಬರುವ ಅನೇಕ ವಿರಕ್ತರು ನಾಥ ಅವಧೂತರನ್ನೇ ಹೋಲುವಂತರಾಗಿರುವರು.

ಅಲ್ಲಮನು ತನ್ನ ಪಾದಾಯಾತ್ರೆ ಮುಗಿಸಿ, ಒಬ್ಬ ಮರುಳನಂತೆ ಕಲ್ಯಾಣಕ್ಕೆ ಬರುತ್ತಾನೆ. ಆದರೆ ಅವರೇ ಪ್ರಭುದೇವರೆಂಬುದಕ್ಕೆ ಅವರ ಹೊರ ವೇಷ ಎಂದಿನಂತಿರುವುದಿಲ್ಲ. ಬರುತ್ತಿರುವ

ಅಲ್ಲಮ ಪ್ರಭುವನ್ನು ತೋರಿಸುತ್ತಾ, ಬಸವಣ್ಣನವರು ಚೆನ್ನಬಸವಣ್ಣನಿಗೆ ಹೇಳುತ್ತಾರೆ. "ತಲೆಯೆಲ್ಲಾ ಕೆದರಿದೆ, ಅವರ ನಡೆ ತೊನೆಯುತ್ತಿದೆ. ಹಣೆಯ ಮೇಲೆ ಬುಗುಟಿದೆ, ಅಂಗೈಯ ಲಿಂಗದ ಮೇಲೆ ದೃಷ್ಟಿನಟ್ಟು ಬಹಿರಂಗದ ಅವಧಾನ ತಪ್ಪಿ, ಎಡವಿಬಿದ್ದ ಹುಬ್ಬು ಒಡೆದಿದೆ. ಕಿವಿ ಹರಿದಿದೆ. ಧಾರೆ ಧಾರೆಯಾಗಿ ಮೈಮೇಲೆ ರಕ್ತ ಸ್ರವಿಸಿ ಅದರ ಮೇಲೆಲ್ಲಾ ಧೂಳು ಮುಸುಕಿದೆ. ಬೆನ್ನೆಲ್ಲಾ ಬಾರೆದ್ದಿದೆ. ಮೈಯೆಲ್ಲಾ ಮುಳ್ಳು ತರಚಿದ ಘಾಯವಾಗಿದೆ. ಪಿರ್ರೆಯೆಲ್ಲಾ ಕಪ್ಪು ಹಿಡಿದು ಅಲ್ಲಿ ದಿಗಂಬರವಾಗಿರುವ ಪ್ರಭುದೇವರ ಮೈಯೆಲ್ಲಾ ಒಣಗುತ್ತಿದೆ. ಮೊಣಕಾಲು ಮುಂಗಾಲು ಬೆರಳು ಗಾಯಗಳಿಂದ ರಟ್ಟು ಕಟ್ಟಿದೆ. ಅಯ್ಯ ಚೆನ್ನಬಸವಣ್ಣ ನೋಡು ಪ್ರಭುದೇವರ ಆಕಾರ ಅದೆಷ್ಟು ಭಯಂಕರ ದಯನೀಯವಾಗಿದೆ ಎನ್ನುತ್ತಾರೆ. ಅದಕ್ಕೆ ಚೆನ್ನಬಸವಣ್ಣ ಪ್ರಭುದೇವರ ಪರಿ ತೋರಿಸುತ್ತಾ", "ನಿಂತರೆ ನೆರಳಿಲ್ಲ ನಡೆದರೆ ಹೆಜ್ಜೆಯಿಲ್ಲ. ಈ ಜಂಗಮವೇ ಹೀಗೆ ಲೌಕಿಕದ ರೀತಿಯದಲ್ಲ" ಎನ್ನುತ್ತಾರೆ. ಮಡಿವಾಳ ಮಾಚಯ್ಯನವರು ಪ್ರಭುದೇವರನ್ನು ಕುರಿತು, "ಅವರು ಒಮ್ಮೆ ಬಾಲಕನಂತೆ ಒಮ್ಮೆ ಲೋಲನಂತೆ, ಒಮ್ಮೆ ಮುದುಕನಂತೆ, ಒಮ್ಮೆ ಮದೋನ್ಮತ್ತನಂತೆ ರೂಪ ಧರಿಸುತ್ತಾರೆ. ಒಮ್ಮೆ ಕಾಣುತ್ತಾರೆ. ಒಮ್ಮೆ ಕಣ್ಮರೆಯಾಗುತ್ತಾರೆ, ಒಮ್ಮೆ ಇಲ್ಲಿದ್ದರೆ ಮರುಕ್ಷಣವೇ ಮತ್ತೆಲ್ಲಿಯೋ ಕಾಣಿಸಿಕೊಳ್ಳುತ್ತಾರೆ."[5] ಈ ಮೇಲೆ ಪ್ರಸ್ತಾಪಿಸಿದ ಪ್ರಭುದೇವರ ಗುಣಲಕ್ಷಣಗಳು ವಿರಕ್ತರಲ್ಲಿ ಕಂಡುಬರುವ ನಾಗಿದೇವ, ಬತ್ತಲೇಶ ವಿಟಶಾಂತ ಮುಂತಾದ ವಿರಕ್ತರ ಲಕ್ಷಣಗಳಿಗೆ ಹತ್ತಿರವಾಗಿದೆ. ವಿರಕ್ತ ಪದದ ಅರ್ಥವೇ ಸರ್ವವನ್ನು ತೊರೆದು ಬದುಕುವುದು. ಜನಸಾಮಾನ್ಯರ ಒಳಿತಿಗಾಗಿ ಜನಿಸಿದ ಈ ಮಹಾನುಭಾವಿಗಳು ಇಂದಿಗೂ ಸಹ ಅಜರಾಮರವಾಗಿ ಉಳಿದಿದ್ದಾರೆ.

ಜಾತಿ, ಮತ, ಪಂಥಗಳನ್ನು ಮೀರಿದ ವ್ಯಕ್ತಿತ್ವವನ್ನು ಹೊಂದಿದ ಇವರುಗಳಲ್ಲಿ ವಿಭಿನ್ನ ಮನೋಧರ್ಮವರನ್ನು ಸಹ ಕಾಣಬಹುದು. "ಕೆಲವು ವಿರಕ್ತರ ಆಚರಣೆಗಳು ಬಾಹ್ಯ ನೋಟಕ್ಕೆ ಮರುಳಾಗಿ ತೋರಿದರೂ, ಅಂತರಂಗದಲ್ಲಿ ಪರಶಿವತ್ವದ ಮೂಲ ರಹಸ್ಯವನ್ನು ತಿಳಿದವರಾಗಿದ್ದರು. ಬಹಿರಂಗದಲ್ಲಿ ಕ್ರಿಯೆ ಅಂತರಂಗದಲ್ಲಿ ಅರಿವು, ಈ ಉಭಯೋವೊಂದಾದ ಮಹಾತ್ಮರ ನಡುವಳಿಕೆ ವಿಚಿತ್ರವಾಗಿದ್ದರೂ ಸತ್ಯವಾಗಿ ತೋರಿದೆ. ಅವರು ಅಘಟಿತ ಘಟನಾ ನೂತನ ಬ್ರಹ್ಮ ವಿಪರೀತ ಚರಿತರು ಅವರು ಆಚರಿಸಿದ ಕಾರ್ಯಗಳೆಲ್ಲಾ ಲೀಲೆಗಳು ನೂರೊಂದು ವಿರಕ್ತರ ಜೀವನದಲ್ಲಿ ನಡೆದ ಒಂದೊಂದು ಘಟನೆಗಳು ಮೋದಿಯ ರುದ್ರನ ಕಾವ್ಯದಲ್ಲಿ ಒಂದೊಂದು ಪವಾಡವೆಂಬಂತೆ ವರ್ಣಿತವಾಗಿದೆ. ಇಲ್ಲಿ ಕಾಣುವ ಮುಖ್ಯ ಅಂಶವೆಂದರೆ ವೀರಶೈವ ವಿರಕ್ತರಲ್ಲಿ ಅವಧೂತ ಪರಂಪರೆಯೊಂದು ಈ ಕಾಲದಲ್ಲಿ ಬೆಳೆಯುತ್ತಾ ಬಂದಿದೆ. ಇವರ ಈ ಸ್ಥಿತಿಗೆ ಆ ಕಾಲದ ಸಾಮಾಜಿಕ, ಧಾರ್ಮಿಕ ಪರಿಸರವೇ ಕಾರಣ. ಸಹಜವಾಗಿಯೇ ಇವರು ಸಮಾಜದಿಂದ ದೂರವಿದ್ದು ಬೆಟ್ಟ, ಗವಿ ಕೊಳ್ಳಗಳಲ್ಲಿ ವಾಸವಾಗಿದ್ದು, ಯೋಗ ಸಾಧನೆ ಮಾಡಿರುತ್ತಾರೆ.

ಮಾನಸ ಪೂಜೆ ಮತ್ತು ಜ್ಞಾನ ಮಾರ್ಗಕ್ಕೆ ಹೆಚ್ಚಿನ ಮಹತ್ವ ನೀಡಿದ ಇವರು ವಿಶಿಷ್ಟ ಸ್ವಭಾವದ ಅನುಭಾವಿಗಳಾಗಿದ್ದಾರೆ."[೧೦]

ಪ್ರೌಢದೇವರಾಯನ ಕಾಲದಲ್ಲಿ 'ಅವಧೂತ' ಪರಂಪರೆವೊಂದು ಬೆಳೆದಿತ್ತು ಎಂಬುದರ ಬಗೆಗೆ ಅನೇಕ ಕಡೆ ಉಲ್ಲೇಖಗಳು ದೊರೆಯುತ್ತದೆ. ಹೀಗಾಗಿ ಹಂಪೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಬೇರೂರಿದ ಈ ನೂರೊಂದು ವಿರಕ್ತರ ಚಟುವಟಿಕೆ ಹಾಗೂ ಗುಣಸ್ವಭಾವಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ 'ಅವಧೂತ'ರ ಚಹರೆಗೆ ತುಂಬಾ ಹತ್ತಿರದವರಾದ ಇವರು ಅವಧೂತರಂತೆ ಅಥವಾ ನಾಥರಾಂತಿರುವ 'ಶಾಂತ ಪರಂಪರೆ'ಯವರಾಗಿರುವರು.

"ಬಹುತೇಕ ಅವಧೂತರು ಚಿನ್ನ, ಕಬ್ಬಿಣ, ನೇಕಾರಿಕೆ, ಇತ್ಯಾದಿ ಕಾಯಕ ಮಾಡುವ ವರ್ಗದಿಂದ ಬಂದವರು, ಸಾಮಾಜಿಕವಾಗಿ ಅಬ್ರಾಹ್ಮಣ ಜಾತಿಯವರು"[೧೧] ಹೀಗಾಗಿ ನೂರೊಂದು ವಿರಕ್ತರಲ್ಲಿ ಆದಿಯಲ್ಲಿ ಬರುವ 'ಅಕ್ಕಸಾಲಿಯನಾಗ' ಎಂಬ ಪರ್ಯಾಯ ಹೆಸರಿನ ಕರಸ್ಥಲದ ನಾಗಿದೇವ 'ಅಕ್ಕಸಾಲಿ'ಯ ವರ್ಗದಿಂದ ಬಂದವ. ಇವನಲ್ಲದೆ ಇವರಲ್ಲಿ ಅನೇಕ ವಿರಕ್ತರು ಇನ್ನೂ ಬೇರೆ ಬೇರೆ ಸಮುದಾಯದಿಂದ ಬಂದವರಾಗಿರುವರು.

ವೀರಶೈವರೆಂದು ಬಿಂಬಿತರಾದ ನೂರೊಂದು ವಿರಕ್ತರ ಲಕ್ಷಣಕ್ಕೂ ವೀರಶೈವ ವಿರಕ್ತರ ಲಕ್ಷಣ ಹಾಗೂ ಗುಣಸ್ವಭಾವವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಇವರಲ್ಲಿ ತುಂಬ ಭಿನ್ನತೆ ಕಂಡುಬರುವುದು. ನೂರೊಂದು ವಿರಕ್ತರು ವೀರಶೈವ ವಿರಕ್ತರಂತೆ 'ಆಜೀವ ಬ್ರಹ್ಮಚಾರಿಗಳಲ್ಲ.' ಇವರಲ್ಲಿ ಕೆಲವರು ಗೃಹಸ್ಥರಿರುವರು. ಅಲ್ಲದೆ ಮತ್ತೆ ಕೆಲವರು ಪರಹೆಣ್ಣಿನ ಸಹವಾಸ ಮಾಡಿದವರ ಪುರಾವೆಗಳು ದೊರಕುತ್ತವೆ. "ವೀರಶೈವರಲ್ಲಿ ಅಲ್ಲಮ ಪ್ರಭು ಸಂಪ್ರದಾಯದ ವಿರಕ್ತ ಪರಂಪರೆಯೊಂದು ಒಡೆದು ಕಾಣುತ್ತದೆ. ಅಲ್ಲಮಪ್ರಭು, ತೋಂಟದ ಸಿದ್ಧಲಿಂಗ, ಹರತಾಳ ಚೆನ್ನಂಜೇದೇವ, ಮುರಿಗಾಶಾಂತವೀರ ಮೊದಲಾದವರು ಈ ಮಾಲಿಕೆಯಲ್ಲಿ ಪರಿಗಣಿತರಾಗಿದ್ದಾರೆ. ಈ ನೂರೊಂದು ವಿರಕ್ತರು ಇವರ ತರಹದ ವಿರಕ್ತರೇ?" ಎಂಬ ಪ್ರಶ್ನೆಗೆ ಅಲ್ಲವೆಂಬುದೇ ಉತ್ತರ ನೀಡುವರು. ಏಕೆಂದರೆ ಈ ನೂರೊಂದು ಜನ ಶ್ರದ್ಧಾಪೂರ್ವಕವಾಗಿ "ಅಲ್ಲಮ ಪ್ರಭು ಸಂಪ್ರದಾಯವನ್ನು" ಮುನ್ನಡೆಸಿದಂತಿಲ್ಲ. ಇವರದೇ ಆದ ವಿರಕ್ತ ಪರಂಪರೆಯೂ ವೀರಶೈವದಲ್ಲಿ ಬೆಳೆದು ಬಂದಂತಿಲ್ಲ. ೧೫ನೇ ಶತಮಾನದಲ್ಲಿ ಒಂದು ದ್ವೀಪದಂತೆ ತೋರಿ ಇವರು ಮಾಯಾವಾಗಿದ್ದಾರೆ. ಎರಡನೆಯದಾಗಿ ಇವರು ಕರಸ್ಥಲ ವೀರಣ್ಣ ಮೊದಲಾದವರು ಮದುವೆಯಾಗಿದ್ದಾರೆ. ಮಕ್ಕಳು ಇವೆ, ಕರಸ್ಥಲದ ನಾಗಿದೇವ ಪರಸ್ತ್ರೀ ಸಂಗದ ವ್ಯಕ್ತಿಯಂತೆ ಚಿತ್ರಿತನಾಗಿದ್ದಾನೆ. ತನ್ನ ಮೂತ್ರ ಬೆರೆಸಿದ ಹಾಲು ಕುಡಿಸಿ ರೋಗ ನಿವಾರಣೆ ಮಾಡುವುದೇ ಮೊದಲಾದ ವಾಮಾಚಾರಗಳಿಂದ ಇವರ ಚರಿತ್ರೆ ತುಂಬಿ ಹೋಗಿದೆ. ಸಾಮಾನ್ಯವಾಗಿ ಎಲ್ಲ ನೂರೊಂದು ಜನರೂ ಒಂದು ರೀತಿ

ವಾಮಾಚಾರಿಗಳಂತೆಯೇ, ಅರೆಮರುಳ ಸ್ಥಿತಿಯವರಾಗಿಯೇ ಇದ್ದಾರೆ. ಇಂಥವರನ್ನು ಶುದ್ಧ ಆಚಾರದ, ಪರಿಶುದ್ಧ ವಿಚಾರದ ವೀರಶೈವ ವಿರಕ್ತರೆಂದು ಒಪ್ಪುವುದಾದರೂ ಹೇಗೆ? ಆದುದರಿಂದ ಒಂದು ಬಗೆಯ ವಾಮಾಚಾರದ ಶಿವೋಪಾಸಕರಂತಿರುವ ಇವರು ನಾಥ ಪಂಥೀಯರಂತೆ ಕಾಣುತ್ತಾರೆ."[೧೨]

ನೂರೊಂದು ವಿರಕ್ತರು ಬಾಹ್ಯ ಶುದ್ಧತೆಗಿಂತ ಆಂತರಿಕ ಶುದ್ಧತೆಗೆ ಹೆಚ್ಚು ಮಹತ್ವ ನೀಡಿದವರು. ಅನುಭೂತಿಯನ್ನೇ ಪ್ರಮಾಣವೆನ್ನುವ ಮುಕ್ತ ಚಿಂತನೆ ತಪಃಪುನೀತ ತೇಜಸ್ವಿ ವ್ಯಕ್ತಿತ್ವ ಮತ್ತು ಪ್ರಖರ ಆತ್ಮ ವಿಶ್ವಾಸದ ಗುಣದಿಂದಾಗಿ ಈ ವಿರಕ್ತರು ಪ್ರೌಢದೇವರಾಯನ ಕಾಲದಲ್ಲಿ ಹೆಚ್ಚು ಪ್ರಸಿದ್ಧಿಯನ್ನು ಹೊಂದಿದ್ದರು. ವಿಜಯನಗರ ಸಾಮ್ರಾಜ್ಯದಲ್ಲಿ ಒಂದು ಪ್ರಭಾವಶಾಲಿ ಶಕ್ತಿಯಾಗಿದ್ದ ವಿರಕ್ತರು, ಅಂದಿನ ಸಂದರ್ಭದಲ್ಲಿ ತಮ್ಮ ಕೆಲವೊಂದು ಪವಾಡ ಸಾದೃಶ್ಯಗಳಿಂದ ಹೆಚ್ಚು ಖ್ಯಾತಿಗಳಿಸಿದ್ದರೆಂದು ಸಾಹಿತ್ಯ ಕೃತಿಗಳ ಮೂಲಕ ತಿಳಿದುಬರುತ್ತದೆ.

'ಶಿವತತ್ವ ಚಿಂತಾಮಣಿ'ಯಲ್ಲಿ ಲಕ್ಕಣ್ಣ ದಂಡೇಶನು, ಭಕ್ತ್ಯಾವೇಶದಿಂದ ಬಣ್ಣಿಸಿರುವ ಚರಲಿಂಗ ಮೂರ್ತಿಗಳು 'ನೂರೊಂದು ವಿರಕ್ತರೇ' ಆಗಿರಬೇಕೆಂದು ಕೆಲವು ಪದ್ಯಗಳಿಂದ ಧ್ವನಿತವಾಗುತ್ತದೆ. ಈ ಚರಲಿಂಗ ಮೂರ್ತಿಗಳ ಲಕ್ಷಣ ಹಾಗೂ ವಿರಕ್ತರ ಲಕ್ಷಣ ಒಂದೇ ರೀತಿಯಲ್ಲಿದೆ.

> "ಬಿಟ್ಟ ಜಡೆಗಳ ದಿಗಂಬರದ ಶಿವಲಿಂಗದೋಳು
> ನಟ್ಟ ದೃಷ್ಟಿಯ ಕರಣ ತಲಿಯ ನಿಶ್ಚಲತೆಗಳ
> ಘಟ್ಟಿಗೊಂಡ ವಿರಳ ಸಮಾಧಿಯ ಪರಾನಂದ ರಸವೊಸರುವ ಶ್ರುಜಲದ
> ದಟ್ಟಾಯಿಸಿ ನೆಗೆವ ಪುಳಕದ ಭಸಿತ ಲೇಪನದ
> ಪುಟ್ಟುವ ಸ್ವೇದಿದೊಱಿತೆಯ ವಿಜಯಕಲ್ಯಾಣ
> ಪಟ್ಟಣದೊಳೊಲಿದಿರ್ಪ ಚರಲಿಂಗ ಮೂರ್ತಿಗಳ ಚರಣಾಂಬುಜಕ್ಕೆ ಶರಣು"[೧೩]

ಈ ಮೇಲಿನ ಪದ್ಯದಲ್ಲಿ ಬಣ್ಣಿಸಿರುವ ವೇಷ-ಭೂಷಣ, ಲಕ್ಷಣ ಹಾಗೂ ಗುಣ ಸ್ವಭಾವಗಳು ಚರಲಿಂಗ ಮೂರ್ತಿಗಳೆನ್ನುವರು ಬೇರೆ ಯಾರು ಅಲ್ಲ ಈ ವಿರಕ್ತರೇ ಆಗಿರಬೇಕೆಂಬ ಸಾಧ್ಯತೆಗಳಿವೆ. ಪರಮ ವಿರಕ್ತರ ಹಾವಭಾವಗಳು ಲೋಕಕ್ಕೆಲ್ಲ ವಿರುದ್ಧವಾದದ್ದು ನೋಡುಗರಿಗೆ ವಿಚಿತ್ರವಾದುದು. ತಮ್ಮ ಮೈ ಮೇಲೆ ಬಟ್ಟೆಗಳನ್ನು ಧರಿಸದೆ ಒಂದು ತುಂಡು ಕೌಪೀನ ಧರಿಸಿ, ಮಳೆ, ಗಾಳಿ, ಬಿಸಿಲೆನ್ನದೆ ಬರಿ ಮೈಯಲ್ಲಿ ನಡೆಯುತ್ತಿರುವ 'ನಡೆದಾಡುವ ದೇವರುಗಳೇ' ಈ ವಿರಕ್ತರು. ಇವರು ಸಂಸಾರ, ಹೆಂಡತಿ ಮಕ್ಕಳು ಮನೆ ಮಠಗಳ ಸಂಪರ್ಕವನ್ನು ಕಡಿದುಕೊಂಡಿರುವರು. ಸ್ವತಂತ್ರವಾಗಿ ಯಾರ ಸಂಪರ್ಕವಿಲ್ಲದೆ ಏಕಾಂಗಿಗಳಾಗಿ ಸಂಚರಿಸುವ

ಮಹಿಮ ಪುರುಷರಿವರು. ಬಾಹ್ಯವಾಗಿ ಲೋಕಕ್ಕೆಲ್ಲ ಮರುಳನಂತೆ, ಹುಚ್ಚರಂತೆ ಕಂಡರು ಆಂತರಿಕವಾಗಿ ದೈವಿ ಸಂಕಲ್ಪ ಉಳ್ಳವರಾಗಿದ್ದರು.

ಈ ನೂರೊಂದು ವಿರಕ್ತರಲ್ಲಿ ಗೃಹಸ್ಥರಿದ್ದರು. ಕೆಲವರು ಹಠಯೋಗಿಗಳಿದ್ದರು. ಅಲ್ಲದೆ ಮದುವೆ ಮಾಡಿಕೊಂಡು ಮಕ್ಕಳನ್ನು ಸಹ ಪಡೆದವರಿದ್ದರು. ಕೊನೆಗೆ ಈ ಲೌಕಿಕ ಜೀವನದಿಂದ ಜಿಗುಪ್ಸೆ ಹೊಂದಿ ಸಂಸಾರವನ್ನು ತೊರೆದು ವಿರಕ್ತಿ ಹೊಂದಿದವರಿದ್ದರು. ಈ ರೀತಿಯ ಗುಣ ಸ್ವಭಾವ ವೀರಶೈವ ವಿರಕ್ತರಲ್ಲಿ ಕಂಡುಬರಲಾರದು, ಅದು ಅವಧೂತರಲ್ಲಿ ಗೋಚರಿಸುವುದು. ಅವಧೂತರ ಚರಿತ್ರೆಗಳನ್ನು ಗಮನಿಸಿದರೆ ಈ ಮೇಲಿನ ಅಂಶಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಕರಸ್ಥಲದ ನಾಗಿದೇವನು ಒಮ್ಮೆ ಪತಿವುಳ್ಳ ಸ್ತ್ರೀಯರ ಮನೆಗೆ ಹೋಗುವನು. ಅವನು ಪರಸ್ತ್ರೀಯೊಂದಿಗೆ ಸಂಭೋಗದಲ್ಲಿದ್ದರೆ ಅವನ ಮನಸ್ಸು ಶಿವನಲ್ಲಿ ಐಕ್ಯವಾಗಿತ್ತು. ಇದನ್ನು ಕಂಡು ಮನೆಯವರೆಲ್ಲಾ ಮುತ್ತಿಕೊಂಡ ಮೇಲೆ ಅವಮಾನಿತನಾದ ನಾಗಿದೇವ ವೈರಾಗ್ಯ ತಾಳುವನು.

"ಅಂಗನೆಯ ಸಂಗದಿಂದೆನಗೆ ಅಭಿಮಾನಮುಂ
ಭಂಗವಾಯಿತು ಎಂದ ಸಂಗ ಸಮರಸ ಸುಖವ
ಅಂಗಿಕರಿಸುವನೆಂದು ಅರಿವು ತಲೆದೋರುತ್ತಂ ವಿಧ್ಯವೀದೇಹವೆಂದು
ಅಂಗಭೂಷಣ ವಸ್ತ್ರಾಲಂಕಾರ ತ್ಯಾಜಿಸುತಂ
ಲಿಂಗಮಂ ಕರದೊಳಗೆ ಪಿಡಿಕೊಂಡು ನಿಗ್ರತ್ವ
ಅಂಗದಿಂ ಭಸ್ಮಧಾರಣವಾಗಿ ನಡೆತರಲು ಕಂಡು ಜನ ನಗುತೀರ್ಥರು"[೧೪]

ಪರಸ್ತ್ರೀಯ ಸಂಗವನ್ನು ಬಯಸಿದ ನಾಗಿದೇವ ಒಂದು ದಿನ ಬೇರೊಬ್ಬರ ಮನೆಯಲ್ಲಿ ಅವಮಾನಿತನಾದ ಮೇಲೆ ತನ್ನ ಮನೋವಿಕಾರವನ್ನು ಶಪಿಸಿ ವಿಷಯಾಸಕ್ತಿಯೇ ಭವ ಬಂಧನದ ಮೂಲವೆಂದು ಮನಗಂಡು ಆ ಅರಿವಿನ ಎಚ್ಚರಿಕೆಯ ಅಮೃತ ಮೂಹೂರ್ತದಲ್ಲಿಯೇ ಸಮ್ಮೇಕ್ ಜ್ಞಾನಭರಿತನಾಗಿ ಸಂಸಾರವನ್ನು ಹರಿದೊಗೆದು ಪೀಠವನ್ನು ಕಿತ್ತೆಸೆದು ಇಷ್ಟಲಿಂಗವೊಂದನ್ನೇ ಕೈಯಲ್ಲಿ ಹಿಡಿದು ಮರುಳನಂತೆ ತಲೆಗೆ ಬೂದಿ ಬಡಿದುಕೊಂಡು ದಿಗಂಬರ ವೇಷಿಯಾಗಿ ಬರುವಾಗ ನಾಗಿದೇವನ ಆಕಾರ-ವಿಕಾರದ ಲಕ್ಷಣವನ್ನು ಕಂಡು ಜನ ಅಪಹಾಸ್ಯ ಮಾಡಿ ನಗುವರು.

"ಈ ವಿರಕ್ತರ ಲಕ್ಷಣ ಮತ್ತು ಗುಣಸ್ವಭಾವಕ್ಕೆ ತಕ್ಕಂತೆ ಅವರಿಗೆ ಶಾಂತ ಎಂಬ ನಾಮಧೇಯ ಬಂದಿದೆ. ಇವರು ಹೊಂದಿದ ಸಹಜ ಸ್ಥಿತಿಗನುಗುಣವಾಗಿ ಈ ಹೆಸರು ಅವರಿಗೆ ಬಂದಿರಬೇಕು. ವಿರಕ್ತರು ನಡೆಸಿದ ಪವಾಡ, ಸಾದೃಶ್ಯಗಳಿಂದ ಅವರು ಲೋಕದಲ್ಲಿ ನಡೆಸಿದ

ನಟನೆ, ಲೀಲೆ, ಕೈಗೊಂಡ ಕಾಯಕ ಇತ್ಯಾದಿಗಳಿಗೆ ಅನುಸಾರವಾದ ವಿಶೇಷಣಗಳನ್ನು ಅವರವರ ಹೆಸರುಗಳಿಗೆ ಹೊಂದಿಸಲಾಗಿದೆ. ಅವರು ಹೊಂದಿದ ಸ್ಥಿತಿ ಶಾಂತ ಸ್ಥಿತಿಯಾಗಿತ್ತು. ಈ ಕಾರಣದಿಂದ ಅವರಿಗೆ ಆ ಹೆಸರು ಬಂದಿರಬೇಕು ಎಂಬುದನ್ನು ಎಲ್ಲರಿಗೂ ಅಳವಡಿಸಿ ಹೇಳುವುದು ಕಷ್ಟ. ಡಾ. ಆರ್.ಸಿ.ಹಿರೇಮಠರವರ ಈ ತರ್ಕವು ನಿಧಾನದ ಶಾಂತ, ಎಚ್ಚರಿಕೆಯ ಶಾಂತ, ನಿಬ್ಬೆರಗಿನ ಶಾಂತ, ನಿರ್ವಂಚನೆಯ ಶಾಂತ, ಸಾಧನೆಯ ಶಾಂತ, ಸ್ವಸ್ಥಿರ ಸಮಾಧಿಯಲ್ಲಿರುವ ಶಾಂತ, ಬಯಲಶಾಂತ, ಶಿವಮೂರ್ತಿ ಮುನಿಶಾಂತ, ಶಿಶುಗಳೊಡನೆ ಆಟವಾಡುವ ಶಾಂತ, ಸುವಿವೇಕಿಶಾಂತ ಮೊದಲಾದವರಿಗೇನೋ ಅನುಗುಣವಾಗಬಹುದು. ಆದರೆ ಇವರಲ್ಲಿ ಅನೇಕರು ವೀರಶಾಂತರಾಗಿದ್ದಾರೆ. ಖಂಡಣಿ, ಆಯುಧ, ಚಕ್ರ, ತುಬಾಕಿಗಳನ್ನು ಹಿಡಿದವರಿದ್ದಾರೆ. ಪಂಚಾಂಗ ಹಿಡಿದೋದುವ ಭಟ್ಟ ಹಾಗೂ ಉಗ್ಗಡಿಪ ಶಾಂತರಿದ್ದಾರೆ. ಕೆಲವರಂತೂ ಲೌಕಿಕ ಸಹಜವಾದ ಕಾಯಕ ಜೀವಿಗಳಾಗಿದ್ದಾರೆ. ಅವರಲ್ಲಿ ಒಕ್ಕಲು ಕಾಯಕದ ಮರವಿಕ್ರಯಿಸುವ, ಸೂಜಿ, ಬೊಂಬೆ, ಚೆಕ್ಕಿ, ಕೆಲಸಿ, ಒಡ್ಡ, ಗಾಣ, ಮಡಿವಾಳ ಕಾಯಕದವರು ಮುಖ್ಯವಾಗಿದ್ದಾರೆ. ಇನ್ನೂ ಕೆಲವರಂತೂ 'ಜಗಕೆ ತಾ ಮರಳು ತನಗೆ ಜಗಮರಳು' ಎಂಬಂತೆ ಲೀಲಾಮೂರ್ತಿಗಳಾಗಿ, ಲೋಕದ ಕಣ್ಣಿನಲ್ಲಿ ಹುಚ್ಚರಂತೆ ತೋರಿದರೂ ಶಿವಯೋಗದ ನಿಬ್ಬೆರಗಿನಲ್ಲಿ ಅಂಗಲೀಲೆಯನ್ನು ಮೆರೆದ ಮಹಾನುಭಾವರಾಗಿದ್ದಾರೆ. ಅವರಲ್ಲಿ ಬುಡಬುಡಕಿಯ ಶಾಂತ, ಡಂಗುರ ಶಾಂತ, ಡೊಂಬರಶಾಂತ ಬೆಟ್ಟದ ಮೇಲಿರ್ಪ ಶಾಂತ, ರುದ್ರಭೂಮಿಯ ಶಾಂತ, ಬಾಲಗಾಸಿಯ ಶಾಂತ ಮೊದಲಾದವರನ್ನು ಹೆಸರಿಸಬಹುದು."[೨೫] ಡಾ. ಆರ್.ಸಿ.ಹಿರೇಮಠ ಅವರು ಈ ವಿರಕ್ತರನ್ನು ಶಾಂತ ಮನಸ್ಥಿತಿವುಳ್ಳವರೆಂದು ಹೇಳಿದ್ದಾರೆ. ಆದರೆ ಈಗ ಅದು ಶಾಂತ ಸ್ವಭಾವದವರಲ್ಲ, ಅದೊಂದು ಪರಂಪರೆಯಿತ್ತು. ಅದೇ ಶಾಂತಪರಂಪರೆಯಾಗಿದೆ.

ಈ ವಿರಕ್ತರು ವೀರಶೈವ ವಿರಕ್ತರಂತೆ ಶಿಷ್ಟ ಆಚಾರದ ವಿರಕ್ತರಲ್ಲ, ಇವರು ಭಿನ್ನ ರೀತಿಯ ಒಲವುಳ್ಳವರು. ಸಾಮಾನ್ಯವಾಗಿ ಈ ವಿರಕ್ತರು ಲೌಕಿಕ ವ್ಯವಹಾರದಲ್ಲಿ ಭಾಗಿಯಾಗದೆ ಅಲೌಕಿಕ ಜಗತ್ತಿನಲ್ಲಿ ವಿಹರಿಸುವರು. ಸಂಸಾರದ ಸರ್ವಸ್ವವನ್ನು ತೊರೆದ ಇವರು ಯಾರಲ್ಲಿ ಬೆರೆಯದೆ, ಸದಾ ಸಚ್ಚಿದಾನಂದ ಸ್ವರೂಪರಾಗಿ ಮೌನಾವೃತದಲ್ಲಿರುವರು. ಹೀಗಾಗಿ ಹಂಪೆಯ ಪರಿಸರವು ಸಹಜವಾಗಿಯೇ ಪ್ರಾಚೀನ ಕಾಲದಿಂದಲೂ ಸಾಧು, ಸಂತರಿಗೆ, ಯೋಗಿಗಳಿಗೆ ಪ್ರಮುಖ ಕೇಂದ್ರವಾಗಿತ್ತು. ಈಗಲೂ ಅಲ್ಲಿ ಹಲವು ಮತ, ಪಂಥದವರು ವಾಸಿಸಿರುವುದೇ ಸಾಕ್ಷಿಯಾಗಿದೆ. ಅನೇಕ ರೀತಿಯ ಜನರಿಗೆ ನೆರಳಿನ ಆಶ್ರಯ ತಾಣವಾಗಿರುವ ಹಂಪೆ ನಾಥ, ಲಾಕುಳ, ಶೈವ, ಕಪಾಲಿಕ, ಕಾಳಾಮುಖದ ಕೇಂದ್ರವು ಆಗಿತ್ತು. ಈ ವಿರಕ್ತರ ಲಕ್ಷಣವನ್ನು ಸೂಕ್ಷ್ಮವಾಗಿ ಗಮನಿಸಿದರೆ ಈ ಮೇಲಿನ ಯಾವುದಾದರೂ ಶೈವ ಶಾಖೆಗೆ ಸೇರಿದವರಂತೆ ಕಂಡುಬರುವರು. ಇವರ ಹಾವಭಾವಗಳು, ಗುಣಸ್ವಭಾವಗಳು ತುಂಬಾ ವಿಚಿತ್ರ ರೀತಿಯಲ್ಲಿರುವುದು.

ಮಾತನಾಡಿದರೆ ಒಂದೋ ಎರಡು ಮಾತಾಡುವರು ಇಲ್ಲವೇ ಸುಮ್ಮನಾಗುವರು. ಸದಾ ಏಕಾಂತವಾಗಿ, ಮೌನಿಯಾಗಿ ಧ್ಯಾನಸಕ್ತರಾಗಿರುವ ಇವರ ವ್ಯಕ್ತಿತ್ವದ ಪರಿಯು ಅಪರೂಪವಾದದ್ದು. ಜನರಿಂದ ಹುಚ್ಚರೆಂದು ಮರುಳರೆಂದು ಕರೆಸಿಕೊಳ್ಳುವ ಇವರು ಹಲವಾರು ಸಾರಿ ಸಮಾಜದಿಂದ ಅಪಹಾಸ್ಯಕ್ಕೂ ಈಡಾಗಿದ್ದಾರೆ. ಅಲ್ಲದೆ ಕೆಲವೊಂದು ವಿಶೇಷ ಸಂದರ್ಭದಲ್ಲಿ ತಮ್ಮ ದಿವ್ಯ ಲೀಲೆಗಳನ್ನು ತೋರ್ಪಡಿಸಿ ಬಯಲಾಗಿದ್ದಾರೆ. ಇದರಿಂದ ಆಶ್ಚರ್ಯ ಚಕಿತರಾದ ಜನಸಾಮಾನ್ಯರು ದೇವರ ಸ್ವರೂಪದಲ್ಲಿ ಇವರನ್ನು ಭಯ ಭಕ್ತಿಯ ನೆಲೆಯಲ್ಲಿ ಕಾಣಲಾರಂಭಿಸಿದರು.

"ಸಾಮಾಜಿಕ ಬಂಧನದಿಂದ ಮುಕ್ತನಾಗಿ ಮಾನ ಅಭಿಮಾನಗಳ ಪರಿವೆಯೇ ಇಲ್ಲದೆ ದಿಗಂಬರನಾಗಿ ತಿರುಗಾಡುತ್ತ, ಎಲ್ಲೆಂದರಲ್ಲಿ ಮಲುಗುತ್ತಿದ್ದು, ಹಸಿವು ಬಾಯಾರಿಕೆಗಳ ಯೋಚನೆಯೇ ಇಲ್ಲದೆ ಯಾವಾಗಲೂ ಮೌನವಾಗಿದ್ದು, ಸಮಾಧಿ ಸ್ಥಿತಿಯಲ್ಲಿರುತ್ತಾರೆ. ಇಂಥವರನ್ನು ಕಂಡ ಜನತೆ ಹುಚ್ಚನೆಂದೇ ಭಾವಿಸುತ್ತಾರೆ. ಈ ಸ್ಥಿತಿಯಲ್ಲಿರುವವರಿಗೆ ಊರುಗಳಷ್ಟೆ ಅಲ್ಲ, ನಾಡು-ಕಾಡು ಒಂದೇ ರೀತಿಯಲ್ಲಿ ಕಾಣುವುದರಿಂದ ಎಲ್ಲೆಂದರಲ್ಲಿ ಅಲೆದಾಡುತ್ತ ನಿದ್ರಿಸುತ್ತ, ವಾಸಮಾಡುತ್ತಿರುತ್ತಾರೆ. ಇವರು ಯೋಗಯುಕ್ತರಾಗಿ, ವಿರಕ್ತರಾಗಿ, ಸಪ್ತ ಭೂಮಿಕೆಗಳ ಅನುಭೂತಿಯನ್ನು ಪಡೆದು ಸಹಜಾನಂದದ ಸ್ಥಿತಿಯಲ್ಲಿರುತ್ತಾರೆ. ಇಂತಹ ಸ್ಥಿತಿ ಮುಟ್ಟಿ ಖ್ಯಾತಿವೆತ್ತ ಯೋಗಿರ್ವರೆಂದರೆ ಜಡಭರತ, ವೃಷಭ, ಶುಕ, ಮಾರ್ವಾಸ, ವಾಮದೇವ, ಸಂವರ್ತ, ಸನತ್ಕುಮಾರ, ಸದಾನಂದ ದತ್ತಾತ್ರಿಯ ಮುಂತಾದವರುಗಳೆಂದು ವೇದ, ಉಪನಿಷತ್ತು ಪುರಾಣಗಳಿಂದ ತಿಳಿಯಬಹುದು. ಇಂತಹ ಮನಸ್ಥಿತಿ ಮತ್ತು ಲಕ್ಷಣವನ್ನು ಹೊಂದಿದವರಿಗೆ ಯೋಗಿಗಳೆಂದು, ಅವಧೂತರೆಂದು ವಿರಕ್ತರೆಂದು ತುರ್ಯಾತೀತರೆಂದು ಜೀವನ್ಮುಕ್ತರೆಂದು ಕರೆಯುವರು."[೧೬]

ನೋಡುಗರಿಗೆ ತುಂಬ ವಿಚಿತ್ರವಾಗಿ ಕಾಣುವ ವಿರಕ್ತರು ಮಹಾನ್ ಪವಾಡ ಪುರುಷರು. ಜನರ ಕಷ್ಟ ಸುಖಗಳಲ್ಲಿ ಕೆಲವೊಮ್ಮೆ ಭಾಗಿಯಾಗಿ ಅವರ ರೋಗರುಜಿನಗಳನ್ನು ವಾಸಿ ಮಾಡುವರು. ಹೀಗಾಗಿ ಇಂಥ ಪುಣ್ಯ ಪುರುಷರ ಮಾರ್ಗವು ಲೋಕಕ್ಕೆ ಭಿನ್ನವಾಗಿ ಕಾಣುವುದು. ಹಸಿವು, ಬಾಯಾರಿಕೆ, ಬಿಸಿಲು, ಚಳಿ, ಮಳೆ ಎನ್ನದೆ ಎಲ್ಲವನ್ನು ಸಹಿಸಿಕೊಂಡು ಆತ್ಮದಲ್ಲಿಯೇ ಆನಂದ ಪಡುವ ನಿಸ್ಸಂಗಿಗಳಾಗಿರುವರು. ದೇಹದ ಭಾವನೆಗಳನ್ನು ಹೆಚ್ಚಿಸುವ ಕರ್ಮಸನ್ಯಾಸಕ್ಕಿಂತ ಮನಸ್ಸಿಗೆ ಬೋಧಕವಾದ ಜ್ಞಾನ ಸನ್ಯಾಸವು ಶ್ರೇಷ್ಠವೆಂದು ಅನುಭಾವಿಗಳು ಹೇಳುವರು. ನಮ್ಮವರು, ತಮ್ಮವರೆಂದಾಗಲಿ, ಮನೆ, ಮಠಗಳ ಪರಿವೆ ಇಲ್ಲದ ಇವರು ದಿವ್ಯ ಪುರುಷರಾಗಿರುವರು. ಸದಾ ಸಂಚಾರಿ ಜೀವಿಗಳಾದ ಇವರು ಏಕಾಂಗಿಯಾಗಿ ಕಾಡು ಮೇಡು ಬೆಟ್ಟ ಗುಡ್ಡವೆನ್ನದೆ; ತಮ್ಮ ಆಂತರಾತ್ಮಕ್ಕೆ ಎಲ್ಲಿ ನೆಮ್ಮದಿ ದೊರೆಯುವುದೋ ಅಲ್ಲಿ ನೆಲೆ ನಿಲ್ಲುತ್ತಾರೆ. ಕೆಲವರು ತಮ್ಮ ಮೈಮೇಲೆ ತುಂಡು ಬಟ್ಟೆ ಧರಿಸಿದರೆ ಮತ್ತೆ ಕೆಲವರು ಹಾಗೇನೆ ದಿಗಂಬರಾಗಿ ತಿರುಗುವ

ಲೀಲಾ ಪುರುಷರಿವರು. ಲೌಕಿಕ ವಿಷಯಗಳಲ್ಲಿ ನಿರಾಸಕ್ತಿ ಹೊಂದಿದ ಇವರು ಮಾತಾಡಿದ್ದೇ ವೇದ ವಾಕ್ಯವಾಗಿತ್ತು.

ಹಂಪೆಯ ಪರಿಸರದಲ್ಲಿ ಕಂಡುಬರುವ 'ಋಷಿ ಮುಖ'ದಂತಹ ಕೆಲವೊಂದು ಗವಿಗಳಲ್ಲಿ ಹಿಂದೆ ವಿರಕ್ತರು, ಯೋಗಿಗಳು ಹಾಗೂ ಸಾಧು ಸನ್ಯಾಸಿಗಳು, ಧ್ಯಾನಸಕ್ತರಾಗಿ ಹಾಗೆಯೇ ತಮ್ಮ ಪ್ರಾಣ ಪಕ್ಷಿಯನ್ನು ತೊರೆದ ಇವರ ಅಸ್ಥಿಪಂಜರಗಳಿವೆ ಎಂಬ ಜನ ವದಂತಿ ಈಗಲೂ ಉಂಟು.

"ಹಠಯೋಗ ಪ್ರದೀಪಿಕೆಯ ಕೊನೆಗೆ ಸಿದ್ಧಿ ಪುರುಷರು ಅಥವಾ ವಿರಕ್ತರನ್ನು ಕುರಿತ ವರ್ಣನೆಯನ್ನು ಈ ಕೆಳಗಿನಂತೆ ವರ್ಣಿಸಲಾಗಿದೆ.

"ಸರ್ವಾವಸ್ಥಾವಿಸರ್ಮುಕ್ತ; ಸರ್ವಚಿಂತಾವಿನರ್ಜಿತಃ ।
ಮೃತವತ್ತಿಷ್ಠತೇ ಯೋಗಿ ಸಮುಕ್ತೋ ನಾತ್ರ ಸಂಶಯ ।
ಖಾಧ್ಯತೇನ ಚ ಕಾಲೇನ ಬಾಧ್ಯತೆ ಚ ಕರ್ಮಣಾ ।
ಸಾಧ್ಯತೆ ನಸ ಕೇನಾಪಿ ಯೋಗಿಯುಕ್ತಃ ಸಮಾಧಿನಾ ।
ನ ವಿಜಾನಾತಿ ಶೀತೋಷ್ಣನ ದುಃಖಂ ನ ಸುಖಂ ತಥಾ ।
ನಮಾನಂ ನಾಪಮಾನಂ ಚಯೋಗಿ ಯುಕ್ತಃ ಸಮಾಧಿನಾ ।"[೧೭]

(ಸಕಲ ಆವಸ್ಥೆಯಿಂದ, ಸಕಲ ಚಿಂತೆಯ ತ್ಯಾಗ, ಸತ್ತವರಂತೆ ವರ್ತಿಸುವನೇ ಯೋಗಿ, ಕಾಲ ಅವನನ್ನು ಕೊಲ್ಲುವುದಿಲ್ಲ, ಕರ್ಮ ಅವನನ್ನು ಬಂದಿಸುವುದಿಲ್ಲ. ಚಳಿ ಬಿಸಿಲಿನ ಅರಿವೂ ಇರುವುದಿಲ್ಲ. ಸುಖ–ಸುಃಖ, ಮಾನ ಅಪಮಾನದ ಅರಿವೂ ಇಲ್ಲದ ಯೋಗಿಯು ಸದಾ ಸಂಚರಿಸುತ್ತಿರುತ್ತಾನೆ).

ವಿರಕ್ತರು ಯಾವುದೇ ಮತ ಧರ್ಮಕ್ಕೆ ಗಂಟುಬೀಳದೇ ಸರ್ವಸಂಗ ಪರಿತ್ಯಾಗಿಯಾಗಿ ಆತ್ಮನಲ್ಲಿಯೇ ವಿಹರಿಸುವ ಇವರು ಮಹಿಮಾ ಪುರುಷರು. "ಪರಮಾತ್ಮ ಜೀವಾತ್ಮ ಇವುಗಳ ಸಂಬಂಧದಿಂದ ಉಂಟಾಗುವ ಅಮೃತತ್ವ ಅನುಭಾವದ ಮೂಲಭೂತವಾದ ತಳಹದಿ, ದೇವನೊಡನೆ ಸಮರಸಗೊಂಡು ಅಮೃತತ್ವವನ್ನು ಪಡೆಯಬೇಕೆಂದು ಜೀವನದ ನಿರಂತರ ಹಂಬಲವನ್ನು ಕೈಗೂಡಿಸಿ ಕೊಡುವ ಸಾಧನೆಯೇ ಅನುಭಾವ ಮಾರ್ಗ"[೧೮] ಅನುಭಾವಿಗಳ ನೆಲೆಯಲ್ಲಿ ಬದುಕುತ್ತಿದ್ದ ವಿರಕ್ತರು ಮೇಲ್ ನೋಟಕ್ಕೆ ದೈಹಿಕವಾಗಿ ಮಲಿನರಾಗಿ, ವಿಲಕ್ಷಣ ರೂಪದಲ್ಲಿರುವ ಇವರ ಆಂತರಿಕ ಮನಸ್ಸು ಶಾಂತವಾಗಿತ್ತು. ಇಂತಹ ದಿವ್ಯ ಪುರುಷರು ಅಂದಿನ ವೇಳೆಯಲ್ಲಿ ಹಂಪೆಯ ವಿಶಾಲವಾದ ಪರಿಸರದ ಬೆಟ್ಟ ಗುಡ್ಡ ಗುಹೆಗಳಲ್ಲಿ ಧ್ಯಾನಸಕ್ತರಾಗಿರುತ್ತಿದ್ದರಂತೆ. "ಲೌಕಿಕ ಜೀವನದ ಬಗ್ಗೆ ಜಿಗುಪ್ಸೆ ಹೊಂದಿದ್ದ, ಜಗತ್ತಿನ ನೋವುಗಳು, ಆಸೆ–ನಿರಾಸೆಗಳು,

ದುಃಖ-ದುಮ್ಮಾನಗಳು, ಚಂಚಲತೆ, ಅತೃಪ್ತಿ, ಅಸಮಾಧಾನ, ಅರ್ಥಹೀನ ಆಚರಣೆಗಳು ಇಂಥಗಳಿಂದ ಬೇಸತ್ತು ಸಾಮಾಜಿಕ ಜೀವನದ ಬಗ್ಗೆಯೇ ಜಿಗುಪ್ಸೆ ಹೊಂದಿರುತ್ತಾರೆ. ಮನೆ, ಮಠ, ಹೆಂಡತಿ, ಮಕ್ಕಳು, ಬಂಧು-ಬಳಗ, ಇವುಗಳನ್ನೆಲ್ಲಾ ತ್ಯಜಿಸಿ ಬಂಧನದಿಂದ ಹೊರಬಂದಿರುತ್ತಾರೆ. ಮಾನ-ಅಭಿಮಾನಗಳನ್ನು ಬಿಟ್ಟು ವೈರಾಗ್ಯ ಮೂರ್ತಿಗಳಾಗಿದ್ದು, ಮೌನಕ್ಕೆ ಏಕಾಂಗಿತನಕ್ಕೆ ಹೊಂದಿಕೊಂಡಿರುವ ಇವರು ಸದಾ ಧ್ಯಾನಮಗ್ನರಾಗಿರುತ್ತಾರೆ."೧೯

ಸರ್ವಸಂಗ ಪರಿತ್ಯಾಗಿಯಾದ ಇವರು ನೋಡುವವರಿಗೆ ಹುಚ್ಚರಂತೆ ಕಾಣುತ್ತಿದ್ದರು. ಹೀಗಾಗಿ ಇವರಿಗೆ ಗುಡಿಗಂಡಾರಗಳೇ ವಾಸಸ್ಥಳಗಳಾಗಿದ್ದವು. ಸಾಮಾನ್ಯವಾಗಿ ಬಹು ಜನರು ಇವನ್ಯಾರೋ ಹುಚ್ಚನಿರಬೇಕೆಂದು ಭಾವಿಸುತ್ತಿದ್ದರು. ಹಲವು ಜನ ಮಾತಾಡಿಸಿದರು ಮಾತನಾಡದೆ ಮೌನಿಯಾಗಿರುತ್ತಿದ್ದರು. ಈ ಸಾಧು ಮೂರ್ತಿಯ ಲಕ್ಷಣವನ್ನು ತಿಳಿಯದೆ ಇವರನ್ನು ಅವಮಾನಿಸಿದ್ದು ಉಂಟು. ಹೀಗೆ ಸಮಾಜದಲ್ಲಿ ಲೌಕಿಕ ಮೂಢ ಜನರಿಂದ ಕೆಲವು ತೊಂದರೆಗಳನ್ನು ಅನುಭವಿಸುತ್ತ ಸಂಚಾರಿಸುವ ಮಹಾತ್ಮರ ಲೀಲೆ ಅಪಾರ.

ವಿಪರಿತವಾದ ಜಡೆ-ಗಡ್ಡಗಳನ್ನು ಬಿಟ್ಟ ಇವರು ದೇವರನ್ನು ಜಪಿಸುತ್ತ ಅನ್ನ ಆಹಾರಗಳಿಲ್ಲದೆ ತಮಗೆ ತೋಚಿದ್ದನ್ನು ತಿಂದು ಕೆಲವೊಮ್ಮೆ ಯಾರಿಗೂ ಗೋಚರಿಸಿದಂತೆ ಅಲ್ಲಲ್ಲಿ ಸಂಚರಿಸುತ್ತಿದ್ದರು.

ಸಾಮಾನ್ಯವಾಗಿ ಇಲ್ಲಿ ಪ್ರತಿಯೊಬ್ಬ ವಿರಕ್ತನಿಗೆ ಅವರದೇ ಆದ ಒಂದು ಕಾಯಕವಿತ್ತು. ಕಾಯಕದಲ್ಲಿ ಇವರು ತುಂಬ ಪರಿಣಿತರು. ಉದಾ: ತುಬಾಕಿ ಶಾಂತ, ಮಿಡಿಬಿಲ್ಲ ಶಾಂತ, ಬುಡಬುಡಕೆಯ ಶಾಂತ, ಟಗರಿನ ಶಾಂತ ಹೀಗೆ ಅವರವರ ಕಾಯಕದಲ್ಲಿ ನಿರತರಾದ ವಿರಕ್ತರು ಕಂಡುಬರುವರು. ಪ್ರೌಢದೇವರಾಯನು ಅವರ ಕಾಯಕದೊಡನೆ ಪ್ರತಿಸ್ಪರ್ಧಿಯಾಗಿ ನಿಂತಾಗ ವಿರಕ್ತರು ಅದರಲ್ಲಿ ಜಯಶೀಲರಾಗಿ ಅಲ್ಲಿಯೇ ಬಯಲಾಗುವರು. ಹೀಗಾಗಿ ತುಂಬ ವಿಶಿಷ್ಟ ರೀತಿಯ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡ ವಿರಕ್ತರು ಯಾರ ಕೈಗೂ ನಿಲುಕಲಾರದಂತಿದ್ದರು.

ಪ್ರಾಚೀನ ಕಾಲದಿಂದಲೂ ಹಂಪೆಯ ಪ್ರಶಾಂತವಾದ ಪ್ರದೇಶದಲ್ಲಿ ನಾಥರು, ಕಾಳಾಮುಖರು, ಕಪಾಲಿಕರು ನೆಲೆನಿಂತಿದ್ದರೆಂಬುದಕ್ಕೆ ಅನೇಕ ರೀತಿಯ ಉಲ್ಲೇಖಗಳು ದೊರೆಯುತ್ತವೆ. ಸಾಮಾನ್ಯವಾಗಿ ಸಾಧು, ಸನ್ಯಾಸಿಗಳು, ಯೋಗಿ ಸತ್ಪುರುಷರಿಗೆ ನದಿ ಬಯಲುಗಳು ಅವರ ಆಧ್ಯಾತ್ಮಿಕ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ವಿಜಯನಗರ ಸಾಮ್ರಾಜ್ಯದಲ್ಲಿ ಬಾಳಿದ ವಿರಕ್ತರು ಆಗ ತುಂಬಾ ಪ್ರಚಾರದಲ್ಲಿದ್ದ ವೀರಶೈವ ಧರ್ಮದ ತತ್ವಗಳು ಇವರಿಗೆ ಸರಿ ಕಂಡಿರಬೇಕು. ಹೀಗಾಗಿ ಅವರ ತತ್ವಗಳನ್ನು ಪಾಲಿಸಿದ ಮಾತ್ರಕ್ಕೆ ಇವರನ್ನು ವೀರಶೈವರೆಂದು ಕರೆಯಲಿಕ್ಕೆ ಹೇಗೆ ಸಾಧ್ಯ ವೀರಶೈವರ ಲಕ್ಷಣಕ್ಕೂ ಇವರ ಲಕ್ಷಣಗಳ ನಡುವೆ ತುಂಬಾ ಭಿನ್ನತೆ ಕಂಡುಬರುತ್ತದೆ. ನಮ್ಮ ಪ್ರಾಚೀನ ವಿದ್ವಾಂಸರು ಎಲ್ಲಾ ಪಂಥಗಳನ್ನು ಒಂದೇ ಮೂಟೆಯಲ್ಲಿ ತುಂಬುವ ಕೆಲಸ ಮಾಡಿದ್ದಾರೆ.

"ವೀರಶೈವರಲ್ಲಿರಬೇಕಾದ ವಿಶಿಷ್ಟ ಗುಣಲಕ್ಷಣಗಳು ಈ ಕೆಳಗಿನಂತಿವೆ. ವೀರಶೈವ ಲಕ್ಷಣ........ ಸ್ನಾನ ಭೋಜನ ನಿದ್ರಾ ಜಾಗರಣ ಮಲಮೂತ್ರ ವಿಸರ್ಜನಾದಿ ಕಾಲಂಗಳಲ್ಲಿ ಅಶುಚಿ ಭಾವನೆದೋರದೆ ಸದಾ ಲಿಂಗಾಂಗ ಸಂಬಂಧಿಯಾಗಿ ಲಿಂಗಭೋಗೋಪ ಭೋಗಿಯಾಗಿ ತನ್ನಿಷ್ಟ ಲಿಂಗದಲ್ಲಿ ಆಹ್ವಾನ ವಿಸರ್ಜನ ಕ್ರಿಯೆಗಳು ಮಾಡದಾತನಾಗಿ ಲಿಂಗಲೋಪ ವ್ರತಲೋಪಂಗಳಲ್ಲಿ ಪ್ರಾಣ ತ್ಯಾಗವಲ್ಲದೆ ಬೇರೊಂದು ಪ್ರಾಯಶ್ಚಿತ್ತ ವಿಲ್ಲದಾತನಾಗಿ ಗುರುನಿಂದೆ ಶಿವನಿಂದೆ ಜಂಗಮನಿಂದೆ ಪಾದೋದಕ ಪ್ರಸಾದ ಭಸ್ಮಧಾರಣ ನಿಂದೆ ಶಿವಾಗಮ ಶಿವಕ್ಷೇತ್ರ ಶಿವಾಚಾರ ನಿಂದೆಗಳಂ ಸೈರಿಸದಾತನಾಗಿ ವಿಷ್ಣ್ವಾದಿ ದೇವತೆಗಳು ಲೆಕ್ಕಿಸದಾತನಾಗಿ ಬಾಹ್ಯದಲ್ಲಿ ಶಿವಲಿಂಗ ಲಾಂಛನವಿಲ್ಲದ ಭವಿಗಳೊಡನೆ ಏಕಾಸನಶಯನ ಯಾನ ಸಂಪರ್ಕ ಸಹಭೋಜನಾದಿಗಳಿಲ್ಲದಾತನಾಗಿ ಅನ್ನತ ಅಸ್ಥಿರವಾಕ್ಯ ವಂಚನೆ ಪಂಕ್ತಿಭೋದ ಉದಾಸೀನ ನಿರ್ದಯಮೆಂಬಾರಂತ ರಂಗದ ಭವಿಗಳಿಲ್ಲದಾತನಾಗಿ ಶಿವಮಾಹೇಶ್ವರರಂ ಕಾಣುತ್ತಾಲೇಳುವುದು ಅವರ್ಗೂಡಿ ತಿರುಗುವುದು ಪ್ರೀತಿವಚನಮಂ ನುಡಿವುದು ಗದ್ದಿಗೆಯನಿಕ್ಕುವುದು ಅನ್ನ ಪಾನಾದಿಗಳಂ ಸಮರ್ಪಿಸುವುದು ಎಂಬ ಮುಕ್ತಿಸೋಪಾನ ಸಪ್ತಕ ಕ್ರಮಯುಕ್ತನಾಗಿ ಜಾಲೆಸೂತಕ ಜನನ ಸೂತಕ ಪ್ರೇತಸೂತಕ ಉಚ್ಚಿಷ್ಟ ಸೂತಕ ರಜಃಸೂತಕವೆಂಬ ಪಂಚಸೂತಕವನತಿಗಳೆದಾತನಾಗಿ ಲಿಂಗಾಚಾರ, ಸದಾಚಾರ, ಶಿವಾಚಾರ, ಬೃತ್ಯಚಾರ, ಶಿವಾಚಾರ ಗಣಾಚಾರವೆಂಬ ಪಂಚಾಚಾರನಿಷ್ಠವಾಗಿ ಪಾಸತ್ವ ವೀರದಾಸತ್ವ ಭೃತ್ಯತ್ವ, ವೀರಭೃತ್ಯತ್ವ ಸಮಯಾಚಾರತ್ವ ಸಂಕಲಾವಸ್ಥಾತ್ವಂಗಳೆಂಬ ಷಿಡ್ವಿಧ ಸಜ್ಜನತ್ವ ಯುಕ್ತನಾಗಿ ದೇಶಕಾಲಕಲ್ಪತಾದಿ ಲೌಕಿಕಾಚಾರಂಗಳಂ ಮಿಣಿ ಸ್ವತಂತ್ರಶೀಲನಾಗಿ ಶಿವಾತ್ಮರ್ಗ ಭೇದ ಭ್ರಾಂತಿದೋರದಾತನಾಗಿ ಉಪನಿಷದ್ವಾಕ್ಯ ಜನಿತ ವಿದ್ಯೆಯಲ್ಲಿ ರಮಿಸುವ ಶೈವನಪ್ಪಾದಚಿಂ ತತ್ಸಂಜ್ಞೆಯುಳ್ಳಾತನಾಗಿ ಜಗತ್ಪೂಜ್ಯನಾಗಿರ್ಪಾತನೆ ವೀರಶೈವನಪ್ಪಂ"[೨೦]

೧. ಗುರುವಿನ ಅನುಗ್ರಹದಿಂದ ಪ್ರಾಪ್ತವಾದ ಇಷ್ಟಲಿಂಗವನ್ನು ದೇಹದ ಮೇಲೆ ಸದಾ ಧರಿಸಿ ಅದನ್ನು ಭಕ್ತಿಯಿಂದ ಪೂಜಿಸುವುದು.

೨. ಗುರುಲಿಂಗ-ಜಂಗಮರ ಬಗೆಗೆ ಅಪಾರ ಗೌರವದಿಂದಿರುವುದು.

೩. ಭಸ್ಮ, ರುದ್ರಾಕ್ಷಿ, ಮಂತ್ರ, ಪಾದೋದಕ, ಪ್ರಸಾದಗಳ ಬಗೆಗೆ ಶ್ರದ್ಧೆಯಿಂದಿರುವುದು.

೪. ಸುಸಂಸ್ಕೃತಗೊಂಡ ಭಕ್ತಿಯಿಂದ ಷಟ್‌ಸ್ಥಲ ಮಾರ್ಗವೆಂದು ಕರೆಯಲ್ಪಡುವ ಆಧ್ಯಾತ್ಮಿಕ ಸಾಧನೆಯನ್ನು ಸಾಧಿಸಲು ಪ್ರಯತ್ನಿಸುವುದು.

೫. ಷಟ್‌ಸ್ಥಲ ಮಾರ್ಗನುಸಾರ ಸಾಧಕನು ಆಧ್ಯಾತ್ಮಿಕ ಭೇದಾಭೇದ ಸಿದ್ಧಾಂತವನ್ನು ಅನುಸರಿಸುವುದು ಇತ್ಯಾದಿ.

೬. ಈ ವೀರಶೈವದ ತತ್ವಗಳು ವೇದ, ಆಗಮ, ಉಪನಿಷತ್, ಪುರಾಣಗಳನ್ನು ಆಶ್ರಯಿಸಿರುವುದು ಪರಂಪರೆಯಿಂದ ತಿಳಿದುಬರುತ್ತದೆ.

೭. ಶಿವಯೋಗ ಸಾಧನೆಯಿಂದ ಜೀವಂತವಿರುವಾಗಲೇ ಶಿವನಲ್ಲಿ ಒಂದಾಗುವುದು.

ಈ ಮೇಲೆ ವಿವರಿಸಿದ ಶಿಷ್ಟ ಆಚಾರದ ವೀರಶೈವರ ಲಕ್ಷಣಗಳು ವಾಮಾಚಾರಿಗಳಾದ, ಅರೆಮರುಳ ಸ್ಥಿತಿಯಲ್ಲಿರುವ ಹಾಗೂ ಮೂತ್ರ ಬೆರೆಸಿ ಹಾಲು ಕುಡಿಸಿ ರೋಗ ನಿವಾರಣೆ ಮಾಡುವ ನೂರೊಂದು ವಿರಕ್ತರ ಲಕ್ಷಣಗಳು ತುಂಬಾ ಭಿನ್ನವಾಗಿ ಕಂಡುಬರುತ್ತವೆ. ಹೀಗಾಗಿ "ನೂರೊಂದು ವಿರಕ್ತರ ಅರೆಮರುಳ ಸ್ಥಿತಿಯೂ ಅವಧೂತರನ್ನೇ ನೆನಪಿಸುತ್ತದೆ."[೨೧]

ಮಿಡಿಬಿಲ್ಲಶಾಂತ ಎಂಬ ವಿರಕ್ತನು ನೋಡಲು ಅಸಹ್ಯಕರವಾಗಿದ್ದ, ಮಾಸಿದ ಬಟ್ಟೆ, ಕೊಳಕು ದೇಹಗಳಿಂದ ಮಲೀನವಾಗಿದ್ದ. ಇವನು ಒಮ್ಮೆ ತನ್ನ ಲಿಂಗವನ್ನು ಧರಿಸುತ್ತಿರುವಾಗ ಜನ ಇವನನ್ನು ಹುಚ್ಚನೆಂದು ಹಿಂಬಾಲಿಸುವರು. ಕೊನೆಗೆ ವೀರಣ್ಣೊಡೆಯನ ಹತ್ತಿರ ಬಂದು ಲಿಂಗವನೆಸೆದು ಅದರೊಡನೆ ನಿರವಯವಾಗುವನು. ತಗರ ಕಾಳಗದ ಪ್ರಭು ಎಂಬ ವಿರಕ್ತನು ಒಮ್ಮೆ ಅಂಗಡಿಯ ತಿನಸುಗಳನ್ನು ತಿನ್ನುತ್ತಿರಲು ಆ ಅಂಗಡಿ ಮಾಲಿಕ ಅವನನ್ನು ಹಿಂಸಿಸುವುದು, ಆಗ ವೀರಣ್ಣೊಡೆಯರು ಆತನನ್ನು ಕಂಡು "ಕೊಲ್ಲಿ ಬೇಡಿ ಈತನೇ ಪರಮಶಿವಯೋಗಿ" ಎಂದು ಹೇಳುತ್ತಿದ್ದಂತೆ ತಗರ ಪ್ರಭುವು ಸಹ ನಿರವಯವಾಗುವನು. ಬಾಲಲಿಂಗಣ್ಣ ಭಿಕ್ಷೆ ಬೇಡುವ, ಅಲ್ಲದೆ ಬತ್ತಲೇಶ್ವರ ಎಂಬ ವಿರಕ್ತ ಗುಹೆಯಲ್ಲಿ ಬತ್ತಿದ್ದ ಶರೀರದಿಂದಿರುವ ರೀತಿ ಅಲ್ಲದೇ ಆಲದ ಮರದ ಜಡೆಗಳನ್ನು ಹಿಡಿದುಕೊಂಡ ಶಿವಯೋಗ ಸಮಾಧಿಯಲ್ಲಿರುವ ಪ್ರಸಂಗ ಇವೆಲ್ಲಾ ಗುಣ ಸ್ವಭಾವಗಳು ಶಿಷ್ಟ ಆಚಾರದ ಪರಿಶುದ್ಧ ವಿಚಾರದ ವೀರಶೈವ ವಿರಕ್ತರಲ್ಲಿ ಕಾಣಲು ಸಾಧ್ಯವಿಲ್ಲ.

"ಪ್ರೌಢದೇವರಾಯನ ಕಾಲದಲ್ಲಿದ್ದ ಇವರನ್ನು 'ವೀರಶೈವ ಪ್ರವರ್ತಕ'ರೆಂದು ಪ್ರಾತಿಪಾದಿಸುತ್ತ ಬಂದುದು ವಿಪರ್ಯಾಸವೇ ಸರಿ. ಆದುದರಿಂದ ನೂರೊಂದು ವಿರಕ್ತರು, ವೀರಶೈವ ಪರಿಕಲ್ಪನೆಯ 'ವಿರಕ್ತ'ಕ್ಕೆ ಭಿನ್ನರಾಗಿರುವರು."[೨೨]

ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಹೆಚ್ಚು ಪ್ರಸಿದ್ಧಿ ಪಡೆದ ಹಂಪೆ ಹಿಂದಿನಿಂದಲೂ ಹಲವಾರು ಸಂತರು, ಅವಧೂತರು, ಶರಣರು ಕೈಂಕಾರ್ಯ ಗೈದ ಒಂದು ತಪೋ ಭೂಮಿಯಾಗಿತ್ತು. 'ದೇವರು' ಒಬ್ಬನೆ ಎಂಬ ಪರಿಕಲ್ಪನೆ ಎಲ್ಲ ಆಧ್ಯಾತ್ಮಿಕ ಜೀವಿಗಳ ಮೂಲ ಧ್ಯೇಯವಾಗಿತ್ತು. ಜಾತಿ, ಮತ, ಪಂಥ, ಮೇಲು, ಕೀಳು, ಎನ್ನದೆ ಸರ್ವರನ್ನು ಏಕ ನೆಲೆಯಲ್ಲಿ ಕಾಣುವ ಸ್ವಭಾವದವರು. ಪ್ರತಿಯೊಂದರ ಒಳಿತು ಕೆಡಕನ್ನು ಯೋಚನೆ ಮಾಡಿ ತಮ್ಮದೇ ಆದ ದಿವ್ಯ ಮಾರ್ಗದಲ್ಲಿ ಚಲಿಸುವ ನಕ್ಷತ್ರಗಳೇ ಈ ವಿರಕ್ತರು. ಲೌಕಿಕ ಜಂಜಾಟದಿಂದ ದೂರ ಸರಿದ

ಇವರು ಸಮಾಜಕ್ಕೆ ನೀಡಿದ ಕೊಡುಗೆ ಅಪಾರ. ಸನ್ಯಾಸಿಗಳಾಗಿ ಸಂಚರಿಸುವ ವಿರಕ್ತರು ತಮ್ಮ ಅಪಾರವಾದ ಪವಾಡ ಸಾದೃಶ್ಯಗಳಿಂದ ಕಷ್ಟದಲ್ಲಿರುವವರ ಕಷ್ಟಗಳನ್ನು ನಿವಾರಣೆ ಮಾಡುವುದು ಕೆಲವೊಂದು ಸಾಂಕ್ರಮಿಕ ರೋಗಗಳನ್ನು ಪರಿಹರಿಸುವವರಾಗಿದ್ದರು. ಉದಾ: ಗುಮ್ಮಳಾಪುರದಲ್ಲಿ ಒಬ್ಬ ಸತಿಯು ತನ್ನ ಪುರುಷನು ಕುಷ್ಠರೋಗದಿಂದ ನರಳುತ್ತಿದ್ದಾನೆ, ಅವನನ್ನು ಬದುಕಿಸಿಕೊಡಬೇಕೆಂದು ನಾಗಿದೇವನಲ್ಲಿ ಪ್ರಾರ್ಥಿಸುವಳು. ಆಗ ನಾಗಿದೇವನ ಆದೇಶದಂತೆ ಗೋಕ್ಷೀರವನ್ನು ತಂದುಕೊಟ್ಟಳು. ಆ ಹಾಲಿನ ಪಾತ್ರೆಗೆ ತನ್ನ ಮೂತ್ರವನ್ನು ಬೆರಸಿ ರೋಗಿಗೆ ಕೊಡಲು ಅವನ ರೋಗವು ವಾಸಿಯಾಗುವುದು. ಹೀಗೆ ಅನೇಕ ರೀತಿಯಿಂದ ಜನಗಳ ತೊಂದರೆಗಳನ್ನು ನಿವಾರಿಸುತ್ತಿದ್ದ ಇವರು ಲೀಲಾ ಪುರುಷರಾಗಿರುವರು. ಈ ವಿರಕ್ತರಲ್ಲಿ ಒಬ್ಬೊಬ್ಬರು ಒಂದೊಂದು ಕಲೆಗಳಲ್ಲಿ ನಿಪುಣರಾಗಿರುತ್ತಿದ್ದರು. ಕಾಳಗ, ಬೇಟೆ, ಬಿಲ್ಲು ತುಬಾಕಿ ಹೀಗೆ ಇನ್ನೂ ಮುಂತಾದ ಕ್ಷೇತ್ರದಲ್ಲಿ ಪರಿಣಿತರಾದ ಇವರು ಜಯಶೀಲರಾಗಿ ಬಯಲಾಗುವರು. ಪ್ರೌಢ ದೇವರಾಯನು ವಿರಕ್ತರ ವ್ಯಕ್ತಿತ್ವವನ್ನು ಪರೀಕ್ಷಿಸಲು ಪ್ರಯತ್ನಿಸಿ ಅವರ ಲೀಲೆಗೆ ನಿಬ್ಬೆರಗಾಗುವನು. ಕೊನೆಗೆ ಅವರ ಪವಾಡ ಶಕ್ತಿಯನ್ನು ಮನಗಂಡು ಈ ಮಹಾತ್ಮರನ್ನು ಪರೀಕ್ಷಿಸಬಾರದಾಗಿತ್ತೆಂದು ವೀರಣ್ಣೊಡೆಯನಿಗೆ ತಿಳಿಹೇಳುವನು.

ರಾಜಕೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಹಿತ್ಯಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಹೆಚ್ಚು ಪ್ರಸಿದ್ಧಿಯನ್ನು ಪಡೆದ ಹಂಪೆಗೆ ಅಂದು ನಾಡಿನ ಹಲವು ಕಡೆಗಳಿಂದ ಅನುಭಾವಿಗಳು ಸಾಹಿತಿ ದಿಗ್ಗಜರು ಬರತೊಡಗಿದರು. ಹೀಗಾಗಿ ಹಂಪೆಯಲ್ಲಿದ್ದ ವಿರಕ್ತರಲ್ಲಿ ಕೆಲವರು ಲೌಕಿಕ ಬದುಕಿಗೆ ತಂಬಾ ಹತ್ತಿರವಾದವರಿದ್ದರು. ಇವರು ಸಾಹಿತ್ಯ ಕೃತಿಗಳನ್ನು ರಚಿಸುವರೊಂದಿಗೆ ಆಸ್ಥಾನದಲ್ಲಿ ಆಶ್ರಯ ಪಡೆದಿದ್ದರು.

ವಿರಕ್ತರಲ್ಲಿ ಮೊದಲಿಗೆ ಬರುವ ಕೆಲವೊಂದು ಮಂದಿ ಸಾಹಿತ್ಯ ಸೃಷ್ಟಿಸಿದವರಿದ್ದರು. ಕರಸ್ಥಲದ ನಾಗಿದೇವ, ಗುರಬಸವ, ಬತ್ತಲೇಶ, ನಿರ್ವಾಣಿ ಬೋಳೇಶ ಇವರೆ ಕೆಲವೊಂದು ತ್ರಿಪದಿಗಳು, ಅನುಭಾವದ ಹಾಡುಗಳಂತಹ ಲಘುಸಾಹಿತ್ಯ ಕೃತಿಗಳನ್ನು ರಚಿಸಿರುವರು.

ನೂರೊಂದು ವಿರಕ್ತರಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಉತ್ತಮವಾದ ಸಾಧನೆ ಮಾಡಿದವರಲ್ಲಿ 'ಸಪ್ತಕಾವ್ಯ'ದ ಗುರುಬಸವನು ಒಬ್ಬನಾಗಿರುವನು. ಇವನು 'ಸಪ್ತ' ಕಾವ್ಯವನ್ನು ರಚಿಸಿರುವುದರಿಂದ ಇವರಿಗೆ 'ಸಪ್ತ' ಎಂಬ ಸಂಖ್ಯಾ ವಿಶೇಷಣ ಪ್ರಾಪ್ತವಾಗಿದೆ. ಅಲ್ಲದೆ 'ಯೋಗ' ವಿದ್ಯೆಯನ್ನು ಬಲ್ಲವನಾಗಿದ್ದರಿಂದ ಇವನಿಗೆ 'ಯೋಗದ ಗುರುಬಸವ'ನೆಂದು ಸಹ ಕರೆಯುವರು. ಆ ವೇಳೆಯಲ್ಲಿ ಅವಧೂತ ಗೀತೆ ಎಂಬ ಕೃತಿ ಬರೆದ. ಈ ಕೃತಿಯಿಂದಾಗಿ ಈ ವಿರಕ್ತರು ಸಾಮಾನ್ಯವಾಗಿ 'ಯೋಗಿ' ಅವಧೂತ ಅಥವಾ 'ನಾಥ'ರಂತ ಪರಂಪರೆಗೆ ಸೇರಿದವರಾಗಿ

ಕಂಡುಬರುವ ಸಾಧ್ಯತೆಗಳಿವೆ. ಗುರುಬಸವನ 'ಮನೋವಿಜಯ ಕಾವ್ಯ'ದಲ್ಲಿ ಅವನ ವ್ಯಕ್ತಿಗತ ಪರಿಚಯ ಮತ್ತು ಅವನ ಆಧ್ಯಾತ್ಮಿಕ ಜೀವನದ ಪರಿಕಲ್ಪನೆ ಗೋಚರಿಸುವುದು.

ಯೋಗಿಯಾದ ಸಪ್ತಕಾವ್ಯದ ಗುರುಬಸವನ ಬಗೆಗೆ ಮರಿತೋಂಟದಾರ್ಯರು ತಮ್ಮ 'ಸಿದ್ಧೇಶ್ವರ ಪುರಾಣ'ದಲ್ಲಿ ಹೀಗೆ ಚಿತ್ರಿಸಿರುವರು.

"ಮತ್ತೆ ಕೇಳ್ ಗುರುಬಸವನೆಂಬ ಯೋಗಿ ಕೂಡೆ
ಮತ್ತನೆನಿಸುವ ಚಂದ್ರಜೋಗಿ ವಾದಿಪನೆಂದು
ಹತ್ತೆ ಸಾರ್ದಾಕಾಶಕಡರಿ ತಾಳ ಪ್ರಮಾಣದೋಳ್ ಕುಳ್ಳಿರೆ ಕಾಣುತೆ
ಉತ್ತಮೋತ್ತಮನಾತ್ಮ ಪಾದುಕೆಯ ನಿಡೆಯವನ
ನೆತ್ತಿಯಿಂ ಮೇಲೆ ಮೊಳದೊಂದರಳತೆಯೋಳಿರಲ್
ಚಿತ್ತದೊಳ್ ನಾಣ್ಚಿಧರೆಗಿಳಿದು ಕರುಣಂ ಬಡೆದುದಂ ಕೇಳ್ದುದರಿದಿಲ್ಲವೆ."[೨೩]

"ಗುರುಬಸವನು ಪ್ರೌಢದೇವರಾಯನ ಅರಮನೆಗೆ ಬರುವುದಕ್ಕಿಂತ ಮೊದಲು ಅಲ್ಲಿ ಚಂದ್ರ ಜೋಗಿ ಎಂಬವನಿದ್ದನು. ಇವನನ್ನು ತರ್ಕದಲ್ಲಿ ಸೋಲಿಸಿದ್ದಲ್ಲದೆ ಹಠಯೋಗದಿಂದ ಅವನಿಗಿಂತ ಮೇಲೆ ಸಶರೀರಿಯಾಗಿ ಹೋಗಿ ಯೋಗ ಕಾಯದಿಂದ ಪ್ರೌಢದೇವರಾಯನನ್ನು ಬೆರಗುಗೊಳಿಸಿದನು."

ಚೌಪದಿಯಲ್ಲಿ ರಚಿಸಿದ 'ಅವಧೂತ ಗೀತೆ' ಎಂಬ ಕೃತಿಯಲ್ಲಿ ತನ್ನನ್ನು ಸ್ವಾನುಭವ ಸಿದ್ಧನಾದ 'ಅವಧೂತ'ನೆಂದು ಹೇಳಿಕೊಂಡಿದ್ದಾನೆ.

"ಸ್ವಾನುಭವದ್ವಯದಿಂದ ಗುರುಬಸವ
ತಾನವಧೂತನೆನಿಸಿ ಕೇಳ್ದಿರವ
ಜ್ಞಾನೋತ್ತರ ಮಾರ್ಗದ ಬಹುವಿಧವ
ಸಾನಂದದಿ ಪೇಳ್ದನು ನಿಜಮತವ ॥"[೨೪]

ಜ್ಞಾನೋತ್ತರ ಮಾರ್ಗದ ವಿಧಿವಿಧಾನಗಳನ್ನು ಅನುಭವಕ್ಕೆ ತಂದುಕೊಂಡವನೇ ಅವಧೂತನೆಂದು ಕವಿ ತೀರ್ಮಾನಿಸಿದ್ದಾನೆ. ಅವಧೂತ ಪರಂಪರೆಯೊಂದು ಈ ಕಾಲದಲ್ಲಿ ಬೆಳೆದಿದ್ದು, ಗುರುಬಸವನು ಅವಧೂತ ತತ್ವವನ್ನು ಜ್ಞಾನಮಾರ್ಗ ಮತ್ತು ಯೋಗ ಮಾರ್ಗದ ಹಿನ್ನೆಲೆಯಲ್ಲಿ ಬೋಧಿಸಿದ್ದಾನೆ. ಹೀಗಾಗಿ ವಿರಕ್ತರು ಅವಧೂತ ಪರಂಪರೆಗೆ ಸೇರಿದವರಾಗಿದ್ದಾರೆ.

ಲೌಕಿಕ ಬದುಕಿನ ಬಗೆಗೆ ಜಿಗುಪ್ಸೆ ಹೊಂದಿದ ವಿರಕ್ತರು ಅಪಾರ ಪವಾಡ ಶಕ್ತಿವುಳ್ಳವರಾಗಿದ್ದರು. ಇವರು 'ಜಗಕೆ ತಾ ಮರಳು ತನಗೆ ಜಗ ಮರಳು' ಎಂಬಂತೆ ಲೀಲಾ

ಮೂರ್ತಿಗಳಾಗಿ ಅಂದು ಹೆಚ್ಚಿನ ಪ್ರಸಿದ್ಧಿಯನ್ನು ಪಡೆದಿದ್ದರು. ಈ ವಿರಕ್ತರು ಘನಮಹಿಮಾ ಪುರುಷರು. ತಮ್ಮ ಪ್ರತಿಯೊಂದು ಲೀಲೆ ಹಾಗೂ ಪವಾಡಗಳಿಂದ ಆಸ್ಥಾನದ ರಾಜನಲ್ಲದೆ ಜನಸಾಮಾನ್ಯರನ್ನು ಸಹ ಬೆರಗುಗೊಳಿಸಿದರು. ಆಸ್ಥಾನದ ಮಂತ್ರಿಯಾಗಿದ್ದ ವೀರಣ್ಣೊಡೆಯನು ಹಂಪೆಯ ಪರಿಸರದಲ್ಲಿ ನೆಲೆನಿಂತ ಪ್ರತಿಯೊಬ್ಬ ವಿರಕ್ತನ ಬಗ್ಗೆ ಪರಿಚಯಿಸುತ್ತ, ಅವರ ಕಾರ್ಯ ವೈಖರಿಯನ್ನು ಅರಸನಿಗೆ ತೋರಿಸುವನು. ಹುಚ್ಚರಂತಿರುವ, ಅರೆಮರುಳ ಸ್ಥಿತಿಯಲ್ಲಿರುವ ಈ ವಾಮಾಚಾರಿಗಳ ದಿವ್ಯಶಕ್ತಿಯನ್ನು ಅರಸ ಮನಗಂಡು ಆಶ್ಚರ್ಯನಾಗುವನು. ಇವರ ಪ್ರತಿಯೊಂದು ಲೀಲೆಗಳ ಬಗೆಗೆ ಮೋದಿಯ ರುದ್ರನ 'ವಿರಕ್ತರ ಕಾವ್ಯ'ದಲ್ಲಿ ಪ್ರಸ್ತಾಪಿಸಲಾಗಿದೆ.

ಅಪರೂಪದ ಮಹಿಮ ಪುರುಷರಾದ ನೂರೊಂದು ವಿರಕ್ತರು ತಮ್ಮ ಪವಾಡ ಶಕ್ತಿಗಳಿಂದ ವಿಜಯನಗರಿ ಪಟ್ಟಣದಲ್ಲಿ ಮೆರೆಯುತ್ತಿದ್ದರು.

"ರಾಜ ನಿನ್ನಯ ಭಕ್ತಿಶ್ರದ್ಧೆಯ
ತೇಜದಿಂದಲಿ ನಟಿಸುತಿರ್ಪರು
ರಾಜ ಪಟ್ಟಣದಲ್ಲಿ ಮಹಿಮರು ಗುಪ್ತಬಾವದಲಿ"[39]

ಎಂಬುದಾಗಿ ವಿರಕ್ತರ ಒಂದೊಂದು ಪರಿಯನ್ನು ವೀರಣ್ಣೊಡೆಯ ಪ್ರೌಢದೇವರಾಯನಿಗೆ ತೋರಿಸುತ್ತಾ ಹಂಪೆಯ ತೀರ್ಥಕ್ಷೇತ್ರದಲ್ಲಿ ನಡೆಯುವನು. ಜನರಿಂದ ಏನನ್ನು ಬಯಸದ ಈ ವಿರಕ್ತರು ಹಂಪೆಯಂತಹ ಪವಿತ್ರ ನೆಲದಲ್ಲಿ ಸಂಚರಿಸುವ ಇವರು ಹಾಳುಬಿದ್ದ ದೇವಾಲಯ ಗುಡಿ ಗುಂಡಾರಗಳಲ್ಲಿ ವಾಸವಾಗಿದ್ದರು. ಹೀಗಾಗಿ ಕೆಲವು ವಿರಕ್ತರ ಲೀಲೆಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ. ಕರಸ್ಥಲದ ನಾಗಿದೇವನು ಹುಚ್ಚರಾಹುತನ ಮಡದಿಯೊಂದಿಗೆ ಐಕ್ಯನಾಗಿರುವಾಗ ಅದನ್ನು ಕಂಡು ಕೋಪಗೊಂಡ ಹುಚ್ಚರಾಹುತ ತನ್ನ ಕೈಯಲ್ಲಿದ್ದ ಖಡ್ಗದಿಂದ ಇರಿಯುವುದು. ಆದರೆ ನಾಗಿದೇವನ ಜೀವಕ್ಕೆ ಏನು ಅಪಾಯವಾಗಲಾರದು. ಅಲ್ಲದೆ ಆ ಖಡ್ಗದ ಬಾದೆ ನಾಗಿದೇವನಿಗೆ ತಾಗುವುದೇ ಇಲ್ಲ. ಅವನ ದೇಹದಿಂದ ರಕ್ತ ಸಹ ಹೊರಬಾರದೆ ಅಲ್ಲಿ ಯಾವುದೇ ರೀತಿಯ ಗಾಯ ಕಾಣಲಾರದಂತೆ ನಾಗಿದೇವನು ತನ್ನ ಪವಾಡದ ಲೀಲೆಯನ್ನು ತೋರಿಸುವನು.

ಮಗದೊಮ್ಮೆ ಹಲವು ವಿರಕ್ತರು ಸೇರಿ 'ಶ್ರೀಗಿರಿಗೆ' ಹೊರಟು ಮೋಹನಿ ಗಜವಿದ್ದಡೆಗೆ ಬರುವರು. ಹಗ್ಗದಿಂದ ಕಟ್ಟಿದ ಆ ಗಜವನ್ನು ನಾಗಿದೇವನು ಏರಲು ಆನೆಗೆ ಕಟ್ಟಿದ ಹಗ್ಗಗಳೆಲ್ಲವೂ ಬಂಗಾರವಾಗುವವು. ಹೀಗೆ ಕರಸ್ಥಲದ ನಾಗಿದೇವನು ಇನ್ನೂ ಹಲವಾರು ಪವಾಡಗಳನ್ನು ಮಾಡಿ ತೋರಿಸುವನು.

ಬಂಡಾರಿ ಹೊನ್ನಯ್ಯ ಎಂಬ ವಿರಕ್ತನು ಚಂದ್ರಗಾವಿಯ ಶಾಲಿನ ವಿಷಯದಲ್ಲಿ ಅದ್ಭುತ ಪವಾಡವನ್ನು ಮೆರೆದ ಪ್ರಸಂಗ ಹೀಗಿದೆ. ಇವನನ್ನು ಹೊನ್ನಶಾಂತವೆಂದು ಸಹ ಕರೆಯುವರು.

ಒಮ್ಮೆ ದೊರೆ ಪ್ರೌಢದೇವರಾಯನು ತನ್ನ ರಾಣಿಗಾಗಿ ಚಂದ್ರಗಾವಿಯ ಶಾಲು ತರಲು ಹೇಳುವನು. ಸೀರೆ ತಗೊಂಡು ದಾರಿಯಲ್ಲಿ ಬರುವಾಗ ಗುರುವೀರಣ್ಣೊಡೆಯನ ದರ್ಶನವಾಗಿ, ಗುರುವಿನ ಅಪ್ಪಣೆಯ ಮೇರೆಗೆ ಮನೆಗೆ ಹೋಗುವನು. ಆಗ ಹೊನ್ನಯ್ಯನ ಬಳಿ ಇರುವ ಸೀರೆಯನ್ನು ಕಂಡು ಗುರುವಿನ ಪತ್ನಿ ಬೇಡುತ್ತಾಳೆ. ಗುರುವಿನ ಪತ್ನಿ ಬೇರೆಯವಳಲ್ಲ ರಾಜನ ಮಗಳು ಹೀಗಾಗಿ ಚಂದ್ರಗಾವಿಯ ಶಾಲನ್ನು ಕೊಡುವನು. ಆದರೆ ಒಂದು ದಿನ ಪ್ರೌಢದೇವರಾಯನ ಅರಮನೆಗೆ ಗುರುವಿನ ಪತ್ನಿ ಅದೇ ಸೀರೆಯನ್ನಿಟ್ಟುಕೊಂಡು ಬಂದಾಗ, ಅದನ್ನು ಕಂಡ ದೊರೆ ಹೊನ್ನಯ್ಯನಿಗೆ ಕರೆಸಿ, ನಿನಗೆ ಎರಡು ಸೀರೆಯ ಲೆಕ್ಕವನ್ನಾರು ಕೊಟ್ಟಾರು ಎಂದು ಕೇಳುವನು. ಇದು ಹೊನ್ನಯ್ಯನಿಗೆ ಅಗ್ನಿಪರೀಕ್ಷೆ, ಆದರೆ ಬೊಕ್ಕಸದಲ್ಲಿ ವಿನಿಯೋಗಿಗಳು ಲೆಕ್ಕ ಸರಿ ಇದೆ ಎಂದು ಹೇಳಿದಾಗ ಎಲ್ಲರಿಗೂ ಆಶ್ಚರ್ಯ. ಹೀಗೆ ಹೊನ್ನಯ್ಯ ಗುರುಪತ್ನಿಯ ವಿಷಯದಲ್ಲಿ ಮೆರೆದ ಗುರುಭಕ್ತಿಯ ಲೀಲೆ ಪ್ರಕಟವಾಗುವ ಹೊತ್ತಿಗಾಗಲೇ ಬಯಲಾಗುತ್ತಾನೆ. ಅದೇ ರೀತಿ ಕರಸ್ಥಲದ ವೀರಣ್ಣೊಡೆಯನು 'ಪಚ್ಚೆ'ದ ಕಡಗದ ವಿಷಯದಲ್ಲಿ ನಡೆಸಿದ ಪವಾಡ ರಾಜನಿಗೆ ಆಶ್ಚರ್ಯವುಂಟಾಗುತ್ತದೆ.

ಹೀಗೆ ಎಲ್ಲ ವಿರಕ್ತರು ಒಂದೊಂದು ತಮ್ಮ ಲೀಲೆಯನ್ನು ಅರಸನಿಗೆ ತೋರಿಸಿ ಬಯಲಾಗುವರು. ಹಂಪೆಯ ಪರಿಸರದಲ್ಲಿ ಈಗಲೂ ಸಹ ಹಲವು ಅವಧೂತರ ಮಠಗಳಿವೆ. ಚಿದಾನಂದವಧೂತ, ಶಿವರಾಮವಧೂತ, ವೆಂಕಟವಧೂತರ ಚರಿತ್ರೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಈ ವಿರಕ್ತರು ಇವರ ಜಾಡಿಗೆ ಸೇರುವವರಾಗಿರುವರು.

ಒಟ್ಟಿನಲ್ಲಿ ಹಂಪೆಯ ಪವಿತ್ರ ತೀರ್ಥಕ್ಷೇತ್ರದಲ್ಲಿ ಬಾಳಿ ಬದುಕಿದ ನೂರೊಂದು ವಿರಕ್ತರ ಲಕ್ಷಣವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ವೀರಶೈವ ವಿರಕ್ತರ ಲಕ್ಷಣಕ್ಕಿಂತ ಭಿನ್ನರಾಗಿ ಕಂಡುಬರುವರು. ಮಠಮಾನ್ಯಗಳನ್ನು ಕಟ್ಟಿಕೊಂಡು ಮರೆಯುತ್ತಿರುವ ವೀರಶೈವ ವಿರಕ್ತರಿಗೂ, ಸರ್ವಸಂಗ ಪರಿತ್ಯಾಗಿಯಾಗಿ ಸಂಚರಿಸುವ ನೂರೊಂದು ವಿರಕ್ತರಿಗೂ ಎತ್ತಣಿದೆತ್ತ ಸಂಬಂಧವಾಗುವುದು

ಈ ಅಧ್ಯಯನದಲ್ಲಿ ಕಂಡುಕೊಂಡ ಪ್ರಮುಖ ಅಂಶಗಳು:

೧. 'ವಿರಕ್ತ' ಎಂದರೆ ಸರ್ವಸಂಗ ಪರಿತ್ಯಾಗಿಯಾಗಿ ಸಂಚರಿಸುವ ಸನ್ಯಾಸಿ ಜೀವಿಗಳೇ ಈ ನೂರೊಂದು ವಿರಕ್ತರು.

೨. ಕಾಡು-ಬಿಟ್ಟು ನಾಡಿನಲ್ಲಿ ಮಠಮಾನ್ಯಗಳನ್ನು ಕಟ್ಟಿಕೊಂಡು ಸುಖಕರವಾದ ರೀತಿಯಲ್ಲಿರುವ ವೀರಶೈವ ವಿರಕ್ತರಿಗಿಂತ ನೂರೊಂದು ವಿರಕ್ತರು ತುಂಬಾ ಭಿನ್ನವಾಗಿ ಕಾಣುವರು.

೩. ಅರೆಮರುಳ ಸ್ಥಿತಿಯಲ್ಲಿರುವ, ವಾಮಾಚಾರಿಗಳಾದ ಇವರ ಲಕ್ಷಣಗಳು ಅವಧೂತ ಅಥವಾ ನಾಥ, ಪಂಥಗಳಿಗೆ ತುಂಬಾ ಹತ್ತಿರವಾಗಿದೆ. ಹೀಗಾಗಿ ಇವರು ಅವಧೂತರೇ ಆಗಿರುವರು.

೪. ಅರೆಹುಚ್ಚರಂತೆ, ದಿಗಂಬರರಾಗಿ ತಿರುಗಾಡುವ ಇವರು ಶಿಷ್ಟ ಆಚಾರದ ಪರಿಶುದ್ಧ ವಿಚಾರದ ವೀರಶೈವ ವಿರಕ್ತರೆಂದು ಹೇಳಲು ಬರುವುದಿಲ್ಲ.

ಅಡಿಟಿಪ್ಪಣಿಗಳು

೧. ನಿರೂಪಾದಿ – ಅಭಿನಂದನಾ ಗ್ರಂಥ, (ಸಂ) .ಡಾ.ಬಿ.ಕೆ. ಹಿರೇಮಠ, ಪುಟ–೪೦೨.

೨. ಮಹಾಯಾತ್ರೆ – ಅಭಿನಂದನಾ ಗ್ರಂಥ, (ಸಂ) ಡಾ.ಆರ್.ಸಿ.ಹಿರೇಮಠ, ಪುಟ–೮೯

೩. ಬಳ್ಳಾರಿ ಜಿಲ್ಲೆಯ ಅವಧೂತರು – ಡಾ. ಜಿ.ಕರಿಯಪ್ಪ ಪುಟ–೨೧

೪. ಧರ್ಮ ವಿಶ್ವಕೋಶ (ಸಂ), ಡಾ.ರಹಮತ್ ತರೀಕೆರೆ ಪುಟ–೨೧.

೫. ಅದೇ, ಪುಟ–೧

೬. ಅದೇ, ಪುಟ–೨

೭. ಹ್ಯಾಂಡ್ ಬುಕ್ ಆಫ್ ವೀರಶೈವ, ಪುಟ–೯–೧೦.

೮. ನಿರೂಪಾದಿ – ಅಭಿನಂದನಾ ಗ್ರಂಥ, (ಸಂ) ಡಾ.ಬಿ.ಕೆ. ಹಿರೇಮಠ, ಪುಟ–೩೯೯

೯. ಅದೇ, ಪುಟ–೩೯೯

೧೦. ಅದೇ, ಪುಟ–೪೦೧

೧೧. ಮಾರ್ಗ ಸಂಪುಟ–೩ – ಡಾ. ಎಂ.ಎಂ.ಕಲಬುರ್ಗಿ, ಪುಟ–೨೩೦–೨೩೧.

೧೨. ಕರ್ನಾಟಕದ ನಾಥಪಂಥ – ಡಾ. ರಹಮತ್ ತರೀಕೆರೆ, ಪುಟ–೧೬೭

೧೩. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ – ಡಾ.ಶಿವಾನಂದ ವಿರಕ್ತರಮಠ, ಪುಟ–೮೮

೧೪. ನೂರೊಂದು ವಿರಕ್ತರ ಕಾವ್ಯ – (ಸಂ) ನಗುವನಹಳ್ಳಿ ಪಿ. ರತ್ನ, ಪುಟ–೫೬

೧೫. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ – ಡಾ.ಶಿವಾನಂದ ವಿರಕ್ತರಮಠ, ಪುಟ–೧೦೪–೧೦೫.

೧೬. ಬಳ್ಳಾರಿ ಜಿಲ್ಲೆಯ ಅವಧೂತರು – ಡಾ. ಜಿ.ಕರಿಯಪ್ಪ ಪುಟ–೩೧

೧೭. ನಾಥ ಸಂಪ್ರದಾಯದ ಇತಿಹಾಸ – ಅನು/ಚಂದ್ರಕಾಂತ ಮೊಕಳೆ, ಪುಟ–೨೯

೧೮. ಸೂಫಿ ಮತ್ತು ಶರಣರ ಅನುಭವ ಪಥ – ಷಣ್ಮುಕಯ್ಯ ಅಕ್ಕೂರಮಠ, ಪುಟ–೩೬.

೧೯. ನಿರೂಪಾದಿ – ಅಭಿನಂದನಾ ಗ್ರಂಥ, (ಸಂ) ಡಾ.ಬಿ.ಕೆ. ಹಿರೇಮಠ, ಪುಟ–೪೦೧.

೨೦. ವೀರಶೈವ ಪಾರಿಭಾಷಿಕ ಪದಕೋಶ – ಡಾ. ಸಂ/ಡಾ. ಎಸ್.ವಿದ್ಯಾಶಂಕರ್, ಪುಟ–೪೮೯.

೨೧. ಮಾರ್ಗ ಸಂಪುಟ - ಡಾ. ಎಂ.ಎಂ.ಕಲಬುರ್ಗಿ, ಪುಟ-೨೩೦

೨೨. ಅದೇ, ಪುಟ-೨೩೧.

೨೩. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ - ಡಾ.ಶಿವಾನಂದ ವಿರಕ್ತರಮಠ, ಪುಟ-೧೫.

೨೪. ಗುರುಬಸವನ ಅವಧೂತಗೀತೆ - ಸಂ/ನಾಗಭೂಷಣ ಶಾಸ್ತ್ರಿಗಳು, ಪುಟ-೨೧

೨೫. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ - ಡಾ.ಶಿವಾನಂದ ವಿರಕ್ತರಮಠ, ಪುಟ-೧೩೧.

ಅಧ್ಯಾಯ – ಎಂಟು

ನೂರೊಂದು ವಿರಕ್ತರು : ಇತರ ಸಂತ ಸಂಪ್ರದಾಯಗಳು

ಅಧ್ಯಾಯ – ಎಂಟು

ನೂರೊಂದು ವಿರಕ್ತರು : ಇತರ ಸಂತ ಸಂಪ್ರದಾಯಗಳು

ಭಾರತದಲ್ಲಿ ಶಿವನ ಆರಾಧನೆಯು ವೇದಕಾಲದಿಂದಲೂ ಪ್ರಚಲಿತವಾಗಿತ್ತೆಂಬುದಕ್ಕೆ ಹಲವು ಕುರುಹುಗಳು ದೊರೆಯುತ್ತವೆ. ವೇದಗಳಲ್ಲಿ, ಶಾಸನಗಳಲ್ಲಿ ಅಲ್ಲದೆ ಕೆಲವೊಂದು ಅವಶೇಷಗಳ ಮೂಲಕ ನಮ್ಮ ಪ್ರಾಚೀನ ಸಂಶೋಧಕರು ಸಾಭೀತು ಪಡಿಸಿದ್ದಾರೆ. ಈ ಶಿವೋಪಾಸಕ ಪಂಥಗಳು ಅಂದು ಭಾರತ ಹಾಗೂ ಭಾರತದಾಚೆಗೂ ಹೆಚ್ಚು ಪ್ರಸಿದ್ಧಿ ಪಡೆದಿತ್ತು. "ಸರ್. ಜಾನ್ ಮಾರ್ಷಲ್‌ರವರು (Mohenjodaro and the Inuds Civilization, I,PP. 52-4) ಎಂಬ ಕೃತಿಯ ಮುನ್ನುಡಿಯಲ್ಲಿ ಮೆಹೆಂಜೋದಾರೋ ಮತ್ತು ಹರಪ್ಪಗಳ ಅವಶೇಷಗಳಿಂದ ಶೈವ ಧರ್ಮವು ಪ್ರಪಂಚದಲ್ಲಿಯೇ ಅತ್ಯಂತ ಪ್ರಾಚೀನವಾದ ಜೀವಂತ ಧರ್ಮವೆಂದು ಭಾವಿಸಬೇಕಾಗುತ್ತದೆಯೆಂದು ಅವರು ತಮ್ಮ ಗ್ರಂಥದ ಮುನ್ನಡಿಯಲ್ಲಿ ಹೇಳಿಕೊಂಡಿದ್ದಾರೆ."[1] ರಾಮಾಯಣ, ಮಹಾಭಾರತದಲ್ಲಿ ಈ ಶೈವ ಧರ್ಮದ ಉಲ್ಲೇಖ ನೋಡಿದರೆ ಸರ್. ಜಾನ್ ಮಾರ್ಷಲ್‌ರವರ ಈ ಮೇಲಿನ ಹೇಳಿಕೆಗೆ ಯಾವುದೇ ಹುರುಳಿಲ್ಲವೆಂದಿನಿಸುತ್ತದೆ. ಹೀಗಾಗಿ ಅಂದು ಧಾರ್ಮಿಕವಾಗಿ ತುಂಬ ಪ್ರಸಿದ್ಧತೆಯನ್ನು ಪಡೆದ ಕೆಲವೊಂದು ಪ್ರದೇಶಗಳಲ್ಲಿ ಈ ಶೈವ ಶಾಖೆಗಳಂತಹ ಆಧ್ಯಾತ್ಮಿಕ ಪಂಥಗಳು ನೆಲವೂರಿದವು. ಅದರಲ್ಲಿ ಕರ್ನಾಟಕದ ಹಂಪೆ, ದ್ವಾರಸಮುದ್ರ, ಗುಬ್ಬಿ, ಗುಮ್ಮಳಾಪುರ, ಶಿವಗಂಗೆ ಮುಂತಾದ ಕಡೆಗಳಲ್ಲಿ ತಮ್ಮ ಸ್ಥಿರವಾದ ನೆಲೆಗಳನ್ನು ಈ ಧರ್ಮಗಳು ಕಂಡುಕೊಂಡಿದ್ದವು.

ವಿಶ್ವ ಪ್ರಸಿದ್ಧತೆಯನ್ನು ಪಡೆದುಕೊಂಡ 'ಹಂಪೆ' ಇಂದು ಕೆಲವು ಸಂಗತಿಗಳಿಂದ ಮತ್ತಷ್ಟು ಸುದ್ಧಿಯಲ್ಲಿದೆ. ಹೀಗಾಗಿ ಈ ಹಿಂದೆ ರಾಜಕೀಯವಾಗಿ, ಧಾರ್ಮಿಕವಾಗಿ, ಸಾಹಿತ್ಯಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಉನ್ನತ ಸ್ಥಾನಮಾನಗಳಿಸಿದ ಹಂಪೆ ಹಲವು ಧರ್ಮಗಳ ಸಂಗಮವಾಗಿತ್ತು. ಅಲ್ಲದೆ ಹಲವು ತೀರ್ಥಗಳ ಸಂಕುಳವಾಗಿ ಪ್ರಸಿದ್ಧತೆಯನ್ನು ಗಳಿಸಿತ್ತು. ಅದೇ ರೀತಿ ಇಂದು ಸಹ ಈ ಮಾತಿಗೆ ಹೊರತಾಗಿಲ್ಲ. ಈಗಲೂ ಹಂಪೆ ಹಲವು ಜನಾಂಗಗಳ, ಒಂದು ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿ ಮಾರ್ಪಟ್ಟಿದೆ. 'ದಕ್ಷಿಣದ ಕಾಶಿ' ಎಂದೇ ಖ್ಯಾತಿಗಳಿಸಿದ ಹಂಪೆಗೆ ಅಂದು ಹಲವು ಕಡೆಯಿಂದ ಸಾಧು, ಸಂತರು, ಸನ್ಯಾಸಿಗಳು ಹಾಗೂ ಆಧ್ಯಾತ್ಮಿಕ ಪುರುಷರು ಬಂದು ನೆಲೆವೂರಿ ತಮ್ಮ ಸಿದ್ಧಿ ಸಾಧನೆಗಳಂತಹ ಕಾರ್ಯಚಟುವಟಿಕೆಗಳನ್ನು ನಡೆಸಿದರು. ಅವಧೂತರು, ನಾಥರು, ಆರೂಢರು, ಕಾಪಾಲಿಕರು, ಸೂಫಿಗಳು ಹಾಗೂ "ಶೈವ ಶಾಖೆಗಳಾದ ಲಾಕುಳ (ನಕುಲ, ಕಾಳಾಮುಖ), ಮಹಾವ್ರತಿ (ಸೋಮ, ಕಾಪಾಲಿಕ, ಕಾಪಾಳಿ), ಪಾಶುಪತ, ಶೈವ (ಶೋತ್ರಿ, ಸಿದ್ಧಾಂತ, ಮಾಹೇಶ್ವರ) ಎಂಬ ನಾಲ್ಕು ಶೈವಗಳು ಪ್ರಚಲಿತವಿದ್ದವೆಂಬುದಕ್ಕೆ ಕ್ರಿ.ಶ. ೧೦೭೧ರ ಸಗರದ ಶಾಸನ ಕ್ರಿ.ಶ. ೧೧೪೮ರ ಶಿರಸಂಗಿ ಶಾಸನಗಳಲ್ಲಿದೆ. ಪಾರಮೇಶ್ವರಾಗಮವು (ಷಟಲ ೧-೨೪), ಸಿದ್ಧಾಂತ ಶಿಖಾಮಣಿ (೫-೯), ಶಾಂಕರಭಾಷ್ಯ, ಬ್ರಹ್ಮಶಿವನ ಸಮಯ ಪರೀಕ್ಷೆ (೧೪-೫೦) ಗುಣರತ್ನ ಸೂರಿಯ ಷಡ್ದರ್ಶನ ಸಮುಚ್ಚಯ (ಕ್ರಿ.ಶ. ೧೩೭೯) ಮುಂತಾದವುಗಳಲ್ಲಿ ಉಲ್ಲೇಖಗಳಿವೆ."[೨]

ಕರ್ನಾಟಕ ಆಂಧ್ರಗಳಲ್ಲಿ ಈ ಮೇಲಿನ ಶಾಖೆಗಳಿದ್ದವೆಂದ ಮೇಲೆ ಹಂಪೆಯಂತಹ ಪವಿತ್ರ ಸ್ಥಳದಲ್ಲಿ ತಮ್ಮ ಕಾರ್ಯ ಚಟುವಟಿಕೆಯನ್ನು ನಡೆಸಿರಬೇಕು. ಹೀಗಾಗಿ ಈ ಅಧ್ಯಾಯದಲ್ಲಿ ನೂರೊಂದು ವಿರಕ್ತರಿಗೂ ಹಾಗೂ ಈ ಮೇಲೆ ಪ್ರಸ್ತಾಪಿಸಿದ ಸಂತ ಪರಂಪರೆಯನ್ನು ಮುಖಾಮುಖಿ ಮಾಡಿ, ತೌಲನಿಕವಾಗಿ ನೋಡಲಾಗಿದೆ.

ಕರ್ನಾಟಕದ ಒಂದು ಆಧ್ಯಾತ್ಮಿಕ ಪರಂಪರೆಯಾದ ನೂರೊಂದು ವಿರಕ್ತರನ್ನು ಆರೂಢರು, ಅವಧೂತರು, ಶಾಕ್ತರು, ಲಾಕುಳ, ಮಹಾವ್ರತಿ, ನಾಥ, ಸೂಫಿಗಳ ಆಸರೆಯಿಲ್ಲದೆ ಅರ್ಥ ಮಾಡಿಕೊಳ್ಳುವುದು ಕಷ್ಟಸಾಧ್ಯ. ಇವುಗಳ ಒಳಗೆ ಅಂತರ್ ಸಂಬಂಧದಂತಹ ನಂಟಸ್ತಿಕೆ ಕಂಡುಬರುವುದು. ಹಾಗಾಗಿ ಶಿಷ್ಟ ಮತ್ತು ಪರಿಶಿಷ್ಟ ನೆಲೆಯ ಸಂತರೊಂದಿಗೆ ನೂರೊಂದು ವಿರಕ್ತರ ಗುಣಸ್ವಭಾವವನ್ನು ಸಂಕ್ಷಿಪ್ತವಾಗಿ ನೋಡಲು ಪ್ರಯತ್ನಿಸಿದ್ದೇನೆ.

೧. ಲಾಕುಳ: (ನಕುಲ, ಕಾಳಾಮುಖ)

ಶಿವೋಪಾಸಕ ಪಂಥಗಳಲ್ಲಿ ಒಂದಾದ ಲಾಕುಳ ಶೈವದ ಇತಿಹಾಸ ಅತ್ಯಂತ ಪ್ರಾಚೀನ ಕಾಲಕ್ಕೆ ಕೊಂಡೊಯ್ಯುತ್ತದೆ. ಅದು ಹರಪ್ಪ ಮೆಹೆಂಜೋದಾರೋದಿಂದಲೇ ಈ ಪಾಶುಪತ

ಲಾಕುಳ ಶೈವರ ಸಂಗತಿಗಳು ಕಂಡುಬರುತ್ತದೆ. "ಲಾಕುಳಾಗಮವು ಉಪಲಬ್ಧವಿಲ್ಲ. ಯಾವುದೋ ವಾಮಾಚರಕ್ಕೆ ಸಂಬಂಧಿಸಿದ ಶಾಕ್ತ ದೀಕ್ಷೆಯಾಗಿದ್ದಿರಬೇಕೆಂದು ನಾಗರ್ಜುನನ ಕಕ್ಷಪುಟಿಯಲ್ಲಿಯ ವಿಷಯಗಳಿಂದ ಊಹಿಸಬಹುದಷ್ಟೆ. ಕರ್ನಾಟಕದಲ್ಲಿ ಈ ಮತವು ಕ್ರಿ.ಶ. ಏಳನೆಯ ಶತಮಾನದಿಂದ ಕಾಣಿಸಿಕೊಳ್ಳುತ್ತ ಕ್ರಿ.ಶ. ಹತ್ತನೆಯ ಶತಮಾನದಲ್ಲಿ ತಲೆಯೆತ್ತಿ ಕ್ರಿ.ಶ. ೧೧, ೧೨, ೧೩ನೇ ಶತಕಗಳಲ್ಲಿ ಉತ್ಕರ್ಷ ಸ್ಥಿತಿಯಲ್ಲಿದ್ದು, ಕ್ರಿ.ಶ. ೧೪ನೆಯ ಶತಮಾನದಲ್ಲಿ ತುರುಕರ ದಾಳಿಯ ಅಶಾಂತತೆಯ ಕಾಲದಲ್ಲಿ ಅಳಿದುಳಿದು, ವಿಜಯನಗರದ ಅರಸರ ಕಾಲದಲ್ಲಿ ಕ್ರಿ.ಶ. ೧೫ ಮತ್ತು ೧೬ನೇ ಶತಮಾನಗಳಲ್ಲಿ ಜೀವವಿಡಿದುಕೊಂಡು, ಕ್ರಿ.ಶ. ೧೭ನೆಯ ಶತಮಾನದಲ್ಲಿ ಸಂಪೂರ್ಣವಾಗಿ ನಾಮಶೇಷವಾಗಿದೆ."[೩]

ಲಕುಲೀಶನು ಒಬ್ಬ ದೈವಿ ಪುರುಷ. ಶಿವನ ರೂಪದಲ್ಲಿ ಧರೆಗಿಳಿದ ಅವತಾರಿ. ಈತನ ಮೂರ್ತಿಯು ನಗ್ನವಾಗಿದೆ. ಪಟ್ಟದ ಕಲ್ಲಿನ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ಗುಡಿಗಳಲ್ಲಿಯೂ ಲಕುಲೀಶನ ನಿಂತ ಮೂರ್ತಿಗಳು ಗೋಡೆಗಳಲ್ಲಿವೆ. ಕ್ರಿ.ಶ. ೬ ಅಥವಾ ೭ನೆಯ ಶತಮಾನದಿಂದ ಕ್ರಿ.ಶ. ೧೦ನೆಯ ಶತಮಾನದವರೆಗೆ ಲಕುಲೀಶನ ಮೂರ್ತಿಗಳ ಪರಂಪರೆಯು ಕನ್ನಡ ನಾಡಿನಲ್ಲಿ ಇದ್ದದ್ದು ಕಂಡುಬರುತ್ತದೆ. ಹೀಗಾಗಿ ಡಾ. ಕಪಟರಾಳರವರು ಈ ಲಕುಲೀಶನ ಕಾಲವು ಕ್ರಿ.ಶ. ೧೩೦ ಎಂದು ಹೇಳುವರು.

ಶುದ್ಧ ತಾಂತ್ರಿಕಮತವಾದ ಈ ಲಾಕುಲೀಶವನ್ನು ಶಾಸನಗಳಲ್ಲಿ ಲಾಕುಳಶಾಸ್ತ್ರ, ಲಾಕುಳಾಗಮ, ಲಾಕುಳ ಸಿದ್ಧಾಂತ, ಲಾಕುಳ ಸಮಯ, ಎಕ್ಕೋಟಿ ಸಮಯಗಳೆಂದು ಉಲ್ಲೇಖವಾಗಿವೆ. ಇವುಗಳೆಲ್ಲವು ಒಂದೇ ಸಂಪ್ರದಾಯದ ಪರ್ಯಾಯನಾಮಗಳೆಂದು ತಿಳಿದುಬರುವುದು.

'ಲಾಕುಳ' ಅಥವಾ 'ಲಕುಲೀಶ' ಎಂಬುದು ಒಬ್ಬ ವ್ಯಕ್ತಿಯ ಹೆಸರು. ಅಲ್ಲದೆ ಅದು ಶಿವನ ಮತ್ತೊಂದು ಹೆಸರಾಗಿತ್ತು. ಹೀಗಾಗಿ ಈ ಲಕುಳೀಶನ ಆರಾಧಿಸುವರೆಲ್ಲಾರು ಲಾಕುಳ ಶೈವರೆಂದು ಪ್ರತೀತಿ ಇದೆ. "ಶಿವನು ಮನುಷ್ಯನ ರೂಪದಲ್ಲಿ ಧರೆಗಿಳಿದು ಲೌಕಿಕ ಹಾಗೂ ಸಂಸಾರಿಕ ಜಂಜಾಟದಿಂದ ದೂರವಾಗಿ ಪ್ರೇತ ಒಂದರ ದೇಹದಲ್ಲಿ ಹೊಕ್ಕು ಅದರ ಮುಖಾಂತರ ತನ್ನ ತತ್ವಗಳನ್ನು ಸಾದರ ಪಡಿಸಿದನೆಂಬ ಅಂಶಗಳು ಹಲವು ಕಾವ್ಯ ಗ್ರಂಥಗಳಲ್ಲಿ ಉಲ್ಲೇಖವಾಗಿದೆ."[೪] ಉದಾ: ಸಮಯ ಪರೀಕ್ಷೆ, ಕರ್ನಾಟಕದ ಕಲೆ ಹಾಗೂ ಸಂಸ್ಕೃತಿಗೆ ಲಾಕುಳ ಶೈವರ ಕೊಡುಗೆ ಅಪಾರ. ಇದರಿಂದಾಗಿ ಈ ಪಂಥ ನಮ್ಮ ಕಣ್ಣಿಗೆ ಗೋಚರಿಸುವುದು ಬಾದಾಮಿ ಚಾಲುಕ್ಯರ ಕಾಲದಲ್ಲಿ. ಅಂದು ಹೆಚ್ಚು ಪ್ರಸಿದ್ಧಿಯನ್ನು ಹೊಂದಿ ನಾಡಿದ್ಯಂತ ತುಂಬ ವಿಸ್ತಾರವಾಗಿ ಹರಿಡಿತ್ತು. ಬಾದಾಮಿ ಚಾಲುಕ್ಯರ (ಕ್ರಿ.ಶ. ೫೩೫–೭೫೭) ಕಾಲದ ಮಹಾಕೂಟೇಶ್ವರ ದೇವಾಲಯದ ಹೊರಭಾಗದಲ್ಲಿರುವ ಲಕುಲೀಶನ ಚಿತ್ರ, ಲಕುಲೀಶನಿಗಾಗಿ ಬದಾಮಿಯಲ್ಲಿ ಸ್ವತಂತ್ರವಾಗಿ

ಕಟ್ಟಿಸಲಾದ ಗುಡಿಯ ಗರ್ಭಭಾಗದಲ್ಲಿರುವ ಲಕುಲೀಶನ ಜೀರ್ಣ ವಿಗ್ರಹಗಳು ಕರ್ನಾಟಕದಲ್ಲಿ ಲಕುಲೀಶ ಪಾಶುಪತದ ಪ್ರಾಚೀನತೆಯನ್ನು ಆರನೆಯ ಶತಮಾನದಷ್ಟು ಹಿಂದಕ್ಕೆ ಕೊಂಡೊಯ್ಯುತ್ತವೆ. ಹೀಗೆ ಬದುಕಿ ಬಾಳಿದ ಈ ಶೈವ ಶಾಖೆಗಳು ವಿಜಯನಗರ ಸಾಮ್ರಾಜ್ಯದಲ್ಲಿ ಸಹ ನೆಲೆವೂರಿದವು. ಅಲ್ಲಿ ಹಲವು ಬಗೆಯ ತಮ್ಮ ಚಟುವಟಿಕೆಗಳನ್ನು ನಡೆಸಿದರೆಂಬುದಕ್ಕೆ ಅನೇಕ ಆಧಾರಗಳು ದೊರೆಯುವುದು. ಹಂಪೆಯ ಪರಿಸರದಲ್ಲಿ ಬಾಳಿದ ನೂರೊಂದು ವಿರಕ್ತರಿಗೂ ಈ ಲಾಕುಳೀಶರಿಗೂ ಕೆಲವೊಂದು ಅಂಶಗಳಲ್ಲಿ ಸಾಮ್ಯತೆ ಕಂಡುಬಂದರೆ ಮತ್ತೆ ಕೆಲವೊಂದು ಅಂಶಗಳಲ್ಲಿ ವಿರೋಧಬಾಸ ಕಂಡುಬರುವುದು. ನೂರೊಂದು ವಿರಕ್ತರು ಮದುವೆ ಆಗಿ ಸಂಸಾರಿಕ ಜೀವನ ನಡೆಸಿ ಮಕ್ಕಳನ್ನು ಪಡೆದಿದ್ದರು. ಕೊನೆಗೆ ಸಂಸಾರದಲ್ಲಿ ವಿರಕ್ತಿ ಹೊಂದಿ ಲೌಕಿಕ ವ್ಯವಹಾರದಿಂದ ದೂರನೇ ಉಳಿಯಲು ಪ್ರಯತ್ನಿಸಿದರು. ಸನ್ಯಾಸಿಗಳಾಗಿ ಮೆರೆದ ಇವರು ಕೆಲವೊಮ್ಮೆ ಅನ್ಯ ಸ್ತ್ರೀಯರ ಸಹವಾಸ ಮಾಡಿದವರಾಗಿರುವರು. ಆದರೆ ಲಾಕುಳ ಶೈವ ಯತಿಗಳು ಸಹ ಮದುವೆ ಆಗಿ ಸಂಸಾರಿಕ ಜೀವನ ನಡೆಸಿ ಮಕ್ಕಳನ್ನು ಸಹ ಪಡೆದಿದ್ದರು. ಕೆಲವೊಬ್ಬರು ಬ್ರಹ್ಮಚಾರಿಗಳಾದ ಇವರು ತಪೋಧನಿಗಳಾಗಿದ್ದರು. "ಲಾಕುಳ ಶೈವ ಗುರುಗಳು, ಯತಿಗಳು, ಸ್ಥಾನಿಕರು, ತಪೋಧನರು, ಮಂಡಳಾಚಾರ್ಯರು ಆಗಿದ್ದರೆಂಬುದರಲ್ಲಿ ಸಂಶಯವಿಲ್ಲ."[೫] ನೂರೊಂದು ವಿರಕ್ತರು ಸಹ ತಪೋಧನರಾಗಿದ್ದರು. ಅರೆಮರುಳನಂತಿರುವ ಇವರು ಲಾಕುಳ ಶೈವರ ಕೆಲವೊಂದು ಅಂಶಗಳಿಗೆ ಹತ್ತಿರದವರಾಗಿ ಕಂಡುಬರುತ್ತಾರೆ.

ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಉನ್ನತ ಸ್ಥಾನಮಾನಗಳನ್ನು ಹೊಂದಿದ "ಲಾಕುಳ ಗುರುಗಳಲ್ಲಿ ಅನ್ಯ ಜಾತಿಯವರು, ಕ್ವಚಿತ್ತಾಗಿ, ಅಪರೂಪವಾಗಿ ವಿರಕ್ತರಾಗಿರುತ್ತಿದ್ದರು."[೬] ಅವರು ಸ್ಥಾವರ ಲಿಂಗವನ್ನು ಸ್ಥಾಪಿಸಿ ದೇವಾಲಯಗಳನ್ನು ಕಟ್ಟಿಕೊಂಡು ಅಲ್ಲಿಯೇ ಇರುತ್ತಿದ್ದರು. ನೂರೊಂದು ವಿರಕ್ತರಂತೆ ಇವರು ಸಹ ಜಡೆ, ಗಡ್ಡ, ಭಸ್ಮಧಾರಿಗಳಾಗಿದ್ದರು. "ಧವಳತನು, ಕೆಂಜಡೆ, ಸುಳಿಪಲ್ಲು, ವರಮುದ್ರೆ, ಲಾಕುಳ ಸಲ್ಲಕ್ಷಣವೊಗೆದನೆಂದು ಮರುಗವೆಳೆಯ ಮುನಿಪ"[೭] ಎಂದಿರುವುದು ಇವರ ಸಾಹಿತ್ಯ ಕ್ಷೇತ್ರವನ್ನು ಸೂಕ್ಷ್ಮವಾಗಿ ಗಮನಿಸಿದಾಗ "ನಕುಲೀಶರು ಸಾಹಿತ್ಯ ಕ್ಷೇತ್ರಕ್ಕೆ ಯಾವುದೇ ರೀತಿಯ ಕೊಡುಗೆಯನ್ನು ನೀಡದೆ ಶೂನ್ಯ ಸ್ಥಿತಿಯಲ್ಲಿರುವರು ಎಂಬ ವಾದವಿದೆ. "ಆದರೆ ಬಸವ ಪೂರ್ವದ ವಚನಕಾರರೆಂದು ಬಿಂಬಿತರಾಗಿರುವ ದೇವರ ದಾಸಿಮಯ್ಯ, ಕೊಂಡಗುಳಿ ಕೇಶಿರಾಜ, ಇವರೆಲ್ಲಾರು ನಕುಲೀಶ ಪಂಥಕ್ಕೆ ಸೇರಿದವರಾಗಿರುವರು ಎಂಬುದಕ್ಕೆ ಹಲವು ಕೃತಿಗಳಲ್ಲಿ ಉಲ್ಲೇಖಿತವಾಗಿದ್ದಾರೆ. ಇದೆಲ್ಲವನ್ನು ಗಮನಿಸಿದರೆ ನಕುಲೀಶ ಪಾಶುಪತರಾದ ಇವರೇ ಮೊದಲಾದವರು ವಚನ ಸಾಹಿತ್ಯದ ಆದ್ಯ ಪ್ರವರ್ತಕರೆಂದು ವಿಧಿತವಾಗುತ್ತದೆ. ಮುಂದೆ ೧೨ನೆಯ ಶತಮಾನದಲ್ಲಿ ಈ ನಕುಲೀಶ ಪಾಶುಪತರು ಬಸವಾದಿ ಶರಣರೂ ಜೊತೆ ಜೊತೆಯಾಗಿ ಈ ಸಾಹಿತ್ಯ ರೂಪವನ್ನು ಬೆಳೆಸಿದರೆಂದು ತಿಳಿದುಬರುವುದು"[೮]

ಇವರಂತೆ ನೂರೊಂದು ವಿರಕ್ತರ ಆದಿಯಲ್ಲಿ ಬರುವ ಕರಸ್ಥಲದ ನಾಗಿದೇವ, ವೀರಣ್ಣೊಡೆಯ ಸಪ್ತ ಕಾವ್ಯದ ಗುರುಬಸವ, ಬತ್ತಲೇಶರಂತಹವರು ಕೆಲವು ಅನುಭಾವದ ಹಾಡುಗಳನ್ನು ಹಾಗೂ ಲಘುಕೃತಿಗಳನ್ನು ರಚಿಸಿರುವರು.

ಕರ್ನಾಟಕದಲ್ಲಿ ನೆಲವೂರಿದ ಈ ಲಕುಲೀಶ ಪಾಶುಪತದಲ್ಲಿ ಶಕ್ತಿಪರ್ಷೆ ಮತ್ತು ಸಿಂಹಪರ್ಷೆಗಳೆಂಬ ಎರಡು ಮಹತ್ವದ ಪ್ರಭೇದಗಳು ಕಾಣಿಸಿಕೊಂಡುದರ ಬಗೆಗೆ ಹಲವು ಶಾಸನಗಳು ಉಲ್ಲೇಖಿಸುತ್ತವೆ. ಅಲ್ಲದೆ ಮುಂದೆ ಈ ಲಕುಲೀಶ ಪಂಥವು ಬೆಳೆದಂತೆಲ್ಲ ಹಲವು ಶಾಖೋಪ ಶಾಖೆಗಳಾಗಿ ಬೆಳೆಯಲಾರಂಭಿಸಿದವು. "ಕರ್ನಾಟಕದಲ್ಲಿ ಸಿಂಹಪರ್ಷಿಯ ಪ್ರಾಚೀನತೆಯನ್ನು ತಿಳಿಸುವ ಮೋರಿಗೇರಿ ಶಾಸನದ ಕಾಲ ಕ್ರಿ.ಶ. ೧೦೪೫. ಈ ಸಿಂಹ ಪರ್ಶೆಯಲ್ಲಿ 'ಏಳಮೇಲ' ಸಿಂಹಪರ್ಷೆ ಬಹಳ ಪ್ರಸಿದ್ಧವಾದುದು. ವಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಆಲಮೇಲ ಗ್ರಾಮವೇ ಈ 'ಏಳಮೇಲ'. ಕರ್ನಾಟಕದ ಸಿಂಹ ಪರ್ಶೆಯ ಅಭಿನವ ಶಾಖೆಯೊಂದು ಇದೇ ಗ್ರಾಮದಲ್ಲಿ ಉದಯಗೊಂಡು ಏಳಮೇಲ 'ಸಿಂಹಪರ್ಷೆ' ಎಂಬ ಅಭಿದಾನವನ್ನು ಹೊಂದಿ ನಾಡಿನ ತುಂಬ ಪ್ರಸಾರಗೊಂಡು ಪ್ರಖ್ಯಾತಿಯನ್ನು ಪಡೆಯಿತು. ಈ 'ಏಳಮೇಲ' ಸಿಂಹ ಪರ್ಶೆಯ ಮೂಲಪುರುಷ ಮಲೆಯಾಳ ಪಂಡಿತ."[೯] "ಈ ಮಲೆಯಾಳ ಪಂಡಿತನ ಊರು ಸುರಪುರ ತಾಲ್ಲೂಕಿನ ಮುದನೂರು. ಬಸವಣ್ಣನವರ ಹಿರಿಯ ಸಮಕಾಲಿನನಾದ ಜೇಡರ ದಾಸಿಮಯ್ಯನ ಕಾರ್ಯಕ್ಷೇತ್ರವು ಇದೇ ಮುದನೂರು. ಈತನ ಆರಾಧ್ಯ(ಅಂಕಿತ) ದೈವ ರಾಮನಾಥನೂ ಈ ಮುದನೂರ ರಾಮೇಶ್ವರನೇ ಆಗಿದ್ದಾನೆ. ಹೀಗೆ ಜೇಡರ ದಾಸಿಮಯ್ಯನ ಪೂರ್ವದಲ್ಲಿ ಮೂದನೂರು ಗ್ರಾಮ ಲಕುಲೀಶ ಪಾಶುಪತದ ಏಳಮೇಲ ಸಿಂಹಪರ್ಷೆಯ ಕೇಂದ್ರಸ್ಥಳವಾಗಿತ್ತು."[೧೦]

ಹೀಗಾಗಿ ಈ ಬಸವ ಪೂರ್ವದ ವಚನಕಾರರು ಲಕುಲೀಶ ಪಾಶುಪತರಾಗಿದ್ದರೆಂಬುದಕ್ಕೆ ಹಲವು ಗ್ರಂಥಗಳಿಂದ ಆಧಾರಗಳು ದೊರೆಯುತ್ತದೆ. "ಲಿಂಗಾಯತನಾಗುವ ಪೂರ್ವದಲ್ಲಿ ಸಿದ್ಧರಾಮನೂ ಬಹುಶಃ ನಕುಲೀಶ ಪಾಶಪತನಾಗಿದ್ದ. ಆ ಅವಧಿಯಲ್ಲಿಯೇ ಅವನು ಕೆಲವು ವಚನಗಳನ್ನು ಬರೆದಿರುವ ಸಾಧ್ಯತೆಯಿದೆ. ಅವನ ಬಹುಮುಖ ವಚನಗಳು ಜೇಡರ ದಾಸಿಮಯ್ಯನ ವಚನಗಳಂತೆ ಪದ್ಯಗಂಧಿಯಾಗಿರುವುದನ್ನು ನೋಡಿದರೆ ಇದು ನಕುಲೀಶ ಪಾಶುಪತದ 'ವಚನ ಶಿಲ್ಪ' ವೆಂದೂ ಮುಂದೆ ಇದು ಬಸವಯುಗದಲ್ಲಿ ಗದ್ಯಗಂಧಿಗೆ ತಿರುಗಿತೆಂದು ಹೇಳಬಹುದು."[೧೧]

"ವಚನರೂಪ ಕನ್ನಡಕ್ಕೆ ನಕುಲೀಶ ಪಾಶುಪತದ ಕೊಡುಗೆಯಾಗಿದ್ದು, ಅದು ಬಸವ ಪೂರ್ವದಲ್ಲಿ ಹುಟ್ಟಿ, ನಕುಲೀಶ ಪಾಶುಪತವು ಲಿಂಗಾಯತ ಧರ್ಮವಾಗಿ ಬೆಳೆದಂತೆ ತಾನೂ ಅವರ ಮತ್ತು ಇವರ ಕೈಯಲ್ಲಿ ಹುಟ್ಟುತ್ತ ಬೆಳೆಯುತ್ತ ನಡೆಯಿತೆಂದು ತಿಳಿದುಬರುತ್ತದೆ. ಮುಂದೆ

ನಕುಲೀಶ ಪಾಶುಪತವು ಲಿಂಗಾಯತವಾಗುತ್ತ ಹೋದಂತೆ ಸಮಗ್ರ ವಚನಗಳ ಸೃಷ್ಟಿ ಮತ್ತು ಸಂಪತ್ತು ಲಿಂಗಾಯುತ ಹೆಸರಿನಲ್ಲಿಯೇ ಪ್ರಚಾರ ಪಡೆಯಿತು."[೧೨] ಹೀಗೆ ಶಿವೋಪಾಸಕರಾಗಿದ್ದ ಲಾಕುಳೀಶರು ವಚನಕಾರರಂತೆ ಹಲವು ಜಾತಿ, ಪಂಗಡಗಳಿಂದ ಕೂಡಿದ್ದರಾಗಿದ್ದರು. ಆದರೆ ಇವರಲ್ಲಿ ವಿರಕ್ತರು ಕಡಿಮೆ ಪ್ರಮಾಣದಲ್ಲಿ ಕಂಡುಬರುವರು. ಹಾಗೆ ನೂರೊಂದು ವಿರಕ್ತರಲ್ಲೂ ಸಹ ಹಲವು ಜಾತಿ ಪಂಗಡದಿಂದ ಬಂದವರಾಗಿದ್ದರು. ಆದರೆ ಕೆಲವೊಂದು ಆಚಾರದಲ್ಲಿ ಲಾಕುಳರಿಂದ ಭಿನ್ನರಾಗಿ ಕಂಡುಬರುವರು.

ಒಟ್ಟಾರೆಯಾಗಿ ಈ ಎರಡು ಸಂಪ್ರದಾಯವನ್ನು ಸೂಕ್ಷ್ಮವಾಗಿ ಗಮನಿಸಿ ತೌಲನಿಕವಾಗಿ ಅಧ್ಯಯನ ಮಾಡಿದಾಗ ಲಾಕುಳ ಶೈವರು ಶಿಷ್ಟ ಆಚಾರದ ಪರಿಶುದ್ಧ ವಿಚಾರದವರಾಗಿರುವರು. ಆರಂಭದ ವಚನ ಸಾಹಿತ್ಯಕ್ಕೆ ಭದ್ರ ಬುನಾದಿ ಹಾಕಿದ ಲಕುಲೀಶರು ಶುದ್ಧ ತಾಂತ್ರಿಕ ಮತದವರಾಗಿರುವರು.

೨. ಕಾಪಾಲಿಕ

ಚಾರಿತ್ರಿಕವಾಗಿ ಹೆಚ್ಚು ಪ್ರಸಿದ್ಧಿಯನ್ನು ಪಡೆದ ಶೈವಶಾಖೆಗಳಲ್ಲಿ ಒಂದಾದ ಕಾಪಾಲಿಕ ಪಂಥವು ನಾಥಪಂಥಕ್ಕಿಂತ ಪ್ರಾಚೀನ ಇತಿಹಾಸವನ್ನು ಹೊಂದಿದೆ. "ಹೀಗಾಗಿ ನಾಥರ ಬಗ್ಗೆ ಸಿಗುವ ಮೊದಲ ಕನ್ನಡ ಸಾಹಿತ್ಯಿಕ ದಾಖಲೆ ಎಂದರೆ ೧೨ನೆಯ ಶತಮಾನದ ವಚನಗಳು. ಆದರೆ ಕಾಪಾಲಿಕರ ಮೊದಲ ದಾಖಲೆ ೫ನೆಯ ಶತಮಾನದಷ್ಟು ಹಿಂದೆ ಹೋಗುತ್ತದೆ."[೧೩] ಅತ್ಯಂತ ಕಠಿಣವಾದ ವ್ರತಗಳನ್ನು ಕೈಗೊಳ್ಳುವ ಕಾಪಾಲಿಕರನ್ನು ಮಹಾವ್ರತ, ಸೋಮಸಿದ್ಧಾಂತ, ಕಾಪಾಳಿಗಳೆಂದು ಕರೆಯಲಾಗಿದೆ. "ಶಿವ ಮತ್ತು ಶಕ್ತಿಯ ಸ್ವರೂಪ ಅಭೇದವಾದುದು. ಈ ಸಂಬಂಧವು ಚಂದ್ರ ಚಕೋರದಂತೆ ಅನೋನ್ಯವಾದುದು ಚಂದ್ರನಲ್ಲಿ ಬೆಳೆದಿಂಗಳಿರುವಂತೆ, ಶಕ್ತಿ ಇದ್ದಲ್ಲಿ ಶಿವ. ಆಕೆ ಇಲ್ಲದಿದ್ದರೆ ಅವನು ಅಪೂರ್ಣ. ಅವರು ಪರಸ್ಪರ ಏಕೋಪ ಜೀವಿಗಳು. ಯಾವ ರೀತಿ ಎರಡು ಕೋಲಿನನಾದ ಒಂದೋ, ಎರಡು ಹೂಗಳ ಗಂಧ, ಒಂದೋ, ಎರಡು ಜ್ಯೋತಿಯ ಬೆಳಕು ಒಂದೊ, ಎರಡು ತುಟಿಗಳ ಶಬ್ದೋಚ್ಚಾರ ಒಂದೋ ಹಾಗೆ ಈ ವಿಶಾಲ ವಿಶ್ವದಲ್ಲಿ ಶಿವ-ಶಕ್ತಿಯ ನಾಮದ್ವಯ ಹೊಂದಿದ ತತ್ವವು ಒಂದೇ ಆಗಿದೆ. ಈ ಕಾರಣಕ್ಕಾಗಿಯೇ ಕಾಪಾಲಿಕ ಸಿದ್ಧಾಂತವನ್ನು 'ಸೋಮ ಸಿದ್ಧಾಂತ' ಎಂದು ಕರೆಯಲಾಗಿದೆ."[೧೪]

"ಕಾಪಾಲಿಕರು ಕಠಿಣ ವ್ರತಗಳನ್ನು ಕೈಗೊಳ್ಳುತ್ತಿದ್ದ ಕಾರಣ ಅವರನ್ನು 'ಮಹಾವ್ರತಿಗಳು' ಎಂದು ಕರೆಯಲಾಗುತ್ತಿತ್ತು. 'ಸೋಮ ಸಿದ್ಧಾಂತ'ವು ಅವರ ದಾರ್ಶನಿಕ ಪಥ್ಯವಾದ ಕಾರಣ ಸೋಮ ಸಿದ್ಧಾಂತಗಳು ಎಂಬ ಹೆಸರು ಇತ್ತು. ಕಾಪಾಲಿಕರ ವೇಷಭೂಷಣ ಹಾಗೂ ಆಚರಣೆಗಳು ಅವರ ಪೌರಾಣಿಕ ಹಿನ್ನೆಲೆಗೆ ಸಂಬಂಧ ಹೊಂದಿದೆ. ದೇವತೆಗಳ ಜಗಳದಲ್ಲಿ ಶಿವನು ಬ್ರಹ್ಮನ

ಶಿರಚ್ಛೇದ ಮಾಡಿದ ಬಳಿಕ ಅವನ ಕೈಗೆ ಕಪಾಲವು ತಗುಲಿಕೊಂಡಿತು. ಅದರಿಂದ ಬಿಡಿಸಿಕೊಳ್ಳಲು ಶಿವ ಭೂಲೋಕದ ತೀರ್ಥಕ್ಷೇತ್ರಗಳನ್ನು ಭಿಕ್ಷೆ ಬೇಡುತ್ತ ತಿರುಗಾಡುತ್ತಾನೆ. ಇದರಂತೆ ಕಾಪಾಲಿಕರು ಶಿವನಂತೆ ಕಠೋರವಾದ ಕಪಾಲವ್ರತಗಳನ್ನು ಸ್ವೀಕರಿಸುತ್ತಾರೆ."[೨೫] ಈ ಕಾಪಾಲಿಕರನ್ನು ಕುರಿತು ಹಲವು ಸಾಹಿತ್ಯ, ಪೌರಾಣಿಕ ಕೃತಿಗಳನ್ನು ಹಾಗೂ ಶಾಸನಗಳಲ್ಲಿ ಅಪಾರವಾದ ಮಾಹಿತಿ ದೊರೆಯುವುದು. ಕ್ರಿ.ಶ. ೫ನೆಯ ಶತಮಾನದಲ್ಲಿಯೇ ದಕ್ಷಿಣ ಕರ್ನಾಟಕದಲ್ಲಿ ನೆಲೆನಿಂತು ತಮ್ಮ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸಿದ ಕಪಾಲಿಕರು ಕಪಾಲೇಶ್ವರ ದೇವಸ್ಥಾನಕ್ಕೆ ದತ್ತಿ ಸಲ್ಲಿಸಿದರ ಬಗೆಗೆ ಉಲ್ಲೇಖಗಳಿವೆ. ಹಿಮಾಚಲ ಪ್ರದೇಶದಿಂದ ದಕ್ಷಿಣದ ತುದಿಯವರೆಗೆ ಪಸರಿಸಿದ ಇವರ ಚಾರಿತ್ರಿಕ ವೈಶಿಷ್ಟ್ಯತೆಯ ಬಗೆಗೆ ಸ್ಪಷ್ಟವಾದ ಮಾಹಿತಿ ದೊರೆಯುವುದು.

'ಕಪಾಲಿನ್' ಎಂಬ ಪದವನ್ನು ಮೊದಲಬಾರಿಗೆ 'ಯಜ್ಞವಲ್ಕ್ಯಸ್ಮೃತಿ'ಯಲ್ಲಿ ಬಳಸಲಾಗಿದೆ. 'ಕಪಾಲಿನ್' ಎಂದರೆ ತಲೆಯ ಬುರುಡೆ ಹಿಡಿದವರು ಎಂದು ಅರ್ಥ. ಇದು ನೇರವಾಗಿ ಶಿವನಿಗೆ ಅನ್ವಯಿಸಿ ಹೇಳಿದ ಮಾತು. ಶಿವನು ಬ್ರಹ್ಮನ ಐದನೆಯ ತಲೆಯನ್ನು ತುಂಡರಿಸಿ ಚೆಲ್ಲಿದ ತರುವಾಯ ತಾನು 'ಕಪಾಲಿನ್' ಆದ ಕಾರಣ ದಕ್ಷನು ಅವನನ್ನು ತನ್ನ ಯಜ್ಞಕ್ಕೆ ಆಮಂತ್ರಿಸಲು ನಿರಾಕರಿಸಿದನೆಂದು 'ವಾಮನ ಪುರಾಣ' ಹೇಳುತ್ತದೆ. ಕಪಾಲಿನ್ ಶಿವನು ಅಥವಾ ಕಾಪಾಲೇಶ್ವರನು ಕಪಾಲ ಯತಿಗಳ ದೇವತ್ವದ ಮೂಲ ಮಾದರಿಯನಿಸಿದ್ದಾನೆ."[೨೬]

ಹೀಗೆ ಹಲವು ಕನ್ನಡ, ತಮಿಳು, ಹಾಗೂ ಸಂಸ್ಕೃತ ಗ್ರಂಥಗಳಲ್ಲಿ ಕಾಪಾಲಿಕರ ಕುರಿತ ಉಲ್ಲೇಖಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅಂದು ಅವರ ಪ್ರಸಿದ್ಧತೆಯ ಬಗೆಗೆ ತಿಳಿದುಬರುತ್ತದೆ. ಉತ್ತರದ ಕನೋಜದ ಹರ್ಷವರ್ಧನನ ಕಾಲದವನಾದ 'ಬಾಣಭಟ್ಟನ' ಹರ್ಷಚರಿತೆ ಹಾಗೂ ಕಾದಂಬರಿಗಳಲ್ಲಿ, ಅದೇ ಬಾಣಭಟ್ಟನ ಸಮಕಾಲೀನನಾದ ಮಹೇಂದ್ರವರ್ಮನ 'ವೃತ್ತವಿಲಾಸ' ಅಲ್ಲದೆ ಭವಭೂತಿಯ 'ಮಾಲತಿ ಮಾಧವ' ಹಾಗೂ ೬-೭ನೆಯ ಶತಮಾನದ ತಮಿಳಿನ 'ಮಣಿ ಮೇಖಲೈ' ಎಂಬ ಮಹಾಕಾವ್ಯಗಳಲ್ಲಿ ಕಪಾಲಿಕ ಯತಿಗಳ ಕುರಿತು ಚಿತ್ರಿಸಲಾಗಿದೆ. ಶಿವೋಪಾಸಕರಾದ ಕಾಪಾಲಿಕರನ್ನು ಕುರಿತ ಸಂಸ್ಕೃತದ ಎಲ್ಲಾ ಪುರಾಣಗಳು ಕಾಪಾಲಿಕರನ್ನು ಸೋಮ, ಸೌಮ್ಯ, ಮಹಾವ್ರತಧರ, ಕಂಕರ ಮುಂತಾಗಿ ಹೆಸರುಗಳಿಂದ ಕರೆದಿವೆ.

ಈ ದಾರ್ಶನಿಕ ಪಂಥಗಳಲ್ಲಿ ಯೋಗಿಗಳಂತೆ, ಯೋಗಿಣಿಯರೂ ಕಂಡುಬರುವರು. ಹೀಗಾಗಿ ಕಾಪಾಲಿಕರಲ್ಲಿ ಸ್ತ್ರೀಯರಿಗೂ ಸಹ ಸ್ಥಾನಮಾನಗಳಿದ್ದವು. ಇವರಲ್ಲಿ 'ಕಪಾಲಿಕಳು' ಎಂಬ ಹೆಸರಿನ ಮಹಿಳೆಯು ಕಂಡುಬರುವಳು. "ಪ್ರಾಕೃತದ 'ಗಾಥಾಸಪ್ತಾಸತಿ'ಯು ಕ್ರಿ.ಶ. ೧ನೆಯ ಶತಮಾನದ ಶಾತವಾಹನ ಅರಸನಾದ ಹಾಲರಾಜನು ಹೇಳುವ, ಒಂದು ಪರಂಪರೆಯಿದೆ. ಅದರಲ್ಲಿ ಒಬ್ಬಳು 'ಹೊಸ' ಕಾಪಾಲಿಕಳನ್ನು ಬಣ್ಣಿಸುವ ಒಂದು ಪದ್ಯವಿದೆ. ಈಕೆ ಎಡೆಬಿಡದೆ

ತನ್ನ ನಲ್ಲನ ಚಿತಾಭಸ್ಮವನ್ನು ಬಳಿದುಕೊಳ್ಳುತ್ತಿರುತ್ತಾಳೆ. 'ಹೊಸ' (ನವ) ಪದದ ಅರ್ಥವು 'ಯುವ' ಎಂದಿಷ್ಟೇ ಆಗಿರದಿದ್ದರೆ ಅವಳು ಅವನ ಸಾವಿನ ಸಮಯದಲ್ಲಿ ಕಾಪಾಲಿಕ ವ್ರತವನ್ನು ಸ್ವೀಕರಿಸಿದಳೆಂಬುದು ಸೂಚಿತವಾಗುತ್ತದೆ."[೧೭] ಹಂಪೆಯ ಪರಿಸರದಲ್ಲಿ ವಿರಕ್ತರಂತೆ, ವಿರಕ್ತಿಣಿಯರಿರುವ ಉಲ್ಲೇಖ ಎಲ್ಲೂ ದೊರೆಯಲಾರದು. ಇವರಲ್ಲಿ ವಿರಕ್ತಿಣಿಯರು ಇದ್ದರೂ ಇರಬಹುದು. ಆದರೆ ಖಚಿತವಾಗಿ ಹೇಳಲು ಸಾಧ್ಯವಿಲ್ಲ. ವಿಚಿತ್ರವಾದ ರೀತಿಯಲ್ಲಿ ಬದುಕನ್ನು ಸಾಗಿಸುವ ಕಾಪಾಲಿಕರ ಆಚರಣಾ ಕ್ರಮಗಳು ತುಂಬಾ ವೈಶಿಷ್ಟತೆಯಿಂದ ಕೂಡಿದೆ. 'ಕಾಪಾಲಿಕರ ಭೌತಿಕ ಹಾಗೂ ಮಾನಸಿಕ ಸಾಧನೆಯ ಮಾರ್ಗಗಳ ಮುಖ್ಯ ಗುರಿಯೆಂದರೆ ದೇಹ ಹಾಗೂ ಉಪಾಸಕನ ನಡುವೆ ಆಧ್ಯಾತ್ಮಿಕ ಐಕ್ಯವನ್ನು ಸಾಧಿಸುವುದೇ ಆಗಿದೆ. ಇಂಥ ಐಕ್ಯದಿಂದ ದೊರಕುವ ಲಾಭಗಳು ಎರಡು ಬಗೆಯವು. ಒಂದು ಸಾಧಕನ ಐಹಿಕ ಮಟ್ಟದಲ್ಲಿ ಮಾನವಾತೀತವಾದ ಯಾಂತ್ರಿಕ ಸಿದ್ಧಿಯನ್ನು ಪಡೆಯುವುದು. ಇನ್ನೊಂದು ಅಂತಿಮ ಗತಿಶಾಸ್ತ್ರದ ಮಟ್ಟದಲ್ಲಿ ಅವನು ಪುನರ್ಜನ್ಮಗಳಿಂದ ಬಿಡುಗಡೆ/ಮುಕ್ತಿಯನ್ನು ಪಡೆದು ನಿರಂತರವಾಗಿ ಲೈಂಗಿಕ ಸುಖದ ಸ್ವರ್ಗದಲ್ಲಿ ವಿಹರಿಸುವುದು. ಜೀವ ತನ್ನ ಗುರಿಯನ್ನು ಸಾಧಿಸಬೇಕಾದರೆ ಈ ಕೆಳಗಿನ ಆಚರಣೆಗಳನ್ನು ಅನುಸರಿಸಬೇಕೆಂದು ಕಾಪಾಲಿಕ ಮಾರ್ಗ ಹೇಳುತ್ತದೆ.

೧. ಯಾವಾಗಲೂ ನರಕಪಾಲ ಧರಿಸಿ ಅದರಲ್ಲಿಯೇ ಆಹಾರ ತಿನ್ನುವುದು.

೨. ಸ್ಮಶಾನದಲ್ಲಿ ವಾಸಿಸುವುದು, ಸದಾಕಾಲ ಮೈಗೆಲ್ಲಾ ಬೂದಿಯನ್ನು ಬಳಿದುಕೊಳ್ಳುವುದು, ಬೂದಿಯನ್ನು ತಿನ್ನುವುದು.

೩. ಕೈಯಲ್ಲಿ ಲಾಕುಳ ಅಥವಾ ದಂಡವನ್ನು ಹಿಡಿದಿರುವುದು.

೪. ಯಾವತ್ತೂ ಮದ್ಯ ತುಂಬಿದ ಮಡಕೆಯನ್ನು ಬಳಿಯಲ್ಲಿಟ್ಟುಕೊಂಡಿರುವುದು. ಮದ್ಯದ ಮಡಿಕೆಯಲ್ಲಿ ಶಿವ ಪ್ರತಿಷ್ಠಾಪಿತನಾಗುವಂತೆ ಭಾವಿಸಿ ಪೂಜಿಸುವುದು ಮತ್ತು ಅದರ ಸೇವನೆಯಿಂದ ಜಗತ್ತನ್ನು ಮರೆಯುವುದು.

೫. ಚಕ್ರಪೂಜೆಯ ಕಾಲಕ್ಕೆ ಪಂಚಮಕಾರಗಳಾದ ಮದ್ಯ, ಮಾಂಸ, ಮೀನು, ಮುದ್ರಾ ಮೈಥುನಗಳಲ್ಲಿ ಪಾಲ್ಗೊಳ್ಳುವುದು.

೬. ದೇಹ ದಂಡನೆ ಹಾಗೂ ದೇಹ ದಂಡನೆಯ ಮರು ಅಭಿನಯ.

ಹೀಗೆ "ಕಾಪಾಲಿಕರ ಆಚರಣೆಗಳು ಸಾಮೂಹಿಕ ಸ್ವರೂಪದವಾಗಿದ್ದು, ಸಾಧಕನು ಆಹಾರ, ಕುಡಿತ, ಸಂಭೋಗ ಹಾಗೂ ಮಾನಸಿಕ ಬಾವೋದ್ರೇಕಗಳ ಮೂಲಕ ದೇವತ್ವದೊಡನೆ ಐಕ್ಯತೆಯನ್ನು ಅನುಭವಿಸುತ್ತಾನೆ."[೧೮]

ಚೀನಿ ಪ್ರವಾಸಿಗನಾದ ಹುಯೇನ್‌ತ್ಸಾಂಗನು ದಕ್ಷಿಣ ಏಶಿಯಾದ ತನ್ನ ಪ್ರಯಾಣದ ಕಾಲದಲ್ಲಿ ಹಲವು ಬೌದ್ಧ ಹಾಗೂ ಇತರ ಸಂಪ್ರದಾಯದವರನ್ನು ಕಾಣುತ್ತಾರೆ. ಆಗ ಬೆತ್ತಲಾಗಿ ಸಂಚರಿಸುವ ಯತಿಗಳು, ಭಸ್ಮವನ್ನು ಬಳಿದುಕೊಳ್ಳುವ ಬೇರೆ ಬಗೆಯ ಜನ ಹಾಗೂ ಎಲುಬುಗಳಿಂದ ಮಾಲೆಗಳನ್ನು ಮಾಡಿ ತಲೆಗೆ ಕಿರೀಟದ ಹಾಗೆ ಕಟ್ಟಿಕೊಳ್ಳುವ ಜನರನ್ನು ಕಾಣುವರು. 'ಬಿಲ್' ಎಂಬ ವಿದ್ವಾಂಸರು ಇವರನ್ನು ಕಾಪಾಲಿಕರೆಂದು ಗುರುತಿಸುವರು. ಮೈಮೇಲೆ ತುಂಡು ಬಟ್ಟೆಗಳಿಲ್ಲದೆ ಬೆತ್ತಲಾಗಿ ಮತ್ತೆ ಕೆಲವರು ಅರೆಬೆತ್ತಲಾಗಿ ಸಂಚರಿಸುವ ಇವರು ವಿಶಿಷ್ಟ ಸ್ವಭಾವದ ಕಾರಣಿಕ ಪುರುಷರಾಗಿರುವರು. ಈ ರೀತಿಯ ವಿಚಿತ್ರ ಆಚಾರದ ಕಾಪಾಲಿಕರನ್ನು ಕುರಿತಾದ ಶಾಸನಗಳ ಉಲ್ಲೆಖ ತುಂಬ ಕಡಿಮೆ ಪ್ರಮಾಣದಲ್ಲಿದೆ. ಕಾಪಾಲಿಕರೆಂದು ಪರ್ಯಾಯವಾಗಿ ಸಂಭೋಧಿಸುವ ಮಹಾವ್ರತಿಗಳಿಗೆ ಕೊಟ್ಟ ಕಾಣಿಕೆಯ ಕುರಿತು ಮಾಹಿತಿ ದೊರೆಯುತ್ತದೆ. ಈ ಶಾಸನಗಳ ಆಧಾರದ ಮೇಲೆ ಕಾಪಾಲಿಕರು ಒಂಬತ್ತು ಹಾಗೂ ಹತ್ತನೆಯ ಶತಮಾನಗಳಲ್ಲಿ ದಕ್ಷಿಣದ ಮೈಸೂರು ಪ್ರದೇಶದಲ್ಲಿ ನೆಲೆನಿಂತಿದ್ದರು. ಇವರನ್ನು ಕುರಿತಾದ ಹಲವು ದೇವಾಲಯಗಳಿವೆ. ಆದರೆ ಅವರು ಅಲ್ಲಿ ನೆಲೆನಿಂತಿದ್ದರೆಂಬುದಕ್ಕೆ ಸ್ಪಷ್ಟವಾದ ಆಧಾರ ದೊರೆಯಲಾರದು.

ಈ ಕಾಪಾಲಿಕರು ಮಹಿಮ ಪುರುಷರು. ತಮ್ಮ ದಿವ್ಯಶಕ್ತಿಗಳಿಂದ ಮನುಷ್ಯನ ಹಲವಾರು ಸಮಸ್ಯೆಗಳನ್ನು ಪರಿಹಾರ ಮಾಡುವವರಾಗಿರುವರು. ಏಕೆಂದರೆ ಕಾಪಾಲೇಶ್ವರ ದೇವನನ್ನು ಕುರಿತಾದ ಪದ್ಯವು ಈ ಕೆಳಗಿನಂತಿದೆ.

"ಕಪಾಲೇಶ್ವರ ದೇವನು ದಯಮಾಡಿ ಜನ(ರಿಂದ) ನಿರೀಕ್ಷಿಸಲಾದುದನ್ನು
ಮೈದಳೆದು ಬರುವಂತೆ ಮಾಡಲಿ ಹಾಗೂ ಕುಷ್ಟರೋಗ, ಆನೆಕಾಲು ರೋಗ
ಹಾಗೂ ಚರ್ಮದ ಮೇಲೆ ಹುಟ್ಟಿಕೊಳ್ಳುವ ಗುಳ್ಳೆಗಳಿಂದಾಗಿ ಅಂದಗೆಟ್ಟ
ದೇಹಗಳ ನೋವನ್ನು ಪರಿಹರಿಸಲಿ"[೧೯]

ಮನುಷ್ಯನ ದೇಹದ ಅಂದಗೆಡಿಸುವ ಕಾಯಿಲೆಗಳನ್ನು ಪರಿಹರಿಸುವ ಸಾಮರ್ಥ್ಯವನ್ನು ಹೊಂದಿರುವ ಕಾಪಾಲಿಕರು ಅಂದು ಜನಸಾಮಾನ್ಯರ ಬದುಕಿಗೆ ಬೆಳಕಾಗಿದ್ದರು. ಸಮಾಜದ ಕಷ್ಟ ಕಾರ್ಪಣ್ಯಗಳಲ್ಲಿ ಭಾಗಿಯಾಗುತ್ತಿದ್ದ ಇವರು ಸತ್ತವರನ್ನು ಬದುಕಿಸುವ ಮಹಿಮ ಪುರುಷರಿವರು. ಹಂಪೆಯ ಪರಿಸರದಲ್ಲಿದ್ದ ನೂರೊಂದು ವಿರಕ್ತರು ಸಹ ಕೆಲವೊಂದು ವಿಚಾರದಲ್ಲಿ ಕಪಾಲಿಕರಿಗೆ ಹತ್ತಿರವಾದವರು. ಹುಚ್ಚರಂತೆ ಕಾಣುವ ಈ ವಿರಕ್ತರು ಸಾಮಾನ್ಯರಲ್ಲ ಅಸಾಮಾನ್ಯರು. ಇವರ ಶಕ್ತಿ, ಸಾಮರ್ಥ್ಯಗಳನ್ನು ಮನಗಂಡ ಜನ ಇವರನ್ನು ದೈವದ ಸ್ವರೂಪದಲ್ಲಿ ಕಾಣಲಾರಂಭಿಸಿದರು.

ವಿರಕ್ತರಲ್ಲಿ ಆದಿ ಪುರುಷನಾದ ಕರಸ್ಥಲ ನಾಗಯ್ಯನಿಗೆ ಒಮ್ಮೆ ಒಬ್ಬ ಸತಿಯು ಬಂದು ತನ್ನ ಪತಿಯು ಕುಷ್ಟರೋಗದಿಂದ ನರಳುತ್ತಿದ್ದಾನೆ, ಅವನನ್ನು ಬದುಕಿಸಿಕೊಡು ಎಂದು

ಅಂಗಲಾಚಿದಳು. ಆಗ ಅವನ ಆದೇಶದಂತೆ ಗೋಕ್ಷೀರವನ್ನು ತಂದುಕೊಟ್ಟಳು. ಆ ಹಾಲಿನ ಪಾತ್ರೆಗೆ ತನ್ನ ಮೂತ್ರವನ್ನು ಬೆರಸಿ ರೋಗಿಗೆ ಕೊಡಲು ಹೇಳಿ ಮುಂದೆ ಪ್ರಯಾಣ ಬೆಳೆಸಿದನು. ಮೂತ್ರದಿಂದ ಬೆರತ ಹಾಲನ್ನು ಪತಿಗೆ ನೀಡಲು ರೋಗವು ವಾಸಿಯಾಗಿ ಸುವರ್ಣ ದೇಹವನ್ನು ಪಡೆದನು. ಹೀಗೆ ವಾಮಾಚರಿಗಳಾದ ವಿರಕ್ತರು ಕಾಪಾಲಿಕರ ಲಕ್ಷಣಗಳಿಗೆ ಸ್ವಲ್ಪ ಮಟ್ಟಿಗೆ ಹತ್ತಿರದವರಾಗಿ ಕಂಡುಬರುವರು. ಜನಸಾಮಾನ್ಯರ ಬದುಕಿಗೆ ತುಂಬ ಹತ್ತಿರವಾದ ಇವರು ಪರೋಕ್ಷವಾಗಿ ಸಮಾಜದ ಏಳ್ಗೆಗೆ ಶ್ರಮಿಸಿದವರು. ಮೋಡಿ ವಿದ್ಯೆಗಳನ್ನು ಕಲಿತ ಕಪಾಲಿಕರು ಮಾಟ, ಮಂತ್ರ, ತಂತ್ರಗಳ ಮೂಲಕ ಸ್ತ್ರೀ ವಶೀಕರಣದಲ್ಲಿ ಹೆಚ್ಚು ಪ್ರಸಿದ್ಧತೆಯನ್ನು ಪಡೆದಿದ್ದರು. ಪ್ರೇಮ, ಕಾಮದಲ್ಲಿ ತುಂಬ ಆಸಕ್ತಿ ಹೊಂದಿದ ಕಾಪಾಲಿಕರು ಅದರಲ್ಲಿಯೇ ಮೋಕ್ಷವನ್ನು ಸಂಪಾದಿಸುತ್ತಿದ್ದರು. ಆದರೆ ನೂರೊಂದು ವಿರಕ್ತರು ಸಹ ಇವರಿಗಿಂತ ಕಮ್ಮಿಯೇನಿಲ್ಲ ಇವರು ಸಹ ಭೋಗಪರವಾದ ಸುಖವನ್ನು ಬಯಸಿದವರು ಅಂದು ಅನೇಕ ಪವಾಡ ಸಾದೃಶ್ಯಗಳಿಂದ ಮೆರೆದಿದ್ದಾರೆಂಬುದಕ್ಕೆ ಮೋದಿಯ ರುದ್ರನ 'ವಿರಕ್ತರ ಕಾವ್ಯ'ದಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ.

ಈ ಕಾಪಾಲಿಕರ ಆಚರಣಾ ಕ್ರಮಗಳು ನಮಗೆ ವಿಲಕ್ಷಣವಾಗಿ ಕಂಡರು ಅದು ಅವರಿಗೆ ಮೋಕ್ಷಕ್ಕೆ ಸುಲಭದ ಮಾರ್ಗವಾಗಿತ್ತು. "ಕಾಪಾಲಿಕರು ಭೈರವ ರೂಪಿಯಾದ ಶಿವನನ್ನು ಆರಾಧಿಸುತ್ತಿದ್ದರು. ತಲೆಯೋಡನ್ನು ಕೈಯಲ್ಲಿ ಹಿಡಿದಿರುತ್ತಿದ್ದರು; ಮೂಳೆಹಾರವನ್ನು ಧರಿಸುತ್ತಿದ್ದರು; ಜಡೆಬಿಟ್ಟಿರುತ್ತಿದ್ದರು; ತ್ರಿಶೂಲ, ಢಮರು, ಖಟ್ವಾಂಗ ಹಿಡಿದಿರುತ್ತಿದ್ದರು; ಕರ್ಣಕುಂಡಲ ಜನಿವಾರ ಇರುತ್ತಿತ್ತು; ಮಸಣದ ಬೂದಿಯಿಂದ ಭಸ್ಮ ಸ್ನಾನ ಮಾಡುತ್ತಿದ್ದರು; ಲೋಕದ ನಶ್ವರತೆಯನ್ನು ಸೂಚಿಸುವ ಈ ಬೂದಿ, ತೀವ್ರವಾಗಿ ಬದುಕಲು ಪ್ರೇರೇಪಿಸುತ್ತದೆ ಎಂದು ಭಾವಿಸಿದ್ದರು. ಅವರ ಆಚರಣೆಗಳು ಸಾಮಾನ್ಯವಾಗಿ ರಾತ್ರಿ ಕಾಲದವು. ಇವುಗಳಲ್ಲಿ ನರಬಲಿ ಕೊಡುವುದು ಹಾಗೂ ನರಮಾಂಸ ತಿನ್ನುವುದೂ ಸೇರಿದ್ದವು. ಕಪಾಲದಲ್ಲಿ ಶಿವ ನೆಲೆಸಿದ್ದಾನೆಂದು ನಂಬಿದ ಕಾರಣ, ಅದರಲ್ಲಿ ಸೋಮರಸವನ್ನು ಕುಡಿಯುತ್ತಿದ್ದರು. ಸೋಮ ಎಂದರೆ (ಸಉಮಾ) ಉಮಾ ಸಮೇತವಾದ ಶಿವ. ಹೀಗಾಗಿ ಸೋಮಪಾನಕ್ಕೂ ಸ್ತ್ರೀಮಿಲನಕ್ಕೂ ಸಂಬಂಧವಿದೆ."[೨೦]

ಕಾಪಾಲಿಕ ಎಂಬ ಹೆಸರೇ ಸೂಚಿಸುವಂತೆ ಇವರು ತಲೆಬುರುಡೆಯನ್ನು ಕೈಯಲ್ಲಿ ಹಿಡಿದಿರುವುದು; ಹೀಗಾಗಿ ಅದೇ ಅವರ ಲಾಂಛನವಾಗಿತ್ತು. ಅದರಲ್ಲೆ ಭಿಕ್ಷೆ ಬೇಡಿ, ಅದರಲ್ಲೆ ಸೋಮರಸ ಕುಡಿದು ಊಟಮಾಡುವುದು ಕಾಪಾಲಿಕರ ವಿಶಿಷ್ಟ ಪದ್ಧತಿ. "ಕಾಪಾಲಿಕನಿಂದ ಆಚರಿಸಲ್ಪಡುವ ನಿಜವಾಗಿಯೂ ಮುಖ್ಯವಾದ ದೇಹದಂಡನೆಯೆಂದರೆ ಮಹಾವ್ರತ. ಅವನು ಆಗೀಗ ಸ್ವ ಅಂಗ ಹೀನತೆಯನ್ನು ಕೈಕೊಳ್ಳುತ್ತಿದ್ದನೆನ್ನಲು, ಆಹುತಿ ನೀಡಲು ತನ್ನದೇ ಆದ ದೇಹದಿಂದ ಮಾಂಸವನ್ನು ಕಿತ್ತು ತೆಗೆಯುವಂತಹ ಬಗೆಬಗೆಯ ವಿಧಾನಗಳನ್ನು ಬಳಸುತ್ತಿದ್ದನೆನ್ನುವ ಬಗೆಗೆ ಕೆಲವು ಪುರಾವೆಗಳು ಕೂಡ ದೊರಕುತ್ತವೆ."[೨೧] ಹಲವು ರೀತಿಯಿಂದ ಉಗ್ರವಾದ

ದೇಹದಂಡನೆಯನ್ನು ನಡೆಸುತ್ತಿದ್ದ ಕಾಪಾಲಿಕರು ಆಹಾರ, ಕುಡಿತ, ಸಂಭೋಗ ಇಲ್ಲವೆ ಮಾನಸಿಕ ಭಾವೋದ್ರೇಕಗಳ ಮೂಲಕ ದೈವತ್ವದೊಡನೆ ಐಕ್ಯತೆಯನ್ನು ಹೊಂದುವರು. ಕಾಪಾಲಿಕರ ಬಗೆಗೆ ಉಲ್ಲೇಖವಾಗಿರುವ ಹಲವು ಪುರಾವೆಗಳ ಪ್ರಕಾರ ಇವರು "ಉಗ್ರವಾದ ದೇಹದಂಡನೆಗಳ ಮೂಲಕ ಈಶನೊಡನೆ ಆಟವಾಡಲೆಂದು ತನ್ನ ದೇಹದೊಂದಿಗೆ ಕೈಲಾಸಕ್ಕೆ ಹೋಗಿ ಉಗ್ರನನ್ನು ಒಲಿಸಿಕೊಳ್ಳುತ್ತಾನೆ."[೨೨] ಭೋಗ ಪರವಾದ ಜೀವನ ಕ್ರಮದಲ್ಲಿ ಹೆಚ್ಚು ಆಸಕ್ತಿ ಹೊಂದಿದವರಾಗಿ ಕಂಡುಬರುವ ಇವರು "ಭೋಗನಿರತರಾದ ನಾಸ್ತಿಕ, ಇಹವಾದಿ ವ್ಯಕ್ತಿಗಳಾಗಿದ್ದು ಮದ್ಯ, ಮಾಂಸ ಹಾಗೂ ಅಕ್ರಮ ಸಂಭೋಗಗಳ ಚಟಗಳಿಗೆ ಬಲಿಯಾದವರೆಂದು ಗುಣರತ್ನ ಹಾಗೂ ಬೃಹಸ್ಪತಿ ಸೂತ್ರಗಳು ಸಾಧಿಸುತ್ತವೆ."[೨೩]

ಮದಿರೆ, ಮದಿರಾಕ್ಷಿಯೆಂದರೆ ಶಿವನೇ ಎತ್ತಿ ಹಿಡಿದ ಮುಕ್ತಿ ಮಾರ್ಗ ಎಂಬ ಪರಿಕಲ್ಪನೆ ಇವರಲ್ಲಿದೆ. ಅರೆಹುಚ್ಚರಂತೆ ಎಲ್ಲೆಂದರಲ್ಲಿ ಗುಡಿಗುಂಡಾರಗಳಲ್ಲಿ ವಾಸಮಾಡುತ್ತ ಸಂಚಾರಿಸುವ ಸಂಚಾರಿ ಜೀವಿಗಳಾದ ಈ ನೂರೊಂದು ವಿರಕ್ತರ ಆಚರಣಾ ಕ್ರಮ ಈ ಮೇಲಿನ ಕಾಪಾಲಿಕರಿಗಿಂತ ಭಿನ್ನವಾದದ್ದು, ಆಧ್ಯಾತ್ಮಿಕ ಜೀವಿಗಳಾಗಿದ್ದ ಇವರು ಡಾಂಭಿಕ ಹಾಗೂ ಬಹಿರಂಗದ ಆಚರಣೆಗಳನ್ನು ತ್ಯಜಿಸಿ ಕೇವಲ ಅಲೌಕಿಕವಾದ ನೆಲೆಯಲ್ಲಿ ಬದುಕನ್ನ ಸಾಗಿಸುವ ಮಹಿಮ ಪುರುಷರಿವರು. ಸಂಭೋಗದಲ್ಲಿ ಆಸಕ್ತಿ ಹೊಂದಿದ ಇವರು ಕಾಪಾಲಿಕರಂತೆ ಅಮಾನುಷಕರವಾದ ಆಚರಣೆಗಳನ್ನು ಮಾಡುತ್ತಿರಲಿಲ್ಲ. ಅರೆಬರೆ ಬೆತ್ತಲಾಗಿ ಸಂಚರಿಸುವ ಇವರು ಮದ್ಯಮಾಂಸದ ಹತ್ತಿರ ಹೋದವರಲ್ಲ.

"ಮದ್ಯ ಮಾಂಸದ ಸಹವಾಸದಲ್ಲಿದ್ದ ಕಾಪಾಲಿಕರು ಸ್ತ್ರೀ ಸಂಭೋಗದಲ್ಲಿ ಸಿಗುವ ಇಂದ್ರೀಯ ಸುಖವೇ ದೈವಿಕಾನಂದ ಮೋಕ್ಷ ಎಂದು ಭಾವಿಸಿದರು. ಸೋಮರಸ ಕುಡಿಯುವುದು ಕೂಡ ಇದಕ್ಕೆ ಪೂರಕವಾಗಿತ್ತು. ಮದ್ಯವು ಶಿವೆಯಾಗಿದ್ದು, ಮಾಂಸವು ಶಿವನು ಎಂದು ತಿಳಿದಿದ್ದರು. ಪಂಚಮಕಾರಗಳು ಆಚರಣೆಯಲ್ಲಿದ್ದವು. ಆನಂದ ಅಥವಾ ಸುಖತತ್ವವನ್ನು ಕೆಲವರು ಅತೀರೇಖಕ್ಕೆ ಒಯ್ದಿರುವ ಸಾಧ್ಯತೆ ಇದ್ದೀತು. ಅವರು ಸ್ತ್ರೀವಶೀಕರಣ ವಿದ್ಯೆ, ಮಾಟ, ಮಂತ್ರ ವಿದ್ಯೆಗಳಲ್ಲಿ ಪರಿಣಿತರೂ ಬೇರೆ ಬೇರೆ ಸಿದ್ಧಿಗಳನ್ನು ಪಡೆದವರೂ ಆಗಿದ್ದರು."[೨೪]

"ಕಾಪಾಲಿಕರಿಗೆ ದಾರ್ಶನಿಕವಾದ ಗಟ್ಟಿ ಬುನಾದಿಯಿತ್ತು. ಎದುರಾಳಿಗಳು ಅವರ ಬಗ್ಗೆ ಕೊಡುವ ಚಿತ್ರಗಳಲ್ಲಿ ಎಷ್ಟೋ ದುರಾಗ್ರಹವಿದ್ದರೂ, ಅವರು ದೊಡ್ಡಜ್ಞಾನಿಗಳಾಗಿದ್ದರು. ತಮ್ಮ ಸಿದ್ಧಾಂತದಲ್ಲಿ ಅಪಾರವಾದ ಶ್ರದ್ಧೆಯುಳ್ಳವರಾಗಿದ್ದರು. ಅದನ್ನು ಸಮರ್ಥವಾಗಿ ಮಂಡಿಸುವ ಪರಿಣಿತಿ ಹೊಂದಿದ್ದರು. ಎದುರಾಳಿಗಳನ್ನು ವಾಗ್ವಾದಗಳಲ್ಲಿ ಸೋಲಿಸುತ್ತಿದ್ದರು."[೨೫]

ಒಟ್ಟಿನಲ್ಲಿ ಮೇಲೆ ತಿಳಿಯಪಡಿಸಿದ ಅಂಶಗಳ ಹಿನ್ನೆಲೆಯಲ್ಲಿ ನೂರೊಂದು ವಿರಕ್ತರಿಗೂ ಮತ್ತು ಕಾಪಾಲಿಕರ ನಡುವೆ ಕೆಲವೊಂದು ಸಾಮ್ಯತೆ ಹಾಗೂ ಅಸಮಾನ್ಯತೆಗಳು ಗೋಚರಿಸುವುದು.

ಪರಿಶಿಷ್ಟ ನೆಲೆಯ ಕಾಪಾಲಿಕರಂತೆ ಈ ವಿರಕ್ತರೂ ಉಗ್ರಸ್ವರೂಪದವರಲ್ಲ ಇವರ ವ್ಯಕ್ತಿತ್ವ ಮತ್ತು ಸ್ವಭಾವಗಳು ತುಂಬಾ ಸರಳವಾದದ್ದು, ಸಸ್ಯಹಾರಿಗಳಾದ ವಿರಕ್ತರು ಅವರಂತೆ ಮಾಂಸಹಾರಿಗಳಲ್ಲ. ಆದರೂ ಇವರಲ್ಲಿ ಬರುವ ವಿರಕ್ತರ ಹೆಸರನ್ನು ಗಮನಿಸಿದರೆ ಮಾಂಸಹಾರಕ್ಕೆ ಹತ್ತಿರವಾದವರಂತಿದೆ. ಇವರಲ್ಲಿ ಯಾವುದೇ ರೀತಿಯ ಪ್ರಾಣಿಬಲಿ ಹಾಗೂ ನರಬಲಿಗಳಂತಹ ಅಸಾಮಾನ್ಯ ಪದ್ಧತಿಗಳಿರಲಿಲ್ಲ. ಕಾಪಾಲಿಕರ ಹೆಚ್ಚಿನ ವಾಸವೆಲ್ಲ ಸ್ಮಶಾನಗಳಲ್ಲಿ. ಆದರೆ ವಿರಕ್ತರು ಇವರಂತೆ ಸ್ಮಶಾನದಲ್ಲಿ ನೆಲೆನಿಲ್ಲದೆ, ತಪೋ ನಿರತ ಜೀವಿಗಳಾದ ವಿರಕ್ತರು ತಮ್ಮ ಮನಸ್ಸಿಗೆ ಎಲ್ಲಿ ಆನಂದ ಹಾಗೂ ನೆಮ್ಮದಿ ದೊರಕುವುದೋ ಅಲ್ಲಿ ನೆಲೆ ನಿಲ್ಲುವರು. ಇವರು ಹೆಚ್ಚಾಗಿ ಬೆಟ್ಟ, ಗುಡ್ಡ, ಗುಹೆ ಹಾಗೂ ಹಾಳುಬಿದ್ದ ಗುಡಿಗುಂಡಾರವೇ ಇವರ ಬದ್ಧವಾದ ಆಶ್ರಯ ಸ್ಥಾನಗಳಾಗಿದ್ದವು. ಸದಾ ಸಂಚಾರಿ ಜೀವಿಗಳಾದ ಇವರಿಗೆ ಸ್ಥಿರವಾದ ನೆಲೆಗಳಿರಲಿಲ್ಲ. ಧ್ಯಾನಮಗ್ನ ಯೋಗಿಗಳಾದ ವಿರಕ್ತರ ನಡೆ–ನುಡಿಗಳು ಕಪಾಲಿಕರಿಗಿಂತ ತುಂಬ ವೈಶಿಷ್ಟ್ಯಮಯವಾಗಿತ್ತು.

೩. ಪಾಶುಪತ

ಶೈವ ಧರ್ಮದಲ್ಲಿ ಕಂಡುಬರುವ ನಾಲ್ಕು ಶಾಖೆಗಳಲ್ಲಿ ಪಾಶುಪತಕ್ಕೆ ಅತ್ಯಂತ ಪ್ರಾಚೀನತೆಯ ಸ್ಥಾನ ಕಲ್ಪಿಸಲಾಗಿದೆ. ಹಲವು ಅಧ್ಯಯನಗಳ ಆಧಾರದ ಮೇಲೆ ವಿದ್ವಾಂಸರು ಇವರ ಪ್ರಾಚೀನತೆಯನ್ನು ಸಿಂಧೂ ಬಯಲಿನ ನಾಗರಿಕತೆಯ ಕಾಲಕ್ಕೆ ಎಳೆದೊಯ್ಯುವರು. ಇವರ ಕುರಿತು ರಾಮಾಯಣ, ಮಹಾಭಾರತವಲ್ಲದೆ, ವಾಯುಪುರಾಣ, ಲಿಂಗಪುರಾಣ ಅಲ್ಲದೆ ಕೆಲವೊಂದು ಶಾಸನಗಳಲ್ಲಿ ಸಹ ಇವರ ಬಗೆಗೆ ಮಾಹಿತಿ ಲಭ್ಯ. ಕ್ರಿ.ಶ. ೨೦೦೮ ಕಿಗ್ಗದ ಶಾಸನದಲ್ಲಿ ಬರುವ 'ಪಾಶುಪತ' ಪದವೊಂದರ ಉಲ್ಲೇಖದಿಂದ ಈ ಶಾಖೆಯ ಕಾಲಮಾನವು ಕ್ರಿ.ಶ. ೬ ಅಥವಾ ೭ನೇ ಶತಮಾನದಷ್ಟು ಪ್ರಾಚೀನತೆಯನ್ನು ತೋರಿಸುತ್ತದೆ. ಪ್ರಾಚೀನ ಋಗ್ವೇದದಲ್ಲಿ 'ರುದ್ರ' ಪಶುಪತಿಗಳೆಂಬ ಶಬ್ದಗಳು ಬಂದಿವೆ. ಹೀಗಾಗಿ ಪಾಶುಪತವನ್ನು ಕುರಿತು ಈಗಾಗಲೇ ಸಾಕಷ್ಟು ಅಧ್ಯಯನಗಳು ನಡೆದಿವೆ. "ಮಹಾಭಾರತದಲ್ಲಿ ಹೇಳಿರುವ ಐದು ಸಿದ್ಧಾಂತಗಳಲ್ಲಿ ಪಾಶುಪತವೂ ಒಂದು; ಅರ್ಜುನನು ಶಿವನ ಕೃಪೆಯಿಂದ ಪಾಶುಪತಾಸ್ತ್ರವನ್ನು ಪಡೆದ ವಿಷಯ ಪ್ರಸಿದ್ಧವೇ. ಹೀಗೆ ಶೈವ ಧರ್ಮ ಅತ್ಯಂತ ಪುರಾತನವಾದ ಧರ್ಮವಾಗಿದೆ. ಅದರ ಒಟ್ಟೂ ತಿರುಳು ಇದು – ಒಬ್ಬೊಬ್ಬ ಜೀವಿಯೂ ಪಶು; ಅವನನ್ನು ಕಟ್ಟಿಹಾಕಿರುವುದು ಪಾಶ; ಜೀವಿಗಳ ಒಡೆಯ ಪಶುಪತಿ; ಪಾಶವನ್ನು ಕತ್ತರಿಸಲು (ಪಶು ಪಾಶ ವಿಮೋಕ್ಷಣ) ಪಶುಪತಿ ಅಥವಾ ಮಹೇಶ್ವರನಿಗೆ ಶರಣು ಹೋಗಬೇಕು; ಪಾಶುಪತವ್ರತವನ್ನು ಅಂಗೀಕರಿಸಿ ಆಚರಿಸಬೇಕು."[೨೬]

"ಏಳನೆಯ ಶತಮಾನದ ಚೀನಿ ಪ್ರವಾಸಿ ಹುಯೆನ್‌ತ್ಸಾಂಗ್ ತನ್ನ ಪುಸ್ತಕದಲ್ಲಿ ಪಾಶುಪತರ ಹೆಸರನ್ನು ಹನ್ನೆರಡು ಸಾರಿ ಹೇಳುವುದಲ್ಲದೆ, ಮಹೇಶ್ವರನ ದೇವಸ್ಥಾನಗಳು ಕೆಲವಡೆ ಇದ್ದವೆಂದು,

ಅಲ್ಲಿ ಪಾಶುಪತರು ಧ್ಯಾನ ಮಾಡುತ್ತಿದ್ದರೆಂದೂ ಹೇಳುತ್ತಾನೆ. ದೇಹಕ್ಕೆ ಭಸ್ಮವನ್ನು ಬಳಿದು, ಜಟೆಯನ್ನು ಗಂಟುಗಂಟಾಗಿ ಕಟ್ಟಿ ನಗ್ನರಾಗಿದ್ದುಕೊಂಡು ದೇವ (ಬಹುಶಃ ಶಿವ ಅಥವಾ ಮಹೇಶ್ವರ)ನನ್ನು ಉಪಾಸನೆ ಮಾಡುತ್ತಿದ್ದ ಸನ್ಯಾಸಿಗಳನ್ನು ವಾರಣಾಸಿಯಲ್ಲಿ ಕಂಡುದಾಗಿ ಹೇಳುತ್ತಾನೆ."[೨೭] ನೂರೊಂದು ವಿರಕ್ತರು ಸಹ ಶಿವಧ್ಯಾನದಲ್ಲಿ ತೊಡಗಿರುವ ಆಧ್ಯಾತ್ಮವಾದಿಗಳು ಪಾಶುಪತರಂತೆ ಮೈಮೇಲೆ ಭಸ್ಮವನ್ನು ಬಳಿದುಕೊಂಡು ದಿಗಂಬರರಾಗಿ ಸಂಚರಿಸುವ ಇವರು ಸಹ ಜಟಾಧಾರಿಗಳಾಗಿರುವರು. "ಶಿವತತ್ವ ಚಿಂತಾಮಣಿ'ಯಲ್ಲಿ ಲಕ್ಕಣ್ಣ ದಂಡೇಶನು ಹೇಳುವ ಚರಲಿಂಗ ಮೂರ್ತಿಗಳು ಅಂದು ಅವರು ವಿರಕ್ತರೇ ಆಗಿರುವರು. ಅವರ ಲಕ್ಷಣಗಳನ್ನು ಕುರಿತು ಪದ್ಯ ಈ ಕೆಳಗಿನಂತಿದೆ.

ಬಿಟ್ಟ ಜಡೆಗಳ ದಿಗಂಬರದ ಶಿವಲಿಂಗದೋಳು
ನಟ್ಟ ದೃಷ್ಟಿಯ ...."[೨೮]

ಇದರಿಂದ ನಮಗೆ ತಿಳಿಯಪಡಿಸುವ ಅಂಶವೆಂದರೆ ನೂರೊಂದು ವಿರಕ್ತರು ಸಹ ಪಾಶುಪತರಂತೆ ದಿಗಂಬರಾಗಿ, ಅರೆಬೆತ್ತಲಾಗಿ ಸಂಚರಿಸುವ ಮಹಿಮ ಪುರುಷರಾಗಿರುವರು.

ಅಸಾಮಾಜಿಕ ಹಾಗೂ ವಿಕೃತವಾದ ಲಕ್ಷಣವನ್ನೊಳಗೊಂಡ ಪಾಶುಪತವು ಎಲ್ಲಾ ಶಾಖೆಗಳಿಗಿಂತ ತುಂಬಾ ವಿಶಿಷ್ಟವಾದ ಒಂದು ಶಾಖೆಯಾಗಿ ಮಾರ್ಪಟ್ಟಿದೆ. ನಿಜಗುಣ ಶಿವಯೋಗಿಯವರು ಈ ಪಾಶುಪತವನ್ನು ಅತಿಮಾರ್ಗಿಕರೆಂದು ಕರೆದಿದ್ದಾರೆ. ಅಲ್ಲದೆ ಪಾಶುಪತರು ಮಾಯಾ, ಕರ್ಮಗಳೆಂಬ ಪಾಶದ್ವಯಗಳನ್ನು ಹೇಳುವ ಮಾಯಾ ತತ್ವವಾದಿಗಳೆಂದೂ ಅಭಿಪ್ರಾಯಪಡುವರು. ಅಲ್ಲದೆ ಇವರ ಮೋಕ್ಷದ ಕುರಿತು ಹೀಗೆ ಹೇಳುವರು. "ಪಾಶುಪತರು ಪ್ರವಾಹೇಶ್ವರತ್ವದಿಂದೀಶ್ವರತ್ವನನ್ಯರಿಗಿತ್ತು. ಆತ್ಮನು ಜ್ಞಾಪ್ತಿ ಮಾತ್ರದಿಂದಹುದೆ, ಮೋಕ್ಷವೆನ್ನುವರು."

ಪಾಶುಪತರು ಹೆಸರನ್ನು ಕೆಡಿಸಿಕೊಳ್ಳುವ ನಡವಳಿಕೆಗಳಿಂದಾಗಿ ಅವಮಾನವನ್ನು ಪ್ರೀತಿಯಿಂದ ಬರಮಾಡಿಕೊಳ್ಳುವ ಕುತೂಹಲಕರ ಪದ್ಧತಿಯು ಪಾಶುಪತ ಸಂಪ್ರದಾಯವನ್ನು ಎಲ್ಲಕ್ಕೂ ಹೆಚ್ಚು ಎದ್ದು ಕಾಣುವ ಲಕ್ಷಣವೆನ್ನಿಸಿದೆ. "ಪಾಶುಪತದ ಸಿದ್ಧಾಂತದಲ್ಲಿ ಮೋಕ್ಷವೆಂದರೆ ಅಂತ್ಯ (ದುಖಾಂತ) ಎಂದು ಕರೆಯಲಾಗಿದೆ."[೨೯] ಎಲ್ಲಾ ರೀತಿಯ ಲೌಕಿಕ ಆಸಕ್ತಿಯಿಂದ ಬಿಡುಗಡೆ ಹೊಂದಿದ ಪಾಶುಪತರ ಮನೋಸ್ಥಿತಿ ಹಾಗೂ ಬಾಹ್ಯ ಲಕ್ಷಣಗಳು ಈ ಕೆಳಗಿನಂತಿವೆ.

"ಅವನು ತಲೆಕೆಟ್ಟುವನ ಹಾಗೆ, ದರಿದ್ರನ ಹಾಗೆ ಕಾಣಬೇಕು. ಅವನ ದೇಹವು ಕೊಳೆಯಿಂದ ಮುಸುಕಿರಬೇಕು. ದೇಹದ ಬಗೆಗೆ ಯಾವುದೇ ಎಚ್ಚರವಹಿಸದ್ದರಿಂದ ಅವನ ದೇಹವು ಕೊಳೆಯಿಂದ ಮುಸುಕಿರಬೇಕು. ದೇಹದ ಬಗೆಗೆ ಯಾವುದೇ ಎಚ್ಚರವಹಿಸದ್ದರಿಂದ ಅವನ ಗಡ್ಡ, ಉಗುರುಗಳು ಹಾಗೂ ತಲೆಗೂದಲುಗಳು ಉದುದ್ದಾಗಿ ಬೆಳೆದಿರಬೇಕು. ಹೀಗೆ

ಅವರು ಗೌರವಾನ್ವಿತ ಜಾತಿ ಹಾಗೂ ಪರಿಸ್ಥಿತಿಗಳಿಂದ ನಂಟು ಕಡಿದುಕೊಳ್ಳುತ್ತಾನೆ. ಹೀಗಾದ ಬಳಿಕ ಆಕಾಂಕ್ಷೆಯಿಲ್ಲದ ಅನಾಸಕ್ತಿಯ ಸಾಮಾರ್ಥ್ಯವು ಹುಟ್ಟಿಕೊಳ್ಳುತ್ತದೆ."[೩೦] ಈ ಪಾಶುಪತ ಧರ್ಮದ ಯತಿಗಳಂತೆ ವಿರಕ್ತರು ಸಹ ತಮ್ಮ ಶರೀರದ ಸ್ವಚ್ಛತೆಯ ಬಗೆಗೆ ಯಾವುದೇ ಕಾಳಜಿ ವಹಿಸಿರಲಿಲ್ಲ. ಅರೆಹುಚ್ಚರಂತೆ ಅರೆಬೆತ್ತಲಾಗಿ ಸಂಚರಿಸುವ ವಿರಕ್ತರು ಉದ್ದುದ್ದಾ ಗಡ್ಡಾ, ಉಗುರು ಹಾಗೂ ತಲೆಗೂದಲನ್ನು ಬಿಟ್ಟಿರುತ್ತಿದ್ದರು. ಪಾಶುಪತರಂತೆ ಹುಚ್ಚರ ಲಕ್ಷಣ ಹೊಂದಿದ್ದರೂ ಅವರು ಹುಚ್ಚರಲ್ಲ. ಅವರಲ್ಲಿ ಅರಿವಿನ ನಡೆ–ನುಡಿಗಳು ಕೂಡಿರುತ್ತಿತ್ತು. ಭಸ್ಮಶಯನ, ಭಸ್ಮಸ್ನಾನಗಳು ಪಾಶುಪತದ ಮುಖ್ಯ ಆಚರಣ ಕ್ರಮವಾಗಿತ್ತು. ಇವರಂತೆ ವಿರಕ್ತರು ಸಹ ಭಸ್ಮಧಾರಿಗಳಾಗಿದ್ದರು. "ದಿನದಲ್ಲಿ ಮೂರು ವೇಳೆ ಭಸ್ಮಸ್ನಾನ, ಅಹಾ ಅಹಾ ಎಂದು ಕೂಗುವುದು, ಭಗವಂತನ ನಾಮವನ್ನು ಸ್ಮರಿಸುವುದು, ಕುಣಿಯುವುದು, ಹುಡುಕ್ಕಾರ ಶಬ್ದವನ್ನು ಮಾಡುವುದು, ನಮಸ್ಕರಿಸುವುದು ಪಾಶುಪತರ ಇವೇ ಆ ವ್ರತಗಳು."[೩೧]

ವಿಕೃತ ಸ್ವಭಾವದ, ಅತಿಮಾರ್ಗಿಕ ಆಚರಣೆ ನಡೆಸುವ ಪಾಶುಪತರ ವಾಸಸ್ಥಾನ ಸ್ಮಶಾನ. ಹೀಗಾಗಿ ಸ್ಮಶಾನವಾಸ ಮತ್ತು ಭಸ್ಮಧಾರಣೆ ಪಾಶುಪತದ ವಿಶೇಷ ಲಕ್ಷಣ. ಅವೈಧಿಕ ನೆಲೆಯ ತಾಂತ್ರಿಕ ಪಂಥದವರಾದ ಪಾಶುಪತವು ನಾಸ್ತಿಕವಾದ ಚಿಂತನೆವುಳ್ಳದ್ದು. ಅತ್ಯಂತ ಪವಿತ್ರ ವಸ್ತುವನ್ನಾಗಿ ಬಳಸುವ ಬೂದಿ ಅಥವಾ ಭಸ್ಮವು ಶೈವ ಧರ್ಮಕ್ಕೆ ಪಾಶುಪತದಿಂದ ಬಂದಿತೆಂಬುದನ್ನು ಉಪನಿಷತ್ತುಗಳ ಮೂಲಕ ತಿಳಿದುಕೊಳ್ಳಬಹುದು. (ಅಥರ್ವಶಿರಸ್ ಪ್ರಕಾರ)

ಪಾಶುಪತರಿಗೆ ಅವರದೆಯಾದ ಕೆಲವೊಂದು ಆಚರಣ ಕ್ರಮಗಳಿದ್ದವು.

೧. ಪಾಶುಪತರು ಹುಚ್ಚರಂತೆ ವರ್ತಿಸುವುದು.

೨. ನಿದ್ದೆಯಿಲ್ಲದಿದ್ದರೂ ನಿದ್ದೆಬಂದವರಂತೆ ನಟಿಸುವುದು.

೩. ವಾಯುರೋಗಿಯಂತೆ ಅಂಗಾಂಗ ಅಲ್ಲಾಡಿಸುವುದು.

೪. ಅಂಗವಿಕಲರಂತೆ ನಟಿಸುವುದು.

೫. ಕಾಮುಕರಂತೆ ಶೃಂಗರಿಸಿಕೊಂಡು ಯುವತಿಯರನ್ನು ಆಕರ್ಷಿಸುವುದು.

೬. ಲೋಕನಿಂದಿತ ಕೆಲಸ ಮಾಡುವುದು.

೭. ತಪ್ಪರ್ಥ ಕೊಡುವ ಮಾತು ಹೇಳುವುದು.

೮. ಕುಂಟರಂತೆ, ಹುಚ್ಚರಂತೆ ನಟಿಸುವುದು.

ಇವೆಲ್ಲವೂ ಅನೈತಿಕ, ಅಸಾಮಾಜಿಕ, ವಿಕ್ಷಿಪ್ತವಾದ ಈ ವಿಚಿತ್ರ ಆಚರಣೆಗಳಿಗೆ ಒಂದು ವಿಶಿಷ್ಟವಾದ ಅರ್ಥಗಳಿರುತ್ತವೆಂದು ಸಾಧಿಸುತ್ತದೆ. ಆದರೆ ವಿರಕ್ತರು ಪಾಶುಪತರಂತೆ ಲೋಕನಿಂದಿತ, ತಪ್ಪರ್ಥ ಕೊಡುವ ಮಾತುಗಳನ್ನಾಡುತ್ತಿರಲಿಲ್ಲ. ಸಮಾಜವು ಇವರನ್ನು ತಿರಸ್ಕಾರದಿಂದ ಕಂಡರು

ಕೊನೆಗೆ ಇವರ ದಿವ್ಯಲೀಲೆಗಳನ್ನು ಗಮನಿಸಿ, ದೇವರ ಸ್ವರೂಪದಲ್ಲಿ ಕಾಣಲಾರಂಭಿಸಿದರು. ಹೀಗಾಗಿ ಅರೆಮರುಳರಂತಿರುವ ವಿರಕ್ತರಿಗೂ ಇವರಿಗೂ ಹಲವು ವ್ಯತ್ಯಾಸಗಳಿವೆ. "ಹುಚ್ಚರಂತಿರುವ ಆಚರಣೆಗಳಿಗೂ ಈ ದರ್ಶನ ಹೇಳುವ ತತ್ವಗಳಿಗೆ ಹೇಗೆ ಹೊಂದಾಣಿಕೆ ಸಾಧ್ಯ ಎಂಬುದು ಮುಖ್ಯ ಪ್ರಶ್ನೆ. ಬುದ್ಧಿಜೀವಿಗಳೆಲ್ಲ ಪಶುಗಳು ಎಂಬ ತಾತ್ವಿಕ ನೆಲೆಯೇ ಇದಕ್ಕೆ ಆಧಾರ. ಹೋರಿಯಂತೆ ಡುರುಕಿ ಹಾಕುವ, ಬೇಕೆಂದೇ ಕಾಮುಕ, ಅಂಗವಿಕಲರಂತೆ ನಟಿಸುವ ಉಚ್ಛಿಷ್ಟ ಭೋಜನ (ಎಂಜಲು ಊಟ) ಇವೆಲ್ಲ ಪಶುತ್ವವನ್ನು ಸಾಬೀತು ಮಾಡಲಿಕ್ಕಿರಬೇಕು; ಪತಿಯನ್ನು ಮೆಚ್ಚಿಸುವ ಕ್ರಿಯೆಗಳಾಗಿರಬೇಕು. ಜನಸಾಮಾನ್ಯರಲ್ಲಿ ಪ್ರಚಲಿತವಿರುವ ಶೈವ ಮೂಲದ ಮೈಲಾರ ಪಂಥದಲ್ಲೂ ಇಂಥ ಆಚರಣೆಗಳಿವೆ."[೨]

ಪಾಶುಪತರು ಮದುವೆಯಾಗಿ ಸಂಸಾರದ ಸುಖದುಃಖಗಳನ್ನು ಅನುಭವಿಸುವರಾಗಿರುವರು. ಇವರಲ್ಲಿ ಕೆಲವರು ವಿರಕ್ತರಿದ್ದರು. ಇವರು ಕ್ರಮವಾಗಿ ಶಾಸ್ತ್ರೋಕ್ತ ಮಾರ್ಗದಿಂದ ಶಿವದೀಕ್ಷೆಯನ್ನು ಹೊಂದಿ ಪಶುಪತಿ ಎನಿಸಿದ ಈಶ್ವರನ ಜ್ಞಾನ ಗುಣಾದಿಗಳ ಪರಿಚಯ ಪಡೆಯುತ್ತಾರೆ. ಸಂಸಾರದ ಭಾರವನ್ನು ಮಕ್ಕಳಿಗೆ ವಹಿಸಿ ಗೃಹಸ್ಥನಂತೆ ತನ್ನೆಲ್ಲ ಚಿಂತನೆಯನ್ನು ಸ್ವೇಚ್ಛೆಯಿಂದ ಈಶ್ವರನಿಗೆ ಅರ್ಪಿಸಿ ಜ್ಞಾನನಿಷ್ಠರಾಗಿ ಕಡೆಗೆ ಮುಕ್ತಿಯನ್ನು ಹೊಂದುತ್ತಾರೆ. ಪಾಶುಪತರಂತೆ ನೂರೊಂದು ವಿರಕ್ತರು ಸಹ ಮದುವೆಯಾಗಿ ಮಕ್ಕಳನ್ನು ಪಡೆದವರು, ಕೊನೆಗೊಮ್ಮೆ ಸಂಸಾರದಲ್ಲಿ ಜಿಗುಪ್ಸೆ ಹೊಂದಿ ವಿರಕ್ತರಾಗಿ ಸನ್ಯಾಸ ಜೀವನ ನಡೆಸುವರಾಗಿದ್ದರು.

ಆಧ್ಯಾತ್ಮಿಕರು, ಅನುಭಾವಿಗಳಾದ ನೂರೊಂದು ವಿರಕ್ತರು ಅಪಾರ ಪವಾಡ ಪುರುಷರಾಗಿದ್ದರು. ತಮ್ಮ ದಿವ್ಯ ಲೀಲೆಗಳಿಂದ ಜನಸಾಮಾನ್ಯರನ್ನು ಬೆರಗುಗೊಳಿಸಿ ಕೊನೆಗೊಮ್ಮೆ ಎಲ್ಲೋ ಮುಕ್ತಿ ಹೊಂದಿ ಐಕ್ಯರಾಗುವರು.

ಒಟ್ಟಿನಲ್ಲಿ ಪಾಶುಪತ ಹಾಗೂ ವಿರಕ್ತರ ಗುಣಸ್ವಭಾವ, ನಡುವೆ ಕೆಲವೊಂದು ವ್ಯತ್ಯಾಸ ಕಂಡುಬರುವುದು ಸಹಜ. ಪಾಶುಪತರಂತೆ ಈ ವಿರಕ್ತರು ಸ್ಮಶಾನವಾಸಿಗಳಲ್ಲ. ಸುವ್ಯವಸ್ಥಿತವಲ್ಲದ ಗುಡಿಗುಂಡಾರ ಹಾಗೂ ಬೆಟ್ಟ ಗುಡ್ಡಗುಹೆಗಳಲ್ಲಿ ವಾಸಿಸುತ್ತಿದ್ದರು. ಇವರಂತೆ ವಿಕೃತ ಹಾಗೂ ಅತಿಮಾರ್ಗಿಕವಾದ ಆಚರಣಾ ಪದ್ಧತಿ ವಿರಕ್ತರಲ್ಲಿರಲಿಲ್ಲ. ಯೋಗ, ಭೋಗ, ತ್ಯಾಗದ ಕಡೆ ವಿರಕ್ತರಿಗೆ ಆಸಕ್ತಿಯಿತ್ತು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚರಿಸುವ ಇವರಲ್ಲಿ ಲಿಂಗದ ಪರಿಕಲ್ಪನೆಯಿತ್ತು. ಲಿಂಗಧಾರಣೆಯ ಬಗೆಗೆ ಪಾಶುಪತರಲ್ಲಿ ಪ್ರಧಾನ ಸ್ಥಾನವಿರಲಿಲ್ಲ.

೪. ನಾಥಪಂಥ

ಮಧ್ಯಕಾಲೀನ ಸಂದರ್ಭದಲ್ಲಿ ಎಲ್ಲ ಪಂಥಗಳಿಗಿಂತ ಒಂದು ವಿಶಿಷ್ಟ ಪಂಥವಾಗಿ ಜನ್ಮ ತಳೆದ ನಾಥಪಂಥವು, ಯಾರನ್ನು ಮೇಲು, ಕೀಳು ಎನ್ನದೆ ಸರ್ವರನ್ನು ತನ್ನೆಡೆಗೆ ಸೆಳೆಯಿತು.

ಹೀಗಾಗಿ 'ನಾಥ' ಎಂಬ ಪದವು ಹಲವು ಪರಂಪರೆಗಳಲ್ಲಿ ತನ್ನದೆ ಆದ ಅರ್ಥ ವ್ಯಾಪ್ತಿಯನ್ನು ಪಡೆದುಕೊಂಡಿದೆ. ಶೈವ ಪರಂಪರೆಯ ರಾಜಗುಹ್ಯವೆಂಬ ಗ್ರಂಥದಲ್ಲಿ

"ನಕಾರೋ ,ನಾದಿರೂಪ : ಥಕಾರಃ ಸ್ಥಾಪ್ಯತೇಸದಾ
ಭುವನತ್ರಯಮೇವ್ಯೆಕಶ್ರೀ ಗೋರಕ್ಷನ ಮೋಸ್ತುತೇ

ಎಂದು ಹೇಳಿದೆ. 'ನಾ' ಎಂದರೆ ಅನಾದಿರೂಪ 'ಥ' ಎಂದರೆ ಮೂರು ಲೋಕಗಳ ಸ್ಥಿತಿಗೆ ಕಾರಣ. ಅಂದರೆ ಅನಾದಿಯ ಪರಶಿವನಿಗೆ 'ನಾಥ' ಎಂಬ ಶಬ್ದ ಬಂದಿದೆ. ಸಾಮಾನ್ಯವಾಗಿ ಗೋರಕ್ಷನಾಥನ ಅನುಯಾಯಿಗಳನ್ನು ನಾಥಪಂಥದವರು ಎಂದು ಹೇಳಿದೆ. ಇಲ್ಲಿ ನಾಥ ಎಂದರೆ ಗುರು. ಅಂದರೆ ಗುರು ಪರಂಪರೆಯನ್ನು ಅನುಸರಿಸುವವರು, ಇವರನ್ನು ಗೋರಖನಾಥ, ದರ್ಶನಿ, ಕಾನ್‌ಫಟಾ, ಯೋಗಿ, ಅವಧೂತರು ಮೊದಲಾದ ಹೆಸರಿನಿಂದ ಗುರುತಿಸುವರು."[೩೩] ಅಲ್ಲದೆ 'ನಾಥ' ಎಂಬುದಕ್ಕೆ ಮತ್ತೊಂದು ಅರ್ಥದಲ್ಲಿ ರಕ್ಷಕ, ಇಲ್ಲವೆ ಆಶ್ರಯದಾತ ಎಂಬ ಅರ್ಥದಲ್ಲಿ ಅಥರ್ವವೇದ ಹಾಗೂ ತೈತ್ತರೀಯ ಬ್ರಾಹ್ಮಣದಲ್ಲಿ ದೊರೆಯುತ್ತದೆ. ಮಹಾಭಾರತದಲ್ಲಿ 'ಒಡೆಯ' ಇಲ್ಲವೆ 'ಪತಿ' ಎಂಬ ಅರ್ಥದಲ್ಲಿ ಇದು ಬಳಕೆಯಾಗಿದೆ. ಜಾತ್ಯಾತೀತ ಕಲ್ಪನೆಯ ನಾಥದೆಡೆಗೆ ಅಂದು ಮುಸ್ಲಿಂಸರು ಸಹ ಆಕರ್ಷಿತರಾಗಿ ಗೋರಕ್ಷಕನಾಥನ ಶಿಷ್ಯರಾಗಿದ್ದರು. ಹೀಗಾಗಿ 'ಸೂಫಿ' ಪಂಥವು ನಾಥಕ್ಕೆ ತುಂಬ ಹತ್ತಿರವಾಗಿದೆ. ಅಲ್ಲದೆ ಈ ನಾಥ ಪಂಥವನ್ನು ಸಿದ್ಧಮತ, ನಾಥಪಂಥ, ಸಿದ್ಧಪಂಥ, ಸಿದ್ಧಮಾರ್ಗ, ಯೋಗಮಾರ್ಗ, ಯೋಗ ಸಂಪ್ರದಾಯ, ಅವಧೂತ ಮತ, ಗೊರಖಪಂಥ, ಗುರುಮಾರ್ಗ ಇತ್ಯಾದಿ ಹೆಸರುಗಳಿಂದ ಕರೆಯಲಾಗಿದೆ. ಕ್ರಿ.ಶ. ೧೦ ಅಥವಾ ೧೧ನೇ ಶತಮಾನದಲ್ಲಿ ಬೌದ್ಧ ಹಾಗೂ ಶೈವ ಪಂಥಗಳ ಪ್ರಭಾವದ ಅಡಿಯಲ್ಲಿ ಉದಯಿಸಿದ ನಾಥ ಪಂಥದಲ್ಲಿ ಶೈವ ಶಾಖೆಗಳಾದ ಕಾಪಾಲಿಕ, ಕಾಳಮುಖ, ಪಾಶುಪತ, ವಜ್ರಯಾನದ ಕೆಲವೊಂದು ತತ್ವಗಳು ಸಹ ಸಮನ್ವಯಗೊಂಡಿವೆ. ಹೀಗಾಗಿ ಹಲವು ಶಾಖೆಗಳ ಸಮ್ಮಿಲನವೇ ಈ ನಾಥಪಂಥವಾಗಿದೆ.

"ನಾಥವು ಒಂದು ಬಗೆಯಲ್ಲಿ ವಿರಕ್ತಪಂಥ, ಹಳೆಯ ಚಿಂದಿಯಿಂದ ಮಾಡಿದ ಕಂಥೆಯಿಂದ ದೇಹ ಮುಚ್ಚಿಕೊಂಡು, ಹಾಳುದೇಗುಲಗಳಲ್ಲಿ ಗಿರಿಕಂದರಗಳಲ್ಲಿ ವಾಸಮಾಡಿಕೊಂಡು ಇರುವ ಅವಧೂತನು, ಗುರುಪಾದವನ್ನು ಪೂಜಿಸಿಕೊಂಡು ಸುಖವಾಗಿರುತ್ತಾನೆ ಎಂದು ಚರ್ಪಟನಾಥ ಹೇಳುತ್ತಾನೆ. ಮನೆ ಸಂಸಾರಗಳ ಹಂಗಿಲ್ಲದೆ ಚಾರಣ ಮಾಡುವುದು, ಲೌಕಿಕ ಸುಖಗಳಿಗಾಗಿ ಹಂಬಲಿಸದಿರುವುದು ಯೋಗಿಗಳ ಲಕ್ಷಣ."[೩೪]

ಕ್ರಿ.ಶ. ೧೪-೧೫ನೇ ಶತಮಾನದ ಹಂಪಿಯಲ್ಲಿದ್ದ ನೂರೊಂದು ವಿರಕ್ತರು ಈ ನಾಥಯೋಗಿಗಳಿಗೆ ತುಂಬಾ ಹತ್ತಿರವಾದವರು 'ಹಸಿವಾದೊಡೆ ಭಿಕ್ಷಾನ್ನಗಳುಂಟು ತೃಷೆಯಾದೊಡೆ

ತೊರೆಬಾವಿಗಳುಂಟು, ಶಯನಕ್ಕೆ ಹಾಳು ದೇಗುಲಗಳುಂಟು' ಎಂಬ ಅಕ್ಕಮ್ಮದೇವಿಯ ವಚನದಂತೆ ಈ ನೂರೊಂದು ವಿರಕ್ತರು ಬದುಕುತ್ತಿದ್ದ ಪರಿಯನ್ನು ನೋಡಿದರೆ ಇವರು ನಾಥ ಪಂಥದವರಾಗಿ ಕಾಣುವರು. ಏಕೆಂದರೆ ಕಾವ್ಯ, ಪುರಾಣಗಳಲ್ಲಿ ವಿರಕ್ತರ ಉಲ್ಲೇಖವನ್ನು ಗಮನಿಸಿದರೆ ಡಾ. ಕಲಬುರ್ಗಿಯವರು ಹೇಳುವಂತೆ ಇವರು ನಾಥ ಅವಧೂತದವರೇ ಆಗಿರುವರು. ಈ ವಿರಕ್ತರು ಸಹ ನಾಥಪಂಥಿಯರಂತೆ ಬಾಹ್ಯಶುದ್ಧಿಗಿಂತ ಆಂತರಿಕ ಶುದ್ಧಿಗೆ ಹೆಚ್ಚು ಒಲವನ್ನು ತೋರಿದವರು. ಯಾವುದೇ ಧರ್ಮ, ಜಾತಿ, ಮತ, ಪಂಥಗಳೆಂದು ಭೇದ ಭಾವ ತೊರದೆ ಜಾತ್ಯಾತೀತರಾಗಿರುವ ಇವರು ಮಂದ ಬುದ್ಧಿಯರಂತೆ, ಅರೆಮರುಳರಂತೆ ತುಂಡು ಬಟ್ಟೆ ಧರಿಸಿ, ತಲೆತುಂಬ ಉದ್ದುದ ಕೂದಲು ಹಾಗೂ ಜಡೆಗಳಿಂದ ಕೂಡಿದ ಇವರ ಮೈತುಂಬ ಮಲೀನವಾಗಿರುತ್ತಿತ್ತು. ಸದಾ ಸಂಚಾರಿ ಜೀವಿಗಳಾದ ವಿರಕ್ತರು ಮೌನಿಗಳಾಗಿರುವರು. ಆದರೆ ಕೆಲವೊಮ್ಮೆ ಮಾತಾಡಿದರೆ ಮಾತಾಡುವರು ಇಲ್ಲದಿದ್ದರೆ ಸುಮ್ಮನಿರುವರು. "ಅವಧೂತ ಪಂಥವಾದ ನಾಥದ ಮುಖ್ಯ ಲಕ್ಷಣವೆಂದರೆ ವರ್ಣಾಶ್ರಮಕ್ಕೆ ಅತೀತವಾಗಿ ಇರುವುದು, ಈಗಲೂ ಭಾರತದ ನಾಥಪಂಥದ ಸನ್ಯಾಸಿಗಳು ವಿವಿಧ ಜಾತಿಗಳಿಗೆ ಸೇರಿದವರು. ಲಿಂಗದೀಕ್ಷೆ ಪಡೆದವರೆಲ್ಲ ಶರಣರಾಗುವಂತೆ ನಾಥದೀಕ್ಷೆ ಪಡೆದವರೆಲ್ಲ ಒಂದು ಸಮುದಾಯಕ್ಕೆ ಸೇರಿದವರಾಗಿರುತ್ತಾರೆ. ಕರ್ನಾಟಕದ ನಾಥರಲ್ಲಿ ಒಕ್ಕಲಿಗರು, ಬೆಸ್ತರು, ಗಾಣಿಗಶೆಟ್ಟರು ಹಾಗೂ ದಲಿತರಿಗೆ ಜೋಗಿ ದೀಕ್ಷೆ ಕೊಟ್ಟಿದ್ದಾರೆ."[೬೦] ವಿರಕ್ತರಲ್ಲಿ ಸಹ ಅಂದು ಒಕ್ಕಲಿಗರು, ಬೇಡರು, ಗಾಣಿಗರು, ಮಡಿವಾಳರು, ಹೀಗೆ ಹಲವು ಸಮುದಾಯಗಳಿಂದ ಕೂಡಿದವರಿದ್ದರು. ಅಂದು ಹಲವು ಜಾತಿ ಜನಾಂಗದಿಂದ ಬಂದಿರುವ ವಿರಕ್ತರು ನಾಥರಂತೆ ಅಪಾರ ಪವಾಡ ಪುರುಷರಾಗಿದ್ದರು.

"ಹಠಯೋಗದ ತಳಹದಿಯ ಮೇಲೆ ನಿಂತಿರುವ ನಾಥ ಪರಂಪರೆಯಲ್ಲಿ ಬರುವವರೆಲ್ಲಾರು ಉಗ್ರವಾದ ಇಂದ್ರಿಯ ನಿಗ್ರಹದಿಂದ ಭೌತಿಕ ವಿಜಯವನ್ನು ಗಳಿಸಿದ್ದರು"[೬೧] "ವೇದ ವಿರೋಧಿ ನಿಲುವನ್ನು ಸ್ವೀಕರಿಸಿ ಕಠೋರ ಬ್ರಹ್ಮಚರ್ಯೆ, ಸಂಯಮ, ಶಾರೀರಿಕ ಶೌಚ, ಬಾಹ್ಯ ಆಚಾರದಲ್ಲಿ ಅನಾಸಕ್ತಿ, ಮದ್ಯ, ಮಾಂಸ, ಇತ್ಯಾದಿ ಪಂಚಮಕಾರಕ್ಕೆ ಪೂರ್ಣ ಬಹಿಷ್ಕಾರ ಹಾಕಿ ಚಿತ್ತ ಶುದ್ಧಿಗೆ ಮಹತ್ವ ನೀಡಿದ ಪಂಥ ನಾಥಪಂಥ. ಸದಾಚಾರ, ಅಂತರಂಗ ಮತ್ತು ಬಹಿರಂಗ ಶುದ್ಧಿ ಮೊದಲಾದವುಗಳಿಗೆ ಪ್ರಾಶಸ್ತ್ಯವನ್ನು ನೀಡುವುದರ ಮೂಲಕ ಸಮಾಜದಲ್ಲಿ ನೈತಿಕ ನೆಲೆಯನ್ನು ಭದ್ರಪಡಿಸಲು ಪ್ರಯತ್ನಿಸಿತು."[೬೨] ಅಪಾರ ಚಿಂತನಶೀಲರಾದ ನಾಥರು ಲೀಲಾಮೂರ್ತಿಗಳಾಗಿದ್ದರು. ಸಮಾಜದ ಪ್ರಗತಿಗೆ ಒಂದಲ್ಲ ಒಂದು ರೀತಿಯಲ್ಲಿ ಶ್ರಮಿಸಿದವರು. ರೋಗರುಜಿನಗಳನ್ನು ಹಾಗೂ ಕೆಲವೊಂದು ತಾಪತ್ರಯಗಳಿಂದ ಸಾಮಾನ್ಯ ಜನರನ್ನು ಪಾರುಮಾಡುತ್ತಿದ್ದರು. "ಅಲ್ಲದೆ ನಾಥ ಪಂಥದಲ್ಲಿರುವ ಕೆಲವೊಂದು ವಾಮಾಚಾರವಾದಂತಹ ಆಚರಣೆಗಳಿಗೆ ಗೋರಕ್ಷನಾಥನು ನಿಷೇದ ಹೇಳಿದನು. ಹೀಗಾಗಿ ಅನಗತ್ಯವಾಗಿ ದೇಹದಂಡನೆ

ಮಾಡುವುದು, ಸುಖವನ್ನು ಕಠೋರವಾಗಿ ನಿರಾಕರಿಸುವುದು, ಸುಖಲೋಲುಪನಾಗುವುದು, ದೀರ್ಘಕಾಲ ಬದುಕಲು ಮೂಲಿಕೆ ಯಂತ್ರ, ಮಂತ್ರಗಳ ಮೊರೆ ಹೋಗುವುದು, ಮೋಹನ ಸ್ಥಂಭನ ವಶೀಕರಣ ಮಾಡುವುದು, ಭಂಗಿ, ಮಾಂಸ, ಮಧ್ಯ, ಸೇವನೆ ತಪ್ಪೆಂದು ವಿಧಿಸುತ್ತದೆ."[೩೮] ಈ ಹಿನ್ನೆಲೆಯಲ್ಲಿ ನೂರೊಂದು ವಿರಕ್ತರಲ್ಲಿ ಬರುವ 'ತಗರ ಕಾಳಗದ ಪ್ರಭು' ಹೇಟೆಯ ಮರುಳ, ಡೊಂಬರಶಾಂತ, ಬುಡಬುಡಕೆಶಾಂತ, ಬೇಟೆಯಶಾಂತ, ಮಿಡಿಬಿಲ್ಲಶಾಂತ, ಮಡಿವಾಳಶಾಂತ, ಒಡ್ಡಶಾಂತ, ಈ ಹೆಸರುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇವರೆಲ್ಲ ಕೆಳಹಂತದಿಂದ ಬಂದ ದಲಿತ ವರ್ಗದವರಂತೆ ಕಾಣುತ್ತಾರೆ. ಆದರೂ ಇವರಲ್ಲಿ ಪಂಚಮಕಾರದ ಆಚರಣೆಗಳಿಗೆ ನಿಷೇಧವಿದ್ದಂತೆ ತೋರುತ್ತದೆ. "ವಜ್ರಯಾನ, ಸಹಜಯಾನ ಶಾಕ್ತ ಕಾಪಾಲಿಕ, ಆದಿ ವಾಮಾಚಾರಿ ತಂತ್ರ ಸಾಧನೆಯ ವಿರುದ್ಧ ಗೋರಕ್ಷನಾಥನು ಆಂದೋಲನ ಆರಂಭಿಸಿ ಭಾರತೀಯ ಸಾಧನೆಯ ಶುದ್ಧೀಕರಣ ಮಾಡಿದ್ದು ನಿಜವಾಗಿದ್ದರೂ, ನಾಥ ಸಂಪ್ರದಾಯದೊಳಗೆ ಅಂತರ್ಭೂತಗೊಂಡಿದ್ದ ಹಲವು ವಾಮಾಚಾರಿಗಳು ತಮ್ಮ ಪೂರ್ವ ಸಂಸ್ಕಾರವನ್ನು ಮರೆತಿರಲಿಕ್ಕಿಲ್ಲ. ಈ ಸಂಸ್ಕಾರವು ಕ್ರಮೇಣ ನಾಥ ಸಂಪ್ರದಾಯದ ನರ-ನಾಡಿಗಳಲ್ಲಿ ವಿಷದಂತೆ ಹಬ್ಬಿಕೊಳ್ಳತೊಡಗಿತು. ಇಂದು ನಾಥ ಸಂಪ್ರದಾಯದ ಕಕ್ಷೆಯೊಳಗಿನ ಹಲವು ಯೋಗಿ ಶಾಖೆಗಳಲ್ಲಿ ವಾಮಾಚಾರದ ಆಚರಣೆಯಿದೆ. ಮಧ್ಯ, ಮತ್ಸ್ಯ, ಮಾಂಸ, ಮುದ್ರೆ ಮತ್ತು ಮೈಥುನ – ತಾಂತ್ರಿಕ ಸಾಧನೆಯ ಈ ಪಂಚಮಕಾರದ ಆಚರಣೆಯು ನಾಥಯೋಗಿಗಳಲ್ಲಿ ಕೆಲವು ಅಂಶವಾದರೂ ರೂಢಿಗೊಳ್ಳುತ್ತಲೇ ಹೋಯಿತು."[೩೯]

"ಈ ದಾರ್ಶನಿಕ ಪಂಥಗಳಲ್ಲಿ ಗುರು-ಶಿಷ್ಯರ ನಡುವಿನ ಸಂಬಂಧವು ಅನೂನ್ಯವಾದದ್ದು. ಹೀಗಾಗಿ ಗುರು-ಶಿಷ್ಯರಲ್ಲಿ ಯಾರಾದರೂ ತಪ್ಪುವೆಸುಗುವಾಗ ಪರಸ್ಪರರು ಎಚ್ಚರಿಸುವುದು ಈ ಪಂಥಗಳ ವೈಶಿಷ್ಟ್ಯ. ಈ ನಾಥ ಸಂಪ್ರದಾಯದ ಆದಿಪುರುಷನಾದ ಮಚೇಂದ್ರನು, ಗೋರಕ್ಷನಾಥನ ಗುರು. ಒಮ್ಮೆ ಮಚೇಂದ್ರನು ಸ್ತ್ರೀರಾಜ್ಯಕ್ಕೆ ತೆರಳಿ ಅಲ್ಲಿಯೇ ಹಲವು ದಿನಗಳವರೆಗೆ ಯೋಗಿಣಿಯರ ಪ್ರೇಮಪಾಶದಲ್ಲಿ ಸಿಲುಕಿ, ತನ್ನ ವಿದ್ಯೆ, ಸಾಧನೆ ಹಾಗೂ ಶಿಷ್ಯರನ್ನು ಮರೆತುಬಿಡುವನು. ಅಲ್ಲದೆ ತುಂಬ ವರ್ಷಗಳಾದರೂ ಮರಳಿ ಬರುವುದಿಲ್ಲ. ಇದನ್ನು ಮನಗಂಡ ಶಿಷ್ಯ ಗೋರಕ್ಷಕನು ಮದ್ದಾಳೆ ಬಾರಿಸುವನ ವೇಷದಲ್ಲಿ ಸ್ತ್ರೀರಾಜ್ಯಕ್ಕೆ ಹೋಗಿ 'ಚಲ್ ಮಚೇಂದ್ರ ಗೊರಖ ಆಯಾ' ಎಂಬಂರ್ಥದ ಧ್ವನಿ ಹೊರಡುವಂತೆ ಮದ್ದಾಳೆ ಬಾರಿಸುತ್ತಾನೆ. ಆಗ ಮಚೇಂದ್ರನಿಗೆ ಎಚ್ಚರವಾಗಿ ತನ್ನ ಅತಿಭೋಗದಿಂದ ಎಚ್ಚೆತ್ತು ಯೋಗಮಾರ್ಗಕ್ಕೆ ಮರುಳುತ್ತಾನೆ."[೪೦] ಇದೇ ರೀತಿ ಶಿಷ್ಯನಾದವನು ಗುರುವನ್ನು ಕಾಮ, ಮದ, ಮೋಹ, ಮತ್ಸರಗಳಂತಹ ದುರ್ಗುಣಗಳಿಂದ ಹೊರಬರಲು ಪ್ರಯತ್ನಿಸಿ ಸನ್ಮಾರ್ಗಕ್ಕೆ ತರುವ ಸನ್ನಿವೇಶ ನೂರೊಂದು ವಿರಕ್ತರಲ್ಲಿ ಸಹ ಕಂಡುಬರುವುದು. ವಿರಕ್ತರಲ್ಲಿ ಆದಿಯಾದ ಕರಸ್ಥಲದ ನಾಗಿದೇವನು ತನ್ನ ಗುರುವಿನಲ್ಲಿ ಹುದುಗಿದ್ದ ಮಲತ್ರಯ

ನಿರ್ಮೂಲ ಮಾಡಲು ಯತ್ನಿಸುತ್ತಾನೆ. ಹೇಗೆಂದರೆ ಒಂದು ದಿನ ಅವಕಾಶ ದೊರಕಿ ಸಂಸಾರದ ಅನಿತ್ಯತೆ, ಅಸಾರತೆಯನ್ನು ಕುರಿತು ಉಪದೇಶಿಸುತ್ತ ಒಬ್ಬ ಮುನಿಯ ವೃತ್ತಾಂತವನ್ನು ವಿವರಿಸಿದನು. ಒಬ್ಬ ಮುನಿಯು ತನ್ನ ಸತಿಯು ಎಲ್ಲಿ ಜಾರೆಯಾದಾಳೆಂಬ ಭೀತಿಯಿಂದ ಜಟೆಯೊಳಗೆ ಅಡಿಗಿಸಿಕೊಂಡಿದ್ದರೂ, ಆ ನೀರೆ ಇನ್ನೊಬ್ಬನನ್ನು ಉಪಾಯವಾಗಿ ತನ್ನ ಮುಡಿಯೊಳಗೆ ಸೇರಿಸಿಕೊಂಡು ಸುಖಿಸುತ್ತಿದ್ದಳು. ಒಮ್ಮೆ ಉಣಲಿಡುವ ಸಮಯದಲ್ಲಿ ಮೂರು ಕಡೆ ಬಡಿಸಿದುದನ್ನು ವಿಚಾರಿಸಿದಾಗ ನಿಜಾಂಶವು ಹೊರಬಿದ್ದು ಆ ಮುನಿ ಸಂಸಾರವನ್ನು ತ್ಯಜಿಸಿದನು. ಆದುದರಿಂದ ಹೆಣ್ಣು, ಹೊನ್ನು, ಮಣ್ಣುಗಳೆಂಬ ಮಲತ್ರಯಗಳನ್ನು ನೆಚ್ಚಿರುವವರಿಗೆ ಮುಕ್ತಿ ದೊರಕದು ಎಂದನು. ಜ್ಞಾನೋದಯಗೊಂಡ ಶಾಂತಯ್ಯನು ಸಂಸಾರವನ್ನು ತ್ಯಜಿಸಿ ನಾಗಲಿಂಗಯ್ಯನೊಡನೆ ದೇಶ ಪರ್ಯಾಟನಕ್ಕೆ ಹೊರಟನು. "ಶಿಷ್ಯ ತಪ್ಪು ಮಾಡಿದಾಗ ಗುರು ಎಚ್ಚರಿಸುವುದು ಅರ್ಥವಾಗುತ್ತದೆ. ಆದರೆ ಗುರುವೇ ಪಥತಪ್ಪಿದಾಗ ಶಿಷ್ಯ ಬಂದು ಎಚ್ಚರಿಸುವುದು ವಿಶೇಷ ಎನಿಸುತ್ತದೆ. ಈ ಕಥೆ ಅನೇಕ ಅರ್ಥಗಳನ್ನು ಭರಿಸಿಕೊಂಡಿರುವಂತಿದೆ. ಉದಾ: ಗುರು ಪಂಥಗಳಲ್ಲಿ ಅರಿವಿಂಗೆ ಹಿರಿದು ಕಿರಿಗಳಿಲ್ಲ."[೪೧]

ಹಂಪಿ ಸಹ ಒಂದು ಕಾಲದಲ್ಲಿ ನಾಥ ಸಂಪ್ರದಾಯದ ಕೇಂದ್ರವಾಗಿತ್ತು. ಇಲ್ಲಿರುವ ನಾಗನಾಥ ದೇವಾಲಯ, ಮನ್ಮುಖಿ ತೀರ್ಥ ಮತ್ತು ಗುರುಮುಖಿ ತೀರ್ಥಗಳೇ ಸಾಕ್ಷಿಯಾಗಿವೆ. "ಅಲ್ಲದೆ ಹಂಪಿಯ ವಿರೂಪಾಕ್ಷ ಗುಡಿಯಲ್ಲಿಯೂ ನದಿ ದಿಕ್ಕಿನ ಗೋಡೆಯಲ್ಲಿ ಮೀನಾರೂಢನಾದ ಮಚೇಂದ್ರನಾಥನ ಶಿಲ್ಪವಿದೆ. ಹಂಪಿಯ ಮಂಟಪಗಳ ಕಂಬಗಳಲ್ಲಿಯೂ ಈ ಮೀನಾರೂಢ ಯೋಗಿಯ ಶಿಲ್ಪಗಳು ಕಾಣಿಸುತ್ತವೆ. ನದಿ ತೀರದಲ್ಲಿರುವ ಹಂಪೆ ಪ್ರದೇಶದಲ್ಲಿ ಬೆಸ್ತರ ವಾಸವಿದ್ದು, ಮಚೇಂದ್ರನ ಆರಾಧನೆ ಇದ್ದಿರಬಹುದು. ಅಲ್ಲದೆ ವಿಜಯನಗರದಲ್ಲಿದ್ದ ಮಾಧವಾಚಾರ್ಯನ ತಮ್ಮ ಭೋಗನಾಥನು ನಾಥಪಂಥದವನಾಗಿದ್ದನಂತೆ"[೪೨] ಹೀಗಾಗಿ ಸದಾ ಸಚ್ಚಿದಾನಂದ ಸ್ವರೂಪಿಗಳಾದ ವಿರಕ್ತರ ಲಕ್ಷಣ ಹಾಗೂ ಸ್ವಭಾವಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ನಾಥ ಪಂಥದ ಗುಣಸ್ವಭಾವಗಳಿಗೆ ತುಂಬ ಹತ್ತಿರದವರಾಗಿ ಕಂಡುಬರುವರು. "ಸದಾ ಧ್ಯಾನದ ಭಂಗಿಯಲ್ಲಿ ಕೂರುವ ನಾಥರು, ಕಾಲ್ನಡಿಗೆಗೆ ಬಹಳ ಆದ್ಯತೆ ಕೊಟ್ಟಿದ್ದಾರೆ. ನಾಥಮಠಗಳು ದೇಶದ ತುಂಬ ಇರುವುದರಿಂದಲೂ, ಅವು ವಾಹನ ಹೋಗದ ಬೆಟ್ಟಕಣಿವೆಗಳಲ್ಲಿ ಇರುವುದರಿಂದಲೂ ನಡಿಗೆ ಸಂಸ್ಕೃತಿ ಅವರಲ್ಲಿದೆ. ಗುರು ಮುಖೇನ ವಿದ್ಯೆ ಪಡೆಯುವ ಪಂಥಗಳಲ್ಲಿ ಈ ನಡಿಗೆ ಮತ್ತು ಹುಡುಕಾಟ ಅನಿವಾರ್ಯವೆಂದು ಕಾಣುತ್ತದೆ. ಕೆಲವು ನಾಥಯೋಗಿಗಳು ಸದಾ ತಿರುಗುತ್ತಲೆ ಇರುತ್ತಾರೆ."[೪೩] ಹೀಗೆ ಈ ನೂರೊಂದು ವಿರಕ್ತರಿಗೂ ಸಹ ಸ್ಥಿರವಾದ ನೆಲಗಳಿರಲಿಲ್ಲ. ಒಂದೂರಿನಿಂದ ಮತ್ತೊಂದೂರಿಗೆ ಸದಾ ಸಂಚರಿಸುವ ಇವರು ಸಹ ನಡೆಗೆ ಸಂಸ್ಕೃತಿಗೆ ಒಳಪಟ್ಟವರು. ವಿರಕ್ತರು ಅಂದು ನಾಡಿನ ಮೂಲೆ ಮೂಲೆಗಳಿಂದ ತೀರ್ಥ ಕ್ಷೇತ್ರವೆಂದು ಪ್ರಸಿದ್ಧಿ ಪಡೆದ ಹಂಪೆಯ ಕಡೆ ಪ್ರಯಾಣ ಬೆಳೆಸಿದರು.

ಈಗಾಗಲೇ ವಿರಕ್ತರನ್ನು ಕುರಿತು ಆಳವಾದ ಅಧ್ಯಯನ ನಡೆಸಿದ ನಾಡಿನ ಹಿರಿಯ ಸಂಶೋಧಕರಾದ ಡಾ. ಎಂ.ಎಂ.ಕಲಬುರ್ಗಿಯವರು ವಾಮಾಚಾರದ ಶಿವೋಪಾಸಕರಂತಿರುವ ಈ ವಿರಕ್ತರು ಶುದ್ಧ ಆಚಾರದ, ಪರಿಶುದ್ಧ ವಿಚಾರದ ವೀರಶೈವ ವಿರಕ್ತರೆಂದು ಒಪ್ಪದೆ ಇವರನ್ನು ನಾಥಪಂಥಿಯರೆಂದು ಪರಿಗಣಿಸಿದ್ದಾರೆ. ಈ ನಾಥ ಪಂಥವೆ ಮುಂದೆ ಬಂದಂತಹ ಅವಧೂತ ಪರಂಪರೆಯಾಗಿರಬಹುದೆಂದು ಕೆಲವು ವಿದ್ವಾಂಸರ ಅಭಿಮತ. ಹೀಗಾಗಿ ಇದುವರೆಗೆ ನೂರೊಂದು ವಿರಕ್ತರ ಕುರಿತು ಬಂದ ಸಾಹಿತ್ಯ ಕೃತಿಗಳನ್ನು ಹಾಗೂ ಅಧ್ಯಯನಗಳನ್ನು ಸಮೀಕ್ಷಿಸಿದರೆ ಈ ವಿರಕ್ತರು ಅವಧೂತ ಪರಂಪರೆಯಂತೆ ಕಾಣುವ 'ಶಾಂತ' ಪರಂಪರೆಗೆ ಸೇರಿದವರಾಗಿರುವರು. ಅಂದು ೧೪-೧೫ನೇ ಶತಮಾನದ ಸಂದರ್ಭದಲ್ಲಿ ವೀರಶೈವ ಧರ್ಮವನ್ನು ಪರೋಕ್ಷವಾಗಿ ಬೆಂಬಲಿಸಿರಬಹುದು. ಆದರೆ ಹೀಗೆ ಬೆಂಬಲಿಸಿದ ಮಾತ್ರಕ್ಕೆ ವಿರಕ್ತರನ್ನು ಮಗದೊಂದು ಧರ್ಮದ ಜೊತೆ ಎತ್ತಿಕಟ್ಟಲು ಸಾಧ್ಯವಿಲ್ಲ. ಸದಾ ಆಧ್ಯಾತ್ಮವಾದಿಗಳಾದ, ಮೌನಿಗಳಾದ ವಿರಕ್ತರು ಅವಧೂತರಂತೆ ಶಾಂತಸ್ವಭಾವದವರಾಗಿರುವರು. ಅದೇ ಶಾಂತ ಸಂಪ್ರದಾಯವಾಗಿ ಮುನ್ನೆಡೆದ ಅನುಭಾವಿ ಪಂಥವಾಗಿದೆ.

೫. ಆರೂಢರು

ಮಧ್ಯಕಾಲೀನ ಸಂದರ್ಭದಲ್ಲಿ ಉದಯಿಸಿದ ಅವಧೂತ, ಸೂಫಿ ಆರೂಢ ಮುಂತಾದ ಆಧ್ಯಾತ್ಮಿಕ ಪಂಥಗಳು ತಮ್ಮದೆ ಆದ ಒಂದು ಅನನ್ಯತೆಯನ್ನು ಉಳಿಸಿಕೊಂಡು ಬಂದಿವೆ. ಇವುಗಳ ಕೆಲವೊಂದು ಆಚರಣ ಕ್ರಮದಲ್ಲಿ ಭಿನ್ನತೆ ಕಂಡುಬಂದರೂ ನಿಲುವು ಮಾತ್ರ ಒಂದೇ ಆಗಿತ್ತು. ಇದಕ್ಕೆ ಆರೂಢ ಪಂಥ ಸಹ ಹೊರತಾಗಿಲ್ಲ. "ಕ್ರಿ.ಶ. ೧೫ನೇ ಶತಮಾನದಲ್ಲಿ ಆರೂಢ ಪಂಥ ಬೆಳೆಯುತ್ತಿದ್ದುದು ಕಂಡುಬರುತ್ತದೆ. ಆರೂಢ ಪಂಥದ ಬಗ್ಗೆ ಪ್ರತ್ಯೇಕ ಅಧ್ಯಯನಗಳು ನಡೆದಿರುವುದು ಕಮ್ಮಿ. 'ಆರೂಢ' ಶಬ್ದವೇ ಸೂಚಿಸುವ ಹಾಗೆ ಎರುವುದು, ಎತ್ತರದ ಸ್ಥಾನಗಳಿಗೆ ಕ್ರಮಿಸುವುದು ಎಂದರ್ಥ. ಆರೂಢರು ಬಂಧನಗಳಿಂದ ಮುಕ್ತರಾದವರು; ಜೀವನ್ಮುಕ್ತರು ಮೌನಕ್ಕೆ ಹೆಚ್ಚು ಗಮನವಿರಿಸಿದವರು ಎಂದೆಲ್ಲಾ ಹೇಳಲಾಗುತ್ತದೆ. ದೇಹ, ಮನಸ್ಸು, ಆತ್ಮದ ಶುದ್ಧೀಕರಣವೇ ಇವನ ಗುರಿ ಎಂದು ಸ್ಥೂಲವಾಗಿ ಹೇಳಬಹುದು. ಧರ್ಮ, ಜಾತಿ, ಅವುಗಳನ್ನು ಪ್ರತಿನಿಧಿಸುವ ಸಂಕೇತಗಳನ್ನು ನಿರಾಕರಿಸಿದ ಪಂಥವಿದು. ಕೊಡೆಕಲ್ಲು ಬಸವಣ್ಣನ ಗುರು ಸಂಗಮೇಶ್ವರನು ಆರೂಢ ಪಂಥದವನು. ಕೊಡೇಕಲ್ಲು ಬಸವಣ್ಣನೂ ಆರೂಢ ಪಂಥವನ್ನು ಬೆಳೆಸಲು ಹಂಪೆಯ ಪರಿಸರದಿಂದ ಕೋಡೇಕಲ್ಲಿಗೆ ಬಂದು ನೆಲೆ ನಿಂತು ತನ್ನ ಚಟುವಟಿಕೆಗಳನ್ನು ಆರಂಭಿಸಿರಬೇಕು."[೪೪] "ಅಲ್ಲದೆ ಕರ್ನಾಟಕದ ಆರೂಢ ತತ್ವಗಳ ಆದ್ಯ ಪ್ರವರ್ತಕರಾಗಿ ಒಂದು ಅರ್ಥದಲ್ಲಿ ನಿಜಗುಣ ಶಿವಯೋಗಿಗಳು ಕಂಡುಬರುತ್ತಾರೆ. ಅವರು ಬರೆದ ಅನುಭವಸಾರ, ಪಾರಮಾರ್ಥ ಪ್ರಕಾಶಿಕೆ, ಪರಮಾರ್ಥಗೀತೆ, ಕೈವಲ್ಯ ಪದ್ಧತಿ, ವಿವೇಕ ಚಿಂತಾಮಣಿ, ಪರಮಾನು ಭೋದೆ ಇವುಗಳಲ್ಲಿ

ಶಿವಯೋಗದ ಸಾರವನ್ನು ಪ್ರತಿಪಾದನೆ ಮಾಡಲಾಗಿದೆ.”[೪೫] ಮಧ್ಯಕಾಲೀನ ಸಂದರ್ಭದಲ್ಲಿ ಉದಯಿಸಿದ ಸಂತ ಪರಂಪರೆಯಂತೆ ಅಂದು ಹಂಪೆಯಲ್ಲಿ ನೂರೊಂದು ವಿರಕ್ತರ ಪರಂಪರೆ ಉದಯಿಸಿತ್ತು. ಆರೂಢರಂತೆ ಜಾತ್ಯಾತೀತರಾದ ವಿರಕ್ತರು ಎಲ್ಲಾ ಧರ್ಮದ ಚೌಕಟ್ಟನ್ನು ಮೀರಿದವರು. ಇವರಲ್ಲಿ ಹಲವು ಜಾತಿಗಳಿಂದ ಬಂದ ಆಧ್ಯಾತ್ಮಿಕ ಜೀವಿಗಳು ಸೇರಿದ್ದರು. ಅಪಾರ ಪವಾಡ ಪುರುಷರಾದ ಇವರು ಅಂದು ಜನಸಾಮಾನ್ಯರ ಪ್ರೀತಿಗೆ ಪಾತ್ರರಾಗಿದ್ದರು. ಕೆಲವೊಂದು ಅನುಭಾವಿಗಳಂತೆ ಇವರ ಪೂರ್ವಾಶ್ರಮದ ಬಗೆಗೆ ಎಲ್ಲೂ ಸರಿಯಾದ ಮಾಹಿತಿ ದೊರೆಯಲಾರದು. ಎಲ್ಲೊ ಹುಟ್ಟಿ, ಮತ್ತೆಲ್ಲಿಯೋ ಬೆಳೆದು ಇನ್ನೆಲ್ಲಿಯೂ ಸಾವನ್ನಪ್ಪುವ ವಿರಕ್ತರ ವ್ಯಕ್ತಿತ್ವವು ತುಂಬ ವೈಶಿಷ್ಟ್ಯಮಯವಾಗಿದೆ.

“ಈ ಆರೂಢರು ಸಹ ಸಾಮಾನ್ಯವಾಗಿ ತಮ್ಮ ಪಂಥೀಯ, ಪ್ರಾದೇಶಿಕ ಹಾಗೂ ಪೂರ್ವಾಶ್ರಮದ ಮೂಲಗಳನ್ನು ಹೇಳಿಕೊಳ್ಳುವುದಿಲ್ಲ. ಸಿದ್ಧಾರೂಢ, ಮುಕುಂದೂರುಸ್ವಾಮಿ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಇವರ ಬಗ್ಗೆ ಹೆಚ್ಚಿನ ಮಾಹಿತಿ ಸಿಗುವುದಿಲ್ಲ. ಸಂಸಾರದಲ್ಲಿ ಯಾವುದೋ ಆಘಾತಕ್ಕೆ ಒಳಗಾಗಿ ವಿರಕ್ತಿಯಿಂದ ಸನ್ಯಾಸಿಗಳಾದವರು. ಕೆಲವರು ತಮ್ಮ ಹುಚ್ಚು ಎನಿಸುವ ವರ್ತನೆಗಳಿಂದಲೂ ಜನಪ್ರಿಯರಾಗಿದ್ದರು. ಸ್ವತಂತ್ರ ಪ್ರವೃತ್ತಿಯವರೂ, ಅಹಂಕಾರಿಗಳೂ ಆದ ಇವರು ಒಂದೆಡೆ ನೆಲೆ ನಿಲ್ಲುವ ಮುಂಚೆ ದೊಡ್ಡ ತಿರುಗಾಟ ಮಾಡಿದವರು”[೪೬] ಸದಾ ಸಂಚಾರಿಗಳಾದ ವಿರಕ್ತರಿಗೆ ಅಂದು ಸ್ಥಿರವಾದ ನೆಲೆಗಳಿರಲಿಲ್ಲ. ತಮ್ಮ ಮನಸ್ಸಿಗೆ ಎಲ್ಲಿ ನೆಮ್ಮದಿ ದೊರೆಯುತ್ತದೆಯೋ ಅಲ್ಲಿ ಕೆಲವು ದಿನಗಳವರೆಗೆ ಇದ್ದು ನಂತರ ಮತ್ತೆಲ್ಲಿಯೋ ಸಂಚಾರಿಸುವರಾಗಿರುವರು. ಅರೆಮರುಳರಂತಿರುವ ಇವರಿಗೆ ಯೋಗ–ವಿಯೋಗಗಳ, ಸುಖ–ದುಃಖಗಳ ಯಾವುದೇ ಕಲ್ಪನೆಗಳಿರುವುದಿಲ್ಲ. “ಈ ಶರಣರು, ಸೂಫಿಗಳು, ಸಂತರು, ಆರೂಢರೂ, ಅವಧೂತರುಗಳ ಮಾರ್ಗದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಕಂಡುಬಂದರೂ, ಅವರುಗಳ ಗುರಿಮಾತ್ರ ಒಂದೇ ಆಗಿದೆ. ಈ ಎಲ್ಲಾ ಅನುಭಾವಿ ಪಂಥಗಳು ಉದಯಿಸಿದ ಕಾಲ, ದೇಶ, ಭಾಷೆ, ನೆಲ, ಪರಿಸರ, ಪರಿಸ್ಥಿತಿಗಳು ಬೇರೆ ಬೇರೆಯಾಗಿ ಕಂಡುಬಂದರೂ ಅಂತರಂಗದ ನಿಲುವು ನಿರ್ಧಾರಗಳು ಒಂದೇ ರೀತಿಯಲ್ಲಿವೆ. ಇವರ ಚಿಂತನೆ, ಅನುಭವ ಅನುಭಾವಗಳಲ್ಲಿರುವ ಸಾಮ್ಯತೆಗಳು ಆಶ್ಚರ್ಯ ಮೂಡಿಸುವುದರ ಜೊತೆಗೆ, ಚಿಂತನೆಗೆ ಇಂಬು ಕೊಡುತ್ತದೆ.”[೪೭]

“ಕರ್ನಾಟಕದಲ್ಲಿ ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಪ್ರಭಾವಿ ಸಂತರಾದ ಶ್ರೀ ಸಿದ್ಧಾರೂಢರು ಕಂಡುಬಂದರೂ ಇವರಿಗಿಂತ ಪೂರ್ವದಲ್ಲಿ ದಕ್ಷಿಣ ಹಿಂದೂಸ್ಥಾನದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಈ ಆರೂಢ ಪರಂಪರೆ ಬೆಳೆದು ಬಂದಿರುವುದು ತಿಳಿದುಬರುತ್ತದೆ. ಜಾತಿ, ಮತ, ಲಿಂಗಭೇದಗಳನ್ನು ನಿರಾಕರಿಸುವ ಈ ಪರಂಪರೆ ಪಾರಮಾರ್ಥಿಕ ಔನತ್ಯ, ಅನುಭಾವದ ಪರಾಕಾಷ್ಟತೆಯಿಂದ ಬೆಳಗಿದ ಸಂಪ್ರದಾಯ ಇದಾಗಿದೆ. ಆರೂಢರು ಯಾವ ಜಾತಿ ಮತ

ಪಂಥದ ಹೆಸರನ್ನೇ ಎತ್ತದೆ ಕೇವಲ ಜೀವನ ಉದ್ಧಾರವಾಗುವ ಮಾರ್ಗವನ್ನೇ ಬೋಧಿಸುತ್ತಾರೆ ಎಂಬುದು ಪ್ರತೀತಿ. ಅದುವರೆಗೂ ಶರಣಸತಿ ಲಿಂಗಪತಿಯೆಂದು ನಂಬಿಕೊಂಡು ಬಂದಿದ್ದ ವೀರಶೈವ ಧರ್ಮಕ್ಕೆ ವ್ಯತಿರಿಕ್ತ ಎನ್ನುವಂತೆ ಆರೂಢರು ಅಂಗದ ಮೇಲೆ ಲಿಂಗವಿಲ್ಲದೇ ಹೊರಗಿನ ಯಾವುದೇ ಪ್ರತೀಕ, ಪ್ರತಿಮೆ, ಸಂಜ್ಞೆ ಸಂಕೇತಗಳ ಅಭಿಮಾನ ಆರಾಧನೆ ಮಾಡದೇ ಇರುವುದು ಇವರ ವೈಶಿಷ್ಟ್ಯವಾಗಿದೆ."[೬೮] ಹಾಗೆ ವಿರಕ್ತರು ಸಹ ಆತ್ಮಜ್ಞಾನಿಗಳು, ಮೌನಿಗಳು, ಪವಾಡ ಪುರುಷರಾಗಿ ಅಂದು ಸಮಾಜದಲ್ಲಿ ಸಾಧಿಸಿದ ಸಿದ್ಧಿ-ಸಾಧನೆಗಳು ಅಚ್ಚರಿವುಂಟು ಮಾಡುವಂತಿತ್ತು. ಪರೋಕ್ಷವಾಗಿ ಸಮಾಜದ ಏಳ್ಗೆಗಾಗಿ ಶ್ರಮಿಸಿದ ವಿರಕ್ತರು ಅಂದು ದೈವ ಸಂಭೂತರಾಗಿ ಜನರ ಮನಸ್ಸಿನಲ್ಲಿ ಭದ್ರವಾಗಿ ನೆಲೆಯೂರಿದರು.

"ಆರೂಢರಿಗೆ ಆತ್ಮ-ಪರಮಾತ್ಮರ ಹೊರತು ಇವರಿಗೆ ಸತ್ಯವಾದುದು, ನಿತ್ಯವಾದುದು ಯಾವುದು ಇಲ್ಲ. ಪ್ರತಿಯೊಬ್ಬನಿಗೂ ಅರಿವೂ ಇದೆ, ಆತ್ಮಲಿಂಗವಿದೆ. ಇವರ ಪ್ರಕಾರ ಜ್ಞಾನವೇ ಸಹಜಲಿಂಗ, ಆತ್ಮಲಿಂಗದಿಂದಲೇ ಜಗತ್ತಿನ ವ್ಯವಹಾರ ನಡೆದಿದೆ ಎಂಬುದು ಇವರ ಪ್ರಬಲವಾದ ಸಿದ್ಧಾಂತ; ಈ ಕಾರಣವಾಗಿ ಇವರ ಶೈವೋಪಾಸನೆ ಆತ್ಮಮುಖೇನ ಅನುಷ್ಠಾನಕ್ಕೆ ಬಂದಿತೆನ್ನಬಹುದು. ಒಟ್ಟಿನಲ್ಲಿ ಅಂಗದ ಅಭಿಮಾನ, ಅಂಗಭಾವದ ಅಭಿಮಾನ, ಎಲ್ಲಿಯವರೆಗೂ ಇರುತ್ತದೆಯೋ ಅದನ್ನು ಲಿಂಗಭಾವಿಯನ್ನಾಗಿ ಮಾಡುವ ತನಕ ಅಂಗದ ಮೇಲೆ ಲಿಂಗವಿರಬೇಕು. ಅಂಗವೇ ಲಿಂಗವಾದ ಬಳಿಕ ಬೇರೆ ಲಿಂಗದ ಅಗತ್ಯ ಏನು ಎಂಬುದು ಆರೂಢರ ತತ್ವವಾಗಿದೆ."[೬೯] ಸ್ಥಾವರ ಲಿಂಗದ ಪೂಜೆಯನ್ನು ನಿರಾಕರಿಸಿದ ಆರೂಢರು ತಮ್ಮ ಆತ್ಮವನ್ನೇ, ದೇಹವನ್ನೇ ಲಿಂಗವೆಂದು ಪರಿಭಾವಿಸುವರು. ಈ ಲೋಕದ ವ್ಯವಹಾರವೆಲ್ಲ ನಡೆಯಲು ಈ ದೇಹದಿಂದಲೇ ಎಂಬ ಕಾರಣಕ್ಕಾಗಿ ಇವರು ಆಂತರಿಕ ಶಕ್ತಿಗೆ ಹೆಚ್ಚಿನ ಒಲವನ್ನು ನೀಡಿದರು. "ಆರೂಢನು ಬ್ರಹ್ಮವೇ ತಾನಾಗಿದ್ದು, ಆತನ ಜ್ಞಾನದಲ್ಲಿ ಈ ಜಗತ್ತು ಕ್ಷಣಿಕವಾದುದು, ಮಿಥ್ಯೆಯೆಂದು ತಿಳಿದು, ಯಾವ ವಸ್ತುವಿನಲ್ಲಿಯೂ ಭ್ರಾಂತಿಯೆಂಬುದಿಲ್ಲದೆ ಇರುತ್ತಾನೆ. ಇಂಥ ಸ್ವಭಾವವುಳ್ಳವನನ್ನು ಆರೂಢನೆಂದೂ, ಅವಧೂತನೆಂದು ಹಾಗೂ ವಿರಕ್ತನೆಂದೂ ಜೀವನ್ಮುಕ್ತನೆಂದು ಕರೆಯುತ್ತಾರೆ."[೭೦] ಈ ಯೌಗಿಕ ಪಂಥಗಳಲ್ಲಿ ಮೇಲು ಕೀಳೆಂಬ ತಾರತಮ್ಯ ಇರುವುದಿಲ್ಲ. ಇವರು ಸರ್ವವನ್ನು ತೊರೆದವರಾಗಿರುವರು. ಲೌಕಿಕ ವ್ಯವಹಾರದಿಂದ ದೂರವಿದ್ದ ಇವರು ಅಲೌಕಿಕ ನೆಲೆಯುಳ್ಳವರು. ತಮ್ಮ ತಮ್ಮ ಗುರುಗಳನ್ನು ಸ್ವತಃ ತಾವೇ ಹುಡುಕಿಕೊಳ್ಳುತ್ತಿದ್ದರು. "ಹೀಗಾಗಿ ಗುರು-ಶಿಷ್ಯ ತನವನ್ನು ರೂಢಿಸಿಕೊಂಡ ಈ ಪಂಥವು ಬಹಿರಂಗವಾಗಿ ವ್ಯಾಪಕವಾಗಿ ಕಾಣುವ ಬದಲು ಅಂತರ್ಗತವಾದ ನೆಲೆಯಲ್ಲಿ ಅಂತರಗಾಮಿಯಾಗಿಯೇ ವ್ಯಾಪಕವಾಗಿ ಬೆಳೆದವು. ಕೊಡೇಕಲ್ಲು ಬಸವಣ್ಣನ ಗುರು ಸಂಗಮನಾಥ (ಜಲದುರ್ಗ), ಸಂಗಮನಾಥನ ಗುರು ಪರಮಾನಂದ ಪ್ರಭು (ಅಲ್ಲಮ ಪ್ರಭುವಿನ ಅವತಾರವೆಂದು ಕರೆಸಿಕೊಂಡಿರುವವನು) ಇವರೆಲ್ಲ ಆರೂಢ ಪಂಥಕ್ಕೆ

ಸೇರಿದವರು”[೫೧] ಈ ಗುರು-ಶಿಷ್ಯ ಪಂಥಗಳ ಪರಂಪರೆಯಲ್ಲಿ ಅರಿವಿಂಗೆ ಹಿರಿ-ಕಿರಿಗಳಿಲ್ಲ. ಒಬ್ಬರು ಮತ್ತೊಬ್ಬರಿಗೆ ಪರಸ್ಪರ ಅರ್ಥೈಸಿ ಮುಕ್ತಿಯ ಕಡೆ ಮುನ್ನಡೆಯುವರು. ನೂರೊಂದು ವಿರಕ್ತರಲ್ಲಿ ಆದಿಯಾದ ಕರಸ್ಥಲದ ನಾಗಿದೇವನು ಮೊದಲಿಗೆ ಅತ್ಯಂತ ವಿಷಯಾಸಕ್ತನಾಗಿದ್ದನು. ಒಮ್ಮೆ ಪರಸ್ತ್ರೀ ಮನೆಯನ್ನು ಪ್ರವೇಶಿಸಿ ಲಜ್ಜಿತನಾಗಿ ಸಂಸಾರವನ್ನು ತ್ಯಜಿಸಿ ಮೌನಿಯಾಗಿ ವಿರಾಗಿಯಾಗಿ ಕರದಲ್ಲಿ ಇಷ್ಟಲಿಂಗವನ್ನು ಧರಿಸಿಕೊಂಡು ಕರಸ್ಥಲದ ವೀರಣ್ಣೊಡೆಯನಲ್ಲಿಗೆ ಬಂದು ಗುರುವಿನ ಅನುಗ್ರಹ ಪಡೆಯುವನು. ಮುಂದೆ ತನ್ನ ಗುರುವಿನಲ್ಲಿ ಹುದುಗಿದ್ದ ಮಲತ್ರಯವನ್ನು ನಿರ್ಮೂಲನ ಮಾಡಲು ಪ್ರಯತ್ನಿಸಿ ಸಫಲನಾಗುವನು.

ಕ್ರಿ.ಶ. ೧೪ ಅಥವಾ ೧೫ನೆಯ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ಗುರುಪಂಥಗಳ ಲಕ್ಷಣಗಳ ಬಗೆಗೆ ಹಲವು ವಿದ್ವಾಂಸರು ಚರ್ಚಿಸಿರುವರು. ಈ ಯೌಗಿಕ ಪಂಥಗಳ ವೈಶಿಷ್ಟ್ಯತೆ ಈ ಕೆಳಗಿನಂತಿವೆ.

೧. ತನ್ನ ತಾನರಿಯುವ ತತ್ವ

೨. ಸನ್ಯಾಸಕ್ಕೆ ಆದ್ಯತೆ ಕೊಡುವುದು.

೩. ಗುರುವಿಗೆ ಮಹತ್ವ ಕೊಡುವುದು.

೪. ಗುಪ್ತ ವಿದ್ಯೆಯನ್ನು ಕಾಪಾಡುವುದು.

೫. ಬೆಡಗಿನ ಭಾಷೆಯಲ್ಲಿ ತಮ್ಮ ಅನುಭವ ಹೇಳಿಕೊಳ್ಳುವುದು.

೬. ಜಾತಿ ಹಾಗೂ ವರ್ಣ ವ್ಯವಸ್ಥೆಯನ್ನು ಒಪ್ಪದಿರುವುದು.

೭. ಗುಡಿ ಸಂಸ್ಕೃತಿ ಹಾಗೂ ಮೂರ್ತಿ ಪೂಜೆ ಇಲ್ಲದಿರುವುದು.

೮. ವೇದ, ಆಗಮ ಹಾಗೂ ಶಾಸ್ತ್ರಗಳನ್ನು ಮಾನ್ಯ ನೀಡುವುದು.

೯. ಯಜ್ಞ ಸಂಸ್ಕೃತಿಯನ್ನು ವಿರೋಧಿಸುವುದು.

ಈ ಹಿನ್ನೆಲೆಯಲ್ಲಿ ಸಿದ್ಧರು, ಅವಧೂತರೂ, ಆರೂಢರು ಹಾಗೂ ವಿರಕ್ತರು ಒಂದೇ ಚಿಂತನೆಯ ನೆಲೆಗಟ್ಟಿನಲ್ಲಿ ನಿಲ್ಲುವರಾಗಿರುವರು. ಇವರ ಬಾಹ್ಯ ಆಚರಣೆಯಲ್ಲಿ ಭಿನ್ನತೆ ಕಂಡುಬಂದರೂ ನಿಲುವು ಮಾತ್ರ ಒಂದೇ ಆಗಿದೆ. "ಗುರು ಭಜನೆ, ಸುಕರ್ಮ ವೃತ್ತಿ, ಹರನಪೂಜೆ, ಶರಣಸೇವೆ ಇವು ತನುವಿನಲ್ಲಿ ನೆಲೆಸಬೇಕೆಂಬುದು ಮತ್ತು ಶಮ, ವಿವೇಕ, ಆತ್ಮವಿದ್ಯೆ, ದಯೆ, ದಮೆ, ವಿರಕ್ತಿ ಯೋಗಗಳಿಂದ ಮನವನ್ನು ಶಿವಪರವಾಗಿಸುವ ಪ್ರಯತ್ನವನ್ನು ಆರೂಢರು ಸೂಚಿಸುತ್ತಾರೆ. ಮುಕ್ತಿಯನ್ನು ಬಯಸಿ ಹಂಬಲಿಸುವ ಮನುಜರಿಗೆ ಕರ್ಮವೆಂಬ ಜಾಲದೊಳು ಸಿಲುಕದೇ ಜ್ಞಾನವನ್ನೇ ನಂಬಬೇಕೆಂಬ ಸರ್ವಕಾಲಿಕ ಸತ್ಯವನ್ನು ಇವರು ಸಾರುತ್ತಾರೆ. ಜ್ಞಾನ ಮಾರ್ಗದ ಪ್ರತಿಪಾದನೆಯನ್ನು ಪ್ರಧಾನವಾಗಿ ಮಾಡುವ ಆರೂಢ ಪರಂಪರೆ

ದೇಹವನ್ನೇ ದೂರ ನಿಲ್ಲಿಸಿ ನೋಡುವ ಸಾಕ್ಷಿ ಪ್ರಜ್ಞೆಯ ರೂಪದಲ್ಲಿ ಶಿವನ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ."[೨೬] ಅಂದು ಹಂಪೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಯೌಗಿಕ ಪಂಥಗಳಂತಹ ರಹಸ್ಯ ಪಂಥಗಳು ನೆಲೆವೂರಿದ್ದವು. ಅವಧೂತರು, ಆರೂಢರು, ನಾಥರು, ಯೋಗಿಗಳು ಈ ಪ್ರದೇಶದಲ್ಲಿ ತಮ್ಮ ಕೈಂಕಾರ್ಯ ಗೈದ ಬಗೆಗೆ ಉಲ್ಲೇಖಗಳಿವೆ.

ಪ್ರಾಪಂಚಿಕ ಅಥವಾ ಲೌಕಿಕ ವಿಚಾರಗಳಿಗೆ ಓಗೊಡದೆ ಅಂತರಾತ್ಮದ ಒಳಧ್ವನಿಗೆ ವಿರಕ್ತರು ಓಗೊಡುತ್ತಿದ್ದರು. ತಾವು ಸಾಧಿಸಬೇಕಾದ ಸಾಧನೆಯಗೋಸ್ಕರ ಸದಾ ಮೌನಿಗಳಾಗುತ್ತಿದ್ದರು. ಲೌಕಿಕ ವಿಚಾರಶಕ್ತಿಗೆ ಒಳಗಾದರೂ ಇವರು ಪರೋಕ್ಷವಾಗಿ ಸಮಾಜದ ಅಭಿವೃದ್ಧಿಗೆ ಶ್ರಮಿಸಿದವರು. ಹಣ, ಅಧಿಕಾರ, ಅಂತಸ್ತು, ಸಂಪತ್ತನ್ನು ಖಂಡಿಸಿದವರು. ಈ ಹಿನ್ನೆಲೆಯಲ್ಲಿ ಅಂದು ಹಂಪೆಯಲ್ಲಿ ವಿರಕ್ತರಂತೆ ಅವಧೂತರು, ಆರೂಢರಂತಹ ಯೌಗಿಕ ಪಂಥಗಳು ನೆಲೆವೂರಿ ತಮ್ಮ ಕಾರ್ಯ ಚಟುವಟಿಕೆಯನ್ನು ನಡೆಸಿದವು. ಹೀಗಾಗಿ ಈ ಎಲ್ಲಾ ಪಂಥಗಳಲ್ಲಿ ಪರಸ್ಪರ ಸಾಮ್ಯತೆಯ ಅಂಶಗಳು ಗೋಚರಿಸುತ್ತವೆ.

೬. ಅವಧೂತ

'ಅವಧೂತ' ಎಂಬ ಪದವು ಪ್ರಾಚೀನ ಕಾಲದಿಂದಲೂ ವೇದ, ಉಪನಿಷತ್ತುಗಳಲ್ಲಿ ಬಳಕೆಯಾಗಿದೆ. ಅಲ್ಲದೆ ಪಂಪನಿಂದ ಹಿಡಿದು ಇಂದಿನವರೆಗೆ ವಿಶಿಷ್ಟ ರೀತಿಯಲ್ಲಿ ಬಳಕೆಯಾಗುತ್ತಲೇ ಬಂದಿದೆ. ಆದರೆ ಇದರ ಪ್ರಾಚೀನತೆಗೆ ಹಲವು ವರ್ಷಗಳ ಇತಿಹಾಸವಿದ್ದರೂ, ಸಾಹಿತ್ಯದ ಮೂಲಕ ಅದು ಹೆಚ್ಚು ಜನಪ್ರಿಯಗೊಂಡದ್ದು ೧೭ ಮತ್ತು ೧೮ನೆಯ ಶತಮಾನಗಳಲ್ಲಿ. "ಮಧ್ಯಕಾಲದ ಸಂದರ್ಭದಲ್ಲಿ ಶರಣ, ಸೂಫಿ ಪಂಥಗಳಂತೆ ಈ ಅವಧೂತ ಪಂಥವು ಅಂದು ಬೆಳೆದು ಬಂದಿರಲು ಸಾಧ್ಯತೆಗಳಿವೆ. ಹೀಗಾಗಿ 'ಅವಧೂತ' ಎಂದರೆ ಸಂಸಾರ ಬಂಧನದಿಂದ ದೂರವಾಗಿ ಆತ್ಮನಲ್ಲಿಯೇ ವಿಹರಿಸುವವನು, ವರ್ಣಾಶ್ರಮಗಳನ್ನು ಮೀರಿದವನು, ಗುರುವಿನ ಮೂಲಕ ಸದ್ಗತಿಯನ್ನು ಹೊಂದುವವನು ಎಂಬಿತ್ಯಾದಿ ಅರ್ಥಗಳಿವೆ."[೨೭] "ಮತ್ತೊಂದು ಅರ್ಥದಲ್ಲಿ 'ಅವಧೂತ' ಎಂದರೆ ಎಲ್ಲವನ್ನು ತೊಳೆದುಕೊಂಡವನು, ಎಲ್ಲವನ್ನು ತೊರೆದವನು ಎಂದು ಇದರ ಸಹಜಾರ್ಥ. ನಾವು ಈ ಲೋಕವನ್ನು ನೋಡುತ್ತಿದ್ದೇವೆ. ಇಲ್ಲಿ ಏಕವೂ ಉಂಟು; ಅನೇಕವೂ ಉಂಟು, ಏಕದ ಅನುಭವಕ್ಕಿಂತ ಅನೇಕದ ಅನುಭವ ಸುಲಭ. ಭೇದವೂ ಉಂಟು ಅಭೇದವೂ ಉಂಟು. ನಮಗೆ ಭೇದಜ್ಞಾನ ಆಗುವಷ್ಟು ಮಟ್ಟಿಗೆ ಅಭೇದಜ್ಞಾನ ಅಷ್ಟು ಸುಲಭವಲ್ಲ. ನಮ್ಮ ಕಣ್ಣಮುಂದೆ ಭೇದಗಳು ಅಸಂಖ್ಯಾವಾಗಿವೆ. ನಾವು ಭೇದಭಾವಗಳ ಜತೆಗೆ ಬದುಕಿದ್ದೇವೆ. ಇಂತಹ ಭೇದಗಳನ್ನು ಬಿಟ್ಟವನನ್ನೇ ಅವಧೂತ ಎಂದು ಕರೆಯುತ್ತೇವೆ. ಜಾತಿ-ವರ್ಗ, ಮೇಲು-ಕೀಳು, ನೀಚ-ಉಚ್ಚ, ನಾನು-ನೀನು ಇಂಥವೆಲ್ಲ ಭೇದಗಳೇ ಇಲ್ಲದವನು ಯಾರೋ ಅವನು ಅವಧೂತ."[೨೮]

"ವಸಂತವತ್ ಲೋಕಹಿತಂ ಚರಂತಃ ಅಂದರೆ ವಸಂತ ಮಾಸದಲ್ಲಿ ಹೂಗಳು ಅರಳಿ ಎಲೆಗಳು ಚಿಗುರಿ, ಭೂಮಿ ಹಸುರಾಗಿ ಲೋಕವೇ ಸ್ವರ್ಗದಾಗಮನ ಆಗಿರುವಂತೆ ಇರುತ್ತದಲ್ಲ ಹಾಗೆ ಅವಧೂತನು ಲೋಕಹಿತಕ್ಕಾಗಿಯೇ ಸದಾ ಇರುತ್ತಾನೆ."[೫೫]

ಅವಧೂತರು, ಸೂಫಿಗಳು, ವಿರಕ್ತರು, ಮೊದಲಾದ ಸಂತ ಪರಂಪರೆಗಳು ಸಾಂಸ್ಥಿಕ ಧರ್ಮಗಳಂತಿರದೆ, ಅವು ಎಲ್ಲಾ ಧರ್ಮಗಳ ಚೌಕಟ್ಟನ್ನು ಮೀರಿದ ಪಂಥಗಳಾಗಿ ಮಾರ್ಪಟ್ಟಿವೆ. ಇವರು ಲೌಕಿಕ ಪ್ರಪಂಚದಿಂದ ದೂರವಿದ್ದು ಯೋಗದೃಷ್ಟಿ, ಮೌನವ್ರತ, ಮಾನಸಪೂಜೆ, ಅಷ್ಟಮಹಾಸಿದ್ಧಿ ಸಾಧಕರಾದ ಅವಧೂತರು ಇತರೆ ಸಂತ ಪರಂಪರೆಗಿಂತ ಭಿನ್ನವಾಗಿ ಕಂಡುಬರುವರು. ಪ್ರಾರಂಭದಲ್ಲಿ ಇವರ ಹುಚ್ಚು ವರ್ತನೆ, ಮಾಸಿದ ದೇಹದಿಂದ ಜನ ಇವರನ್ನು ದೂರಾನೇ ಇಟ್ಟಿದ್ದರು. ಕೊನೆಗೆ ಇವರ ಅಪಾರ ಸಾಮರ್ಥ್ಯವನ್ನು ಮನಗಂಡ ಮೇಲೆ ಇವರನ್ನು ದೈವದ ಸ್ವರೂಪದಲ್ಲಿ ಕಾಣಲಾರಂಭಿಸಿದರು.

ಊರಿಂದ ಊರಿಗೆ ಸಂಚಾರಿಸುತ್ತಿದ್ದ ಅವಧೂತರನ್ನು ಕೊನೆಗೆ ಎಲ್ಲಿಯೂ ಹೋಗದಂತೆ ಊರಲ್ಲೇ ಮಠಮಾನ್ಯಗಳನ್ನು ಕಟ್ಟಿಸಿ ಅಲ್ಲಿಯೇ ಉಳಿಯುವಂತೆ ಮಾಡಿದರು. ಇವರಿಗೆ ಹಲವು ರೀತಿಯ ಪೂಜೆ ಮಾಡಿ ದತ್ತಿದಾನಗಳನ್ನು ನೀಡಿ ಇವರ ಕೀರ್ತಿಯನ್ನು ನಾಡಿನಾದ್ಯಾಂತ ಹಬ್ಬಿಸಿದರು. ಇವರು ತಮ್ಮ ಅಪಾರವಾದ ಪವಾಡ ಸಾದೃಶ್ಯಗಳಿಂದ ತಮ್ಮ ಮೂಲ ಹೆಸರನ್ನು ಕಳೆದುಕೊಂಡು ಜನರಿಂದ ತಾತ, ಅಜ್ಜ, ಅಪ್ಪ ಅಥವಾ ಕೆಲವೊಮ್ಮೆ ಆ ಊರಿನ ಹೆಸರಿನಿಂದಲೇ ಸಂಬೋಧಿಸಿಕೊಳ್ಳುವರು. ಹೀಗೆ ಮೊದಲು ಅವಧೂತರನ್ನು ಕಡೆಗಣಿಸಿದ ಜನಸಾಮಾನ್ಯರು ಕೊನೆಗೆ ಅವರ ಅಪಾರಶಕ್ತಿಯನ್ನು ಮನಗಂಡು ತಲೆಬಾಗಿ ಪೂಜಿಸಲಾರಂಭಿಸಿದರು. ತನ್ನೆಲ್ಲಾ ಬಂಧು-ಬಾಂಧವರನ್ನು ಆಪ್ತರೆಲ್ಲಾರನ್ನು ತೊರೆದ ಅವಧೂತರು ಹುಚ್ಚರಂತೆ, ಅರೆಮರುಳರಂತೆ ಸದಾ ಸಂಚರಿಸುತ್ತಿದ್ದರು. ಸ್ಥಿರವಾದ ನೆಲೆಗಳಿಲ್ಲದ ಇವರಿಗೆ ಹಾಳುಬಿದ್ದ ಗುಡಿಗಂಡಾರಗಳೇ ಇವರ ನೆಮ್ಮದಿಯ ಕೇಂದ್ರಗಳಾಗಿದ್ದವು. ಶುದ್ಧ ಆಚಾರದ ಪರಿಶುದ್ಧ ಮನಸ್ಸಿನವರಾದ ಇವರು ಜನರ ಕಷ್ಟ ನಷ್ಟಗಳಲ್ಲಿ ಭಾಗಿಯಾಗಿ ಅವರ ಶ್ರಯೋಭಿವೃದ್ಧಿಗೆ ಪರೋಕ್ಷವಾಗಿ ಶ್ರಮಿಸಿದ್ದಾರೆ.

ಈ ಅವಧೂತರ ಚರಿತ್ರೆಯನ್ನು ಕೆಲವು ವಿದ್ವಾಂಸರು ತುಂಬ ಪ್ರಾಚೀನ ಕಾಲಕ್ಕೆ ಕೊಂಡೊಯ್ಯುವರು. ಆದರೆ ಇವರು ಉದಯಿಸಿದ್ದು ಸುಮಾರು ೧೨ನೇ ಶತಮಾನದ ಆಸುಪಾಸಿನಲ್ಲಿ. ಅಂದರೆ ಮಧ್ಯಕಾಲಿನ ಸಂದರ್ಭದಲ್ಲಿ ಉನ್ನತ ವರ್ಗಗಳೆಲ್ಲ ಶೈವ, ವೈಷ್ಣವ, ವೀರಶೈವಗಳಂತಹ ಸಾಂಸ್ಥಿಕ ಧರ್ಮಗಳ ಕಡೆ ವಾಲಿದರು. ಆಗ ಕೆಳವರ್ಗಗಳಿಗೆ ಕೇಳುವವರೇ ಇಲ್ಲವಾದಾಗ ಅವಧೂತರಂತಹ, ಆರೂಢರಂತಹ ಸಂತ ಪರಂಪರೆಗಳು ಜನಸಾಮಾನ್ಯರ ಪರವಾಗಿ ಧ್ವನಿ ಎತ್ತಿದ್ದವು. ಈ ಸಂತ ಪರಂಪರೆಗಳು ಯಾರನ್ನು ಕಡೆಗಣಿಸರಲಿಲ್ಲ. ಸರ್ವರನ್ನು ಸಮಾನವಾಗಿ

ಕಂಡವರು. "೧೨ನೇ ಶತಮಾನದ ವಚನಕಾರರ ಅಥವಾ ಶರಣರ ಇಷ್ಟಲಿಂಗ ಸಂಸ್ಕೃತಿಯನ್ನು ನಿರಾಕರಿಸುವ ಆತ್ಮಲಿಂಗವಾದಿಗಳು ಅಥವಾ ಆತ್ಮಜ್ಞಾನಿಗಳಿಂದ (ಅಜಗಣ್ಣ, ಅಲ್ಲಮ, ರೇವಣಸಿದ್ಧ) ಬೆಳಕಿಗೆ ಬಂದ ಈ ಪಂಥ ಮುಂದೆ ಕಲ್ಯಾಣದಲ್ಲಿ ಉದ್ಭವವಾದ ಸಾಂಸ್ಕೃತಿಕ ಬಿಕ್ಕಟ್ಟನ್ನು ಎದುರಿಸಲಾರದ ಪರಿಸ್ಥಿತಿ ನಿರ್ಮಾಣವಾದಾಗ ಅಲ್ಲಿಂದ ಚದುರಿದ ಶರಣರು ವಿವಿಧ ಕಡೆ ನೆಲೆಸಿರುವಂತೆ ಹಂಪಿ ಪರಿಸರದಲ್ಲಿ ನೆಲೆಸಿದ್ದಾರೆ. ಅವರುಗಳೇ ವಿಜಯನಗರದ ಪ್ರೌಢದೇವರಾಯನ ಕಾಲದ ನೂರೊಂದು ವಿರಕ್ತರು. ಆ ವಿರಕ್ತರಲ್ಲಿಯೇ ಅವಧೂತ ಪರಂಪರೆಯೊಂದು ಬೆಳೆದು ಬಂದಿರುವ ಸಾಧ್ಯತೆ ಇದೆ."[೫೬] ಹೀಗಾಗಿ ವೀರಶೈವರೆಂದು ಬಿಂಬಿತರಾಗಿರುವ ವಿರಕ್ತರ ಗುಣಸ್ವಭಾವವನ್ನು ಗಮನಿಸಿದರೆ ಅವಧೂತರಿಗೆ ಹತ್ತಿರದವರಾಗಿ ಕಂಡುಬರುವರು.

ಹಂಪೆ ಪ್ರಾಚೀನ ಕಾಲದಿಂದಲೂ ಆಧ್ಯಾತ್ಮಿಕ ಜೀವಿಗಳ ಕೇಂದ್ರ, ಇದಕ್ಕೆ ತೀರ್ಥಕ್ಷೇತ್ರವಾಗಿ ಪ್ರಸಿದ್ಧತೆಯನ್ನು ಹೊಂದಿದ ಹಂಪೆಯ ಪರಿಸರವೇ ಮುಖ್ಯ ಕಾರಣವೆಂದು ಹೇಳಬಹುದು. ಹೀಗಾಗಿ ಹಂಪೆ ಕವಿಗಳಿಗೆ, ಪಂಡಿತರಿಗೆ, ಶರಣರಿಗೆ, ವಿರಕ್ತರಿಗೆ, ದಾಸರಿಗೆ ಹಾಗೂ ಆಧ್ಯಾತ್ಮಿಕ ಅನುಭಾವಿಗಳಿಗೆ ಆಶ್ರಯ ತಾಣವಾಗಿತ್ತು. ಹೀಗೆ ವಿಶಿಷ್ಟ ವ್ಯಕ್ತಿತ್ವದ ಸಾಧಕರಿಗೆ ಆಶ್ರಯ ನೀಡಿದ ಹಂಪೆ ಅಂದಿನಂತೆ ಇಂದಿಗೂ ಸಹ ವಿಶ್ವ ಪ್ರಸಿದ್ಧತೆಯನ್ನು ಪಡೆದುಕೊಂಡಿದೆ. ತಮ್ಮ ತಪೋನಿಧಿಗೆ ಸೂಕ್ತ ಕೇಂದ್ರವಾಗಿದ್ದರಿಂದ ಇಲ್ಲಿ ಹಲವು ಅನುಭಾವಿಗಳಂತೆ ಅವಧೂತರಿಗೂ ಸಹ ಸೂಕ್ತ ಸ್ಥಳವಾಗಿತ್ತು. ಇದಕ್ಕೆ ಪ್ರಸ್ತುತ ಸಂದರ್ಭದಲ್ಲಿರುವ ಅವಧೂತ ಮಠಗಳೇ ಸಾಕ್ಷಿಯಾಗಿವೆ.

ಧಾರ್ಮಿಕವಾಗಿ ಹೆಚ್ಚು ಖ್ಯಾತಿಗಳಿಸಿದ ಹಂಪೆಯಲ್ಲಿ, "ಶಿವಶರಣರು, ವಿರಕ್ತರು, ಸಾಧುಸಂತರು, ಸೂಫಿಗಳು, ಅವಧೂತರು, ದಾಸರು ಇನ್ನೂ ಹತ್ತು ಹಲವು ಪಂಥಗಳ ಕ್ಷೇತ್ರವಾಗಿದ್ದರಿಂದ, ನೆಲೆಯಾಗಿದ್ದರಿಂದ ಹಂಪೆ ವಿಷೇಶ ಮಹತ್ವವನ್ನು ಪಡೆದುಕೊಂಡಿದೆ. ವಿಷೇಶವಾಗಿ ಅವಧೂತರಿಗಂತೂ ಇದು ಹೇಳಿ ಮಾಡಿಸಿದ ತಾಣವಾಗಿದೆ. ಈ ಕಾರಣದಿಂದಾಗಿಯೇ ಈ ಪರಿಸರದಲ್ಲಿ ಅವಧೂತ ಪರಂಪರೆ ಇಂದಿಗೂ ಅಸ್ತಿತ್ವದಲ್ಲಿರುವುದನ್ನು ಗುರುತಿಸಬಹುದು."[೫೭] ವೀರಶೈವ ಸಾಹಿತ್ಯ ಕೃತಿಗಳಲ್ಲಿ ವೀರಶೈವರೆಂದು ಬಿಂಬಿತರಾಗಿರುವ ನೂರೊಂದು ವಿರಕ್ತರು ಒಂದು ರೀತಿಯಲ್ಲಿ ವಾಮಾಚಾರಿಗಳಂತಿರುವರು. ಹೀಗಾಗಿ ವಾಮಚಾರದ ಶಿವೋಪಾಸಕರಂತಿರುವ ಇವರು ನಾಥ ಪಂಥೀಯರಂತೆ ಕಾಣುತ್ತಾರೆ. ಈ ಪಂಥದ ಸಂತರಿಗೆ 'ಅವಧೂತ'ರೆಂದು ಹೆಸರು. ನೂರೊಂದು ವಿರಕ್ತರ ಅರೆಮರುಳ ಸ್ಥಿತಿಯು ಅವಧೂತರನ್ನೇ ನೆನಪಿಸುತ್ತದೆ ಎಂದು ಡಾ.ಎಂ.ಎಂ. ಕಲಬುರ್ಗಿಯವರು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದು. (ಮಾರ್ಗ-೩, ಪು.೨೨೯)

"ಹಂಪೆ ಪರಿಸರದ ಅವಧೂತ ಪರಂಪರೆಗೆ ಸುಮಾರು ಆರನೂರು ವರ್ಷಗಳ ಇತಿಹಾಸವಿದೆ. ನೂರೊಂದು ವಿರಕ್ತರಲ್ಲಿ ಅವಧೂತ ಪರಂಪರೆಯೊಂದು ವಿಜಯನಗರ ಕಾಲಕ್ಕೆ ಬೆಳೆಯುತ್ತ

ಬಂದಿರುವುದನ್ನು ನಾವು ಗುರುತಿಸಬಹುದು. ಡಾ. ಎಂ.ಎಂ.ಕಲಬುರ್ಗಿ ಅವರು ಈ ನೂರೊಂದು ವಿರಕ್ತರಲ್ಲಿ ಕರಸ್ಥಲ ನಾಗಿದೇವ, ಕರಸ್ಥಲ ವೀರಣ್ಣೊಡೆಯ, ಬಾಲ ಸಂಗಯ್ಯ ಹೀಗೆ ಬಹಳಷ್ಟು ಜನ ಅವಧೂತ ಪಂಥಕ್ಕೆ ಸೇರಿದವರೆಂಬುದನ್ನು ಲೇಖನವೊಂದರಲ್ಲಿ ಸ್ಪಷ್ಟ ಪಡಿಸಿದ್ದಾರೆ. (ಮಾರ್ಗ-೩, ಪುಟ.೨೩೦) ಈಗ ಲಭ್ಯವಿರುವ ಆಕರಗಳನ್ನು ಗಮನಿಸಿ, ಹೇಳುವುದಾದರೆ ನೂರೊಂದು ವಿರಕ್ತರಲ್ಲಿ ಪ್ರಸಿದ್ಧವಾಗಿದ್ದ ಸಪ್ತ ಕಾವ್ಯದ ಗುರುಬಸವ (೧೪೩೦) ಈ ಪರಿಸರದ ಮೊದಲ ಅವಧೂತನಾಗಿದ್ದಾನೆ. ಈತನ ನಂತರದಲ್ಲಿ ಮತ್ತೊಬ್ಬ ಪ್ರಮುಖ ಅವಧೂತನಾಗಿದ್ದವನು ಅಯೋಧ್ಯೆಯ ಚಿದಾನಂದಾವಧೂತ"[೫೮]

ಹೀಗೆ ಈ ಪ್ರದೇಶದಲ್ಲಿ ಶಿವರಾಮವಧೂತ, ವೆಂಕವಧೂತ, ಶಿವಶರಣಾನಂದ ಅವಧೂತ ಮುಂತಾದ ಅವಧೂತರ ಆಶ್ರಮಗಳು ಈಗಲೂ ಈ ಪರಿಸರದಲ್ಲಿ ಕಂಡುಬರುತ್ತವೆ.

"ನೂರೊಂದು ವಿರಕ್ತರಲ್ಲಿ ಒಬ್ಬರಾದ ಸಪ್ತಕಾವ್ಯದ ಗುರುಬಸವ 'ಅವಧೂತ ಗೀತೆ' ಎನ್ನುವ ಹೆಸರಿನ ಯೋಗ ಮಾರ್ಗದ, ವೈರಾಗ್ಯ ಬೋಧನೆಯ ಆಧ್ಯಾತ್ಮಿಕ ಜೀವನದ ಒಲವು-ನಿಲುವುಗಳನ್ನು ತಿಳಿಸುವ ವಿಶಿಷ್ಟ ಕೃತಿಯೊಂದನ್ನು ಈ ಪರಿಸರದಲ್ಲಿಯೇ ಬರೆದಿದ್ದಾನೆ."[೫೯] ಹೀಗಾಗಿ 'ಅವಧೂತ ಗೀತೆ' ಈ ಶೀರ್ಷಿಕೆಯ ಅವಧೂತವೆನ್ನುವ ಪದವು ವೀರಶೈವ ಪರಿಭಾಷೆಯಲ್ಲವೆಂಬುದನ್ನು ಡಾ. ಎಂ.ಎಂ.ಕಲಬುರ್ಗಿಯವರ ಅಭಿಮತವಾಗಿದೆ. ಅದಕ್ಕಾಗಿ ನೂರೊಂದು ವಿರಕ್ತರು ಅವಧೂತರ ಪರಂಪರೆಗೆ ಸೇರಿದವರಾಗಿ ಕಂಡುಬರುತ್ತಾರೆ. ಇಲ್ಲವೆ ಸದಾ ಮೌನಿಗಳಾದ, ಶಾಂತ ಸ್ವಭಾವದವರಾದ ಇವರು ತಮ್ಮ ಹೆಸರಿಗೆ ತಕ್ಕಂತೆ 'ಶಾಂತ' ಎಂಬ ಪರಂಪರೆಗೆ ಸೇರಿದವರಾಗಿ ಕಂಡುಬರುವರು. ಅಂದು ಉದಯಿಸಿದ ಹಲವು ಸಂತ ಪರಂಪರೆಗಳಂತೆ ಹಂಪೆಯಲ್ಲಿ 'ಶಾಂತ' ಪರಂರೆಯ ಪಂಥವೊಂದು ಉದಯಿಸಿರಲು ಸಾಧ್ಯತೆಗಳಿವೆ. ಅವಧೂತರಂತೆ ಭಕ್ತ ಜನತೆಯ ಆರಾಧ್ಯ ದೈವವಾಗಿದ್ದ ವಿರಕ್ತರು ತಮ್ಮ ಅಪಾರವಾದ ಶಕ್ತಿ ಸಾಮರ್ಥ್ಯಗಳಿಂದ ಜನರಲ್ಲಿರುವ ಮೌಢ್ಯತೆಯನ್ನು ಕೆಲವೊಂದು ರೋಗ ರುಜನೆಗಳನ್ನು ನಿವಾರಣೆ ಮಾಡಿದವರಾಗಿ ಕಂಡುಬರುವರು. ವಾಮಾಚಾರಿಗಳಾದ ಇವರ ನಡೆ-ನುಡಿಯಲ್ಲಿ ಪರಿಶುದ್ಧತೆಯನ್ನು ಹೊಂದಿದ್ದು ಯಾವುದೇ ಅಧಿಕಾರ, ಹಣ, ಅಂತಸ್ತನ್ನು ಹೊಂದದೆ ನಿರ್ಲಿಪ್ತರಾಗಿದ್ದರು. ಹೀಗಾಗಿ ಈ ರೀತಿಯ ವಿರಕ್ತ, ಅವಧೂತನಾಗಲೂ ಹಲವು ಕಾರಣಗಳಿವೆ.

"೧. ಪ್ರಬಲ ಸಂಸ್ಕಾರದಿಂದ : ಇದು ಹುಟ್ಟಿನಿಂದಲೇ ಬಂದಿರುತ್ತದೆ. ಏಕಾಂಗಿತನ, ಮೌನ, ಲೋಕದ ಪರಿವೆ ಇಲ್ಲದಿರುವುದು.

೨. ಅಧ್ಯಯನಾದಿಗಳಿಂದ : ಆಧ್ಯಾತ್ಮಿಕಶಾಸ್ತ್ರ, ಪುರಾಣ ಗ್ರಂಥಗಳ ಸತತ ಅಧ್ಯಯನದಿಂದ.

೩. ಜೀವನದ ಜಿಗುಪ್ಸೆಯಿಂದ : ಬಡತನ, ಸಂಸಾರದ ಹೊಣೆ ಹೊರಲು ಅಸಹಾಯಕತೆ,

ನಿಂದನೆಯ ಮಾತುಗಳು, ಇವುಗಳಿಂದ ವೈರಾಗ್ಯ ಮೂಡಿ ಜೀವನದಲ್ಲಿ ಜಿಗುಪ್ಸೆ ಹೊಂದುವುದು.

೪. ಮೇಲಿನ ಎಲ್ಲಾ ಕಾರಣಗಳಿದ್ದರೂ, ಪ್ರಬಲ ಗುರುವಿನ ಅನುಗ್ರಹ ಮತ್ತು ಗುರೂಪದೇಶವು ಅವಧೂತನಾಗಲೂ ಮುಖ್ಯ ಕಾರಣವಾಗಿರುತ್ತದೆ."[೧೦]

ಸಾಂಸ್ಥಿಕ ಧರ್ಮಗಳಿಗೆ ಪ್ರತಿಯಾಗಿ ಉದಯಿಸಿದ ಈ ಪಂಥಗಳು ಜನಸಾಮಾನ್ಯರನ್ನು ತಮ್ಮೆಡೆಗೆ ಸೆಳೆದವು. ಯೋಗಿಗಳಾಗಿ, ತ್ಯಾಗಿಗಳಾಗಿ, ಹಠಯೋಗದಿಂದ ಆಧ್ಯಾತ್ಮಿಕತೆಯಲ್ಲಿ ಜೀವನ ಪೂರ್ತಿ ಸವೆಸಿದ ಅವಧೂತರಾಗಲಿ-ವಿರಕ್ತರಾಗಲಿ ಧಾರ್ಮಿಕ ಕ್ಷೇತ್ರಕ್ಕೆ ಅಥವಾ ಆಧ್ಯಾತ್ಮಿಕ ಕ್ಷೇತ್ರಕ್ಕೆ ತಮ್ಮದೆ ಆದ ಕೊಡುಗೆಯನ್ನು ನೀಡಿದ್ದಾರೆ. ಮದುವೆಯಾಗಿ ಮಕ್ಕಳನ್ನು ಪಡೆದು ಸಂಸಾರಿಕ ಜೀವಿಗಳಾಗಿದ್ದ ಅವಧೂತರೂ ಇದ್ದಕ್ಕಿದ್ದಂತೆ ಜೀವನದಲ್ಲಿ ಜಿಗುಪ್ಸೆ ಹೊಂದಿ ಸನ್ಯಾಸಿಗಳಾಗಿ ಲೋಕ ಸಂಚಾರ ನಡೆಸುವರು. ಇವರಲ್ಲಿ ಕೆಲವರು ಸಾಹಿತ್ಯ ರಚಿಸಿ ಕವಿಗಳಾಗಿದ್ದರೆ ಮತ್ತೆ ಕೆಲವರು ತಮ್ಮ ಮೌನ ವ್ರತಗಳಿಂದಲೇ ನಡೆ-ನುಡಿಗಳಿಂದಲೇ ಸಮಾಜಕ್ಕೆ ತಮ್ಮದೆ ಆದ ಕಾಣಿಕೆ ನೀಡಿದ್ದಾರೆ. ಸದಾ ಸಚ್ಚಿದಾನಂದ ಸ್ವರೂಪಿಗಳಾದ ವಿರಕ್ತರು ಸಹ ಅವಧೂತರಂತೆ ಸರ್ವಧರ್ಮದ ಚೌಕಟ್ಟನ್ನು ಮೀರಿದವರು. ಸತಿ, ಸುತ, ಧನಕನಕಾದಿಗಳಲ್ಲಿ ಸಂಪೂರ್ಣ ವಿರಕ್ತಿ ಹೊಂದಿದ ಇವರು ವೈರಾಗ್ಯ ಮೂರ್ತಿಗಳಾಗಿದ್ದರು. ಡಾ. ಎಫ್.ಟಿ. ಹಳ್ಳಿಕೇರಿಯವರು ಹೇಳುವಂತೆ ಅವಧೂತರು 'ಕವಿಗಳಲ್ಲಿ ಅವಧೂತರು, ಅವಧೂತರಲ್ಲಿ ಕವಿಗಳಾಗಿ' ಹಂಪೆಯ ಪರಿಸರದಲ್ಲಿ ಮೆರೆದಿರುವಂತೆ ನೂರೊಂದು ವಿರಕ್ತರೂ ಸಹ ಈ ಮಾತಿಗೆ ಹೊರತಾಗಿಲ್ಲ. ಇವರಲ್ಲೂ ಸಹ ಕೆಲವರು ಕವಿಗಳಿದ್ದರು. ಸಂಸಾರಿಕರಿದ್ದರು. ಮತ್ತೆ ಕೆಲವರು ಯಾರೊಂದಿಗೆ ಮಾತಾಡದೆ ಮೌನವ್ರತಿಗಳಾಗಿ ತಮ್ಮ ಕೈಂಕಾರ್ಯವನ್ನು ಸಾಧಿಸಿದವರಿದ್ದಾರೆ.

೭. ಸೂಫಿ

ಅನುಭಾವಿಗಳಾದ ಸೂಫಿಗಳು ಅದ್ವೈತ ಚಿಂತನಕ್ರಮವುಳ್ಳವರು. ಭಗವಂತನನ್ನು ಸತಿರೂಪದಲ್ಲಿ ಆರಾಧಿಸುವ ಇವರು ಅನುಭಾವಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದವರಾಗಿದ್ದಾರೆ. ಈ ಪಂಥದ ಉದಯದ ಕಾಲಗತಿಯನ್ನು ಮಹಮ್ಮದ್ ಪೈಗಂಬರನ ಕಾಲದಲ್ಲಾಗಿತ್ತೆಂದು ಕೆಲವರ ಅಭಿಪ್ರಾಯ. ಹೀಗಾಗಿ 'ಸೂಫಿ' ಎಂಬ ಪದವು ಅತ್ಯಂತ ಪ್ರಾಚೀನ ಹಾಗೂ ವಿಸ್ತಾರವಾದ ಅರ್ಥವ್ಯಾಪ್ತಿಯನ್ನು ಪಡೆದುಕೊಂಡಿದೆ. ಈ ಸೂಫಿ ಎಂಬ ಶಬ್ದವನ್ನು ಹಲವು ರೀತಿಯಿಂದ ವಿದ್ವಾಂಸರು ನಿರ್ವಚನ ಮಾಡಿದ್ದಾರೆ. "ಅನುಭಾವಿ 'ಸಿದ್ಧ' ಎಂದು ಸಿಂಪಲಾಗಿ ತಿಳಿದುಕೊಳ್ಳಬಹುದು. ಆದರೆ ಬಹುಜನ ವಿದ್ವಾಂಸರ ಪ್ರಕಾರ 'ಸೂಫಾ' ಎಂದರೆ ಉಣ್ಣೆಯ ಬಟ್ಟೆಯನ್ನು ಇಲ್ಲವೆ ಕುಲಾವಿಯನ್ನು ತೊಟ್ಟವರು ಎಂಬ ಮಾತಿದೆ. ಮತ್ತೊಂದು ಅರ್ಥದಲ್ಲಿ 'ಸೂಫಿ' ಎಂದರೆ ಪರಮಾತ್ಮನನ್ನು

ಪ್ರಿಯತಮೆಯ ರೂಪದಲ್ಲಿ ಉಪಾಸನೆ ಮಾಡುವ ಹೆಚ್ಚಾಗಿ ಉಣ್ಣೆಯ ಬಟ್ಟೆಯನ್ನು ಇಲ್ಲವೆ ಕುಲಾವಿಯನ್ನು ಧರಿಸುತ್ತಿದ್ದ ಭಗವದ್ಭಕ್ತರನ್ನು ಸಂತರು-ಫಕೀರರು ಎಂದು ಕರೆಯಲಾಗುತ್ತದೆ."೧೮ ಈ ಅನುಭಾವಿ ಪಂಥಗಳ ಮೇಲೆ ಭಿನ್ನವಾಗಿ ಚಿಂತಿಸಿದ ಡಾ.ರಹಮತ್ ತರಿಕೇರಿಯವರ ಪ್ರಕಾರ ಸೂಫಿಸಂ ಅಂದರೆ ಅದು ಮೂಲತಃ ಒಂದು ತತ್ವವಾಗಿದೆ, ಅನುಭಾವ ಪಂಥವಾಗಿದೆ. ಅದು ಸಾಂಪ್ರದಾಯಿಕ ಇಸ್ಲಾಂ ಧರ್ಮ ಅಲ್ಲ. ಸೂಫಿವಾದಕ್ಕೂ ಇಸ್ಲಾಂ ಧರ್ಮಕ್ಕೂ ಸಂಬಂಧ ಇಲ್ಲವೆಂತಲ್ಲ, ಇದೆ. ಅದೊಂದು ವಿಚಿತ್ರ ಸಂಬಂಧ. ಜಗತ್ತಿನ ಎಲ್ಲ ಕಡೆ ಅನುಭಾವಿ ಪಂಥಗಳಿರುವಂತೆ, ಸೂಫಿ ಪಂಥವು ಮಧ್ಯಏಷಿಯಾದ ಇಸ್ಲಾಮೀ ಜಗತ್ತಿನಲ್ಲಿ ಹುಟ್ಟಿದ ಒಂದು ದರ್ಶನ; ವಿರಕ್ತರಂತೆ ಸದಾ ಸಂಚಾರಿ ಸ್ವಭಾವದವರಾದ ಸೂಫಿಗಳು ಊರಿಂದ ಊರಿಗೆ ನಾಡಿನಿಂದ ನಾಡಿಗೆ ಸಂಚರಿಸಿ ತಮ್ಮ ಅಪಾರವಾದ ಲೀಲೆಗಳಿಂದ ಮೆರೆದಿದ್ದಾರೆ.

ಪ್ರಾಪಂಚಿಕ ಸುಖಗಳನ್ನು ಹಾಗೂ ಸಂಬಂಧಗಳನ್ನು ಕಳಚಿಕೊಂಡು ಬಡತನವನ್ನು ಸ್ವೀಕರಿಸಿ ಏಕಾಂತದಲ್ಲಿ ಕಠೋರ ತಪಶ್ಚರ್ಯವನ್ನು ಪಾಲಿಸುವುದು ಸೂಫಿಗಳಿಗೆ ಪ್ರಿಯವಾದುದೆಂಬಂತೆ ಕಾಣುತ್ತದೆ. ಸೂಫಿಯೆಂದರೆ ಒಂದರ್ಥದಲ್ಲಿ ದೇಹದಂಡನದ ದ್ವಾರದಿಂದ ಪರಮೇಶ್ವರನ ಸಾಕ್ಷಾತ್ಕಾರವನ್ನು ಪಡೆಯಲಿಚ್ಚಿಸುವ ತಪಸ್ವಿಯೇ ಹೌದು. 'ಇಬ್ನ್ ಖಾಲ್ದೂನ್' ಎಂಬ ಹದಿನೈದನೆಯ ಶತಮಾನದ ಇತಿಹಾಸಕಾರನ ಅಭಿಪ್ರಾಯದಂತೆ ಪರಮೇಶ್ವರನ ಕಾರಣವಾಗಿ ಸರ್ವಸ್ವವನ್ನು ತ್ಯಾಗ ಮಾಡುವುದು, ಸರ್ವಸಂಗ ಪರಿತ್ಯಾಗ ಮಾಡುವುದು ಹಾಗೂ ಸಮಾಜದಿಂದ ದೂರವಾಗಿ ಏಕಾಂತದಲ್ಲಿ ಕುಳಿತು ಪರಮೇಶ್ವರನನ್ನು ಚಿಂತಿಸುವುದು ಇವು ಸೂಫಿಗಳ ಆರಂಭ ಕಾಲದ ತತ್ತ್ವಗಳಾಗಿದ್ದವು. ಸೂಫಿಗಳು ಸರ್ವವನ್ನು ತೊರೆದು ಬೆಟ್ಟ ಕಣಿವೆಗಳಲ್ಲಿ ಆಶ್ರಯ ಪಡೆದಿದ್ದರು. ಅಲ್ಲಿಯೇ ಅಪಾರವಾದ ತಪಸ್ಸನ್ನು ಆಚರಿಸಿ ಜೀವನ ಕಳೆಯುತ್ತಿದ್ದರು. ಮಾಂಸ ಭಕ್ಷಿಕರಲ್ಲದ ಸೂಫಿಗಳು ಸುಗಂಧ ಪರಿಮಳವನ್ನು ಸಹ ತ್ಯಾಗ ಮಾಡಿದರು. ಅಲ್ಲದೆ ಇವರು ಕಾಮಕ್ರೋದಾದಿಗಳಿಂದ ಮುಕ್ತರಾದವರು.

ಅದಕ್ಕಾಗಿ ಉಪವಾಸ, ಧ್ಯಾನ, ಮೌನ, ಏಕಾಂತ ಇತ್ಯಾದಿ ಮಾರ್ಗಗಳನ್ನು ಅವಲಂಭಿಸುತ್ತಿದ್ದರು. ಹಿಂದೂಸ್ಥಾನದ ಮೊದಲ ಸೂಫಿಯಾದ 'ಹುಜವೇರಿಯರ' ಪ್ರಕಾರ ತನ್ನ ಆಚಾರ ಮತ್ತು ವಿಚಾರಗಳನ್ನು ಯಾರು ವ್ಯವಸ್ಥಿತಗೊಳಿಸಿಕೊಂಡು ಇರುತ್ತಾನೆಯೋ ಅವನೇ ಸೂಫಿ. ಸೂಫಿಯು ಸಹನಶೀಲನೂ ನಿಗ್ರಹಿಯು ಆಗಿರುತ್ತಾನೆ. ಅವರ ಹೃದಯವು ವಿಕಾರ ರಹಿತವಾಗಿರುತ್ತದೆ. ಇವರ ಲಕ್ಷಣದ ಬಗೆಗೆ ಈ ಕೆಳಗಿನಂತೆ ವಿವರಿಸುವನು. ಸೂಫಿಗಳು ಸಾಮಾನ್ಯವಾಗಿ ಕೌದಿ(ಘೋಂಗಡಿ) ಅಥವಾ ಕಂಬಳಿ (ಗೋಧಡಿ)ಯನ್ನು ಬಳಸುತ್ತಾರೆ. ಇದು ಅವರ ವೈರಾಗ್ಯ ಸೂಚಕ ಲಕ್ಷಣ. ಹುಜವೇರಿಯ ಪ್ರಕಾರ ಕೌದಿ ಅಥವಾ ಕಂಬಳಿಯನ್ನು ಧರಿಸಿರುವವರು ಲೌಕಿಕ ಜಗತ್ತನ್ನು ತ್ಯಾಗ ಮಾಡಬೇಕಾಗಿರುತ್ತದೆ. ಸನ್ಯಾಸಿಯಾಗಿದ್ದು ಪರಮೇಶ್ವರನ

ಭಕ್ತಿಭಾವದಲ್ಲಿಯೇ ತಲ್ಲೀನನಾಗಿರುವುದು ಅವಶ್ಯ ಪರಮೇಶ್ವರನ ಸೇವೆ ಎಂದರೆ ಲೌಕಿಕ ಜಗತ್ತಿನ ಸುಖ-ಭೋಗಗಳೆಲ್ಲವನ್ನು ತ್ಯಜಿಸಿರುವುದು. "ಸೂಫಿಗಳು ಎಲ್ಲೊ ಹುಟ್ಟಿ, ತಮ್ಮ ಜೀವಿತದ ಬಹುಕಾಲವನ್ನು ಇನ್ನೆಲ್ಲೊ ಕಳೆದು ಕರ್ನಾಟಕಕ್ಕೆ ಬಂದು ನೆಲೆಸಿದವರಿದ್ದಾರೆ."[೬೨] ಸೂಫಿಗಳಂತೆ ಅಂದು ಹಂಪೆಯಲ್ಲಿದ್ದ ವಿರಕ್ತರೂ ಸಹ ನಾಡಿನ ಯಾವುದೊ ಮೂಲೆಯಲ್ಲಿ ಜನಿಸಿ ಮತ್ತೆಲ್ಲಿಯೋ ಬೆಳೆದು ಇನ್ನೆಲ್ಲಿಯೋ ಸಾವನ್ನಪ್ಪಿದ ಇವರುಗಳೆಲ್ಲ ಆಧ್ಯಾತ್ಮಿಕ ಲೋಕದ ಲೀಲಾ ಮೂರ್ತಿಗಳಾಗಿರುವರು. ಜಾತಿ ಮತಗಳ ಭೇದಭಾವವಿಲ್ಲದೆ ಸರ್ವಸಂಗ ಪರಿತ್ಯಾಗಿಯಾಗಿ ಸತ್ತು ಮಣ್ಣಾಗಿರುವ ವಿರಕ್ತರು ಇಂದು ಪ್ರಬಲ ಸಮುದಾಯಗಳ ಕೈಯಲ್ಲಿ ಸಿಲುಕಿ ತಮ್ಮ ಮೂಲ ಅಸ್ತಿತ್ವವನ್ನೇ ಕಳಚಿಕೊಂಡಿದ್ದಾರೆ. ಇವರ ಚರಿತ್ರೆಯನ್ನು ಸರಿಯಾಗಿ ಗಮನಿಸದ ವಿದ್ವಾಂಸರು ಇವರ ಚರಿತ್ರೆಯನ್ನು ಅಚಾರಿತ್ರ್ಯಗೊಳಿಸಿದ್ದಾರೆ. "ಕಡಕೋಳ ಮಡಿವಾಳಪ್ಪ, ತಿಂತಿಣಿ ಮೋನಪ್ಪ, ಕೊಡೇಕಲ್ಲ ಬಸವಣ್ಣ ಮುಂತಾದವರನ್ನು ವೀರಶೈವ ಅನುಭಾವಿಗಳು ಎಂದು ವೀರಶೈವ ಸಾಹಿತ್ಯ, ಧರ್ಮ, ಸಂಸ್ಕೃತಿಗಳನ್ನು ಉಳಿಸಿ ಬೆಳೆಸಿಕೊಂಡು ಬಂದವರೆಂದು ಗುರುತಿಸಲಾಗುತ್ತದೆ."[೬೩] ಈ ಮೇಲಿನ ಮಾತಿಗೆ ವಿರಕ್ತರು ಸಹ ಹೊರತಾಗಿಲ್ಲ. ಅಂದು ವೀರಶೈವ ಧರ್ಮವನ್ನು ವೀರಶೈವೀಕರಿಸಿದ ಮಾತ್ರಕ್ಕೆ ಇವರನ್ನು ವೀರಶೈವ ಮತದವರೆಂದು, ವೀರಶೈವ ಮತದ ರಕ್ಷಕರೆಂದು ಕರೆಯುವುದು ತಪ್ಪಾಗುತ್ತದೆ. ಇವರಲ್ಲಿ ಕೆಲವೇ ಜನ ವೀರಶೈವರಾಗಿರಬಹುದು. ಇವರು ವೀರಶೈವರಾಗಿದ್ದ ಮಾತ್ರಕ್ಕೆ ನೂರೊಂದು ಮಂದಿಯನ್ನು ವೀರಶೈವರೆಂದು ಪಟ್ಟಕಟ್ಟಿ ಮೆರೆಸುವುದು ಅಷ್ಟು ಸಮಂಜಸವಾಗಲಾರದು. "ಈ ರೀತಿಯ ತಿಳುವಳಿಕೆಗೆ ಮತಾಭಿಮಾನಿ ಸಂಶೋಧಕರು ಹಾಗೂ ಪ್ರಕಟಣ ಸಂಸ್ಥೆಗಳು ಒಂದು ಕಾರಣವಾದರೆ, ಈ ಅನುಭಾವಿ ಸಂತರ ಬಗ್ಗೆ ಹುಟ್ಟಿರುವ ಚರಿತೆ ಪುರಾಣ ಇನ್ನೊಂದು ಕಾರಣ. 'ಚೆನ್ನಬಸವ ಪುರಾಣ'ದಿಂದ ಹಿಡಿದು 'ಗುರುರಾಜ ಚಾರಿತ್ರೆ', 'ಶಿವತತ್ವ ಚಿಂತಾಮಣಿ'ಯ ತನಕ ಎಲ್ಲಾ ಚಾರಿತ್ರ (Hagiography)ಗಳು ಈ ಸಂತರನ್ನು ಮತರಕ್ಷಣೆಗಾಗಿ ಅವತರಿಸಿದ ಗಣಾಚಾರಿಗಳೆಂಬಂತೆ ಬಣ್ಣಿಸುತ್ತವೆ."[೬೪]

ವಿರೂಪಾಕ್ಷ ಪಂಡಿತನ 'ಚೆನ್ನಬಸವ ಪುರಾಣ'ದಲ್ಲಿ ಈ ನೂರೊಂದು ವಿರಕ್ತರನ್ನು ಹೀಗೆ ಬಣ್ಣಿಸಲಾಗಿದೆ. 'ಕೈಲಾಸ ಪರ್ವತದಲ್ಲಿ ವಿಕಟಾಂಗದ ಗಣೇಶ್ವರರ ಶಾಪದಿಂದ ದೇವೇಂದ್ರನು ಹರಿಹರ-ಬುಕ್ಕರಾಯರ ವಂಶದಲ್ಲಿ ಪ್ರೌಢದೇವರಾಯನೆಂಬ ಹೆಸರಿನಿಂದ ಜನಿಸಿ ವಿದ್ಯಾನಗರಿಯಲ್ಲಿ ಅರಸುಗೆಯ್ಯುವನು. ಅವನ ಕಾಲದಲ್ಲಿ ನೂರೊಂದು ಗಣೇಶ್ವರರು ಮಹಿಮೆಗಳನ್ನು ತೋರುವುದಕ್ಕಾಗಿ ಇಳೆಯಲ್ಲಿ ಜನಿಸಿ ಜಂಗಮ ಸ್ಥಲವನಂಗೀಕರಿಸಿ ವಿರತರಾಗಿರುವರೆಂಬಂತೆ ಚಿತ್ರಿಸಲಾಗಿದೆ. ಹೀಗೆ ಬೇರೊಂದು ಮತದಲ್ಲಿ ಸಿಲುಕಿದ ವಿರಕ್ತರು ಸೂಫಿಗಳಂತೆ ಗುರು ಪಂಥಿಯವರು. ಇಬ್ಬರು ದಾರ್ಶನಿಕ ಅನುಭಾವಿಗಳು. ಈ ಯೋಗಿಗಳು ತಮ್ಮೊಳಗಿನ ಆಂತರಿಕ ಶಕ್ತಿಯ ಬೆಳಕನ್ನು

ಕಂಡುಕೊಂಡು ತಾವೇ ಪರತತ್ವವಾಗಿರುವರು. ಅಪಾರ ಯೋಗ ಸಾಧಕರಾದ ವಿರಕ್ತರಿಗೆ ಸೂಫಿಗಳಂತೆ ಮಠದ ಪರಿಕಲ್ಪನೆಗಳಿರಲಿಲ್ಲ. ಹೀಗಾಗಿ ವಿರಕ್ತರಲ್ಲಿ ಸೂಫಿಗಳಲ್ಲಿ ಸಹ "ಕವಿಗಳು, ವಿದ್ವಾಂಸರು, ವಿರಕ್ತರು, ಸಂಸಾರಿಗಳು, ಶಾಸ್ತ್ರಕಾರರು, ಸಂಗೀತಕಾರರು, ಪ್ರಭುತ್ವ ವಿರೋಧಿಗಳು, ಸನಾತನಿಗಳು, ನಿರಂಕುಶಮತಿ, ತತ್ವಜ್ಞಾನಿಗಳು ಹೀಗೆ ಅದೊಂದು ಬಹುರೂಪಿಯಾದ ಲೋಕ."[೬೦] ಸೂಫಿಗಳು ತುಂಬ ಸರಳ ಜೀವಿಗಳು. ದುರ್ಗಮವಾದ ಬೆಟ್ಟಗುಡ್ಡಗಳಲ್ಲಿ ವಾಸಿಸುವ ಇವರಲ್ಲಿ ಹಲವು ಧಾರೆಗಳಿದ್ದವು. ಕೆಲವರು ಹುಚ್ಚರಂತಿದ್ದರು. ಆದರೆ ಅದರಲ್ಲಿಯೇ ದೈವಿಕ ಭಾವಾವೇಶರಾಗಿರುವರು, ಬೆತ್ತಲಾಗಿ, ಅರೆಬೆತ್ತಲಾಗಿ ಸಂಚರಿಸುವ ಸೂಫಿಗಳು ಜನಸಾಮಾನ್ಯರ ಪಾಲಿಗೆ ದೈವಗಳಾಗಿದ್ದರು. ಅಲೆಮಾರಿತನ, ಯೋಗಭ್ಯಾಸ, ಏಕಾಂತವಾಸ, ಭಂಗಿಸೇವನೆ, ಭಿಕ್ಷಾಟನೆಯೊಂದಿಗೆ ಬದುಕುತ್ತಿದ್ದ ಸೂಫಿಗಳ ಸಾಮರ್ಥ್ಯ ಅಪಾರವಾದದ್ದಾಗಿದೆ.

ಯೋಗದ ಮೂಲಕ ಆತ್ಮಲಿಂಗವನ್ನು ಸಾಕ್ಷಾತ್ಕಾರಿಸಿಕೊಂಡ ಯೌಗಿಕ ಪಂಥಗಳಲ್ಲಿ ಒಂದಾದ ಖಾದರ ಲಿಂಗನ (ಸೂಫಿ) ಪರಂಪರೆಯಲ್ಲಿ ಈಗಲೂ ಲಿಂಗವನ್ನು ಕಾಲಿಗೆ ಕಟ್ಟಿಕೊಳ್ಳುವ ಸಂಪ್ರದಾಯವಿದೆ. (ಕರ್ನಾಟಕ ಸೂಫಿಗಳು – ಡಾ.ರಹಮತ್ ತರೀಕೆರಿ, ಪು.೭೯) ಅದರಂತೆ ವಿರಕ್ತರಲ್ಲಿ ಒಬ್ಬರು ಕಾಲಿಗೆ ಸರವಿಕಟ್ಟಿ ಅದರಲ್ಲಿ ಲಿಂಗವಿರಸಿ ರಾಜಬೀದಿಯಲ್ಲಿ ನಡೆಯುವ ವಿರಕ್ತ ಕಂಡುಬರುವನು. ಅಂದರೆ ಮಧ್ಯಕಾಲೀನ ಸಂದರ್ಭದಲ್ಲಿ ಒಂದು ಪಂಥದ ಪ್ರಭಾವ ಮತ್ತೊಂದು ಪಂಥದ ಮೇಲಾಗಿರುವ ಕಾರಣವೇ ಈ ರೀತಿಯ ಸಂಕರಮಯವಾದ ವಾತಾವರಣ ನಿರ್ಮಾಣವಾಗಲು ಸಾಧ್ಯ "ಹೀಗಾಗಿ ಪ್ರಾಣಲಿಂಗಿಗಳಾದ ಅನುಭಾವಿಗಳಿಗೂ ಇಷ್ಟಲಿಂಗಿಗಳಾದ ಭಕ್ತರಿಗೂ ನಡೆದ ಸಂಘರ್ಷದ ಸಂಕೇತಗಳಂತಿವೆ."[೬೧]

ಹಲವು ಯೌಗಿಕ ಪಂಥಗಳಿಗೆ ಕರ್ಮಭೂಮಿಯಾಗಿದ್ದ 'ಹಂಪೆ' ಅಂದು ಸೂಫಿಗಳಿಗೂ ಸಹ ಆಶ್ರಯ ತಾಣವಾಗಿತ್ತು. ಸೂಫಿಗಳು ಸಹ ವಿರಕ್ತರಂತೆ ದೈಹಿಕ ಶುದ್ಧತೆಗೆ, ಸಮಯಪ್ರಜ್ಞೆಗೆ ಪ್ರಾಮುಖ್ಯತೆ ನೀಡುತ್ತಿರಲಿಲ್ಲ. "ಕರ್ಮಾಚರಣೆಗೆ ಬದಲಾಗಿ ಹೃದಯದ ಭಾವನೆಗಳಿಗೆ ಅವರು ಪ್ರಾಮುಖ್ಯತೆ ಕೊಟ್ಟರು. ಹೃದಯ, ದೇವರನ್ನು ಪ್ರತಿಬಿಂಬಿಸುವ ಕನ್ನಡಿ. ಅವನನ್ನು ಒಲಿಸಿಕೊಳ್ಳಲು ಬೇಕಾದ ಭಾವನೆಗಳು ಹುಟ್ಟುವ ತಾಣ ಪ್ರೇಮಭಾವನೆಯಿಂದ ಮಾತ್ರ ಅವನನ್ನು ವಶಪಡಿಸಿಕೊಳ್ಳಬಹುದು ಎಂಬುದು ಅವರ ನಂಬಿಕೆ"[೬೨] ಪ್ರೇಮವೇ ಸೂಫಿಗಳ ಮೂಲ ಸಿದ್ಧಾಂತ. ಹೀಗಾಗಿ ಏಕೇಶ್ವರವಾದಿಗಳಾದ ಸೂಫಿಗಳು ಸದಾಚಾರ ಮತ್ತು ಸರಳತೆವುಳ್ಳವರು, ಸಮಾನತೆ ದಯಾಪರತೆವುಳ್ಳ ಇವರು ಅಪಾರ ಪವಾಡಪುರುಷರಾಗಿದ್ದರು. ತಾಂತ್ರಿಕ ಪಂಥಗಳ ಆಚರಣಾ ಕ್ರಮಗಳನ್ನು ಹೊಂದಿದ ಸೂಫಿಗಳು ಸಹ ಮಾಟ, ಮದ್ದುತಂತ್ರ, ಮಾಡುವುದರಲ್ಲಿ ಹಿಂದೆ ಬಿದ್ದಿರಲಿಲ್ಲ. "ಲೀಲಾ ಮೂರ್ತಿಗಳಾದ 'ಇವರು ತಮ್ಮ ಪವಾಡ ಶಕ್ತಿಗಳಿಂದ ಮುಖ್ಯವಾಗಿ ಎರಡು ಕಾರ್ಯ ಮಾಡುವರು. ಒಂದು ಪ್ರತಿಷ್ಠಿತ ಶಕ್ತಿಗಳನ್ನು (ಉದಾ: ರಾಜಕೀಯ ಪ್ರಭುತ್ವ

ಅಥವಾ ಸನಾತನವಾದವನ್ನು) ಎದುರಿಸಿ ಸೋಲಿಸುವುದು. ಎರಡು ರೋಗ, ಬರಗಾಲ, ಸಾವು, ಬಂಜೆತನ ಮುಂತಾದ ಜನತೆಯ ಕಷ್ಟಗಳಲ್ಲಿ ಬಂದು ಪರಿಹಾರ ನೀಡುವುದು. ಸೂಫಿಗಳ ಕಥನ, ಸಮುದಾಯಗಳ ಕಥನವಾಗಲು ತೊಡಗುವ ಮುಖ್ಯ ಬಿಂದುಗಳಿವು."[೬೮] "ಸೂಫಿಗಳ ರೋಗ ನಿವಾರಕ ಪವಾಡಗಳು ಜನರ ಮಾನವೀಯ ಸಮಸ್ಯೆಗಳನ್ನು ಪ್ರತಿಫಲಿತಸುತ್ತವೆ."[೬೯] ಈ ಸಂತರಿಗೆ ರೋಗ ನಿವಾರಕ ಶಕ್ತಿಯಿದೆ ಎಂದು ಜನಸಾಮಾನ್ಯರಿಗೆ ತಿಳಿದ ನಂತರ ಹಲವು ರೋಗ ರುಜನೆಗಳಿಂದ ಬಳಲುತ್ತಿದ್ದವರೆಲ್ಲಾರು ಇವರ ಹತ್ತಿರ ಬರಲಾರಂಭಿಸಿದರು. ಇದಕ್ಕೆ ನೂರೊಂದು ವಿರಕ್ತರು ಸಹ ಹೊರತಾಗಿಲ್ಲ.

ಹೀಗೆ ಸೂಫಿಗಳಂತೆ ಅಪಾರ ಸಾಮರ್ಥ್ಯ ಹೊಂದಿದ ವಿರಕ್ತರು ಅವರಂತೆ ಹೆಚ್ಚು ಪ್ರಸಿದ್ಧತೆಗೆ ಬರಲಿಲ್ಲ. ಸದಾ ಮೌನಿಗಳಾದ ಇವರ ಚರಿತ್ರೆ ಸಹ ಮೌನಮಯವಾಗಿದೆ. ಇದಕ್ಕೆ ರಾಜಕೀಯ, ಸಾಮಾಜಿಕ, ಧಾರ್ಮಿಕ ಕಾರಣಗಳೇ ಪ್ರಬಲವಾಗಿವೆ.

೮. ಶಾಕ್ತ

ಪ್ರಸ್ತುತ ಸಂದರ್ಭದಲ್ಲಿ ಬಂಗಾಳ, ಆಸ್ಸಾಂಗಳಲ್ಲಿ ಅಸ್ತಿತ್ವದಲ್ಲಿರುವ ಈ ಪಂಥಕ್ಕೆ ಪ್ರಾಚೀನ ಇತಿಹಾಸವಿದೆ. ರಾಮಾಯಣ, ಮಹಾಭಾರತ ಹಾಗೂ ವೇದಕಾಲದವರೆಗೆ ಇದರ ಪ್ರಾಚೀನತೆಗೆ ಆಧಾರಗಳು ದೊರೆಯುತ್ತವೆ. ಹೀಗಾಗಿ ಕರ್ನಾಟಕದ ಕೆಲವೊಂದು ಪ್ರದೇಶದಲ್ಲಿ ಈ ಪಂಥದ ಅನುಯಾಯಿಗಳು ಕಂಡುಬರುವರು. "ಶಕ್ತಿ ಎಂದರೆ ಹೆಣ್ಣು, 'ಶಾಕ್ತ' ಎಂದರೆ ಶಕ್ತಿಗೆ ಅಥವಾ ಪ್ರಕೃತಿಗೆ ಸಂಬಂಧಿಸಿದ್ದು. ಸ್ತ್ರೀ ಶಕ್ತಿಯು ಸೃಜನಶೀಲವಾದುದು ಮತ್ತು ಜಗತ್ತಿನ ಸರ್ವಚಲನೆಗಳ ಹಿಂದೆ ಇರುವಂತಹುದು ಎಂದು ಶಾಕ್ತರು ನಂಬುತ್ತಾರೆ. ಶಕ್ತಿಯ ದೈವಿಕ ರೂಪವೇ ಶಿವೆ. ಗೋರಖನ ಪ್ರಕಾರ ಶಿವೆ ಅಥವಾ ಪುರುಷನು ಶಕ್ತಿಯಿಲ್ಲದೆ ಅಪ್ರಯೋಜಕ (ಶಿವೋಪಿ ಶಕ್ತಿರಹಿತಃ ಕರ್ತುಂ ಶಕ್ತೋನ ಕಿಂಚನ) ಶಕ್ತಿಯ ಸಂಕೋಚ ಹಾಗೂ ವಿಕಸನಗಳಿಂದ ಜಗತ್ತಿನ ಚಲನೆ ಆಗುತ್ತದೆ. ಶಾಕ್ತದಂತೆ ಕೌಳವೂ ಸ್ತ್ರೀಕೇಂದ್ರಿತ ಪಂಥ. ಕುಲ ಎಂದರೆ ಹೆಣ್ಣು ಅಥವಾ ಶಕ್ತಿ. ಶಕ್ತಿ ಕುಲ ಅಥವಾ ಸಂತಾನವನ್ನು ಸೃಷ್ಟಿಸುವವಳು. ಶಿವನು ಅಕುಲ. ಕುಲಕುಲಗಳ ಸಂಯೋಗವೇ ಮೋಕ್ಷ. ಶಾಕ್ತ, ಕೌಳ ಎರಡು ಶೈವ ತಾಂತ್ರಿಕ ಪಂಥಗಳು."[೭೦]

"ಕರ್ನಾಟಕದಲ್ಲಿ ಹಲವು ಕಡೆಗಳಲ್ಲಿ ಕಂಡುಬರುವ ಶಾಕ್ತಾರ ಆರಾಧ್ಯ ದೇವತೆ ದೇವಿ, ಕಾಲಿ, ಅಥವಾ ಶಕ್ತಿ. ತ್ರಿಮೂರ್ತಿಗಳ ಆರಾಧನೆ ಪ್ರಚಲಿತವಿದ್ದಾಗ ಬ್ರಹ್ಮ, ವಿಷ್ಣು, ಮಹೇಶ್ವರರ ಸಂಗಡ ಶಕ್ತಿ, ಸೂರ್ಯ, ಗಣಪತಿಕುಮಾರ ಮೊದಲಾದವರ ಆರಾಧನೆಯನ್ನು ಮಾಡುತ್ತಿದ್ದರು."[೭೧] ವೇದಗಳ ಕಾಲದಿಂದಲೂ ನಮ್ಮ ಪ್ರಾಚೀನರು ಒಂದು ವಿಶಿಷ್ಟವಾದ ಸ್ಥಾನವನ್ನು ಶಕ್ತಿಗೆ ಅಥವಾ ಹೆಣ್ಣು ದೇವತೆಗಳಿಗೆ ನೀಡಿದ್ದಾರೆ. ಐತಿಹಾಸಿಕ ಯುಗವು ಪ್ರಾರಂಭವಾಗಿದ್ದಕ್ಕಿಂತಲೂ

ಮುಂಚೆ ಅಲ್ಲದೆ ಹರಪ್ಪ ಮೆಹೆಂಜೋದಾರೋಗಳಲ್ಲಿ ದೊರೆತ ಆಧಾರಗಳ ಮೇಲೆ ಭಾರತದಲ್ಲಿ ದೇವಿಯೇ ಮುಖ್ಯ ದೇವತೆಯಾಗಿದ್ದಳು. ಪ್ರಾಚೀನ ಬುಡಕಟ್ಟುಗಳ ಆಚಾರ-ವಿಚಾರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅವರಲ್ಲಿ ಮಾತೃ ಆರಾಧನೆಯ ಅಂಶಗಳು ಗೋಚರಿಸುತ್ತವೆ. 'ಹೀಗಾಗಿ ನಮ್ಮಲ್ಲಿ ಕಂಡುಬರುವ ಯೌಗಿಕ ಪಂಥಗಳಲ್ಲಿ ಯೋಗಿಣಿ(ಸ್ತ್ರೀಯರು)ಯರು ಸಾಮಾನ್ಯವಾಗಿ ಕಂಡುಬರುತ್ತವೆ. ಹಂಪೆಯ ಪರಿಸರದಲ್ಲಿ ವಿರಕ್ತರಂತೆ ವಿರಕ್ತಿಣಿಯರಿರಬಹುದು ಆದರೆ ಅವರ ಬಗೆಗೆ ಸ್ಪಷ್ಟ ಮಾಹತಿ ಇಲ್ಲ. 'ಹಂಪೆ' ಪ್ರಾಚೀನ ಕಾಲದಿಂದಲೂ ಒಂದು ಆಧ್ಯಾತ್ಮಿಕ ಕೇಂದ್ರ. ಹೀಗಾಗಿ ಇದು ಯೌಗಿಣಿಯರ ನೆಲೆಯಾಗಿರಲು ಸಾಧ್ಯತೆಗಳಿವೆ. ಇದುವರೆಗೆ ವಿರಕ್ತರನ್ನು ಕುರಿತು ಬಂದಿರುವ ಅಧ್ಯಯನಗಳನ್ನು ಗಮನಿಸಿದಾಗ ಎಲ್ಲೂ ಮಹಿಳಾ ವಿರಕ್ತಿಣಿಯರ ಸುಳಿವು ದೊರೆಯಲಾರದು. "ತಾಂತ್ರಿಕ ಪಂಥಗಳಲ್ಲಿ ಸಾಧನೆಗೆ ಹೆಣ್ಣು ಉಪಕರಣ ಮಾತ್ರವಲ್ಲ. ಸಾಧನೆಯ ಕೊನೆಗೆ ಸಿಗುವ ದೈವಿಕ ಅನುಭವ ಕೂಡ ಇಂತಹ ಆಚರಣೆ ಮಾಡುತ್ತಿದ್ದ ಯೋಗಿನಿಯರು ಶಾಕ್ತ, ಕೌಳ, ವಜ್ರಯಾನ ಪಂಥಗಳಲ್ಲಿದ್ದರು."[೬]

"ಮೂಲತಃ ವಿರಕ್ತವಾದಿಯಾದ ನಾಥ ಪಂಥವು ಗಂಡು ಹೆಣ್ಣು ಸಂಯೋಗದ ಪರಿಭಾಷೆಯನ್ನು ತಾತ್ವಿಕವಾಗಿ ಹಾಗೂ ಸಾಂಕೇತಿಕವಾಗಿ ಬಳಸುತ್ತದೆ. ಆದರೆ ಶಾಕ್ತರು ಹಾಗೂ ಕೌಳರು ಈ ತತ್ವವನ್ನು ವಾಸ್ತವಿಕ, ಲೈಂಗಿಕ ಕ್ರಿಯಾಚರಣೆಯಾಗಿ ಆಚರಿಸುತ್ತಾರೆ. ಶಕ್ತಿಯ ಸಹವಾಸವು ಎರಡು ಕಾರ್ಯ ಮಾಡುತ್ತದೆ. ೧. ದೈಹಿಕ ಮಿಲನದ ಹೊತ್ತಿನಲ್ಲಿ ತೃಪ್ತವಾಗುವ ಕಾಮನೆ, ಆಹಾರ, ಕುಡಿತಗಳನ್ನು ನಿಯಂತ್ರಿಸುವುದು. ೨. ಸಿದ್ಧಿ ಪಡೆವ ಮತ್ತು ಶತ್ರು ನಿವಾರಣೆಯ ಸಾಮರ್ಥ್ಯವನ್ನು ಕೊಡುವುದು."[೭] ಡಾ. ರಹಮತ್ ತರಿಕೇರಿಯವರು ತಮ್ಮ 'ಕರ್ನಾಟಕದ ನಾಥ ಪಂಥ' ಎಂಬ ಕೃತಿಯಲ್ಲಿ ಕರ್ನಾಟಕದಲ್ಲಿದ್ದ ಶಾಕ್ತ ಪಂಥದ ಸ್ಥಳಗಳನ್ನು ಈ ಕೆಳಗಿನಂತೆ ತಿಳಿಸುವರು. ಶ್ರೀ ಶೈಲದ ಕದಳಿವನವು ಕೇವಲ ಅಲ್ಲಮನಂತಹ ಸಿದ್ಧನ, ಅಕ್ಕನಂತಹ ಯೋಗಿನಿಯ ದೇಹ ತ್ಯಾಗದ ಜಾಗ ಮಾತ್ರವಲ್ಲ. ಅದು ವಿಭಿನ್ನ ಯೋಗಿಗಳು, ಯೋಗಿನಿಯರು ಭೇಟಿಯಾಗುತ್ತಿದ್ದ ಜಾಗವೂ ಆಗಿತ್ತು. ಬಹುಶಃ ಅಲ್ಲಿ ಏಕಕಾಲಕ್ಕೆ ವಜ್ರಯಾನ ಶಾಕ್ತ, ಕೌಳ ಮುಂತಾದ ಪಂಥಕ್ಕೆ ಸೇರಿದ ಯೋಗಿನಿಯರಿದ್ದರು. ಅದರಲ್ಲಿ ಕರ್ನಾಟಕದಲ್ಲಿ ಶಾಕ್ತ ಪಂಥದ ಯೋಗಿಣಿಯರು, ಶ್ರೀಶೈಲ, ಸಿದ್ಧನಕೊಳ್ಳಿ (ಹುನುಗುಂದ) ಹುಲಿಗಿ (ಕೊಪ್ಪಳ), ಎಲ್ಲಮ್ಮನ ಗುಡ್ಡ (ಸವದತ್ತಿ) ಶಾಕ್ತ ಪಂಥದ ಜಾಗಗಳಾಗಿದ್ದವು.

ಹೀಗಾಗಿ ಶೈವ ಧರ್ಮದ ಜೊತೆ ನಿಕಟವಾದ ಸಂಬಂಧ ಹೊಂದಿದ ಶಾಕ್ತ ಪಂಥದ ಮೇಲೆ ಸೌಖ್ಯ, ಯೋಗ ಮತ್ತು ಅದ್ವೈತ ದರ್ಶನಗಳ ಪ್ರಭಾವವು ಕಂಡುಬರುವುದು. "ಶಾಕ್ತ ದರ್ಶನವು ಒಂದು ದೃಷ್ಟಿಯಿಂದ ತಿರುವುಮುರುವಾದ ಅದ್ವೈತ ದರ್ಶನವೆಂದು ಹೇಳಬಹುದು. ಅದ್ವೈತಿಗಳು ಬ್ರಹ್ಮವನ್ನೇ ಮುಖ್ಯವಾಗಿ ಪರಿಗಣಿಸಿ ಮಾಯೆಯನ್ನು ಆತನ ಶಕ್ತಿಯಾಗಿ ಒಪ್ಪುತ್ತಾರೆ.

ಅವರಲ್ಲಿ ಎಲ್ಲ ಉಪಾಸನೆಗಳಿಗೂ ಬ್ರಹ್ಮವೇ ಕೇಂದ್ರ, ಇಲ್ಲಾದರೆ ಶಕ್ತಿಯೇ ಪ್ರಧಾನ. ಶಕ್ತಿಯುಳ್ಳ ವ್ಯಕ್ತಿ ಇಲ್ಲಿ ಗೌಣ. ಹೀಗೆ ಈ ದರ್ಶನದಲ್ಲಿ ಶಕ್ತಿಯು ಸರ್ವಾತ್ಮಿಕೆ; ಸರ್ವ ಕಾರಣಳು; ಮಹಾಮಾಯಾ ಸ್ವರೂಪಿಣಿ; ಭುಕ್ತಿ ಮುಕ್ತಿಪ್ರದಾಯಿನಿ, ಜೀವರ ಶಕ್ತಿಯು ಆಕೆಯ ಅಂಶ ಮಾತ್ರ, ಸಾಧನೆಯಿಂದ ಆಕೆಯನ್ನು ಒಲಿಸಿಕೊಂಡು ಆಕೆಯದೆ ಸೃಷ್ಟಿಯಾದ ಈ ಮಾಯಾ ಪ್ರಪಂಚದಿಂದ ಬಿಡುಗಡೆಯನ್ನು ಹೊಂದಬಹುದು. ಈ ತತ್ತ್ವ ಪ್ರತಿಪಾದನೆಯೊ ಶಾಕ್ತ ದರ್ಶನ ಇವುಗಳ ಆಚರಣೆಯೇ ಶಾಕ್ತಪಂಥ ಇದನ್ನು ಅನುಸರಿಸುವವರೇ ಶಾಕ್ತರು"[೬೪]

೯. ಶುದ್ಧಶೈವ

ಪ್ರಾಚೀನ ಕಾಲದಿಂದಲೂ ಈ ಶೈವ ಶಾಖೆಗಳನ್ನು ಕುರಿತು ಹಲವು ಮಂದಿ ವಿದ್ವಾಂಸರಲ್ಲಿ ಒಂದು ರೀತಿಯ ದ್ವಂದ್ವದ ಪರಿಕಲ್ಪನೆ ಇದೆ. ಆದರೆ ಕೆಲವು ಮಂದಿ ಚಿಂತಕರು ಹಲವು ಆಧಾರಗಳನ್ನು ಪರಿಗಣಿಸಿ ಶೈವವನ್ನು ಜಾತಿಭೇದದಿಂದ ಏಳೆಂದು ಹಾಗೂ ಆಚಾರ ಭೇದದಿಂದ ನಾಲ್ಕೆಂದು ಗುರುತಿಸಿರುವರು. ಈ ರೀತಿಯ ವಿಭಾಗ ಕ್ರಮದಲ್ಲಿ ಆಚಾರ ಭೇದದ ವಿಭಾಗ ಕ್ರಮವು ವೈಜ್ಞಾನಿಕವಾದದೆಂದು ಡಾ. ಎಂ.ಎಂ. ಕಲಬುರ್ಗಿಯವರ ಅಭಿಮತವಾಗಿದೆ. ಪ್ರೊ. ಡೆವಿಡ್ ಲೊರೆಂಝುನವರು ಹಲವು ಪುರಾಣ, ಆಗಮ ಹಾಗೂ ಶಾಸನಗಳನ್ನು ಅನುಲಕ್ಷಿಸಿ ಶೈವ ಶಾಖೆಗಳ ಸಂಖ್ಯೆ ನಾಲ್ಕೆಂದು ತಿಳಿಸಿದ್ದಾರೆ. "ಇವರು ಸಿರಸಂಗಿ (೧೧೪೮) ಮತ್ತು ನೇಸರಿಗಿ (೧೨೧೯) ಶಾಸನಗಳಲ್ಲಿ ಕಂಡುಬರುವ ಪುನರುಕ್ತ ಕಂದಪದ್ಯದಲ್ಲಿಯೂ ಇದೇ ನಾಲ್ಕು ಶೈವಗಳ ಉಲ್ಲೇಖವಿರುವುದನ್ನು ಸೂಚಿಸಿದ್ದು ಆ ಪದ್ಯ ಹೀಗಿದೆ.

> ನೆಗರ್ದ್ದ ಮಹಾವ್ರತಿಗಳೊಳಂ
> ನೆಗರ್ದ್ದ ಮಹಾಪಾಸುಪತದೊಳ್ ಸ್ರೋತ್ರೀಯದೊಳಂ ।
> ನೆಗರ್ದ್ದ ದಗಣಿತಮೆನಲ್ಕೆ
> ನೆಗರ್ದ್ದ ಕಾಳಾಮುಖ ಸುಧರ್ಮಂ ಪ್ರಮುಖಂ ।

ಇಲ್ಲಿ ಮಹಾವ್ರತಿ, ಪಾಶುಪತ, ಶ್ರೋತ್ರೀಯ, ಕಾಳಾಮುಖವೆಂಬ ಶಾಖೆಗಳನ್ನು ಸೂಚಿಸಲಾಗಿದೆ."[೬೫] "ಶಿವನು ಶುದ್ಧನೆಂದು ಕರೆಯಲಾಗಿದೆ. ಶಿವನಿಂದ ಉದ್ಭವವಾದುದು ಶೈವ ಎನಿಸುತ್ತದೆ. ನಾನು ಶುದ್ಧ ಶಿವಸಂಭೂತನೆನ್ನುವ ಭಾವವುಳ್ಳವನೇ ಶುದ್ಧಶೈವನು."[೬೬] ಶುದ್ಧ ಶೈವರು ಸಾಮಾನ್ಯವಾಗಿ ಶಿವಲಿಂಗದ ಹೊರತು ಮತ್ತಾವ ದೇವತೆಗಳತ್ತ ಮನವನ್ನು ಹರಿಬಿಡದೆ ಶಿವಲಿಂಗ ಪೂಜೆಯಲ್ಲಿಯೇ ದೃಢಚಿತ್ತರಾಗಿರುವವರು. ಲಿಂಗಧಾರಣರಾದ ಇವರು ಶಿವನೊಬ್ಬನನ್ನೇ ಪೂಜಿಸುವರಾಗಿದ್ದಾರೆ. ಹೀಗಾಗಿ ಶೈವ ಧರ್ಮಗಳಲ್ಲಿ ಹಲವು ಪ್ರಭೇದಗಳು ಕಂಡುಬಂದರೂ ಅವುಗಳ ಅಂತಿಮ ಗುರಿ ಶಿವೋಪಾಸನೆಯಾಗಿದೆ. ದ್ವೈತ ಪರಿಕಲ್ಪನೆಯದಾದ ಇವುಗಳಲ್ಲಿ ಶುದ್ಧ

ಶೈವವು ದ್ವೈತ ಹಾಗೂ ಅದ್ವೈತ ಪರಿಕಲ್ಪನೆಯದಾದರೆ, ಶರಣ ಧರ್ಮವು ಅದ್ವೈತ ಭಾವವುಳ್ಳದಾಗಿದೆ. ಇದುವರೆಗೂ ಶೈವವನ್ನು ಕುರಿತು ಅಧ್ಯಯನ ಮಾಡಿದ ವಿದ್ವಾಂಸರಾದ ಲೊರೆಂಝು, ಕಪಟರಾಳರು, ಡಾ.ಚಿದಾನಂದಮೂರ್ತಿಯವರು ಶುದ್ಧಶೈವ (ಶಿವಸಮಯ) ಕುರಿತು ಇದು ಪ್ರತ್ಯೇಕವಾದ ಪಂಥವೆಂದು ಗುರುತಿಸುವ ಕೆಲಸಕ್ಕೆ ಹೋಗಿಲ್ಲ. "ಹೀಗಾಗಿ ತುಂಬ ಉಪೇಕ್ಷಿತವಾಗಿರುವ ಈ ಶ್ರೋತ್ರಿಯ ಅಥವಾ ಶೈವದ ಇನ್ನೊಂದು ಹೆಸರು ಶುದ್ಧ ಶೈವವೆಂದು ಆಂಧ್ರದ ಮಲ್ಕಪುರಂ, ಕರ್ನಾಟಕದ ಸವದತ್ತಿ ಶಾಸನಗಳು ತಿಳಿಸುತ್ತವೆ."[೭೭] ಕಾಶ್ಮೀರದಲ್ಲಿ ಜನಿಸಿದವರೆನ್ನಲಾದ ಈ ಶುದ್ಧ ಶೈವಕ್ಕೆ ಶ್ರೋತ್ರೀಯ ಶೈವ, ಶಿವಸಮಯ, ಸಿದ್ಧಾಂತ ಶೈವ, ಶುದ್ಧಶೈವ, ಮಾಹೇಶ್ವರ ಶೈವ, ಶ್ರೀಕಂಠಶೈವ, ಆರಾಧ್ಯಶೈವವೆಂದು ಈ ರೀತಿಯ ಪರ್ಯಾಯ ನಾಮಗಳಿದ್ದವೆಂದು ಡಾ. ಎಂ.ಎಂ.ಕಲಬುರ್ಗಿಯವರು ಸ್ಪಷ್ಟವಾಗಿ ಗುರುತಿಸುತ್ತಾರೆ.

"ಆಗಮನಿಷ್ಠ ಶೈವ ಬ್ರಾಹ್ಮಣವಾದ ಶುದ್ಧ ಶೈವದಲ್ಲಿ ಹರಿಹರ, ರಾಘವಾಂಕ, ಕೆರೆಯ ಪದ್ಮರಸ ಸೇರುವರು. ಜನಿವಾರಧಾರಿಗಳಾದ ಹರಿಹರನನ್ನು ಶುದ್ಧಶೈವನೆಂದು ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ ಎಂಬ ಕೃತಿಯಲ್ಲಿ ಕರೆದಿದೆ. ಜನಿವಾರಧಾರಿಗಳಾಗಿಯೂ ಇವರು ಬ್ರಾಹ್ಮಣ (ವೈದಿಕ)ನಿಂದೆ ಮಾಡಿದ ನಿದರ್ಶನಗಳಿವೆ. ರಾಘವಾಂಕನ ತಂದೆ "ಶಿವಬ್ರಾಹ್ಮಣೋತ್ತಮ ...... ಮಹಾದೇವ ಭಟ್ಟ" ನೆಂದು ಸಿದ್ಧನಂಜೇಶನ ರಾಘವಾಂಕ ಚಾರಿತ್ರ್ಯದಲ್ಲಿ ಹೇಳಲಾಗಿದೆ. ಹೀಗಾಗಿ ಇವರು ವೈದಿಕ ಬ್ರಾಹ್ಮಣರಲ್ಲ, ಆಗಮಿಕ ಬ್ರಾಹ್ಮಣರೆನಿಸುತ್ತದೆ. ಈ ಪರಂಪರೆಯವರು ತೀರ ಪ್ರಾಚೀನ ಕಾಲದಿಂದಲೂ ವೇದದ ಶ್ರೇಷ್ಠತೆಯ ವ್ಯಸನಕ್ಕೆ ಒಳಗಾಗಿ ಆಗಮ ಪಥ್ಯವನ್ನು ಹೆಚ್ಚು ವೇದಮುಖಿ ಮಾಡುತ್ತ ಬಂದರು. ಬಳಿಕ ೧೨ನೆಯ ಶತಮಾನದಲ್ಲಿ ಶರಣ ಧರ್ಮದ ಜನಪ್ರಿಯತೆಗೆ ಮರುಳಾಗಿ, ಅದರ ವಿಚಾರಗಳನ್ನು ಆಗಮದಲ್ಲಿ ಬೆರೆಸುತ್ತ ಬಂದರು."[೭೮] "ಕ್ರಿ.ಶ.೧೨ನೆಯ ಶತಮಾನದ ಬಳಿಕ ಲಿಂಗಾಯುತ ಸಂಪ್ರದಾಯದಲ್ಲಿ ಇಲ್ಲಿಯ ಪಾಶುಪತ, ನಕುಲೀಶ, ಮಹಾವ್ರತಿ, ಶೈವರಂತೆ ಈ ಶುದ್ಧ ಶೈವರು ಮತಾಂತರ ಹೊಂದಿದ್ದರೂ, ಬರಬರುತ್ತಾ ಆ ಸಂಪ್ರದಾಯಕ್ಕೆ ವೀರಶೈವ ಹೆಸರಿನಿಂದ ವಾರಸುದಾರರಾಗಿ ನಿಂತರು. ಇವರಲ್ಲಿ ಎತ್ತಿ ಹೇಳಬೇಕಾದ ಮೊದಲ ವ್ಯಕ್ತಿ ಕೆರೆಯ ಪದ್ಮರಸ, ಜನಿವಾರ ಇಷ್ಟಲಿಂಗಗಳೆರಡನ್ನೂ ಧರಿಸಿದ ಈತನು ಶುದ್ಧಶೈವ ಸಿದ್ಧಾಂತ ಮತ್ತು ಶರಣ ಸಿದ್ಧಾಂತಗಳ ಸಮನ್ವಯವೆಂಬಂತೆ ತನ್ನ 'ದೀಕ್ಷಾಬೋಧೆ' ರಚಿಸಿದ್ದಾನೆ."[೭೯] ಧಾರ್ಮಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ನಾಡಿನ ತುಂಬ ಪ್ರಸಿದ್ಧತೆಯನ್ನು ಪಡೆದ ಹಂಪೆಗೆ ಅಂದು ಹಲವು ಕಡೆಯಿಂದ ಮತಪಂಥಗಳು ಬಂದು ಆಶ್ರಯ ಪಡೆದವು. ಅಲ್ಲಿ ಶರಣರ ತತ್ವಗಳನ್ನು ಪಾಲಿಸುವುದರ ಜೊತೆಗೆ ಆ ಧರ್ಮದಲ್ಲಿ ಲೀನವಾದವು. ಇದರಂತೆ ಅಂದು ವಿರಕ್ತರು ಸಹ ಬೇರೆ ಬೇರೆ ಕಡೆಯಿಂದ ಹಂಪೆಗೆ ಬಂದು ಶರಣ ಧರ್ಮದ ಪ್ರಭಾವಕ್ಕೆ ಒಳಗಾಗಿ ಆ ಧರ್ಮವನ್ನು ವೀರಶೈವೀಕರಿಸಿದರು.

ತಮ್ಮ ಮೂಲ ಆಚಾರ-ವಿಚಾರಗಳನ್ನು ಬಿಡದೆ ಇತ್ತ ಶರಣ ತತ್ವಗಳಿಗೆ ವಾಲಿದ ವಿರಕ್ತರು, ಅಂದು ಸಂಕರವಾದ ಸ್ಥಿತಿಯಲ್ಲಿ ಬದುಕುತ್ತಿದ್ದರು. ಪಂಡಿತರು, ವಿದ್ವಾಂಸರು ಹಾಗೂ ಅನುಭಾವಿಗಳಾದ ವಿರಕ್ತರು ಕೆಲವೊಂದು ಲಘು ಕೃತಿಗಳಲ್ಲಿ ಶರಣತತ್ವದ ಬಗೆಗೆ ಪ್ರಸ್ತಾಪಿಸಿದ್ದಾರೆ.

ಅಂದು ವಿರಕ್ತರು ಮಾತ್ರವಲ್ಲ ಶಿಷ್ಟ ಮತ್ತು ಪರಿಶಿಷ್ಟ ನೆಲೆಯ ಹಲವು ಪಂಥಗಳು ಈ ಶರಣ ಧರ್ಮದಲ್ಲಿ ಲೀನವಾಗಿದ್ದರ ಬಗೆಗೆ ಆಧಾರಗಳು ಉಂಟು. "ಹನ್ನೆರಡನೆಯ ಶತಮಾನದ ಶರಣ ಧರ್ಮವೆಂಬ ಕುದಿಯುವ ಪಾತ್ರೆಯಲ್ಲಿ ಸಮಕಾಲೀನ ಅನೇಕ ಮತ ಪಂಥಗಳು ಕರಗಿ ಹೋದವು. ಇವುಗಳಲ್ಲಿ ಶಿವಪರವಾಗಿದ್ದ ಕಾರಣ ಪರಿಶಿಷ್ಟ ನೆಲೆಯ ನಾಥಶೈವ ಮತ್ತು ಶಿಷ್ಟ ನೆಲೆಯ ನಾಲ್ಕು ಧರ್ಮಗಳಾದ ಪಾಶುಪತಶೈವ, ನಕುಲೀಶಶೈವ (ಕಾಳಾಮುಖ) ಮಹಾವ್ರತ ಶೈವ (ಸೋಮ ಕಾಪಾಲಿಕ) ಶುದ್ಧಶೈವಗಳು ಬೇಗ ಕರಗಿಹೋದವು."[೮೦] ಪ್ರೌಢದೇವರಾಯನ ಕಾಲವು ಧರ್ಮ ಹಾಗೂ ಸಾಹಿತ್ಯದ ದೃಷ್ಟಿಯಿಂದ ಉನ್ನತ ಸ್ಥಾನಗಳಿಸಿತ್ತು. ಸಾಹಿತ್ಯ ಕೃತಿಗಳಲ್ಲಿ ಪರಿಶಿಷ್ಟ ನೆಲೆಯ ವಿರಕ್ತರನ್ನು ಶಿಷ್ಟ ಸಂಪ್ರದಾಯದ ಶರಣರೆಂಬಂತೆ ಚಿತ್ರಿಸಿರುವರು. ಅಲ್ಲದೆ ಅಂದಿನಿಂದ ಇಂದಿನವರೆಗೂ ವಿರಕ್ತರನ್ನು ಕುರಿತು ಬಂದ ಅಧ್ಯಯನಗಳು ಸಂಪೂರ್ಣ ವೀರಶೈವಮಯವಾಗಿದೆ. ಆಧುನಿಕ ವಿದ್ವಾಂಸರು ಸಹ "ಹಿರಿಯ ತಲೆಮಾರಿನ ವಿದ್ವಾಂಸರು ನೀಡಿದ ನಿರ್ಣಯಗಳನ್ನೇ ಮತ್ತೆ ಮತ್ತೆ ಉಚ್ಚರಿಸಿ ಉದ್ಧರಿಸಿ"[೮೧] ಅವರು ನಡೆದ ಮಾರ್ಗದಲ್ಲಿಯೇ ಸಾಗಿದ್ದಾರೆ. ಅಳಿವಿನ ಅಂಚಿನಲ್ಲಿದ್ದ ಶರಣ ಧರ್ಮವನ್ನು ಉದ್ಧರಿಸಿದವರು ಬೇರೆ ಪಂಡಿತ ಮಹಾಶಯರು. (ಅವರ ಬಗೆಗೆ ಈ ಹಿಂದೆ ಪ್ರಸ್ತಾಪಿಸಿದ್ದೇನೆ) ಅದೇ ವೇಳೆಯಲ್ಲಿ ಧಾರ್ಮಿಕ ಸ್ಥಿತ್ಯಂತರದ ಪ್ರಬಲ ಗಾಳಿ ಬೀಸತೊಡಗಿತ್ತು. "ವಿಜಯನಗರದ ಹೊರಗಿದ್ದ ಶೈವ ಧರ್ಮ ಒಳಸೇರಿ ತಾನು ಮನರುಜ್ಜೀವನಗೊಳ್ಳುವ ನೆಪದಲ್ಲಿ ಒಳಗಿದ್ದ ಶರಣ ಧರ್ಮವನ್ನು (ವೀರಶೈವ, ಲಿಂಗಾಯುತ) ಕೂಡಿಕೊಂಡು ಡೇರಿಯನ್ನು ಹೊಕ್ಕ ಒಂಟೆ, ಡೇರಿಯನ್ನೇ ಎತ್ತಿಕೊಂಡು ಹೋದಂತೆ ವೀರಶೈವ ಮನರುಜ್ಜೀವನವಾಯಿತೆಂಬ ಭ್ರಮೆಯನ್ನು ಹುಟ್ಟಿಹಾಕಿದುದು ಈಗ ಇತಿಹಾಸ."[೮೨]

ಒಟ್ಟಿನಲ್ಲಿ ಶುದ್ಧ ಶೈವದಂತೆ ನೂರೊಂದು ವಿರಕ್ತರು ಶರಣ ಧರ್ಮದಲ್ಲಿ ಸಂಪೂರ್ಣ ಲೀನವಾಗದೆ ತನ್ನದೆ ಆದ ಒಂದು ಅನನ್ಯತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಅದರ ಸೂಕ್ಷ್ಮತೆಯನ್ನು ಸಾಮಾನ್ಯವಾಗಿ ವಿದ್ವಾಂಸರು ಗಂಭೀರವಾಗಿ ಪರಿಗಣಿಸಿದಂತೆ ಕಾಣುವುದಿಲ್ಲ.

ಈ ಅಧ್ಯಾಯದಲ್ಲಿ ಕಂಡುಕೊಂಡ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

೧. ಈ ಮೇಲಿನ ಒಂಬತ್ತು ಸಂತ ಪರಂಪರೆಯೊಂದಿಗೆ ನೂರೊಂದು ವಿರಕ್ತರನ್ನು ಮುಖಾಮುಖಿ ಮಾಡಿ ನೋಡಿದಾಗ ಅವರ ತತ್ವಗಳಿಗೆ, ಆಚಾರ ವಿಚಾರಗಳಿಗೆ ಈ ವಿರಕ್ತರು ತುಂಬಾನೆ ಹತ್ತಿರದವರಾಗಿ ಕಂಡುಬರುವರು.

೨. ಪ್ರೌಢದೇವರಾಯನ ಕಾಲದಲ್ಲಿ ರಚನೆಯಾದ ವೀರಶೈವ ಸಾಹಿತ್ಯ ಹಾಗೂ ಪುರಾಣ ಕೃತಿಗಳಲ್ಲಿ ಈ ನೂರೊಂದು ಗಣೇಶ್ವರರು ಮಹಿಮೆಯನ್ನು ತೋರುವುದಕ್ಕಾಗಿ ಇಳೆಯಲ್ಲಿ ಜನಿಸಿ ಜಂಗಮ ಸ್ಥಲವಂಗಿಕರಿಸಿ ವಿರತರಾಗಿರುವರಂತೆ ಚಿತ್ರಿಸಿರುವರು.

೩. ಹಂಪೆಯಲ್ಲಿ ನೆಲೆನಿಂತಿದ್ದ ಸಂತ ಪರಂಪರೆಗೂ ಹಾಗೂ ನೂರೊಂದು ವಿರಕ್ತರನ್ನು ತೌಲನಿಕವಾಗಿ ಅಧ್ಯಯನ ಮಾಡಿದಾಗ ಕೆಲವೊಂದು ಅಂಶಗಳಲ್ಲಿ ಇವರಲ್ಲಿ ಸಾಮ್ಯತೆ ಕಂಡುಬಂದರೆ ಮತ್ತೇ ಕೆಲವೊಂದು ಅಂಶಗಳಲ್ಲಿ ವಿರೋಧಬಾಸಗಳು ಗೋಚರಿಸುತ್ತವೆ. ಪಂಚಮಕಾರದಂತಹ ಮಧ್ಯ, ಮಾಂಸದ ಸೇವನೆ ವಿರಕ್ತರಲ್ಲಿ ಕಂಡುಬರಲಾರದು. ಆದರೆ ಕೆಲವೊಂದು ಬಾಹ್ಯ ಹಾಗೂ ಆಂತರಿಕ ಕ್ರಮಗಳು ಏಕರೂಪದ ರೀತಿಯಲ್ಲಿವೆ.

೪. ಮಧ್ಯಕಾಲೀನ ಸಂದರ್ಭದ ಕರ್ನಾಟಕಾಂಧ್ರದಲ್ಲಿ ಶೈವ ಧರ್ಮದ ಹಲವು ಧಾರೆಗಳು ಶರಣ ಧರ್ಮದ ಪ್ರಭಾವಕ್ಕೆ ಒಳಗಾಗಿ ಅದರಲ್ಲೇ ಲೀನವಾಗಿದ್ದ ಬಗೆಗೆ ಹಲವು ಉಲ್ಲೇಖಗಳಿವೆ. ಇವುಗಳಂತೆ ಅಂದು ನೂರೊಂದು ವಿರಕ್ತರು ಸಹ ಶರಣ ಧರ್ಮಕ್ಕೆ ಆಕರ್ಷಿತರಾಗಿ ಆ ಧರ್ಮವನ್ನು ಪುನಃರುಜ್ಜೀವನಗೊಳಿಸಲಿಲ್ಲ. ಬದಲಾಗಿ ಆ ಧರ್ಮವನ್ನು ವೀರಶೈವಿಕರಿಸಿದರು.

೫. ಈ ಮೇಲೆ ತಿಳಿಸಿದ ಸಂತ ಪರಂಪರೆಯಲ್ಲಿ ಅವಧೂತರ ಆಚಾರ, ವಿಚಾರ, ಲಕ್ಷಣ ಹಾಗೂ ತತ್ವಗಳ ಪರಿಕಲ್ಪನೆಗೂ ವಿರಕ್ತರ ತತ್ವಗಳ ಪರಿಕಲ್ಪನೆಗಳು ತುಂಬ ಸನ್ನಿಹಿತವಾಗಿವೆ. ಹೀಗಾಗಿ ಈ ವಿರಕ್ತರು ಅವಧೂತ ಪರಂಪರೆಯಂತೆ 'ಶಾಂತ ಪರಂಪರೆ ಅಥವಾ ಶಾಂತ ಸಂಪ್ರದಾಯ'ದವರಾಗಿ ಕಂಡುಬರುವರು.

೬. ವಾಮಾಚಾರಿಗಳಾದ ವಿರಕ್ತರು ತಾಂತ್ರಿಕ ಪಂಥದ ಯೋಗಿಗಳಂತೆ ಜನಸಾಮಾನ್ಯರ ಬದುಕಿಗೆ ತುಂಬ ಹತ್ತಿರದವರಾಗಿ, ಅವರ ತಾಪತ್ರಯಗಳಿಗೆ ಸ್ಪಂದಿಸಿದವರಾಗಿವರು. ಅಲ್ಲದೆ ಅವರ ರೋಗ ರುಜನೆಗಳನ್ನು ಗುಣಪಡಿಸಿದವರಾಗಿ ಕಂಡುಬರುವರು.

೭. ಆಧ್ಯಾತ್ಮಿಕವಾದಿಗಳಾದ ವಿರಕ್ತರು ಶಿವೋಪಾಸಕರಾಗಿರುವರು. ವಿರಕ್ತರ ಹಾಗೂ ಸಂತರ ಆಚರಣ ಕ್ರಮಗಳಲ್ಲಿ ಕೆಲವೊಂದು ವ್ಯತ್ಯಾಸ ಕಂಡುಬಂದರೂ ಇವರೆಲ್ಲರ ಅಂತಿಮ ಗುರಿ ಮಾತ್ರ ಒಂದೇ ಆಗಿರುವುದು.

೮. ವಿರಕ್ತರು ಬಾಹ್ಯ ಆಚರಣೆಗಿಂತ ಆಂತರಿಕ ಆಚರಣೆಯ ಕಡೆಗೆ ಹೆಚ್ಚು ಒಲವನ್ನು ತೋರಿದವರು. ಹೀಗಾಗಿ ತುಂಬ ಹಟವಾದಿಗಳಾದ ಇವರು ಬದುಕಿನ ಜಂಜಾಟದಿಂದ ದೂರ ಉಳಿದು ಆಧ್ಯಾತ್ಮಿಕವಾದಂತಹ ನೆಲೆಯನ್ನು ಕಂಡುಕೊಂಡವರು.

೯. ಸರ್ವ ಧರ್ಮದ ಎಲ್ಲೆಯನ್ನು ಮೀರಿದ ವಿರಕ್ತರು ಉಳಿದ ಸಂತರಂತೆ ಯಾವ ಪಂಥವನ್ನು ಮೇಲುಕೀಳೆಂದು ಪರಿಗಣಿಸಲಿಲ್ಲ. ಇವರು ಲೌಕಿಕಕ್ಕಿಂತ ಅಲೌಕಿಕದ ಕಡೆಗೆ ಹೆಚ್ಚು ಒಲವುಳ್ಳವರು. ಹೆಣ್ಣು, ಹಣ, ಅಧಿಕಾರ, ಸಂಪತ್ತನ್ನು ಖಂಡಿಸಿದ ಇವರು ಸಾಂಸ್ಥಿಕ ಧರ್ಮದ ಚೌಕಟ್ಟನ್ನು ಮೀರಿದವರು.

ಅಡಿಟಿಪ್ಪಣಿಗಳು

೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ - ಡಾ. ಎಂ.ಚಿದಾನಂದಮೂರ್ತಿ, ಪುಟ-೧೩೮.

೨. ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ ವಿವೇಚನೆ - (ಸಂ) ಡಾ.ಕೆ.ರವೀಂದ್ರನಾಥ, ಪುಟ, ೧

೩. ನಾಡು ನುಡಿ ಮತ್ತು ಲಾಕುಳ ಶೈವ ಇತಿಹಾಸ - ಕಪಟರಾಳ ಕೃಷ್ಣರಾಯರು, ಪುಟ-೧೯೧.

೪. ಕರ್ನಾಟಕಲ್ಲಿ ಲಾಕುಳ ಶೈವ ಇತಿಹಾಸ - ಕಪಟರಾಳರು, ಪುಟ-೨.

೫. ನಾಡು ನುಡಿ ಮತ್ತು ಲಾಕುಳ ಶೈವ ಇತಿಹಾಸ - ಕಪಟರಾಳ ಕೃಷ್ಣರಾಯರು, ಪುಟ-೧೮೫

೬. ಅದೇ - ಪುಟ-೧೮೭

೭. ಅದೇ - ಪುಟ-೧೯೧

೮. ಮಾರ್ಗ-೧, ಡಾ. ಎಂ.ಎಂ.ಕಲಬುರ್ಗಿ, ಪುಟ-೧೭೪

೯. ನಿರೂಪಾದಿ, ಅಭಿನಂದನಾ ಗ್ರಂಥ (ಸಂ) ಡಾ.ಬಿ.ಕೆ.ಹಿರೇಮಠ, ಪುಟ-೪೧೪

೧೦. ಅದೇ - ಪುಟ-೪೧೪

೧೧. ಮಾರ್ಗ-೧, ಡಾ. ಎಂ.ಎಂ.ಕಲಬುರ್ಗಿ, ಪುಟ-೧೭೫

೧೨. ಅದೇ - ಪುಟ-೧೭೬

೧೩. ಕರ್ನಾಟಕ ನಾಥಪಂಥ - ಡಾ. ರಹಮತ್ ತರೀಕೆರೆ, ಪುಟ-೫೭

೧೪. ನಿರೂಪಾದಿ, ಅಭಿನಂದನಾ ಗ್ರಂಥ (ಸಂ) ಡಾ.ಬಿ.ಕೆ.ಹಿರೇಮಠ, ಪುಟ-೩೮೦-೩೮೧

೧೫. ಕರ್ನಾಟಕ ನಾಥಪಂಥ - ಡಾ. ರಹಮತ್ ತರೀಕೆರೆ, ಪುಟ-೫೧

೧೬. ನಿರೂಪಾದಿ, ಅಭಿ, (ಸಂ) ಡಾ.ಬಿ.ಕೆ.ಹಿರೇಮಠ, ಪುಟ-೩೭೬

೧೭. ಕಾಪಾಲಿಕರು ಮತ್ತು ಕಾಳಮುಖರು/ಮೂಲ/ಡೆವಿಡ್ ಎನ್. ಲಾರೆಂಜನ್, ಅನುವಾದ/ವಿರೂಪಾಕ್ಷ ಕುಲಕರ್ಣಿ, ಪುಟ-೧೮

೧೮. ನಿರೂಪಾದಿ, ಅಭಿ, (ಸಂ) ಡಾ.ಬಿ.ಕೆ.ಹಿರೇಮಠ, ಪುಟ-೩೭೮-೩೭೯

೧೯. ಕಾಪಾಲಿಕರು ಮತ್ತು ಕಾಳಮುಖರು/ಮೂಲ/ಡೆವಿಡ್ ಎನ್. ಲಾರೆಂಜೆನ್, ಅನುವಾದ/ವಿರೂಪಾಕ್ಷ ಕುಲಕರ್ಣಿ, ಪುಟ-೪೦

೨೦. ಕರ್ನಾಟಕ ನಾಥಪಂಥ - ಡಾ. ರಹಮತ್ ತರೀಕೆರೆ, ಪುಟ-೫೧

೨೧. ಕಾಪಾಲಿಕರು ಮತ್ತು ಕಾಳಮುಖರು/ಮೂಲ/ಡೆವಿಡ್ ಎನ್. ಲಾರೆಂಜನ್, ಅನುವಾದ/ವಿರೂಪಾಕ್ಷ ಕುಲಕರ್ಣಿ, ಪುಟ-೧೧೯

೨೨. ಅದೇ - ಪುಟ-೧೨೦

೨೩. ಅದೇ - ಪುಟ-೧೨೧

೨೪. ಕರ್ನಾಟಕ ನಾಥಪಂಥ - ಡಾ. ರಹಮತ್ ತರೀಕೆರೆ, ಪುಟ-೫೫

೨೫. ಅದೇ - ಪುಟ-೫೪-೫೫

೨೬. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ - ಎಂ.ಚಿದಾನಂದಮೂರ್ತಿ, ಪುಟ-೧೪೦.

೨೭. ಅದೇ - ಪುಟ-೧೪೧

೨೮. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ - ಡಾ. ಶಿವಾನಂದ ವಿರಕ್ತಮಠ, ಪುಟ-೮೮.

೨೯. ಕಾಪಾಲಿಕರು ಮತ್ತು ಕಾಳಮುಖರು/ಮೂಲ/ಡೆವಿಡ್ ಎನ್. ಲಾರೆಂಜನ್, ಅನುವಾದ/ವಿರೂಪಾಕ್ಷ ಕುಲಕರ್ಣಿ, ಪುಟ-೧೧೯

೩೦. ಅದೇ - ಪುಟ-೨೪೮-೨೪೯.

೩೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ - ಎಂ.ಚಿದಾನಂದಮೂರ್ತಿ, ಪುಟ-೧೬೨.

೩೨. ಪಾಶುಪತ ದರ್ಶನ - ಎಸ್.ಎಸ್.ಹಿರೇಮಠ, ಪುಟ-೨೭

೩೩. ನಾಥ ಪಂಥದ ಅನುವಾದಿತ ಕೃತಿಗಳು - ಡಾ.ಶ್ರೀಧರ್ ಎಚ್.ಜಿ. ಪ್ರಸ್ತಾವನೆ, ಪುಟ-೯

೩೪. ಕರ್ನಾಟಕದ ನಾಥಪಂಥ - ಡಾ. ರಹಮತ್ ತರೀಕೆರೆ, ಪುಟ-೨೭

೩೫. ಅದೇ - ಪುಟ-೧೦೭

೩೬. ನಾಥಪಂಥದ ಅನುವಾದಿತ ಕೃತಿಗಳು - ಡಾ. ಶ್ರೀಧರ್. ಎಚ್.ಜಿ. ಪ್ರಸ್ತಾವನೆ, ಪುಟ-೧೭

೩೭. ಅದೇ - ಪುಟ-೨೯.

೩೮. ಅದೇ - ಪುಟ-೩೦

೩೯. ನಾಥ ಸಂಪ್ರದಾಯ ಇತಿಹಾಸ - ಅನು/ಚಂದ್ರಕಾಂತ ಮೊಕಳೆ, ಪುಟ-೩೮

೪೦. ಕರ್ನಾಟಕದ ನಾಥಪಂಥ - ಡಾ. ರಹಮತ್ ತರೀಕೆರೆ, ಪುಟ-೧೭

೪೧. ಅದೇ - ಪುಟ-೧೭

೪೨. ಅದೇ - ಪುಟ-೧೯.

೪೩. ಅದೇ - ಪುಟ-೧೧೭

೪೪. ಹೈದ್ರಬಾದ ಕರ್ನಾಟಕದ ಹಾಡು-ಪಾಡು, ಡಾ. ಅಮರೇಶ್ ಎನ್, ಪುಟ-೩೦-೩೧.

೪೫. ನಿರೂಪಾದಿ ಅಭಿ/ಸಂ.ಡಾ. ಬಿ.ಕೆ.ಹಿರೇಮಠ, ಪುಟ-೩೯೩-೩೯೪.

೪೬. ಕರ್ನಾಟಕದ ನಾಥಪಂಥ - ಡಾ. ರಹಮತ್ ತರೀಕೆರೆ, ಪುಟ-೧೬೭

೪೭. ಬಳ್ಳಾರಿ ಜಿಲ್ಲೆಯ ಅವಧೂತರು-ಡಾ. ಜಿ.ಕರಿಯಪ್ಪ

೪೮. ನಿರೂಪಾದಿ ಅಭಿ/ಸಂ.ಡಾ. ಬಿ.ಕೆ.ಹಿರೇಮಠ, ಪುಟ-೩೯೪.

೪೯. ಅದೇ, ಪುಟ-೩೯೩.

೫೦. ಬಳ್ಳಾರಿ ಜಿಲ್ಲೆಯ ಅವಧೂತರು-ಡಾ. ಜಿ.ಕರಿಯಪ್ಪ

೫೧. ಹೈದಬ್ರಾದ್ ಕರ್ನಾಟಕದ ಹಾಡು-ಪಾಡು- ಡಾ.ಅಮರೇಶ್ ನುಗಡೋಣಿ, ಪುಟ-೩೧.

೫೨. ನಿರೂಪಾದಿ ಅಭಿ, (ಸಂ) (ಸಂ) ಡಾ. ಬಿ.ಕೆ.ಹಿರೇಮಠ, ಪುಟ-೩೯೪.

೫೩. ಚಿದಾನಂದಾವಧೂತ ಚಾರಿತ್ರೆ - (ಸಂ) ಡಾ.ಎಫ್.ಟಿ.ಹಳ್ಳಿಕೇರಿ, ಪ್ರಸ್ತಾವನೆ, ಪುಟ-೧೧.

೫೪. ಅರಿವಿನ ಕಥನ - ಪ್ರೊ. ಮಲ್ಲೇಪುರಂ. ಜಿ. ವೆಂಕಟೇಶ್, ಪುಟ-೩-೪

೫೫. ಅದೇ, ಪುಟ-೭

೫೬. ಬಳ್ಳಾರಿ ಜಿಲ್ಲೆಯ ಅವಧೂತರು-ಡಾ. ಜಿ.ಕರಿಯಪ್ಪ, ಪುಟ-೩

೫೭. ಕಂಠಪತ್ರ-೨, ಡಾ.ಎಫ್.ಟಿ.ಹಳ್ಳೀಕೆರೆ, ಪುಟ-೧೨೪.

೫೮. ಅದೇ, ಪುಟ-೧೨೪.

೫೯. ಬಳ್ಳಾರಿ ಜಿಲ್ಲೆಯ ಅವಧೂತರು-ಡಾ. ಜಿ.ಕರಿಯಪ್ಪ, ಪುಟ-೫

೬೦. ಅದೇ, ಪುಟ-೧೪.

೬೧. ಅದೇ, ಪುಟ-೫೨.

೬೨. ಕರ್ನಾಟಕದ ಸೂಫಿಗಳು - ಡಾ. ರಹಮತ್ ತರೀಕೆರೆ, ಪ್ರಸ್ತಾವನೆ.

೬೩. ಅದೇ, ಪುಟ-೯.

೬೪. ಅದೇ, ಪುಟ-೯.

೬೫. ಅದೇ, ಪುಟ-೨೬

೬೬. ಅದೇ, ಪುಟ-೭೯.

೬೭. ಅದೇ, ಪುಟ-೧೦೮

೬೮. ಅದೇ, ಪುಟ-೧೫೧.

೬೯. ಅದೇ, ಪುಟ-೧೫೩.

೭೦. ಕರ್ನಾಟಕದ ನಾಥಪಂಥ-ಡಾ. ರಹಮತ್ ತರೀಕೆರೆ, ಪುಟ-೭೯.

೭೧. ಕರ್ನಾಟಕದ ಧರ್ಮಗಳು - ಡಾ.ಎಸ್.ಸಿ.ನಂದಿಮಠ, ಪುಟ-೨೮೩.

೭೨. ಕರ್ನಾಟಕದ ನಾಥಪಂಥ-ಡಾ. ರಹಮತ್ ತರೀಕೆರೆ, ಪುಟ-೮೦.

೭೩. ಅದೇ, ಪುಟ-೭೯.

೭೪. ಆನಂದವನ - (ಸಂ) ಪ್ರೊ. ತ.ಸು.ಶಾಮರಾಯ, ಸಿ.ಎನ್.ಕುಲಕರ್ಣಿ, ಪುಟ-೨೭೩.

೭೫. ಶುದ್ಧ ಶೈವ ಮತ್ತು ಗೋಳಕಿ ಮಠ ಸಂಪ್ರದಾಯ, ಡಾ.ಎಂ.ಎಂ.ಕಲಬುರ್ಗಿ, ಪುಟ-೩.

೭೬. ಅದೇ, ಪುಟ-೧೯

೭೭. ಅದೇ, ಪುಟ-೫

೭೮. ಅದೇ, ಪುಟ-೭

೭೯. ಅದೇ, ಪುಟ-೭

೮೦. ಅದೇ, ಕಲಬುರ್ಗಿ ಮಾತು - VII

೮೧. ಅದೇ, ಪುಟ-೧

೮೨. ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ ವಿವೇಚನೆ-ಸಂ/ ಡಾ.ಕೆ.ರವೀಂದ್ರನಾಥ, ಪ್ರಸ್ತಾವನೆ, ೩.

ಅಧ್ಯಾಯ – ಒಂಭತ್ತು

ನೂರೊಂದು ವಿರಕ್ತರು : ಕರ್ನಾಟಕದ ನೆಲೆಗಳು

ಅಧ್ಯಾಯ - ಒಂಭತ್ತು

ನೂರೊಂದು ವಿರಕ್ತರು : ಕರ್ನಾಟಕದ ನೆಲೆಗಳು

ಅನುಭಾವಿಗಳ ನಾಡೆಂದೇ ಹೆಸರಾಗಿರುವ ಭಾರತವು ಹಲವು ಆಧ್ಯಾತ್ಮಿಕ ಪುರುಷರಿಗೆ ಜನ್ಮಭೂಮಿಯಾಗಿದೆ. "ಹೀಗಾಗಿ ಭಾರತವು ಆಧ್ಯಾತ್ಮ ತತ್ವದ ತವರು; ಜಗತ್ತಿನ ಆದಿಯಿಂದಲೂ ಅದಕ್ಕಾಗಿ ದುಡಿದ ವೇದಕಾಲದ ಋಷಿಗಳ ಪರಿಶ್ರಮದ ಫಲವಾಗಿ ಇಂದು ಜಗತ್ತು ಭಾರತಕ್ಕೆ ತಲೆಬಾಗುತ್ತದೆ. ಅಂದಿನಿಂದ ಇಂದಿನವರೆಗೂ ಆಧ್ಯಾತ್ಮ ತತ್ವದ ಬೆಳೆಯು ನಮ್ಮವರ ಮನೋಭೂಮಿಕೆಯಲ್ಲಿ ಹುಲುಸಾಗಿ ಬೆಳೆದು ಸವಿಯಾದ ಫಲವನ್ನಿತ್ತಿದೆ. ಭಾರತದ ತತ್ತ್ವಜ್ಞಾನವು ಇಡೀ ವಿಶ್ವದಲ್ಲಿ ಹರಡಿ ಜನಜೀವನದಲ್ಲಿ ಬೆಳಕನ್ನುಂಟು ಮಾಡಿ ಜೀವದಾನ ಮಾಡಿದೆ. ಮೃಗ ಜೀವನವನ್ನು ಹದಗೊಳಿಸಿ ದೇವತ್ವವನ್ನು ಪ್ರಧಾನ ಮಾಡಿದೆ."[1] ಕರ್ನಾಟಕದ ಧಾರ್ಮಿಕ ಸಂದರ್ಭದಲ್ಲಿ, ಶಿಷ್ಟ ಮತ್ತು ಪರಿಶಿಷ್ಟ ನೆಲೆಯ ನಾಥ, ಕಾಪಾಲಿಕ, ಕಾಳಾಮುಖ, ಸೂಫಿ ಪಂಥಗಳಲ್ಲದೆ ಶೈವ ಶಾಖೆಗಳ ಹಲವು ಧಾರೆಗಳ ಈ ಪಂಥಗಳು ಸಮಾಜದಲ್ಲಿ ತುಂಬ ಗಂಭೀರವಾದ ಪ್ರಭಾವ ಬೀರಿವೆ. ಇದುವರೆಗೂ ನಡೆದ ಅಧ್ಯಯನಗಳಲ್ಲಿ ಪ್ರಬಲ ಜನ ಸಮುದಾಯದ ಬೆಂಬಲವಿರುವ ಪಂಥಗಳ ಕುರಿತು ಹೆಚ್ಚು ಅಧ್ಯಯನಗಳು ನಡೆದಿವೆಯೇ ಹೊರತು ಕೆಲವೊಂದು ಅಲಕ್ಷಿತ ಧಾರ್ಮಿಕ ಕಿರು ಧಾರೆಗಳ ಕುರಿತು ಅಧ್ಯಯನಗಳು ನಡೆದಿದ್ದು ತುಂಬ ಕಡಿಮೆ. ಅಂದು ಮಧ್ಯಕಾಲದ ವೇಳೆಯಲ್ಲಿ ಅಸ್ತಿತ್ವದಲ್ಲಿದ್ದ ನೂರೊಂದು ವಿರಕ್ತರ ಧಾರೆಯು ಸಹ ಅಲಕ್ಷಿತಕ್ಕೆ ಒಳಗಾಗಿರುವಲ್ಲಿ ಪ್ರಮುಖವಾದದ್ದು.

ಪ್ರೌಢದೇವರಾಯನ ಕಾಲದಲ್ಲಿ 'ಹಂಪೆ' ಹಲವು ಧರ್ಮಗಳಿಗೆ, ಪಂಥಗಳಿಗೆ ಆಶ್ರಯ ತಾಣವಾಗಿತ್ತು. ಅಂದು ಕಾಪಾಲಿಕ, ಕಾಳಾಮುಖ, ನಾಥ, ಸೂಫಿ, ಆರೂಢ ಮತ್ತು ಅವಧೂತರಂತೆ ನೂರೊಂದು ವಿರಕ್ತರೂ ಸಹ ಹಂಪೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ನೆಲೆನಿಂತಿದ್ದರು. ಇದಕ್ಕೆ ಕಾರಣ ಇಲ್ಲಿಯ ಸಮೃದ್ಧವಾದ ಪರಿಸರ. ಇದು ಅನುಭಾವಿಗಳ ಏಕಾಂಗಿತನಕ್ಕೆ ಅವರ ಆಧ್ಯಾತ್ಮಿಕವಾದ ಹಠಯೋಗ ಸಾಧನೆಗೆ ಸೂಕ್ತ ಕೇಂದ್ರವಾಗಿತ್ತು. ಹೀಗೆ ತುಂಬ ಅಸಹಾಯಕ ಸ್ಥಿತಿಯಲ್ಲಿದ್ದ ಈ ಪಂಥಗಳು ಮೇಲೇಳಲಿಕ್ಕೆ ಮತ್ತೊಂದು ಪ್ರಭಾವಿ ಧರ್ಮಗಳ ಆಸರೆಗೆ ಹೋಗಲೇ ಬೇಕಾದ ಪರಿಸ್ಥಿತಿ ಅಂದು ನಿರ್ಮಾಣವಾಗಿತ್ತೆಂಬುದರ ಬಗೆಗೆ ಹಲವು ಆಧಾರಗಳು ದೊರೆಯುತ್ತವೆ.

ಅಂದು ಹಂಪೆಯಲ್ಲಿ ಶೈವ, ವೈಷ್ಣವ, ವೀರಶೈವ, ಜೈನ ಧರ್ಮಗಳ ಪ್ರಚಾರಕಾರ್ಯ ಅಧಿಕವಾಗಿತ್ತು. ಅದರಲ್ಲಿ ವೀರಶೈವ ಧರ್ಮದ ಪ್ರಭಾವ ಎಲ್ಲ ಧರ್ಮಕ್ಕಿಂತ ಹೆಚ್ಚಾಗಿತ್ತು. ಹೀಗಾಗಿ ಅಂದು ಅಲಕ್ಷಿತವಾದ ಕೆಲವು ಧಾರ್ಮಿಕ ಧಾರೆಗಳು ಈ ಮೇಲಿನ ಧರ್ಮಗಳ ಪ್ರಭಾವಕ್ಕೆ ಒಳಗಾದ ಸಾಧ್ಯತೆಗಳಿವೆ. ಅದರೆ ಇಲ್ಲಿ ಮುಖ್ಯವಾಗಿ ಗಮನಿಸುವ ಅಂಶವೇನೆಂದರೆ ಈ ಮೇಲಿನ ಎಲ್ಲಾ ಪಂಥಗಳ ಮೂಲ ನೆಲೆ ಹಂಪೆಯಾಗಿರಲಿಕ್ಕಿಲ್ಲ. ಇವರು ಸಹ ನೂರೊಂದು ವಿರಕ್ತರಂತೆ ನಾಡಿನ ಹಲವು ಕಡೆಯಿಂದ ಬಂದವರಾಗಿರುವರು. ಈ ಆಧ್ಯಾತ್ಮಿಕ ಪುರುಷರಿಗೆ ಸ್ಥಿರವಾದ ನೆಲೆಗಳಿರಲಿಲ್ಲ. ಇವರು ಸದಾ ಜಂಗಮ ಸ್ವರೂಪಿಗಳು, ಕಾಲ್ನಡಿಗೆಯ ಸಂಸ್ಕೃತಿ ಅಂದು ಇವರಿಗೆ ಮುಖ್ಯವಾಗಿತ್ತು. ಜನಿಸಿದ್ದು ಒಂದು ಕಡೆಯಾದರೆ ಮುಂದೆ ಬೆಳೆದು ಮಣ್ಣಾಗಿದ್ದು ಮತ್ತೊಂದು ಕಡೆ.

ಈ ಜಂಗಮ ಸ್ವಭಾವದ ಅನುಭಾವಿಗಳು ನಾಡಿನಾದ್ಯಂತ ಸಂಚರಿಸಿ ಜನಸಾಮಾನ್ಯರಿಗೆ ತಮ್ಮ ಅಪರೂಪದ ವ್ಯಕ್ತಿತ್ವವನ್ನು ಮನಗಾಣಿಸಿದರು. ಸ್ಥಳದಿಂದ ಸ್ಥಳಕ್ಕೆ ಸಂಚರಿಸುವಾಗ ಜನರ ಕಷ್ಟ ಸುಖಗಳಲ್ಲಿ ಕೆಲವೊಮ್ಮೆ ಭಾಗಿಯಾಗಿ ಅವರ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಿದವರು. ಈ ಮಹಾಮಹಿಮರಿಗೆ ಯಾರೂ ನೆಲೆಸಲು ಸಾಧ್ಯವಿಲ್ಲದ ಹಳೆಯದಾದ ಗುಡಿಗುಂಡಾರಗಳು, ಬೆಟ್ಟ, ಗುಡ್ಡ, ಗುಹೆಗಳೇ ಇವರಿಗೆ ವಾಸದ ನೆಲೆಗಳಾಗಿದ್ದವು. ಈ ಮೇಲಿನ ಸ್ವಭಾವದವರಾಗಿ ಹಂಪೆಯಲ್ಲಿ ನೆಲೆನಿಂತಿದ್ದ ನೂರೊಂದು ವಿರಕ್ತರೂ ಸಹ ಹೊರತಾಗಿರಲಿಲ್ಲ. ಏಕೆಂದರೆ ಕಷ್ಟ ಕೋಟಲೆಗಳನ್ನನುಭವಿಸದೆ, ಘೋರ ತಪಸ್ಸು ಮಾಡದೆ, ಯಾರು ಯೋಗಿಯಾಗಲು, ಶ್ರೇಷ್ಠ ಸಾಧಕನಾಗಲು ಸಾಧ್ಯವಿಲ್ಲ ಎಂಬುದು ಅನುಭಾವಿಗಳ ಅಭಿಮತವಾಗಿದೆ. ಕ್ರಿ.ಶ. ೧೪ ಮತ್ತು ೧೫ನೇ ಶತಮಾನದಲ್ಲಿ ನಕ್ಷತ್ರದಂತೆ ಕಂಡು ನಂತರ ಪುನಃ ಮರೆಯಾದ ನೂರೊಂದು ವಿರಕ್ತರು ಎಲ್ಲೆಲ್ಲಿ ನೆಲೆ ನಿಂತು ಸಾಗಿದ್ದಾರೆ ಎಂಬುದರ ಬಗೆಗೆ ಅಲ್ಪಸ್ವಲ್ಪ ಮಾಹಿತಿ ಬಿಟ್ಟರೆ,

ಪರಿಪೂರ್ಣವಾದ ವಿವರ ದೊರೆಯಲಾರದು. ಮಧ್ಯಕಾಲದಿಂದ ಹಿಡಿದು ಆಧುನಿಕ ಕಾಲದವರೆಗೆ ಕಂಡುಬರುವ ಕನ್ನಡ ಸಾಹಿತ್ಯ ಚರಿತ್ರೆಯ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ನೂರೊಂದು ವಿರಕ್ತರು ಕರ್ನಾಟಕದಲ್ಲಿ ಹಲವು ಕಡೆ ನೆಲೆ ನಿಂತು ಕೊನೆಗೆ 'ಹಂಪೆ'ಯಲ್ಲಿ ಆಶ್ರಯ ಪಡೆದಿದ್ದರೆಂಬ ಮಾಹಿತಿ ದೊರೆಯುತ್ತವೆ.

ಕ್ಷೇತ್ರ ಕಾರ್ಯದ ಆಧಾರದ ಮೇಲೆ ಇವರ ಪ್ರಮುಖ ಕೇಂದ್ರಗಳು ಚಾಮರಾಜನಗರ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶ, ಗುಂಡ್ಲುಪೇಟೆಯ ಮಂಚಳ್ಳಿ ಗವಿ ಕ್ಷೇತ್ರ, ಮತ್ತೊಂದು 'ಹಂಪೆ' ಎಂದು ಸ್ಪಷ್ಟವಾಗಿ ಹೇಳಬಹುದು. ನೂರೊಂದು ವಿರಕ್ತರಿಗೆ ಸ್ಥಿರವಾದ ನೆಲೆಗಳಿರಲಿಲ್ಲ. ಇವರದು ಅಸ್ಥಿರವಾದ ಬದುಕು. ತಮ್ಮ ಮನಸ್ಸಿಗೆ ಎಲ್ಲಿ ನೆಮ್ಮದಿ, ಆನಂದ ಮತ್ತು ಶಾಂತಿ ದೊರೆಯುವುದೋ ಅಲ್ಲಿ ನೆಲೆವೂರುವರು. ಒಂದು ವೇಳೆ ಅಲ್ಲಿ ಏನಾದರೂ ತಮ್ಮ ಶಾಂತಿಗೆ ಭಂಗ ಉಂಟಾಗುವಂತಹ ಸಂದರ್ಭಗಳೇನಾದರೂ ತಮ್ಮ ಅಂತರಾತ್ಮಕ್ಕೆ ಗೊತ್ತಾದರೆ ಬೇರೊಂದು ಸ್ಥಳಕ್ಕೆ ಹೋಗಿ ನೆಲೆಸುವರು. ಹೀಗಾಗಿ ಸದಾ ಜಂಗಮ ಸ್ವರೂಪಿಗಳಾದ ವಿರಕ್ತರು ಒಲಸೆ ಸಂಸ್ಕೃತಿಗೆ ಸೇರಿದವರಾಗಿ ಕಂಡುಬರುತ್ತಾರೆ. ಅಂದು ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ ತುಂಬ ಪ್ರಸಿದ್ಧತೆ ಹೊಂದಿದ ಸ್ಥಳಗಳೆಲ್ಲ ಅನುಭಾವಿಗಳ, ಯೋಗಿಗಳ ವಾಸದ ಕೇಂದ್ರಗಳಾಗಿದ್ದವು. ಇದಕ್ಕೆ 'ಹಂಪೆ' ಸಹ ಹೊರತಾಗಿಲ್ಲ. "ಅಂದು ಸಾಧು-ಸಂತರು, ಸತ್ಪುರುಷರು, ಸ್ವಾಮಿಗಳು, ಮುನಿಗಳು, ಯತಿಗಳು, ಗುರುಗಳು, ಸನ್ಯಾಸಿಗಳು ಹೀಗೆ ಇವರೆಲ್ಲ ಧರ್ಮ-ಆಧ್ಯಾತ್ಮದ ಗುರಿಸಾಧನೆಯಲ್ಲಿ ತೊಡಗಿದವರು"[೨] ನೂರೊಂದು ವಿರಕ್ತರು ಸಹ ಈ ಮೇಲಿನ ಸಂತರ ಸಾಲಿಗೆ ನಿಲ್ಲುವವರಾಗಿದ್ದಾರೆ. 'ವಿರಕ್ತ' ಪಂಥ ಒಂದು ರೀತಿಯಲ್ಲಿ 'ಗುರು' ಪಂಥ. ಇವರಲ್ಲಿ ಮೇಲು, ಕೀಳು ಎಂಬ ಜಾತಿಕಟ್ಟುಗಳು ಕಂಡುಬರಲಾರವು. ಇವರಲ್ಲಿ ಅನೇಕ ಜಾತಿಯವರಿದ್ದು ಒಂದು ರೀತಿಯಲ್ಲಿ ಜಾತ್ಯಾತೀತರಾಗಿದ್ದರು. "ಏಕೆಂದರೆ ಭಾರತದ ಅನುಭಾವಿ ಪಂಥಗಳು ಧಾರ್ಮಿಕ, ಪ್ರಾದೇಶಿಕ, ಸಾಮಾಜಿಕ, ಹಾಗೂ ಭಾಷಿಕ ಗಡಿಗಳನ್ನು ದಾಟಿಕೊಂಡು ಯಾವುದೋ ಒಂದು ಸಮಾನ ಸಂಗತಿಗಾಗಿ ಬೆರೆಯುತ್ತಲೇ ಬಂದಿವೆ."[೩] "ಹಲವಾರು ಪಂಥಗಳು ಬೇರೆ ಬೇರೆ ಕಾಲಘಟ್ಟಗಳಲ್ಲಿ ಹಾಗೂ ಚಾರಿತ್ರಿಕ ಒತ್ತಡಗಳಲ್ಲಿ ಸಂಘರ್ಷ ಮಾಡಿ ಮಿಲನಗೊಂಡು ಪದರುಗಳ ರೂಪದಲ್ಲಿ ಒಂದೇ ಕಡೆ ಸೇರಿರುವ ತಾಣಗಳು ಇಡೀ ಭಾರತದಲ್ಲಿ ಇವೆ. ಶುದ್ಧ ರಕ್ತದ ಕಲ್ಪನೆಯಂತೆ ಶುದ್ಧ ಧರ್ಮ, ಶುದ್ಧ ಪಂಥಗಳ ಕಲ್ಪನೆಯು ನಮ್ಮ ಸಮಾಜದಲ್ಲಿ ಯಾವಾಗಲೂ ಅಸಂಗತ."[೪] ಆರೂಢ, ನಾಥ, ಅವಧೂತರಂತೆ ನೂರೊಂದು ವಿರಕ್ತರು ಸಹ ಬಹುತೇಕ ಕೆಳಜಾತಿಯ ಹಾಗೂ ವೃತ್ತಿಯ ಕಸಬುದಾರರಾಗಿದ್ದಾರೆ.

"ಯೌಗಿಕ, ತಾಂತ್ರಿಕ, ರಹಸ್ಯ, ನಿಗೂಢ ಎನ್ನಲಾಗುವ ಪಂಥಗಳು ಸಮುದಾಯ ಬದುಕಿನ ಅನೇಕ ಸ್ತರದ ಚಟುವಟಿಕೆಗಳಲ್ಲಿ ಅನೇಕ ವೇಷಗಳಲ್ಲಿ ಅಡಗಿದ್ದವು. ಈಗಲೂ

ಅಡಗಿವೆ."[9] ಇವರಂತೆ ಹಂಪೆಗೆ ಹಲವು ಕಡೆಯಿಂದ ಆಗಮಿಸಿದ ವಿರಕ್ತರೂ ಸಹ ಅನೇಕ ವೃತ್ತಿ ಕಸುಬಿನ ವೇಷಗಳಲ್ಲಿ ಕಂಡುಬರುವರಾಗಿರುವರು. ಕರಸ್ಥಲದ ನಾಗಿದೇವ ಆಭರಣ ಮಾಡುವುದರಲ್ಲಿ ಪ್ರವೀಣನಾಗಿದ್ದ, ತುಬಾಕದ ಶಾಂತಯ್ಯ, ಬುಡಬುಡಿಕೆಯ ಶಾಂತ, ಡೊಂಬರ ಶಾಂತ, ಬೇಟೆಯ ಶಾಂತ, ಮಡಿವಾಳ ಶಾಂತ ಹೀಗೆ ಇನ್ನೂ ಮುಂತಾದ ವಿರಕ್ತರು ತಮ್ಮದೇ ಆದ ವೃತ್ತಿಯಲ್ಲಿ ತೊಡಗಿದವರಾಗಿರುವರು.

ಕರಸ್ಥಲದ ನಾಗಿದೇವ, ಕರಸ್ಥಲದ ವೀರಣ್ಣೊಡೆಯ ದಕ್ಷಿಣ ಕರ್ನಾಟಕದವರು. ಏಕೆಂದರೆ ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ'ಯಲ್ಲಿ ವೀರಣ್ಣೊಡೆಯನ ಜನ್ಮ ಭೂಮಿಯ ಕುರಿತು ಸ್ಪಷ್ಟ ಮಾಹಿತಿ ಇದೆ. "ಹದಿನಾಡೊಳೆಸೆವ ಬೊಮ್ಮನಹಳ್ಳಿಯಲ್ಲಿರ್ಪ ಮದನ ಹರಶರಣ ವೀರಣ್ಣಯ್ಯ"ನು ಕರಸ್ಥಲದ ವೀರಣ್ಣೊಡೆಯನೇ ಆಗಿರಬೇಕು. 'ಕರಸ್ಥಲ ನಾಗಲಿಂಗನ ಚರಿತ್ರೆಯಲ್ಲಿ ಹೇಳಿರುವ ಇವನ ಸ್ಥಳ ಬೊಮ್ಮೂರು ಮತ್ತು ಲಕ್ಕಣ್ಣ ದಂಡೇಶ ಹೇಳುವ ಬೊಮ್ಮನಹಳ್ಳಿ ಒಂದೇ ಆಗಿದೆ."[10] ಒಟ್ಟಿನಲ್ಲಿ ಕರಸ್ಥಲದ ನಾಗಿದೇವ ಮತ್ತು ವೀರಣ್ಣೊಡೆಯ ಇಬ್ಬರು ಒಂದೇ ಕಡೆಯವರಾಗಿ ಕಂಡುಬರುವರು. ಅಂದು ಆಧ್ಯಾತ್ಮಿಕ ಪುರುಷರಾದ 'ಮಂಟೇಸ್ವಾಮಿ', 'ಮಲೆಯ ಮಹಾದೇಶ್ವರರಂತಹ' ಅನುಭಾವಿಗಳು ಸಹ ದಕ್ಷಿಣ ಕರ್ನಾಟಕದಿಂದಲೇ ಉತ್ತರ ಕರ್ನಾಟಕದ 'ಹಂಪೆ', 'ಕಡೆ ಕಲ್ಯಾಣ'ದಂತಹ ಹಲವು ಧಾರ್ಮಿಕಾ ಕೇಂದ್ರಗಳಿಗೆ ಭೇಟಿ ನೀಡಿ ತಮ್ಮ ಸಕಲ ಕಾರ್ಯ ಚಟುವಟಿಕೆಗಳನ್ನೆಲ್ಲ ಪೂರೈಸಿ ಪುನಃ ತಮ್ಮ ಮೂಲ ನಾಡಿಗೆ ಹೋದರೆಂಬ ಉಲ್ಲೇಖಗಳಿವೆ. ಇವರಂತೆ ಅಂದು ಆದಿ ವಿರಕ್ತ ಕರಸ್ಥಲದ ನಾಗಿದೇವ, ವೀರಣ್ಣೊಡೆಯರು ಸಹ ತೀರ್ಥಕ್ಷೇತ್ರವಾದ ಹಂಪೆಯಲ್ಲಿ ಹಲವು ದಿನಗಳಿದ್ದು, ಮತ್ತೆ ತಮ್ಮ ಮೂಲಸ್ಥಳಗಳಿಗೆ ಮರಳಿ ಹೋದರು. ನಾಗಿದೇವನಂತು ಮಂಚಳ್ಳಿ ಗವಿಯಲ್ಲಿ ತಪಸ್ಸನ್ನಾಚರಿಸಿ ಅಲ್ಲಿಯೇ ಐಕ್ಯನಾದನೆಂದು ಅಲ್ಲಿಯ ಮೌಖಿಕ ಆಧಾರಗಳ ಮೂಲಕ ಮಾಹಿತಿ ದೊರೆಯುತ್ತದೆ.

ಗುಂಡ್ಲು ಪೇಟೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಇವನ ಪವಾಡ ಸಾದೃಶ್ಯದ ಕುರಿತು ಮಾಹಿತಿ ಈಗಲೂ ಲಭ್ಯವಿದೆ. ನಾಗಿದೇವ, ವೀರಣ್ಣೊಡೆಯ, ಮದ್ದಾನೆ ಶಾಂತರ ಪ್ರಭಾವ ಆ ಪ್ರದೇಶದ ಕಡೆ ಹೆಚ್ಚಾಗಿ ಕಂಡುಬರುತ್ತವೆ. ಇವರಲ್ಲಿ ಕರಸ್ಥಲದ ನಾಗಿದೇವನ ಕುರಿತು ಮಾಹಿತಿ ದೊರೆಯುವಂತೆ ಉಳಿದ ವಿರಕ್ತರ ವ್ಯಕ್ತಿ ಜೀವನದ ಕುರಿತು ಹೆಚ್ಚೇನು ಮಾಹಿತಿ ಸಿಗಲಾರದು. ಆದರೆ ನಾಗಿದೇವನ ಕುರಿತು ಮಂಚಳ್ಳಿಯಲ್ಲಿ ಪ್ರತಿವರ್ಷ ನವೆಂಬರ್ ತಿಂಗಳ ಕಡೆ ಕಾರ್ತಿಕ ಮಾಸದಲ್ಲಿ ಕಾರ್ತಿಕೋತ್ಸವ ನೆರವೇರುವುದು.

ಕರಸ್ಥಲದ ನಾಗಿದೇವನ ಜೊತೆ ಅಂದು ಅನೇಕ ಅನುಭಾವಿಗಳಿದ್ದಂತೆ ತೋರುತ್ತದೆ. ಪಾದಚಾರಿಗಳಾದ ಇವರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುವಾಗ ತಮ್ಮ

ಅಮೂಲ್ಯವಾದ ವಿಚಾರಧಾರೆಗಳನ್ನು ಜನರಿಗೆ ತಿಳಿಯಪಡಿಸುತ್ತ ಸಾಗಿರುವರು. 'ಹರವಿ' ಎಂಬ ಊರಿನಲ್ಲಿ ಕೆಲದಿನಗಳಿದ್ದು, ಮುಂದೆ ಹಂಪೆಯ ಕಡೆ ಬರುವಾಗ ದಾರಿಯಲ್ಲಿ ಧಾರ್ಮಿಕ ಕೇಂದ್ರವಾಗಿದ್ದ, ಶರಣರ ಪ್ರಮುಖ ಸ್ಥಳವಾದ ಗುಮ್ಮಳಪುರದಲ್ಲಿ ಶರಣರ ಹಮ್ಮು ಬಿಡಿಸಿದನೆಂದು ನಾಗಲಿಂಗನ ಚರಿತ್ರೆ ಹಾಗೂ ಬಿಡಿಹಾಡುಗಳಲ್ಲಿ ಉಲ್ಲೇಖವಾಗಿವೆ. ಹೀಗೆ ನಾಗಲಿಂಗಸ್ವಾಮಿ ಮತ್ತು ಅವನ ಅನುಯಾಯಿಗಳ ಪ್ರಭಾವ ಕೇಳಿ ಪ್ರೌಢದೇವರಾಯ ತನ್ನ ಆಸ್ಥಾನದಲ್ಲಿ ಬರಮಾಡಿಕೊಂಡು ಅವರಿಗೆ ಆಶ್ರಯ ನೀಡಿದ. ಅಲ್ಲದೆ ಅಂದು ಹಂಪೆಯ ಅಪಾರವಾದ ಓಜಸ್ಸು–ತೇಜಸ್ಸುಗಳು ಹಲವು ಧರ್ಮದ ಅನುಭಾವಿಗಳ ಮನಸೆಳೆಯಲು ಕಾರಣವಾಗಿದೆ. ಇವರಲ್ಲಿ ಕೆಲವು ಯೋಗಿಗಳು ತಪಸ್ಸನ್ನಾಚರಿಸಿ ಮೋಕ್ಷ ಪಡೆದು ಅಲ್ಲಿಯೇ ಐಕ್ಯರಾದವರಿದ್ದಾರೆ. ಅಲ್ಲದೆ ಇನ್ನೂ ಕೆಲವರು ಹಂಪೆಯ ವಿಸ್ತಾರವಾದ ಪ್ರದೇಶಗಳಲ್ಲಿ ಜನಸಂಪರ್ಕವಿಲ್ಲದೇ ಎಲ್ಲೋ ಒಂದು ಕಡೆ ಧ್ಯಾನಸ್ತರಾಗಿ ಅಲ್ಲಿಯೇ ಬೆಟ್ಟ ಗುಡ್ಡ ಗುಹೆಗಳಲ್ಲಿ ಮಣ್ಣಾಗಿರಲು ಸಾಧ್ಯತೆಗಳಿವೆ. ಇವರಂತೆ ಅಂದು ವಿರಕ್ತರಲ್ಲಿ ಕೆಲವೊಬ್ಬರು ಹಂಪೆಯ ಪರಿಸರದಲ್ಲಿ ಯೌಗಿಕವಾದ ಹಲವು ರೀತಿಯ ಸಾಧನೆಗಳನ್ನು ಮಾಡಿ ಮರೆಯಾಗಿ ಹೋಗಿರಲುಬಹುದು.

ನೂರೊಂದು ವಿರಕ್ತರಲ್ಲಿ ಕೆಲವರು ಗೃಹಸ್ಥರಾಗಿ ಮಕ್ಕಳನ್ನು ಪಡೆದವರಿದ್ದರು. ಮತ್ತೆ ಕೆಲವರು ಅರೆಮರುಳರಂತೆ ಹಂಪೆಯ ಬೀದಿಗಳಲ್ಲಿ ಸಂಚರಿಸುತ್ತಿದ್ದರು. ಇನ್ನೂ ಕೆಲವರು ಬ್ರಹ್ಮಚಾರಿಗಳಾಗಿ ತಪೋವನ ಗೈದವರಿದ್ದರು. ಕೆಲವರಂತು ಹಾಳು ಬಿದ್ದ ಗುಡಿಗುಂಡಾರಗಳು, ಬೆಟ್ಟ ಗುಡ್ಡ ಗವಿಗಳಲ್ಲೇ ತಮ್ಮ ಕಾರ್ಯ ಸಿದ್ಧಿಗಳನ್ನು ನೆರವೇರಿಸುತ್ತಿದ್ದರು. ಅಂದರೆ ಆರೂಢ, ನಾಥ, ಅವಧೂತರಂತೆ ವಿರಕ್ತರೇನು ಭಿನ್ನರಾಗಿ ಕಾಣಲಾರರು, ಇವರೆಲ್ಲರ ಗುರಿ ಒಂದೇ ಆಗಿತ್ತು.

ವಿಜಯನಗರಕ್ಕೆ ಬಂದ ಕೆಲವು ವಿರಕ್ತರು ಇಲ್ಲಿ ಬರುವ ಮುನ್ನ ಎಲ್ಲೆಲ್ಲಿದ್ದರೆಂಬುದರ ಬಗೆಗೆ ಸ್ಪಷ್ಟವಾದ ಮಾಹಿತಿ ದೊರೆಯಲಾರದು. ಇವರಲ್ಲಿ ಕೆಲವರು ಮೂಲತಃ ವಿಜಯನಗರದ ಸುತ್ತ ಮುತ್ತಲಿನ ಪ್ರದೇಶದವರೇ ಆಗಿರುವ ಸಾಧ್ಯತೆಗಳಿವೆ. ಅಲ್ಲದೆ ಇನ್ನೂ ಕೆಲವೊಬ್ಬರು ಬೇರೆ ಬೇರೆ ಕಡೆಯಿಂದ ಹಂಪೆಗೆ ಬಂದವರಾಗಿದ್ದಾರೆ. ಹೀಗೆ ಬಂದ ಇವರುಗಳ ಒಂದು ಪರಂಪರೆಯೇ 'ಹಂಪೆ'ಯಲ್ಲಿ ಅಂದು ಮುಂದುವರೆದಿತ್ತು. "ಕೊಡೆಕಲ್ ಬಸವಣ್ಣನು ಯಾವ ರೀತಿ ಸಾಮಾಜಿಕವಾಗಿ, ಅಷ್ಟಿಷ್ಟು ರಾಜಕೀಯವಾಗಿ ಬೆಳೆದಂತೆ ಮುಂದೆ ಆತನದೇ ಆದ ಶಿಷ್ಯವರ್ಗವೊಂದು ಆತನ ಸುತ್ತ ಹುಟ್ಟಿಕೊಂಡಿತು"[೭] ಹಾಗೆ ನೂರೊಂದು ವಿರಕ್ತರಲ್ಲಿ ಆದಿಯಾದ ಕರಸ್ಥಲದ ನಾಗಿದೇವ, ಕರಸ್ಥಲದ ವೀರಣ್ಣೊಡೆಯರು ಅಂದು ಕೊಡೆಕಲ್ ಬಸವಣ್ಣನಂತೆ ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಪ್ರೌಢದೇವರಾಯನ ಆಸ್ಥಾನದಲ್ಲಿ ತುಂಬ ಪ್ರಭಾವ ಬೀರಿದ್ದರು. ಕೊಡೆಕಲ್ಲ ಬಸವಣ್ಣನಂತೆ ಅಂದು ಹಂಪೆಯಲ್ಲಿ ವಿರಕ್ತ ಅನುಭಾವಿಗಳ ಒಂದು ಪಡೆ ಬೆಳೆದಿರಲು

ಸಾಧ್ಯತೆಗಳಿವೆ. ಏಕೆಂದರೆ ಅರಸ ಪ್ರೌಢದೇವರಾಯನಿಗೆ ಅಳಿಯ ವೀರಣ್ಣೊಡೆಯ ತನ್ನ ಶಿಷ್ಯರಾದ ನೂರೊಂದು ಮಂದಿ ವಿರಕ್ತರ ಪರಿಚಯ ಮಾಡಿಸುವ ಪರಿಯನ್ನು ನೋಡಿದರೆ ಇವರದೇ ಆದ ಒಂದು ಅಲಕ್ಷಿತ ಶಿಷ್ಯ ಪರಂಪರೆ ಹಂಪೆಯಲ್ಲಿ ನೆಲೆಸಿತ್ತು ಎಂಬುದು ತಿಳಿಯುತ್ತದೆ. ರಾಯನನ್ನು ಕರೆದುಕೊಂಡು ಪ್ರತಿಯೊಬ್ಬ ವಿರಕ್ತನು ವಾಸ ಮಾಡುತ್ತಿದ್ದ ನೆಲೆಗಳನ್ನಲ್ಲದೆ, ಅವರ ಪವಾಡ ಸಾದೃಶ್ಯಗಳನ್ನು ತೋರಿಸುವನು. ವಿರಕ್ತರ ಪ್ರತಿಯೊಂದು ಲೀಲೆಗಳನ್ನು ಮನಗಂಡ ಅರಸ ಚಕಿತನಾಗಿ ಅವರಿಗೆಲ್ಲ ಶರಣಾಗುವನು. ಮಹಾಮಹಿಮರಾದ ನೂರೊಂದು ವಿರಕ್ತರು ಸಾಮಾನ್ಯರಲ್ಲ ಅಸಮಾನ್ಯರು. ಅವರ ಯೋಗಪರವಾದ ಸಿದ್ಧಿ ಸಾಧನೆಗಳು ಅಪಾರವಾದದೆಂದು ಅರಸ ಪುನಃ ಆಸ್ಥಾನಕ್ಕೆ ಮರಳಿದ, ಇದನ್ನು ಕುರಿತು ಮೋದಿಯ ರುದ್ರ ಕವಿಯು ತನ್ನ ವಿರಕ್ತರ ಕಾವ್ಯದಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಿದ್ದಾನೆ.

"ಹಂಪೆಯ ನೂರೊಂದು ಮಂದಿ ವಿರಕ್ತರಲ್ಲಿ ಒಬ್ಬನಾಗಿದ್ದ ಗುರುಬಸವನು ಶಿವಮೊಗ್ಗ ಜಿಲ್ಲೆಯ ಕ್ಯಾಸನೂರು ಮಠಕ್ಕೆ ಅಧ್ಯಕ್ಷನಾಗಿದ್ದುಕೊಂಡು ಶಿವಯೋಗದಲ್ಲಿ ಪರಿಪೂರ್ಣತೆ ಪಡೆದು ಪ್ರೌಢದೇವರಾಯನ ಕಾಲದಲ್ಲಿ ಹಂಪೆಗೆ ಬಂದು ನೂರೊಂದು ಜನ ವಿರಕ್ತರ ಮಧ್ಯದಲ್ಲಿ ಮೆರೆದು ಅಲ್ಲಿಯೇ ನಿರವಲಯನಾದನು ಎಂಬುದಾಗಿ ತಿಳಿದುಬರುತ್ತದೆ."[೮] ಅಂದು ವಿಜಯನಗರದ ಅರಸರ ಕಾಲದಲ್ಲಿಯೂ, ಕೆಳದಿಯ ರಾಜರ ಕಾಲದಲ್ಲಿಯೂ ಕ್ಯಾಸನೂರು ಮಠವು ಅತ್ಯಂತ ಪ್ರಸಿದ್ಧಿಯನ್ನು ಪಡೆದುಕೊಂಡಿತ್ತೆಂದೂ ತಿಳಿದುಬರುತ್ತದೆ. 'ಕ್ಯಾಸನೂರು' ಗುರುಬಸವನು ವಾಸವಾಗಿದ್ದ ಪ್ರಮುಖ ನೆಲೆ. ಕ್ಯಾಸನೂರಿನಿಂದ ಗುರುಬಸವನು ಹಂಪೆಯ ಕಡೆ ಪ್ರಯಾಣಿಸಿದನು. ಈ 'ಕ್ಯಾಸನೂರು' ಎಂಬುದಕ್ಕೆ ಸಂಸ್ಕೃತದಲ್ಲಿ 'ಖೇಚರ ಪುರಿ' ಎಂದು ಹೇಳುವರು. ಶಿವಯೋಗಿಯಾದ ಗುರುಬಸವನು ತನ್ನ ಯೋಗ ಸಾಮರ್ಥ್ಯದಿಂದ ಆಕಾಶದಲ್ಲಿ ಸಂಚರಿಸುತ್ತಿದ್ದರಿಂದ ಇವನಿದ್ದ ಊರಿಗೆ 'ಖೇಚರ ಪುರಿ' ಎಂದು ಹೆಸರಾಯಿತೆಂದು ಐತಿಹ್ಯವುಂಟು. 'ಖೇಚರಪುರ' ಎಂಬುದರ ಅಪಭ್ರಂಶವೇ ಕ್ಯಾಸನೂರು"[೯] ಎಂದಾಗಿದೆ. ಅಂದು ಆಸ್ಥಾನದಲ್ಲೆಲ್ಲ ತುಂಬ ಪ್ರಸಿದ್ಧತೆ ಹೊಂದಿದ್ದ ಸಪ್ತಕಾವ್ಯದ ಗುರುಬಸವನು ಹಲವು ಕೃತಿಗಳನ್ನು ರಚಿಸಿದನು. ೧. ಯೋಗಾಂಗ ವಿಭೂಷಣ, ೨. ಮನೋ ವಿಜಯಂ, ೩. ಸ್ವರೂಪಾಮೃತ. ೪.ಕಲ್ಯಾಣೇಶ್ವರ, ೫. ಅವಧೂತ ಗೀತೆ, ೬ ವೃಷಭ ಗೀತೆ, ೭. ಸದ್ಗುರು ರಹಸ್ಯ

ಈ ಮೇಲಿನ ಏಳು ಕೃತಿಗಳನ್ನು ರಚಿಸಿದಕ್ಕೆ ಇವನಿಗೆ ಸಪ್ತಕಾವ್ಯದ ಗುರುಬಸವನೆಂದು ಹೆಸರು ಪ್ರಾಪ್ತವಾಗಿದೆ. ತುಂಬ ವೈರಾಗ್ಯಪರವಾದ ನಿಲುವುಳ್ಳವನಾಗಿದ್ದ ಇವನನ್ನು ಸಾಹಿತ್ಯ ಕೃತಿಗಳಲ್ಲಿ ನಿಜಗುಣ ಶಿವಯೋಗಿಯೊಂದಿಗೆ ಸಮೀಕರಿಸಲಾಗಿದೆ. ಹಾಗೆ ಇದುವರೆಗೆ ಬಂದಿರುವ ವೀರಶೈವ ಸಾಹಿತ್ಯ ಕೃತಿಗಳಲ್ಲಿ ವೀರಣ್ಣೊಡೆಯ, ಗುರುಬಸವ, ಬತ್ತಲೇಶ, ನಿರ್ವಾಣಿ ಬೋಳೇಶ ಹೀಗೆ ಕೆಲವೇ ಕೆಲವು ಪ್ರಮುಖ ವಿರಕ್ತರ ಬಗೆಗೆ ಸ್ಪಷ್ಟ ಉಲ್ಲೇಖಗಳಿವೆ. ಆದರೆ ಉಳಿದ

ವಿರಕ್ತರ ಚರಿತ್ರೆ ಮುಸುಮುಸುಕಾಗಿ ಗೋಚರಿಸಿ ಮರೆಯಾಗಿವೆ. ಇವರ ಕುರಿತು ಸಿಕ್ಕಿರುವ ಅಲ್ಪ ಮಾಹಿತಿಯನ್ನು ಬಳಸಿ ಕೆಲವು ವಿದ್ವಾಂಸರು ಇವರ ಚರಿತ್ರೆಯ ನಿರೂಪಣೆಗೆ ತೊಡಗಿದ್ದಾರೆ.

ಅನುಭಾವಿಗಳಾದ ವಿರಕ್ತರು ಕೆಲವೊಂದು ಸಾಹಿತ್ಯ ಕೃತಿಯಗಳಲ್ಲಿ ಇವರು ಎಲ್ಲಿಂದ ಹಂಪೆಗೆ ಬಂದರೆಂಬುದರ ಬಗೆಗೆ ಮಾಹಿತಿ ಉಂಟು. "ಚೆನ್ನಬಸವ ಪುರಾಣದಲ್ಲಿ (ಸಂಧಿ-೬೩), ನಿರಂಜನ ವಂಶ ರತ್ನಾಕರದಲ್ಲಿಯೂ (ಪುಟ-೩೩) ನೂರೊಂದು ವಿರಕ್ತ ಯೋಗಿಗಳು ಪ್ರೌಢದೇವರಾಯನ ಕಾಲದಲ್ಲಿಯೇ ಇದ್ದರೆಂದು ಹೇಳಿದೆ. ಆದರೆ ಇವರು ದಕ್ಷಿಣ ಕರ್ನಾಟಕದ ಸಿದ್ಧ ಗಂಗೆಯ ಕಡೆಯಿಂದ ವಿಜಯನಗರಕ್ಕೆ ಬಂದರೆಂದು ನಿರಂಜನವಂಶ ರತ್ನಾಕರವು ಹೇಳುತ್ತದೆ. ಆದರೆ ಚೆನ್ನಬಸವ ಪುರಾಣದ ಅಭಿಪ್ರಾಯದಲ್ಲಿ ಬಹುಶಃ ಇವರೆಲ್ಲಾರು ವಿಜಯನಗರದಲ್ಲಿಯೇ ಮೂಲತಃ ಇದ್ದರೆಂಬ ಊಹೆಗೆ ಅವಕಾಶವಿರುತ್ತದೆ. "ಇತ್ತ ಪ್ರೌಢದೇವರಾಯನು ಬಂದಿರಲು, ಅತ್ತ ನೂರೊಂದು ಗಣೇಶ್ವರರು ಬಂದಿದ್ದರು." ಎಂಬಲ್ಲಿ 'ಅತ್ತ' ಎಂಬ ಶಬ್ದದಿಂದ ಬೇರೆ ಕಡೆಯಲ್ಲಿ ಜನ್ಮ ತಾಳಿದ್ದರೆಂದು ಊಹಿಸುವುದಕ್ಕೂ ಅವಕಾಶವಿದೆ. (ಚೆನ್ನಬಸವ ಪುರಾಣ, ಸಂಧಿ-೬೩, ಪದ್ಯ-೫). ನೂರೊಂದು ವಿರಕ್ತರಲ್ಲಿ ಮುಖ್ಯ ಯೋಗಿಯಾದ ಕರಸ್ಥಲದ ನಾಗಿದೇವನ ಗುರು ಕರಸ್ಥಲದ ವೀರಣ್ಣೊಡೆಯನು, ಗುರುವಿರುವಲ್ಲಿಗೆ ಶಿಷ್ಯನು ಬಂದನೆಂದು ಹೇಳುವಾಗ 'ವಿದ್ಯಾನಗರವೆಂದು' ಸ್ಪಷ್ಟವಾಗಿ ಹೇಳದೆ "ಗುರುವಿದ್ದೆಪುರಕ್ಕೈದಿ ಬರಲು" ಎಂದು ಮಾತ್ರ ಹೇಳಿರುವುದರಿಂದಲೂ (ಸಂಧಿ-೬೩, ಪದ್ಯ-೮) ಗುರುಶಿಷ್ಯರಿಬ್ಬರೂ ಕೂಡಿ ವಿದ್ಯಾನಗರಿ ಗೈ ತಂದರೆಂದು ಇನ್ನೊಂದೆಡೆಯಲ್ಲಿ (ಸಂಧಿ-೬೩, ಪದ್ಯ-೧೨) ಹೇಳಿರುವುದರಿಂದಲೂ ಆಗ ಪ್ರೌಢದೇವರಾಯನು ಇವರನ್ನು ಬರಮಾಡಿಕೊಂಡು ಮನ್ನಿಸಿದನೆಂದು ಹೇಳಿದ್ದರಿಂದಲೂ (ಪದ್ಯ-೧೫) ಇವರು ದಕ್ಷಿಣ ಕರ್ನಾಟಕದ ಸೀಮೆಯಿಂದಲೇ ಬಂದಿರುವರೋ ಏನೋ ಎಂಬ ಊಹೆಗೆ ಕೆಲಮಟ್ಟಿಗೆ ಅವಕಾಶವಿದೆ."[೨೦] ಆದರೆ ನಾನು ಕೈಗೊಂಡ ಕ್ಷೇತ್ರ ಕಾರ್ಯದ ಆಧಾರದ ಮೂಲಕ ಈ ಮೇಲಿನ ಇಬ್ಬರೂ ಗುರು-ಶಿಷ್ಯರು, ಅಲ್ಲದೆ ಅಂದು ಅವರೊಂದಿಗೆ ಹಲವು ಅನುಭಾವಿಗಳ ಒಂದು ಪಡೆ ದಕ್ಷಿಣ ಕರ್ನಾಟಕದ ಕಡೆಯಿಂದಲೇ ಹಂಪೆಗೆ ಬಂದವರಾಗಿದ್ದರೆಂದು ಸ್ಪಷ್ಟವಾಗಿ ಹೇಳಬಹುದು. ಇದಕ್ಕೆ ಹಲವು ಕಾವ್ಯಗಳ ಹಾಗೂ ಮೌಖಿಕ ಆಧಾರಗಳೇ ಸಾಕ್ಷಿಯಾಗಿವೆ.

ಕರಸ್ಥಲದ ನಾಗಿದೇವನ ಗುರು, ವೀರಣ್ಣೊಡೆಯನಲ್ಲ, ಕರಸ್ಥಲದ ಗುರುಶಾಂಥನೆಂದು ತಿಳಿದುಬರುತ್ತದೆ. ನಾಗಿದೇವನೇ ತಾನು ರಚಿಸಿದ ಕೆಲವೊಂದು ಪದ್ಯಗಳಲ್ಲಿ ಗುರುವಿನ ನಾಮಸ್ಮರಣೆ ಮಾಡಿದ್ದಾನೆ.

"ಗುರುಶಾಂತಲಿಂಗ ಮೂರೇಳು ದೀಕ್ಷೆಯನಿತ್ತ।
ತೆರನ ಪೇಳುವದೆನ್ನ ಮತಿಗ ತಕ್ಕಂತಿದನು।
ಶರಣ ಜನರಾಲಿಪುದು ಪಾಲಿಪುದು ನಲವಿಂದ ನಿಮ್ಮ ಶಿಶುವಾದಶತದಿಂ॥

ಹೀಗೆ ತನ್ನ ಗುರು, ಗುರುಶಾಂತನೆಂಬುದಾಗಿಯೇ ಹೇಳುತ್ತಾನೆ. ತನ್ನ ಗುರು ವೀರಣ್ಣೊಡೆಯನೆಂದು ಎಲ್ಲಿಯೂ ಹೇಳಿಕೊಂಡಿಲ್ಲ. ಇನ್ನೂ ಚೆನ್ನಬಸವ ಪುರಾಣ (ಸಂಧಿ ೬೩, ಪದ್ಯ-೭-೨೦)ದಲ್ಲಿ ಹೇಳಿರುವ ವೀರಣ್ಣೊಡೆಯನ ಶಿಷ್ಯ ನಾಗಿದೇವನು ಮತ್ತೊಬ್ಬನಾಗಿರಬೇಕು[೧೧೧] ಎಂದು ತಿಳಿದುಬರುತ್ತದೆ. ಅಲ್ಲದೆ ವೀರಣ್ಣೊಡೆಯನು ಸಹ ತನ್ನ ಕೆಲವು ಪದ್ಯಗಳಲ್ಲಿ ನಿಜಗುರುಶಾಂತ ಎಂದು ಪ್ರಸ್ತಾಪಿಸಿದ್ದಾನೆ. ಹೀಗಾಗಿ ಈ ಗುರುವಿನ ವಿಷಯದ ಆಧಾರದ ಮೇಲೆ ನೂರೊಂದು ವಿರಕ್ತರಲ್ಲಿ ಬರುವ 'ಶಾಂತ' ಎಂಬ ಪರಿಕಲ್ಪನೆಯು ನಾಗಿದೇವನ ಗುರು 'ಗುರುಶಾಂತ'ನ ಹೆಸರನ್ನೆ ತಮ್ಮ ಹೆಸರಿನ ಕೊನೆಗೆ 'ಶಾಂತ' ಎಂದು ಇಟ್ಟಿರಬೇಕೆಂದು ಸಹ ಊಹಿಸಲು ಸಾಧ್ಯತೆಗಳಿವೆ. ಹೀಗೆ ಗುರು-ಶಿಷ್ಯಂದಿರ ಒಂದು ಬಳಗವನ್ನೇ ಸೃಷ್ಟಿಸಿದ ನಾಗಿದೇವನು ತುಂಬ ಪ್ರಭಾವಶಾಲಿ ವ್ಯಕ್ತಿಯಾಗಿದ್ದ. ಮೌಖಿಕ ಆಧಾರದ ಪ್ರಕಾರ ಕರಸ್ಥಲದ ನಾಗಿದೇವನು ಅವನ ಶಿಷ್ಯ ಸಮುದಾಯದೊಂದಿಗೆ 'ಹರವಿ' ಅಲ್ಲಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಶಿವಧರ್ಮವನ್ನು ಪ್ರಚಾರಪಡಿಸಿ, ಅಲ್ಲಿ ಕೆಲವು ದಿನಗಳವರೆಗಿದ್ದು ತನ್ನ ಕೆಲವೊಂದು ಲೀಲೆಗಳನ್ನು ತೋರ್ಪಡಿಸಿ ಮುಂದೆ ಪ್ರಯಾಣ ಬೆಳೆಸಿದರು.

ತುಮಕೂರು-ಬೆಂಗಳೂರು ಪ್ರದೇಶಗಳಲ್ಲಿರುವ ಗುಬ್ಬಿ, ಗೂಳೂರು, ನಿಟ್ಟೂರು, ಎಡೆಯೂರು, ಸಿದ್ಧರಬೆಟ್ಟ, ಸಿದ್ಧಗಂಗೆ, ಶಿವಗಂಗೆ, ಜಿಜ್ಜಾವರ, ಹಾಗಲವಾಡಿ, ಗುಮ್ಮಳಾಪುರ, ರೇವಣಸಿದ್ಧರ ಬೆಟ್ಟ ಇತ್ಯಾದಿ ಸ್ಥಳಗಳು ೧೫-೧೬ನೇ ಶತಮಾನದಲ್ಲಿ ಅನುಭಾವಿಗಳಿಗೆ ಆಶ್ರಯ ತಾಣವಾಗಿದ್ದವು. ಇಲ್ಲಿ ಹಲವು ಧರ್ಮದ, ಜನಾಂಗದ ದೈವಿಕ ಪುರುಷರು ನೆಲೆನಿಂತಿದ್ದರು, ಎಂಬುದರ ಬಗೆಗೆ ಕೆಲವೊಂದು ಆಧಾರಗಳ ಮೂಲಕ ತಿಳಿದುಬರುತ್ತದೆ. ಅಂದು ನಾಗಿದೇವ ತನ್ನ ಶಿಷ್ಯಬಳಗದೊಂದಿಗೆ ಈ ಮೇಲಿನ ಪ್ರದೇಶಗಳಲ್ಲದೆ, ಕರ್ನಾಟಕದ ಉದ್ದಗಲಕ್ಕೂ ಸಂಚರಿಸಿ ಕೊನೆಗೆ 'ಹಂಪೆ'ಯಲ್ಲಿ ನೆಲೆನಿಂತಿದ್ದರು. ಅಂದು ಜಟಾಧಾರಿಗಳಾಗಿ ಸಂಚರಿಸುತ್ತಿದ್ದ ಈ ಅನುಭಾವಿಗಳನ್ನು ಅಷ್ಟೊಂದು ತುಚ್ಛವಾಗಿ ನೋಡಲಿಕ್ಕೆ ಬರಲಾರದು. ಏಕೆಂದರೆ ಸಿದ್ಧಿ ಪುರುಷರಾದ ಇವರ ಲೀಲೆ ಅಪಾರ. ತಮ್ಮ ಸಂಚಾರದ ಸಂದರ್ಭದಲ್ಲಿ ಅನೇಕ ರೀತಿಯ ಲೀಲೆಗಳಿಂದ ಅಂದು ಜನಸಾಮಾನ್ಯರಿಗೆ ತುಂಬ ಹತ್ತಿರವಾದವರು. ಸಾಮಾನ್ಯ ಜನರ ಹಲವು ರೀತಿಯ ಜಡ್ಡು ಜಾಪತ್ರಯಗಳಂತಹ ಕಾಯಿಲೆಗಳನ್ನು ನಿವಾರಣೆ ಮಾಡಿದುದರ ಬಗೆಗೆ ಉಲ್ಲೇಖಗಳಿವೆ.

ನೂರೊಂದು ವಿರಕ್ತರದು ಹದಿನೆಂಟು ಜಾತಿಯವರಿಂದ ಕೂಡಿದ ಒಂದು ಪರಂಪರೆಯಾಗಿತ್ತು. ಇಲ್ಲಿ ಹದಿನೆಂಟು ಜಾತಿಯವರೆಂದರೆ ಹದಿನೆಂಟು ಕುಲಕಸುಬಿನವರೆಂದರ್ಥ. ಆದರೆ ಇವರಿಗೆ ಜಾತಿ ಮುಖ್ಯವಲ್ಲ. ಆಧ್ಯಾತ್ಮ ಹಾಗೂ ಅನುಭಾವಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಿದವರಾಗಿರುವರು. ಹೀಗಾಗಿ ಈ ನೂರೊಂದು ವಿರಕ್ತರ ಹೆಸರುಗಳು ಕಲ್ಪಿತ ಹೆಸರಾಗದೆ, ಇವರ ಮೂಲ ಹೆಸರು ಮರೆಯಾಗಿ ಇವರು ಕೈಗೊಂಡ ವೃತ್ತಿಯ ಆಧಾರದ ಮೇಲೆ

ಇಟ್ಟಿರುವ ಹೆಸರಾಗಿರಲು ಸಾಧ್ಯತೆಗಳಿವೆ. ಅರೆಮರುಳರಂತಿರುವ ಇವರು ಎಲ್ಲೆಲ್ಲಿಂದಲೋ ಹಂಪೆಗೆ ಬಂದವರು. ಹೀಗಾಗಿ ಇವರ ಮೂಲ ಹೆಸರು ಜನಸಾಮಾನ್ಯರಿಗೆ ಸರಿಯಾಗಿ ಗೊತ್ತಿಲ್ಲದ ಕಾರಣ ಇವರು ಕೈಗೊಂಡ ಕಾಯಕ ಅಥವಾ ಚಟುವಟಿಕೆಯ ಆಧಾರದ ಮೇಲೆ ಹೆಸರುಗಳು ಇವರಿಗೆ ಪ್ರಾಪ್ತವಾಗಿರಲುಬಹುದು.

ಹಲವು ಪ್ರದೇಶಗಳನ್ನು ಅಲೆದಾಡಿದ ವಿರಕ್ತರು ಕೊನೆಗೆ ತೀರ್ಥ ಕ್ಷೇತ್ರವಾದ ಹಂಪೆಯಲ್ಲಿ ಬಂದು ನೆಲೆನಿಂತರು. ಕರಸ್ಥಲದ ನಾಗಿದೇವ, ವೀರಣ್ಣೊಡೆಯರು ಅರಸನ ಅಹ್ವಾನದ ಮೇರೆಗೆ ಹಂಪೆಯಲ್ಲಿ ಆಶ್ರಯ ಪಡೆದರು. ಪ್ರೌಢದೇವರಾಯನು ಈ ಮುಂಚೆಯೇ ಆಸ್ಥಾನದಲ್ಲಿದ್ದ ಸಪ್ತಕಾವ್ಯದ ಗುರುಬಸವಾರ್ಯನೆಡೆಗೆ ಇವರಿಬ್ಬರನ್ನು ಪರೀಕ್ಷಿಸಲೆಂದು ಕಳಿಸುವನು. ಅಲ್ಲಿ ಗುರುಬಸವಾರ್ಯನು ನಾಗಿದೇವನ ನಿಜಜ್ಞಾನಕ್ಕೆ ಮೆಚ್ಚಿ ಅನುಮಾನವಿಲ್ಲದೆ ಆತನಿಗೆ ನಮಿಸಿ ವಿರಕ್ತರನ್ನು ಕೂಡಿ ಸಿಂಗಾರ ತೋಟಕ್ಕೆ ಹೋಗುವನು ಎಂದು ಚೆನ್ನಬಸವ ಪುರಾಣದಲ್ಲಿ ಹೇಳಿದೆ. (ಸಂಧಿ ೬೩, ಪದ್ಯ ೧೫, ೧೭) ವಿರಕ್ತರಲ್ಲಿ ಮತ್ತೊಬ್ಬ ಬತ್ತಲಶಾಂತ (ನಿರ್ವಾಣಿ ಬೋಳೇಶ)ನು ಪ್ರೌಢದೇವರಾಯನ ಕಾಲದಲ್ಲಿ ತುಂಬ ಪ್ರಸಿದ್ಧನಾಗಿದ್ದ. ಅರಸ ಬೇಟೆಗೆಂದು ದಟ್ಟವಾದ ಅರಣ್ಯದೊಳಗೆ ಪ್ರವೇಶಿಸಿದಾಗ ಅಲ್ಲಿ ಸಿದ್ಧಾಸನ ಹಾಕಿಕೊಂಡು ಸನ್ಯಾಸಿಯ ವೇಷದಲ್ಲಿ ಕುಳಿತಿರುವ ಬತ್ತಲೇಶನನ್ನು ಅರಮನೆಗೆ ಕರೆತರಲು ಪದ್ಮಾವತಿ ಎಂಬ ಸುಂದರ ವರಾಂಗನೆಯನ್ನು ಕಳುಹಿಸಿ, ಅವನನ್ನು ತನ್ನಡೆಗೆ ಒಲಿಸಿಕೊಂಡು ವಿಜಯನಗರದ ವಿರೂಪಾಕ್ಷನ ಜಾತ್ರೆಗೆ ಪರಿವಾರ ಸಮೇತರಾಗಿ ಬರುವರು. ಇದರ ನಿಜಾರ್ಥ ತಿಳಿದ ಬತ್ತಲೇಶ ಕ್ಷಣಾರ್ಧದಲ್ಲಿ ಬಯಲಾಗುವನು.

ಪ್ರೊ. ಮೃತ್ಯುಂಜಯ ರುಮಾಲೆಯವರು ವಿಜಯನಗರದ ನೂರೊಂದು ವಿರಕ್ತರಲ್ಲಿ ಬರುವ 'ಸಿಂಗಾಡಿಯ ಶಾಂತ'ನೆಂಬ ವಿರಕ್ತನ ಕುರುಹನ್ನು ಪತ್ತೆ ಹಚ್ಚಿದ್ದಾರೆ. ಇದು ಎಷ್ಟರ ಮಟ್ಟಿಗೆ ಸಮಂಜಸವೆಂಬುದು ತಿಳಿಯದಾಗಿದೆ. ಆದರೂ ಇಷ್ಟು ಪ್ರಯತ್ನ ಪಟ್ಟಿದ್ದು ಸಂತೋಷದ ಸಂಗತಿ. "ನೂರೊಂದು ವಿರಕ್ತರೆಲ್ಲರ ಹೆಸರನ್ನು ಉಲ್ಲೇಖಿಸುವ ಏಕೈಕ ಕೃತಿ, ಮೋದಿಯ ರುದ್ರ (ಕ್ರಿ.ಶ. ೧೭೩೨)ನ 'ನೂರೊಂದು ವಿರಕ್ತರ ಕಾವ್ಯ', 'ನೂರೊಂದು ವಿರಕ್ತರು' ಎಂಬ ಪದ ಪ್ರಯೋಗ ಕಿಕ್ಕೇರಿಯ ನಂಜುಂಡನ ಕಾಲ (ಕ್ರಿ.ಶ. ೧೫೫೦)ದಿಂದ 'ನಿರಂಜನ ವಂಶರತ್ನಕರ ದವರೆಗೂ (ಕ್ರಿ.ಶ.೧೮ನೇ ಶತಮಾನ) ಬಳಕೆಯಾಗುತ್ತದೆ."[೨] "ಇಂದು ಬಹುತೇಕ ವಿರಕ್ತರ ಕುರುಹುಗಳು ನಮಗೆ ಅಲಭ್ಯ ಅವರ ಸಾಂಸ್ಥಿಕ ಪರಂಪರೆ ಯಾವುದೋ ಕಾರಣದಿಂದ ಸ್ಥಗಿತಗೊಂಡಿರುವುದೇ ಇದಕ್ಕೆ ಕಾರಣವಿರಬಹುದು.

ಆದರೆ, ನೂರೊಂದು ವಿರಕ್ತರಲ್ಲಿ ೧೮ನೇ ಕ್ರಮ ಸಂಖ್ಯೆಯಲ್ಲಿ ಬರುವ 'ಸಿಂಗಾಡಿಯಶಾಂತ' ನೆಂಬ ವಿರಕ್ತನ ಒಂದು ಕುರುಹು ಆತನನ್ನು ತಾತ್ವಿಕವಾಗಿ ಜೀವಂತವಾಗಿಟ್ಟಿದೆ. ಬಳ್ಳಾರಿಗೆ

ಸಮೀಪದ 'ಹಿರೇಹಾಳು' ಗ್ರಾಮದಲ್ಲಿ 'ಸಿಂಗಾಡಿ' ಎಂಬ ಉಪನಾಮದ ಒಂದು ಮನೆತನವಿದೆ. ಜಾತಿಯಿಂದ ನೇಕಾರರಾದ ಇವರ ಮನೆತನದಲ್ಲಿ ಶಾಂತಪ್ಪ, ಶಾಂತಣ್ಣ ಎಂಬ ಹೆಸರುಗಳನ್ನಿಡಲಾಗುತ್ತದೆ. ವಿಶೇಷವೆಂದರೆ ಹೆಣ್ಣು ಮಕ್ಕಳಿಗೆ ಈ ಹೆಸರನ್ನು ಇಡಲಾಗದು. ಬಹುಶಃ ಸಿಂಗಾಡಿಯ ಶಾಂತ ವಿರಕ್ತನಾಗಿರುವುದರಿಂದ ಹೆಂಗಸರಿಗೆ ಈ ಹೆಸರು ಇಟ್ಟಿರಲಿಕ್ಕಿಲ್ಲ"[೧೩] ಅಂದು ವಿರಕ್ತರು ಹೆಚ್ಚಾಗಿ ಹಂಪೆಯ ಸುತ್ತಮುತ್ತಲಿನ ಪ್ರದೇಶದಲ್ಲಿಯೇ ನೆಲೆನಿಂತಿದ್ದರು. ಇವರಲ್ಲಿ ಕೆಲವರು ಗೃಹಸ್ಥರಿದ್ದರು, ಕೆಲವರು ಸನ್ಯಾಸಿಗಳಿದ್ದರು. ಹೀಗಾಗಿ ಗೃಹಸ್ಥನಾದ 'ಸಿಂಗಾಡಿಯ' ಮನೆತನ ಇಂದಿನವರೆಗೆ ಉಳಿದಿರಲು ಸಾಧ್ಯತೆಗಳಿವೆ. ಹೀಗೆ ನೂರೊಂದು ವಿರಕ್ತರು ಹಂಪೆಯ ಮೂಲೆ ಮೂಲೆಗಳಲ್ಲಿ ನೆಲೆನಿಂತು ತಮ್ಮ ಸಕಲ ಕಾರ್ಯ ಸಿದ್ಧಿಗಳನ್ನು ನೆರವೇರಿಸಿದರು. ಕೆಲವರು ಹಂಪೆಯಿಂದ ತಮ್ಮ ಮೂಲ ನೆಲೆಗಳಿಗೆ ಮರಳಿದರೆ, ಮತ್ತೆ ಕೆಲವರು ಇಲ್ಲಿಯೇ ಇದ್ದು ತಮ್ಮ ಸಿದ್ಧಿಯನ್ನು ಪೂರೈಸಿ ಹಂಪೆಯಲ್ಲಿಯೇ ಐಕ್ಯರಾಗಿದ್ದಾರೆ. ಕರಸ್ಥಲದ ನಾಗಿದೇವ ಹಂಪೆಯಿಂದ ತನ್ನ ಶಿಷ್ಯಬಳಗದೊಂದಿಗೆ ಪುನಃ ಗುಂಡ್ಲು ಪೇಟೆಯ ಮಂಚಳ್ಳಿಯಲ್ಲಿ ಮರಳಿ ಅಲ್ಲಿ ಶಿವಧ್ಯಾನದಲ್ಲಿ ತೊಡಗಿ ಐಕ್ಯನಾದನೆಂದು ತಿಳಿದುಬರುತ್ತದೆ.

ಇದುವರೆಗೆ ಬಂದಿರುವ ಶರಣ ಸಾಹಿತ್ಯ ಕೃತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಹನ್ನೆರಡನೇ ಶತಮಾನದ ಏಳನೂರು ಎಪ್ಪತ್ತು ಅಮರ ಗಣಂಗಳು ಇವರ ನಂತರ ಹದಿನೈದನೆ ಶತಮಾನದ ನೂರೊಂದು ವಿರಕ್ತರು ಹಾಗೂ ಇವರಾದ ಮೇಲೆ ಬಂದ ಏಳನೂರೊಂದು ವಿರಕ್ತರು ಅಂದರೆ ತೋಂಟದ ಸಿದ್ಧಲಿಂಗ ಶಿವಯೋಗಿಗಳು. ಇವರೆಲ್ಲಾರು ವೀರಶೈವ ಧರ್ಮವನ್ನು ಹಂತ ಹಂತವಾಗಿ ಪ್ರಸಿದ್ಧಿಗೆ ತಂದವರೆಂದು ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖವಾಗಿವೆ. ಆದರೆ ಹದಿನೈದನೇ ಶತಮಾನದ ನೂರೊಂದು ವಿರಕ್ತರು ಏಳನೂರ ಎಪ್ಪತ್ತು ಅಮರಗಣಂಗಳ ಮತ್ತು ತೋಂಟದ ಸಿದ್ಧಲಿಂಗ ಸ್ವಾಮಿಯವರ ನಡುವಿನ ಕಾಲಾವಧಿಯಲ್ಲಿ ಶರಣ ಧರ್ಮ ಮತ್ತು ಸಾಹಿತ್ಯವನ್ನು ಬೆಳೆಸಿದವರೆಂಬಂತೆ ಚಿತ್ರಿತರಾಗಿದ್ದಾರೆ. ಆದರೆ ಅಂದಿನ ಆ ಶೂನ್ಯತೆಯನ್ನು ತುಂಬಿದವರು ಬೇರೆ ವಿದ್ವಾಂಸರು. ಅಂದು ಆಸ್ಥಾನದಲ್ಲಿ ಮಹಾಲಿಂಗರಂಗ, ಲಕ್ಕಣ್ಣ, ಜಕ್ಕಣ್ಣರಂತಹ ಪಂಡಿತರು ಹಾಗೂ ಆಡಳಿತ ಅಧಿಕಾರಿಗಳ ಪ್ರಯತ್ನದ ಫಲವಾಗಿ ವೀರಶೈವ ಧರ್ಮ ಪ್ರಸಿದ್ಧಿಗೆ ಬಂದಿತು. ಅಂದು ಹಲವು ವೀರಶೈವ ಸಂಘ ಸಂಸ್ಥೆಗಳು, ಮಠಮಾನ್ಯಗಳು ಸಹ ವೀರಶೈವ ಧರ್ಮದ ಪ್ರಚಾರಕ್ಕೆ ನಿಂತಿದ್ದವು. ಆದರೆ ನೂರೊಂದು ವಿರಕ್ತರಲ್ಲಿ ಸಪ್ತಕಾವ್ಯದ ಗುರುಬಸವ ಬತ್ತಲೇಶ, ವೀರಣ್ಣೊಡೆಯ, ನಾಗಿದೇವ ಇವರನ್ನು ಬಿಟ್ಟರೆ ಮತ್ಯಾರ ಬಗೆಗೂ ವಿವರ ಪರಿಪೂರ್ಣ ದೊರೆಯಲಾರದು. ಆದರೆ ಈ ಮೇಲಿನವರ ಸಾಹಿತ್ಯ ಅಲ್ಪ ಪ್ರಮಾಣದಲ್ಲಿ ದೊರೆಯುತ್ತದೆ. ಇಷ್ಟನ್ನೇ ಬಿಟ್ಟರೆ ವೀರಶೈವ ಧರ್ಮಕ್ಕೆ ಇವರ ಕೊಡುಗೆ ಅಲ್ಪ. ಹೀಗಾಗಿ ಇವರು ವೀರಶೈವ ಧರ್ಮದವರಲ್ಲ ಇವರದೇ ಆದ ಒಂದು ಪರಂಪರೆ ಅಂದು ಹಂಪೆಯಲ್ಲಿ

ನಿರ್ಮಾಣವಾಗಿತ್ತು. ಏಕೆಂದರೆ ಈ ಮೇಲೆ ಪ್ರಸ್ತಾಪಿಸಿದ ಏಳನೂರ ಎಪ್ಪತ್ತು ಅಮರಗಣಂಗಳು ಮತ್ತು ಏಳನೂರ ಒಂದು ವಿರಕ್ತರ ಕುರಿತು ಮಾಹಿತಿ ದೊರೆಯುವಂತೆ ನೂರೊಂದು ವಿರಕ್ತರ ಕುರಿತು ಮಾಹಿತಿ ಏಕೆ? ಸ್ಪಷ್ಟವಾಗಿಲ್ಲ. ಅಲ್ಲದೆ ವೀರಶೈವ ಧರ್ಮದ ಶ್ರೇಯಸ್ಸಿಗೆ ಶ್ರಮಿಸಿದವರೆಂದ ಮೇಲೆ ಇವರೆಲ್ಲರೂ ಎಲ್ಲೆಲ್ಲಿ ಸಮಾಧಿ ಹೊಂದಿದರು, ಇವರ ಕುರಿತು ದೈವಿಕ ಕಲ್ಪನೆ ಏಕೆ? ಉಳಿದಿಲ್ಲ. ಇವರಂತೆ ವೀರಶೈವರೆನಿಸಿದ ತೋಂಟದ ಪರಂಪರೆಯ ಏಳನೂರ ಒಂದು ವಿರಕ್ತರ ಕುರಿತಾಗಿ ಹಲವು ರೀತಿಯ ವಿವರ ದೊರೆಯುವುದು. ಅಲ್ಲದೆ ಇವರ ಕುರಿತಾದ ಗದ್ದುಗೆಗಳಿವೆ ಹಾಗೂ ಆಚರಣಾ ಕ್ರಮಗಳಿವೆ.

"ತೋಂಟದ ಸಿದ್ಧಲಿಂಗಯತಿಗೆ ಸಂಬಂಧಿಸಿದಂತೆ ಯಡೆಯೂರು, ಗದಗ, ಡಂಬಳ, ಕಗ್ಗೆರೆಗಳಲ್ಲಿ ಹಾಗೂ ಚಿತ್ರದುರ್ಗ (ಮುರಗಾಶಾಂತವೀರ), ಗೂಳೂರು (ಗೂಳೂರು ಸಿದ್ಧಲಿಂಗಯ್ಯ), ಮಧುಗಿರಿ (ಬೋಳ ಬಸವ), ತಿಳುವಳ್ಳಿ (ಕಟ್ಟಿಗೆಹಳ್ಳಿ ಸಿದ್ಧಲಿಂಗ), ಭೈರನ ದುರ್ಗ (ಗಗನದಯ್ಯ), ಹರಪನಹಳ್ಳಿ (ಚೆನ್ನಬಸವೇಶ), ಗುಮ್ಮಳಪುರ (ಗುಡ್ಡದ ಸಿದ್ಧವೀರ ಸ್ವಾಮಿ), ಇಳಸೂರು (ನೋಡಸಿದ್ಧಲಿಂಗ ದೇಶಿಕೇಂದ್ರ), ಕಟ್ಟಿಗೆ ಹಳ್ಳಿ (ರಾಚೋಟಿಸ್ವಾಮಿ), ಗುಬ್ಬಿ (ಚೆನ್ನಬಸವೇಶ) ಮುಂತಾದೆಡೆಗಳಲ್ಲಿ ಇರುವ ಇವರ ಸಮಾಧಿ ಅಥವಾ ಗದ್ದುಗೆಗಳು ಈಗಲೂ ಜನರಿಂದ ಪೂಜಿಸಲ್ಪಡುತ್ತವೆ."[೨೪] ಆದರೆ ಇಂದಿನವರೆಗೂ ವೀರಶೈವರೆಂದು ಹೇಳುತ್ತ ಬಂದಿರುವ ನೂರೊಂದು ವಿರಕ್ತರ ಸಮಾಧಿಗಳಾಗಲಿ ಅಥವಾ ಗದ್ದುಗೆಗಳಾಗಲಿ ಏಕೆ? ದೊರೆತಿಲ್ಲ. ಏಕೆಂದರೆ ಅಂದು ಅರೆಮರುಳ, ಅರೆಹುಚ್ಚರಂತೆ ಅವಧೂತರಂತಿರುವ ಇವರು ವೀರಶೈವರಾಗಿಲಿಕ್ಕಿಲ್ಲ. ಹೀಗಾಗಿ ಇವರ ಕುರಿತಾಗಿ ಆರಾಧನ ಕ್ರಮಗಳಾಗಲಿ, ಗದ್ದುಗೆಗಳಾಗಲಿ, ಕಂಡುಬರಲು ಸಾಧ್ಯವಿಲ್ಲ ಎಂದು ನಿಖರವಾಗಿ ಸ್ಪಷ್ಟಪಡಿಸಬಹುದು.

ಈ ಅಧ್ಯಾಯದಲ್ಲಿ ಕಂಡುಕೊಂಡ ಪ್ರಮುಖ ಅಂಶಗಳು:

೧. ನೂರೊಂದು ವಿರಕ್ತರಲ್ಲಿ ಹೆಚ್ಚು ಪ್ರಸಿದ್ಧ ವ್ಯಕ್ತಿಗಳೆನಿಸಿದ ಕರಸ್ಥಲದ ನಾಗಿದೇವ, ವೀರಣ್ಣೊಡೆಯ, ಸಪ್ತಕಾವ್ಯದ ಗುರುಬಸವ, ನಿರ್ವಾಣಿ ಬೋಳೇಶ ಹೀಗೆ ಪ್ರಮುಖ ವ್ಯಕ್ತಿಗಳ ಮೂಲ ನೆಲೆ ಕುರಿತು ಸ್ಪಷ್ಟವಾಗಿ ಗುರುತಿಸಬಹುದು. ಆದರೆ ಉಳಿದ ವಿರಕ್ತರ ಹೆಸರು ಮಾತ್ರ ತಿಳಿದುಬರುತ್ತವೆ ಹೊರತು, ಅವರ ನೆಲೆಗಳ ಕುರಿತು ಮಾಹಿತಿ ದೊರೆಯಲಾರದು.

೨. ಈ ವಿರಕ್ತರ ಒಂದು ಪರಂಪರೆ ಒಂದೇ ಕಡೆಯಿಂದ ವಿಜಯನಗರಕ್ಕೆ ಆಗಮಿಸಿಲ್ಲ. ನಾಡಿನ ಅನೇಕ ಕಡೆಯಿಂದ ಇವರು ಬಂದಿರುವವರಾಗಿರುವರು. ಅಲ್ಲದೆ ಇನ್ನೂ ಕೆಲವರು ಅಲ್ಲಿನ ಮೂಲನಿವಾಸಿಗಳಾಗಿರಲು ಸಾಧ್ಯತೆಗಳಿವೆ.

೩. ಮಂಟೇಸ್ವಾಮಿ, ಮಲೆಯಮಹಾದೇಶ್ವರ ಮುಂತಾದ ಆಧ್ಯಾತ್ಮಿಕ ಅನುಭಾವಿಗಳು ಅಂದು ಕತ್ತಲೆಯ ನಾಡಾಗಿದ್ದ ದಕ್ಷಿಣ ಕರ್ನಾಟಕದಿಂದ ಬೆಳಕಿನ ಬೀಡಾದ ಉತ್ತರ ಕರ್ನಾಟಕದ

ಕಡೆ ಹಲವು ಅನುಭಾವಿ ಪುರುಷರು ಬಂದು ತಮ್ಮ ಸಕಲ ಸಿದ್ಧಿಸಾಧನೆಗಳನ್ನು ಪೂರೈಸಿ ಪುನಃ ತಮ್ಮ ನಾಡಿಗೆ ಮರಳಿದರು. ಹೀಗೆ ಇವರಂತೆ ವಿರಕ್ತರಲ್ಲಿ ಆದಿಯಾದ ಕರಸ್ಥಲದ ನಾಗಿದೇವ, ವೀರಣ್ಣೊಡೆಯರು ತಮ್ಮ ಕೆಲವು ಶಿಷ್ಯರೊಂದಿಗೆ ಹಂಪೆಗೆ ಬಂದು ತಮ್ಮ ಆಧ್ಯಾತ್ಮಿಕವಾದಂತಹ ಸಿದ್ಧಿ ಸಾಧನೆಗಳನ್ನು ನೆರವೇರಿಸಿ, ಮರಳಿ ತಮ್ಮ ಮೂಲ ನೆಲೆಗೆ ಮೇಲಿನ ಅನುಭಾವಿಗಳಂತೆ ಮರಳಿದರು. ಕರಸ್ಥಲದ ನಾಗಿದೇವರು 'ಮಂಚಳ್ಳಿ ಗವಿ'ಯಲ್ಲಿ ಧ್ಯಾನಸಕ್ತರಾಗಿ ಅಲ್ಲಿಯೇ ಐಕ್ಯರಾದರು. ಈಗಲೂ ಇವರ ಹೆಸರಿನ ಮೇಲೆ ಅಲ್ಲಿ ಒಂದು ಟ್ರಸ್ಟ್ ಸ್ಥಾಪನೆಯಾಗಿದೆ. ಅಲ್ಲದೆ ಇವರ ಕುರಿತು ಅಲ್ಲಿ ಈಗಲೂ ಕೆಲವು ಆಚರಣಾಕ್ರಮಗಳಿವೆ.

೪. ನೂರೊಂದು ವಿರಕ್ತರಿಗೆ ಸ್ಥಿರವಾದ ನೆಲೆಗಳಿರಲಿಲ್ಲ. ಎಲ್ಲೋ ಹುಟ್ಟಿ ಎಲ್ಲೋ ಬೆಳೆದು ಮತ್ತೆಲ್ಲಿಯೋ ಸಾವನ್ನಪ್ಪುವ ಇವರು ಸರ್ವಸ್ವವನ್ನು ತೊರೆದವರಾಗಿರುವರು. ಅರೆಮರುಳರಂತಿರುವ, ಹುಚ್ಚರಂತಿರುವ ಇವರಿಗೆ ಎಲ್ಲಿ ಶಾಂತಿ, ನೆಮ್ಮದಿ ದೊರೆಯುತ್ತದೆಯೋ ಅಲ್ಲಿ ಕೆಲವು ದಿನಗಳಿದ್ದು ಮತ್ತೆ ಬೇರೊಂದು ಕಡೆ ಪ್ರಯಾಣಿಸುವರು. ಹೀಗಾಗಿ ಇವರು ಸದಾ ಸಂಚಾರಿ ಜೀವಿಗಳಾಗಿರುವರು.

೫. ಹನ್ನೆರಡನೇ ಶತಮಾನದ ಏಳ್ನೂರ ಎಪ್ಪತ್ತು ಅಮರಗಣಂಗಳು ಮತ್ತು ಏಳನೂರು ಒಂದು ತೋಂಟದ ಶಿಷ್ಯ ಪರಂಪರೆಯ ಕುರಿತು ಮಾಹಿತಿ ದೊರೆಯುವಂತೆ ನೂರೊಂದು ವಿರಕ್ತರ ಕುರಿತಾಗಿ ಮಾಹಿತಿ ಅಲಭ್ಯ. ಈ ಮೇಲಿನ ಶರಣರ ಕುರಿತಾಗಿ ಆರಾಧನ ಅಥವಾ ಆಚರಣಾ ಕ್ರಮಗಳಿವೆ. ಅಲ್ಲದೆ ಇವರು ದೈವಾಧೀನರಾದ ಮೇಲೆ ಇವರ ಕುರಿತಾಗಿ ಗದ್ದುಗೆ ಅಥವಾ ಸಮಾಧಿಗಳು ದೊರೆಯುವಂತೆ ನೂರೊಂದು ವಿರಕ್ತರ ಕುರಿತಾಗಿ ಯಾವುದೇ ಕುರುಹುಗಳು ದೊರೆಯಲಾರದು. ಏಕೆಂದರೆ ಇವರು ವೀರಶೈವರಾಗಿದ್ದರೆ ಇವರ ಕುರಿತು ಮಾಹಿತಿ ದೊರೆಯುತ್ತಿತ್ತು. ಆದರೆ ಇವರೆಲ್ಲರು ವೀರಶೈವರಲ್ಲದ ಕಾರಣ ಗದ್ದುಗೆಗಳು, ಸಮಾಧಿಗಳು ಹಾಗೂ ಆಚರಣಾ ಕ್ರಮಗಳು ಕಂಡುಬರಲು ಸಾಧ್ಯವಾಗಿಲ್ಲ.

ಅಡಿಟಿಪ್ಪಣಿಗಳು

೦೧. ಶರಣ ಸಾಹಿತ್ಯ: ಸಂಪುಟ-೬, ಸಂಚಿಕೆ-೧, ಪುಟ-೪೩, ೧೯೪೩.

೦೨. ಕರ್ನಾಟಕದ ಮಠಗಳು ಮತ್ತು ಕನ್ನಡ ಸಾಹಿತ್ಯ: ಡಾ. ಕೆ.ರವೀಂದ್ರನಾಥ, ಪುಟ-೯.

೦೩. ಕರ್ನಾಟಕದ ನಾಥಪಂಥ-ಡಾ. ರಹಮತ್ ತರೀಕೆರೆ, ಪುಟ-೧.

೦೪. ಅದೇ, ಪುಟ-೬

೦೫. ಅದೇ, ಪುಟ-೧.

೦೬. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ: ಪು-೮೮.

೦೭. ಕೊಡೆಕಲ್ ಬಸವಣ್ಣ : ಒಂದು ಅಧ್ಯಯನ: ಡಾ. ಬಸವರಾಜ ಸೊಪ್ಪಿಮಠ, ಪುಟ-೯೬.

೦೮. ಕರ್ನಾಟಕದ ಮಠಗಳು ಮತ್ತು ಕನ್ನಡ ಸಾಹಿತ್ಯ: ಡಾ. ಕೆ.ರವೀಂದ್ರನಾಥ, ಪುಟ-೧೧೪.

೦೯. ಶರಣ ಸಾಹಿತ್ಯ: ಸಂಪುಟ-೭, ಸಂಚಿಕೆ-೧, ಪುಟ-೩೦೮-೩೦೯.

೧೦. ಶಿವಾನುಭವ: ಸಂಚಿಕೆ-೪, ಮಾಸಪತ್ರಿಕೆ, ಪುಟ-೧೩೦-೧೩೨.

೧೧. ಶರಣ ಸಾಹಿತ್ಯ: ಸಂಪುಟ-೧, ಪುಟ-೬೯೦.

೧೨. ವಿಜಯನಗರದ ಅಧ್ಯಯನ: ಸಂಪುಟ-೪, ಪುಟ-೯೦, ೧೯೯೮.

೧೩. ಅದೇ, ಪುಟ-೯೦

೧೪. ಪಂಚಗಣಾಧೀಶ್ವರರು : ಸಾಂಸ್ಕೃತಿಕ ಅಧ್ಯಯನ: (ಅಪ್ರಕಟಿತ), ಸತೀಶ್ ಪಾಟೀಲ್, ಪುಟ-೪೪

ಅಧ್ಯಾಯ - ಹತ್ತು

ನೂರೊಂದು ವಿರಕ್ತರು : ಶಾಂತ ಸಂಪ್ರದಾಯ

ಅಧ್ಯಾಯ – ಹತ್ತು

ನೂರೊಂದು ವಿರಕ್ತರು : ಶಾಂತ ಸಂಪ್ರದಾಯ

ವೀರಶೈವ ಸಾಹಿತ್ಯ ಚರಿತ್ರೆಯಲ್ಲಿ ಒಂದು ಚರ್ಚೆಯ ವಸ್ತುವಾಗಿರುವ ನೂರೊಂದು ವಿರಕ್ತರು ಇಂದಿಗೂ ಒಂದು ಸಮಸ್ಯೆಯಾಗಿ ಉಳಿದಿದ್ದಾರೆ. ಇವರ ಒಂದು ಪರಂಪರೆ ಎಲ್ಲಿಂದ ಹಂಪೆಗೆ ಆಗಮಿಸಿತು, ಅವರ ಕಾರ್ಯ ವೈಖರಿ ಏನು ಎಂಬಂತಹ ಅಂಶಗಳ ಬಗೆಗೆ ಕೆಲವೇ ವಿರಕ್ತರ ಕುರಿತು ಮಾಹಿತಿ ದೊರೆತರೆ, ಉಳಿದ ವಿರಕ್ತರು ಕೇವಲ ನಾಮ ಮಾತ್ರಕ್ಕೆ ಉಳಿದಿದ್ದಾರೆ. ಚಾರಿತ್ರಿಕ ವ್ಯಕ್ತಿಗಳಾಗಿ ಬದುಕಿದ ವಿರಕ್ತರು. ಶಿವಯೋಗಿಗಳು, ಪವಾಡ ಪುರುಷರಾಗಿರುವರು. ಅಂದು ಇವರ ಕುರಿತಾಗಿ ಬಂದಿರುವ ಮೋದಿರುದ್ರನ 'ವಿರಕ್ತರ ಕಾವ್ಯ' ಮತ್ತು 'ನೂರೊಂದು ವಿರಕ್ತರ ಸ್ತೋತ್ರ' ಎಂಬ ಎರಡು ಕೃತಿಗಳನ್ನು ಬಿಟ್ಟರೆ ಉಳಿದ ಕೃತಿಗಳು ೮ ರಿಂದ ೧೦ ಮಂದಿ ವಿರಕ್ತರ ಹೆಸರನ್ನು ಹೇಳಿ ಇತ್ಯಾದಿ ಎಂದು ಮುಂದೆ ಸಾಗಿವೆ. ಈ ಹೆಸರುಗಳ ಮುಂದೆ ಶಾಂತ, ಶಾಂತೇಶ, ಶಾಂತಮೂರ್ತಿ ಎಂದಿಲ್ಲದೆ, ಜನಸಾಮಾನ್ಯರ ಹೆಸರಿನಂತಿವೆ. ಉಳಿದ ವಿರಕ್ತರ ಹೆಸರಿನ ಮುಂದೆ 'ಶಾಂತ' ಎಂಬ ಪದಸೇರಿದೆ. ಹೀಗಾಗಿ ವಿರಕ್ತರ ಹೆಸರಿನ ಮುಂದೆ 'ಶಾಂತ' ಎಂಬ ಪದ ಬರಲು ಕಾರಣವೇನು? ಎಂಬಂತಹ ವಿಷಯಗಳ ಕುರಿತು ಆಧುನಿಕ ವಿದ್ವಾಂಸರು ಈ ಕೆಳಗಿನಂತೆ ಚರ್ಚಿಸಿದ್ದಾರೆ.

ಡಾ. ಆರ್.ಸಿ.ಹಿರೇಮಠರವರು ತಮ್ಮ 'ಷಟ್‌ಸ್ಥಲ ಪ್ರಭೆ' ಎಂಬ ಕೃತಿಯ ಚಾರಿತ್ರಿಕ ವಿವೇಚನೆಯಲ್ಲಿ ವಿರಕ್ತರಲ್ಲಿ ಬರುವ 'ಶಾಂತ' ಎಂಬ ಹೆಸರನ್ನು ಕುರಿತು ಹೀಗೆ ತಿಳಿಸಿರುವರು. "ನೂರೊಂದು ವಿರಕ್ತರಲ್ಲಿ ಸುಮಾರು ಹತ್ತು ಹೆಸರುಗಳನ್ನು ಬಿಟ್ಟರೆ ಮಿಕ್ಕವೆಲ್ಲ ಶಾಂತೇಶ,

ಶಾಂತಲಿಂಗ ಮತ್ತು ಶಾಂತ ಎಂಬುವೇ ಇವೆ. ಇಷ್ಟು ಜನರೆಲ್ಲರೂ ಒಂದೆಡೆ ಒಂದೇ ಹೆಸರಿನವರಿದ್ದರೇ? ಎಂಭ ಪ್ರಶ್ನೆ ಸಹಜವಾಗಿ ತಲೆಯೆತ್ತುತ್ತವೆ. 'ಚೆನ್ನಬಸವ ಪುರಾಣವು' ಹತ್ತು ಹೆಸರುಗಳಿಗೆ ಇತ್ಯಾದಿ ಎಂದು ಹೇಳಿ ಮುಂದೆ ಸಾಗಿದರೆ 'ನೂರೊಂದು ವಿರಕ್ತರ ಕಾವ್ಯ'ವು ನೂರೊಂದು ವಿರಕ್ತರ ಅವೆಲ್ಲ ಹೆಸರುಗಳನ್ನು ಪೂರೈಸುವ ಸಾಹಸ ಮಾಡಿದೆ.

ನೂರೊಂದು ವಿರಕ್ತರಲ್ಲಿ ಕೆಲವೇ ಹೆಸರನ್ನು ಬಿಟ್ಟರೆ ಬಹುಶಃ ಎಲ್ಲ ಹೆಸರುಗಳು ಶಾಂತ, ಶಾಂತಲಿಂಗ, ಎಂಬುದಾಗಿಯೇ ಉಂಟು, ನಿಜ. ಆದರೆ ಮೂಲತಃ ಅವರೆಲ್ಲರ ಅಂಕಿತನಾಮಗಳು ಹಾಗೆಯೇ ಇದ್ದಿರಲಿಕ್ಕಿಲ್ಲ. ಅವರು ಪಡೆದ ಸ್ಥಿತಿಗನುಗುಣವಾಗಿ ಈ ಹೆಸರು ಅವರಿಗೆ ಬಂದಿರಬಹುದು. ಅವರೆಲ್ಲ ಹೊಂದಿದುದು ಶಾಂತ ಸ್ಥಿತಿಯೇ ಆಗಿದ್ದಿತು. ಆದುದರಿಂದ ಜನ ಅವರನ್ನು ಆ ಅಭಿದಾನದಿಂದ ಕರೆದಿರಬೇಕು. ವ್ಯಕ್ತಿಶಃ ಒಬ್ಬೊಬ್ಬರನ್ನು ಗುರುತಿಸುವುದಕ್ಕಾಗಿ, ಅವರವರು ಲೋಕದಲ್ಲಿ ನಡೆಸಿದ ನಟನೆ ಕೈಗೊಂಡ ಕಾಯಕ ಇತ್ಯಾದಿಗಳಿಗೆ ಅನುಸಾರವಾದ ವಿಶೇಷಣಗಳನ್ನು ಅವರವರ ಹೆಸರುಗಳಿಗೆ ಹೊಂದಿಸಲಾಗಿದೆ. ಇವೆಲ್ಲ ಹೆಸರುಗಳು ಕವಿ ಮೋದಿರುದ್ರನ ಸೃಷ್ಟಿಯವೇ ಎಂದು ಹೇಳಲಿಕ್ಕಾಗದು; ಅದು ಶರಣರ ನಡೆಗೆ ಹೊಲ್ಲ"[1] ಇಲ್ಲಿ (ಡಾ. ಆರ್.ಸಿ. ಹಿರೇಮಠರವರು ಅರೆಮರುಳರು, ಶಾಂತ ಮನಸ್ಥಿತಿಯಲ್ಲಿದ್ದ ವಿರಕ್ತರು ಹಲವು ಕೃತಿಗಳಲ್ಲಿ ಚಿತ್ರಿತರಾಗಿರುವುದನ್ನು ಮನಗಂಡು ಈ ಮೇಲಿನಂತೆ ವಿವೇಚಿಸಿದ್ದಾರೆ). ಡಾ.ಆರ್.ಸಿ.ಹಿರೇಮಠರ ಅಭಿಪ್ರಾಯವನ್ನೇ 'ಬಳ್ಳಾರಿ ಜಿಲ್ಲೆಯ ಶಿವಶರಣರು' ಎಂಬ ಕೃತಿಯಲ್ಲಿ ಶ್ರೀಶಾಂತರಸ ಅವರು ಅನುಮೋದಿಸುತ್ತಾ ಅವರೆಲ್ಲರವೂ ಶಾಂತಸ್ಥಿತಿಯೇ ಆಗಿದ್ದಿತೆಂದು ಅಭಿಪ್ರಾಯ ಪಡುತ್ತಾರೆ.

ನೂರೊಂದು ವಿರಕ್ತರ ಕುರಿತು ಗಂಭೀರವಾಗಿ ಚಿಂತಿಸಿದ ಡಾ.ಎಂ.ಎಂ.ಕಲಬುರ್ಗಿಯವರು ಇದುವರೆಗೆ ಇವರನ್ನು ಕುರಿತಾಗಿ ಬಂದಿರುವ 'ಮಿತ್' ಅನ್ನು ಮುರಿಯಬೇಕೆನ್ನುವರು. ವಿರಕ್ತರನ್ನು ಕುರಿತಾಗಿ ಚೆನ್ನಬಸವ ಪುರಾಣದಲ್ಲಿ ಕವಿ ಕೆಲವೊಂದು ಗೊಂದಲದ ವಾತಾವರಣ ಸೃಷ್ಟಿಸಿದ್ದಾನೆ. ಹೀಗಾಗಿ ನೂರೊಂದು ವಿರಕ್ತರ ಲಕ್ಷಣ, ಗುಣಸ್ವಭಾವವನ್ನು ಮನಗಂಡು ಇವರು ನಾಥ ಅಥವಾ ಶಾಂತ ಸಂಪ್ರದಾಯದವರೆಂದು ಹೇಳಬಹುದೆನ್ನುವರು. 'ನಿಜಗುಣ ಶಿವಯೋಗಿ'ಯ ಒಂದು ಸ್ವರವಚನದಲ್ಲಿ "ಶ್ರೀ ಗುರು ವಚನೋಪದೇಶಲಾರಿಪ........." ಎಂಬ ತುಂಬ ಪ್ರಸಿದ್ಧವಾದ ವಚನದಲ್ಲಿ ಹಾಡುತ್ತ ಹಾಡುತ್ತ ಬಂದು ಕೊನೆಗೆ "ಶಾಂತರೊಳು ಒಡನಾಡು" ಎಂದು ಹೇಳುವನು. ಈ ವಚನದಲ್ಲಿ ಏಕೆ? ಶಾಂತರೊಳು ಒಡನಾಡು ಅಂದ, ಶರಣರೊಳು ಒಡನಾಡು ಎಂದು ಹೇಳಬಹುದಾಗಿತ್ತು. ಬಹಳ ಪಾಪುಲರ್ ಶಬ್ದ ಅಂದರೆ 'ಶರಣ', ಶರಣರ ಒಡನಾಡು ಅಂದಿದ್ದರೆ ಮತ್ತೆ ತಪ್ಪುತ್ತಿದ್ದಿಲ್ಲ. 'ಶಾಂತ'ನು ಮೂರು ಮಾತ್ರೆ 'ಶರಣ'ನು ಮೂರು ಮಾತ್ರೆ

ಅಲ್ಲಿ ಗುರು, ಲಘುವಿದೆ. ಇಲ್ಲಿ ಮೂರು ಲಘುವಿದೆ. ಅಂದರೆ 'ಶಾಂತ' ಅನ್ನುವಂತದ್ದು ಒಂದು ಪಾರಿಭಾಷಿಕ ಪದ. ಶಾಂತ ಮನಸ್ಸಿನವರು ಎಂದು ಅರ್ಥವಲ್ಲ. ಇವರು ಶಾಂತ ಸಂಪ್ರದಾಯದವರೆಂದರ್ಥ. ನಿಜಗುಣ ಶಿವಯೋಗಿ ಸಹ ಶಾಂತ ಸಂಪ್ರದಾಯದವರು. ನೂರೊಂದು ವಿರಕ್ತರಲ್ಲಿ ಮಿಡಿಬಿಲ್ಲ ಶಾಂತ, ಹೇಟೆಯ ಶಾಂತ, ಆಶಾಂತ, ಈಶಾಂತ ಎಂದು ಕೊನೆಯಲ್ಲಿ 'ಶಾಂತ' ಎಂದು ಬರುತ್ತದೆ. ಡಾ.ಆರ್.ಸಿ.ಹಿರೇಮಠರವರು ಇವರನ್ನು ಶಾಂತ ಸ್ವಭಾವದವರಿದ್ದರು ಅದಕ್ಕೆ ಇವರಿಗೆ ಶಾಂತ ಎಂಬ ನಾಮಧೇಯ ಬಂದಿರಬೇಕೆನ್ನುವರು. ಅಂದು ಅವರಿಗೆ ಹಾಗೆ ಅನ್ನಿಸಿತು. ಆದರೆ ಈಗ ಅವರು ಶಾಂತ ಸ್ವಭಾವದರಲ್ಲ. ಶಾಂತ ಪರಂಪರೆಯವರಾಗಿರುವರು. ಪ್ರತಿಯೊಬ್ಬ ವಿರಕ್ತನ ಹೆಸರಿನ ಕೊನೆಯಲ್ಲಿ 'ಶಾಂತ' ಎಂದು ಕೊನೆಗೊಳ್ಳುತ್ತದೆ. ಹೀಗಾಗಿ ಅಂದು ಇವರದೇ ಆದ ಒಂದು ಶಾಂತ ಪರಂಪರೆ ನಿರ್ಮಾಣವಾಗಿರಬೇಕೆನ್ನುವರು. ಈ ಶಾಂತ ಪರಂಪರೆನೇ ನಾಥ ಪರಂಪರೆಯಾಗಿದೆ. ಹೀಗಾಗಿ ಈ ವಿರಕ್ತರ ಲಕ್ಷಣ ಅವರ ವರ್ತನೆ ನಮ್ಮ ಲಿಂಗಾಯತ ವಿರಕ್ತರಿಗೆ ಹೊಂದಲಾರದು. ಅದಕ್ಕೆ ಇವರು ಲಿಂಗಾಯುತ ವಿರಕ್ತರಲ್ಲವೆಂದು ಬೇರ್ಪಡಿಸಬೇಕು. ಹಂಪೆ ನಾಥಸಂಪ್ರದಾಯದ ಕೇಂದ್ರ, ಅಲ್ಲಿರುವ ಮನ್ಮಥ ತೀರ್ಥ ಅದು ಮನ್ಮುಖಿ ತೀರ್ಥ ಮತ್ತು ಗುರುಮುಖಿ ತೀರ್ಥ ಇವುಗಳ ಆಧಾರದ ಮೇಲೆ ವಿರಕ್ತರು ನಾಥ ಅಥವಾ ಅವಧೂತ ಪರಂಪರೆಗೆ ಸೇರಿದವರಾಗಿ ಕಂಡುಬರುವರು ಎಂಬುದು ವಿರಕ್ತರ ಬಗೆಗೆ ಹಾಗೂ ಅವರ ಸಂಪ್ರದಾಯದ ಬಗೆಗೆ ವಿದ್ವಾಂಸರಾದ ಡಾ. ಕಲಬುರ್ಗಿ ಅವರ ಅಭಿಪ್ರಾಯವಿದೆ.

"ವಿರಕ್ತರಲ್ಲಿ ಆದಿ ಪುರುಷನಾದ ಕರಸ್ಥಲ ನಾಗಿದೇವನ ಮೊದಲ ಹೆಸರು ನಾಗಿದೇವ ಅಥವಾ ನಾಗಲಿಂಗದೇವ. ಈತನ ಗುರು ಕರಸ್ಥಲದ ಗುರುಶಾಂತಲಿಂಗದೇವರುನಾದುದರಿಂದ ಮುಂದೆ ನಾಗಿದೇವ, ಕರಸ್ಥಲದ ನಾಗಿದೇವನೆಂಬ ಹೆಸರಿನಿಂದ ಪ್ರಸಿದ್ಧನಾದ. ಕವಿಚರಿತೆಕಾರರು ನಾಗಲಿಂಗನ ವಿಷಯವನ್ನು ಚೆನ್ನಬಸವ ಪುರಾಣದಿಂದ ತೆಗೆದುಕೊಂಡಿದ್ದು, ಇದರಲ್ಲಿ ಕರಸ್ಥಲದ ನಾಗಿದೇವನ ಗುರು ವೀರಣ್ಣೊಡೆಯನೆಂದು ಸ್ಪಷ್ಟ ಪಡಿಸಿರುವರು. ಅದೇ ಕವಿ ಚರಿತೆಯ ದ್ವಿತೀಯ ಸಂಪುಟದ ೨೦ನೇ ಪುಟದಲ್ಲಿ.

> 'ಪರಿಮಳವ ಕೊಂಬಂಥ ವರಭೃಂಗನಂದದಿ।
> ಪರಮಹಂಸ ನೊಳೊಡವೆರೆದು।
> ಕರಸ್ಥಲದ ಗುರುಶಾಂತನೊಡನೆ ಬಯಲಾದೆ॥

ಎಂಬ ಪದ್ಯವನ್ನು ನಾಗಿದೇವನ ತ್ರಿವಿಧಿಯಿಂದ ಎತ್ತಿ ಉದಹರಿಸಿದ್ದಾರೆ. ಇದರಲ್ಲಿ ಕವಿಯು ತನ್ನ ಗುರು 'ಕರಸ್ಥಲದ ಗುರುಶಾಂತ' ನೆಂಬುದಾಗಿ ಹೇಳಿಕೊಂಡಿದ್ದಾನೆ. ಅಲ್ಲದೇ ಸ್ವತಃ ನಾಗಿದೇವನೇ ರಚಿಸಿದ ಕೈಬರಹದ 'ದೀಕ್ಷಾ ವಿಧಿಯ' ಸೂಚನಾ ಪದ್ಯದಲ್ಲಿಯೂ

ಗುರುಶಾಂತಲಿಂಗ ಮೂರೇಳು ದೀಕ್ಷೆಯನಿತ್ತ।
ತೆರನ ಪೇಳುವದೆನ್ನ ಮತಿಗೆ ತಕ್ಕಂತಿದನು।
ಶರಣ ಜನರಾಲಿಪುದು ಪಾಲಿಪುದು ನಲವಿಂದ ನಿಮ್ಮ ಶಿಶುವಾದ ಕತದಿಂ॥

ತನ್ನ ಗುರು 'ಗುರುಶಾಂತ'ನೆಂಬುದಾಗಿಯೇ ಹೇಳುತ್ತಾನೆ. ತನ್ನ ಗುರು ವೀರಣ್ಣೊಡೆಯನೆಂದು ಎಲ್ಲಿಯೂ ಹೇಳಿಕೊಂಡಿಲ್ಲ. ಆದ್ದರಿಂದ ಈ ಕವಿಯ ಗುರು, ಗುರುಶಾಂತನೇ ಹೊರತು ವೀರಣ್ಣೊಡೆಯನಲ್ಲ. ಮತ್ತು ಮೇಲೆ ಉದಹರಿಸಿದ ಎರಡು ಗ್ರಂಥಗಳಲ್ಲಿ ಒಬ್ಬ ಗುರುವನ್ನೇ ಸ್ಮರಿಸುವುದರಿಂದ ಈ ಎರಡು ಗ್ರಂಥಗಳನ್ನು ಬರೆದವನು ಒಬ್ಬನೇ ಇರಬೇಕು."[೨] ಹೀಗಾಗಿ ನೂರೊಂದು ವಿರಕ್ತರ ಹೆಸರಿಗೆ ಅಂಟಿಕೊಂಡಿರುವ 'ಶಾಂತ' ಈ ಪರಂಪರೆಯ ಆದ್ಯನಾದ 'ಗುರುಶಾಂತ'ನನ್ನೇ ಆಶ್ರಯಿಸಿ ಬಳಕೆಗೊಂಡಿರಬೇಕೆಂಬ ಸಂದೇಹಕ್ಕೆ ಅವಕಾಶವಿದೆ. ಹಾಗೆಯೇ ಕ್ರಿ.ಶ. ೧೫೫೬ರಲ್ಲಿ ಜೀವಿಸಿದ್ದ ಗುಬ್ಬಿಮಲ್ಲಣಾರ್ಯನ ಗುರು ಪರಂಪರೆಯಲ್ಲಿ 'ಶಾಂತನಂಜೇಶ್ವರ'ನೆಂಬ ಹೆಸರು ಉಲ್ಲೇಖವಾಗಿರುವುದನ್ನು ವೀರಶೈವಾಮೃತ ಪುರಾಣದ ಪದ್ಯ ಹೀಗಿದೆ.

"ಭೂಲೋಕ ಪಾವನ ಕಕುದ್ಗಿರಿ ಸದಾಕ್ಷಿಣ್ಯ
ಕೈಲಾಸವದ ಮೇಲಗಣಗವಿಯ ಸಿಂಹಾಸ
ನಾಲಂಕೃತಕ ಶಾಂತನಂಜೇಶ್ವರಾಂಘ್ರಿಪಂಕಜಭೃಂಗ ಮಲ್ಲಣಾರ್ಯ।
ಶೀಲಷಟ್‌ಸ್ಥಲ ಹಲಗೆಯಾಚಾರ್ಯನಾ ಶಿಷ್ಯ
ಮೌಲಿಮಣಿ ಕೆಂಚವೀರಾಹ್ವಯಂ ಗೊರೆವ ಸುವಿ
ಶಾಲವರ ವೀರಶೈವಾಮೃತ ಪುರಾಣಮಂ ತುರ್ತ ಪದನಂ ಮಾಡಿದಂ"[೩]

ಈ ಪದ್ಯದಿಂದ ಶಿವಗಂಗೆಯ ಮೇಲಗಣ ಗವಿಯ ಶಾಂತನಂಜೇಶ್ವರನ ಶಿಷ್ಯ ಗುಬ್ಬಿಮಲ್ಲಣಾರ್ಯನೆಂಬುದಾಗಿ ತಿಳಿದುಬರುತ್ತದೆ. ಈ ಶಾಂತೇಶನೇ ನೂರೊಂದು ವಿರಕ್ತರ ಮೂಲ ವ್ಯಕ್ತಿಯೆಂದೂ, ಆತನ ಹೆಸರನ್ನೇ ತಮ್ಮ ಹೆಸರಿನ ಕೊನೆಯಲ್ಲಿ ಸೇರಿಸಿಕೊಂಡಿರುವುದಾಗಿ ಹೇಳಲು ಬಯಸಿದರೂ ಇದರ ಅಧಿಕೃತತೆಗೆ ಇನ್ನೂ ಆಕರಗಳು ಬೇಕೆನಿಸುತ್ತದೆ.

ಇನ್ನೂ ಚೆನ್ನಬಸವ ಪುರಾಣ (ಸಂಧಿ ೬೩, ಪದ್ಯ ೭-೨೨) ದಲ್ಲಿ ಹೇಳಿರುವ ವೀರಣ್ಣೊಡೆಯನ ಶಿಷ್ಯ ನಾಗಿದೇವನು ಮತ್ತೊಬ್ಬನಿರಬೇಕು. ಪ್ರತಿಯೊಂದು ಧಾರ್ಮಿಕ ಪರಂಪರೆಗಳಿಗೆ ಮಾರ್ಗದರ್ಶಕರಾಗಿ ಒಬ್ಬೊಬ್ಬ ಗುರುಗಳಿರುವಂತೆ ಅನುಭಾವಿಗಳಾದ ನೂರೊಂದು ವಿರಕ್ತರಿಗೂ ಸಹ ಒಂದು ಗುರು ಪರಂಪರೆಯಿದೆ. ಹೀಗಾಗಿ ನಾಗಿದೇವನ ಗುರುವಾದ 'ಗುರುಶಾಂತ'ನ ಹೆಸರನ್ನೆ ಮುಂದೆ ಬಂದಂತಹ ವಿರಕ್ತರು ತಮ್ಮ ಹೆಸರಿನ ಮುಂದೆ 'ಶಾಂತ' ಎಂದು ಇಟ್ಟಿರಲು ಸಾಧ್ಯತೆಗಳಿವೆ. ನಾಥ, ಸೂಫಿ, ಅವಧೂತರಂತಹ ಅನುಭಾವಿ ಪಂಥಗಳಲ್ಲಿ

ಗುರುಪರಂಪರೆಯಿದೆ. ಹಾಗೆ ತೋಂಟದ ಸಿದ್ಧಲಿಂಗಯತಿಯ ಒಂದು ಶಿಷ್ಯ ಪರಂಪರೆಯಂತೆ ಅಂದು ನೂರೊಂದು ವಿರಕ್ತರ ಶಿಷ್ಯ ಪರಂಪರೆಯೇ 'ಶಾಂತ' ಪರಂಪರೆಯಾಗಿ ಬೆಳೆದಿರಬೇಕೆನಿಸುತ್ತದೆ.

ಮಧ್ಯಕಾಲೀನ ಸಂದರ್ಭದಲ್ಲಿ ಕೆಲವು ಪ್ರಬಲ ಧಾರ್ಮಿಕ ಧಾರೆಗಳ ಜೊತೆ ಹಲವು ಕಿರುಧಾರೆಗಳು ಉದಯಿಸಿದ್ದವು. ಹಾಗೆ ಅಂದು ಹಂಪೆಯಲ್ಲಿ ನೂರೊಂದು ವಿರಕ್ತರ 'ಶಾಂತ ಪರಂಪರೆ' ಉದಯಿಸಿರಲು ಹಲವು ಸಾಧ್ಯತೆಗಳಿವೆ. ಮೂಲ ಗುರುವಿನ ಹೆಸರಿನ ಹಿನ್ನೆಲೆಯಲ್ಲಿ ಈ ಶಾಂತ ಎಂಬ ಪರಿಕಲ್ಪನೆ ಹುಟ್ಟಿ ಮುಂದೆ ಅವರದೇ ಆದ ಒಂದು ಶಾಂತ ಪರಂಪರೆ ಬೆಳೆದಿರಬೇಕೆನಿಸುತ್ತದೆ. ವಿರಕ್ತರ ಗುಣಲಕ್ಷಣ, ಯೋಗಪರವಾದ ನಿಲುವು, ವಾಸದ ನೆಲೆ, ಅವರ ಪವಾಡ ಸಾದೃಶ್ಯ ಹೀಗೆ ಮುಂತಾದ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ವಿರಕ್ತರು ನಾಥ, ಅವಧೂತರಂತಿರುವ ಶಾಂತ ಪರಂಪರೆಯವರಾಗಿ ಕಂಡುಬರುವರು. ಡಾ. ಬಸವಲಿಂಗ ಸೊಪ್ಪಿನಮಠರವರು ಈ ಅನುಭಾವಿ ಪಂಥಗಳಲ್ಲಿ ನಾಥ, ಅವಧೂತ, ಆರೂಢ ಹಾಗೆ ವಿರಕ್ತರು ಸಹ ಪೂರ್ಣ ಪ್ರಮಾಣದ ಧರ್ಮಗಳೆಂದು ಕರೆಯದಿರಲು ಕಾರಣವೆಂದರೆ, "ಅವು ಆತ್ಮ ತತ್ವಕ್ಕೆ ಕೊಟ್ಟ ಪ್ರಾಧಾನ್ಯವನ್ನು ಸಮಾಜ ತತ್ವಕ್ಕೆ ಕೊಡದಿರುವುದು. ಇದರರ್ಥ ಇವರು ಸಮಾಜವನ್ನು ತಿರಸ್ಕರಿಸಿದರೆಂದಾಗಲೀ, ಸಮಾಜಕ್ಕೆ ಕುರುಡರಾದರೆಂದಾಗಲೀ ಅಲ್ಲ; ಇವರ ಯೋಗಮಗ್ನತೆ, ಆತ್ಮರತೆ ನಿರೀಕ್ಷಿತ ಪ್ರಮಾಣದಲ್ಲಿ ಬಹಿರಂಗಕ್ಕೆ ಚಾಚಿಕೊಳ್ಳಲಿಲ್ಲ. ಚಾಚಿಕೊಂಡಿದ್ದರೂ ತಮ್ಮ ದಿವ್ಯಶಕ್ತಿಯ ಆಟಗಳ ಮೂಲಕ ಜನರು ಇವರನ್ನು ಗೌರವಿಸಿದರು. ಆದರೆ ಬೃಹತ್ತಾಗಿ ಅನುಸರಿಸಲಿಲ್ಲ. ಇವರ ಯೋಗ ಸಾಧನೆಯ ಕ್ಲಿಷ್ಟತೆ, ಯೋಗಶಕ್ತಿಯ ಉಗ್ರತೆ ಜನತೆಯನ್ನು ಹಿಮ್ಮೆಟ್ಟಿಸಿರಲು ಸಾಕು. ತಾಂತ್ರಿಕ ಮತಾಚಾರಗಳ ಹಣೆಬರಹ ಇದು."[17] ಹೀಗೆ ಈ ಅನುಭಾವಿ ಪಂಥಗಳು ಪ್ರಸ್ತುತ ಸಂದರ್ಭದಲ್ಲಿ ಅಲ್ಪಸ್ವಲ್ಪ ತಮ್ಮ ಅಸ್ತಿತ್ವ ಉಳಿಸಿಕೊಂಡರೆ ಮತ್ತೆ ಕೆಲವು ಕಣ್ಮರೆಯಾಗಿ ಬೇರೊಂದು ರೂಪ ಪಡೆದುಕೊಂಡಿರಬಹುದು. ಅದೇನೇ ಇದ್ದರೂ ಡಾ.ಕಲಬುರ್ಗಿ ಅವರು ಮನ್ಮಥ ತೀರ್ಥ ಬಗ್ಗೆ ಎತ್ತಿರುವ ಚಿಂತನೆಯಂತೆ ಹಂಪಿ ಪರಿಸರದ ಪುರಾತತ್ತ್ವ ಅವಶೇಷಗಳ ಶೋಧ ಹಾಗೂ ಅವುಗಳ ನಿಜ ಅಧ್ಯಯನವನ್ನು ಮಾಡಿದ್ದೇಯಾದರೆ 'ಎಲ್ಲ ಹಾದಿಗಳು ಹಂಪೆಯ ಕಡೆಗೆ' ಎನ್ನುವಂತೆ ಪ್ರಾಚೀನ ಕರ್ನಾಟಕದ ಎಲ್ಲ ಧಾರ್ಮಿಕ ಪಂಥಗಳು ಹಂಪೆಯ ಕಡೆಗೆ ಬಂದು ತಮ್ಮ ಕುರುಹುವನ್ನು ಬಿಟ್ಟುಹೋಗಿವೆನಿಸುತ್ತದೆ. ಅಂಥ ಧಾರ್ಮಿಕ ಪಂಥಗಳಲ್ಲಿ 'ಶಾಂತ ಪರಂಪರೆ' ಹೆಸರಿನ ನೂರೊಂದು ವಿರಕ್ತರ ಪಂಥವನ್ನು ಕುರಿತು ಇನ್ನೂ ವಿಸ್ತಾರವಾಗಿ ಅಧ್ಯಯನ ಮಾಡಲು ಅವಕಾಶವಿದೆಯೆಂದು ಮಾತ್ರ ಸಧ್ಯಕ್ಕೆ ಹೇಳಬಹುದು.

ಪ್ರೌಢದೇವರಾಯನ ಕಾಲದಲ್ಲಿ ಹೆಚ್ಚು ಪ್ರಸಿದ್ಧತೆ ಗಳಿಸಿದ ಈ 'ಶಾಂತ ಪರಂಪರೆ' ಕಾಲನಂತರದಲ್ಲಿ ಕಣ್ಮರೆಯಾಗಲು ಈ ಕೆಳಗಿನ ಕಾರಣಗಳನ್ನು ಊಹಿಸಬಹುದು.

೧. ಇವರ ಧಾರ್ಮಿಕ ತತ್ವಗಳು ಜನಸಾಮಾನ್ಯರಿಗೆ ಹತ್ತಿರವಾಗದೇ ಇರಬಹುದು.

೨. ಈ ಪರಂಪರೆಯನ್ನು ಬೆಳೆಸುವ ಪ್ರವರ್ತಕರು ಬಾರದೇ ಇರಬಹುದು.

೩. ಪ್ರಬಲ ಧರ್ಮಗಳ ಪ್ರಭಾವದಿಂದ ಈ ಒಂದು ಪರಂಪರೆ ಬೇರೊಂದು ಪಂಥಗಳಲ್ಲಿ ಲೀನವಾಗಿರುವ ಸಾಧ್ಯತೆಗಳಿವೆ.

೪. ಅಂದು ಹಂಪೆಯಲ್ಲಿ ರಾಜಪ್ರಭುತ್ವದ ಪೂರ್ಣ ಪ್ರಮಾಣದ ಆಶ್ರಯ ಸಿಗದೆ ಇರಬಹುದು.

೫. ವಿರಕ್ತರು ಪ್ರಭುತ್ವ ವಿರೋಧಿಗಳ ನೆಲೆಯಲ್ಲಿ ಕಂಡುಬರುವರು. ಹೀಗಾಗಿ ಇವರಿಗೆ ಜನಬೆಂಬಲ ಸಿಗದೇ ಇರುಬಹುದು.

೬. ೧೪ ಮತ್ತು ೧೫ನೇ ಶತಮಾನದ ಹಂಪೆಯಲ್ಲಿ ಸಂಭವಿಸಿದ ಮುಸ್ಲಿಂ ದಾಳಿಗಳಿಂದ ಬೇರೊಂದು ಕಡೆಗಳಲ್ಲಿ ಚದುರಿ ಹೋಗಿರಲು ಸಾಧ್ಯತೆಗಳಿವೆ.

ಅಡಿಟಿಪ್ಪಣಿಗಳು:

೧. ಷಟ್‌ಸ್ಥಲ ಪ್ರಭೆ: (ಸಂ) ಡಾ.ಆರ್.ಸಿ.ಹಿರೇಮಠ, ಪು-೨೮೧.

೨. ಶರಣ ಸಾಹಿತ್ಯ: ಮೊದಲ ಸಂಪುಟ-ಕೀರ್ತನ ಕೇಸರಿ, ಕವಿರತ್ನ, ಬಿ.ಶಿವಮೂರ್ತಿಶಾಸ್ತ್ರೀ, ಪುಟ-೬೮೯-೬೯೦

೩. ಕರ್ನಾಟಕ ಮಠಗಳು ಮತ್ತು ಕನ್ನಡ ಸಾಹಿತ್ಯ-ಡಾ. ಕೆ.ರವೀಂದ್ರನಾಥ, ಪು-೧೨೯-೧೩೦.

೪. ಕೊಡೇಕಲ್ ಬಸವಣ್ಣ: ಒಂದು ಅಧ್ಯಯನ ಡಾ. ಬಸವಲಿಂಗ ಸೊಪ್ಪಿಮಠ, ಪು-೨೯೮.

ಅಧ್ಯಾಯ - ಹನ್ನೊಂದು

ಸಮಾರೋಪ

ಅಧ್ಯಾಯ – ಹನ್ನೊಂದು

ಸಮಾರೋಪ

ಕರ್ನಾಟಕದ ಚರಿತ್ರೆಯ ಉದ್ದಕ್ಕೂ ಹಲವು ಧಾರ್ಮಿಕ ಪಂಥಗಳು ಉದಯಿಸಿವೆ. ಅವುಗಳು ತಮ್ಮದೇ ಆದ ವಿಶಿಷ್ಟ ರೀತಿಯ ಆಚರಣಾ ಕ್ರಮದಿಂದ ಕೂಡಿವೆ. ಈ ಅನುಭಾವಿ ಪಂಥಗಳ ವ್ಯಕ್ತಿಗಳು ನೋಡಲಿಕ್ಕೆ ಸಾಮಾನ್ಯರಂತೆ ಕಂಡರು, ಅಸಮಾನ್ಯ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡಿರುವರು. ಈ ರೀತಿಯ ವಿಶಿಷ್ಟ ವ್ಯಕ್ತಿತ್ವಕ್ಕೆ ಬೆರಗಾದ ಜನ ಇವರನ್ನು ದೈವೀ ಪುರುಷರೆಂದು ಭಾವಿಸತೊಡಗಿದರು. ಅಂದು ತಮ್ಮ ಪವಾಡ ಶಕ್ತಿಗಳಿಂದ ಜನರ ದುಗುಡ ದುಮ್ಮಾನಗಳನ್ನು, ಹಲವು ರೋಗ ರುಜಿನಗಳನ್ನು ನಿವಾರಣೆ ಮಾಡುವವರಾಗಿದ್ದರು. ಈ ದೃಷ್ಟಿಯಿಂದ ಆಧ್ಯಾತ್ಮಿಕ ಅನುಭಾವಿಗಳು ಜನರಿಗೆ ಹತ್ತಿರವಾದರು. ನಾಥ, ಸೂಫಿ, ಅವಧೂತ ಹಾಗೂ ವಿರಕ್ತರಂತಹ ಅನುಭಾವಿಗಳು ಬಹಿರಂಗದ ಆಚರಣೆಗಳಿಗಿಂತ ಅಂತರಂಗದ ಆಚರಣೆಗೆ ಹೆಚ್ಚು ಒಲವನ್ನು ನೀಡಿದರು.

ಕ್ರಿ.ಶ. ೧೪ ಮತ್ತು ೧೫ನೆಯ ಶತಮಾನದಲ್ಲಿ ಒಂದು 'ದ್ವೀಪ'ದಂತೆ ಉದಯಿಸಿ ಕೆಲ ದಿನಗಳ ನಂತರ ಮರೆಯಾದ ನೂರೊಂದು ವಿರಕ್ತರು ಸಹ ಯೋಗ, ಭೋಗ, ಧ್ಯಾನ, ಆಧ್ಯಾತ್ಮದಂತಹ ಪರಿಕಲ್ಪನೆಯುಳ್ಳವರು. ಅಂದು ಕಿರುಧಾರೆಯಾಗಿ ಅವತರಿಸಿದ ವಿರಕ್ತರ ಪರಂಪರೆಯು ಹಂಪೆಯಲ್ಲಿ ತಮ್ಮ ಸಕಲ ಕಾರ್ಯ ಚಟುವಟಿಕೆಗಳನ್ನು ನೆರವೇರಿಸಿ ಪುನಃ ತಮ್ಮ ಮೂಲ ನೆಲೆಗಳಿಗೆ ಕೆಲವರು ಮರಳಿದರೆ, ಮತ್ತೇ ಕೆಲವರು ಇಲ್ಲಿಯೇ ಕೊನೆಗೊಂಡಿರುವ ಸಾಧ್ಯತೆಗಳಿವೆ. ಹೀಗೆ ಹಂಪೆಯ ಪರಿಸರದ ನೂರೊಂದು ವಿರಕ್ತರು ವಿಶಿಷ್ಟ ಸ್ವಭಾವದ

ಗುಣವುಳ್ಳವರಾಗಿದ್ದು, ಯೋಗ, ಭೋಗ, ತ್ಯಾಗದಂತಹ ಕಡೆಗೆ ಒಲವಿದ್ದರು, ಅವುಗಳಲ್ಲೇ ದೈವತ್ವದ ಪರಿಕಲ್ಪನೆಯನ್ನು ಕಾಣುವರಾಗಿರುವರು.

ವೀರಶೈವ ಸಾಹಿತ್ಯ ಚರಿತ್ರೆಯಲ್ಲಿ ೧೦೧, ೭೦೧ ಎಂಬ ಸಂಖ್ಯೆಗಳು ಧಾರ್ಮಿಕ ಪರಿಭಾಷೆಯಾಗಿ, ಜನಜನಿತ ಸಂಖ್ಯೆಗಳಾಗಿ ಮಾರ್ಪಟ್ಟಿವೆ. ಈ ಒಂದು ಅಂಕೆಗಳ ಪರಿಕಲ್ಪನೆ ಸರ್ವೇಸಾಮಾನ್ಯವಾದ ಜನರ ಹೇಳಿಕೆಯಲ್ಲಿ ಹಾಸುಹೊಕ್ಕಾಗಿವೆ. ಬಸವ ಕಲ್ಯಾಣ ತನ್ನ ಎಲ್ಲ ವಚನ ವೈಭವವನ್ನು ಮೆರೆದು ಕಲ್ಯಾಣ ಕ್ರಾಂತಿಯಿಂದ ಪರ್ಯವಸನಗೊಂಡಾಗ ಶರಣ ಚಳುವಳಿಯ ಆಶಯವನ್ನು ಬಿತ್ತರಿಸುವ ಕೈಂಕಾರ್ಯವನ್ನು ವಿಜಯಕಲ್ಯಾಣ (ವಿಜಯನಗರ) ಹೊಣೆಹೊತ್ತು ದುಡಿಯಿತು. ಹೀಗಾಗಿ ಶರಣ ಚಳುವಳಿಯ ಆಶಯವನ್ನು ಪೂರೈಸುವಲ್ಲಿ ನೂರೊಂದು ಮಂದಿ ವಿರಕ್ತರು, ಏಳನೂರ ಒಂದು ಅಮರಗಣಂಗಳು ಅವತರಿಸಿದರೆಂಬ ಜನಜನಿತವಾದ ಕಥೆ ನಿರೂಪಿತವಾಗಿರಬಹುದು. ಆ ಕಾಲಘಟ್ಟದ ಕವಿಗಳು, ಚರಿತ್ರೆಕಾರರು ಇವರನ್ನು ಕುರಿತು ಕಾವ್ಯ ರಚನೆಎ ಮುಂದಾಗಿದ್ದರು. ಕೆಲ ವಿರಕ್ತರು ಬಗೆಗೆ ಪೂರ್ಣ ಮಾಹಿತಿ, ಇನ್ನೂ ಕೆಲವರ ಬಗೆಗೆ ಅಪೂರ್ಣ ಮಾಹಿತಿಗಳಿಂದ ಸಾಹಿತ್ಯ ಸಂಚಯಗೊಂಡಿದೆ. ಅಂದರೆ ವಿರಕ್ತರ ಹೆಸರು ಅವರ ಅಸ್ತಿತ್ವ ಮತ್ತು ಅವರ ಸಾಹಿತ್ಯ ಇನ್ನೂ ಅಪೂರ್ಣ ಸ್ಥಿತಿಯಲ್ಲಿಯೇ ಉಳಿದಿರುವುದು ಸಂಶೋಧಕರ ಜಿಜ್ಞಾಸೆಗೆ ಎಡೆಮಾಡಿಕೊಟ್ಟಿದೆ.

ಅಲೌಕಿಕ ವ್ಯಕ್ತಿಗಳಂತಿರುವ ನೂರೊಂದು ವಿರಕ್ತರು ಕನ್ನಡ ಕಾವ್ಯೋಕ್ತ ಅಂಶಗಳಿಂದ ಅವರ ಚರಿತ್ರೆ, ಇತಿಹಾಸ, ಸಾಹಿತ್ಯ, ನೆಲೆ ಹಾಗೂ ಲಕ್ಷಣಗಳ ಕುರಿತು ಇದುವರೆಗೆ ನಡೆದ ಅಧ್ಯಯನಗಳ ಹಿನ್ನೆಲೆಯಲ್ಲಿ ಪರಾಮರ್ಶಿಸುವುದೇ ಈ ಮಹಾಪ್ರಬಂಧದ ಉದ್ದೇಶ. ಈ ಎಲ್ಲಾ ಇತಿಮಿತಿಗಳ ನಡುವೆಯೂ ವಿಜಯನಗರ ಪರಿಸರದ ಪ್ರಾಕೃತಿಕ ಆಕರ, ಸಾಹಿತ್ಯಿಕ ಆಕರ ಅಲ್ಲದೆ ಇದುವರೆಗೆ ನಡೆದ ವಿದ್ವಾಂಸರ ಚರ್ಚೆಗಳ ಹಿನ್ನೆಲೆಯಲ್ಲಿ ನೂರೊಂದು ವಿರಕ್ತರ ಕುರಿತು ಪ್ರಸ್ತುತ ಮಹಾಪ್ರಬಂಧದಲ್ಲಿ ಸಮಾಲೋಚಿಸಲಾಗಿದೆ. ಒಟ್ಟಾರೆ ಪ್ರಸ್ತುತ ಮಹಾಪ್ರಬಂಧದ ಫಲಿತಗಳು ಈ ಕೆಳಗಿನಂತಿವೆ.

೧. ವೀರಶೈವ ಸಾಹಿತ್ಯದ ಬೆಳೆ ಪ್ರೌಢದೇವರಾಯನ ಕಾಲದಲ್ಲಿ ಮತ್ತೆ ಹುಲುಸಾಗಿ ಬೆಳೆಯಿತು. ಇದಕ್ಕೆ ಕಾರಣ ಆಸ್ಥಾನದಲ್ಲಿದ್ದ ವೀರಶೈವ ಪಂಡಿತ ಪಾಮರರು. ಜಕ್ಕಣಾರ್ಯ, ಲಕ್ಕಣ್ಣ ದಂಡೇಶ, ಮಹಾಲಿಂಗದೇವ, ಚಾಮರಸ, ಮಗ್ಗೆಯ ಮಾಯಿದೇವ, ಚಂದ್ರಶೇಖರ ಕವಿ ಹೀಗೆ ಮೊದಲಾದ ಸುಪ್ರಸಿದ್ಧ ವೀರಶೈವ ಕವಿಗಳು, ಶಾಸ್ತ್ರವೇತ್ತರು ಅಂದು ತಮ್ಮ ಸಾಹಿತ್ಯ ಕೃತಿಗಳ ಮೂಲಕ ವೀರಶೈವ ಧರ್ಮ ಹಾಗೂ ವಚನಗಳ ಪರಿಕಲ್ಪನೆಯನ್ನು ಭಿತ್ತರಿಸಿದರು. ಆದರೆ ಅದೇ ವೇಳೆಯಲ್ಲಿದ್ದ ನೂರೊಂದು ವಿರಕ್ತರ ರಚಿಸಿದ ಕೆಲವು ಲಘು ಸಾಹಿತ್ಯವನ್ನು

ಸೂಕ್ಷ್ಮವಾಗಿ ಗಮನಿಸಿದರೆ ಅವುಗಳು ತತ್ವಪರವುಳ್ಳ, ಯೋಗಪರವಾದ, ಅನುಭಾವ ಹಾಗೂ ಆಧ್ಯಾತ್ಮದ ನೆಲೆಯಲ್ಲಿ ರಚನೆಯಾದವುಗಳಾಗಿವೆ. ವೀರಶೈವತ್ವದ ಅಂಶಗಳು ಇವರ ಸಾಹಿತ್ಯ ಸೃಷ್ಟಿಯಲ್ಲಿ ಹೆಚ್ಚಾಗಿ ಕಂಡುಬರಲಾರದು. ಅಂದು ಆಸ್ಥಾನದಲ್ಲಿದ್ದ ಕೆಲವೇ ವಿರಕ್ತರು ಅಲ್ಪ ಸಾಹಿತ್ಯ ದೊರೆತರೆ ಮತ್ಯಾರು ಸಾಹಿತ್ಯ ರಚಿಸಿದಂತೆ ಇಲ್ಲ. ಹೀಗೆ ಅನುಭಾವಪರವಾದ ಹಾಡುಗಳನ್ನು ರಚಿಸಿರುವ ಇವರನ್ನು ಶಿಷ್ಟ ಆಚಾರದ ವೀರಶೈವ ವಿರಕ್ತರೊಂದಿಗೆ ಸಮ್ಮಿಲನಗೊಳಿಸುವುದು ಅಷ್ಟೊಂದು ಸಮಂಜಸವಾಗಲಾರದು. ಇವರ ತತ್ವಗಳು, ಸಿದ್ಧಾಂತಗಳು ವೀರಶೈವರಿಗಿಂತ ಭಿನ್ನವಾಗಿರುವುದರಿಂದಲೇ ಇವರನ್ನು ಇಲ್ಲಿ ಭಿನ್ನರೀತಿಯಲ್ಲಿ ಗುರುತಿಸುವ ಪ್ರಯತ್ನವಾಗಿದೆ.

೨. ಪ್ರೌಢದೇವರಾಯ ಮೂಲತಃ ಪಾಶುಪತ, ಕಾಳಾಮುಖ ಮತ ಪಂಥಕ್ಕೆ ಸೇರಿದವನು. ಆದರೆ ವೀರಶೈವ ವಿದ್ವಾಂಸರು ತಮ್ಮ ಸಾಹಿತ್ಯ ಕೃತಿಗಳಲ್ಲಿ ಇವರನ್ನು ವೀರಶೈವಾಗಿಯೇ ಚಿತ್ರಿಸಿದ್ದಾರೆ. ಅದೇ ರೀತಿ ನೂರೊಂದು ವಿರಕ್ತರನ್ನು ಸಹ ವೀರಶೈವ ವಿರಕ್ತರನ್ನಾಗಿ ತಮ್ಮ ಸಾಹಿತ್ಯ ಕೃತಿಗಳಲ್ಲಿ ಬಿಂಬಿಸಿದ್ದಾರೆ. ಅಂದು ಆಸ್ಥಾನದಲ್ಲಿ ವೀರಣ್ಣೊಡೆಯ, ಗುರುಬಸವರಂತಹ ವಿರಕ್ತರ ಹೆಸರನ್ನು ಸಾಹಿತ್ಯ ಕೃತಿಗಳಲ್ಲಿ ಪ್ರತಿಪಾದಿಸಿದಕ್ಕೆ ಮುಂದೆ ಬಂದ ಹಲವು ವಿದ್ವಾಂಸರು ಇವರನ್ನು ವೀರಶೈವರೆಂಬಂತೆ ಕ್ರಮೇಣ ವೀರಶೈವದ ತೇಪೆ ಹಚ್ಚತೊಡಗಿದರು. ಹೀಗಾಗಿ ಇಂದಿಗೂ ನೂರೊಂದು ವಿರಕ್ತರು ವೀರಶೈವರಾಗಿಯೇ ಉಳಿದಿದ್ದಾರೆ. ಆದರೆ ಪ್ರಸ್ತುತ ಅಧ್ಯಯನ ವೀರಶೈವ ವಿರಕ್ತರಲ್ಲ ಎಂಬುದರ ಕಡೆಗೆ ಹೆಚ್ಚಿನ ಒತ್ತು ನೀಡಿದೆ.

೩. ಲಕ್ಕಣ್ಣ ದಂಡೇಶ 'ಶಿವತತ್ವ ಚಿಂತಾಮಣಿ'ಯಲ್ಲಿ ಉಲ್ಲೇಖಿಸುವ ಚರಲಿಂಗ ಮೂರ್ತಿಗಳ ಲಕ್ಷಣ ಹಾಗೂ ವೈಶಿಷ್ಟ್ಯತೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಇವರು ಬೇರೆ ಯಾರು ಅಲ್ಲ ನೂರೊಂದು ವಿರಕ್ತರೇ ಆಗಿರುವರೆನಿಸುತ್ತದೆ. ಏಕೆಂದರೆ ಸಿದ್ಧ ಶಬರಿ, ಮಾಲ್ಯವಂತ ಪರ್ವತ, ಅಂಜನಾದ್ರಿ, ಮಾತಂಗ ಪರ್ವತದಲ್ಲಿ ನೆಲೆನಿಂತ ಚರಲಿಂಗ ಮೂರ್ತಿಗಳು ವಿರಕ್ತರಾಗಿರಬೇಕೆಂದು ಡಾ.ಸಂ.ಶಿ.ಭೂಸನೂರಮಠ, ಡಾ. ಶಿವಾನಂದ ವಿರಕ್ತಮಠರವರು ಅಭಿಪ್ರಾಯ ಪಡುತ್ತಾರೆ. ಲಕ್ಕಣ್ಣ ದಂಡೇಶನು ಕಾವ್ಯ ಬರೆಯುವ ವೇಳೆಗೆ ನೂರೊಂದು ವಿರಕ್ತರ ಸಂಖ್ಯೆ ನಿರ್ಣಯವಾಗಿರಲಿಕ್ಕೆಲ್ಲ ಹೀಗಾಗಿ ಈ ಕಾವ್ಯದಲ್ಲಿ ನೂರೊಂದು ವಿರಕ್ತರೆಂಬ ಪದಪ್ರಯೋಗವಾಗಿಲ್ಲ. ನಂತರದ ದಿನಮಾನಗಳಲ್ಲಿ ಹಲವು ಕೃತಿಗಳಲ್ಲಿ ನೂರೊಂದು ವಿರಕ್ತರೆಂಬ ಪದ ಪ್ರಯೋಗಗೊಂಡಿದೆ. ಜಟಾಧಾರಿಗಳಾಗಿ, ದಿಗಂಬರ ದೇಹದ ಭಸ್ಮಧಾರಿಗಳಾಗಿ ಹಂಪೆಯ ಬೀದಿಗಳಲ್ಲಿ ಸಂಚರಿಸುತ್ತಿರುವ ಚರಲಿಂಗ ಮೂರ್ತಿಗಳು ಸುಖ ದುಃಖಗಳನ್ನು ಸಂಪೂರ್ಣ ಗೆದ್ದವರಾದ ಇವರ ಹಲವು ಸಿದ್ಧಿಗಳ ಸಾಧಕರಾಗಿದ್ದರು. ಸಕಲ ಮೋಹಜಾಲದಿಂದ ದೂರಾಗಿರುವರೆಂದು ಕಾವ್ಯದಿಂದ ತಿಳಿದುಬರುತ್ತದೆ.

೪. ಹಂಪೆಯ ಪರಿಸರದಲ್ಲಿದ್ದ ನೂರೊಂದು ವಿರಕ್ತರು ಕ್ರಿ.ಶ. ೧೪ ಮತ್ತು ೧೫ನೇ ಶತಮಾನದಿಂದ ಹಿಡಿದು ಇಂದಿನವರೆಗೂ ಸಾಹಿತ್ಯ ಚರಿತ್ರೆಯಲ್ಲಿ ಒಂದು ಕಗ್ಗಂಟಾಗಿಯೇ ಉಳಿದಿದ್ದಾರೆ. ಹಿರಿಯ ವಿದ್ವಾಂಸರು ಹೇಳಿದ ಹೇಳಿಕೆಯನ್ನೇ ಮತ್ತೆ ಮತ್ತೆ ಉಲ್ಲೇಖಿಸಿ ಇವರ ಚರಿತ್ರೆಯನ್ನು ಚರ್ವಿತ ಚರ್ವಣಗೊಳಿಸಿದ್ದಾರೆ. ಈ ವಿರಕ್ತರ ಮೂಲ ಇಂಥದ್ದೇ ಪ್ರದೇಶದಿಂದ ಹಂಪೆಗೆ ಆಗಮಿಸಿತೆಂದು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗಿಲ್ಲ. ಹಲವು ಕಾವ್ಯಗಳ ಹಾಗೂ ವಿದ್ವಾಂಸರ ಪ್ರಕಾರ ಇವರ ಒಂದು ಪರಂಪರೆ ದಕ್ಷಿಣ ಕರ್ನಾಟಕ ಕಡೆಯಿಂದ ಆಗಮಿಸಿತೆಂದು ಗುರುತಿಸತ್ತಾರೆ.

೫. ನೂರೊಂದು ವಿರಕ್ತರನ್ನು ವೀರಶೈವದವರೆಂದು, ವೀರಶೈವ ಧರ್ಮದ ಪುನರಜ್ಜೀವನಕಾರರೆಂದು ವೀರಶೈವ ಸಾಹಿತ್ಯ ಕೃತಿಗಳು ಉಲ್ಲೇಖಿಸಿವೆ. ಆದರೆ ಇವರ ಗುಣ ಸ್ವಭಾವ ಹಾಗೂ ಲಕ್ಷಣಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಕಾವ್ಯೋಕ್ತ ಈ ಅಭಿಪ್ರಾಯವನ್ನು ಪರಾಮರ್ಶಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ವೀರಶೈವ ವಿರಕ್ತರಿಗಿಂತ ಭಿನ್ನರಾಗಿ ಗೋಚರಿಸುವರು. ಅಂದು ಆಸ್ಥಾನದಲ್ಲಿ ಆಶ್ರಯ ಪಡೆದ ಲಕ್ಕಣ್ಣ ದಂಡೇಶ, ಜಕ್ಕಣ್ಣ ದಂಡನಾಯಕರು, ಮಹಾಲಿಂಗದೇವ, ಮಗ್ಗೆಯ ಮಾಯಿದೇವ, ಚಂದ್ರಕವಿ, ಚತುರಾಸ್ಯ ಬೊಮ್ಮರಸ, ಕಲ್ಲುಮಠದ ಪ್ರಭುದೇವ ಹಾಗೂ ಚಾಮರಸರಂತಹ ಹಲವಾರು ವೀರಶೈವ ಧುರೀಣರ ಪ್ರಯತ್ನದ ಫಲವಾಗಿ ವೀರಶೈವ ಧರ್ಮ ಪುನರ್‌ಜ್ಜೀವನಗೊಂಡಿರಬೇಕೇ ಹೊರತು ನೂರೊಂದು ವಿರಕ್ತರಿಂದಲ್ಲ.

೬. ನೂರೊಂದು ವಿರಕ್ತರು ವಚನಗಳ ಸಂಗ್ರಹ, ಸಂಪಾದನೆ ಹಾಗೂ ಸಂಕಲನ ಮಾಡಿದವರೆಂದು ಹಲವು ವೀರಶೈವ ಸಾಹಿತ್ಯ ಕೃತಿಗಳು ತಿಳಿಯಪಡಿಸುತ್ತವೆ. ಆದರೆ ಈ ಕಾರ್ಯ ಮಾಡಿದವರೆ ಬೇರೆ. ವಿರಕ್ತರಲ್ಲಿ ಕೆಲವರು ಮಾತ್ರ ಲಘು ಕೃತಿಗಳನ್ನು ರಚಿಸಿರುವುದನ್ನು ಬಿಟ್ಟರೆ ಈ ವಚನಗಳ ಸಂಗ್ರಹ, ಸಂಪಾದನೆ ಹಾಗೂ ಸಂಕಲನದ ಕೃಷಿ ಇವರಿಂದ ನೆರವೇರಿದಂತಿಲ್ಲ. ವಿಶೇಷವೆಂದರೆ ವಚನ ಸಾಹಿತ್ಯದ ಮೂಲ ಆಶಯದಿಂದ ವಿಜಯ ಕಲ್ಯಾಣವೆನಿಸಿದ ಹಂಪಿ ಪರಿಸರದ ಪ್ರಮುಖ ಕವಿಗಳಿಂದ ಅಧ್ಯಯನಕ್ಕೆ ಒಳಗಾಗಲಿಲ್ಲ. ಬದಲಾಗಿ ಆಗಮ ಸಾಹಿತ್ಯದಿಂದೊಡಗೂಡಿ 'ವಚನಾಗಮ' ಎಂಬ ಅಭಿದಾನಕ್ಕೆ ಒಳಗಾಯಿತು. ಹೀಗಿರುವಾಗ ವಚನ ಸಾಹಿತ್ಯ ಸಂರಕ್ಷಣೆಗೆ 'ನೂರೊಂದು ವಿರಕ್ತರ' ಕೊಡುಗೆಯೇನೆಂಬ ಪ್ರಶ್ನೆಗೆ ಇನ್ನೂ ಸ್ಪಷ್ಟವಾಗಿ ಚರ್ಚಿಸಿ ಉತ್ತರ ಕಂಡುಕೊಳ್ಳಬೇಕಾಗಿದೆ.

೭. ನೂರೊಂದು ವಿರಕ್ತರನ್ನು ವೀರಶೈವ ವಿರಕ್ತರೆಂದು ಹೇಳುವ ಮಾತು ಅಷ್ಟೊಂದು ಸಮಂಜಸವಲ್ಲ. ಏಕೆಂದರೆ ಶಿಷ್ಟ ಆಚಾರದ ವೀರಶೈವ ವಿರಕ್ತರಿಗಿಂತ, ಪರಿಶಿಷ್ಟ ನೆಲೆಯ ನೂರೊಂದು ವಿರಕ್ತರು ಭಿನ್ನ ನೆಲೆಯುಳ್ಳವರು. ಮದುವೆ ಆಗಿ ಮಕ್ಕಳನ್ನು ಪಡೆದ ಇವರು

ವೈರಾಗಿಗಳಾಗಿ ಪರಹಣ್ಣಿನ ಸಹವಾಸ ಮಾಡಿದವರಾಗಿ ಕಂಡುಬರುವರು. ಗುಡಿಗುಂಡಾರಗಳಲ್ಲಿ ವಾಸಮಾಡುವ ಇವರು ವಾಮಾಚಾರಿಗಳು, ಹಾಲಿನಲ್ಲಿ ತಮ್ಮ ಮೂತ್ರ ಬೆರಸುವುದರ ಮೂಲಕ ಜನರ ಭಯಾನಕವಾದ ರೋಗ ರುಜನೆಗಳನ್ನು ಗುಣಪಡಿಸಿದವರಾಗಿ ಉಲ್ಲೇಖಿತರಾಗಿದ್ದಾರೆ. ಹೀಗಾಗಿ ಡಾ. ಎಂ.ಎಂ.ಕಲಬುರ್ಗಿಯವರು ಹೇಳುವಂತೆ ಅರೆಮರುಳ, ಅರೆಹುಚ್ಚರಂತೆ ತಿರುಗಾಡುವ ಇವರನ್ನು ಶಿಷ್ಟ ಆಚಾರದ ಪರಿಶುದ್ಧ ವಿಚಾರದ ವೀರಶೈವ ವಿರಕ್ತರೆಂದು ಹೇಳಲು ಬರಲಾರದು.

೮. ಮಧ್ಯಕಾಲೀನ ಸಂದರ್ಭದ ಕರ್ನಾಟಕ ಆಂಧ್ರದಲ್ಲಿ ಶೈವ ಧರ್ಮದ ಹಲವು ಧಾರೆಗಳು ಶರಣ ಧರ್ಮದ ಪ್ರಭಾವಕ್ಕೆ ಒಳಗಾಗಿ ಅದರಲ್ಲೇ ಲೀನವಾಗಿದ್ದ ಬಗೆಗೆ ಹಲವು ಉಲ್ಲೇಖಗಳಿವೆ. ಹೀಗೆ ಅಂದು ನೂರೊಂದು ವಿರಕ್ತರು ಸಹ ಶರಣ ಧರ್ಮದ ಪ್ರಭಾವಕ್ಕೆ ಒಳಗಾಗಿರುವ ಸಾಧ್ಯತೆಗಳಿವೆ.

೯. ಹಂಪಿ ಪರಿಸರದ ವೀರಶೈವ ಸಾಹಿತ್ಯವನ್ನು ಅವಲೋಕಿಸಿದರೆ ವಚನ ಸಾಹಿತ್ಯ ವ್ಯಕ್ತಿ ಚರಿತ್ರೆಯಾಗಿರುವುದು. ಉದಾಹರಣೆಗೆ ಹರಿಹರನ ಶಿವಶರಣರ ರಗಳೆಗಳು, ಚಾಮರಸನ ಪ್ರಭುಲಿಂಗಲೀಲೆ ಇತ್ಯಾದಿ ಕೃತಿಗಳಲ್ಲಿ ಇದನ್ನು ಕಾಣಬಹುದು. ಹಾಗೆಯೇ ವಚನ ಸಾಹಿತ್ಯ ಪುರಾಣ ಕಾವ್ಯಗಳಾಗಿರುವುದು. ಉದಾಹರಣೆಗೆ ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ, ಚೆನ್ನಬಸವಾಂಕನ ಮಹಾದೇವಿಯಕ್ಕನ ಪುರಾಣ ಇತ್ಯಾದಿ. ಹಾಗೆಯೇ ವಚನ ಸಾಹಿತ್ಯ ಟೀಕು-ವ್ಯಾಖ್ಯಾನಗಳ ರೂಪದಿಂದ ಹೆಚ್ಚು ತಾತ್ವಿಕರಣಗೊಂಡ ಸಾಹಿತ್ಯವಾಗಿ ಬೆಳೆದುಕೊಂಡು ಬಂದಿದೆ. ಈ ಸಾಹಿತ್ಯ ಪ್ರಕಾರ ಅಥವಾ ಸ್ವರೂಪವನ್ನು ನೂರೊಂದು ವಿರಕ್ತರಲ್ಲಿ ಹೆಸರಿಸುತ್ತಿರುವ "ಕರಸ್ಥಲ ಪರಂಪರೆಯ" ಕೆಲ ಕವಿಗಳ ಕಾವ್ಯಗಳಲ್ಲಿ ಶಕ್ಯವಿಲ್ಲ. ಹೀಗಾಗಿ ಹಂಪಿ ಪರಿಸರದಲ್ಲಿ ವಚನ ಸಾಹಿತ್ಯದ ನಿಜದ ನೆಲೆಯ ಪ್ರಸಾರ ಪ್ರಕಟಣೆಯಾಗಲಿಲ್ಲವೆಂದೇ ಹೇಳಬೇಕು. ಈ ಅಪವಾದಕ್ಕೆ ನೂರೊಂದು ವಿರಕ್ತರೂ ಹೊರತಾಗಲಿಲ್ಲ. ಹೀಗಾಗಿ ಇವರ ಆಚಾರ-ವಿಚಾರ-ಜೀವನಕ್ರಮಗಳ ಜೊತೆಗೆ ಇವರ ಸಾಹಿತ್ಯ ರಚನಾ ಸ್ವರೂಪದಿಂದಲೂ ನೂರೊಂದು ವಿರಕ್ತರನ್ನು 'ವೀರಶೈವ'ರೆಂದು ಹೇಳುವಲ್ಲಿ ಇನ್ನೂ ಸಂದೇಹಗಳಿವೆ.

೧೦. ನೂರೊಂದು ವಿರಕ್ತರನ್ನು ಕುರಿತು ಡಾ. ಶಿವಾನಂದ ವಿರಕ್ತಮಠರವರು 'ಪ್ರೌಢರಾಯನ ಕಾಲದ ಕನ್ನಡ ಸಾಹಿತ್ಯ' ಎಂಬ ಪ್ರೌಢ ಪ್ರಬಂಧದಲ್ಲಿ ಪ್ರಾಸಂಗಿಕವಾಗಿ ಚರ್ಚಿಸಿದ್ದಾರೆ. ಡಾ.ಆರ್.ಸಿ. ಹಿರೇಮಠರವರು, ಷಟ್‌ಸ್ಥಲ ಪ್ರಭೆಯಲ್ಲಿ ವಿರಕ್ತರ ಚಾರಿತ್ರಿಕ ವಿವೇಚನೆಯನ್ನು ಮಾಡುತ್ತ ಅವರ ಹೆಸರಿಗೆ ಅಂಟಿಕೊಂಡಿರುವ 'ಶಾಂತ' ಎಂಬುದು ಅಂಕಿತವಲ್ಲ. ಅವರ ಸ್ವಭಾವ ಆಗಿರಬೇಕೆಂದು ಭಾವಿಸುತ್ತಾರೆ. ವಿರಕ್ತರನ್ನು ಕುರಿತು ಇತ್ತೀಚಿಗೆ ಡಾ. ಎಂ.ಎಂ. ಕಲಬುರ್ಗಿಯವರು ಚರ್ಚಿಸುತ್ತ ವಿರಕ್ತರು ವೀರಶೈವರಲ್ಲ ಎಂಬ ಅಭಿಪ್ರಾಯಕ್ಕೆ ಬರುತ್ತಾರೆ.

ವಿಜಯನಗರದ ಕರಸ್ಥಲ ಪರಂಪರೆಯಲ್ಲಿ ವಿರಕ್ತರನ್ನು ಕುರಿತು ಹಲವು ಜನ ಇರಬಹುದಾದರೂ ಅವರ ಸಾಹಿತ್ಯ ಕೃತಿಗಳು ಇನ್ನೂ ಚರ್ಚೆಗೆ ಒಳಗಾಗಬೇಕಾಗಿದೆ. ಇದಿಷ್ಟು ಈ ಮಹಾಪ್ರಬಂಧಗಳಲ್ಲಿ ನೂರೊಂದು ವಿರಕ್ತರನ್ನು ಕುರಿತು ಚರ್ಚೆಯಾದ ಸಂಗತಿಗಳಾಗಿವೆ.

ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ'ಯಿಂದ ಹಿಡಿದು ಮುಂದಿನ ಹಂಪೆ ಪರಿಸರದ ಸಾಹಿತ್ಯ ನೂರೊಂದು ವಿರಕ್ತರಿಗೆ ವೀರಶೈವದ ಆರೋಪವನ್ನು ಮಾಡುತ್ತ ಬಂದಿರುವುದು ಗೋಚರಿಸುತ್ತವೆ. ಈ ಎಲ್ಲಾ ಸಂದೇಹಗಳನ್ನು ಸಾಹಿತ್ಯ ಸಾಹಿತ್ಯೇತರ ಆಕರಗಳನ್ನು ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿ ನೂರೊಂದು ವಿರಕ್ತರು ಕರ್ನಾಟಕದಲ್ಲಿ ಶಾಂತ ಸಂಪ್ರದಾಯದ ಅನುಯಾಯಿಗಳೆಂದು ನಿರ್ಧರಿಸಲು ಇಲ್ಲಿ ಸಾಧ್ಯವಾಗಿದೆ.

೧೧. ವಿರಕ್ತರ ಉಲ್ಲೇಖಿತ ಪ್ರೌಢರಾಯನ ಕಾವ್ಯ ಚೆನ್ನಬಸವ ಪುರಾಣ ವೀರಶೈವಾಮೃತ ಪುರಾಣ, ಶಿವತತ್ವ ಚಿಂತಾಮಣಿ, ಭೈರವೇಶ್ವರ ಕಾವ್ಯ, ನಿಜಶರಣರ ತ್ರಿವಿಧಿ, ರಾಘವಾಂಕ ಚರಿತೆ ಮುಂತಾದ ಕೃತಿಗಳಲ್ಲದೆ ಜನಪದ ಸಾಹಿತ್ಯವನ್ನು ಅವಲೋಕಿಸಿ ನೂರೊಂದು ವಿರಕ್ತರ ಚಾರಿತ್ರಿಕ ಮಹತ್ವವನ್ನು ಈ ಕೃತಿಗಳು ಎಷ್ಟರ ಮಟ್ಟಿಗೆ ಕಟ್ಟಿಕೊಡುತ್ತವೆ ಎಂಬ ಅಂಶವನ್ನು ಈ ಮಹಾಪ್ರಬಂಧ ಒಳಗೊಂಡಿವೆ.

ವಿಶೇಷವಾಗಿ ೧೭೩೭ರಲ್ಲಿ ಜೀವಿಸಿದ್ದನೆನ್ನಲಾದ ಮೋದಿರುದ್ರನೆಂಬ ಕವಿ ವಿರಕ್ತರ ಕಾವ್ಯ ಹೆಸರಿನ ಕೃತಿಯೊಂದನ್ನು ರಚಿಸಿದ್ದಾನೆ. ಆರು ಸಂಧಿಯ ೭೪೭ ಷಟ್ಪದಿಯ ಈ ಕೃತಿ ಮೂರರಿಂದ ಆರನೆಯ ಸಂಧಿಯವರೆಗೆ ವಿರಕ್ತರ ಕಥೆಯನ್ನು ವಿವರಿಸುತ್ತಾನೆ. ಇಲ್ಲಿ ನೂರೊಂದು ಜನ ವಿರಕ್ತರ ಹೆಸರನ್ನು ಉಲ್ಲೇಖಿಸುವುದರ ಮೂಲಕ, ವಿರಕ್ತರ ಕುರಿತಾದ ಚರಿತ್ರೆಗೆ ಪ್ರತ್ಯೇಕ ಕಾವ್ಯವನ್ನು ನಿರೂಪಿಸಿದ ಶ್ರೇಯಸ್ಸು ಮೋದಿರುದ್ರನದು. ಈ ಕೃತಿಯನ್ನು ಪ್ರಸ್ತುತ ಮಹಾಪ್ರಬಂಧದಲ್ಲಿ ವಿಶ್ಲೇಷಿಸುವುದರ ಮೂಲಕ ವಿರಕ್ತರ ಪವಾಡ, ಅವರ ವೃತ್ತಿ, ಆಚರಣೆ ಇತ್ಯಾದಿ ಸಂಗತಿಗಳನ್ನು ಚರ್ಚಿಸಲಾಗಿದೆ.

೧೨. ವಿರಕ್ತರನ್ನು ಕುರಿತು ಇದುವರೆಗೆ ಬಂದ ಆಕರಗಳನ್ನು ಮುಂದಿಟ್ಟುಕೊಂಡು ಆಧುನಿಕ ವಿದ್ವಾಂಸರು ಹಲವು ಲೇಖನಗಳನ್ನು ಕೃತಿಗಳನ್ನು ರಚಿಸಿದ್ದಾರೆ. ಅವರುಗಳಲ್ಲಿ ಆರ್.ಸಿ. ಹಿರೇಮಠ, ಡಾ. ಶಿವಾನಂದ ವಿರಕ್ತಮಠ, ಶ್ರೀಶಾಂತರಸ, ಡಾ. ಎಂ.ಎಂ.ಕಲಬುರ್ಗಿ ಮುಂತಾದವರ ಚಿಂತನಾಕ್ರಮಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೧೩. ನೂರೊಂದು ವಿರಕ್ತರ ಸಾಹಿತ್ಯ ಸಮೀಕ್ಷೆ, ಕರಸ್ಥಲ ನಾಗಿದೇವ, ಕರಸ್ಥಲ ವೀರಣ್ಣೊಡೆಯ, ಸಪ್ತಕಾವ್ಯದ ಗುರುಬಸವ, ಬತ್ತಲೇಶ, ನಿರ್ವಾಣಿ ಬೋಳೇಶ ಇವರ ಸಾಹಿತ್ಯ

ಹಾಡು, ತ್ರಿಪದಿ, ವಚನ, ಕಂದ, ಚರಿತೆ ಇತ್ಯಾದಿ ಪ್ರಕಾರಗಳಲ್ಲಿ ಹೊರಹೊಮ್ಮಿದೆ. ಇದನ್ನು ಕುರಿತು ಪ್ರಸ್ತುತ ಪ್ರಬಂಧದಲ್ಲಿ ಸಮೀಕ್ಷೆ ಮಾಡಲಾಗಿದೆ.

ಪ್ರಾಯಶಃ ಇವರ ಸಾಹಿತ್ಯ ಸ್ವರೂಪವನ್ನು ಗಮನಿಸಿದಾಗ ಅವಧೂತ ಚರಿತೆ, ವೃಷಭಗೀತೆ, ಕಲ್ಯಾಣೇಶ್ವರ, ಸದ್ಗುರು ರಹಸ್ಯ, ಮುಂತಾದ ಕೃತಿಗಳು ವಿರಕ್ತರೇತನ ಸಿದ್ಧಮತಗಳ ಪ್ರತಿಪಾದನೆಂಬದ್ದಂತೆ ತೋರುತ್ತವೆ. ಈ ಕಾರಣವಾಗಿ ಚಾಮರಸ, ಕಲ್ಲುಮಠದ ಪ್ರಭುದೇವ, ಹರಿಹರ ಮುಂತಾದ ಕವಿಗಳ ಸಾಲಿನಲ್ಲಿ ಇವರನ್ನು ಸಮೀಕರಿಸಲು ಮನಸ್ಸಾಗುತ್ತಿಲ್ಲ. ಇದಕ್ಕೆ ಪೂರಕವೆಂಬಂತೆ ಮೋದಿರುದ್ರ ತನ್ನ ವಿರಕ್ತರ ಕಾವ್ಯದಲ್ಲಿ ಇವರನ್ನು ಹೆಸರಿಸುತ್ತಾನೆ. ಒಟ್ಟಿನಲ್ಲಿ ನೂರೊಂದು ವಿರಕ್ತರು ವೀರಶೈವರೇ ಅಥವಾ ಅಲ್ಲವೇ ಎಂಬುದಕ್ಕೆ ಇತರ ಆಕರಗಳಂತೆ ಅವರ ಸಾಹಿತ್ಯವು ಆಕರವಾಗುತ್ತವೆ ಎಂಬುದನ್ನು ಸೈದ್ಧಾಂತಿಕವಾಗಿ ಈ ಮಹಾಪ್ರಬಂಧದಲ್ಲಿ ಚರ್ಚಿಸಲಾಗಿದೆ.

೧೪. ಕನ್ನಡ ಕಾವ್ಯಕ್ಕೆ ತನ್ನದೆ ಆದ ಪರಂಪರೆಯಿದೆ. ಹೀಗಾಗಿ ಇತರೆ ಪರಂಪರೆಗಳಂತೆ ನೂರೊಂದು ವಿರಕ್ತರ ಪರಂಪರೆಯನ್ನು ಗುರುತಿಸುವುದರ ಮೂಲಕ ಅವರ ಲಕ್ಷಣ ಮತ್ತು ವ್ಯಕ್ತಿತ್ವವನ್ನು ಪ್ರಸ್ತುತ ಮಹಾಪ್ರಬಂಧದಲ್ಲಿ ಸಾಧಾರ ಪೂರಕವಾಗಿ ವಿಶ್ಲೇಷಿಸಲಾಗಿದೆ. ಲಾಕುಳ, ಕಾಪಾಲಿಕ, ಪಾಶುಪತ, ನಾಥಪಂಥ, ಆರೂಢ, ಅವಧೂತ, ಸೂಫಿ, ಶಾಕ್ತ, ಶುದ್ಧಶೈವ ಇತ್ಯಾದಿ ಸಂತ ಸಂಪ್ರದಾಯಗಳ ಜೊತೆಗೆ ನೂರೊಂದು ವಿರಕ್ತರ ಗುಣಲಕ್ಷಣಗಳನ್ನು ಹುಡುಕಾಡಿರುವುದು ಈ ಮಹಾಪ್ರಬಂಧದ ಪ್ರಮುಖವಾದ ಫಲಿತವಾಗಿದೆ.

ಪ್ರಾಯಶಃ ಬಾಲಸಂಗಯ್ಯನ ವಚನಗಳು ಹೆಸರಿನ ಹಂಪಿ ಪರಿಸರದ ಕೃತಿ ಕೂಡಲಸಂಗಮಾವಧೂತ ವಚನವೆಂದು ಅಚ್ಚಾಗಿರುವುದು ಮತ್ತು ೧೬ನೇ ಶತಮಾನದ ಕೋಡೇಕಲ್ ಬಸವಣ್ಣನಿಗೆ ನಾಥ ಪಂಥೀಯರಾದ ವಿರಕ್ತರ ಸಂಪ್ರದಾಯ ಪ್ರಭಾವವಾಗಿರುವುದನ್ನು ಅನೇಕ ಕರ್ನಾಟಕದಲ್ಲಿ ಪ್ರಸಿದ್ಧಿಯಾಗಿರುವ ಸಂಪ್ರದಾಯಗಳ ಮೂಲಕ ವಿವರಿಸಲಾಗಿದೆ. ಮುಖ್ಯವಾಗಿ ನೂರೊಂದು ವಿರಕ್ತರು ಕರ್ನಾಟಕದಲ್ಲಿ ಇತರ ಸಂಪ್ರದಾಯದ ಅನುಯಾಯಿಗಳಂತೆ ಶಾಂತ ಸಂಪ್ರದಾಯದ ಹರಿಕಾರರು ಎಂಬುದನ್ನು ಈ ಮಹಾಪ್ರಬಂಧದ ಮೂಲಕ ನಿರೂಪಿಸಲಾಗಿದೆ.

ಅನುಬಂಧ

೧. ನೂರೊಂದು ವಿರಕ್ತರ ಹೆಸರುಗಳು

೨. ಛಾಯಾಚಿತ್ರ

೩. ಆಕರ ಗ್ರಂಥಗಳು

ನೂರೊಂದು ವಿರಕ್ತರ ಹೆಸರುಗಳು

೧. ಕರಸ್ಥಲದ ನಾಗಿದೇವ
೨. ಹೊನ್ನಿದೇವ
೩. ಟಗರ ಕಾಳಗದ ಪ್ರಭು
೪. ಗುರುಬಸವ
೫. ಹೇಟೆಯ ಮರುಳ
೬. ಬಾಲ ಲಿಂಗಣ್ಣ
೭. ಬತ್ತಲೇಶ
೮. ಆಯುಧ ಶಾಂತೇಶ
೯. ಮಂಚದ ಶಾಂತೇಶ
೧೦. ಬುಡ ಬುಡಕೆಯ ಶಾಂತ
೧೧. ಖಂಡಣಿ ಶಾಂತ
೧೧. ಮದ್ದಾನಿ ಶಾಂತ
೧೩. ಚಕ್ರದ ಶಾಂತ
೧೪. ಜಟ್ಟಿಶಾಂತ
೧೫. ಡೊಂಬರ ಶಾಂತ
೧೬. ಗುರುಬಸವೇಶ್ವರ
೧೭. ಸರಕೀಲ ಶಾಂತೇಶ್ವರ
೧೮. ಬಣ್ಣ ಗದ್ದುಗೆ ಶಾಂತ
೧೯. ಭದ್ರಕಾಳಿ ಶಾಂತ
೨೦. ಬಯಲ ಶಾಂತ
೨೧. ಹಿಡಗಡಲಿಯ ಶಾಂತ
೨೨. ಪೆಟಲಿನ ಶಾಂತ
೨೩. ಪಾವನ ಗುಂಡ ಶಾಂತ
೨೪. ಚಂಡಿನಾಟದ ಶಾಂತ
೨೫. ಬಿಸಿನೀರಿನ ಶಾಂತ
೨೬. ಬೇಟೆಯ ಶಾಂತ
೨೭. ಸುವಿವೇಕಿ ಶಾಂತ
೨೮. ವಿಭೂತಿಯ ಶಾಂತ
೨೯. ಜೂಜಿನ ಶಾಂತ
೩೦. ಎಗ್ಗದ ಶಾಂತ
೩೧. ಗಿರಗಿಟಿಯ ಶಾಂತ
೩೨. ಮಿಡಿಬಿಲ್ಲ ಶಾಂತೇಶ
೩೩. ಕುದುರೆಯ ಶಾಂತ
೩೪. ಮದ್ದಳೆ ಶಾಂತ
೩೫. ಡಂಗುರ ಶಾಂತ
೩೬. ಸಾಣೆ ಖಂಡೆಯ ಶಾಂತ
೩೭. ಸಿಂಗಾಡಿಯ ಶಾಂತ
೩೮. ಬೊಂಬೆಕಟ್ಟಿ ಮೆರೆಸುವ ಶಾಂತ
೩೯. ವೀರಶಾಂತ
೪೦. ವರ್ಧೇಂದ್ರಿಯ ಶಾಂತ
೪೧. ನಿಬ್ಬೆರಗಿನ ಶಾಂತ
೪೨. ರುದ್ರಭೂಮಿಯ ಶಾಂತ
೪೩. ಇದ್ದಲಿ ಶಾಂತೇಶ
೪೪. ಮಡಿವಾಳ ಶಾಂತ
೪೫. ಶಿವಮೂರ್ತಿ ಮುನಿರಾದಿ ಶಾಂತ
೪೬. ಕಾಳಿ ಶಾಂತ
೪೭. ಲಂಡರಾಹುತ ಶಾಂತ
೪೮. ಶಿಶುಗಳೊಡನೆ ಆಟವಾಡುವ ಶಾಂತ
೪೯. ಚದುರ ಶಾಂತ
೫೦. ದೂಪದ ಶಾಂತ
೫೧. ಮಜ್ಜನ ಶಾಂತ
೫೨. ಮಸುಗೆಲಸದ ಶಾಂತ
೫೩. ಕಿನ್ನರಿ ಶಾಂತ
೫೪. ಎಚ್ಚರ ನಿಯಮದ ಶಾಂತ

೫೫. ಕಸ್ತೂರಿ ತಿಲಕದ ಶಾಂತ
೫೬. ಗಿಂಡಿಯ ಶಾಂತ
೫೭. ಬೊಂಬೆಯ ಮಾಳ್ವ ಶಾಂತ
೫೮. ನಿಧಾನದ ಶಾಂತ
೫೯. ಚಂದ್ರವಂಕಿ ಶಾಂತ
೬೦. ನಾಟ್ಯಶಾಂತ
೬೧. ಕವಿಶಾಂತ
೬೨. ಭಟ್ಟ ಶಾಂತ
೬೩. ಬೆಟ್ಟದ ಮೇಲಿರ್ಪಶಾಂತ
೬೪. ನಿಷ್ಠೆ ನಿಜನೇಮದ ಶಾಂತ
೬೫. ಉಗ್ಗಡಿಪ ಶಾಂತ
೬೬. ಕಟ್ಟುಗ್ರ ನಾಯಕ ಶಾಂತ
೬೭. ಚಿಕ್ಕಿ ಶಾಂತ
೬೮. ಉರುತರದ ಶರಪಿ ಶಾಂತ
೬೯. ಸೂಜಿಯ ಪರಮ ಶಾಂತ
೭೦. ಕೆಲಸಿ ಶಾಂತ
೭೧. ನಿಂಬೆ ಶಾಂತೇಶ
೭೨. ಚೆಲುವ ಶಾಂತ
೭೩. ಒಡ್ಡ ಶಾಂತ
೭೪. ಪಂಚಾಂಗವಿಡಿದೋದುವ ಶಾಂತ
೭೫. ಕಂಚಿನಾದ್ರಿಯ ಶಾಂತ
೭೬. ಕೋಲ ಶಾಂತ
೭೭. ಹಾಲ ಶಾಂತ
೭೮. ಚಂಡವಿಕ್ರಮಶಾಂತ
೭೯. ತೃಣದ ಶಾಂತ
೮೦. ಮಹೇಂದ್ರಜಾಲದ ಗುಣದ ಶಾಂತ
೮೧. ಗಂಗಿಯ ಶಾಂತ
೮೨. ಹೆಸರನು ಇಟ್ಟ ಶಾಂತ
೮೩. ಅಂಘಟ್ಟ ಗೋಲಿನ ಶಾಂತಮೂರ್ತಿ
೮೪. ಶರಭ ಶಾಂತೇಶ
೮೫. ಅಟ್ಟ ಹೊಯ್ದಡ ಮಾಯೆ ಶಾಂತ
೮೬. ಮರವಿಕ್ರಯಿ ಶಾಂತ
೮೭. ಬೊಗರಿಯ ಶಾಂತಲಿಂಗ
೮೮. ಸ್ವಸ್ಥಿರ ಸಮಾಧಿಯ ಮೇಲಿನ ಶಾಂತ
೮೯. ಒಕ್ಕಲಿಗ ಗುರುಶಾಂತ
೯೦. ಶಂಕರನ ಒಲುಮೆಯ ಶಾಂತ
೯೧. ಸೊಡ್ಡಿನ ಶಾಂತ
೯೨. ಸಾಧನೆಯ ಶಾಂತ
೯೩. ನಿರ್ವಂಚನೆಯ ಶಾಂತ
೯೪. ಶೂಲದ ಶಾಂತಲಿಂಗ
೯೫. ರತ್ನದ ಶಾಂತ
೯೬. ಬಾಲ ಗಾಸಿಯ ಶಾಂತಮೂರುತಿ
೯೭. ಹಾಲ ಶಾಂತ
೯೮. ಗಾಣ ಶಾಂತ
೯೯. ಇಂದ್ರಜಾಲದ ಶಾಂತ
೧೦೦. ಬಾಣಬುತ್ತಿ ಶಾಂತಲಿಂಗ



ಕರಸ್ಥಲ ನಾಗಿದೇವನ ಭಾವಚಿತ್ರ



ಕರಸ್ಥಲ ನಾಗಿದೇವನ ಮೂರ್ತಿ
(ಗಣೇಶ ವಿಗ್ರಹದ ಹಿಂದೆ) ಹೇಮಕೂಟ, ಹಂಪೆ.



ನಾಗಲಿಂಗ ಸ್ವಾಮಿ ಮಠ, ಮೈಸೂರು.



ಮಂಚಳ್ಳಿ ಗವಿ ಕ್ಷೇತ್ರ, ಗುಂಡ್ಲುಪೇಟೆ.



ವೀರಚನ್ನೊಡೆಯನ ಮಠ, ಹಂಪೆ.



ಕರಸ್ಥಲನಾಗಿದೇವನ ಗವಿ, ಹೇಮಕೂಟ, ಹಂಪೆ.




ಕರಸ್ಥಲ ವೀರಣ್ಣೊಡೆಯನು ಹೊನ್ನ ಕಡಗವನ್ನೆಸೆದು
ಮಹಾತ್ಮೆ ತೋರಿದ ಚಕ್ರತೀರ್ಥ, ಹಂಪೆ.



ಕರಸ್ಥಲ ವೀರಣ್ಣೊಡೆಯನ ಮಠದ
ಹತ್ತಿರವಿರುವ ಗವಿ, ಹಂಪೆ



ವೀರಣ್ಣೊಡೆಯನಿಗೆ ಬಾವಿ ತೋಡಿಸಿದ ಶಾಸನ, ಹಂಪೆ.



ವೀರಣ್ಣೊಡೆಯನಿಗಾಗಿ ತೋಡಿಸಿದ ಬಾವಿ, ಹಂಪೆ.

ಆಕರ ಗ್ರಂಥಗಳು

೦೧. ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ – ನಾಗರಾಜ ಡಿ.ಆರ್, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೯.

೦೨. ಅಮರ ಕಲ್ಯಾಣ – ಡಾ. ಶಿವಾನಂದ ವಿರಕ್ತಮಠ, ನುಡಿ ಪ್ರಕಾಶನ, ಹೊಸಪೇಟೆ, ೨೦೦೫.

೦೩. ಅರಿವಿನ ಕಥನ – ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪.

೦೪. ಆನಂದವನ (ಸಂ) ತ.ಶು.ಶಾಮರಾಯ ಸದ್ಬೋಧ ಚಂದ್ರಿಕೆಯ ಕಾರ್ಯಾಲಯ, ಆನಂದವನ, ಧಾರವಾಡ, ೧೯೮೪

೦೫. ಏಕೋತ್ತರ ಶತಸ್ಥಲ (ಸಂ) ಸಂ.ಶಿ.ಭೂಸನೂರಮಠ, ರುದ್ರಾಕ್ಷಿಮಠ, ಬೆಳಗಾವಿ, ೧೯೭೪.

೦೬. ಕರಸ್ಥಲ ನಾಗಲಿಂಗನ ಚರಿತ್ರೆ, (ಸಂ) ಶೇಷಗಿರಿ, ಕೆ.ಆರ್. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೨.

೦೭. ಕರ್ನಾಟಕದ ನಾಥಪಂಥ – ಡಾ. ರಹಮತ್ ತರೀಕೆರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೦೮. ಕರ್ನಾಟಕದ ಸೂಫಿಗಳು – ಡಾ. ರಹಮತ್ ತರೀಕೆರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

೦೯. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ – ಡಾ. ಎಂ. ಚಿದಾನಂದಮೂರ್ತಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೬

೧೦. ಕರ್ನಾಟಕದ ಮಠಗಳು ಮತ್ತು ಕನ್ನಡ ಸಾಹಿತ್ಯ – ಡಾ. ಕೆ.ರವೀಂದ್ರನಾಥ, ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಸಂಡೂರು, ೨೦೦೭

೧೧. ಕರ್ನಾಟಕದಲ್ಲಿ ಲಾಕುಳ ಶೈವ ಜಕ್ಕಣಾರ್ಯರು – ಡಾ. ವಸುಂದರ ಫಿಲಿಯೋಜಾ, ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೩.

೧೨. ಕಂಠಪತ್ರ–೨, ಡಾ. ಎಫ್.ಟಿ.ಹಳ್ಳಿಕೇರಿ, ವಿಕಾಸ ಪ್ರಕಾಶನ, ಹೊಸಪೇಟೆ, ೨೦೦೪.

೧೩. ಕರ್ನಾಟಕದ ಧರ್ಮಗಳು – ಡಾ.ಎಸ್.ಸಿ.ನಂದೀಮಠ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೫೭

೧೪. ಕರಸ್ಥಲ ಸಾಹಿತ್ಯ (ಸಂ) ಡಾ. ಎಫ್.ಟಿ.ಹಳ್ಳಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೧೫. ಕರ್ನಾಟಕ ಪರಂಪರೆ ಸಂಪುಟ–೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೨.

೧೬. ಕರ್ನಾಟಕ ಸಂಸ್ಕೃತಿ ಸಮೀಕ್ಷೆ – ಡಾ.ಎಚ್. ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೧೯೮೫.

೧೭. ಕರ್ನಾಟಕ ಸಂಸ್ಕೃತಿಯ ಸಂಶೋಧನೆ, ಕಪಟರಾಳ ಕೃಷ್ಣರಾವ್, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೭೦.

೧೮. ಕರ್ನಾಟಕ ಕವಿಚರಿತೆ ಭಾಗ–೨.೩ – (ಸಂ) ಆರ್.ಸಿ.ನರಸಿಂಹಾಚಾರ್ಯ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೭೩, ೧೯೭೪.

೧೯. ಕಾಳಾಮುಖ ದರ್ಶನ – ಡಾ. ಎಸ್.ಎಸ್.ಹಿರೇಮಠ, ಸಮತಾ ಪ್ರಕಾಶನ, ಹರಪನಹಳ್ಳಿ, ೨೦೦೪.

೨೦. ಕಾಪಾಲಿಕರು ಮತ್ತು ಕಾಳಾಮುಖರು – ಡೇವಿಡ್. ಎನ್. ಲಾರೆಂಜನ್, (ಇಂಗ್ಲಿಷ್) (ಅನುವಾದ) ವಿರೂಪಾಕ್ಷ ಕುಲಕರ್ಣಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೫.

೨೧. ಚಿದಾನಂದವಧೂತ ಚರಿತ್ರೆ, (ಸಂ), ಡಾ. ಎಫ್.ಟಿ.ಹಳ್ಳಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೨೨. ಚೆನ್ನಬಸವ ಪುರಾಣ (ಗದ್ಯಾನುವಾದ) ಚಂದ್ರಶೇಖರ, ಎಂ. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೭೯.

೨೩. ಜಾನಪದ ಗೀತೆಗಳು, ಡಾ.ಬಿ.ಎಸ್. ಗದ್ದಗಿಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೩.

೨೪. ಜಾಗತಿಕ ಧರ್ಮಗಳು (ಸಂ) ಶೇಷ ನವರತ್ನ, ಸಮಾಜ ಪುಸ್ತಕಾಲಯ, ಧಾರವಾಡ– ೧೯೯೮.

೨೫. ಧರ್ಮ ವಿಶ್ವಕೋಶ – (ಸಂ) ಡಾ. ರಹಮತ್ ತರೀಕೆರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೨೬ ಧಮ್ಮೂರು ಶ್ರೀ ಸದ್ಗುರು ವೆಂಕಾವಧೂತ ಚರಿತ್ರೆ, ವೇಮಲ್ ಗಟ್ಟೆಪ್ಪ ಶ್ರೇಷ್ಠಿ, ವೇಮಲ್ ಟ್ರೇಡರ್ಸ್, ಹೊಸಪೇಟೆ, ೨೦೦೧.

೨೭ ಧಾರ್ಮಿಕ ನಂಬಿಕೆಗಳು ಮತ್ತು ದಾರ್ಶನಿಕ ವಿಶ್ಲೇಷಣೆ, ಡಾ.ಎನ್.ಜಿ. ಮಹಾದೇವಪ್ಪ, ವೀರಶೈವ ಅಧ್ಯಯನ ಅಕಾಡೆಮಿ, ನಾಗನೂರಮಠ, ಬೆಳಗಾವಿ, ೧೯೯೫.

೨೮. ದೇವರನ್ನು ಕುರಿತ ಒಂದು ಬಹುಮುಖಿ ನೋಟ, ವೀರಭದ್ರಪ್ಪ ಬಿ.ವ್ಹಿ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೨೯. ನಾಥ ಸಂಪ್ರದಾಯದ ಇತಿಹಾಸ, ಡೇರೆ ರಾ.ಚಿಂ, (ಮರಾಠಿ), ಅನುವಾದ– ಚಂದ್ರಕಾಂತ ಪೊಕಳೆ, ಅಲ್ಲಮಪ್ರಭು ಜನಕಲ್ಯಾಣ ಸಂಸ್ಥೆ, ಸಿದ್ಧಸಂಸ್ಥಾನ, ಚಿಂಚಣಿ, ೨೦೦೩.

೩೦. ನಾಡುನುಡಿ ಮತ್ತು ಲಾಕುಳ ಶೈವ ಇತಿಹಾಸ, ಕಪಟರಾಳ ಕೃಷ್ಣರಾಯರು, ಪುಸ್ತಕ ಶಕ್ತಿ ಪ್ರಕಾಶನ, ೨೦೦೬

೩೧. ನಾಥ ಪಂಥದ ಅನುವಾದಿತ ಕೃತಿಗಳು (ಸಂ) ಡಾ. ಶ್ರೀಧರ ಎಚ್.ಜಿ, ಕಡವಾ ಶಂಭುಶರ್ಮ ಸ್ಮಾರಕ ಪ್ರತಿಷ್ಠಾನ ಸಿರಿಗಂಧ, ಪುತ್ತೂರು, ೨೦೦೫.

೩೨. ನಿರೂಪಾಧಿ (ಅಭಿನಂದನ ಗ್ರಂಥ) – (ಸಂ) ಡಾ.ಬಿ.ಕೆ. ಹಿರೇಮಠ, ಪೂಜ್ಯ ಶ್ರೀ ನಿರೂಪಾಧೀಶ ಮಹಾಸ್ವಾಮಿಗಳ ಅಭಿನಂದನ ಸಮಿತಿ, ಮುಧೋಳ, ೨೦೦೬

೩೩. ನಿರಂಜನವಂಶ ರತ್ನಾಕರ, (ಸಂ) ಡಾ.ಫ.ಗು.ಹಳಕಟ್ಟಿ, ಶಿವಾನುಭವ ಗ್ರಂಥಮಾಲೆ, ಬಿಜಾಪುರ, ೧೯೩೩.

೩೪. ಪಂಚಗಣಾಧೀಶ್ವರರು : ಸಾಂಸ್ಕೃತಿಕ ಅಧ್ಯಯನ (ಅಪ್ರಕಟಿತ) ಸತೀಶ ಪಾಟೀಲ್, ಕನ್ನಡ, ವಿಶ್ವವಿದ್ಯಾಲಯ, ಹಂಪಿ, ೨೦೦೪.

೩೫. ಪಾಶುಪತ ದರ್ಶನ – ಡಾ. ಎಸ್.ಎಸ್.ಹಿರೇಮಠ, ಸಮತಾ ಪ್ರಕಾಶನ, ಹರಪನಹಳ್ಳಿ, ೨೦೦೩.

೩೬. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ – ಡಾ. ಶಿವಾನಂದ ವಿರಕ್ತಮಠ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೪.

೩೭. ಪ್ರೌಢದೇವರಾಯನ ಕಾವ್ಯ (ಸಂ) ಡಾ. ಸಂ.ಶಿ.ಭೂಸನೂರಮಠ, ಮುರುಘಾಮಠ, ಧಾರವಾಡ, ೧೯೫೭

೩೮. ಪ್ರೌಢದೇವರಾಯನ ಶಾಸನಗಳು, ಡಾ. ಡಿ.ವಿ.ಪರಮಶಿವಮೂರ್ತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೩೯. ಬಳ್ಳಾರಿ ಜಿಲ್ಲೆಯ ಅವಧೂತರು – ಡಾ. ಕರಿಯಪ್ಪ ಜಿ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮.

೪೦. ಭೈರವೇಶ್ವರ ಕಾವ್ಯ ಕಥಾಮಣಿ ಸೂತ್ರ ರತ್ನಾಕರ – (ಸಂ) ಡಾ.ಆರ್.ಸಿ.ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೮.

೪೧. ಮಹಾಯಾತ್ರೆ, ಅಭಿನಂದನ ಗ್ರಂಥ – (ಸಂ) ಡಾ. ಆರ್.ಸಿ.ಹಿರೇಮಠ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೪೨. ಮಾರ್ಗ ಸಂಪುಟ–೧, ಡಾ. ಎಂ.ಎಂ.ಕಲಬುರ್ಗಿ, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೮೮.

೪೩. ಮಾರ್ಗ ಸಂಪುಟ–೨, ಡಾ. ಎಂ.ಎಂ.ಕಲಬುರ್ಗಿ, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೯೫.

೪೪. ಮಂಟೇಸ್ವಾಮಿ ಕಾವ್ಯ ಸಾಂಸ್ಕೃತಿಕ ಮುಖಾಮುಖಿ (ಸಂ), ಡಾ. ವೆಂಕಟೇಶ ಇಂದ್ವಾಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೪೫. ಮೋದಿರುದ್ರ ವಿರಚಿತ ವಿರಕ್ತರ ಕಾವ್ಯ – (ಸಂ), ನಗುವನಹಳ್ಳಿ ಪಿ ರತ್ನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೯೬

೪೬ ರಾಘವಾಂಕ ಚರಿತೆ (ಸಂ) ಡಾ.ಸ.ಸ.ಮಾಳವಾಡ, ಮುರುಘಾಮಠ, ಧಾರವಾಡ, ೧೯೫೪.

೪೭ ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ ವಿವೇಚನೆ, (ಸಂ), ಡಾ.ಕೆ.ರವೀಂದ್ರನಾಥ, ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಸಂಡೂರು, ೨೦೦೫.

೪೮. ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ (ಸಂ), ಡಾ. ಎಚ್.ದೇವಿರಪ್ಪ, ಪ್ರಾಚ್ಯಾವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ೧೯೬೦.

೪೯. ಲಿಂಗಾಯತ – (ಸಂ), ಡಾ. ಎಂ.ಎಂ.ಕಲಬುರ್ಗಿ, ಸಿ.ಎಸ್.ವಿ.ಎಂ. ಶಿಕ್ಷಣ ಸಂಸ್ಥೆ, ಇಲಕಲ್ಲ, ೨೦೦೯.

೫೦. ಲಿಂಗಾಯತ ಸಂಸ್ಕಾರಗಳು, ಡಾ. ಶಿವಾನಂದ ಗುಬ್ಬಣ್ಣನವರ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೪.

೫೧. ಲಿಂಗಾಯತ ಧರ್ಮ ಸ್ಥಾಪಕರಾರು – ಡಾ. ಬಿ.ಸಿ.ಜವಳಿ, ಜಗನ್ಮಾತಾ ಅಕ್ಕಮಹಾದೇವಿ ಆಶ್ರಯ, ಧಾರವಾಡ, ೧೯೭೩.

೫೨. ವಚನಗಳಲ್ಲಿ ವೀರಶೈವ – ಡಾ. ಎಚ್.ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೧೯೬೯.

೫೩. ವೀರಶೈವ ಸಾಹಿತ್ಯ – ಡಾ. ಎಸ್.ಎಂ.ಹಿರೇಮಠ, ಶ್ರೀ ಚೆನ್ನಬಸವೇಶ್ವರ ಸಂಸ್ಥಾನ, ಹಾರಕೋಡ, ೧೯೯೬

೫೪. ವೀರಶೈವಾಮೃತ ಪುರಾಣ ಭಾಗ–೨ (ಸಂ), ಡಾ. ಹಿರೇಮಠ ಆರ್.ಸಿ, ಎನ್.ಎಸ್.ಎಸ್. ಕಲ್ಯಾಣಕೇಂದ್ರ, ಬೆಂಗಳೂರು, ೧೯೯೦.

೫೫. ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು – ಡಾ.ವಿ.ಜಿ.ಪೂಜಾರ, ಪುಸ್ತಕ ಅಕಾಡೆಮಿ, ಕಲಬುರ್ಗಿ, ೧೯೯೯.

೫೬. ವೀರಶೈವ ಧರ್ಮದ ಕೈಪಿಡಿ – ಡಾ.ಎಸ್.ಸಿ.ನಂದಿಮಠ, ಶ್ರೀ ಬಸವೇಶ್ವರ ಪೀಠ, ಕನ್ನಡ ಅಧ್ಯಯನ ಪೀಠ, ಕ.ವಿ.ವಿ, ಧಾರವಾಡ, ೧೯೯೦.

೫೭. ವಿಜಯಕಲ್ಯಾಣ (ಸಂ), ಡಾ.ಸಂ.ಶಿ. ಭೂಸನೂರಮಠ, ಮಹಾಕವಿ ಹರಿಹರ ಸ್ಮಾರಕ ಸಂಶೋಧನ ಕೇಂದ್ರ, ಹಂಪಿ, ೧೯೮೮.

೫೮. ವೀರಶೈವ ಪಾರಿಭಾಷಿಕ ಪದಕೋಶ – (ಸಂ), ಡಾ. ಎಸ್.ವಿದ್ಯಾಶಂಕರ, ಬಸವ ಸಮಿತಿ, ಬಸವೇಶ್ವರ ವೃತ್ತ, ಬೆಂಗಳೂರು, ೨೦೦೦.

೫೯. ವೀರಶೈವ ದರ್ಶನ (ಸಂ), ಡಾ. ಆರ್.ಸಿ.ಹಿರೇಮಠ, ಚೆನ್ನಚೇತನ ಪ್ರಕಾಶನ, ಹಿರೇಕಲ್ಮಠ, ಹೊನ್ನಾಳಿ, ೧೯೯೮.

೬೦. ಶತಕ ಸಂಪುಟ–೧, (ಸಂ) ಜಿ.ವಿ.ಶಿವಲಿಂಗಯ್ಯ, ಶಿವಕವಿ ಪ್ರಕಾಶನ, ಮೈಸೂರು, ೧೯೯೫.

೬೧. ಶರಣರ ಅನುಭಾವ ಸಾಹಿತ್ಯ – ಡಾ. ಎಚ್.ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೧೯೯೮.

೬೨. ಶಾಸನಗಳಲ್ಲಿ ಶಿವಶರಣರು, ಡಾ.ಎಂ.ಎಂ.ಕಲಬುರ್ಗಿ, ಸಿರಿಗನ್ನಡ ಪ್ರಕಾಶನ, ಕ.ವಿ.ವಿ. ಧಾರವಾಡ, ೧೯೭೦.

೬೩. ಶಿವದಾಸ ಗೀತಾಂಜಲಿ (ಸಂ) ಡಾ. ಎಲ್. ಬಸವರಾಜ್, ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೬೩.

೬೪. ಶುದ್ಧಶೈವ ಮತ್ತು ಗೋಳಕಿ ಮಠ ಸಂಪ್ರದಾಯ, ಡಾ.ಎಂ.ಎಂ.ಕಲಬುರ್ಗಿ, ಲಿಂಗಾಯತ ಅಧ್ಯಯನ ಸಂಸ್ಥೆ, ಗದಗ.

೬೫. ಷಟಸ್ಥಲ ಪ್ರಭೆ – ಡಾ.ಆರ್.ಸಿ.ಹಿರೇಮಠ, ಕನ್ನಡ ಅಧ್ಯಯನ ಸಂಸ್ಥೆ, ಕ.ವಿ.ವಿ. ಧಾರವಾಡ, ೧೯೭೯.

೬೬. ಸಂಗಮರ ಕಾಲದ ವಿಜಯನಗರ : ಅದರ ಇತಿಹಾಸ ಮತ್ತು ಸಂಸ್ಕೃತಿಗಳ ಅಧ್ಯಯನ (ಸಂ), ಜಿ.ಎಸ್.ದೀಕ್ಷಿತ್, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೯೧.

೬೭. ಸಂಸ್ಕೃತಿ–ವಿಕೃತಿ, ಡಾ.ಎಂ.ಎಂ.ಕಲಬುರ್ಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

೬೮. ಸ್ವರವಚನ ವಿಚಾರ ಸಂಕೀರಣ ಸಂಪುಟ (ಸಂ), ಡಾ.ಎಂ.ಎಂ.ಕಲಬುರ್ಗಿ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, ೧೯೯೭.

೬೯. ಸಿದ್ಧಸಾಹಿತ್ಯ – ಮ.ಸು.ಕೃಷ್ಣಮೂರ್ತಿ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು, ೧೯೮೨.

೭೦. ಸಿದ್ಧಾಂತ ಶಿಖಾಮಣಿ ಹಾಗೂ ಶ್ರೀಕರಭಾಷ್ಯ : ನಿಜದ ನಿಲವು – ಸಂವಹನ ಪ್ರಕಾಶನ, ಮೈಸೂರು, ೧೯೮೨.

೭೧. ಸೂಫಿ ಮತ್ತು ಶರಣರ ಅನುಭವ ಪಥ – ಡಾ. ಷಣ್ಮುಕಯ್ಯ, ಅಕ್ಕೂರಮಠ, ಮೂರುಸಾವಿರಮಠ, ಹುಬ್ಬಳ್ಳಿ, ೧೯೮೨.

೭೨. ಸೂಫಿ ಸಂಪ್ರದಾಯ ತತ್ವಜ್ಞಾನ ಮತ್ತು ಕಾರ್ಯ (ಮೂಲ ಮರಾಠಿ) ಸೇತು ಮಾಧವರಾವ್ ಪಗಡಿ, (ಅನು) ಡಾ. ವಿಠ್ಠಲರಾವ್ ಗಾಯಕ್ವಾಡ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೪.

೭೩. ಸೂಫಿ ಪಥ ಮತ್ತು ಶರಣ ಪಥಗಳ ತೌಲನಿಕ ಅಧ್ಯಯನ, ಡಾ.ಅಬ್ದುಲ್ ಹಮೀದ್, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೯೮.

೭೪. ಹದಿನೈದನೆಯ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ, ಪ್ರೊ. ಕೆ.ನಾಗೇಂದ್ರಪ್ಪ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೯೬.

೭೫. ಹೈದರಾಬಾದ ಕರ್ನಾಟಕ ಹಾಡು ಪಾಡು, ಡಾ. ಅಮರೇಶ ನುಗಡೋಣಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.